ಪ್ರದೀಪಿಕೆ



ಕೆ. ವೆಂಕಟರಾಮಾಚಾರ್ಯ.

ಶ್ರೀ ಕೆ. ವೆಂಕಟರಾಮಾಚಾರ್ಯರ ಸನ್ಮಾನ ಸಮಿತಿ
ಸುರತ್ಕಲ್, ದ.ಕ.

ಶ್ರೀ ವೆಂಕಟರಾಯಾಚಾರ್ಯರ ಕೃತಿಗಳ ಬಗೆಗೆ ಆಶಯಗಳು

ಉತ್ತರ ರಾಮ ಕಥೆ—ಸದ್ಗ್ರಂಥವೊಂದನ್ನು ಹೊರತಂದು, ಕನ್ನಡಿಗರಿಗೆ ಈ ಸಂಪಾದಕರು ಉಪಕಾರವನ್ನು ಮಾಡಿದ್ದಾರೆ.

—ಜಿ. ವೆಂಕಟಸುಬ್ಬಯ್ಯ: ಪ್ರಜಾವಾಣಿ 10-11-63

x x x x x x x

ಆದಿತ್ಯ ಪುರಾಣ—ಕನ್ನಡ ವಿದ್ವಾಂಸರೂ, ಸಂಶೋಧಕರೂ ಎನಿಸಿರುವ ವಿದ್ವಾನ್ ಕೆ. ವೆಂಕಟರಾಯಾಚಾರ್ಯರು ಈ ಆದಿತ್ಯ ಪುರಾಣ ಗ್ರಂಥವನ್ನು ಪ್ರಕಟಿಸಿ ಕನ್ನಡಿಗರಿಗೆ ಉಪಕಾರ ಮಾಡಿದ್ದಾರೆ.

—ಆಸ್ಥಾನ ವಿದ್ವಾನ್ ಬಿ. ಶಿವಮೂರ್ತಿ ಶಾಸ್ತ್ರಿ

x x x x x x x

ಶುಕಸಪ್ತತಿ—ಶುಕಸಪ್ತತಿಯಂತಹ ಕಥೆಗಳ ವ್ಯಾಸಂಗ ಲಾಭದಾಯಕವಾದದ್ದೇ ಸರಿ. ಈಗ ಸುದೈವದಿಂದ ಶ್ರೀ ವೆಂಕಟರಾಯಾಚಾರ್ಯರ ಶ್ರಮದಿಂದಾಗಿ ಅಚ್ಚಾಗಿದೆ.

—ಎಸ್. ಎ. ಪರಮೇಶ್ವರ ಭಟ್ಟ, ಮಂಗಳೂರು.

x x x x' x x x

ಸಾಹಿತ್ಯದ ಹಿನ್ನೆಲೆ:

This is an excellent treatise written in Kannada. It throws light on some of the outstanding problems in the field of Kannada-literature and History.

—**Dr. A. P. Karmarkar,** (A. B. O. R. of Poona-187).

ಪ್ರದೀಪಿಕೆ

ಶ್ರೀ ಕೆ. ವೆಂಕಟರಾಯಾಚಾರ್ಯರಿಗೆ 60ನೇ ವರ್ಷದ ಗೌರವಾರ್ಥ
ಅವರ ಅಭಿಮಾನಿಗಳು ಒಪ್ಪಿಸಿದ ಸಂಭಾವನಾ ಗ್ರಂಥ

★ ★ ★

★ ★

★

ಶ್ರೀ ಕೆ. ವೆಂಕಟರಾಯಾಚಾರ್ಯರ ಸನ್ಮಾನ ಸಮಿತಿ, ಸುರತ್ಕಲ್

979] [ರೂ. 30-00

ಮುದ್ರಣ: ಶ್ರೀ ಗಣೇಶ್ ಪ್ರಿಂಟರ್ಸ್, ಮಂಗಳೂರು-575 003.

PRADIPIKE—Sambhavana Grantha

A collction of article by various Authors on the History, Literature, Culture, and the life and works of Sri K. Venkataraya Acharya, Vidwan, Surathkal. Edited and Published by Sri K. Venkataraya Acharya Sanmana Samithi, Surathkal (D. K.).

Printed at Shri Ganesh Printers, Mangalore-3.

1979 PP. X+208+88 plates 6.

Cover Art: Sri Ramdas Sevagoor, Mangalore-1.

ಶ್ರೀ ಕೆ. ವೆಂಕಟರಾಯಾಚಾರ್ಯರ ಸನ್ಮಾನ ಸಮಿತಿ, ಸುರತ್ಕಲ್

ಅಧ್ಯಕ್ಷರು:

ಶ್ರೀ ಎಚ್. ಗೋಪಾಲಕೃಷ್ಣ ರಾವ್, ಸುರತ್ಕಲ್
(ಪ್ರಿನ್ಸಿಪಾಲ್, ಗೋವಿಂದದಾಸ ಕಾಲೇಜು)

ಕಾರ್ಯದರ್ಶಿ:

ಶ್ರೀ ಯಚ್. ಯು. ಅನಂತಯ್ಯ, ಸುರತ್ಕಲ್

ಕೋಶಾಧಿಕಾರಿ:

ಶ್ರೀ ಐ, ಕೆ. ನಾರಾಯಣ ರಾವ್, ಸುರತ್ಕಲ್

ಸದಸ್ಯರು:

ಶ್ರೀ ಪಿ. ವಿ. ಐತಾಳ್, ಎಡ್ವೊಕೇಟ್, ಕುಳಾಯಿ
ಡಾ. ಕೆ, ಆರ್. ಶೆಟ್ಟಿ, ಸುರತ್ಕಲ್
ಶ್ರೀ ಎಂ. ವಾಸುದೇವ ರಾವ್, ಕುಳಾಯಿ
ಶ್ರೀ ಕೆ. ವಿಠಲ ಪ್ರಭು, ಚೇಳ್ಯಾರ್
ಶ್ರೀ ಬಿ. ಕೆ. ಸಂಜೀವ, ಸುರತ್ಕಲ್
ಶ್ರೀ ಎಂ. ಎಸ್. ಕೃಷ್ಣ ಭಟ್, ಸುರತ್ಕಲ್
ಶ್ರೀ ಬಿ. ಸುಬ್ರಾವ್, ,,
ಶ್ರೀ ಟಿ, ಪಿ. ಕೇಶವನ್, ಪಣಂಬೂರು
ಶ್ರೀ ಮೋಹನದಾಸ್, ಸುರತ್ಕಲ್
ಶ್ರೀ ಪಿ. ನಾರಾಯಣಾಚಾರ್ಯ, ಸುರತ್ಕಲ್
ಶ್ರೀ ಪಿ. ಸಿ, ವಾಸುದೇವ ರಾವ್, ,,
ಶ್ರೀ ವಿ. ಬಿ, ಹೊಸಮನೆ, ಮಂಗಳೂರು.

ನಿವೇದನೆ

ಶ್ರೀ ಕೆ. ವೆಂಕಟರಾಯಾಚಾರ್ಯ, ವಿದ್ವಾನ್, ಸುರತ್ಕಲ್ಲು ಇವರು ಕಳೆದ 36 ವರ್ಷಗಳಿಂದ ಕನ್ನಡದ ವಿವಿಧ ಪುಸ್ತಕ-ಪತ್ರಿಕೆಗಳಲ್ಲಿ ಸಾಹಿತ್ಯ ವಿಮರ್ಶನ, ಪ್ರಾಚೀನ ಕವಿ-ರಾಜರ ಕಾಲಮಾತ ವಿಚಾರಾದಿ ಚರ್ಚೆ, ಅನೇಕ ಕ್ಲಿಷ್ಟ ಶಬ್ದಾರ್ಥಗಳ ನಿಷ್ಕರ್ಷೆ, ಹಲವು ಕೃತಿ-ಶಾಸನಗಳ ಸಂಶೋಧನೆ ಹಾಗೂ ಪ್ರಕಟನೆಗಳ ಮೂಲಕ ಸಾಹಿತ್ಯರಂಗದ ಸೇವೆಯನ್ನು ಕೈಗೊಂಡು, ಕನ್ನಡಿಗರೆಲ್ಲರಿಗೆ ಚಿರಪರಿಚಿತರಾಗಿದ್ದಾರೆ.

ನಾರಾಯಣ ಕವಿಯ ಉತ್ತರರಾಮ ಕತೆ, ಶೃಂಗೇರಿಯ ಶ್ರೀರಾಮಚಂದ್ರ ಗುರುಗಳ ಶಿಷ್ಯ 'ಕವಿರಾಜ ಕಂಠೀರವ'ನ ಆದಿತ್ಯ ಪುರಾಣ. ಕೆಳದಿಯ ೧ನೆ ಬಸಪ್ಪನ ಮಂತ್ರೀಶ 'ಶರಜಾ ನಾಗಪ್ಪಯ್ಯ'ನ ಶುಕಸಪ್ತತಿ ಕಾವ್ಯಗಳನ್ನು ತಾಳೆಗರಿ-ಕಾಗದಗಳಿಂದ ಪ್ರತಿಮಾಡಿ, ಸುರತ್ಕಲ್ಲಿನ 'ವಿಜಯ ಸಾಹಿತ್ಯ ಮಾಲೆ'ಯಲ್ಲಿ ಶ್ರೀ ಆಚಾರ್ಯರು ಪ್ರಕಟಿಸಿದ್ದಾರೆ, ಚಿತ್ರಾಪುರದ ಮೂರು ಶಿಲಾಶಾಸನಗಳು (ಕಾಗದ ಪ್ರತಿ), ಪೇಜಾವರ ಮಠದ ತಾಮ್ರ ಶಾಸನ, ಬಂಟವಾಳದ ಬಂಗರಾಜರ 2 ತಾಮ್ರಶಾಸನಗಳು, ಶ್ರೀ ಆಚಾರ್ಯರಿಂದ ಪ್ರಕಾಶಗೊಂಡಿವೆ. ಸಾಹಿತ್ಯದ ಹಿನ್ನೆಲೆ, ಸಾಹಿತ್ಯ ಹಾಗೂ ಸಂಶೋಧನೆ, ಸಾಹಿತ್ಯ-ಸಂಶೋಧನೆ, ಸಾಹಿತ್ಯದ ನೋಟಗಳು ಎಂಬ 4 ಗ್ರಂಥಗಳಲ್ಲಿ ಶ್ರೀ ಆಚಾರ್ಯರ ಲೇಖಗಳು ಸಂಕಲಿತಗಳಾಗಿವೆ. ಈ ಪುಸ್ತಕ-ಲೇಖಗಳನ್ನು ನಾಡಿನ ಹಲವಾರು ವಿದ್ವಾಂಸರು ಮೆಚ್ಚಿಕೊಂಡಿದ್ದಾರೆ. ಐದು ನೂರಕ್ಕೂ ಮಿಕ್ಕಿದ ಲೇಖನಗಳು ಶ್ರೀ ಆಚಾರ್ಯರಿಂದ ಕನ್ನಡಕ್ಕೆ ಕೊಡುಗೆಗಳಾದಿವೆ,

ಶೃಂಗೇರಿಯ ಮಹಾಸ್ವಾಮಿಗಳು, ಕಟೀಲಿನ ಮಹಾಜನರು, ಮುಂಬೈಯ ಕನ್ನಡಿಗರು ಮೊದಲಾದವರು ಶ್ರೀ ಆಚಾರ್ಯರಿಗೆ ಪಟ್ಟೆ ಶಾಲುಗಳನ್ನು ನೀಡಿ ಹರಸಿದ್ದಾರೆ, ಹಲವೆಡೆಯ ಅಭಿಮಾನಿಗಳು ಸನ್ಮಾನ ಪತ್ರಗಳನ್ನೂ ಶ್ರೀಯುತರಿಗೆ ನೀಡಿದ್ದಾರೆ. ಸಾಹಿತ್ಯ ಪರಿಷತ್ತಿನ ಜಿಲ್ಲಾ ಸಮ್ಮೇಳನದಲ್ಲಿ ಶ್ರೀ ಆಚಾರ್ಯರಿಗೆ 'ಸಂಶೋಧಕ'ನೆಂಬ ಪ್ರಶಸ್ತಿಯೂ ದೊರಕಿದೆ; ಮದ್ರಾಸಿನಿಂದ 'ಪಂಡಿತ ರತ್ನಂ' ಬಿರುದೂ ಲಭಿಸಿದೆ. ಶ್ರೀಯುತರ ಕೆಲವು ಗ್ರಂಥಗಳಿಗೆ ರಾಜ್ಯದ ಸಾಹಿತ್ಯ ಆಕಾಡೆಮಿ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆಯಿಂದ ಪ್ರಶಸ್ತಿ-ಪುರಸ್ಕಾರಗಳು ದೊರಕಿವೆ.

ಇದೀಗ, 12-4-78ರಿಂದ 60ನೆ ಹರೆಯಕ್ಕೆ ಬಂದ ಶ್ರೀ ವೆಂಕಟರಾಯಾಚಾರ್ಯರನ್ನು ಸನ್ಮಾನಿಸುವುದು ಸೂಕ್ತವೆಂದು ಭಾವಿಸಿ, ಪ್ರಿನ್ಸಿಪಾಲ್ ಶ್ರೀ ಗೋಪಾಲಕೃಷ್ಣ ರಾಯರು ಅಧ್ಯಕ್ಷರಾಗಿರುವ ಸಮಿತಿ ಏರ್ಪಟ್ಟಿದೆ, ಈ ಸಮಿತಿ ಕನ್ನಡದ ಹಲವಾರು ತೆರದ ವಿದ್ವಾಂಸರ ಲೇಖನಗಳುಳ್ಳ 3 ನೂರು ಪುಟದ ಒಂದು ಸಂಭಾವನ ಗ್ರಂಥ ಮತ್ತು ನಿಧಿಯನ್ನು

ಶ್ರೀ ಆಚಾರ್ಯರಿಗೆ ಒಪ್ಪಿಸಬೇಕೆಂದು ನಿರ್ಧಾರವಾಡಿದೆ, ಅದರೊಂದಿಗೆ ಸಂಸ್ಮರಣ ಸಂಚಿಕೆಯನ್ನೂ ಪ್ರಕಟಿಸಬೇಕೆಂದು ಯೋಚಿಸಿದೆ, ಶ್ರೀ ಆಚಾರ್ಯರು ಅನೇಕಾನೇಕ ಘನ ವಿದ್ವಾಂಸರ ಲೇಖನಗಳಿಂದ ಪ್ರಭಾವಿತರಾಗಿದ್ದಾರೆ, ಶ್ರೀಯುತರು ಕನ್ನಡ ವಾಙ್ಮಯಕ್ಕೆ ವಿವಿಧ ರೀತಿಯಲ್ಲಿ ಸಾಕಷ್ಟು ಬೆಳಕು ಚೆಲ್ಲುವ ಕಾರ್ಯವೆಸಗಿ, ಸಫಲರಾದಿದ್ದಾರೆ. ಹಾಗಾದಿ ಶ್ರೀ ಆಚಾರ್ಯರ ಸಂಭಾವನ ರೂಪದ ಈ ಗ್ರಂಥಕ್ಕೆ 'ಪ್ರದೀಪಿಕೆ'ಯೆಂಬ ಹೆಸರು ಅನ್ವರ್ಥವೆಂದು ಭಾವಿಸುತ್ತೇವೆ.

ಈ ಕಾರ್ಯದಲ್ಲಿ ನಮ್ಮೊಡನೆ ಸಹಕರಿಸಿ ಈ ಗ್ರಂಥದಲ್ಲಿ ಹಾಗೂ 'ಸವನೀರ್'ನಲ್ಲಿ ಪ್ರಕಟಿಸಲು ಉತ್ತಮ ಲೇಖನಗಳನ್ನು ಬರೆದು ಕಳುಹಿಸಿದ ಸನ್ಮಾನ್ಯ ಲೇಖಕರು, ಇದಕ್ಕಾಗಿ ಉದಾರತೆಯಿಂದ ಧನವಿತ್ತು ನೆರವಾದವರು, 'ಸವನೀರ್'ನಲ್ಲಿ ಜಾಹೀರಾತುಗಳನ್ನು ನೀಡಿ ಉಪಕರಿಸಿದವರು, ಅಂದವಾಗಿ ಮುಖಚಿತ್ರ ಬರೆದಿತ್ತ ಶ್ರೀ ರಾಮದಾಸ್ ಸೇವಗೂರ್, ಇವೆರಡು ಸಂಕಲನಗಳನ್ನು ಮುದ್ರಿಸಿದ 'ಶ್ರೀ ಗಣೇಶ್ ಪ್ರಿಂಟರ್ಸ್'ನವರು, ಸಮಿತಿಯ ಕಾರ್ಯಗಳಲ್ಲಿ ಸ್ವ-ಪರಹಸ್ತಗಳಿಂದ ಸಹೃದಯತೆಯಿಂದ ಬೆಂಬಲಿಸಿದವರು, ಇವರೆಲ್ಲರಿಗೆ ನಾವು ಆಭಾರಿಗಳು.

ನಾಲ್ಕು ದಶಕಗಳಿಂದ ಕನ್ನಡ ಸಾಹಿತ್ಯ ವಿಮರ್ಶೆ-ಸಂಶೋಧನೆಗಳಲ್ಲಿ ಅವಿರತವಾಗಿ ಶ್ರಮಿಸಿದ-ಶ್ರಮಿಸುತ್ತಿರುವ ಕನ್ನಡಮ್ಮನ ಸುಪುತ್ರರೊಬ್ಬರಿಗೆ—ಶ್ರೀ ಕೆ. ವೆಂಕಟರಾಯಾಚಾರ್ಯರಿಗೆ - ಸಕಲ ಶುಭವನ್ನು ಕೋರಿ, ಈ ಸನ್ಮಾನ ಗ್ರಂಥ-ನಿಧಿ ಸಮರ್ಪಣೆಗಳು ಸೂಕ್ತವೆಂದು ಸಂತೃಪ್ತಿಭಾವದಿಂದ, ಈ 'ಪ್ರದೀಪಿಕೆ'ಯನ್ನು ಕನ್ನಡಿಗರ ಕೈಗಳಲ್ಲಿ ಒಪ್ಪಿಸುತ್ತೇವೆ

(ತಾ. 4—11—1979)
ಕಾರ್ತಿಕ ಶುದ್ಧ ಪೂರ್ಣಿಮಾ.

ಶ್ರೀ ಕೆ. ವೆಂಕಟರಾಯಾಚಾರ್ಯರ
ಸನ್ಮಾನ ಸಮಿತಿ, ಸುರತ್ಕಲ್ಲು.

ಪ್ರದೀಪಿಕೆ - ಅನುಕ್ರಮಣಿಕೆ

೨ನೇ ವಿಭಾಗ ಲೇಖನ ಪುಟ

ತಿದ್ದುಪಡಿ


ಪುಟ 3 ಸಾಲು 2 ೧೧೨೪ರ ಬದಲು ೧೨೨೪

ಪುಟ 102 ಸಾಲು 1 ಅಜಿರ್ ಬದಲು ಅಟಿರ್

ಪುಟ 124 ಸಾಲು 1 ಕತೃ ಬದಲು ಕರ್ತೃ



ಶ್ರೀ ವಿದ್ಯಾಪೂರ್ಣ ತೀರ್ಥಸ್ವಾಮೀಜಿ,
ಚಿತ್ರಾಪುರ-ಕುಳಾಯಿ, (ವೃಂದಾವನಸ್ಥರು)
—ವಿದ್ಯಾಗುರುಗಳು



ಶ್ರೀ ಕೆ. ಲಕ್ಷ್ಮೀನಾರಾಯಣಾಚಾರ್ಯ,
(ಶ್ರೀ ಕೆ. ವೆಂಕಟರಾಯಾಚಾರ್ಯರ ತಂದೆಯವರು)



ಶೃಂಗೇರಿಯ ಶಾರದಾಪೀಠಾಧಿರೂಢರಾದ ಶ್ರೀ ಅಭಿನವ ವಿದ್ಯಾತೀರ್ಥ ಸ್ವಾಮೀಜಿಯವರು
ಶ್ರೀ ಕೆ, ವೆಂಕಟರಾಯರಾಚಾರ್ಯರಿಗೆ ಪಟ್ಟೆ ಶಾಲು ನೀಡಿ ಹರಸಿದರು,




ಶ್ರೀ ಕೆ. ವೆಂಕಟರಾಯಾಚಾರ್ಯ, ವಿದ್ವಾನ್, 'ಸಂಶೋಧಕ', 'ಪಂಡಿತ ರತ್ನಂ'.
[ಸಂಪಾದಕ: ವಿಜಯ ಸಾಹಿತ್ಯಮಾಲೆ] ಸುರತ್ಕಲ್, (ದ. ಕ.)




ಶ್ರೀ ಕೆ. ವೆಂಕಟರಾಯಾಚಾರ್ಯರ 60ನೇ ವರ್ಷಾರಂಭದಲ್ಲಿ,
ಸಾಹಿತ್ಯಗೋಷ್ಠಿಯಲ್ಲಿ (12—4—78)
ಶ್ರೀ ಎಂ. ವಾಸುದೇವರಾಯರು (ಸಭಾಧ್ಯಕ್ಷರು) ಉಡುಗೊರೆ ನೀಡುವ ಚಿತ್ರ
(ಸ್ಥಳ: ವಿದ್ಯಾದಾಯಿನೀ ಸಭಾಭವನ)







೧. ಹಳೆ ಹ್ಯಾಮದ್ವನ ಹಳ್ಳಿ: ಮಾಧವ ೨. ನೂತನ ಶಿಲಾಯುಗದ ಗುಡಿ. ಹಿನ್ನೆಲೆಯಲ್ಲಿ ತುಂಗಭದ್ರೇಶ್ವರ ದೇವಾಲಯ ೩. ಹಲಗಯಾಳು: ಅಪೂರ್ವ ಜೈನನಿಷಿಧಿಕಲ್ಲು.
(ಪ್ರದೀಪಿಕೆಯ 1–8ನೆ ಪುಟದ ಲೇಖ ನೋಡಿ).





೧. ಹರಿಹರ: ಹರಿಹರೇಶ್ವರ ದೇವಾಲಯ   ೨. ಹರಿಹರ
(ಪ್ರದೀಪಿಕೆಯ 1-8ನೆ ಪುಟದ ಲೇಖ ನೋಡಿ)

೧. ಹರಿಹರ ಪರಿಸರದಲ್ಲಿ ಪುರಾತತ್ವ ಶೋಧನೆ

ಡಾ। ಅ. ಸುಂದರ, ಧಾರವಾಡ.

ತುಂಗಾಭದ್ರಾ ನದಿ ಬಲದಂಡೆಯ ಮೇಲೆ ಉತ್ತರಾಭಿಮುಖ ತಿರುವಿನಲ್ಲಿರುವ ಹರಿಹರ (ಹರಿಹರ ತಾ, ಚಿತ್ರದುರ್ಗ ಜಿ.)ದ 'ಹರಿಹರ ದೇವಾಲಯ'ವು ಕರ್ನಾಟಕದಲ್ಲಿಯ ಸುಪ್ರಸಿದ್ಧ ದೇವಾಲಯಗಳಲ್ಲಿ ಒಂದು. ವಿಸ್ತಾರವಾದ ಈ ದೇವಾಲಯ[1]ವನ್ನು ಹೊಯ್ಸಳ ಇಮ್ಮಡಿ ನರಸಿಂಹ ಬಲ್ಲಾಳ (ಕ್ರಿ. ಶ. ೧೨೨೨-೧೨೩೫) ಚಕ್ರವರ್ತಿಯು ಬಿಚ್ಚಿ ಕಟ್ಟಿಸಿದನು. ಗರ್ಭಗುಡಿಯೊಳಗಿನ ದೊಡ್ಡದಾದ ಹರಿಹರನ ಮೂರ್ತಿ ಮಾತ್ರ ಸು. ೫-೬ನೇ ಶತಮಾನದ್ದೆಂದು ಅದರ ಶಿಲ್ಪ ಲಕ್ಷಣಗಳಿಂದ ಊಹಿಸಬಹುದು. ಬಾದಾಮಿ ಚಾಲುಕ್ಯ ವಿನಯಾದಿತ್ಯ (ಕ್ರಿ. ಶ. ೬೮೨-೬೯೫)ನ ಹರಿಹರದ ತಾಮ್ರ ಶಾಸನ[2] (ಶಕವರ್ಷ ೬ ೬ = ಕ್ರಿ. ಶ. ೬೯೪)ದಲ್ಲಿ ಈ ಊರನ್ನು "ಹರೇಷ ಪುರ"ವೆಂದು ನಿರ್ದೇಶಿಸಲಾಗಿದೆ. ಆದ್ದರಿಂದ ಇದು ಪ್ರಾಚೀನ ಕರ್ನಾಟಕದ ಮುಖ್ಯ ಊರುಗಳಲ್ಲೊಂದಾಗಿದ್ದು ಕೂಲಂಕಷ ಪುರಾತತ್ವ ಶೋಧನೆಗೆ ಯೋಗ್ಯವಾಗಿದೆ.

ಚಿತ್ರದುರ್ಗದ ಹತ್ತಿರದ ಚಂದ್ರವಳ್ಳಿಯು ಶಾತವಾಹನರ ಕಾಲದ ಪಟ್ಟಣದ ಅವಶೇಷಗಳುಳ್ಳ ಪ್ರಾಚೀನ ನೆಲೆ[3]ಯು ಈಗಾಗಲೆ ಪ್ರಸಿದ್ಧವಾಗಿದೆ. ಈ ಪ್ರದೇಶದಲ್ಲಿಯ ಬಂಡೆ ರೇಖಾಚಿತ್ರಗಳನ್ನು ಅಭ್ಯಸಿಸಲು ನಾನು ಜೂನ್ ೭೮, ೩ನೇ ವಾರದಲ್ಲಿ ಹೋಗುತ್ತಿದ್ದಾಗ ಮಾರ್ಗ ಮಧ್ಯದಲ್ಲಿ ಹರಿಹರದ ಸುತ್ತಮುತ್ತ ಎರಡು ದಿನ ಪುರಾತತ್ವ ಶೋಧನೆಯನ್ನು ಕೈಗೊಂಡಿದ್ದೆ. ಆಗ ಕಂಡುಬಂದ ಕೆಲವು ಗಮನಾರ್ಹ ಶೋಧನೆಗಳನ್ನು ಇಲ್ಲಿ ವಿವೇಚಿಸಲಾಗಿದೆ.

1. ಪ್ರಾಗೈತಿಹಾಸಿಕ ಮತ್ತು ಇತಿಹಾಸ ಪ್ರಾರಂಭ ಕಾಲದ ನೆಲೆಗಳು.

ಈ ಊರಿನ ಸಮೀಪದಲ್ಲೆ ಈಗ ಇದಕ್ಕೆ ಸೇರಿಕೊಂಡ ಹಾಗೆ ನದಿಯ ಬಲ ದಂಡೆಯ ಮೇಲೆ ಹಲಸಬಾಳು ಎಂಬ ಗ್ರಾಮವಿದೆ. ನದಿಯು ಪೂರ್ವದಿಂದ ಉತ್ತರಾಭಿಮುಖವಾಗಿ ತಿರುಗುವ ಮೂಲೆಯಿಂದ ಸು. $\frac{3}{4}$ ಕಿ. ಮಿ, ದೂರದಲ್ಲಿದೆ. ತಿರುವಿನಲ್ಲಿ ಹರಿಹರ ಹೊರವಲಯದ ಹೊಸಪೇಟೆ ಎಂಬ ಬಡಾವಣೆಯಿದೆ. ಇದರ ಪಶ್ಚಿಮಕ್ಕೆ ಮತ್ತು ವಾಯುವ್ಯಕ್ಕೆ ಕ್ರಮವಾಗಿ ಬಿರ್ಲಾ ಕಂಪೆನಿಯವರು ಕಟ್ಟಿಸಿದ ತುಂಗಭದ್ರೇಶ್ವರ ಮತ್ತು ಪಾಲಿಫೈಬರ್ಸ್ ಯಂತ್ರಾಗಾರವಿವೆ.

೧. ಹೊಸಪೇಟೆ-ಹಲಸಬಾಳು ರಸ್ತೆಯ ಬಲಬದಿಗೆ ನದಿಯ ಪಶ್ಚಿಮ ದಂಡೆಯ

ಸಮೀಪಕ್ಕೆ ಆಳವಾದ ಕೊರಕಲು ಇದೆ. ಇದರ ಪೂರ್ವಾಭಿಮುಖ ಗೋಡೆಯಲ್ಲಿ ಅಸಮ ಅಂತರದಲ್ಲಿ ಮೇಲಿಂದ ತೋಡಿ ಮುಚ್ಚಿದ ಮೂರು ಗುಂಡಿಗಳು ನನ್ನ ದೃಷ್ಟಿಯನ್ನು ಸೆಳೆಯಿತು. ಸಾಮಾನ್ಯವಾಗಿ ಗುಂಡಿಯ ಬಾಯಿಯು ಕಿರಿದಾಗಿದ್ದು ಕೆಳಗೆ ಹೋಗುತ್ತಾ ಅಗಲವಾಗಿದೆ, ಒಂದು ಗುಂಡಿ (ಚಿತ್ರ ೧; ೬)ಯನ್ನು ಪರೀಕ್ಷಿಸಲಾಗಿ ಅದರಲ್ಲಿ ನೂತನ ಶಿಲಾಯುಗ (ಸು. ಕ್ರಿ. ಪೂ. ೨,೦೦೦–೧,೦೦೦)ದ ಬೂದು ಬಣ್ಣದ ಮಣ್ಣಿನ ಪಾತ್ರೆಗಳ ಚೂರುಗಳು, ಎಲುಬುಗಳು ಇದ್ದುವು. ಮತ್ತೊಂದು ಗುಂಡಿಯಲ್ಲೂ ಇದೇ ತರಹದ ಅವಶೇಷಗಳಿವೆ. ಅಭ್ರಕ ಮಿಶ್ರಿತ ಮಣ್ಣಿನಿಂದ ಮಾಡಿದ ಈ ಚೂರುಗಳಲ್ಲಿ ಅರ್ಧ ಗೋಲಾಕೃತಿಯ ಬಟ್ಟಲು, ಉಬ್ಬಿದ ಹೊಟ್ಟೆ ಮತ್ತು ಹೊರಬಾಗಿದ ಬಾಯಿಯುಳ್ಳ ಮೊದಳಾದ ಆಕಾರದ ಪಾತ್ರೆಗಳನ್ನು ಗುರುತಿಸಬಹುದು. ಸುತ್ತಮುತ್ತಲಿನ ಭೂಮಿಯ ಮೇಲೆ ಮಾತ್ರ ಈ ಕಾಲದ ಜನವಸತಿಯ ಕುರುಹುಗಳೇನೂ ಇಲ್ಲ. ಆದ್ದರಿಂದ ಇವು ಆ ಕಾಲದ ತಿಪ್ಪೆ ಹಿಂಗು ಗುಂಡಿಗಳಾಗಿರದೆ ಶವಕುಣಿಗಳಾಗಿರಬೇಕು. ಇವುಗಳ ಸಮೀಪ ದಲ್ಲೆ ಅಂದರೆ ಹೊಸಪೇಟೆ ಪ್ರದೇಶದಲ್ಲಿ ಜನ ವಾಸ್ತವ್ಯ ನೆಲೆ ಇದ್ದಿರಬೇಕು. ಇವುಗಳ ದಕ್ಷಿಣಕ್ಕೆ ನದಿಯ ಆಚೆ ದಂಡೆಯ ಮೇಲೆ ಹಲಸಬಾಳಿನ ಪೂರ್ವಕ್ಕೆ ಪ್ರಾಚೀನ ನೆಲೆಯ ಅಸ್ಪಷ್ಟ ಗುರುತು ಇದೆ. ಇವು ಶವ–ಕುಣಿಗಳಾದಿದ್ದರೆ ಎರಡು ಅಂಶಗಳನ್ನು ಗಮನಿಸ ಬೇಕಾಗಿದೆ. ಒಂದು, ಅಸ್ಥಿ ಅವಶೇಷಗಳನ್ನು ಸಂಗ್ರಹಿಸಿ ಎರಡನೇ ಸಲ ಕಟ್ಟಳೆಯ ಪ್ರಕಾರ ಹುಗಿದಿದ್ದು (Post-excarnate secondary burial) ಮತ್ತು ಎರಡನೆಯದು, ವಾಸ್ತವ್ಯದ ನೆಲೆಯಿಂದ ಶವ-ಕುಣಿಗಳು ಪ್ರತ್ಯೇಕವಿರುವುದು.

೨. ಹಲಸಬಾಳಿನ ಪಶ್ಚಿಮ ಹೊರವಲಯದ ಕಂದು ಬಣ್ಣದ ಮಣ್ಣಿನ ಹೊಲ ದಲ್ಲಿ ಸುಮಾರು $1\frac{1}{2}$ ಹೆಕ್ಟರಿನಷ್ಟು ಭೂಮಿಯಲ್ಲಿ ಹಾಳು[4] ಮಣ್ಣು ಇದೆ. ನದಿಯ ಬಲ ದಂಡೆಯ ಮೇಲೆ ಇದೆ. ಅಪರೂಪವಾಗಿ ಇಟ್ಟಿಗೆ ಕಟ್ಟಡದ ಅವಶೇಷಗಳು, ಹೇರಳವಾಗಿ ಹೊಳಪಾದ ಕಪ್ಪು–ಕೆಂಪು ಮತ್ತು ಕೆಂಪು ಬಣ್ಣದ, ಮತ್ತು ಬಿಳಿ ಬಣ್ಣದ ರೇಖಾಚಿತ್ರ (Russet coated white painted pottery) ವಿವಿಧಾಕಾರದ ಮೃತ್ ಪಾತ್ರೆಗಳ ಚೂರುಗಳು ಇದ್ದಿವೆ. ನದಿಯ ದಂಡೆಯಲ್ಲಿ ಹಾಳುಮಣ್ಣು ಕನಿಷ್ಠ ೧ ಮಿ. ಆಳದಷ್ಟಿರು ವುದು ಕಾಣಿಸುತ್ತದೆ. ಈ ಅವಶೇಷಗಳು ಚಂದ್ರವಳ್ಳಿಯ ಅವಶೇಷಗಳ ತರಹವೇ ಇವೆ, ಆದ್ದರಿಂದ ಇಲ್ಲಿ ಸುಮಾರು ೧–೨ನೇ ಶತಮಾನದಲ್ಲಿ ಅಂದರೆ ಶಾತವಾಹನರ ಕಾಲದ ಇಟ್ಟಿಗೆ ಕಟ್ಟಡಗಳಿಂದ ಕೂಡಿದ ಒಂದು ಊರು ಇತ್ತೆಂಬುದು ನಿಸ್ಸಂಶಯ.

ಹರಿಹರದಿಂದ ೩೦ ಕಿ. ಮಿ. ನೈಋತ್ಯಕ್ಕೆ ತುಂಗಾಭದ್ರಾ ನದಿಯ ಎಡ ದಂಡೆಯ ಮೇಲಿರುವ ಹಳ್ಳೂರಿ (ಹಿರೆಕೆರೂರು ತಾ, ಧಾರವಾಡ ಜಿ.)ನ ಉತ್ಖನನಗಳಿಂದ[5] ನೂತನ – ಬೃಹತ್ ಶಿಲಾ – ಇತಿಹಾಸ ಪ್ರಾರಂಭ ಕಾಲದ ಸಂಸ್ಕೃತಿಗಳ ಲಕ್ಷಣಗಳು ವೈಶಿಷ್ಟ್ಯಗಳು ತಿಳಿದಿವೆ.

೩. ಹರಿಹರೇಶ್ವರ ದೇವಾಲಯ[6],

೧೨೨೪ರಲ್ಲಿ ಇಮ್ಮಡಿ ನರಸಿಂಹ ಬಲ್ಲಾಳನ ದಂಡನಾಯಕ ಪೆರ್ಮಾಡಿ ಪೊಲಾಳ್ವನು ಪೂರ್ಣವಾಗಿ ಬಿಚ್ಚಿ ಕಟ್ಟಿಸಿದ ಈ ದೇವಾಲಯದ ಸುಮಾರು ೬೦ಕ್ಕೂ ಮಿಕ್ಕಿ ಕಂಬಗಳುಳ್ಳ ಮತ್ತು ಪೂರ್ವ, ದಕ್ಷಿಣ ಮತ್ತು ಉತ್ತರ ಕಡೆಗಳಿಂದ ಪ್ರವೇಶ ದ್ವಾರಗಳುಳ್ಳ ಮಹಾ ಮಂಡಪ ಅತ್ಯಂತ ಭವ್ಯವಾಗಿದ್ದು ಇದರ ವೈಶಾಲ್ಯವನ್ನು ಒಹಳಷ್ಟು ಹೆಚ್ಚಿಸಿದೆ, ಇದರಿಂದ ಒಳಗೆ ಹೋದರೆ, ಮುಂದೆ ಕ್ರಮವಾಗಿ ಸಭಾಮಂಡಪ, ಅರ್ಧ ಮಂಡಪ ಮತ್ತು ಗರ್ಭಗುಡಿಗಳಿವೆ. ಇದರ ಅಧಿಷ್ಠಾನ ಗೋಡೆಯಲ್ಲಿ ಕ್ರಮವಾದ ಉಬ್ಬುತಗ್ಗುಗಳು ಮತ್ತು ವಿರಳವಾದ ಉಬ್ಬುಶಿಲ್ಪಗಳು, ಮೇಲಿನ ಪ್ರಸ್ತರ ಮತ್ತು ಹಾರಗಳ ಲಕ್ಷಣಗಳು, ಒಳಗಿನ ಕಂಬಗಳ ಮತ್ತು ಬಾಗಿಲುಗಳ ಪಟಾಟ: ಇವೆಲ್ಲವು ಕಲ್ಯಾಣ ಚಾಲುಕ್ಯ ಶಿಲ್ಪ ಶೈಲಿಯಲ್ಲಿಯೇ ಇವೆ. ಈಗ ಶಿಖರದ ಸ್ವಲ್ಪ ಭಾಗ ಮಾತ್ರ ಉಳಿದಿದ್ದು ಅದು ವೇಸರ ಶೈಲಿಯಲ್ಲಿದೆಯೆಂದು ಹೇಳಬಹುದು.

ಈ ದೇವಾಲಯದ ಹೊರಬದಿಯಲ್ಲಿ ಸಭಾಮಂಡಪದ ದಕ್ಷಿಣ ಬದಿಗೆ ಹೊಂದಿಕೊಂಡ ಹಾಗೆ ಮುಖ ಮಂಡಪ, ಅರ್ಧಮಂಡಪ ಮತ್ತು ಗರ್ಭಗೃಹವನ್ನೊಳಗೊಂಡ ಒಂದು ಸಣ್ಣ ಶಿವ ದೇವಾಲಯವನ್ನು ಸೇರಿಸಲಾಗಿದೆ. ಮುಖ ಮಂಡಪದ ಎಡಬದಿಗೆ ಸ್ವಲ್ಪ ಅಂತರದಲ್ಲಿ ಪ್ರತ್ಯೇಕವಾದ ಒಂದು ಲಕ್ಷ್ಮೀ ದೇವಾಲಯವಿದೆ. ಈಗ ಗರ್ಭಗುಡಿಯಲ್ಲಿ ಈದಿನ ಕಾಲದ ಜಯಪುರದ ಬಿಳಿಕಲ್ಲಿನ ಮಹಿಷ ಮರ್ದಿನಿ ಮೂರ್ತಿಯಿದೆ. ಇವೆರಡು ದೇವಾಲಯಗಳು ಶೈಲಿಯಲ್ಲಿ ಹರಿಹರೇಶ್ವರ ದೇವಾಲಯದಂತಿವೆ. ೧೨೬೮ರಲ್ಲಿ ಹೊಯ್ಸಳ ರಾಜರ ಸೋಮನಾಥನೆಂಬ ಅಧಿಕಾರಿಯು ಈ ದೇವಾಲಯ ಸಮೂಹದ ಸುತ್ತಲೂ ಸಾಕಷ್ಟು ಸ್ಥಳವನ್ನು ಬಿಟ್ಟು ಪ್ರಾಕಾರದ ಮಹಾ ದ್ವಾರವನ್ನು ಕಟ್ಟಿಸಿದನು. ೧೪ನೇ ಶತಮಾನದ ದೆಹಲಿ ಸುಲ್ತಾನರ ದಕ್ಷಿಣ ಭಾರತದಲ್ಲಿಯ ದಂಡಯಾತ್ರೆಗಳ ಸಮಯದಲ್ಲಿ ಈ ದೇವಾಲಯವು ಅವರ ಹಾವಳಿಗೆ ತುತ್ತಾಗಿ ದುರದೃಷ್ಟವಶಾತ್ ಗರ್ಭಗುಡಿಯಲ್ಲಿಯ ಭವ್ಯ ಮೂರ್ತಿಯೂ ಸೇರಿ ಭಗ್ನಾವಶೇಷವಾಯಿತು.

ಬಹುಶಃ ಇಂಥ ಹಾವಳಿಗಳಿಂದ ತಪ್ಪಿಸಲೋ ಏನೊ ಹಾರದಲ್ಲಿಯ ಕೂಟಗಳಲ್ಲಿಯ ಉಬ್ಬು ಶಿಲ್ಪಗಳೆಲ್ಲವನ್ನು ಉಳಿಯಿಂದ ಹೊಡೆದು ತೆಗೆಯಲಾಗಿದೆ. ಚಿತ್ರದುರ್ಗದ ಪಾಳೆಗಾರರ ಆಳ್ವಿಕೆಯಲ್ಲಿ ಈ ದೇವಾಲಯವು ಮತ್ತೆ ಜೀರ್ಣೋದ್ಧಾರವಾಗಿದೆ, ತುಂಡು ತುಂಡಾದ ಗರ್ಭಗೃಹದ ಮೂರ್ತಿಯನ್ನು ಮತ್ತೆ ಪ್ರತಿಷ್ಠಾಪಿಸಲಾಗಿದೆಯೆಂದು ತೋರುತ್ತದೆ.

ಈ ದೇವಾಲಯಕ್ಕೆ ಉಚ್ಚಂಗಿ ದೊರೆಗಳಾಗಿದ್ದ ವೀರ ಮತ್ತು ವಿಜಯ ಪಾಂಡ್ಯರು, ಕಳಚುರಿ ಬಿಜ್ಜಳರಸನು, ದೇವಗಿರಿ ಸೇವುಣ ವಂಶದ ಯಾದವ ಕನ್ನರ ಮತ್ತು ವಿಜಯನಗರ ಅರಸರುಗಳು ದತ್ತಿಗಳನ್ನು ಕೊಟ್ಟ ಉಲ್ಲೇಖಗಳುಳ್ಳ ಹಲವಾರು ಶಿಲಾ ಶಾಸನಗಳಿವೆ.

ಹರಿಹರನ ಪ್ರಾಚೀನತೆ

ಈ ಶಾಸನಗಳಿಂದ ಹರಿಹರೇಶ್ವರ ದೇವಾಲಯವು ಕ್ರಿ. ಶ. ೧೦೦೦ ಕ್ಕಿಂತಲೂ ಹಿಂದೆಯೆ ಇತ್ತೆಂಬುದು ನಿಸ್ಸಂಶಯ. ಚಾಲುಕ್ಯ ವಿನಯಾದಿತ್ಯನ ಹರಿಹರ ತಾಮ್ರಶಾಸನದ ಪ್ರಕಾರ ಈ ಊರು ೭ನೇ ಶತಮಾನದ ಅಂತ್ಯ ಭಾಗದಲ್ಲಿ "ಹರೇಷಪುರ"ವೆಂದು ಕರೆಯಲಾಗಿತ್ತು. ಈ ಹೆಸರು (ಹರಿ + ಈಶ) ಹರಿಹರನೆಂಬ ಅರ್ಥ ಕೊಡುವುದರಿಂದ ಇಲ್ಲಿ ಹರಿಹರನ ದೇವಾಲಯವಿದ್ದು ಅದರ ಹೆಸರೆ ಊರಿಗೆ ಬರುವಷ್ಟು ಪ್ರಸಿದ್ಧವಾದಿತ್ತೆಂದು ತಿಳಿದಲ್ಲಿ ತಪ್ಪಾಗಲಾರದು. ತುಂಗಭದ್ರೆಯು ಉತ್ತರಾಭಿಮುಖಿಯಾಗಿ ಹರಿಯುವ ತಿರುವಿನಲ್ಲಿರುವ ಇದು ಆಗಲೇ ಕ್ಷೇತ್ರವಾಗಿರಬೇಕು.

ಭವಿಷ್ಯೋತ್ತರ ಪುರಾಣ: ಕಾಶಿಖಂಡದ ಅಗಸ್ತ್ಯ-ಲೋಪಾಮುದ್ರೆಯರ ಸಂವಾದದಲ್ಲಿ ಈ ಪ್ರದೇಶವನ್ನು ಗುಹಾಸುರಾರಣ್ಯ ಕ್ಷೇತ್ರವೆಂದು ವರ್ಣಿಸಲಾಗಿದೆ. ಈ ಅಸುರನನ್ನು ಪರಮಾತ್ಮನು ಹರಿಹರನ ರೂಪದಲ್ಲಿ ಸಂಹಾರ ಮಾಡಿದ. ಹರಿಯಿಂದಲೂ ಹರನಿಂದಲೂ ಕೂಡಾ ಮರಣವಾಗದಂಥ ವರವಿದ್ದುದರಿಂದ ಪರಮಾತ್ಮನು ಹರಿಹರನ ರೂಪದಲ್ಲಿ ಇವನನ್ನು ಸಂಹಾರ ಮಾಡಿದನೆಂದಿದೆ. ಆದ್ದರಿಂದ ಇದು ಹರಿಹರ ಕ್ಷೇತ್ರವಾಯಿತು. ಈ ಕಥೆಯ ಕಾಲಮಾನ ೮ನೇ ಶತಮಾನದಿಂದೀಚಿನದಾಗಿದ್ದರೂ ಪ್ರಚಲಿತ ಆನುವಂಶಿಕದಂತ ಕಥೆಯೇ ಇದಕ್ಕೆ ಆಧಾರಿತವಾಗಿರಬೇಕು.

ಈ ಹಿನ್ನೆಲೆಯಲ್ಲಿ ಹರಿಹರನ ಮೂರ್ತಿಯ ಲಕ್ಷಣವನ್ನು ವಿಶ್ಲೇಷಿಸೋಣ. ಬಾಹ್ಯಾಲಂಕಾರವಿಲ್ಲದ ಸಮಯದಲ್ಲಿ ಮೂರ್ತಿಯನ್ನು ನೋಡುವ ಮತ್ತು ಛಾಯಾಚಿತ್ರವನ್ನು ತೆಗೆದುಕೊಳ್ಳುವ ಅವಕಾಶ ನನ್ನ ಅನ್ವೇಷಣೆಯಲ್ಲಿ ಸಿಕ್ಕಿತು. ಸುಮಾರು $2\frac{1}{2}$—3 ಮೀ. ಎತ್ತರದ ಸಮಭಂಗದಲ್ಲಿರುವ ಈ ದುಂಡುಶಿಲ್ಪದ ಭವ್ಯ ಮೂರ್ತಿಯ ಕೈಗಳು ಮತ್ತು ತೊಡೆಗಳ ಬದಿಯ ಉಂಗುರಾಕಾರದ ವಸ್ತ್ರದ ನೆರಿಗೆ, ಮೊಣಕಾಲಿನ ಕೆಳಭಾಗ ಒಡೆದು ಹೋಗಿವೆ. ದಷ್ಟಪುಷ್ಟವಾದ ಮೈಕಟ್ಟು, ಅದಕ್ಕೆ ತಕ್ಕನಾದ ನಿಲುವು. ಇದು ಚತುರ್ಭುಜವುಳ್ಳದ್ದಾಗಿ ಕೆಳ ಬಲಗೈ ಅಭಯ ಮುದ್ರೆಯಲ್ಲಿ, ಮೇಲಿನ ಕೈಗಳಲ್ಲಿ ತ್ರಿಶೂಲ, ಚಕ್ರವು, ಕೆಳ ಎಡಗೈಯಲ್ಲಿ ಶಂಖವು ಇವೆ. ತಲೆಯ ಮೇಲೆ ಚಂದ್ರಸಹಿತ ಅರ್ಧಜಟಾ ಅರ್ಧಕಿರೀಟ ಮುಕುಟವಿದೆ. ಕಿರೀಟದೊಳಗಿಂದ ಇಳಿಬಿದ್ದ ತಲೆಕೂದಲು ಸುರುಳಿ ಸುರುಳಿಯಾಗಿ ಎಡ ಭುಜದ ಮೇಲಿದೆ. ಕುತ್ತಿಗೆಗೆ ಮಣಿಖಚಿತ ಒಂದು ಸರವು ಮತ್ತು ಪೋಣಿಸಿದ ದುಂಡು ಮಣಿಗಳ ಮತ್ತೊಂದು ಸರವು. ಹೊಟ್ಟೆಯ ಮೇಲೆ ಉದರ ಪಟ್ಟಿಯು ತೋಳಿಗೆ ಸರಳ ಮಣಿಖಚಿತ ಪಟ್ಟಿ. ಕೈಗೆ ರತ್ನಖಚಿತ ಉಬ್ಬು ಬಳೆ ಇವೆ. ಎರಡು ಕರ್ಣಗಳಲ್ಲಿ ಉಂಗುರಗಳ ಮಾಲೆಯಂತೆ ಇಳಿಬಿದ್ದ ಧೋತ್ರವನ್ನೂ ಕಚ್ಚೆಹಾಕಿ ಬಿಗಿದು ಕಟ್ಟಲಾಗಿದೆ, ಮುಂದೆ ಮಾಲಾಕಾರವಾಗಿ ಕಟಿಸೂತ್ರದಿಂದ ಇಳಿಬಿದ್ದ ವಸ್ತ್ರಪಟ್ಟಿಯಿದೆ. ಕೈಗಳು ತುಂಡಾಗಿದ್ದು

ಪುನಃ ಪ್ರತಿಷ್ಠಾಪನೆ ಕಾಲದಲ್ಲಿ ಭುಜಕ್ಕೆ ಸೇರಿಸಲಾಗಿದೆ. ಆದರಲ್ಲೂ ಮೂರ್ತಿಯ ದುಂಡು ತೋಳುಗಳನ್ನು ಮೊಣಕೈಯವರೆಗೂ ಮುಕ್ಕಾಗದ ದುಂಡು ಕೈಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅದು ಮೂಲತಃ ದ್ವಿಭುಜವಾಗಿತ್ತೆಂದು[7], ಬಹಳ ಮಟ್ಟಿಗೆ ಅನಿಸುವುದು. ಪಾಳೇಗಾರರ ಕಾಲದಲ್ಲಿ ಪುನಃ ಪ್ರತಿಷ್ಠಾಪನೆ ಕಾಲದಲ್ಲಿ ತಲೆಮಾರಿನಿಂದ ಬಂದ ಪ್ರತಿಮಾ ಲಕ್ಷಣ ಪದ್ಧತಿಯಂತೆ ಈ ಮೂರ್ತಿಯೂ ಚತುರ್ಭುಜವಾಗಿತ್ತೆಂದು ಬಗೆದು ಜೋಡಿಸಲಾಯಿತೆಂದು ತೋರುವುದು. ಮೇಲಿನ ಎರಡು ಕೈಗಳ ಬುಡದಲ್ಲಿ ಅವುಗಳಿಗೆ ಆಧಾರವಾಗಿ ಚಿತ್ರಫಲಕಗಳಿವೆ. ಈ ಜೋಡಣೆಯಲ್ಲಿ ಹೊಂದಾಣಿಕೆಯಿಲ್ಲದೆ ಅಸಹಜವಾಗಿದೆ. ಚಿತ್ರಫಲಕಗಳಲ್ಲಿ ಬಲಕ್ಕೆ ಪಾರ್ವತಿ, ಎಡಕ್ಕೆ ಲಕ್ಷ್ಮಿಯ ಉಬ್ಬು ಶಿಲ್ಪಗಳಿವೆ. ಬುಡದ ಪೀಠದ ಮೇಲೆ ಬಲಬದಿಗೆ ಗಣೇಶನು ಎಡಬದಿಗೆ ಸನತ್ಕುಮಾರನ (?) ಉಬ್ಬು ಶಿಲ್ಪಗಳಿವೆ.

ಚಿತ್ರ ಫಲಕಗಳಂತೂ ಶಿಲ್ಪ ಲಕ್ಷಣದ ಮೇಲೆ ಪಾಳೆಯಗಾರರ ಕಾಲದ್ದೆಂದು ಸ್ಪಷ್ಟವಾಗಿ ಹೇಳಬಹುದು. ತ್ರಿಶೂಲ, ಚಕ್ರ ಮತ್ತು ಶಂಖಗಳ ಮಾದರಿಗಳನ್ನು ನೋಡಿದರೆ ಅವೂ ಕೂಡ ಇದೇ ಕಾಲದ್ದೆಂದು ನನಗೆ ಸಂಶಯ. ಇನ್ನು ಮೂರ್ತಿಯ ಉಳಿದ ಭಾಗ, ಮುಕುಟ ಆಭರಣಗಳ ಶೈಲಿ, ಧೋತ್ರ ಉಟ್ಟ ರೀತಿ ಮತ್ತು ಕಟಿ ಸೂತ್ರ ಮಾದರಿ ಮತ್ತು ದೈಹಿಕ ಮಾಟ; ಮುಖ್ಯವಾಗಿ ಯಜ್ಞೋಪವೀತ ಹಾಗು ವೈಜಯಂತಿ ಇಲ್ಲದಿರುವಿಕೆ ಇವೆಲ್ಲವುಗಳಿಂದ ಈ ಮೂರ್ತಿ ೫ ಇಲ್ಲವೆ ೬ನೇ ಶತಮಾನದ ಆದಿಭಾಗದ್ದೆಂದು ನನಗೆ ಬಹು ಮಟ್ಟಿಗೆ ಅನಿಸುತ್ತದೆ.

ಮಹಾತ್ಮ್ಯೆಯ ವಿಕಾಸ

ಹರಿಹರಕ್ಕೆ ಸಮೀಪದಲ್ಲಿರುವ ಉಚ್ಚಂಗಿ (ಉಚ್ಚಶೃಂಗಿ)ಯು ಬನವಾಸಿ ಕದಂಬರ ಉಪರಾಜಧಾನಿಗಳಲ್ಲಿ ಒಂದಾಗಿತ್ತು. ಇದರ ಸಮೀಪದಲ್ಲಿ ನದಿಯು ಉತ್ತರವಾಹಿನಿಯಾಗಿ ಹರಿಯುತ್ತಿರುವ ತಾಣವಲ್ಲಿ ಮತ್ತು ಇಲ್ಲಿಯ ಶಾತವಾಹನರ ಕಾಲದಿಂದ ಬೆಳೆದು ಬಂದ ನಗರದಲ್ಲಿ ಹರಿಹರನ ದೇವಾಲಯವನ್ನು (ಪ್ರಾಯಶಃ ಇಟ್ಟಿಗೆಯಲ್ಲಿ) ಕಟ್ಟಲಾಯಿತೆಂದು ಹೇಳಬಹುದು. ಬನವಾಸಿ ಕದಂಬ ರಾಜರು ಅವರ ಶಾಸನಗಳಿಂದ ಮೂಲತಃ ಶೈವರೆಂದು ತೋರುತ್ತದೆ. ಮೃಗೇಶವರ್ಮನ ಕಾಲದಿಂದ ವೈಷ್ಣವ ಮತಾವಲಂಬಿಗಳಾಗಿದ್ದರೆಂದು ಅವರ ಶಾಸನಗಳಿಂದ[8] ತಿಳಿದುಬರುತ್ತದೆ. ಆದ್ದರಿಂದಲೆ ಇವೆರಡೂ ಮತಗಳ ಸಮನ್ವಯತೆಯ ಸಂಕೇತವಾದ ಹರಿಹರನ ಬೃಹತ್ ಮೂರ್ತಿಯನ್ನು ಪ್ರಧಾನ ನದಿಯಾದ ಉತ್ತರವಾಹಿನಿ ತುಂಗಭದ್ರೆಯ ಪವಿತ್ರ ಪ್ರದೇಶದಲ್ಲಿ ಕಟ್ಟಲಾಯಿತೆನ್ನಬಹುದು.

ಮುಂದೆ ಇದು ಬಾದಾಮಿ ಚಾಲುಕ್ಯ – ರಾಷ್ಟ್ರಕೂಟರ ಕಾಲದಲ್ಲಿ ಆ ಭಾಗದಲ್ಲೆಲ್ಲಾ ಅಪೂರ್ವವಾದ ಆ ಬೃಹದಾಕಾರದ ದೈವಿಕ ಕಳೆಯಿಂದ ಚೆಲುವಾದ ಶಿಲ್ಪ ಸುತ್ತೆಲ್ಲ ಜನರಲ್ಲಿ ಭಕ್ತಿಭಾವವನ್ನು ಪ್ರಚೋದಿಸಿ ತನ್ನೆಡೆಗೆ ಆಕರ್ಷಿಸುತ್ತಾ ಕ್ರಮೇಣ ಈ ಸ್ಥಳವು ಕ್ಷೇತ್ರವಾಗಿ ಪುರಾಣ ಪ್ರಸಿದ್ಧವಾಗಿ ಬೆಳೆಯಲು ಕಾರಣವಾಯಿತು. ಇದರ ಪ್ರಭಾವದಿಂದ ಸುತ್ತ

ಮುತ್ತಲಿನ ಪ್ರದೇಶದಲ್ಲೆಲ್ಲ ಶಿವ-ವಿಷ್ಣು ದೇವಾಲಯಗಳು ನಿರ್ಮಿತವಾದುದೆಂದು ತೋರುವುದು. ಇದಲ್ಲದೆ ಎದುರುಬದುರಿನಲ್ಲಿ ಕಟ್ಟಿದ ಶಿವ-ವಿಷ್ಣು ಜೋಡಿ ದೇವಾಲಯಗಳು ಗಣನೀಯ ಪ್ರಮಾಣದಲ್ಲಿವೆ. ಹಳೆ ದ್ಯಾಮವ್ವನ ಹಳ್ಳಿಯ ಸು. ೯ನೇ ಶತಮಾನದ ಮಾಧವ (ಚಿತ್ರ 1, ೧) ದುಂಡು ಶಿಲ್ಪ. ೧೧-೧೨ನೇ ಶತಮಾನದ ಬಾನಹಳ್ಳಿಯಲ್ಲಿಯ ಕುಳಿತ ಭಂಗಿಯಲ್ಲಿರುವ ಬೃಹತ್ ಲಕ್ಷ್ಮೀನಾರಾಯಣ ದೇವಾಲಯ, ನಂದಿ ತಾವರೆಯಲ್ಲಿಯ ಅರ್ಧ ಉಳಿದಿರುವ ಶಂಕರನಾರಾಯಣ ಜೋಡಿ ದೇವಾಲಯ, ಬಿಳಿ ಬೋಡಿನ ೯ನೇ ಶತಮಾನದ ಈಶ್ವರ ದೇವಾಲಯದಲ್ಲಿ ೧೧ನೇ ಶತಮಾನದ ಭವ್ಯ ಲಕ್ಷ್ಮೀನಾರಾಯಣನ ಮೂರ್ತಿ, ಹರಿಹರದಲ್ಲಿ ಹರಿ-ಹರ (ವೆಂಕಟೇಶ್ವರ)ನ ಜೋಡಿ ದೇವಾಲಯ ಇವೇ ಮೊದಲಾದುವುಗಳನ್ನು[9] ಉದಾಹರಿಸಬಹುದು.

ಆಧಾರಬದ್ಧವಾದ ಈ ಅಭಿಪ್ರಾಯಗಳನ್ನು ಪುಷ್ಟೀಕರಿಸಲು ಬಾದಾಮಿ ಚಾಲುಕ್ಯರ ಕಾಲದ ಪಟ್ಟದ ಕಲ್ಲನ್ನು ಉದಾಹರಿಸಬಹುದು. ಇಲ್ಲಿ ಮಲಪ್ರಭೆಯು ಉತ್ತರ ವಾಹಿನಿಯಾಗಿದೆ. ಇಲ್ಲಿಯೇ ಈ ವಂಶದ ರಾಜರುಗಳಿಂದ ಕಟ್ಟಿಸಲ್ಪಟ್ಟ ಪ್ರಮುಖ ಶೈಲಿಗಳ-ರೇಖಾನಾಗರ ಮತ್ತು ವಿಮಾನ - ಶ್ರೇಷ್ಠ ದೇವಾಲಯಗಳಿರುವುದು. ಬಾದಾಮಿ ರಾಜಧಾನಿಯಾಗಿದ್ದರೂ ಐಹೊಳೆ ದಕ್ಷಿಣ ಭಾರತದಲ್ಲೆ "ಐಯ್ಯಾವೊಳೆ ಐನೂರ್ವರು" ಎಂದು ಪ್ರಸಿದ್ಧ ವಾಣಿಜ್ಯ ಕೇಂದ್ರವಾಗಿದ್ದರೂ ಮತ್ತು ಇವೆರಡು ಸ್ಥಳಗಳಲ್ಲಿಯೂ ವಿವಿಧ ಪ್ರಕಾರದ ಕಾಲಗಳ (ಬಾದಾಮಿ, ಚಾಲುಕ್ಯ, ರಾಷ್ಟ್ರಕೂಟ. ಕಲ್ಯಾಣ ಚಾಲುಕ್ಯ) ಹಲವಾರು ದೇವಾಲಯಗಳಿದ್ದರೂ ಇತಿಹಾಸದಲ್ಲಿ ಪಟ್ಟದಕಲ್ಲಿನಷ್ಟು ಮಹಾತ್ಮ್ಯೆಯನ್ನು ಪಡೆಯಲಿಲ್ಲ. ೧೧-೧೨ನೇ ಶತಮಾನಗಳ ಶಾಸನಗಳಲ್ಲೂ ಮತ್ತು ಸಾಹಿತ್ಯದಲ್ಲೂ "ಪಟ್ಟದ ಕಿಸು[10]ವೊಳಲ್" ಎಂದು ಇದನ್ನು ವರ್ಣಿಸಲಾಗಿದ್ದು ಪುರಾಣ ಪ್ರಸಿದ್ಧ ರಾಜರುಗಳಾದ ನೃಗ, ನಹುಷ, ಪುರೂರವ, ಸಗರ ಹಾಗು ಇತಿಹಾಸ ಪ್ರಸಿದ್ಧರಾದ ನಂದ, ಗುಪ್ತ, ಚಾಲುಕ್ಯ ವಂಶದ ರಾಜರುಗಳು ಇಲ್ಲಿಯೆ ತಮ್ಮ ಪಟ್ಟಾಭಿಷೇಕವನ್ನು ಮಾಡಿಸಿಕೊಂಡರೆಂದು ಇದರ ಕ್ಷೇತ್ರ ಮಹಾತ್ಮೆಯನ್ನು ಉತ್ಪ್ರೇಕ್ಷಿಸಲಾಗಿದೆ.

3. ನಿಷಿಧಿಕಲ್ಲು

ಹಲಸಬಾಳಿನಲ್ಲಿ ಒಂದು ಅಪೂರ್ವ ಜೈನ ನಿಷಿಧಿಕಲ್ಲು (ಚಿತ್ರ 1; ೩) ಇದೆ. ಸಾಮಾನ್ಯವಾಗಿ ನಿಷಿಧಿಕಲ್ಲುಗಳಲ್ಲಿ ಎರಡು ಪ್ರಕಾರಗಳಿವೆ. ರಾಷ್ಟ್ರಕೂಟರ ಕಾಲದ ನಿಷಿಧಿಗಳು ದಪ್ಪ ಕಲ್ಲುಕಂಬಗಳ ಮುಂಭಾಗ, ಹಿಂಭಾಗ ಹೆಚ್ಚು ಅಗಲವಿದ್ದು ಎಂಟು ಮೂಲೆಗಳಿರುತ್ತವೆ. ಮೇಲೆ ವರ್ತುಳಾಕಾರವಾಗಿರುತ್ತವೆ. ಮುಂಬದಿ ಮತ್ತು ಹಿಂಬದಿಯಲ್ಲಿ ಪೂರ್ಣಕುಂಭ, ಆನೆ ಮುಂತಾದ ಉಬ್ಬು ಶಿಲ್ಪಗಳು ಅಪರೂಪವಾಗಿ ಶಾಸನವು ಇರುತ್ತವೆ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಒಂದೇ ಬದಿಯಲ್ಲಿ ಎರಡು ಶಿಲ್ಪ ಪಟ್ಟಿಕೆಗಳುಳ್ಳ ತೆಳ್ಳನೆ ಹಲಗೆ ಕೆಳಗಿನ ಪಟ್ಟಿಕೆಯಲ್ಲಿ ಸಲ್ಲೇಖನ ವ್ರತವನ್ನು ಕೈಗೊಂಡ ಜೈನ ಶ್ರಾವಕನು ತನ್ನ

ಮುನಿಗಳಿಂದ ಧರ್ಮಪ್ರವಚನವನ್ನು ಕೇಳುತ್ತಿರುವುದು, ಎರಡನೆ ಪಟ್ಟಿಕೆಯಲ್ಲಿ ನಿರ್ವಾಣ ಹೊಂದಿದ ಶ್ರಾವಕನೊಡನೆ ತೀರ್ಥಂಕರನ ಮೂರ್ತಿ ಇರುತ್ತದೆ. ಹಲಸಬಾಳಿನದು ಶೈಲಿ ಯಿಂದ ವಿಜಯನಗರ ಕಾಲದ್ದು. ಸಾಮಾನ್ಯವಾಗಿ ವೀರಗಲ್ಲಿರುವ ಹಾಗೆ ಮೂರು ಪಟ್ಟಿಕೆ ಗಳಿವೆ. ಕೆಳಗಿನದರಲ್ಲಿ ಜೈನ ಶ್ರಾವಕನು ಪಲ್ಲಕಿಯಲ್ಲಿ ಕೈಮುಗಿದು ಕುಳಿತುಕೊಂಡು ಸಲ್ಲೇಖನ ವ್ರತವನ್ನಾಚರಿಸಲು ಹೋಗುತ್ತಿರುವುದು. ಮಧ್ಯದರಲ್ಲಿ ತೀರ್ಥಂಕರನ ಪ್ರತಿಮೆಯ ಎದುರಿನಲ್ಲಿ ಭಕ್ತಿಯಿಂದ ವ್ರತವನ್ನಾಚರಿಸುತ್ತಿರುವುದು ಮೇಲಿನದರಲ್ಲಿ ಈ ವ್ರತದಿಂಧ ನಿರ್ವಾಣಹೊಂದಿದ ಶ್ರಾವಕ ಮತ್ತು ತೀರ್ಥಂಕರನ ಚಿತ್ರವಿದೆ. ಇದರಲ್ಲಿ ಮೊದಲನೆ ಪಟ್ಟಿಕೆ ವಿಶಿಷ್ಟವಾದುದು, ಆದುದರಿಂದ ಇದು ಒಂದು ಅಪೂರ್ವ ನಿಷಿಧಿಕಲ್ಲು.

ಟಿಪ್ಪಣಿಗಳು

1. ಎಪಿಗ್ರಾಫಿಯಾ ಕರ್ನಾಟಿಕ ಸಂಪುಟ XI
2. ಇಂಡಿಯನ್ ಆಂಟಿಕ್ವೆರಿ ಸಂ. ೭, ಪುಟ ೩೦೦
3. ಕೃಷ್ಣ ಎಂ. ಎಚ್; ೧೯೩೧; ಎಕ್ಸ್‌ಕವೇಶನ್ಸ್ ಆ್ಯಟ್ ಚಂದ್ರವಳ್ಳಿ ಮತ್ತು ಏನ್‌ಸಿಯೆಂಟ್ ಇಂಡಿಯಾ, ಸಂಪುಟ ೪, ಪುಟಗಳು ೨೭೦-೨೯೫.
4. ನಾನು ಈ ಪ್ರಾದೇಶಿಕ ಅನ್ವೇಷಣೆಗೆ ಹೊರಡುವ ಒಂದು ವಾರದ ಮೊದಲು ಹರಿಹರದ ನನ್ನ ಮಿತ್ರರೊಬ್ಬರು ಈ ನೆಲೆಯಲ್ಲಿಯ ಕೆಲವೊಂದು ಮೃತ್‌ಪಾತ್ರೆಯ ಅವಶೇಷಗಳನ್ನು ನನಗೆ ತೋರಿಸಿದ್ದರು. ಅವುಗಳಲ್ಲಿ ಕೆಲವು ಸುಮಾರು ೧-೨ನೇ ಶತಮಾನದ ಕಾಲದ್ದೆಂದು ನನಗೆ ಖಚಿತವಾಗಿ ಈ ನೆಲೆಯನ್ನು ಸ್ವತಃ ಪರೀಕ್ಷಿಸಲು ನಿರ್ಧರಿಸಿದೆ. ಈ ನೆಲೆಯ ಸುಳುವನ್ನು ಕೊಟ್ಟ ಆ ಮಿತ್ರರಿಗೆ ನಾನು ಕೃತಜ್ಞ.
5. ನಾಗರಾಜ ರಾವ್. ಎಂ. ಎಸ್; ೧೯೭೧; ಪ್ರೊಟೊ ಹಿಸ್ಟಾರಿಕ್ ಕಲ್ಚರ್ಸ್ ಆಫ್ ದಿ ತುಂಗಭದ್ರಾ ವ್ಯಾಲಿ, ೧೯೭೭ ಎಪ್ರಿಲ್‌ನಲ್ಲಿ ಇದೇ ನೆಲೆಯ ಪುನರುತ್ಖನನವನ್ನು ಕರ್ನಾಟಕ ಸರ್ಕಾರದ ಪುರಾತತ್ವ ಮತ್ತು ಪ್ರಾಚ್ಯವಸ್ತು ಸಂಗ್ರಹಾಲಯ ವಿಭಾಗವು ಇದರ ನಿರ್ದೇಶಕರಾದ ಡಾ! ಎಂ. ಎಸ್. ನಾಗರಾಜರಾಯರ ನಿರ್ದೇಶನದಲ್ಲಿ ನಡೆಸಲಾಯಿತು.
6. ಈ ದೇವಾಲಯವನ್ನು ಹರಿಹರ ಮೂರ್ತಿಯ ಚಿತ್ರಸಹಿತ ಅನ್ಯುಯಲ್ ರಿಪೋರ್ಟ್ ಆಫ್ ದಿ ಮೈಸೂರು ಆರ್ಕಿಯಲಾಜಿಕಲ್ ರಿಪೋರ್ಟ್ ಫಾರ್ ದಿ ಇಯರ್ ೧೯೩೨ ಮತ್ತು ೧೯೩೩ ವರ್ಣಿಸಲಾಗಿದೆ.
7. ನನ್ನ ಮೂರ್ತಿಯ ಹಿಂಬದಿಗೆ ಹೋದಿ ಈ ಸಂಶಯ ಪರಿಹಾರ ಮಾಡಿಕೊಳ್ಳಲು ಆಗ ಅವಕಾಶವಿರಲಿಲ್ಲ. ಸುಮಾರು ೨-೩ನೇ ಶತಮಾನಗಳಲ್ಲಿ ಗಣೇಶ, ದುರ್ಗಾ,

ವಿಷ್ಣು, ವರಾಹ, ನರಸಿಂಹ ಮುಂತಾದ ಮೂರ್ತಿ ಶಿಲ್ಪಗಳಲ್ಲಿ ದ್ವಿಭುಜಗಳನ್ನು ಮಾತ್ರ ಬಿಡಿಸಲಾಗಿದೆ. ಇಂಥ ಮೂರ್ತಿಗಳು ತಕ್ಕ ಪ್ರಮಾಣದಲ್ಲಿ ಹೆಚ್ಚಾಗಿ ಉತ್ತರ-ದಕ್ಷಿಣ ಕನ್ನಡ, ಶಿವಮೊಗ್ಗ ಹಾಗು ವಿರಳವಾಗಿ ವಿಜಾಪುರ ಜಿಲ್ಲೆಗಳಲ್ಲಿ ಇವೆ.

8. ಶಾಂತಿವರ್ಮನು ತನ್ನ ತಂದೆ ಕಾಕುತ್ಸವರ್ಮನ ಹೆಸರಿನಲ್ಲಿ ನೆಡಿಸಿದ ತಾಳಗುಂದ ಶಾಸನವನ್ನು ಮತ್ತು ಮೃಗೇಶವರ್ಮನ ಬನವಾಸಿ ಶಾಸನವನ್ನು ನೋಡಿ.

9. ಐರಣಿ, ಸಾರ್ಥಿ (ಹರಿಹರ ತಾ)ಗಳಲೂ ವಿಷ್ಣುದೇವಾಲಯಗಳಿವೆಯೆಂದು ನನ್ನ ಅನ್ವೇಷಣೆ ಕಾಲದಲ್ಲಿ ತಿಳಿದು ಬಂತು.

10 ಸಿಂಗಿರಾಜ ಪುರಾಣ ೪ನೇ ಸಂಧಿ. ಹಮ್ಮೀರ ಕಾವ್ಯ: ಪ್ರಕರಣ ೧.

ಕೃತಜ್ಞತೆ

ವಿಶ್ವವಿದ್ಯಾಲಯ ಧನ ಆಯೋಗದ ಧನ ಸಹಾಯದಿಂದ ಈ ಪುರಾತತ್ವ ಶೋಧನೆಯನ್ನು ಕೈಗೊಂಡಿದ್ದೆ. ಹರಿಹರದಲ್ಲಿ ನನ್ನ ಪುರಾತತ್ವ ಶೋಧನೆಯಲ್ಲಿ ಶ್ರೀ ಕೊಟ್ರಯ್ಯನವರು ಮತ್ತು ಅವರ ಸ್ನೇಹಿತರು ಎಡೆಬಿಡದೆ ವೈಯಕ್ತಿಕವಾಗಿ ಸಹಾಯ ಮಾಡಿದ್ದಾರೆ. ಸ್ಥಳಿಕ ಕಾಲೇಜಿನ ಅಧ್ಯಾಪಕರಾದ ಶ್ರೀ ಎಚ್. ವಿ ಭಿಕ್ಷಾವರ್ತಿ ಮಠದವರು ಮತ್ತು ಹರಿಹರೇಶ್ವರ ದೇವಾಲಯದ ಅರ್ಚಕರು ತುಂಬ ಸಹಾಯ ಮಾಡಿದ್ದಾರೆ. ಶ್ರೀಮತಿ ಭಾಗ್ಯಲಕ್ಷ್ಮಿ ಸುಂದರರವರು ನನ್ನ ಲೇಖನದ ಉತ್ತಮ ಪ್ರತಿಯನ್ನು ಸಿದ್ಧಪಡಿಸಿದ್ದಾರೆ. ಇವರೆಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

× × × ×

೨. ಕರ್ನಾಟಕದಲ್ಲಿ ಪಂಚ್ ಮಾರ್ಕ್ ನಾಣ್ಯಗಳು

ಡಾ। ಎ. ವಿ. ನರಸಿಂಹ ಮೂರ್ತಿ. ಮೈಸೂರು.

ಭಾರತೀಯ ನಾಣ್ಯಗಳ ಉಗಮದ ಬಗೆಗೆ ಖಚಿತವಾದ ಮಾಹಿತಿಯು ಇನ್ನೂ ದೊರಕಬೇಕಾಗಿದೆ ಎನ್ನುವುದು ನಿಜವಾದರೂ, ಈಗಿನ ಮಟ್ಟಿಗೆ ಹೇಳುವುದಾದರೆ, ಪಂಚ್ ಮಾರ್ಕ್[1] ನಾಣ್ಯಗಳೇ ಪ್ರಾಚೀನತಮ ಭಾರತೀಯ ನಾಣ್ಯಗಳು. ಇವುಗಳನ್ನು ನಮ್ಮ ಪ್ರಾಚೀನ ಸಾಹಿತ್ಯಕ ಗ್ರಂಥಗಳು ಕಾರ್ಷಾಪಣಗಳೆಂದು ಕರೆದಿವೆ. ನಮ್ಮ ದೇಶದಲ್ಲಿ ಈ ನಾಣ್ಯಗಳು ಸುಮಾರು ಕ್ರಿ. ಪೂ. 800ರಿಂದ ಪ್ರಾರಂಭವಾಗಿ ಕ್ರಿ. ಶ, ನಾಲ್ಕನೆಯ ಶತಮಾನದವರೆಗೆ ಬಳಕೆಯಲ್ಲಿದ್ದವು ಎಂಬುದು ಪುರಾತತ್ವ ಉತ್ಖನನಗಳಿಂದ ಮತ್ತು ಸಾಹಿತ್ಯಕ ಗ್ರಂಥಗಳಿಂದ ತಿಳಿದುಬಂದಿದೆ. ಈ ನಾಣ್ಯಗಳು ಭಾರತದ ಎಲ್ಲ ಕಡೆಗಳಲ್ಲಿಯೂ ಹೇರಳವಾಗಿ ದೊರಕಿದ್ದರೂ, ಕರ್ನಾಟಕದಲ್ಲಿ ಮಾತ್ರ ಇದುವರೆಗೆ ಈ ನಾಣ್ಯಗಳು ಅಷ್ಟಾಗಿ ದೊರಕಿಲ್ಲ. ಇದಕ್ಕೆ ಕಾರಣಗಳೂ ತಿಳಿಯದು. ಇದರಿಂದಾಗಿ ಕರ್ನಾಟಕದ ನಾಣ್ಯಶಾಸ್ತ್ರವನ್ನು ಅಭ್ಯಾಸ ಮಾಡುವಾಗ ಪ್ರಾಚೀನ ತಮ ಕರ್ನಾಟಕದ ನಾಣ್ಯ ಯಾವುದು; ಇದರ ಕಾಲಮಾನವೇನು; ಇದರ ಲಕ್ಷಣಗಳೇನು; ಇದು ಭಾರತದ ಯಾವ ಕಡೆಯಿಂದ ಇಲ್ಲಿಗೆ ಬಂದಿತು; ಮುಂತಾದ ಪ್ರಶ್ನೆಗಳಿಗೆ ಉತ್ತರ ದೊರಕಿಲ್ಲ. ಇತ್ತೀಚಿನ ಸಂಶೋಧನೆಗಳಿಂದ ಈ ಪ್ರಶ್ನೆಗಳಿಗೆ ದೊರಕಿರುವ ಮತ್ತು ದೊರಕಬೇಕಾಗಿರುವ ಸಮಾಧಾನಗಳನ್ನು ಪರಿಶೀಲಿಸುವುದೇ ಈ ಲೇಖನದ ಮುಖ್ಯ ಉದ್ದೇಶ.

ದಕ್ಷಿಣ ಭಾರತದಲ್ಲಿ ಪಂಚ್‌ಮಾರ್ಕ್ ನಾಣ್ಯಗಳು ತಯಾರಾಗುತ್ತಿದ್ದವು ಎಂಬುದಕ್ಕೆ ಯಾವ ಮಾಹಿತಿಯೂ ದೊರಕಿಲ್ಲ. ಮೌರ್ಯರ ಕಾಲದಲ್ಲಿ ಪಂಚ್ ಮಾರ್ಕ್ ನಾಣ್ಯಗಳು ವಿಶೇಷವಾಗಿ ಚಲಾವಣೆಯಲ್ಲಿದ್ದವು. ಕರ್ನಾಟಕವು ಮೌರ್ಯರ ಆಧಿಪತ್ಯಕ್ಕೆ ಒಳಪಟ್ಟಿದ್ದಿತೆನ್ನುವುದು ಇಲ್ಲಿ ದೊರಕಿರುವ ಅಶೋಕನ ಶಾಸನಗಳಿಂದ ಖಚಿತವಾಗಿದೆ. ಆದುದರಿಂದ ಆ ಕಾಲದಲ್ಲಿಯೇ ಕರ್ನಾಟಕದಲ್ಲಿಯೂ ಮೌರ್ಯವಂಶಕ್ಕೆ ಸೇರಿದ ಪಂಚ್ ಮಾರ್ಕಿನ ನಾಣ್ಯಗಳು ಇದ್ದವೆಂದು ಊಹಿಸಬಹುದು. ಆಂಧ್ರ, ತಮಿಳುನಾಡು ಮತ್ತು ಮಹಾರಾಷ್ಟ್ರಗಳಲ್ಲಿ ದೊರಕಿರುವ ಮಾಹಿತಿಯಿಂದ ತಿಳಿದುಬರುವ ಅಂಶವೆಂದರೆ ಪಂಚ್ ಮಾರ್ಕ್ ನಾಣ್ಯಗಳು ಉತ್ತರ ಭಾರತದಿಂದ ದಕ್ಷಿಣ ಭಾರತಕ್ಕೆ ಬಂದವು ಎಂಬುದು. ಆದರೆ ಆಂಧ್ರ ಮತ್ತು ತಮಿಳುನಾಡುಗಳಲ್ಲಿ ಸಾವಿರಾರು ಪಂಚ್ ಮಾರ್ಕ್ ನಾಣ್ಯಗಳು ದೊರಕಿ ಈ ನಾಣ್ಯಗಳು ಇಲ್ಲಿ ವಿಶೇಷವಾಗಿ ಚಲಾವಣೆಯಲ್ಲಿದ್ದವು ಎಂಬ ಅಂಶವನ್ನು ಸ್ಪಷ್ಟಪಡಿಸುತ್ತವೆ. ಕರ್ನಾಟಕದಲ್ಲಿ ಮಾತ್ರ ಇವು ಅಷ್ಟಾಗಿ ದೊರಕದೇ ಇರುವುದು ಸೋಜಿಗದ ಸಂಗತಿಯಾಗಿದೆ. ಇದುವರೆವಿಗೂ ಕರ್ನಾಟಕದಲ್ಲಿ ದೊರಕಿರುವ ಪಂಚ್ ಮಾರ್ಕ್ ನಾಣ್ಯಗಳನ್ನು ಈಗ ಗಮನಿಸೋಣ.

ಮೈಸೂರು ಪುರಾತತ್ವ ಇಲಾಖೆಯ 1937ನೆಯ ವಾರ್ಷಿಕ ವರದಿಯ ಪ್ರಕಾರ, ಡಾ। ಎಂ. ಎಚ್. ಕೃಷ್ಣರವರು ಹತ್ತೊಂಭತ್ತು ಬೆಳ್ಳಿಯ ಪಂಚ್‌ಮಾರ್ಕ್ ನಾಣ್ಯಗಳನ್ನು ಗಮನಿಸಿದ್ದಾರೆಂದು ತಿಳಿಯುತ್ತದೆ.[2] ಅವು ಎಲ್ಲಿ ಸಿಕ್ಕಿದವು ಎನ್ನುವ ಬಗೆಗೆ ಮಾಹಿತಿಯನ್ನು ಅವರು ಕೊಟ್ಟಿಲ್ಲ. ಅವುಗಳ ಮೇಲಿರುವ ಚಿಹ್ನೆಗಳಿಂದ ಅವು ಮೌರ್ಯರ ಕಾಲದ ಪಂಚ್ ಮಾರ್ಕಿನ ನಾಣ್ಯಗಳೆಂದು ತೀರ್ಮಾನಿಸಬಹುದು. ಅವುಗಳ ತೂಕವನ್ನು ಗಮನಿಸಿದರೆ ಅವು ಕಾರ್ಷಾಪಣ, ಅರ್ಧ ಕಾರ್ಷಾಪಣ ಮತ್ತು ಕಾಲು ಕಾರ್ಷಾಪಣ ನಾಣ್ಯಗಳೆಂದೂ ತಿಳಿಯುತ್ತದೆ. ಈ ಪೂರ್ತಿಯ ಕಾರ್ಷಾಪಣದ ತೂಕವು 52·6 ಗ್ರೇನ್‌ನಿಂದ 43.4ರ ವರೆಗೂ, ಅರ್ಧ ಕಾರ್ಷಾಪಣವು 28.4ರಿಂದ 23.8 ಗ್ರೇನ್‌ವರೆಗೂ ಇವೆ. ಈ ನಾಣ್ಯಗಳ ಹಿಮ್ಮುಖದಲ್ಲಿ ಯಾವ ಬರವಣಿಗೆಯಾಗಲೀ ಚಿಹ್ನೆಯಾಗಲೀ ಇಲ್ಲ. ಮುಮ್ಮುಖದಲ್ಲಿ ಮಾತ್ರ ಸೂರ್ಯ, ಚೈತ್ಯ, ಆನೆ, ನವಿಲು ಮತ್ತು ನಂದಿ ಇವುಗಳ ಚಿತ್ರಗಳಿವೆ.

ಇದೇ ಇಲಾಖೆಯ 1938ನೆಯ ವರ್ಷದ ವರದಿಯಲ್ಲಿ ಧಾರವಾಡದಲ್ಲಿ ದೊರಕಿದ ಹನ್ನೊಂದು ಪಂಚ್‌ಮಾರ್ಕ್ ನಾಣ್ಯಗಳನ್ನು ಎಂ. ಎಚ್. ಕೃಷ್ಣರವರು ಗಮನಿಸಿದ್ದಾರೆ.[3] ಹಿಮ್ಮುಖ ಮತ್ತು ಮುಮ್ಮುಖಗಳೆರಡರಲ್ಲೂ ಇವುಗಳ ಮೇಲೆ ಚಿಹ್ನೆಗಳಿವೆ. ಇವೆಲ್ಲವೂ ಬೆಳ್ಳಿಯ ನಾಣ್ಯಗಳು. ಇವುಗಳ ಮೇಲೆ ಸ್ವಸ್ತಿಕ, ಸೂರ್ಯ, ಚೈತ್ಯ, ಬೆಟ್ಟ, ನಂದಿ ಮೊದಲಾದ ಚಿಹ್ನೆಗಳಿವೆ. ಇವುಗಳು ಮೌರ್ಯ ಮತ್ತು ಅವರ ಅನಂತರದ ಕಾಲದಲ್ಲಿ ಚಲಾವಣೆಯಲ್ಲಿದ್ದ ನಾಣ್ಯಗಳು.

ಆದರೆ ಈ ನಾಣ್ಯಗಳು ಯಾವುವೂ ಕಾಲನಿರ್ಣಯದ ದೃಷ್ಟಿಯಿಂದ ಅನುಕೂಲವಾಗಿಲ್ಲ. ಏಕೆಂದರೆ ಅವು ಉತ್ಖನನಗಳಲ್ಲಿ ದೊರಕಿಲ್ಲ ಮತ್ತು ಕಾಲನಿರ್ಣಯ ಮಾಡುವ ಯಾವ ವಸ್ತುಗಳೂ ಇವುಗಳ ಜೊತೆ ಸಿಕ್ಕಿದ ದಾಖಲೆಗಳೂ ಉಳಿದುಬಂದಿಲ್ಲ. ಈ ದೃಷ್ಟಿಯಿಂದ ಬನವಾಸಿಯಲ್ಲಿ ನಡೆದ ಉತ್ಖನನ ಬಹಳ ಮುಖ್ಯವಾದುದು.[4] ಮೊಟ್ಟ ಮೊದಲನೆಯ ಬಾರಿಗೆ ಕರ್ನಾಟಕದಲ್ಲಿ ಸ್ತರಜನ್ಯವಾದ ಸಂಸ್ಕೃತಿಯಲ್ಲಿ ಪಂಚ್‌ಮಾರ್ಕಿನ ನಾಣ್ಯವು ದೊರಕಿದ್ದು ಬನವಾಸಿಯಲ್ಲಿ[5]. ಈ ಉತ್ಖನನದಲ್ಲಿ ಸಾತವಾಹನರ ಕಾಲಕ್ಕೆ ಸೇರುವ ಒಂದು ವಿಶಾಲವಾದ ಗಜಪೃಷ್ಠಾಕೃತಿಯ ದೇವಾಲಯವು ಬೆಳಕಿಗೆ ಬಂದಿತು. ಇದಕ್ಕೆ ಎರಡು ಪ್ರಾಕಾರಗಳಿದ್ದು, ಈ ಎರಡು ಪ್ರಾಕಾರಗಳ ಗೋಡೆಯ ಮಧ್ಯದಲ್ಲಿ ರಸೆಟ್ ಕೋಟೆಡ್ ಕಪೊಲಿನ್ ಚಿತ್ರದ ಮಡಿಕೆ, ಕಾಲೆಟಿಡ್ ಮಡಕೆ ಮುಂತಾದವುಗಳು ದೊರಕಿದವು. ಈ ಅವಶೇಷಗಳು ಸಾತವಾಹನ ಕಾಲದವು ಎಂದು ಇತರ ಉತ್ಖನನಗಳಿಂದ ಗೊತ್ತಾಗಿದೆ. ಈ ಅವಶೇಷಗಳು ದೊರಕಿದ ಕೆಳಗಿನ ಸ್ತರದಲ್ಲಿ ಮಿಶ್ರಬೆಳ್ಳಿಯ ಪಂಚ್‌ಮಾರ್ಕಿನ ನಾಣ್ಯವೊಂದು ದೊರಕಿತು. ಇದನ್ನು ಮೌರ್ಯರ ಕಾಲದ ಕೊನೆಯ ಭಾಗಕ್ಕೆ ಸೇರಿಸಬಹುದು. ಅಂದರೆ ಸುಮಾರು ಕ್ರಿ. ಪೂರ್ವದ ಕೊನೆಯ ಭಾಗ ಮತ್ತು ಕ್ರಿ. ಶಕದ ಆದಿಭಾಗಕ್ಕೆ ಈ ನಾಣ್ಯವು ಸೇರುತ್ತದೆ ಎಂಬುದು ಸುಸ್ಪಷ್ಟ.

ವೀಲರ್‌ರವರು ಚಂದ್ರವಳ್ಳಿಯಲ್ಲಿ ನಡೆಸಿದ ಉತ್ಖನನದಲ್ಲಿಯೂ ಒಂದು ಬೆಳ್ಳಿಯ ಪಂಚ್‌ಮಾರ್ಕ್ ನಾಣ್ಯವು ದೊರಕಿತು[6]. ಇದು ಆಂಧ್ರ ಸಾತವಾಹನ ಸಂಸ್ಕೃತಿಯ ಮಧ್ಯಸ್ತರದಲ್ಲಿ ದೊರಕಿತು ಎಂಬುದನ್ನು ಗಮನಿಸಬೇಕು.

ಇತ್ತೀಚೆಗೆ ಬೆಳಗಾಂಗೆ ಸೇರಿದಂತೆಯೇ ಇರುವ ವಡಗಾಂವ ಮಾಧವಪುರದಲ್ಲಿ ಉತ್ಖನನಗಳು ನಡೆಯುತ್ತಲಿವೆ[7], ಕ್ರಿ. ಪೂ. ಮೂರನೆಯ ಶತಮಾನದಿಂದ ಕ್ರಿ. ಶ. ಮೂರನೆಯ ಶತಮಾನದ ವರೆಗೆ ಪ್ರಚಲಿತವಾಗಿದ್ದ ಐತಿಹಾಸಿಕ ಸಂಸ್ಕೃತಿಯು ಇಲ್ಲಿ ಬೆಳಕಿಗೆ ಬಂದಿದೆ. ಇಲ್ಲಿಯ ಕೊನೆಯ ಕಾಲದ ಸ್ತರದಲ್ಲಿ ರೆಸೆಟ್ ಕೋಟೆಡ್ ಕವೋಲಿನ್ ಮಡಿಕೆಗಳ ಜೊತೆಯಲ್ಲಿ ಹತ್ತಾರು ಪಂಚ್‌ಮಾರ್ಕ್ ನಾಣ್ಯಗಳು ದೊರಕಿವೆ, ಇವು ಚೌಕಾಕಾರದಲ್ಲಿದ್ದು ಕಂಡೂ ಬೆಳ್ಳಿ, ಇಲ್ಲವೇ ತಾಮ್ರದಿಂದ ತಯಾರಾದವು. ಇವುಗಳಲ್ಲಿ ಐದು ಚಿಹ್ನೆಗಳಿವೆ. ಅವುಗಳಲ್ಲಿ ಮುಖ್ಯವಾದವು ಸೂರ್ಯ, ಬೆಟ್ಟ, ನಂದಿ ಮತ್ತು ಗೋಪುರ. ಕ್ರಿ. ಶ. ಒಂದನೆಯ ಶತಮಾನಕ್ಕೆ ಈ ನಾಣ್ಯಗಳು ಸೇರುತ್ತವೆ ಎಂಬುದು ಈ ಉತ್ಖನನದಿಂದ ಗೊತ್ತಾಗುತ್ತದೆ. ಈ ಉತ್ಖನನದ ಪೂರ್ಣ ವರದಿ ಬಂದಾಗ, ಈ ನಾಣ್ಯಗಳ ಕಾಲ ನಿರ್ದೇಶನ ಇನ್ನೂ ಖಚಿತವಾಗುವುದರಲ್ಲಿ ಸಂದೇಹವಿಲ್ಲ.

ಮೈಸೂರು ವಿಶ್ವವಿದ್ಯಾನಿಲಯದ ಪುರಾತತ್ವ ವಸ್ತುಸಂಗ್ರಹಾಲಯದಲ್ಲಿ ಅನೇಕ ಪಂಚ್‌ಮಾರ್ಕ್ ನಾಣ್ಯಗಳಿವೆ. ಆದರೆ ಅವುಗಳು ಇಲ್ಲಿ ದೊರಕಿದವುಗಳು ಅಲ್ಲವಾದುದರಿಂದ ನಮ್ಮ ಸಮಸ್ಯೆಯನ್ನು ಬಿಡಿಸಲು ಸಹಕಾರಿಯಾದಿಲ್ಲ[8].

ಇತ್ತೀಚೆಗೆ ಕರ್ನಾಟಕ ಪುರಾತತ್ವ ಇಲಾಖೆಯವರು ರಾಯಚೂರು ಜಿಲ್ಲೆಯ ಕೊಪ್ಪಳ ತಾಲೂಕಿನ ಚಿಕ್ಕ ಸಿಂದಗಿ ಎಂಬ ಗ್ರಾಮದಲ್ಲಿ 5534 ಪಂಚ್‌ಮಾರ್ಕ್ ನಾಣ್ಯಗಳ ರಾಶಿಯೊಂದನ್ನು ಪತ್ತೆಹಚ್ಚಿದ್ದಾರೆ[9]. ಕರ್ನಾಟಕದಲ್ಲಿ ಇಷ್ಟೊಂದು ನಾಣ್ಯಗಳು ಒಟ್ಟಿಗೆ ದೊರಕಿರುವುದು ಮೊದಲನೆಯ ಸಲ, ಈ ನಾಣ್ಯರಾಶಿಯ ಮತ್ತೊಂದು ವೈಶಿಷ್ಟ್ಯವೆಂದರೆ ಈ ನಾಣ್ಯಗಳು ಒಂದು ಮಡಿಕೆ ಮತ್ತು ತಾಮ್ರದ ಚೊಂಬುಗಳಲ್ಲಿದ್ದವು. ತಾಮ್ರದ ಚೊಂಬಿನ ಮೇಲೆ 'ಚಂತಸ' ಎಂಬ ಬರೆಹವಿರುವುದು ಬಹು ಮಹತ್ವದ ಸಂಗತಿ. ಈ ಬರಹದ ಆಚೆ ಈಚೆ ಶ್ರೀವತ್ಸ ಮತ್ತು ನಂದಿಪಾದ ಚಿಹ್ನೆಗಳಿವೆ. ಬರಹವು ಬ್ರಾಹ್ಮೀ ಲಿಪಿಯಲ್ಲಿದೆ. ಲಿಪಿಶಾಸ್ತ್ರದ ದೃಷ್ಟಿಯಿಂದ ಈ ಬರಹವು ಕ್ರಿ. ಶ. ಎರಡು-ಮೂರನೆಯ ಶತಮಾನಕ್ಕೆ ಸೇರುತ್ತದೆ. ಈ ನಾಣ್ಯಗಳು ಉತ್ಖನನದಲ್ಲಿ ದೊರೆಯದೇ ಹೋದರೂ ಕಾಲ ನಿರ್ಣಯಕ್ಕೆ ಒಂದು ವಿಧದಲ್ಲಿ ಸಹಕಾರಿಯಾಗಿವೆ. ಲಿಪಿಶಾಸ್ತ್ರದ ದೃಷ್ಟಿಯಿಂದ ಚಂತಸ ಎಂಬ ಬರವಣಿಗೆಯು ಕ್ರಿ. ಶ. ಎರಡನೆಯ ಶತಮಾನಕ್ಕೆ ಸೇರಿರುವುದರಿಂದ, ಈ ಪಂಚ್ ಮಾರ್ಕ್ ನಾಣ್ಯಗಳು, ಈ ಶಾಸನದ ಕಾಲಕ್ಕಿಂತ ಪ್ರಾಚೀನವಾದವು ಎಂಬುದಂತೂ ಖಚಿತ. ಆದುದರಿಂದ ಕ್ರಿ. ಶ. ಎರಡನೆಯ ಶತಮಾನಕ್ಕೆ ಮುಂಚಿತವಾಗಿಯೇ, ಸಾವಿರಾರು ಪಂಚ್ ಮಾರ್ಕ್ ನಾಣ್ಯಗಳು ಬಳಕೆಯಲ್ಲಿದ್ದವು ಎಂಬುದನ್ನು ಇದು ಸ್ಪಷ್ಟಗೊಳಿಸುತ್ತದೆ. ಹೆಚ್ಚು

ಕಡಿಮೆ ಬನವಾಸಿ ಮತ್ತು ವಡಗಾಂವ ಮಾಧವಪುರದ ಕಾಲ ನಿರ್ಣಯವನ್ನೇ ಈ ನಾಣ್ಯ ರಾಶಿಯೂ ಒಪ್ಪುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಈ ನಾಣ್ಯಗಳ ಪೂರ್ಣ ಅಧ್ಯಯನವು ನಾಣ್ಯಶಾಸ್ತ್ರಾಭ್ಯಾಸಿಗಳಿಗೆ ವಿಶೇಷ ಮಾಹಿತಿಗಳನ್ನು ನೀಡುವುದರಲ್ಲಿ ಸಂದೇಹವಿಲ್ಲ.

ಇದೇ ಇಲಾಖೆಯವರು ಇತ್ತೀಚೆಗೆ ಗುಲ್ಬರ್ಗದಲ್ಲಿ 225 ಮತ್ತು ರಾಯಚೂರಿನಲ್ಲಿ 63 ಪಂಚ್‌ಮಾರ್ಕ್ ನಾಣ್ಯಗಳನ್ನು ಪತ್ತೆಮಾಡಿದ್ದಾರೆ[10]. ಮಾಸ್ಕಿಯಲ್ಲೂ ಮತ್ತು ಪಬ್ಬಾಳ್ ಎಂಬಲ್ಲೂ ಪಂಚ್ ಮಾರ್ಕ್ ನಾಣ್ಯಗಳು ಇತ್ತೀಚೆಗೆ ದೊರಕಿವೆ. ಇವುಗಳೆಲ್ಲವನ್ನೂ ಪುನರ್ವಿಮರ್ಶಿಸಿದಾಗ ನಮಗೆ ತಿಳಿದುಬರುವ ಮುಖ್ಯ ಸಂಗತಿ ಎಂದರೆ ಕರ್ನಾಟಕದಲ್ಲೂ ಪಂಚ್‌ಮಾರ್ಕ್ ನಾಣ್ಯಗಳು ವಿಶೇಷವಾಗಿ ಚಲಾವಣೆಯಲ್ಲಿದ್ದವು; ಅವು ನಾವು ಇದುವರೆಗೂ ತಿಳಿದಷ್ಟು ವಿರಳವಾಗಿರಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಇನ್ನು ಎರಡನೆಯದಾಗಿ ಅವುಗಳು ಮೌರ್ಯರ ಕಾಲದ ಅಂತ್ಯದಲ್ಲಿ ಅಂದರೆ ಕ್ರಿ. ಪೂ. ಒಂದು – ಕ್ರಿ. ಶ. ಒಂದನೆಯ ಶತಮಾನದ ಹೊತ್ತಿಗೆ ಕರ್ನಾಟಕದಲ್ಲಿ ಬಳಕೆಯಲ್ಲಿದ್ದವು ಎಂಬುದು ಉತ್ಖನನಗಳಿಂದ ತಿಳಿಯುತ್ತದೆ. ಕ್ರಿ. ಶ. ಎರಡನೆಯ ಶತಮಾನದ ಹೊತ್ತಿಗೆ ಅವು ಅತ್ಯಂತ ಜನಾನುರಾಗಿಯಾಗಿದ್ದವು ಎಂಬುದು ಹೆಚ್ಚು ಸ್ಪಷ್ಟವಾಗುತ್ತದೆ, ಕಾಲನಿರ್ಣಯದ ದೃಷ್ಟಿಯಿಂದ ಇದೊಂದು ಮೇಲಿನ ಗಡಿಯನ್ನಾಗಿ ಪರಿಗಣಿಸಬಹುದು.

ಮೂರನೆಯದಾಗಿ ಇದುವರೆವಿಗೂ ದೊರಕಿರುವ ಪಂಚ್‌ಮಾರ್ಕ್ ನಾಣ್ಯಗಳೆಲ್ಲವೂ ಮೌರ್ಯವಂಶಕ್ಕೆ ಸೇರಿದವುಗಳಾದ್ದರಿಂದ ಮತ್ತು ಅವುಗಳಲ್ಲಿ ಯಾವುದರಲ್ಲಿಯೂ ಕರ್ನಾಟಕದ ವೈಶಿಷ್ಟ್ಯ ದೊರಕಿಲ್ಲವಾದುದರಿಂದ, ಈ ಪಂಚ್‌ಮಾರ್ಕ್ ನಾಣ್ಯಗಳು ಉತ್ತರ ಭಾರತದಿಂದ ಕಾಲಕ್ರಮದಲ್ಲಿ ದಕ್ಷಿಣಕ್ಕೂ ಪ್ರಸರಿಸಿದವು ಎಂಬ ವಾದಕ್ಕೆ ಪುಷ್ಟಿ ದೊರಕಿದಂತಾಗಿದೆ. ಇದು ಉತ್ತರ ಮತ್ತು ದಕ್ಷಿಣ ಭಾರತಗಳಿಗೆ ಆ ಕಾಲದಲ್ಲಿದ್ದ ವ್ಯಾಪಾರ ಸಂಬಂಧಗಳನ್ನೂ ಸೂಚಿಸುತ್ತದೆ.

ಕೊನೆಯದಾಗಿ ಪಂಚ್ ಮಾರ್ಕ್ ನಾಣ್ಯಗಳೇ ಭಾರತದ ಇತರ ಕಡೆಗಳಲ್ಲಿದ್ದಂತೆ. ಕರ್ನಾಟಕದಲ್ಲಿಯೂ ಪ್ರಾಚೀನತಮ ನಾಣ್ಯಗಳು, ಎಂಬುದು ಈ ಮೇಲಿನ ಮಾಹಿತಿಗಳಿಂದ ವಿದಿತವಾಗುತ್ತದೆ.

ಟಿಪ್ಪಣಿಗಳು

1. ಇವು ಎರಕ ಹೊಯ್ದ ನಾಣ್ಯಗಳಲ್ಲ; ತಗಡಿನ ಮೇಲೆ (punch) ಮಾಡಿದವುಗಳು. ಇದಕ್ಕೆ ಸೂಕ್ತವಾದ ಕನ್ನಡಪದ ದೊರೆಯದೇ ಇರುವುದರಿಂದ ನನ್ನ ಬರವಣಿಗೆಯಲ್ಲಿ 'ಪಂಚ್ ಮಾರ್ಕ್' ಎಂದೇ ಬಳಸಿದ್ದೇನೆ, ಕೆಲವರು ಇದನ್ನು (ನಾನೂ ಸೇರಿದಂತೆ) ಮುದ್ರಾಂಕಿತ ನಾಣ್ಯಗಳು ಎಂದೂ ಕರೆದರು. ಇದೂ ಅಷ್ಟು ಸಮರ್ಪಕವಾಗಿ ಕಾಣಲಿಲ್ಲ

ವಾದುದರಿಂದ. ಇವುಗಳನ್ನು 'ಪಂಚ್‌ಮಾರ್ಕಿನ ನಾಣ್ಯಗಳು' ಎಂದು ಕರೆಯುವುದೇ ಹೆಚ್ಚು ಸೂಕ್ತ.

2. Mysore Archaeological Report, 1936, ಪು. 47.

3. ಅದೇ: 1938, ಪು. 73.

4. ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ ಮತ್ತು ಕರ್ನಾಟಕ ಸರ್ಕಾರದ ಪುರಾತತ್ವ ವಿಭಾಗದವರಿಂದ ಬನವಾಸಿಯಲ್ಲಿ 1969ರಿಂದ 72ರ ವರೆಗೆ ಉತ್ಖನನಗಳು ನೆರವೇರಿಸಲ್ಪಟ್ಟವು. ಈ ಉತ್ಖನನದಿಂದ ಮೌರ್ಯಪೂರ್ವ ಕರ್ನಾಟಕದ ಪರಿಸ್ಥಿತಿಯು ತಿಳಿದು ಬಂದಿದೆ.

5. ಎ. ವಿ. ನರಸಿಂಹ ಮೂರ್ತಿಯವರ ಲೇಖನ – "ನ್ಯೂಮಿಸ್ ಮ್ಯಾಟಿಕ್ ಎವಿಡೆನ್ಸ್ ಫ್ರಾಂ ಬನವಾಸಿ"; ಶ್ರೀಕಂಠಿಕಾ ಪು. 289-91.

6. ಏನ್ಷಂಟ್ ಇಂಡಿಯಾ, ಸಂಪುಟ 4; ಪು. 288-89.

7. ಬಿ. ಕೆ. ಗುರುರಾಜರಾವ್ (ಸಂ); ಎ ಡಿಕೇಡ್ ಆಫ್ ಆರ್ಕಿಲಾಜಿಕಲ್ ಸ್ಟಡೀಸ್. ಪು. 94 ಮತ್ತು ಎ. ವಿ. ನರಸಿಂಹ ಮೂರ್ತಿ; ಕಾಯಿನ್ಸ್ ಆಫ್ ಕರ್ನಾಟಕ, ಪು. 34.

8. ಎ. ವಿ. ನರಸಿಂಹ ಮೂರ್ತಿ; ಅದೇ.

9. ಇದರ ವರದಿಯು ಎಲ್ಲ ದೈನಂದಿನ ಪತ್ರಿಕೆಗಳಲ್ಲಿಯೂ ಬಂದಿತು. ಇಲ್ಲಿ ಸೆಪ್ಟೆಂಬರ್ 2. 1978 'ಡೆಕ್ಕನ್ ಹೆರಾಲ್ಡ್' ಪತ್ರಿಕೆಯಲ್ಲಿ ಬಂದ ವರದಿಯನ್ನು ಆಧಾರವಾಗಿಟ್ಟು ಕೊಂಡಿದ್ದೇನೆ.

10. ಅದೇ

× × × ×

೩. ಶಂಕರಗಂಡ

ಡಾ। ಎಂ. ಎಂ. ಕಲಬುರ್ಗಿ, ಧಾರವಾಡ.

ಕವಿಸಾಹಿತ್ಯ ಮತ್ತು ಶಾಸನಸಾಹಿತ್ಯಗಳ ಬಲದಿಂದ ಪ್ರಾಚೀನ ಕರ್ನಾಟಕದ ಅನೇಕ ಘಟನೆಗಳನ್ನು ಘಟ್ಟಗಳನ್ನು ಪುನರ್ರಚಿಸ ಬಯಸುವ ಸವ್ಯಸಾಚಿಗಳಿಗೆ 10ನೆಯ ಶತಮಾನದ ಶಂಕರಗಂಡನ ಚರಿತ್ರೆ ಆಳವಾದ ಕುತೂಹಲವನ್ನು ಹುಟ್ಟಿಸುತ್ತದೆ.

ಶಂಕರಗಂಡ ಎಂಬುದು ತುಂಬ ಅಪರೂಪದ ಹೆಸರು. ಜೋಳ ಅರ್ಥದ ಶಂಕರ ಗಂಡ ಶಬ್ಧಕ್ಕಾಗಲೀ; ಉತ್ತರ ಭಾರತದ ಕಲಚುರಿವಂಶದ ಅರಸು ಶಂಕರಗಣ[1] ಹೆಸರಿಗಾ ಗಲೀ ಇದರೊಂದಿಗೆ ಅರ್ಥಸಂಬಂಧವಿರಲಿಕ್ಕಿಲ್ಲ. ಕೊತ್ತತ್ತಿ ಗ್ರಾಮದ ಶಾಸನ[2]ದಲ್ಲಿ ಬರುವ ಈಸರಗಂಡ ಎಂಬ ಹೆಸರನ್ನು ಬಿಟ್ಟರೆ ಶಂಕರಗಂಡ ಹೆಸರಿನ ಮೂವರು ವ್ಯಕ್ತಿಗಳು, ಪ್ರಸ್ತುತ ಶಂಕರಗಂಡನ ವಂಶದಲ್ಲಿ ಕಂಡುಬರುತ್ತಾರೆ. ಇವರನ್ನು ಪ್ರಥಮ ಶಂಕರಗಂಡ. ದ್ವಿತೀಯ ಶಂಕರಗಂಡ. ತೃತೀಯ ಶಂಕರಗಂಡ ಎಂದು ಕರೆಯಬಹುದು. ಇವರಲ್ಲಿ ನಮಗೆ ಪ್ರಸ್ತುತನಾದವ ದ್ವಿತೀಯ ಶಂಕರಗಂಡ. ಬಹುಶಃ ಇದರ ಮೂಲರೂಪ ಶಂಕರಗಾವುಂಡ. 10ನೆಯ ಶತಮಾನಕ್ಕಾಗಲೇ ಈ ಶಂಕರಗಾವುಂಡ ಎಂಬುದು ಶಂಕರಗ್ೌಂಡ – ಶಂಕರಗೊಂಡ-ಶಂಕರಗಂಡ ಎಂದು ಉಚ್ಚಾರ ವ್ಯತ್ಯಾಸಗೊಂಡಿದ್ದಿತೊ, ಲಿಪಿಕಾರರು ಶಂಕರಗೆಂಡ ಎಂದು ತಪ್ಪು ಓದಿಬರೆಯುವುದರ ಮೂಲಕ ಪ್ರಚಾರ ಪಡೆದಿದ್ದಿತೋ ಹೇಳುವುದು ಕಷ್ಟ.

ಶಾಸನಗಳಲ್ಲಿ ಕೆಲವೇ ಸಲ ಕಂಡುಬಂದರೂ ತುಂಬ ಗಂಭೀರವಾಗಿ ಗೋಚರಿಸುವ ವ್ಯಕ್ತಿ ಈ ದ್ವಿತೀಯ ಶಂಕರಗಂಡ. ಕರ್ನಾಟಕ ಮತ್ತು ಆಂಧ್ರ ಪ್ರದೇಶಗಳಲ್ಲಿ ಸಿಗುವ ಶಾಸನಗಳೂ ಪಂಪನ ಆದಿಪುರಾಣ, ರನ್ನನ ಅಜಿತಪುರಾಣ, ನಾಗವರ್ಮನ ಕಾವ್ಯಾವಲೋಕನ, ಬ್ರಹ್ಮಶಿವನ ಸಮಯಪರೀಕ್ಷೆ, ಕೇಶಿರಾಜನ ಶಬ್ದಮಣಿದರ್ಪಣ, ನಾಗಣ್ಣನ ಮಾಣಿಕ ಜಿನಚರಿತೆ, ಜಿನಪ್ರಭಸೂರಿಯ ಮಾಣಿಕ್ಯಜಿನಕಲ್ಪ ಮೊದಲಾದ ಸಾಹಿತ್ಯಕೃತಿಗಳು ಈತನ ಚರಿತ್ರೆಯನ್ನು ಪುನರ್ರಚಿಸುವಲ್ಲಿ ತುಂಬ ನೆರವನ್ನು ನೀಡುತ್ತವೆ.

ಈವರೆಗೆ ದ್ವಿತೀಯ ಶಂಕರಗಂಡನನ್ನು ಸೂಚಿಸುವ ಒಂಬತ್ತು, ತೃತೀಯ ಶಂಕರ ಗಂಡನನ್ನು ಸೂಚಿಸುವ ಒಂದು – ಹೀಗೆ ಒಟ್ಟು ಹತ್ತು ಶಾಸನಗಳು ಲಭಿಸಿವೆ. ಅವು;

1. ಖಂಡೇಬಾಗೂರ[3] – ಹಿರೇಕೆರೂರ ತಾ. – ಇಂದ್ರ III 924 ಕ್ರಿ. ಶ.
2. ಲಕ್ಷ್ಮೇಪುರ[4] – ಹಾನಗಲ್ಲು ತಾ. – ಇಂದ್ರ III – 925 ಕ್ರಿ. ಶ.
3. ಹಾವಣಗಿ[5] – ಹಾನಗಲ್ಲು ತಾ. – ಇಂದ್ರ III
4. ಹಾವಣಗಿ[6] – ಹಾನಗಲ್ಲು ತಾ. – ಇಂದ್ರ III
5. ಕ್ಯಾಸನೂರ[7] – ಹಾನಗಲ್ಲು ತಾ. – ಅಮೋಘ ವರ್ಷ

6. ಕ್ಯಾಸನೂರ[8] – ಹಾನಗಲ್ಲು ತಾ. – ಕೃಷ್ಣ III
7. ತಾಳಗುಂದ[9] – ಶಿಕಾರಿಪುರ ತಾ. – ಕೃಷ್ಣ III
8. ಉಪ್ಪಿನ ಬೆಟಗೇರಿ[10] – ಕೊಪ್ಪಳ ತಾ. – ಕೃಷ್ಣ III-964
9. ಕೊಲ್ಲಿಪಾಕಿ[11] – ಭುವನಗಿರಿ ತಾ. - ವಿಕ್ರಮಾದಿತ್ಯ VI-1067
10. ಕೊಲ್ಲಿಪಾಕಿ[12] – ಭುವನಗಿರಿ ತಾ. - ವಿಕ್ರಮಾದಿತ್ಯ VI-1077

ಮೇಲಿನ 10 ಶಾಸನಗಳಲ್ಲಿ ಕೊನೆಯದು ಮಾತ್ರ ತೃತೀಯ ಶಂಕರಗಂಡನಿಗೆ ಸಂಬಂಧಿಸಿದ್ದು, ಆದು ಪ್ರಕಟಿತ ನಾಲ್ಕು (ಲಕ್ಷ್ಮೇಪುರ, ಹಾವಣಗೆ I, II, ಕೊಲ್ಲೀಪಾಕಿ I) ಅಪ್ರಕಟಿತ. ಈ ಶಾಸನಗಳಿಂದ ತಿಳಿದು ಬರುವ ಸಂಗತಿ ಇಷ್ಟು.

ಉಪ್ಪಿನಬೆಟಗೇರಿ ಶಾಸನ "ಯಾದವಂಶದೊಳ್ಪಾಣ್ಮ (ಣ)ರ ರಾಜನಾತನ ಮಗಂ ಶಂಕರಗಂಡನಾತನ ಮಗಂ ಬೈತರಾಜ (ಮಗನಪ್ಪವಲಾಜ)ನಾತನ ಮಗಂ ಶಂಖಪಯನಾತನ ಮಗಂ ಗೊಮ್ಮರಸನಾತನ ಮಗನಸಗಮಾರಸನಾತನ ಮಗಂ ಶ್ರೀಮತ್ ಶಂಕರಗಂಡರಸಂ"[13] ಎಂದು ವಂಶಾವಳಿಯನ್ನು ಕೊಡುತ್ತಿದ್ದು ಇಲ್ಲಿ ಮೊದಲಿನ ಆರು ಜನರ ಬಗೆಗೆ ಏನೂ ತಿಳಿದುಬರುವುದಿಲ್ಲ. ನಮಗೆ ಪ್ರಸ್ತುತನಾದವನು ಮಾತ್ರ ಈ ವಂಶದಲ್ಲಿ ದ್ವಿತೀಯ ಶಂಕರಗಂಡನೆಂದೂ ಈತನದು ಯಾದವವಂಶವೆಂದೂ ಗೊತ್ತಾಗುತ್ತದೆ. ಯಾದವವಂಶವೆಂಬುದು ರಾಷ್ಟ್ರಕೂಟವಂಶದ ಪರ್ಯಾಯಪದ. ಕಾರಣ ಈ ತನದು ರಾಷ್ಟ್ರಕೂಟವಂಶವೆಂದು ಸ್ಪಷ್ಟವಾಗುತ್ತದೆ. ಉಪ್ಪಿನ ಬೆಟಗೇರಿ ಹಾವಣಗಿ ಶಾಸನಗಳು "ರಟ್ಟರ ಮೇರು" ಎಂದೂ, ಕೊಲ್ಲಿಪಾಕಿ ಶಾಸನ I "ರಾಷ್ಟ್ರಕೂಟಕುಳತಿಳಕಂ" ಎಂದೂ, ಶಾಸನ II "ಲತ್ತಲೂರ್ಪುರವರೇಶ್ವರಂ; ರಟ್ಟಮಾರ್ತಂಡಂ" ಎಂದೂ ಕರೆದು ರಾಷ್ಟ್ರಕೂಟವಂಶ ಸಂಬಂಧ ವನ್ನು ಇನ್ನೂ ಖಚಿತಪಡಿಸುತ್ತವೆ.

ಕೊಲ್ಲಿಪಾಕಿಯ 2 ಶಾಸನಗಳನ್ನು ಬಿಟ್ಟರೆ ಉಳಿಯುವ 8ರಲ್ಲಿ ಖಂಡೇಬಾಗೂರ, ಲಕ್ಷ್ಮೇಪುರ, ಹಾವಣಗಿ I, ಹಾವಣಗಿ II – ಈ ನಾಲ್ಕೂ ಮೂರನೆಯ ಇಂದ್ರನ; ಕ್ಯಾಸನೂರ I ಎರಡನೆಯ ಅಥವಾ ಮೂರನೆಯ ಅಮೋಘವರ್ಷನ, ಕ್ಯಾಸನೂರ II, ತಾಳಗುಂದ, ಉಪ್ಪಿನ ಬೆಟಗೇರಿ – ಈ ಮೂರು ಮೂರನೆಯ ಕೃಷ್ಣನ ಆಳಿಕೆಯಲ್ಲಿ ಹುಟ್ಟಿವೆ. ಹೀಗೆ 3 ಜನ ಚಕ್ರವರ್ತಿಗಳ ಕೈಕೆಳಗೆ ರಾಜ್ಯಭಾರ ಮಾಡಿದ ಈತನ ಪ್ರಥಮ ಶಾಸನವಾದ ಖಂಡೆಬಾಗೂರ ಶಾಸನದ ಕಾಲ 924; ಕೊನೆಯದಾದ ಉಪ್ಪಿನ ಬೆಟಗೇರಿ ಶಾಸನದ ಕಾಲ 964. ಈತನು ಕನಿಷ್ಠ ಪಕ್ಷ 40 ವರ್ಷ ರಾಜ್ಯಭಾರ ಮಾಡಿದನೆಂದು ಇದರಿಂದ ವ್ಯಕ್ತವಾಗುತ್ತದೆ.

ಲಕ್ಷ್ಮೇಪುರ; ಕ್ಯಾಸನೂರು, ತಾಳಗುಂದಶಾಸನಗಳಲ್ಲಿ ಒಂದೂ ಬಿರುದಿಲ್ಲ, ಖಂಡೆಬಾಗೂರ, ಕ್ಯಾಸನೂರ ಶಾಸನಗಳು ಕ್ರಮವಾಗಿ "ಸಮಧಿಗತ ಪಂಚಮಹಾಶಬ್ದ ಮಹಾಸಾಮಂತಂ" "ಮಹಾಸಾಮಂತಾಧಿಪತಿ" ಎಂದು ಅಧಿಕಾರವನ್ನು ಮಾತ್ರ ಸೂಚಿಸುತ್ತವೆ. ಹಾವಣಗಿಯ ಎರಡೂ ಶಾಸನಗಳು "ಮಹಾಸಾಮಂತಾಧಿಪತಿ", "ಜಯಧೀರ" "ಭುವನೈ

ಕರಾಮು", "ಅಭಿಮಾನಧವಳ" ಎಂಬ ಬಿರುದುಗಳನ್ನು ಪ್ರಥಮಬಾರಿ ಆರೋಪಿಸಿದರೆ ಇವುಗಳಲ್ಲಿ ಒಂದು 'ರಟ್ಟರ ಮೇರು' ಎಂಬ ಬಿರುದನ್ನು ಹೆಚ್ಚಿಗೆ ಉಲ್ಲೇಖಿಸಿದೆ. ಉಪ್ಪಿನ ಬೆಟಗೇರಿ ಶಾಸನ ಸುದೀರ್ಘ ವಂಶಾವಳಿಯೊಂದಿಗೆ "ಸ್ವಸ್ತಿ ಸಮಧಿಗತ ಪಂಚ ಮಹಾ ಶಬ್ದ ಮಹಾ ಸಾಮಂತಾಧಿಪತಿ ಜಯಧೀರ ಭುವನೈಕ ರಾಮನಭಿಮಾನಧವಳಂ ರಟ್ಟರ ಮೇರು. ರಾಜಭೂರಿಸ್ರವ ವಿದ್ವಿಷ್ಟನಾರಾಯಣ ಸತ್ಯಾರ್ಣವಂ ಧರ್ಮರತ್ನಾಕರಂ" ಎಂಬ ಬಿರುದುಗಳನ್ನು ಹೇಳುತ್ತದೆ.

ಇಂದ್ರನ ಆಳಿಕೆಯಲ್ಲಿ ಹುಟ್ಟಿದ ಖಂಡೆಬಾಗೂರಶಾಸನ "ಬನವಾಸಿ ಪನ್ನಿಚ್ಛಾಸಿರದ ಭಾಗಮನಾಳುತ್ತಮಿರೆ" ಎಂದು ಹೇಳಿದರೆ, ಲಕ್ಷ್ಮೇಶ್ವರಶಾಸನ ಆ ಬನವಾಸಿ ಪನ್ನಿಚ್ಛಾಸಿರ ಪ್ರಾಂತವನ್ನು ಶಂಕರಗಂಡ ಮತ್ತು ಬಂಕೆಯ II ರು ಆಳುತ್ತಿದ್ದರೆನ್ನುತ್ತ, ಆ ಪ್ರಾಂತವನ್ನಾಳುತ್ತಿದ್ದ ಇನ್ನೊಬ್ಬ ಭಾಗಿ ಬಂಕೇಯನೆಂದು ಸ್ಪಷ್ಟಪಡಿಸುತ್ತದೆ, ಆದರೆ ಇದೇ ಇಂದ್ರನ ಕಾಲದ ಹಾವಣಗಿಯ ಎರಡೂ ಶಾಸನಗಳು ಸಮಗ್ರ ಬನವಾಸಿನಾಡನ್ನು ಶಂಕರಗಂಡನೊಬ್ಬನೇ ಆಳುತ್ತಿದ್ದನೆಂದು ಹೇಳುವುದರಿಂದ ಈಗ ಬಂಕೇಯನ ಭಾಗವೂ ಇವನ ಕೈಕೆಳಗೆ ಬಂದುದು ಸ್ಪಷ್ಟವಾಗುತ್ತದೆ. ಅಮೋಘವರ್ಷನ ಕಾಲಕ್ಕೆ ಹುಟ್ಟಿದ ಕ್ಯಾಸನೂರ ಶಾಸನ; ಕೃಷ್ಣ IIIನ ಕಾಲಕ್ಕೆ ಹುಟ್ಟಿದ ಕ್ಯಾಸನೂರ ಮತ್ತು ತಾಳಗುಂದ ಶಾಸನ ಇವು ಈತನ ಬನವಾಸಿ ಮಂಡಳದ ಆಳಿಕೆಯನ್ನು ಬಿಟ್ಟರೆ ಏನನ್ನೂ ಹೇಳುವುದಿಲ್ಲ. ಉಪ್ಪಿನ ಬೆಟಗೇರಿ ಶಾಸನ ಮಾತ್ರ ಈತನ ಹೆಚ್ಚಿನ ವಿವರಗಳನ್ನು ಒದಗಿಸುತ್ತದೆ. ಆದರೆ ಎಲ್ಲ ಶಾಸನಗಳಲ್ಲಿ ಬೇರೊಬ್ಬರು ಗೈದ ಘಟನೆ, ರಾಜನೆಂಬ ಕಾರಣದಿಂದ ಈತನ ಉಲ್ಲೇಖ ಬಂದಿದ್ದರೆ ಈ ಉಪ್ಪಿನ ಬೆಟಗೇರಿ ಶಾಸನ ಮಾತ್ರ ನೇರವಾಗಿ ಶಂಕರಗಂಡನ ಧರ್ಮ ಕಾರ್ಯವನ್ನೂ ಈತನು ಕೊಪ್ಪಳದಲ್ಲಿ ತನ್ನ ಬಿರುದಿನ ಜಯಧೀರಜಿನಾಲಯವನ್ನು ಕಟ್ಟಿಸಿ, ಅದರ ತಳವೃತ್ತಿಗಾಗಿ ಮುನ್ನೂರು ಮತ್ತರು ಭೂಮಿಯನ್ನು ಚಾಳುಕ್ಯ ವಂಶದ ರಾಟ್ಟಯ್ಯನಿಂದ ಪಡೆದು ದಾನವಾಗಿ ಬಿಟ್ಟನೆಂಬುದನ್ನೂ ಹೇಳುತ್ತದೆ[14]. ಈವರೆಗೆ ನಮ್ಮ ವಿದ್ವಾಂಸರ ಗಮನಕ್ಕೆ ಬಂದಂತೆ ಈತನು ಕಟ್ಟಿಸಿದ ಬಸದಿ, ಬಿಟ್ಟದಾನ ಇದೊಂದೇ, ಆದರೆ ಈ ಒಂದೇ ಒಂದು ಕಾರ್ಯಕ್ಕಾಗಿಯೇ ಪ್ರಸ್ತುತ ಶಾಸನ ಇವನನ್ನು "ಧರ್ಮರತ್ನಾಕರಂ" ಎಂದು ಕರೆಯಿತೆ? ಇಷ್ಟರಿಂದಲೇ ರನ್ನನು ಅಜಿತಪುರಾಣದಲ್ಲಿ

> "ಪಿರಿಯಂ ಬೂತಗನಾತನಿಂ ಮರುಳನಾತಂಗಂ ನೊಳಂಬಾಂತಕಂ
> ಪಿರಿಯಂ, ನೆಟ್ಟನೆ ದಾನಧರ್ಮದೆಡೆಯೊಳ್ ಚಾವುಂಡರಾಯಂ ಕರಂ
> ಪಿರಿಯಂ. ಶಂಕರಗಂಡನಲ್ತೆ ಪಿರಿಯಂ, ತದ್ಭಾರಮಂ ಪೊತ್ತು ನಿ
> ತ್ತರಿಸುತ್ತಿರ್ಪುದರಿಂದೆ ನೀನೆ ಪಿರಿಯೈ ಶ್ರೀ ದಾನಚಿಂತಾಮಣೀ'[5]

ಎಂದು ಆ ಶತಮಾನದ ಅಗ್ರದಾನಿಗಳ ಸಾಲಿನಲ್ಲಿ ಈತನನ್ನು ನಿಲ್ಲಿಸಿದನೇ? ಎಂಬ ಪ್ರಶ್ನೆಗಳು ಏಳುತ್ತವೆ. ಇನ್ನು ಬ್ರಹ್ಮಶಿವನ ಸಮಯಪರೀಕ್ಷೆಯಲ್ಲಿ ಬರುವ

"ಪಟ್ಟಣದ ನಡುವೆ ಬೆಳ್ಳಿಯ
ಬೆಟ್ಟಂಗಳನಿಳಿಪ ಜೈನನಿಳಯಂಗಳನೀ
ಸೃಷ್ಟಿಯೊಳೆ ಕೂಡೆ ಮಾಡಿದ
ರಟ್ಟಂ ಶಂಖಾವನೀಶನನೆ ಪೊಗಳದರಾರ್॥' [6]

ಎಂಬ ಪದ್ಯದಲ್ಲಿಯ ರಟ್ಟ ಶಂಖಾವನೀಶ ಈ ಶಂಕರಗಂಡನೇ ಆಗಿದ್ದ ಪಕ್ಷದಲ್ಲಿ ಈತನು ಪಟ್ಟಣದ ನಡುವೆ ಬೆಳ್ಳಿಯ ಬೆಟ್ಟಂಗಳನಿಳಿಪ ಜೈನನಿಲಯಗಳನ್ನು ಕಟ್ಟಿಸಿದನೆಂಬ ಸೂಚನೆ ದೊರೆಯುತ್ತದೆಯೇ ಹೊರತು ಯಾವ ಪಟ್ಟಣದಲ್ಲಿ? ಅಥವಾ ಯಾವ ಪಟ್ಟಣಗಳಲ್ಲಿ? ಎಂಬ ವಿವರ ಸಿಗುವುದಿಲ್ಲ.

ಈ ಪ್ರಶ್ನೆಗಳಿಗೆ ಸಮಾಧಾನವನ್ನು ಸೂಚಿಸುವ ಎರಡು ಶಾಸನಗಳು ಆಂಧ್ರಪ್ರದೇಶದ ಕೊಲ್ಲಿಪಾಕಿಯಲ್ಲಿ ಲಭಿಸುವುದು ತುಂಬಾ ಗಮನಾರ್ಹವಾಗಿದೆ–ಇವುಗಳ ಕಾಲ, ಕ್ರಮವಾಗಿ ಕಲ್ಯಾಣಚಾಲುಕ್ಯ ಅರಸನಾದ ವಿಕ್ರಮಾದಿತ್ಯನ ಆಳಿಕೆಯ ಕ್ರಿ. ಶ. 1067 ಮತ್ತು 1077.

ಮೊದಲನೆಯ ಶಾಸನದ ವಿಷಯ ಹೀಗಿದೆ: ರಾಷ್ಟ್ರಕೂಟವಂಶದ ಶಂಕರಗಂಡನು ರೇವುಂಡಿ ಮತ್ತು ನೇರಿಲಗಳಲ್ಲಿ ತಾನು ಕಟ್ಟಿಸಿದ್ದ ಬಸದಿಗಳಿಗೆ ಜಪ್ಪಿಕುಂಟೆ ಮತ್ತು ಪಿಡುಂಗಲೂರುಗಳನ್ನು ತಾಮ್ರಶಾಸನಪೂರ್ವಕವಾಗಿ ದಾನ ನೀಡಿದ್ದನು. ಕಾಲಕ್ರಮದಲ್ಲಿ ಈ ದಾನಗಳು ರದ್ದಾಗಿರಲು ಮತ್ತೆ ಅವನ್ನು ಪುನರುದ್ಧಾರ ಮಾಡಲಾಯಿತು, ಈಗ ಕೊಲ್ಲಿಪಾಕಿ - 7000ವನ್ನು ಆಳುತ್ತಿದ್ದವನು ಮಹಾ ಸಾಮಂತನಾದ ಮೇಳರಸ.

ಎರಡನೆಯ ಶಾಸನದ ವಿಷಯ ಹೀಗಿದೆ: ಕೊಲ್ಲಿಪಾಕಿ - 7000ವನ್ನಾಳುತ್ತಿದ್ದ ಲತ್ತಲೂರು ಪುರವರೇಶ್ವರನಾದ ಮಹಾಮಂಡಲೇಶ್ವರ ಶಂಕರಗಂಡನು ಕೊಲ್ಲಿಪಾಕಿಯ ನಖರಂಗಳು ಅಂಗಡಿಗೆ ಒಂದರಂತೆ ಪ್ರತಿವರ್ಷ ಒಂದು ಪೊನ್ನಗದ್ಯಾಣ ಸುಂಕವನ್ನು ಕೊಡಬೇಕೆಂದು ನಿರ್ಣಯಿಸಿದನು.

ಇಲ್ಲಿ ಎರಡನೆಯ ಶಾಸನ 11ನೆಯ ಶತಮಾನದ ತೃತೀಯ ಶಂಕರಗಂಡನನ್ನು ಸೂಚಿಸುತ್ತಿದ್ದು ಮೊದಲನೆಯ ಶಾಸನ ನಮಗೆ ಪ್ರಸ್ತುತನಾದ ದ್ವಿತೀಯ ಶಂಕರಗಂಡನನ್ನೇ ಬಹುಶಃ ಸೂಚಿಸುವುದರಿಂದ ಈವರೆಗೆ ತಿಳಿದುಬಂದಂತೆ ಈತನು ಬನವಾಸಿ ಮಂಡಲವನ್ನಲ್ಲದೆ, ಕೊಲ್ಲಿಪಾಕಿ-7000ದಲ್ಲಿಯೂ ಅಧಿಕಾರ ನಡೆಸಿದನೆಂದು ಸ್ಪಷ್ಟವಾಗುತ್ತದೆ. ಆದರೆ ಯಾವ ಅವಧಿಯಲ್ಲಿ ಆಳಿದನೆಂಬುದು ಸಂಶೋಧನಾರ್ಹ ವಿಷಯವಾಗಿದೆ.

ರಾಜ್ಯದ ಬೇರೆ ಬೇರೆ ಕಡೆಗಳಲ್ಲಿ ಅಂದರೆ ಕೊಪ್ಪಳ, ರೇವುಂಡಿ ಮತ್ತು ನೇರಿಲಗಳಲ್ಲಿ ಜಿನಮಂದಿರ ಕಟ್ಟಿಸಿದ ಈತನು ಅಥವಾ ತೃತೀಯ ಶಂಕರಗಂಡನು ರಾಜಧಾನಿ ಕೊಲ್ಲಿಪಾಕಿಯಲ್ಲಿಯೂ ಬಸದಿಯನ್ನು ನಿರ್ಮಿಸಿರಬಹುದೆ? ಎಂದು ಏಳಬಹುದಾದ ಪ್ರಶ್ನೆಗೆ ಉತ್ತರ

ಹೇಳುತ್ತದೆ. ನಾಗಣ್ಣಕೃತ ಮಾಣಿಕಜಿನೇಶ-ಚರಿತೆ (ಕನ್ನಡ). ಮತ್ತು ಜಿನಪ್ರಭಸೂರಿ ವಿರಚಿತ ಮಾಣಿಕ್ಯಜಿನಕಲ್ಪ.

ಭಾಮಿನಿ ಷಟ್ಪದಿಯಲ್ಲಿ ಬರೆದ ಮಾಣಿಕಜಿನೇಶಚರಿತೆ ಸುಮಾರು 17ನೆಯ ಶತಮಾನಕ್ಕೆ ಸಂಬಂಧಿಸಿದಬಹುದು, ಇದರ ಕಥೆ ಹೀಗಿದೆ:

ರಾವಣನ ಪಟ್ಟದರಸಿ ಮಂಡೋದರಿಗೆ ದೇವೇಂದ್ರನು ಮಾಣಿಕ್ಯಜಿನಪ್ರತಿಮೆಯನ್ನು ದಯಪಾಲಿಸುತ್ತಾನೆ. ರಾಮಾಯಣ ಯುದ್ಧಪ್ರಸಂಗದಲ್ಲಿ ರಾವಣ ಮಡಿದು ಹೋಗಲು ವೈರಿಗಳ ದಾಳಿಗೆ ಭಯಪಟ್ಟು, ತಾನು ಪ್ರತಿನಿತ್ಯ ಪೂಜಿಸುತ್ತಿದ್ದ ಆ ಪ್ರತಿಮೆಯನ್ನು ಸಮುದ್ರದಲ್ಲಿ ಮುಚ್ಚಿಡುತ್ತಾಳೆ. ಆ ಮೇಲೆ ಎಷ್ಟೋ ಶತಮಾನಗಳು ಉರುಳುತ್ತವೆ. ಸಾಗರದಲ್ಲಿ ಮುಳುಗುತ್ತ ಏಳುತ್ತಲಿದ್ದ ಆ ಜಿನಬಿಂಬವನ್ನು[18] ಒಮ್ಮೆ ಬೇಡನೊಬ್ಬನು ನೋಡಿ ಓರಂಗಲ್ಲು ಪಟ್ಟಣವನ್ನಾಳುತ್ತಲಿದ್ದ ಶಂಕರಗಂಡ ಮಹಾರಾಜನಿಗೆ ಹೇಳುತ್ತಾನೆ. ಮರುದಿನ ಪ್ರತ್ಯಕ್ಷ ಕಂಡ ಶಂಕರಗಂಡ ಅದನ್ನು ರಾಜಧಾನಿಗೆ ತರುವ ಬಗೆಗೆ ಚಿಂತಿಸುತ್ತಿರಲು, ಒಂದು ರಾತ್ರಿ ಯಕ್ಷದೇವತೆ ಕನಸಿನಲ್ಲಿ ಬಂದು, ಹಿಟ್ಟಿನ ಗಾಲಿ ಜೋಡಿಸಿದ ದಂಟಿನ ಬಂಡಿಯ ಮೇಲೆ ಪತಿವ್ರತೆಯ ಮೂಲಕ ಮಾತ್ರ ತರಲು ಸಾಧ್ಯವೆಂದು ಹೇಳುತ್ತದೆ. ಮರುದಿನ ಈ ಡಂಗುರವನ್ನು ಸಾರುತ್ತಾರೆ. ಆ ಪುರದ ವರ್ತಕನ ಹೆಂಡತಿ ಗುಣವತಿ ದೇವಿಯ ಪಾತಿವ್ರತ್ಯಬಲದಿಂದ ರಾಜಧಾನಿಗೆ ವಿಗ್ರಹವನ್ನು ಹೊತ್ತು ನಡೆದ ಬಂಡಿ, ಕೊಲ್ಲಿಪಾಕಿಯ ಹತ್ತಿರ ಬರುತ್ತದೆ. ಅಷ್ಟರಲ್ಲಿ ಗಗನದೊಳಗೆ ಪಂಚ ಮಹಾವಾದ್ಯ ಭೋರಿಡಲು ಶಂಕರಗಂಡ ಚಕಿತನಾಗಿ ಹಿಂದಿರುಗಿ ನೋಡುವುದೇ ತಡ,

"ಮುಂದೆ ನೀ ನಡೆಯಲ್ಕೆ ಬಪ್ಪುದು
ಹಿಂದೆ ನೋಡಿದರಲ್ಲಿ ನಿಲ್ವುದು..."

ಎಂಬ ಯಕ್ಷ ದೇವತೆಯ ಸೂಚನೆಯ ಮೇರೆಗೆ ಬಂಡಿ ಗಕ್ಕನೇ ನಿಂತುಬಿಟ್ಟಿತು. ಅನಿವಾರ್ಯವಾಗಿ ಆ ಕೊಲ್ಲಿಪಾಕಿಯಲ್ಲಿಯೇ ಮೂರ್ತಿಯನ್ನು ಪ್ರತಿಷ್ಠಾಪಿಸಿ –

ಸುತ್ತಲಿಹ ಪ್ರಾಕಾರದೊಳಗೆಯು
ಮತ್ತೆ ಗೋಪುರವೆಂಟು ಮಾಡಿಸಿ
ವಿಸ್ತರದಿ ಮಧ್ಯದೊಳುವೊಪ್ಪಿರೆ ಜಿನರ ಮಣಿಮಾಡ!
ಹತ್ತಿಸಿದ ಮೇಲ್ಕಟ್ಟು ಚಿತ್ರದಿ
ತೆತ್ತಿಸಿದ ಹೊಂಗಳಸ ಛತ್ರದಿ
ಉತ್ತುಂಗ ಗುಡಿ ಧ್ವಜ ಪತಾಕೆಯ ನೃಪತಿ ರಚಿಸಿದನು ॥
ಅಲ್ಲಿ ಸ್ಥಾಪಿತ ಮಾಡಿ ದೇವರ
ಕೊಲ್ಲಿಪಾಕ್ಷವೆಯೆಂಬ ಪುರವನು
ಸಲ್ಲೀಲೆಯಿಂದ ರಚಿಸಿದ ಶಂಕರಗಂಡ ಮಹಾರಾಜ ।

ಫುಲ್ಲಲತೆ ಪೂಗೊಳವನಂಗಳು
ಎಲ್ಲ ಠಾವಿನ ವೃತ್ತಿಗ್ರಾಮದ
ಕಲ್ಲಲಕ್ಷರಗಳನೆ ಹೊಯಿಸಿಯೆ ಕೊಟ್ಟ ದೇವರಿಗೆ ॥

ಈ ಪದ್ಯಗಳಲ್ಲಿ ಬಂದ ವರ್ಣನೆಯನ್ನು ಕೊಲ್ಲಿಪಾಕಿಯೊಳಗೆ ಈಗಲೂ ಇರಬಹುದಾದ (ಬಹುಶಃ ಒಂದೂ ದೇವಾಲಯವಾಗಿ ಮಾರ್ಪಟ್ಟಿರಬಹುದಾದ ಇಲ್ಲವೆ ಸಂಪೂರ್ಣ ನಾಶವಾಗಿರಬಹುದಾದ) ಮಾಣಿಕ್ಯಜಿನ ಬಸದಿಯೊಂದಿಗೆ ಹೋಲಿಸಿ ನೋಡಬೇಕು. "ಕಲ್ಲಲಕ್ಷರಗಳನೆ ಹೊಯಿಸಿದ" ನೆಂಬ ಮಾತನ್ನು ಪ್ರತಿನಿಧಿಸುವ ಶಿಲಾಶಾಸನಗಳನ್ನು ಹುಡುಕಬೇಕು, ಶಂಕರಗಂಡನು ಒರಂಗಲ್ಲು ರಾಜಧಾನಿಯಿಂದಲೂ ಆಳುತ್ತಿದ್ದನೆಂಬುವಕ್ಕೆ ಆಧಾರವನ್ನು ಪತ್ತೆಹಚ್ಚಬೇಕು.[19]

ಇನ್ನೊಂದು ಮಾತು: ಜೈನಮತದ ಭೂತ, ವರ್ತಮಾನ, ಮತ್ತು ಭವಿಷ್ಯತ್ ಕಾಲಗಳಿಗೆ ಸಂಬಂಧಿಸಿದ 72 ಜನ ತೀರ್ಥಂಕರರಲ್ಲಿ ಮಾಣಿಕ್ಯಜಿನ ಎಂಬ ಹೆಸರು ಕಂಡು ಬರುವುದಿಲ್ಲವಾದ್ದರಿಂದ ಶಂಕರಗಂಡ ಸ್ಥಾಪಿಸಿದ ಮಾಣಿಕ್ಯಜಿನ ಯಾರು? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಮಾಣಿಕ್ಯಜಿನ ಚರಿತೆಯಲ್ಲಿ ಬರುವ

ಮರಕತದ ಸೆಲ್ಲಿಯಿಂದಲೊಪ್ಪುವ
ಎರಡು ಕಡೆಯಲಿ ಚಾಮರ ಮುಕ್ಕೊಡೆ
ಹರಿಪೀಠದಿಂ ಮೇಲೆ ಚತುರಂಗುಲವ ಬಿಟ್ಟಿರ್ಪ
ನಿರುತದಿಂ ತ್ರೈವರ್ಣವಾಗಿಯೆ
ಧರೆಯೊಳಗೆ ಚೋದ್ಯವನು ತೋರುವ
ಪರಮ ಮಾಣಿಕಜಿನ.........[20]

ಎಂಬ ಪದ್ಯದಲ್ಲಿಯ 'ಹರಿಪೀಠ' (ಸಿಂಹಪೀಠ) ಎಂಬುದು ಮಹಾವೀರನನ್ನು ಸೂಚಿಸುತ್ತಿದ್ದರೂ ಅಷ್ಟು ನೇರವಾದ ಹೇಳಿಕೆಯಲ್ಲ. ಕಾರಣ ಈ ತೀರ್ಥಂಕರ ಯಾರೆಂಬ ಬಗೆಗೆ ಕೆಲವು ಊಹೆಗಳನ್ನು ಮಾಡಬಹುದು.

1. ಜೈನಶಾಸ್ತ್ರದ ಪ್ರಕಾರ ತೀರ್ಥಂಕರರಲ್ಲಿ ಪದ್ಮಪ್ರಭ, ವಾಸುಪೂಜ್ಯರು ಮಾಣಿಕ್ಯ ವರ್ಣದವರು. ಇವರಲ್ಲಿ ಒಬ್ಬನನ್ನು ಪ್ರತಿಷ್ಠಾಪಿಸಿ ಮಾಣಿಕಜಿನ ಎಂದು ಕರೆದಿರುವ ಸಾಧ್ಯತೆಯಿದೆ.

2. ಸ್ಥಾಪಿಸಿದ ವಿಗ್ರಹ ಜಿನರಲ್ಲಿ ಶ್ರೇಷ್ಠವೆಂದೋ; ಮಾಣಿಕ್ಯದಿಂದ ರಚಿತವಾದುದೆಂದೋ ಮಾಣಿಕಜಿನ ಎಂದು ಅದನ್ನು ಕರೆದಿರಬಹುದು.

3. ಅಭಿಧಾನರಾಜೇಂದ್ರ ಹೆಸರಿನ ಜೈನವಿಶ್ವಕೋಶ (ಸಂಪುಟ 6 ಪು. 145) ದಲ್ಲಿ "ಕೋಲಪಾಕಪತ್ತನೇ ಮಾನೊದ್ದೇದರಿದೇವತಾವಸರೇ ಶ್ರೀ ವೃಷಭದೇವೇ" ಎಂಬ ಮಾತು ಬರುವುದರಿಂದ ಈ 'ಮಾಣಿಕಜಿನ'ನು ಆದಿತೀರ್ಥಂಕರನಾಗಿರಬಹುದೆಂಬ [21] ಭಾವನೆಯುಂಟಾಗುತ್ತದೆ.

4. ಈ ಪ್ರಸಂಗದಲ್ಲಿ ಪಂಪನ ಆದಿಪುರಾಣ ನಮಗೆ ಕುತೂಹಲಕಾರಿ ಸಂಗತಿಯನ್ನು ಹೇಳುತ್ತದೆ. ಅದು :

ಭರತಚಕ್ರವರ್ತಿಯು "ತನ್ನ ಮಾಡಿಸಿದ ಚೈತ್ಯಾಲಯಂಗಳೊಳಾದಿ ಭಟ್ಟಾರಕರಾದಿಯಾಗಿ ಭವಿಷ್ಯತ್ತೀರ್ಥಕರ[22] ಪ್ರತಿಕೃತಿಗಳಂ ಮಾಡಿಸಿ ಮಾಣಿಕ್ಯ ದೇವರೆಂದು ಕೊಂಡಾಡಿ"[23]ದನೆಂಬ ಹೇಳಿಕೆಯೊಂದಿಗೆ ಮಾಣಿಕ್ಯಜಿನ ಸ್ತುತಿಪರ ಪದ್ಯಗಳ ಒಂದು ಅಷ್ಟಕಗುಚ್ಛ, ಆದಿಪುರಾಣದ 16ನೆಯ ಆಶ್ವಾಸದ ಪ್ರಾರಂಭದಲ್ಲಿ ಬರುತ್ತವೆ. 24ತೀರ್ಥಂಕರರ ಪ್ರತಿಮೆಗಳ ಸಮೂಹಕ್ಕೆ ಇಲ್ಲಿ ಮಾಣಿಕ್ಯಜಿನ ಎಂದು ಕರೆಯಲಾಗಿದೆ. ತಾನು ಆಧಾರವಾಗಿಟ್ಟುಕೊಂಡಿರುವ ಜಿನಸೇನರ ಪೂರ್ವಪುರಾಣದಲ್ಲಿ ಇಲ್ಲದ ಈ ಸಂದರ್ಭವನ್ನು, ಈ ಹೆಸರಿನ ಜಿನನನ್ನೂ ತನ್ನ ಆದಿಪುರಾಣದಲ್ಲಿ ಹೊಸದಾಗಿ ಕಲ್ಪಿಸಿಕೊಳ್ಳಲು ಕೊಲ್ಲಿಪಾಕಿಯ ಮಾಣಿಕ್ಯಜಿನನೇ ಪಂಪನಿಗೆ ಸ್ಫೂರ್ತಿ ನೀಡಿರಬಹುದೆ? ಎನಿಸುತ್ತದೆ. ಸಮಕಾಲೀನ ಶಂಕರಗಂಡನಿಂದ ಸ್ಥಾಪಿತವಾದ ಮತ್ತು ತನ್ನ ನೆಲೆಯಾದ ಬೋಧನ-ಧರ್ಮಪುರಗಳಿಗೆ ಹತ್ತಿರವಿರುವ ಕೊಲ್ಲಿಪಾಕಿಯ ಈ ಜಿನನಿಂದ ಪಂಪನು ಪ್ರಭಾವಿತನಾಗಿದ್ದುದು ನಿಜವಿದ್ದರೆ ಆದಿಪುರಾಣದ ಕಾಲವಾದ ಕ್ರಿ. ಶ. 941ಕ್ಕೆ ಪೂರ್ವದಲ್ಲಿಯೇ ಶಂಕರಗಂಡನು ಕೊಲ್ಲಿಪಾಕಿಯಲ್ಲಿ ಮಾಣಿಕ್ಯಜಿನಾಲಯ ಕಟ್ಟಿಸಿದುದು ಸಹಜವಾಗುತ್ತದೆ.[24]

ಈ ಎಲ್ಲ ಸಂಗತಿಗಳು ಶಂಕರಗಂಡನ ಬಗ್ಗೆ ನಮಗೆ ಇರುವ ತಿಳುವಳಿಕೆಯನ್ನು ಹಿಗ್ಗಿಸುತ್ತವೆ. ಆತನು ಆ ಶತಮಾನದ ಅಗ್ರಮಾನ್ಯ ವ್ಯಕ್ತಿಗಳಲ್ಲೊಬ್ಬನೆಂದು ಸ್ಪಷ್ಟಪಡಿಸುತ್ತವೆ. ಕಾವ್ಯಾವಲೋಕನದಲ್ಲಿ—

ಬಲ್ಪೆಣನುರ್ಚಿ ಕೋಡೆಳಗಿರೆ ನೆತ್ತರುರೇಣಮಾಣ್ದಯಿಂ ನೆಲಕ್ಕೆ ಬಾ।
ನಲ್ಪರಿವನ್ನೆಗಂ ಪ್ರಹತದಿಂದಿಬಿಂದೆತ್ತಿದೊಡಗ್ರಹಸ್ತದೊಳ್।
ನೆಲ್ವ ಪೆಣಕ್ಕೆ ಪರ್ದೆಱಗೆ ಪೈರಿಯ ನಾಲ್ಕು ಬಲಕ್ಕೆ ಪೊಂದೆ ಬಂ।
ಬಲ್ವರಿಯುತ್ತಮಿರ್ದುದು ಜಯದ್ವಿರದಂ ಜಯಧೀರ[25] ಭೂಪನಾ ॥[26]

ಎಂಬ ಪದ್ಯವೊಂದು ಬರುತ್ತದೆ. 'ಜಯಧೀರ' ಎಂಬುದು ಶಂಕರಗಂಡನ ಬಿರುದೆಂದು ಉಪ್ಪಿನ ಬೆಟಗೇರಿ ಹಾಗೂ ಹಾವಣಗಿಯ ಶಾಸನಗಳು ಸ್ಪಷ್ಟಪಡಿಸುತ್ತವೆ. ಕಾರಣ ಜಯಧೀರಭೂಪನ ಗಜಯುದ್ಧವನ್ನು ವರ್ಣಿಸುವ ಈ ಪದ್ಯ ಶಂಕರಗಂಡನನ್ನು ಕುರಿತ ಯಾವುದೋ ಒಂದು ಕಾವ್ಯಕ್ಕೆ ಸಂಬಂಧಿಸಿರಬಹುದು.

ಅನಿಮಿಷವೇಗಂ + ಪಟ್ಟಿಗ್ಗಯು ಜವಂ, ವ್ರಣಂ + ಅಕ್ಷತಕಾಯಂ, ಎತ್ತಿ ಕ।
ಟ್ಟುವ ಮದಂ + ಉಣ್ಮೆ ಸೋರ್ವಸೊಣನೆ, ಬೀಟ್ವಿ. ಗಜಧ್ವಜಂ + ಅಂಬರಕ್ಕೆ ನಿ।
ಮ್ಮಿವ ಜಯಕೇತು—ಸಂದೆಯಂದ ದಂದುಗವಂ ಕಿಡಿಸಿತ್ತು—ಮಾಂದಣಕೋ।
ಡುವ ರಿಪುದಂತಿಗಂ, ಪೆಜಗೆಣಟ್ಟುವ ಅಟ್ಟಿಬಮೋಲು ದಂತಿಗಂ॥[27]

ಈ ಪದ್ಯವನ್ನು ಕುರಿತು ಆರ್. ನರಸಿಂಹಾಚಾರ್ಯರವರು "Some King or chief is also referred to by the title Rattarameru, where elephant is described as chasing the elephant of the enemy. Singana-deva, a tributary chief under Trilokya-malla had the title Rattara—meru"[28] ಎಂದು ಬರೆದಿದ್ದಾರೆ. ಆದರೆ ಇದು "ರಟ್ಟರ ಮೇರು" ಬಿರುದಾಂಕಿತನಾದ ಶಂಕರಗಂಡನಿಗೂ ಅನ್ವಯಿಸುತ್ತದೆ.[29] ಇದೇ ರೀತಿ

1. "......ಆನೆಯ ಮೇಲೆಯುಂ ಆಳ ಮೇಲೆಯುಂ
   ಕುದುರೆಯ ಮೇಲೆಯುಂ ಪರಿದುದೆಂದು ಗಜಂ ಭುವನೈಕರಾಮನಾ"[30]

2. "......ಪೆಡಂ ಮೆಟ್ಟದೆ ಸೂಜಿಜಿದುದೇಱಿದಿಭಂ ಭುವನೈಕರಾಮನಾ"[31]

3. "...... ಜವನೇಱಿದೊಂದು ಜ।
   ಕ್ಕಂದೆಱಲಿಂತೆ ಕಣ್ಗೆಸೆದುದೇಱಿದಿಭಂ ಭುವನೈಕರಾಮನಾ"[32]

4. ಉದಯಾಸ್ತೋನ್ನತ ಶೈಲಸೇತು ಹಿಮವತ್ಕುತ್ಕೀಲ ಪರ್ಯಂತ ಸಂ।
   ಪದೆಯಿಂ, ಪಾರ್ಥಿತರತ್ನರಂಗ ನಿಸದತ್ಕಾಂಚೀಕಳಾಪಾಂಚಿತಾ।
   ಸ್ಪದೆಯಂ, ಸಾಧಿಸಿ ಕಬ್ಬಿಗಂಗೆ ನೆಲನಂ ನಿರ್ವ್ಯಾಜದಿಂದಂ ನಿಮಿ।
   ರ್ಚಿದ ಗೆಲ್ಲಂ ಭುವನೈಕರಾಮಮಹಿಪಂಗಕ್ಕುಂ ಪೆರರ್ಗಕ್ಕುಮೇ ॥[33]

ಬಹುಶಃ ಪೊನ್ನನ "ಭುವನೈಕರಾಮಾಭ್ಯುದಯ" ಕಾವ್ಯಕ್ಕೆ ಸಂಬಂಧಿಸಿದ ಈ ಪದ್ಯಗಳು "ಭುವನೈಕರಾಮ" ಬಿರುದಾಂಕಿತರಾದ ರಾಷ್ಟ್ರಕೂಟ ಚಕ್ರವರ್ತಿ ಕೃಷ್ಣ III ಮತ್ತು ರಾಷ್ಟ್ರಕೂಟ ಮಹಾಸಾಮಂತ ಶಂಕರಗಂಡ ಇಬ್ಬರಿಗೂ ಅನ್ವಯಿಸುತ್ತವೆ. ಕಾರಣ ಪೊನ್ನನ "ಭುವನೈಕ ರಾಮಾಭ್ಯುದಯ"ದ ಕಥಾನಾಯಕ ರಾಷ್ಟ್ರಕೂಟ ಮುಮ್ಮಡಿ ಕೃಷ್ಣನೆಂದು ಆರ್. ನರಸಿಂಹಾಚಾರ್ ಹೇಳಿದರೆ, ಶಂಕರಗಂಡನೆಂದು ಡಿ. ಎಲ್. ನರಸಿಂಹಾಚಾರ್ ಹೇಳುತ್ತಾರೆ.[34] ಹೀಗಾಗಿ ಈತನು ಆ ಮಹಾಕಾವ್ಯಕ್ಕೆ ಕಥಾನಾಯಕನೆಂಬುದು ಇನ್ನೂ ಸಂದೇಹ; ಆದರೆ ಮಹಾಕಾವ್ಯಕ್ಕೆ ವಸ್ತುವಾಗಬಲ್ಲ ವ್ಯಕ್ತಿಯೆಂಬುದು ಸತ್ಯ.[35]

ಟಿಪ್ಪಣಿಗಳು

1. I A. VII ಪುಟ 161. ರಾಷ್ಟ್ರಕೂಟ 3ನೆಯ ಗೋವಿಂದನ ಅಣ್ಣ ಕಂಭರಾಜನಿಗೆ 'ಶಂಕರಗಣ್ಣ' ಹೆಸರಿನ ಮಗನಿದ್ದನೆಂದು ದೇವನೂರ ಶಾಸನ (EC III, ನಂಜನಗೂಡು 278. ಕನ್ನಡ ಅಧ್ಯಯನ ಸಂಸ್ಥೆ ಪ್ರಕಟನೆ)ಯಿಂದ ತಿಳಿಯಬರುತ್ತದ.
2. EC. III ಮಂಡ್ಯ 107 ಕೊತ್ತತ್ತಿ. ಕ್ರಿ ಶ. 997.

3. KI. VI No. 4.

4. ARIE 1947–48. No. 203.

5. 6. ARIE 1949–50 No. 86, 90.

7. 8. EI. XVI. 284 - 5; ಕ್ಯಾಸನೂರಿನ 2 ಶಾಸನಗಳಲ್ಲಿ ಒಂದು ಅಮೋಘವರ್ಷನ ಕಾಲಕ್ಕೆ ಸಂಬಂಧಿಸಿದೆ. ಈತನು ಕೃಷ್ಣ 3ನೆ ತರುವಾಯ ಆಳಿದ ಕರ್ಕನೆಂದು ಶ್ರೀ ಗೋವಿಂದ ಪೈ (ಮೂರು ಉಪನ್ಯಾಸಗಳು, ಪು. 35) ಡಾ! ಪಿ. ಬಿ. ದೇಸಾಯಿ (Jainism in South India and some Jaina Epigraphs. P. 369) ಹೇಳುತ್ತಾರೆ, ಆದರೆ ಈತನು ಅಮೋಘವರ್ಷ 2 ಇಲ್ಲವೆ 3 ಆಗಿರುವ ಸಂಭವವಿದೆ,

9. EC. VII. ಶಿಕಾರಿಪುರ, 183 ತಾಳಗುಂದ,

10. ಶಾಸನ ಪರಿಚಯ, ಡಾ। ಪಿ. ಬಿ. ದೇಸಾಯಿ, ಪು. 5.

11. 12. ARIE. 1961–62 ನಂ. 84; 93 ಈ ಶಾಸನಗಳು 11ನೆಯ ಶತಮಾನದಲ್ಲಿ ಹುಟ್ಟಿವೆ. ಇವುಗಳಲ್ಲಿ ಮೊದಲಿನದು 10ನೆಯ ಶತಮಾನದಲ್ಲಿ ಆಗಿಹೋದ ಪ್ರಸ್ತುತ ಶಂಕರಗಂಡನನ್ನು ಪ್ರಸ್ತಾಪಿಸುತ್ತದೆ ಎರಡನೆಯದು ಬಹುಶಃ ವಿಕ್ರಮಾದಿತ್ಯನ ಮಾಂಡಲಿಕನಾಗಿರಬಹುದಾದ ಇದೇ ವಂಶದ ಬೇರೊಬ್ಬ ಶಂಕರಗಂಡನನ್ನು ಸೂಚಿಸುತ್ತಿರಬಹುದು.

13. ಕಂಸಿನಲ್ಲಿಯ ಪಾಠಗಳು Jainism in South India (ಡಾ। ಪಿ. ಬಿ. ದೇಸಾಯಿ ಪು 372)ದಲ್ಲಿಯವು,

14. ಈ ರಾಷ್ಟ್ರಯ್ಯನ ವಂಶಾವಳಿಯನ್ನು ಸೂಚಿಸುವ ಇನ್ನೊಂದು ಶಾಸನ EC. XI cd 74 ಬೇವಿನ ಹಳ್ಳಿಯದಾಗಿದೆ.

15. ಅಜಿತಪುರಾಣ 12–9.

16. ಸಮಯ ಪರೀಕ್ಷೆ 1–37.

17. ಈ ಹಸ್ತಪ್ರತಿ ಕೊಲ್ಲಾಪುರದ ಶ್ರೀ ಲಕ್ಷ್ಮೀಸೇನಭಟ್ಟಾರಕ ಜೈನಬಸದಿಯಲ್ಲಿ ನನಗೆ ಲಭಿಸಿತು. ಇನ್ನೊಂದು ಪ್ರತಿ ಮೈಸೂರ ವಿ. ವಿ. ದ. ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದಲ್ಲಿದೆ. ನೋಡಿ; ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ-3 ಪು 287.

18. ಪಡುವಣ ವಾರ್ಧಿಯಲ್ಲಿ ಧನುಃಪಂಚಶತೋನ್ನತ ಜೈನಬಿಂಬ ವಿ।
ದ್ದಡೆಯ ಜಳಂ ಸುಧಾಸಮಮೆ ಯೋಜನ ವಿಸ್ತೃತಮಲ್ಲಿ ಭಾವಿಸಲ್ ।

ಜಳಚರವಿಲ್ಲ ತತ್ತತಿಮೆ ಪೆಟ್ಟಿಯುಂ ಬಣ್ಣದಿನುರ್ವಿಗಾವಗಂ
ತುಡಿಗೆಯೊಳಿರ್ಪುದೆಂದೊಡಲೆ ಬಣ್ಣಿಸಲಾರ್ಪರೆ ತೀರ್ಥದಂದಮಂ ॥

(ಸಮಯ ಪರೀಕ್ಷೆ 2-48)

ಈ ಪದ್ಯ ಮಂಡೋದರಿ ಸಮುದ್ರದಲ್ಲಿ ಮುಚ್ಚಿಟ್ಟಿದ್ದ ಮಾಣಿಕಜಿನನನ್ನು ಸೂಚಿಸುತ್ತಿರಬಹುದೆ? ವಿಚಾರಿಸಬೇಕು.

19. ಈತನು ಬನವಾಸಿ ಮಂಡಲವನ್ನಾಳುವ ಅವಧಿಯಲ್ಲಿ ಆ ಪ್ರದೇಶದಲ್ಲಿಯೂ ಜಿನ ಮಂದಿರಗಳನ್ನು ಕಟ್ಟಿಸಿರುವ ಸಾಧ್ಯತೆಯಿದೆ.

20. ಮಾಣಿಕ ಜಿನಚರಿತೆ 1.38.

21. ಪ್ರಾಕೃತ ವಿದ್ವಾಂಸರು 'ಮಾಣಿಕ್ಯಜಿನಕಲ್ಪ'ವನ್ನು ಅಭ್ಯಸಿಸುವುದು ಅವಶ್ಯವಾಗಿದೆ;

22. ಪ್ರಥಮತೀರ್ಥಂಕರನ ಸಮಕಾಲೀನನಾದ ಭರತನಿಗೆ, ಅಜಿತ ಮೊದಲುಗೊಂಡು ಮಹಾವೀರ ಪರ್ಯಂತ 23 ಜಿನರು ಭವಿಷ್ಯತ್‌ತೀರ್ಥಂಕರರು ಎಂಬುದನ್ನು ಗಮನಿಸಬೇಕು.

23. ಆದಿ ಪುರಾಣಂ, 16-1 ರಿಂದ 37 ಇಲ್ಲಿಯ.

ಪರಿಪೂರ್ಣೋಜ್ವಲ ಚಂದ್ರಬಿಂಬರುಚಿಯಿಂ ಚಂದ್ರಪ್ರಭಂ ಪುಷ್ಪದಂ ।
ತರೆನಲ್ ಗಾರುಡನೀಲಶೋಣಮಣಿಕೋಮಚ್ಛಾಯೆಯಿಂದಿರ್ಪತಿ ।
ವರ್ಣಿಸಲ್ ಸಾಲ್ದೊಡಮೇಕರೂಪಮೆ ಜಗಕ್ಕಾಶ್ಚರ್ಯಮಂ ಪುಟ್ಟಿಸು ।
ತ್ತಿರೆ ಮಾಣಿಕ್ಯ ಜಿನೇಂದ್ರಬಿಂಬಮಂ ಜಯಂ ಭದ್ರಂ ಶುಭಂ ಮಂಗಳಂ ॥

ಈ ಪದ್ಯವನ್ನು ಪರಿಭಾವಿಸಬೇಕು.

24 ಹುಣಸಿಕಟ್ಟಿ ಶಾಸನದಲ್ಲಿ ಬರುವ ಮುಗುಟಖಾನ ಪುಬ್ಬಳ್ಳಿಯ ಮಾಣಿಕ್ಯ ಜಿನನನ್ನು ಕುರಿತು ಡಾ. ಪಿ. ಬಿ. ದೇಸಾಯಿ ಅವರು "He at any rate could not have been Pārsvanāth ··However it is not unlikely that this Mānikya-dēva Stands for Vardhamāna" ಎಂದು ಊಹಿಸುತ್ತಾರೆ. ಇಂಗಳಗಿ ಶಾಸನದಲ್ಲಿ ಬರುವ ಮಹುಮಾಣಿಕ್ಯದೇವ ಮತ್ತು ಮಹಾಮಾಣಿಜಿನೇಶ್ವರ ಪದಗಳನ್ನು ಮಹಾಮಾಣಿಕ್ಯ ಎಂದು ತಿದ್ದಿಕೊಂಡು "Such a Jewel or the best among the Tīrthankars might be Mahāvira" ಎಂದು ಊಹಿಸುತ್ತಾರೆ.

25. "ಜಯಸಿಂಗ" ಎಂಬ ಪಾಠಾಂತರವಿದೆ,

26. ಕಾವ್ಯಾವಲೋಕನಂ. 68 (ವೈ. ಎ. ಎ. 1967)

27. ಕಾವ್ಯಾವಲೋಕನಂ. 620 (,, ,,)

28. ಕಾವ್ಯಾವಲೋಕನಂ Introduction xxii

29. "ರಟ್ಟರ ಮೇರು" ಎಂಬುದು ರಾಷ್ಟ್ರಕೂಟರ ಅನೆಯ ಹೆಸರೆಂದು ಡಾ. ದ. ರಾ. ಬೇಂದ್ರೆ ಅವರ ಊಹೆ: ಸಾಹಿತ್ಯಸಂಶೋಧನೆ (1940) ಪು. 125

30, ಶಬ್ದಮಣಿದರ್ಪಣಂ ಸೂ–130 (1968)

31, ಶಬ್ದಮಣಿ ದರ್ಪಣಂ ಸೂ 184 (1968)

32, ಶಬ್ದಮಣಿದರ್ಪಣಂ ಸೂ–183 (1968) ಇದಕ್ಕೆ 'ಚಲದಂಕರಾಮನಾ' ಎಂಬ ಪಾಠಾಂತರವೂ ಇದೆ.

33, ಶಬ್ದಮಣಿದರ್ಪಣಂ ಸೂ 167 (1968)

34. ಕಕಜ (೧೯೬೧) ಅನು II ಪುಟ ೩೨ ಮತ್ತು ಪ್ರ. ಕ. ೧೫-೨ ಶ್ರೀ ಆರ್. ನರಸಿಂಹಾಚಾರ್ ಅವರನ್ನು ಬೆಂಬಲಿಸಿ ಡಾ ದ. ರಾ. ಬೇಂದ್ರೆ (ಸಾಹಿತ್ಯ ಸಂಶೋಧನೆ), ಡಾ. ಎಂ. ಆರ್. ಉಮಾದೇವಿ (ಕವಿಚಕ್ರವರ್ತಿ ಪೊನ್ನ), ಶ್ರೀ ಡಿ. ಎಲ್. ನರಸಿಂಹಾಚಾರ್ ಅವರನ್ನು ಬೆಂಬಲಿಸಿ ಡಾ. ಎಂ. ಬಿ. ಭೋಯಿ (ಕ. ಭಾ. ೩-೨) ಅವರು ಕೆಲವು ಹೊಸ ಸಂಗತಿಗಳನ್ನು ಬೆಳಕಿಗೆ ತಂದಿದ್ದಾರೆ.

35. ಈ ಲೇಖನದ ವಿಷಯವಾಗಿ ತಮ್ಮೊಡನೆ ಚರ್ಚೆಗೆ ಅವಕಾಶ ಮಾಡಿಕೊಟ್ಟು "ಅಭಿಧಾನ ರಾಜೇಂದ್ರ" ದತ್ತ ನನ್ನ ಗಮನ ಹರಿಯುವಂತೆ ಮಾಡಿದ ಡಾ. ದ. ರಾ. ಬೇಂದ್ರೆ ಅವರಿಗೆ ಅನಂತ ವಂದನೆಗಳು.

— x —

೪ ಕೆಳದಿ—ಮರಾಠಾ ಸಂಬಂಧ

ಡಾ। ಸೂರ್ಯನಾಥ ಕಾಮತ್, ಬೆಂಗಳೂರು.

ಕರ್ನಾಟಕದಲ್ಲಿ ವಿಜಯನಗರದ ನಂತರ ಅಸ್ತಿತ್ವಕ್ಕೆ ಬಂದ ಪ್ರಮುಖ ಸತ್ತೆಗಳ ಪೈಕಿ ಕೆಳದಿ ನಾಯಕರು ಪ್ರಮುಖರು. ವಿಜಯನಗರದ ಮಾಂಡಲಿಕರಾಗಿ ಪ್ರಸಿದ್ಧಿಗೆ ಬಂದ ಈ ರಾಜಮನೆತನ ಆರಂಭದಿಂದ ಇಕ್ಕೇರಿಯಿಂದಲೂ, ಮುಂದೆ ಕೆಳದಿಯಿಂದಲೂ, ಕೊನೆಗೆ ಬಿದನೂರಿನಿಂದಲೂ ಆಳುತ್ತಿತ್ತು. ಈ ಎಲ್ಲ ಸ್ಥಳಗಳೂ ಇಂದಿನ ಶಿವಮೊಗ್ಗ ಜಿಲ್ಲೆಯಲ್ಲಿವೆ.

ಉತ್ತರದ ಬಿಜಾಪುರದ ಆದಿಲ್‌ಷಾ ಹಾಗೂ ದಕ್ಷಿಣದ ಮೈಸೂರು ರಾಜಮನೆತನ ಇವೆರಡರ ವಿರುದ್ಧವೂ ತಮಗಿದ್ದ ಶತ್ರುತ್ವದಿಂದಾಗಿ ಕೆಳದಿ ರಾಜರು ಈ ಎರಡು ಶಕ್ತಿಗಳ ಶತ್ರುಗಳಾಗಿದ್ದ ಮರಾಠರ ಜೊತೆ ಸಹಜವಾಗಿ ಸ್ನೇಹ ಬೆಳೆಸಿದರು.

ಮರಾಠರ ಮತ್ತು ಕೆಳದಿ ನಾಯಕರ ಸ್ನೇಹ ಷಾಜಿಯ ಕಾಲದಷ್ಟು ಹಳೆಯದು, ಬಿಜಾಪುರದವರು ಬಿದನೂರಿನ ವಿರುದ್ಧ 1637ರಲ್ಲಿ ನಡೆಸಿದ ದಂಡಯಾತ್ರೆಯ ಕಾಲಕ್ಕೆ ರಣದುಲ್ಲಾಖಾನನ ಜೊತೆಯಾಗಿ ಷಾಜಿಯೂ ತೆರಳಿದ್ದ (ಷಾಜಿ ಆಗ ಬಿಜಾಪುರದ ಸೇವೆಯಲ್ಲಿದ್ದವನು). ಶಿವಭಾರತ (ಪರಮಾನಂದ ಕೃತ) ತಿಳಿಸುವಂತೆ, ಯುದ್ಧದಲ್ಲಿ ಪೂರ್ತಿಯಾಗಿ ಸೋತ ಕೆಳದಿನಾಯಕನನ್ನು ತಿರುಗಿ ಸಿಂಹಾಸನದಲ್ಲಿ ಸ್ಥಾಪಿಸುವಂತೆ ಷಾಜಿ ಮಧ್ಯಸ್ಥಿಕೆ ವಹಿಸಿದ್ದ. ಆದರೆ ಕೆಳದಿಯ ಇತಿಹಾಸವನ್ನು ನಿರೂಪಿಸುವ ಲಿಂಗಣ್ಣ ಕವಿ ಕೃತ ಕನ್ನಡ ಚಂಪೂಕಾವ್ಯ ಕೆಳದಿ ನೃಪವಿಜಯಂ ಷಾಜಿಯ ಮಧ್ಯಸ್ಥಿಕೆಯ ವಿಚಾರವನ್ನೇನೂ ತಿಳಿಸುವುದಿಲ್ಲ. ಆದರೆ ಮರಾಠರ ಮತ್ತು ಕೆಳದಿ ರಾಜರ ನಡುವೆ ಬೆಳೆದು ಬಂದ ಸ್ನೇಹವು ಸಂಸ್ಕೃತ ಶಿವಭಾರತದ ಹೇಳಿಕೆಯನ್ನು ಸಮರ್ಥಿಸುತ್ತದೆ. ಬಿಜಾಪುರದ ಆಶ್ರಿತರಾಜರಾಗಿದ್ದ ಸೋದೆ (ಸೋಂದಾ) ರಾಜ್ಯದ (ಈ ಊರು ಉತ್ತರ ಕನ್ನಡದ ಸಿರ್ಸಿ ತಾಲೂಕಿನಲ್ಲಿದೆ) ವ್ಯವಹಾರಗಳೂ ಕೆಳದಿ ಮತ್ತು ಮರಾಠರ ಸ್ನೇಹಕ್ಕೆ ಕೊಂಚಮಟ್ಟಿಗೆ ಕಾರಣ. ಷಾಜಿಯು ಕರ್ನಾಟಕದಲ್ಲಿನ ಬೇರೆ ಬೇರೆ ಹಿಂದೂ ಅರಸರುಗಳ ಬಗ್ಗೆ ಸ್ನೇಹಭಾವವನ್ನು ಹೊಂದಿದ್ದನಾದರೂ ತನ್ನ ಒಡೆಯನಾದ ಬಿಜಾಪುರದ ಸುಲ್ತಾನನ ಆಜ್ಞೆಗಳಿಂದಾಗಿ ಅನೇಕ ಬಾರಿ ಈ ರಾಜರುಗಳ ವಿರುದ್ಧ ಕ್ರಮಕೈಗೊಳ್ಳುವ ಕಾರ್ಯಕ್ಕೆ ಮುಂದಾಗಿದ್ದ. ಕೆಳದಿ ಇಂಥ ರಾಜ್ಯಗಳಲ್ಲಿ ಒಂದು, 1663ರಲ್ಲಿ ಸೋದೆಯ ರಾಜರು ಒಂದು ತಕರಾರಿಗನುಗುಣವಾಗಿ ಬಿಜಾಪುರದವರು ಕೆಳದಿಯ ವಿರುದ್ಧ ಬದ್ಲೊಲ್‌ಖಾನ್ ಹಾಗೂ ಷಾಜಿಯರ ಜೊತೆ ಒಂದು ಭಾರಿ ದಂಡನ್ನು ಕಳುಹಿಸಿದ್ದರು. (ಮರುವರ್ಷವೇ ಷಾಜಿ ತೀರಿಕೊಂಡ).

ಷಾಜಿಯ ಮರಣಾನಂತರ ಕೆಳದಿಯ ದೊರೆಗಳು ಶಿವಾಜಿಯ ಜೊತೆ ಸ್ನೇಹ ಬೆಳೆಸಬಯಸಿದರು, ಶಿವಾಜಿಯು ಒಮ್ಮೆ ಕೆಳದಿ ರಾಜ್ಯವನ್ನು ಸಂದರ್ಶಿಸಿದ್ದ. 1665ರ

ಆರಂಭದಲ್ಲಿ ಆವನು ಬಸರೂರನ್ನು ಕೊಳ್ಳೆಹೊಡೆದಿದ್ದ. ಬಸರೂರು ಕೆಳದಿ ರಾಜ್ಯದಲ್ಲಿನ ಒಂದು ಬಂದರು (ಇಲ್ಲಿ ಇದ್ದ ಡಚ್ಚರ ವ್ಯಾಪಾರದ ಮಳಿಗೆ ಬಹುಶಃ ಶಿವಾಜಿಯ ಈ ದಂಡ ಯಾತ್ರೆಯ ನಂತರ ಮುಚ್ಚಿಹೋಗಿರಬೇಕೆಂದು ಊಹಿಸಲು ಅವಕಾಶವಿದೆ.) ಪಶ್ಚಿಮ ಕರಾವಳಿಯಲ್ಲಿನ ಅಂಕೋಲಾ ಮತ್ತು ಕಾರವಾರ ಬಂದರುಗಳನ್ನು ಶಿವಾಜಿ ಕೊಳ್ಳೆ ಹೊಡೆ ದಿದ್ದ. ಅವು ಬಿಜಾಪುರದ ವಶದಲ್ಲಿದ್ದ ಬಂದರುಗಳು. ಬಿಜಾಪುರದ ಶತ್ರುವಾಗಿರುವ ಈ ಶಿವಾಜಿಯು ಕೆಳದಿಯ ಶತ್ರುವು ಕೂಡ ಆಗಿದ್ದರೂ ತನ್ನ ವೈರಿಯ ಜೊತೆ ಸ್ನೇಹ ಬೆಳೆಸುವ ಕಲ್ಪನೆಯಂತೆ ಕೆಳದಿ ದೊರೆಗಳು ಅವನ ಸ್ನೇಹ ಬೆಳೆಸಬಯಸಿದರು. ಬಿಜಾಪುರ, ಮೈಸೂರುಗಳಂಥ ಪ್ರಬಲ ಶತ್ರುಗಳ ನಡುವೆ ಕೆಳದಿಗೆ ಒಬ್ಬ ಒಳ್ಳೆಯ ಮಿತ್ರನ ಅವಶ್ಯಕತೆ ಇತ್ತು. ಖ್ಯಾತ ಮರಾಠಾ ಇತಿಹಾಸಕಾರ ಸರ್‌ದೇಸಾಯಿ ಅವರು ಹೇಳಿರುವಂತೆ, ತನ್ನ ಒಬ್ಬ ಸೇನಾನಿ ತಿಮ್ಮಣ್ಣ ಎಂಬಾತನ ಬಂಡಾಯದ ವಿರುದ್ಧವಾಗಿ ಕೆಳದಿಯ ಚನ್ನಮ್ಮಾಜಿ ಶಿವಾಜಿಯ ನೆರವು ಯಾಚಿಸಿದಳಂತೆ. ಶಿವಾಜಿಯು ಇದೇ ಕಾಲದಲ್ಲಿ (1675) ಬಸರೂರು, ಸೋಂದಾಗಳನ್ನು ಗೆದ್ದುಕೊಂಡನೆಂದೂ ಅವರ ಹೇಳಿಕೆ. (ಎ ನ್ಯೂ ಹಿಸ್ಟರಿ ಆಫ್ ದಿ ಮರಾಠಾಸ್ I 229.) ಚನ್ನಮ್ಮಾಜಿಯ ವಿರುದ್ಧ 1672–73ರಲ್ಲಿ ಬಂಡಾಯಗಳಾದು ವೆಂದು ಕೆಳದಿ ನೃಪವಿಜಯಂ ನಮಗೆ ತಿಳಿಸುತ್ತದೆ. ಇಂಥ ಬಂಡಾಯಗಳಲ್ಲಿ ಒಂದರ ನಾಯಕತ್ವವನ್ನು ಕಾಸರಗೋಡು ತಿಮ್ಮಣ್ಣ ನಾಯಕ ಮತ್ತು ಸಬ್ನೀಸ ಕೃಷ್ಣಪ್ಪಯ ಎಂಬ ರಾಜ್ಯದ ಇಬ್ಬರು ಸೇನಾನಿಗಳೇ ವಹಿಸಿದ್ದರು. ಆದರೆ ರಾಣಿ ಈ ಸೇನಾನಿಗಳನ್ನು ಮನವೊಲಿಸಿ ಗೆದ್ದುಕೊಂಡಿದ್ದಳು (ಕೆ. ಎ. VIII 43). ಆದರೆ ಶಿವಾಜಿಯ ನೆರವನ್ನು ಆಕೆ ಅಪೇಕ್ಷಿಸಿದ್ದ ವಿಚಾರ ಕಾವ್ಯದಲ್ಲಿ ಕಂಡುಬರುವುದಿಲ್ಲ. ಆದರೆ ಒಳ ಹಾಗೂ ಹೊರಗಿನ ಶತ್ರುಗಳಿಂದ ಎದುರಿಸಲ್ಪಟ್ಟವಳಾದ ಆಕೆ 1673ರಲ್ಲಿ ತನ್ನ ರಾಜ್ಯದ ಸಮೀಪಕ್ಕೆ ಬಂದಿದ್ದ ಶಿವಾಜಿಯ ಸಹಾಯವನ್ನು ಯಾಚಿಸಿದ್ದುದು ಅಸಂಭವವೇನಲ್ಲ. ಹುಬ್ಬಳ್ಳಿ, ಕಾರವಾರ, ಅಂಕೋಲ ಮುಂತಾದ ಬಿಜಾಪುರದ ಪೇಟೆಗಳನ್ನು ಶಿವಾಜಿ ಆಕ್ರಮಿಸಿದ್ದು ಇದೇ ಕಾಲದಲ್ಲಿ. ಹಾಗಾಗಿ ತಿಮ್ಮಣ್ಣ ಮುಂತಾದವರ ಬಂಡಾಯದ ವಿರುದ್ಧ ಶಿವಾಜಿ ರಾಣಿಗೆ ಬೆಂಬಲ ನೀಡಿದನೆಂಬ ವಿಚಾರ ಸತ್ಯವೆಂದು ತೋರುತ್ತದೆ. ಆದರೆ ಸರ್‌ದೇಸಾಯಿಯವರು ಹೇಳಿರುವಂತೆ ಆತ 1675ರಲ್ಲಿ ಬಸರೂರನ್ನು ವಶಪಡಿಸಿಕೊಂಡನೆಂಬುದು ನಿಜವಲ್ಲ. ಆತ ಆ ಪಟ್ಟಣವನ್ನು 1665ರಲ್ಲಿ ಸುಲಿಗೆ ಮಾಡಿದ್ದಷ್ಟೆ ನಿಜಸಂಗತಿ. ಪೊಂಡದಲ್ಲಿದ್ದ ಅವನ ಸೇನೆಯು ಸೋಂದೆಯನ್ನು ಗೆಲ್ಲಲು ಒಂದು ಅಯಶಸ್ವಿ ಯತ್ನವನ್ನ 1675ರಲ್ಲಿ ಮಾಡಿ ತೆಂಬುದು ಮಾತ್ರ ಕಂಡುಬರುತ್ತದೆ. (ಡಿ. ವಿ. ಕಾಳೆ ಛತ್ರಪತಿ ಶಿವಾಜಿ ಮಹಾರಾಜ್ – ಮರಾಠಿ ಪುಟ 201) ಕೆಳದಿಯ ಹಿತಕ್ಕೆ ಕಂಟಕಪ್ರಾಯವಾಗಿದ್ದ ಈ ಸೋಂದಾ ಅಥವಾ ಸೋದೆಯ ದೊರೆಯನ್ನು ಅನೇಕ ಬಾರಿ ರಾಣಿ ಚನ್ನಮ್ಮಾಜಿ ಸೋಲಿಸಿದ್ದಳೆಂಬ ವಿಚಾರ ಕೆಳದಿ ನೃಪವಿಜಯದಿಂದ ತಿಳಿಯುತ್ತದೆ (IX 10–14) ಆದರೆ ಈ ಕಾರ್ಯದಲ್ಲಿ ಆಕೆ ಶಿವಾಜಿಯ ನೆರವು ಪಡೆದಿರಬಹುದೇ ಎಂಬ ವಿಚಾರ ಈ ಕೃತಿಯಿಂದ ಸ್ಪಷ್ಟವಾಗದು.

ಕೆಳದಿ ಮತ್ತು ಮರಾಠರ ನಡುವೆ ಸ್ನೇಹವು ಮುಂದುವರಿಯಿತೆಂಬ ಸಂಗತಿಯು

ಸಂಭಾಜಿಗೆ ಕೆಳದಿ ರಾಜ್ಯವು ನೀಡಿದ ನೆರವಿನಿಂದ ಕೂಡ ಸ್ಪಷ್ಟವಾಗುತ್ತದೆ. ಮರಾಠರ ಬೆಂಗಳೂರು ಜಾಗೀರಿನ ಪ್ರದೇಶಗಳ ಮೇಲೆ ಮೈಸೂರು ದೊರೆಗಳು ಒತ್ತುವರಿಯಲಾರಂಭಿಸಿದಾಗ ಸಂಭಾಜಿ ಮೈಸೂರಿನ ವಿರುದ್ಧ ಯುದ್ಧ ಹೂಡಿದ. ಬಾಣಾವರದಲ್ಲಿ ಸಂಭಾಜಿ ಮತ್ತು ಮೈಸೂರುಗಳ ನಡುವೆ ಯುದ್ಧವಾದಾಗ ಮರಾಠರಿಗೆ ಕೆಳದಿ ಹಾಗೂ ಕುತುಬ್ ಷಾಗ ನೆರವಿದ್ದರೂ ಸಂಭಾಜಿಗೆ ಸೋಲೇ ಆಯಿತು. (ಎಪಿಗ್ರಾಫಿಯಾ ಕರ್ನಾಟಿಕಾ III ಎಸ್ ಆರ್ 14. 64: ಸಿ. ಹಯವದನ ರಾವ್, ಹಿಸ್ಟರಿ ಆಫ್ ಮೈಸೂರು I 299)

ಕೆಳದಿಯ ರಾಣಿ ಚನ್ನಮ್ಮಾಜಿ ಛತ್ರಪತಿ ರಾಜಾರಾಮನಿಗೆ ರಕ್ಷಣೆ ನೀಡಿ ಔರಂಗಜೇಬನ ಸೇನೆಯನ್ನು ಎದುರಿಸಿದ ಪ್ರಸಂಗವು ಸರ್ವವೇದ್ಯವಾಗಿದ್ದು ಕೆಳದಿ ಮತ್ತು ಮರಾಠರ ಸ್ನೇಹ ಮುಂದುವರಿದುದರ ದ್ಯೋತಕವಾಗಿದೆ.

ರಾಜಾರಾಮನು ಕೆಳದಿಯನ್ನು ಸಂದರ್ಶಿಸಿದ ಪ್ರಸಂಗವನ್ನು ವರ್ಣಿಸುವ ಸಂದರ್ಭದಲ್ಲಿ ಹದಿನೆಂಟನೆಯ ಶತಮಾನದ ಈ ಕೃತಿ ದೆಹಲಿಯ ಸುಲ್ತಾನರು. ಮೊಘಲರು ಹಾಗೂ ದಖ್ಖಣದ ಷಾಹಿ ರಾಜರು, ಇವರುಗಳೆಲ್ಲರ ಇತಿಹಾಸದ ಬಗೆಗೆ ಸ್ವಾರಸ್ಯದ ವಿವರಗಳನ್ನು ನೀಡುತ್ತದೆ. ಮರಾಠರ ಬಗೆಗೆ ಅದು ನೀಡುವ ವಿಚಿತ್ರ ವಿವರಗಳೂ ಸ್ವಾರಸ್ಯದ್ದಾಗಿವೆ. ಷಾಜಿಯ ಮುತ್ತಜ್ಜನು ಉದಯಪುರದ ರಾಣಾ ಹಾಗೂ ಬಡಗಿ ಸ್ತ್ರೀಯೊಬ್ಬಳಿಗೆ ಜನಿಸಿದವನೆಂದು ಹೇಳಲಾಗಿದೆ. ಅವರು ಭಾರದ್ವಾಜ ಗೋತ್ರದವರೆಂದು ತಿಳಿಸಿದೆ. ಸಂಭಾಜಿಯು ತಂದೆಗಿಂತಲೂ ಧೀರ ("ಬಲ್ಲಿದಂ") ಎಂದು ಬಣ್ಣಿಸಲಾಗಿದೆ. ಔರಂಗಜೇಬನ ಮಗಳು ಸಂಭಾಜಿಯನ್ನು ಮೋಹಿಸಿದ್ದಳೆಂದೂ ಇದೇ ಕಾರಣಕ್ಕಾಗಿ ಮುಂದೆ ಸಂಭಾಜಿಯ ಪುತ್ರ ಶಾಹುವನ್ನು ಔರಂಗಜೇಬನ ಬಂಧನದಲ್ಲಿದ್ದಾಗ ಅವಳು ಪ್ರೀತಿಯಿಂದ ನೋಡಿಕೊಂಡಳೆಂದೂ ಕೃತಿ ತಿಳಿಸುತ್ತದೆ. ಶಿವಾಜಿ ಹಾಗೂ ಏಕೋಜಿಯ ವಂಶಾವಳಿಯನ್ನು ತಪ್ಪಿಲ್ಲದೆ ಕೃತಿಯಲ್ಲಿ ಬಣ್ಣಿಸಲಾಗಿದೆ (ಕೆ. ವಿ X 17-26,56-85). ಚನ್ನಮ್ಮಾಜಿಯ ನಂತರ ಮರಾಠರ ಮತ್ತು ಕೆಳದಿಯ ನಡುವಣ ಸ್ನೇಹ ಮೆಲ್ಲಮೆಲ್ಲನೆ ಕುಂದತೊಡಗಿದಂತೆ ಕಾಣಿಸುತ್ತದೆ.

ಬಸಪ್ಪನಾಯಕನ ಕಾಲದಲ್ಲಿ (697-1714 ಚನ್ನಮ್ಮಾಜಿಯ ದತ್ತಪುತ್ರನಾದ ಈತನು 1682 ರ ಬಾಣಾವರದ ಕದನದಲ್ಲಿ ಮರಾಠರ ಪಕ್ಷದಲ್ಲಿ ಭಾಗವಹಿಸಿದ್ದ) ನವಿಲೆ ದುರ್ಗವೆಂಬ ಬಂದರು ಕೋಟೆಯು ಮರಾಠರ ಕೈಯಲ್ಲಿದ್ದು ("ಕಡುಗಲಿಗಳಾದ ಆರೆ ಮರ್ಕಳ") ಅವನು ಮರಾಠರನ್ನು ಆ ಕೋಟೆಯಿಂದ ಓಡಿಸಿ ತಾನು ಗೆದ್ದುಕೊಂಡ ಆ ಕೋಟೆಗೆ ಬಸವರಾಜದುರ್ಗ ಎಂಬ ಹೆಸರನ್ನಿಟ್ಟನು (ಕೆ. ವಿ. X 3). ಬಹುಶಃ ಕನ್ಹೋಜಿ ಆಂಗ್ರೆಯ ಸೈನಿಕರನ್ನು ಆತ ಸೋಲಿಸಿದ್ದಿರಬೇಕು. 1720 ರಲ್ಲಿ ಕನ್ಹೋಜಿ ಆಂಗ್ರೆ ಮಂಗಳೂರನ್ನು ಮುತ್ತಿದನೆಂದೂ ಸೋಮಶೇಖರ ನಾಯಕ (1714-39)ನ ಸೇನೆ ಅವನನ್ನು ಹಿಂದಕ್ಕಟ್ಟಿತೆಂದೂ ಎಂಕರ್ಟನ್ ಎಂಬ ಆಂಗ್ಲ ಪ್ರವಾಸಿ ತಿಳಿಸಿದ್ದಾನೆ (VIII ಪುಟ 265)

ಈ ಕಾಲದಲ್ಲಿ ಗುತ್ತಿಯ ಘೋರ್ಪಡೆಗಳೂ ಕೆಳದಿಯ ಜೊತೆ ಸ್ನೇಹದಿಂದಿರಲಿಲ್ಲ. ಚಿತ್ರದುರ್ಗ ಮತ್ತು ಹರಪನ ಹಳ್ಳಿಗಳ ನಡುವೆ ನಡೆದ ಯುದ್ಧದಲ್ಲಿ (1718-19 ಹೇವಿಳಂಬಿ) ಸಿದ್ದೋಜಿ ಘೋರ್ಪಡೆಯು ಚಿತ್ರದುರ್ಗದ ಪಕ್ಷ ವಹಿಸಿದ್ದು ಕೆಳದಿಯವರು ಹರಪನ ಹಳ್ಳಿಯವರ ಪಕ್ಷದಲ್ಲಿದ್ದರು. ಗುತ್ತಿ, ಚಿತ್ರದುರ್ಗಗಳೆರಡನ್ನು ಕೆಳದಿಯವರು ಸೋಲಿಸಿ ಘೋರ್ಪಡೆಯಿಂದ "ಸದ್ದಂತಿ"ಯೊಂದನ್ನು ಗೆದ್ದುಕೊಂಡರೆಂದೂ ಚಿತ್ರದುರ್ಗದವರ ಸಂತೆಬೆನ್ನೂರು ಕೋಟೆಯನ್ನು ವಶಪಡಿಸಿಕೊಂಡರೆಂದೂ ಕೆಳದಿನೃಪವಿಜಯಂ ತಿಳಿಸುತ್ತದೆ. (ಕೆ. ವಿ. X 41-42).

ಕ್ರೋಧಿ ಸಂವತ್ಸರದಲ್ಲಿ (1724-25) ಫೈಜ್ ಆಲಿಖಾನ್ ಜೊತೆಗೂಡಿ (ಕಾಪ್ಸಿಯಂ) ರಾಣೋಜಿ ಘೋರ್ಪಡೆ ಕೆಳದಿಯ ಮೇಲೆ ದಂಡೆತ್ತಿ ಬರಲು ಅವನನ್ನು ಹಿಂದಟ್ಟಲಾಯಿತು. (ಉಪರ್ಯುಕ್ತ 59-60) ಸೋಮಶೇಖರ ನಾಯಕನು ಮೊಘಲರ (ಬಹುಶಃ ನಿಜಾಮ) ಹಾಗೂ ಮರಾಠರ (ಬಹುಶಃ ಗುತ್ತಿಯ ಘೋರ್ಪಡೆ) ವಿರುದ್ಧ ರಾಯದುರ್ಗದವರಿಗೆ ನೆರವು ನೀಡಿದ ವಿಚಾರವು ಇದರ ನಂತರ ಉಲ್ಲೇಖಿತವಾಗಿದೆ (ಉ.ಉ. 74-75)

ಶಾಹುರಾಯನ "ವಜೀರ"ನಾದ "ಶ್ರೀಪತಿರಾಯ" (ಶ್ರೀಪತ್ ರಾವ್ ಪ್ರತಿನಿಧಿ) ಚಿಕಲೀಸಖಾನನೊಡಗೂಡಿ ಕೆಳದಿಗೆ ದಂಡೆತ್ತಿ ಬಂದನೆಂದು ಕಾವ್ಯ ಹೇಳಿದೆ. ಈ ಘಟನೆಯ ತಾರೀಕು ಹೇಳಿಲ್ಲವಾದರೂ ಬಾಜಿರಾವ್ ಪೇಶ್ವೆಯ ದಂಡಯಾತ್ರೆಗೂ ಮೊದಲು ಈ ಘಟನೆಯನ್ನು ವರದಿ ಮಾಡಲಾಗಿದೆ (ಉ.ಉ. 75-76)

ಪರಾಭವದಲ್ಲಿ ಬಾಜೀರಾಯನು ದಂಡೆತ್ತಿ ಬಂದನೆಂದು ಕಾವ್ಯ ತಿಳಿಸುವ ಸಂಗತಿ ಡಿಸೆಂಬರ್ 1726 – ಜನವರಿ 1727ರಲ್ಲಿ ನಡೆದ ಘಟನೆಯೆಂದು ಅನ್ಯ ಮೂಲಗಳಿಂದ ತಿಳಿದ ವಿಚಾರ. ಶಾಹುರಾಜನ ಆಜ್ಞೆಯಂತೆ ಬಂದ ಬಾಜೀರಾಯನನ್ನು ಮಂತ್ರಿ ಲಿಂಗಪ್ಪನು ಮನವೊಲಿಸಿ ಹಿಂತಿರುಗಿಸಿದನೆಂದು ತಿಳಿಸಲಾಗಿದೆ. (ಉ.ಉ. 80)

ಕೆಳದಿ ರಾಜ್ಯದ ಮೇಲೆ ದಂಡೆತ್ತಿ ಬಂದ ಸಗುಣಾಬಾಯಿ ಘೋರ್ಪಡೆ (ಅಥವಾ ಶಿಂಧೆ–ಆ ಕಾಲದಲ್ಲಿ ಇಬ್ಬರು ಇಂಥ ಮರಾಠಾ ಸ್ತ್ರೀಯರಿದ್ದರು)-ಯನ್ನು ಹೊನ್ನಾಳಿಯಲ್ಲಿ ಎದುರಿಸಿ ಮರಳಿಸಿದ ವಿಚಾರವೂ ಕಾವ್ಯದಿಂದ ಗೊತ್ತಾಗುತ್ತದೆ (ಉ.ಉ. 89)

ಈ ರೀತಿ ರಾಜಾರಾಮನ ಮರಣಾನಂತರ ಕೆಳದಿ ಮತ್ತು ಮರಾಠರ ನಡುವಣ ಸಂಬಂಧ ಸ್ನೇಹದ್ದಾದಿ ಉಳಿಯಲಿಲ್ಲ. ಗುತ್ತಿಯ ಘೋರ್ಪಡೆಗಳೂ ಬಾಜೀರಾಯನೂ ಅನ್ಯ ಮರಾಠಾ ದಂಡನಾಯಕರೂ ಕೆಳದಿ ರಾಜ್ಯವನ್ನು ಮೇಲಿಂದ ಮೇಲೆ ತೊಂದರೆಗೊಳಪಡಿಸಿ ಅಪಾರ ಕಪ್ಪವನ್ನು ಕೆಳದಿಯಿಂದ ಸಂಗ್ರಹಿಸಿದರು. ಕೆಳದಿ ರಾಜ್ಯವು ತನ್ನ ಕಾಡುತ್ಪತ್ತಿ ಹಾಗೂ ದೀರ್ಘ ಕರಾವಳಿಯ ವ್ಯಾಪಾರ, ಇವುಗಳ ಕಾರಣದಿಂದ ಶ್ರೀಮಂತ ರಾಜ್ಯವಾದಿತ್ತು.

ಇಮ್ಮಡಿ ಬಸವಪ್ಪ ನಾಯಕ (1714–39)ನ ಕಾಲದಲ್ಲಿ ಕೆಳದಿ ರಾಜ್ಯವು ಸಿದ್ದೋಜಿ ಘೋರ್ಪಡೆಯ ಜೊತೆ ಸ್ನೇಹ ಬೆಳೆಸಿದಂತೆ ತೋರುತ್ತದೆ. ಹರಪನಹಳ್ಳಿಯ "ಬಸಂತರಾಯ"ನು ಚಿತ್ರದುರ್ಗದವರ ವಿರುದ್ಧ ಕೆಳದಿಯ ಸಹಾಯ ಕೇಳಿದಾಗ, ಕೆಳದಿಯವರು ಸಿದ್ದೋಜಿಯ ನೆರವು ಪಡೆದು ಚಿತ್ರದುರ್ಗದ ಮದಕರಿ ನಾಯಕನನ್ನು ಸೋಲಿಸಿದರು (ಉ.ಉ. XI-12) ಚಿತ್ರದುರ್ಗದಿಂದ ಕೆಳದಿಯು ಕಸಿದುಕೊಂಡಿದ್ದ (1719) ಸಂತೆಬೆನ್ನೂರು ಕೋಟೆಯನ್ನು ಮತ್ತೆ ಗೆದ್ದುಕೊಳ್ಳಲು ರಘುಜಿ ಭೋಸಲೆ ಮತ್ತು ಫತ್ತೆಸಿಂಗ್ ಭೋಸಲೆಯರ ನೆರವಿನಿಂದ ಚಿತ್ರದುರ್ಗದವರು ಯತ್ನಿಸಿದರೆಂದು ಕಾವ್ಯ ತಿಳಿಸಿದ್ದು (ಉ.ಉ. 16), ಈ ಘಟನೆ 1740ರಲ್ಲಿ ನಡೆಯಿತೆಂಬುದು ಸ್ಪಷ್ಟ. ಕೆಳದಿಯವರು ಈ ದಾಳಿಯನ್ನು ಯಶಸ್ವಿಯಾಗಿ ಎದುರಿಸಿ ಅವರನ್ನು ಹಿಂದಕ್ಕಟ್ಟಿದರು. ರಘುಜಿ ಭೋಸಲೆಯು ಆರ್ಕಾಟಿನ ವಿರುದ್ಧ ಇದೇ ವರ್ಷ ನಡೆಸಿದ ದಂಡಯಾತ್ರೆಯಲ್ಲಿ ಸಿದ್ದೋಜಿ ಘೋರ್ಪಡೆಯು ಭಾಗವಹಿಸಿದ್ದನಾದರೂ ಸಂತೆಬೆನ್ನೂರು ಮುತ್ತಿಗೆಯಲ್ಲಿ ಅವನು ಇದ್ದನೇ ಎಂಬ ವಿಚಾರ ಸ್ಪಷ್ಟವಾಗದು.

ಇದಕ್ಕೂ ಮೊದಲು "ಸುರಭಾಪುರ"ವನ್ನು ಸುಲಿದ ವೆಂಕಟರಾಯನು 1739ರಲ್ಲಿ ಕುಂಬಸೆನಾಡಿನಲ್ಲಿ ಹಾನಿ ಮಾಡಿದನೆಂದೂ, ಕೆಳದಿ ದೊರೆಯು ಆ ಸೇನಾನಿಯು ಹಿಂದೆಗೆಯುವಂತೆ ಮಾಡಿದನೆಂದೂ (ಬಹುಶಃ ಸೆಣಸಾಡಿ) ಗೊತ್ತಾಗುತ್ತದೆ (ಉ.ಉ. 38–39).

ಈ ವೆಂಕಟರಾಯನು ಇಚಲಕರಂಜಿಯ ವೆಂಕಟರಾವ್ ಘೋರ್ಪಡೆಯೇ ಇರಬೇಕು. ಬೆಸ್ಸಿನ್ ದುರ್ಗವನ್ನು ಗೆದ್ದುಕೊಂಡ ನಂತರ ಗೋವೆ (ಗೋಮಾಂತಪುರಿ–ಸುರಭಾಪುರ)ಯನ್ನು ಅವನು ಸುಲಿದಿದ್ದ ವಿಚಾರ ಅನ್ಯ ಮೂಲಗಳಿಂದ ಗೊತ್ತಾಗುತ್ತದೆ. ಕುಂಬಸೆಯು ಇಂದಿನ ಕುಂದಾಪುರ ತಾಲೂಕಿನ ಕುಂಭಾಶಿ ಅಥವಾ ಕುಂಭಕಾಶಿಯಲ್ಲದೆ ಬೇರಲ್ಲ.

ಪೇಶ್ವೆ ಬಾಳಾಜಿ (ನಾನಾ) ರಾಯನ ಕಾಲದಲ್ಲಿ ಪೇಶ್ವೆಯೂ ಶಾಹುರಾಜನೂ ಕೆಳದಿಯ ವಿರುದ್ಧ ಅನೇಕ ಬಾರಿ ದಂಡು ಕಳುಹಿಸಿದರು. ರಕ್ತಾಕ್ಷಿಯಲ್ಲಿ (1744) ನಡೆದ 'ಬಾಪೂರಾಯ' (ಬಾಬೂಜಿ ನಾಯಕ)ನ ದಂಡಯಾತ್ರೆ ಮೊದಲಿನದು. (ಉ.ಉ. XI 39–4.) ಸಾಗರದಲ್ಲಿ ಬೀಡುಬಿಟ್ಟ ಅವನನ್ನು ಬಂಗಿ ನರಸಿಂಗರಾಯನನ್ನು ಮಾಧ್ಯಸ್ಥಿಕೆಗೆ ಕಳುಹಿಸಿ ಹಿಂದೆ ಕಳುಹಿಸಿಕೊಡಲಾಯಿತು. ಈ ಕಾಲಕ್ಕೆ ಕೆಳದಿಯವರು ನಿಜಾಮನ ಜೊತೆ ಸ್ನೇಹ ಬೆಳೆಸಿರಬೇಕೆಂದು ಪೇಶ್ವಾ ದಫ್ತರ್‌ನಲ್ಲಿನ ಒಂದು ಪತ್ರ ತಿಳಿಸುತ್ತದೆ. ಪ್ರಭವ (1747)ದಲ್ಲಿ "ನಾನಾಜಿರಾಯನ ಸೋದರ" ಸದಾಶಿವರಾಯ ಕೆಳದಿಯ ಮೇಲೆ ದಂಡೆತ್ತಿ ಬಂದ. ಅವನನ್ನು ಹಿಂದೆರಳುವಂತೆ ಮನಒಲಿಸಲಾಯಿತು (ಉ.ಉ. XI. 41–42). ಅಂಗೀರಸ ಸಂವತ್ಸರದ ಫಾಲ್ಗುಣದಲ್ಲೂ (1753) ಭಾವ ಸಂವತ್ಸರದ ಚೈತ್ರದಲ್ಲೂ (1754) ನಾನಾರಾವ್ ಪೇಶ್ವೆಯು ಬಿದನೂರನ್ನು ಆಕ್ರಮಿಸಲು ಆತನನ್ನು "ನಯ ಭಯ ಧನ ಸಂಧಾನದ"

ಹಿಂದೆಗೆಸಲಾಯಿತು (ಉ.ಉ. XI 43–44). ಈ ರೀತಿ "ಅಡಿಗಡಿಗೆ" ಮರಾಠರ ಹಾವಳಿಯು ರಾಜ್ಯವನ್ನು ತೊಂದರೆಗೀಡುಮಾಡಿತೆಂದು ಲಿಂಗಣ್ಣ ಕವಿ ತಿಳಿಸಿದ್ದಾನೆ (ಉ.ಉ XI 43-45).

ಯುವ ಸಂವತ್ಸರ (1754)ದಲ್ಲಿ ಮಾಧೋಜಿ ಪುರಂಧರೆ ಇಕ್ಕೇರಿಯನ್ನು ಆಕ್ರಮಿಸಿದ. ಆದರೆ ಅವನು ತನ್ನ ದಾಳಿಯನ್ನು ಬೇಗನೇ ಹಿಂದಗೆದ (ಉ, ಉ 69-70). ಪುರಂಧರೆ ಹಾಗೂ ಮರಾಠರ ತೋಫಿನ ವಿಭಾಗದ ಪ್ರಮುಖ ಮುಜಾಫರ್‌ಖಾನ್ ಗಾರ್ದಿ ಇವರ ನಡುವಣ ಭಿನ್ನಾಭಿಪ್ರಾಯವೇ ಪುರಂಧರೆಯ ಈ ಪಲಾಯನಕ್ಕೆ ಕಾರಣ (ಕಿನ್‌ಕೇಡ್ ಮತ್ತು ಪಾರಸ್ನಿಸ್, ಎ ಹಿಸ್ಟರಿ ಆಫ್ ದಿ ಮರಾಠಾ ಪೀಪಲ್ III ಪುಟ 34) ಧಾತು ಸಂವತ್ಸರದಲ್ಲಿ (1755) ಪೇಶ್ವೆಯ ಆಜ್ಞೆಯಂತೆ ಗೋಪಾಲರಾವ್ ಪಟವರ್ಧನ್ ಕೆಳದಿಗೆ ಬರಲು ಬಸವಪ್ಪ ನಾಯಕನ ಉತ್ತರಾಧಿಕಾರಿಯು ಸಂಧಿಪ್ರಸ್ತಾವ ಮಾಡಿ ಕಪ್ಪವಿತ್ತ (ಕೆ. ವಿ. XI 75-79) ಹದಿನೆಂಟನೆಯ ಶತಕದ ಮಧ್ಯಭಾಗದಲ್ಲಿ ಮರಾಠರ ದಂಡಯಾತ್ರೆಗಳು ಒಂದು ವಾರ್ಷಿಕ ಕ್ರಮವಾಗಿ ಮುಂದುವರಿಯುವಂತೆ ಕಂಡು ಬಂತು. ಬಾಳಾಜಿರಾವ್ ಪೇಶ್ವೆಯ ಮೂರನೆಯ ಕರ್ನಾಟಕ ದಂಡಯಾತ್ರೆಯ ಕಾಲಕ್ಕೆ ಸವಣೂರನ್ನು ಗೆದ್ದುಕೊಂಡ ನಂತರ ಆತನು ಕೆಳದಿಗೂ ದಂಡು ತಂದು ನಾಯಕನಿಂದ 12 ಲಕ್ಷ ರೂಪಾಯಿ ಕಪ್ಪ ಸಂಗ್ರಹಿಸಿದ. (ಸರ್ ದೇಸಾಯಿ, ಎ ನ್ಯೂ ಹಿಸ್ಟರಿ ಆಫ್ ದಿ ಮರಾಠಾಸ್ II ಪುಟ 343).

ಕೆಳದಿಯ ಕೊನೆಯ ರಾಣಿ ವೀರಮ್ಮಾಜಿಯ ಕಾಲದಲ್ಲಿ (1757-63) ಮರಾಠರು ಕೆಳದಿಯ ಮೇಲೆ ಹೊಂದಿದ್ದ ಆಧಿಪತ್ಯವನ್ನು ದೂರೀಕರಿಸಲು ವಿಶೇಷ ಪ್ರಯತ್ನಗಳಾದುವು. ಏಕೆಂದರೆ, ಮರಾಠರ ಈ ಸ್ಥಾನಮಾನವು ಕೆಳದಿಯ ದೊರೆಗಳಿಗೆ ತೀರಾ ತುಟ್ಟಿಯದಾಗಿ ಪರಿಣಮಿಸತೊಡಗಿತ್ತು. ಪೇಶ್ವೆಗೆ ಕೊಡಬೇಕಾದ ಕಪ್ಪವನ್ನು ರಾಣಿಯು ಬಹಳದಿನ ಕೊಡಲಿಲ್ಲ. ಪೇಶ್ವೆಯ ದಂಡಾಧಿಕಾರಿ ಬಳವಂತರಾವ್ ಮೆಹೆಂದಳೆ ರಾಣಿಗೆ ಬರೆದ ಒಂದು ಪತ್ರ ಅವಳನ್ನು ಹೀಗೆ ಬೆದರಿಸಿದೆ: "ತಡಮಾಡದೆ ಕಪ್ಪವನ್ನು ಸಲ್ಲಿಸಬೇಕು. ಸಕಾಲದಲ್ಲಿ ಕಪ್ಪ ನೀಡಿದರೆ ನೀವು ಉಳಿಯುವಿರಿ. ಇಲ್ಲವಾದರೆ ನಿಮ್ಮ ರಾಜ್ಯವು ಧ್ವಂಸವಾಗುವುದು" ("ಸಿಲೆಕ್ಷನ್ಸ್ ಫ್ರಂ ಪೇಶ್ವಾ ದಫ್ತರ್ xxxvii ಕ್ರ. 193). ರಾಣಿಯು ಪುಣೆಯ ದರ್ಬಾರಿನ ಅನುಮತಿಯಿಲ್ಲದೆ ದತ್ತಕ ಪಡೆದುದೂ ಬಸವಲಿಂಗಪ್ಪ ಎಂಬ ಮಂತ್ರಿಯನ್ನು ಬರ್ತರ್ಫ್ ಮಾಡಿದುದೂ ತಪ್ಪೆಂದು ಪತ್ರ ತಿಳಿಸುತ್ತದೆ. ರಾಣಿಯು ಮರಾಠರ ವಿರುದ್ಧ ಚಿತ್ರದುರ್ಗದವರ ಜೊತೆ ಸ್ನೇಹ ಬೆಳೆಸಿದ್ದಳೆಂದೂ ದಫ್ತರ್‌ನಲ್ಲಿನ ಕೆಲವು ಪತ್ರಗಳು ಸೂಚಿಸುತ್ತವೆ.

ಮರಾಠರು ಮಿರಜೆ (ಮಿರ್ಜಾನ್)ಯನ್ನು ಮುತ್ತಿದ್ದರೆಂದೂ ರಾಣಿ ಅವರನ್ನು ಹೊಡೆದಟ್ಟಿದ್ದಳೆಂದೂ **ಕೆಳದಿನೃಪವಿಜಯಂ** ತಿಳಿಸುತ್ತದೆ. (xii 10). ಬಳವಂತ ರಾವ್

ಮೇಹಂದಳೆ ಮಿರ್ಜಾನಗಡವನ್ನು ಮುತ್ತಿದ್ದ, ರಾಣಿ ಕಪ್ಪ ನೀಡಿ ಅವನ ಮುತ್ತಿಗೆಯನ್ನು ಎಬ್ಬಿಸಬೇಕಾಗಿ ಬಂತು, ಎಂದು ಮರಾಠಿ ಮೂಲಗಳು ತಿಳಿಸುತ್ತವೆ. (ಸಿ.ಪೇ.ದ, xxxviii 214) ಈ ಘಟನೆಯು 1758 ರಲ್ಲಿ ನಡೆಯಿತು. ಕೆಳದಿಯು ಮರಾಠರಿಗೆ ಹದಿನೈದುವರೆ ಲಕ್ಷ ರೂ. ಕಪ್ಪ ಹಾಗೂ ಮಿರ್ಜಾನಗಡ ಹಾಗೂ ಸುತ್ತಲ ಪ್ರದೇಶಗಳಿಗಾಗಿ ಮೂರುವರೆ ಲಕ್ಷ ರೂ. ಗಳ ಛಾಪಾಪತ್ರ ನೀಡಬೇಕಾಗಿ ಬಂತೆಂದು ಅದೇ ಪತ್ರ ಹೇಳುತ್ತದೆ,

ಈ ಘಟನೆಯ ನಂತರ ಮರಾಠರ ಯಾವುದೇ ಚಟುವಟಿಕೆಯ ವಿಚಾರ ಕನ್ನಡ ಮೂಲದಿಂದ ತಿಳಿಯುವುದಿಲ್ಲ. ಪಾಣಿಪತ್ ಕದನ (1761)ದಲ್ಲಿ ಮರಾಠರಿಗೆ ಆದ ಭಾರೀ ಕಷ್ಟನಷ್ಟದ ಪರಿಸ್ಥಿತಿಯ ಲಾಭಪಡೆದು ಹೈದರ್ ಆಲಿಯು ಚಿತ್ರದುರ್ಗದ ನಾಯಕರ ನೆರವಿನಿಂದ ಬಿದನೂರನ್ನು 1763ರಲ್ಲಿ ಗೆದ್ದುಕೊಂಡು ರಾಣಿಯನ್ನು ಬಂಧಿಸಿದ. ಕೆಳದಿ ರಾಜ್ಯವು ಹೈದರನ ವಶಕ್ಕೆ ಬಂದು ಮೈಸೂರು ರಾಜ್ಯದಲ್ಲಿ ಸೇರ್ಪಡೆಯಾಯಿತು. ತನ್ನ ಆಶ್ರಿತ ರಾಜ್ಯವೊಂದರ ನೆರವಿಗೆ ಮರಾಠರು ಬಾರದಾದರು. ಬಿದನೂರನ್ನು ವಶಪಡಿಸಿಕೊಂಡ ಹೈದರ್ ಮುಂದೆ ಮರಾಠರ ಆಶ್ರಿತ ರಾಜ್ಯಗಳಾದ ಸೋದೆ, ಚಿತ್ರದುರ್ಗಗಳನ್ನೂ ಗೆದ್ದುಕೊಂಡ.

ಕೆಳದಿಗೆ ಮರಾಠರು ನೀಡಿದ ಏಕಮಾತ್ರ ನೆರವೆಂದರೆ, ರಾಣಿ ವೀರಮ್ಮಾಜಿ ಮತ್ತು ಅವಳ ದತ್ತಪುತ್ರನನ್ನು ಮಧುಗಿರಿ ಕೋಟೆಯ ಕಾರಾಗಾರದಿಂದ 1767 ರಲ್ಲಿ ಬಿಡುಗಡೆಮಾಡಿದುದು. ಪುಣೆಗೆ ಹೋಗುತ್ತಿರುವಾಗ ದಾರಿಯಲ್ಲಿ ರಾಣಿ ವೀರಮ್ಮಾಜಿ ತೀರಿಕೊಂಡಳು.

(ಮುಂಬೈ ವಿಶ್ವವಿದ್ಯಾಲಯವು 1971 ರ ನವಂಬರದಲ್ಲಿ ಏರ್ಪಡಿಸಿದ ಮರಾಠಾ ಇತಿಹಾಸ ವಿಚಾರಸಂಕಿರಣದಲ್ಲಿ ಸಾದರಪಡಿಸಿದ ಪ್ರಬಂಧ.)

— x —

೫ ಬಾರಕೂರಿನಲ್ಲಿ ಹಿಂಗುಳಾ

ಶ್ರೀಮತಿ ಲೀಲಾ ಭಟ್, ಉಡುಪಿ

ದಕ್ಷಿಣ ಕನ್ನಡದ ನೂರಾರು ಶಕ್ತಿ ಸ್ಥಾನಗಳಲ್ಲಿ ಹಿಂಗುಳಾ ದೇವಿಯ ಸ್ಥಾನವೂ ಒಂದಿದ್ದಿತೆಂದರೆ ಯಾರಿಗೂ ಅಚ್ಚರಿಯಾಗದಿರದು. ಈ ದೇವಿಯ ಕುರಿತಾಗಿ ಉತ್ತರ ಭಾರತದಲ್ಲಿ ದೊರಕುವಷ್ಟು ಮಾಹಿತಿ ದಕ್ಷಿಣ ಭಾರತದಲ್ಲಿ, ಅದರಲ್ಲೂ ದಕ್ಷಿಣ ಕನ್ನಡದಲ್ಲಿ ದೊರೆಯದು. ಇಲ್ಲೆಲ್ಲ ಅವಳದು ಕೇಳಿ ಅರಿಯದ ಹೆಸರು. ಆದರೆ ಹಿಂಗುಳಾ ಎಂಬ ಹೆಸರಿನ ದೇವಿಯ ಗುಡಿಯೊಂದು ಪಂಚಲಿಂಗೇಶ್ವರ ದೇವಾಲಯದ ಎದುರುಗಡೆ, ಕೋಟೆಕೇರಿಯ ಎಡತಿರುವಿನಲ್ಲಿ 'ಸಿದ್ಧರಪದ' ಬಾವಿಯ ನಿವೇಶನದಲ್ಲೇ ಇದ್ದಿತೆಂದು ಬಾರಕೂರಿನ ಭೂಪಟದಲ್ಲಿ ಡಾ। ಗುರುರಾಜ ಭಟ್ಟರಿಂದ ಗುರುತಿಸಲ್ಪಟ್ಟಿದೆ. ಇದಕ್ಕೆ ಮೂಕ ಸಾಕ್ಷಿಗಳಾಗಿ ಗುಡಿಯ ಹಾಳುಬಿದ್ದ ಗೋಡೆ, ಪಂಚಾಂಗ, ಆದರ ಮೇಲಿರಿಸಿದ ಅಂದವಾದ ನಾಗನ ಕಲ್ಲು ಮತ್ತು ದೇವಿಯ ಉಲ್ಲೇಖವಿರುವ ಶಾಸನವೂ ಇವೆ. ಬಾರಕೂರಿನ ಶ್ರೀ ಸತ್ಯಸಾಯಿಯ ಮಂದಿರದ ಅಂಗಳದಲ್ಲೇ ಎಂಬಂತೆ ಈ ಗುಡಿಯ ಅವಶೇಷಗಳನ್ನು ಕಾಣುತ್ತೇವೆ.

ಬಾರಕೂರಿನ ಹಳಬರು ಅವಳನ್ನು 'ಇಂಗುಳಾ', 'ಇಂಗುಳಮ್ಮ' ಎಂದು ಕರೆಯುತ್ತಿದ್ದರು. ಭಿನ್ನವಾದ ಅವಳ ವಿಗ್ರಹವನ್ನು ಸುಮಾರು 40 ವರ್ಷಗಳ ಹಿಂದೆ ಕಂಡವರಿದ್ದಾರೆ. ಅದನ್ನು ಗೂಟವಾಗಿ ಮಾಡಿಕೊಂಡು ಅದಕ್ಕೆ ದನಗಳನ್ನು ಕಟ್ಟುತ್ತಿದ್ದರೆಂದೂ, ಗುಡಿಯ ಜಾಗದಲ್ಲಿ 'ಖನನ' ನಡೆಸಿದರೆ ಅದು ಸಿಗಬಹುದೆಂದೂ ಹಿರಿಯರೊಬ್ಬರ ಅನಿಸಿಕೆ. ಈ ಗುಡಿಗೆ ಎದುರಾಗಿ ಕೆಲವೇ ಗಜಗಳಾಚೆ ದಕ್ಷಿಣ ದಿಕ್ಕಿಗೆ ಮುಖವಿದ್ದ ಭೈರವನ ಗುಡಿಯೂ ಓಕುಳಿ ಹೊಂಡದ ಹತ್ತಿರವೇ ಇದೆ. ಈ ಭೈರವನ ಕೈಂಕರ್ಯಕ್ಕೆ ನಿಯುಕ್ತರಾದವರು ಬಳೆಗಾರ ಜೋಗಿಗಳು. ಈ ಭೈರವನಿಗೆ ಪ್ರಾಣಿಬಲಿ ಮಾತ್ರವಲ್ಲ, ನರಬಲಿಯೂ ಕೊಡಲ್ಪಡುತ್ತಿತ್ತೆಂದು ಅದರ ಎದುರಿನ ಆತ್ಮಾರ್ಪಣದ ಶಿಲೆ ಹೇಳುತ್ತದೆ. ಇವೆರಡೂ ಗುಡಿಗಳು ನಾಥಪಂಥದ ಯೋಗಿಗಳಿಂದ ಸ್ಥಾಪಿಸಲ್ಪಟ್ಟಿರುವುದಾದಿ ತಿಳಿಯಲು ಬಲವಾದ ಆಧಾರಗಳಿವೆ.

ಸುಮಾರು ಕ್ರಿ. ಶ. 10 ಅಥವಾ 11ನೆಯ ಶತಮಾನದಲ್ಲಿ ನಾಥಪಂಥವು ಉತ್ತರಾಪಥದಿಂದ ದಕ್ಷಿಣ ಭಾರತವನ್ನು ಪ್ರವೇಶಿಸಿರಬೇಕು. ಮಂಗಳೂರಿನ ಕದಿರೆಯು ನಾಥಯೋಗಿಗಳ ಕೇಂದ್ರ ಮಠವಾಗಿದ್ದು ದಕ್ಷಿಣ ಕನ್ನಡದಲ್ಲೆಲ್ಲ ಆ ಮತದ ಬಿರುಸಿನ ಪ್ರಚಾರ ನಡೆದಿರಬೇಕು. ಗ್ರಾಮೀಣರಲ್ಲಿ ಬಳೆಗಾರರು, ಗಾರುಡಿಗಳು, ಕಿನ್ನರಿ ವಾದಕರು, ಡೊಂಬರಾಟದವರು, ಚಾಪೆ ಹೆಣೆವವರು, ನೇಯ್ಗೆಯವರು ಜೋಗಿಗಳೆಂಬ ಹೆಸರಿನಿಂದ ಮತಾಂತರಗೊಂಡರು. ಈಗಲೂ ದಕ್ಷಿಣ ಕನ್ನಡದಲ್ಲಿ ಕಿಂದರಿ ಜೋಗಿ ಬಳೆಗಾರ ಜೋಗಿ ಮತ್ತು ತುಳು ಜೋಗಿಗಳೆಂಬ ಮೂರು ವರ್ಗಗಳಿವೆ. ಮತಾಂತರಗೊಂಡ ಜೋಗಿಗಳಿಗೆ,

…ನೆಯ ಮಠ, ಕದರಿ ಮಠ ಇಲ್ಲಿವೆ. ಪಿಟ್ಲದ ಮಠದ ಮಹಂತರು ಜನರವರ ವರ್ಗಕ್ಕನು…ರವಾಗಿ ದೀಕ್ಷೆ ಕೊಟ್ಟು ಉಪನಯನ ಸಂಸ್ಕಾರ ಮಠದಲ್ಲೇ ನಡೆಸುತ್ತಿದ್ದರು. …ವರನ್ನು ಭೈರವ, ಕಾಲಭೈರವ, ಅಮ್ಮನವರು ಇಂಥ ಶೈವ, ಶಾಕ್ತ ದೇವತೆಗಳ ಉಪಾಸನೆಗೆ ನೇಮಿಸುತ್ತಿದ್ದರು. ಇವರು ಮಾಂಸಾಹಾರಿಗಳಾದುದರಿಂದ ಭೈರವ ಅಮ್ಮ…ನ ಗುಡಿಗಳಲ್ಲಿ ಪ್ರಾಣಿಬಲಿ ನೆರವೇರುತ್ತದೆ. ಬೌದ್ಧಮತದ ವಜ್ರಯಾನ ಶಾಖೆಯ…ದ ಪ್ರಭೇದವೇ ನಾಥಪಂಥವೆನಿಸಿದರೂ ಅದು ಪ್ರಾದೇಶಿಕ ದೇವ ದೈವಗಳ ಆರಾಧನೆ…ನ್ನಾಗಲೀ ಸಂಪ್ರದಾಯವನ್ನಾಗಲೀ ವಿರೋಧಿಸದೆ ಶೈವ, ಶಾಕ್ತ ಮತಗಳೊಳಗೆ ಅಂತ…ತವಾಗಿ ಪ್ರಸಾರಗೊಂಡಿತು, ಜಾನಪದ ಜೀವನದಲ್ಲಿ ಐಕ್ಯ, ಸಾಮರಸ್ಯ ತರುವರೇ…ದು ಸಹಜವಾದ ಮಾರ್ಗವಾಗಿತ್ತು.

ನಾಥ ಪಂಥದ ಕೇಂದ್ರ ಸಂಸ್ಥೆಗೆ ಮಠ, (ಟ) ಸ್ಥಲ, ಅಖಾಡಾ ಎಂದೂ ಹೇಳು…ದೆ. ಪ್ರಾಯಃ ಅಖಾಡಾ ಎಂಬುದರ ಕನ್ನಡ ರೂಪ 'ಗರಡಿ'ಯನ್ನು ಕೋಟಿ ಚೆನ್ನಯರ…ಡಿಯ ಹೆಸರಿನ ತುಳುವರು ಉಳಿಸಿಕೊಂಡಿರಬೇಕು. ಆ ದೈವಗಳಿಗೂ ಜೋಗಿಪುರುಷ…ಬ 'ದೈವಕ್ಕೂ' ಬಿಡಿಸಲಾಗದ ನಂಟು, ಗರಡಿಯೊಳಗೆ ಸೇರಿಕೊಂಡ ಜೋಗಿಪುರುಷನ…ತ್ತ್ವ ಹಾಸ್ಯಾಸ್ಪದವಾದರೂ ಒಂದು ಕಾಲದಲ್ಲಿ ಗ್ರಾಮೀಣ ಜೀವನದಲ್ಲಿ ಬೆರೆತುಹೋದ…ಗಿ ಜನಗಳನ್ನು ಮರೆಯಲಾರೆವು. ಅವರ ಸಿದ್ಧಿಯ ಊಹಾಪೋಹಗಳು ಎಷ್ಟೋ…ಗಳಾಗಿವೆ. ಯೋಗ ಎಂಬ ಶಬ್ದವೇ ಕುಳುವಿನಲ್ಲಿ 'ಜೋಗಿ' (ದರ್ಶನ) ಬರುವುದು…ರೂಪಾಂತರ ಹೊಂದಿರಬಹುದು. ಹಾಗೆಯೇ ಸ್ಥಳ ಅಥವಾ ಅಸ್ಥಲ ಎಂಬುದನ್ನೂ…ರಕೂರಿನ 'ತಾಯಿಸ್ಥಲ'ದ ಉಲ್ಲೇಖದಿಂದ ಅರ್ಥವಿಸಬಹುದು.

ಕ್ರಿ. ಶ. 1372ರ ಕೋಟೇಶ್ವರದ ಶಾಸನದಲ್ಲಿ ಬಾರಕೂರಿನ ಭೃಂಗಿನಾಥ. ನಂದಿ…ದ. ವೀರಭದ್ರದೇವನೆಂಬ ಬಾರಕೂರು ತಾಯಿಸ್ಥಲದ ಮಹಂತ ಮತ್ತು ಗಣಕುಮಾರ…ದೆ, ಕೋಟೇಶ್ವರದ ದೇವಾಲಯದ ಉಭಯ ಜಂಗಮರನ್ನು ಉಣಬಡಿಸಲು ಬಿಟ್ಟ…ನ್ನುವುದರಿಂದ ಬಾರಕೂರಿನಲ್ಲಿ ತಾಯಿಸ್ಥಲ, ಬೇರಾವುದೂ ಆಗಿರದೆ ಹಿಂಗಾಳೇ…ವೇ ಆಗಿರಬೇಕೆಂದು ತೋರುತ್ತದೆ, ಅದರ ಮಹಂತನಾಗಿ ವೀರಭದ್ರದೇವನೆಂಬವ…ಇದ್ದನೆಂದೂ ಭಾವಿಸಬಹುದು. ಮಹಂತನ ಕರ್ತವ್ಯಗಳಲ್ಲಿ ಮಠವನ್ನು ನೋಡಿ…ಕೊಳ್ಳುವುದು, ಆರಾಧನೆಗೆ ಏರ್ಪಾಟು ಮಾಡುವುದು, ಚಿಕ್ಕ ಗುಡಿಗಳಿಗೆ ಪೂಜಾರಿಗಳನ್ನು…ಮಿಸುವುದೂ ಇತ್ಯಾದಿ ಸೇರಿರುತ್ತದೆ. ಮಹಂತ ವೀರಭದ್ರನಿಗಿಂತ ಹಿಂದೆ ಹಲವು…ಹಂತರು ಆಗಿಹೋಗಿರಬಹುದು. ಮಹಂತನು ತಾನೇ ತಾಯಿಸ್ಥಲದ ಆರಾಧನೆ…ಯನ್ನು ಭೈರವ ಮುಂತಾದ ಗುಡಿಗಳಿಗೆ ಮತಾಂತರಗೊಂಡ ಬಳಿಗಾರರೇ ಮೊದಲಾದ…ಗಳನ್ನು ನೇಮಕ ಮಾಡುತ್ತಿದ್ದಿರಬಹುದು.

ಬಾರಕೂರನ್ನು ನರಸಿಂಹದೇವ ಒಡೆಯರು ಆಳುತ್ತಿದ್ದ ಕಾಲದ ಶಿಲಾಲೇಖ—

ಕ್ರಿ. ಶ. 1425 A.R. No. 179; 1901 ೧೩೪೨ ಬಾರಕೂರಿನ ಶಾಸನ: ಕ್ರೋಧಿ ಘಾ ೭೧೧ ಶು ... ಚತುಸ್ಸಮುದ್ರಾಧಿಪತಿ ದೇವರಾಯ .. ಬಾರಕೂರು ರಾಜ್ಯವನ್ನು ನರಸಿಂಹದೇವ ವೊಡೆಯರು . ..... ಕೋಟೆಕೇರಿಯ ಮಾರ್ಕಂಡೇಶ್ವರ ಸಂನ್ನಿಧಾಯಲ್ಲಿ ಹಿಂಗುಳೀ ದೇವಿಯವರ ದೇವಸ್ಥಾನಕ್ಕೆ ನಡಪಕಟ್ಟಳೆಯ ಧರ್ಮ ಬಳಮನ್ನ ಒಡೆಯರ ತೋಟದೊಳಗಣ ಓಲೆಯ ಕಾಜಿರ ಮನೆ... ಶಮ ಸೆಟ್ಟಿತಿ 21 ಬಲ್ಲೆಯ ಸೆಟ್ಟಿಯ ಮಗ ದಕ್ಕತನ ಬಳಿಯ ಮಾಣಿಸೆಟಿ... ಕೋಟೆಯ ಕೇರಿಯ ಸೆಟ್ಟಿಕಾಜಿರು ತಾಳುಮಪ್ಪರಸರು ಸಂದ ಗಿರಿ ಸೆಟ್ಟಿಯರು ಸಿರಿಸೆಟ್ಟಿಯರು ರತುನ ಸೆಟ್ಟಿಯರು ಯೀ ನಾಲ್ವರು ಸೆಟ್ಟಿಕಾಜಿರವೊಪ.. ಹಿಂಗುಳಿದೇವಿಯ ಉಲ್ಲೇಖವಿರುವ ಈ ಶಾಸನವೂ ತಾಯಿಸ್ಥಲದ ಉಲ್ಲೇಖವಿರುವ ಕ್ರಿ. ಶ. 1372ರ ಕೋಟೇಶ್ವರದ ಶಾಸನವೂ ಈ ದೇಗುಲವು ನಾಥಪಂಥದ ಪ್ರಾಮುಖ್ಯವಾದ ದೇಗುಲವಾಗಿತ್ತೆಂದೂ 15ನೆ ಶ.ದಲ್ಲಿ ಊರ್ಜಿತಾವಸ್ಥೆಯಲ್ಲಿದ್ದಿರಬೇಕೆಂದೂ ಸೂಚಿತವಾಗುತ್ತದೆ.

ಪೌರಾಣಿಕವಾಗಿ 'ಹಿಂಗುಳಾ' ಭಾರತದ 51 ಶಕ್ತಿಪೀಠಗಳಲ್ಲಿ ಮೊದಲನೆಯದು. ಹಿಂಗುಳಾಯಾ ಮಹಾಸ್ಥಾನಂ ಎಂದು ದೇವಿ ಭಾಗವತದ ಸಪ್ತಮಸ್ಕಂಧ 38ನೇ ಅಧ್ಯಾಯದಲ್ಲಿದೆ, ಕೃಷ್ಣಾನಂದ ಆಗಮ ವಾಗೀಶ (ನವದ್ವೀಪ) (ಕ್ರಿ. ಶ. 1480) ಇವರ ಪೀಠನಿರ್ಣಯ ಗ್ರಂಥವಂತೆ ಭಾರತದಲ್ಲಿ 51 ಶಕ್ತಿಪೀಠಗಳಿವೆಯೆಂದು The Sakta Pithas by D. C. Sarkar ಗ್ರಂಥವು ತಿಳಿಸುತ್ತದೆ. ದಕ್ಷಯಜ್ಞದಲ್ಲಿ ಸುಟ್ಟುಹೋದ ಸತಿಯ ಪ್ರೇತವನ್ನು ಹೊತ್ತು ಉನ್ಮತ್ತನಂತೆ ಅಲೆಯುತ್ತಿರುವ ಶಿವನ ಕೈಯಿಂದ ಪ್ರೇತವನ್ನಗಲಿಸಲು ಬ್ರಹ್ಮ ವಿಷ್ಣುಗಳು ಅದನ್ನು ಒಡೆದು ಚೂರಾಗಿಸುತ್ತಾರೆ. ಸತಿಯ ಅಂಗಾಂಗಗಳು ಬಿದ್ದ ಸ್ಥಾನಗಳೆಲ್ಲ ಬಹುಮುಖ್ಯ ಶಾಕ್ತ ಪೀಠಗಳೆನಿಸಿದುವು. ತಂತ್ರದಲ್ಲಿ ಉಲ್ಲೇಖಿಸಿದ ಅಂಗಗಳ ವಿನ್ಯಾಸಕ್ರಮವನ್ನೇ ಇಲ್ಲಿ ಶಕ್ತಿಪೀಠವೆಂದು ಸಾಂಕೇತಿಕವಾಗಿ ಪರಿಗಣಿಸಿದ್ದಾರೆ. ಪ್ರಾಮುಖ್ಯ ಶಕ್ತಿಪೀಠಗಳಾದ ಜಾಲಂಧರ, ಒಡ್ಯಾಣ, ಕಾಶ್ಮೀರ, ಕಾಮಾಖ್ಯಾ ಮೊದಲಾದ 51 ಪೀಠಗಳಲ್ಲಿ ಹಿಂಗುಳಾ ಮೊದಲ ಪೀಠವೆಂಬುದೂ ಸತಿಯ ಹಣೆ ಅಥವಾ ಬ್ರಹ್ಮರಂಧ್ರ (ಮುಖವೆಂದೂ ಕೆಲವೆಡೆ ಹೇಳಿದೆ) ಬಿದ್ದ ಸ್ಥಳವೆಂದೂ ಪೌರಾಣಿಕವಾಗಿ ನಂಬಲಾಗಿದೆ. ಈ ದೇವಿಯನ್ನು ಕೊಟ್ಟಾರಿ, ಕೊಟ್ಟವಿ, ಕೊಟ್ಟಾರೀಶಾ ಎಂದು ಕೂಡಾ ಕರೆದಿದ್ದಾರೆ. ಅವಳಿಗೆ ಸಂಬಂಧಪಟ್ಟ ಭೈರವ ಅಥವಾ ಕ್ಷೇತ್ರಾಧೀಶನು ಭೀಮಲೋಚನ. ಇವಳನ್ನು ರಕ್ತದೇವತೆ (Red-goddess) ನಗ್ನದೇವತೆ ಎಂದೂ ಕೂಡಾ ಕರೆದುದರಿಂದ ಅಪರ್ಣಾ, ಪರ್ಣಶಬರಿ ಮೊದಲಾದ ಪ್ರಾಕೃತ ವನವಾಸಿನಿಯರ ವರ್ಗವಿರಲೂಬಹುದು ಎಂದು ಒಂದು ಊಹೆ. George W. Briggs ಎಂಬವರು ಬರೆದ 'Gorakhnath and Kanphat yogis' ಎಂಬ ಗ್ರಂಥದಲ್ಲಿ ನಾಥಪಂಥದ ಆಮೂಲಾಗ್ರ ಚರಿತ್ರೆಯನ್ನೂ ಬಿತ್ತರಿಸಿ, ಬಲೂಚಿಸ್ಥಾನದ ಅತಿ ದುರ್ಗಮವಾದ ಪ್ರದೇಶದಲ್ಲಿರುವ ಹಿಂಗುಳಾದೇವಿಯ ಮೂಲಸ್ಥಾನದ ವಿವರಗಳನ್ನು ಕೊಡಲಾಗಿದೆ.

ಈ ಪ್ರದೇಶಕ್ಕಿರುವ ಪೌರಾಣಿಕ ಮಹತ್ವದ ಬಗ್ಗೆ ಹಲವು ಕಥೆಗಳು ಪ್ರಚಲಿತ ವಿವೆ. ರಾವಣನನ್ನು ಕೊಂದ ಪಾಪಪರಿಹಾರಕ್ಕಾಗಿ ಶ್ರೀ ರಾಮಚಂದ್ರನು ಹಿಂಗಲಾಜ್‌ಗೆ ಹೋಗಿದ್ದನು. ಹೋಗುವ ದಾರಿಯಲ್ಲಿ ಸಿಕ್ಕುವ ಆಶಾಪುರಿ ದೇವಿಯ ಗುಡಿಯಲ್ಲಿ ಅವನು ಉಪಯೋಗಿಸಿದ ದಂಡ ಈಗಲೂ ಇದೆ ಎಂದು ಪ್ರತೀತಿ, ಇತಿಹಾಸ ಕಾಲದಲ್ಲಿ ಮುಸ್ಲಿಮರು ಆ ಪ್ರದೇಶದ ಹಿಂದುಗಳನ್ನು ಹಿಂಸಿಸುತ್ತಿರುವಾಗ ದೇವಿಯು ಸಿಂಹವಾಹಿನಿಯಾಗಿ ಅವರ ಕನಸಿನಲ್ಲಿ ಕಾಣಿಸಿಕೊಂಡು ಮುಸಲ್ಮಾನ ಫಕೀರರನ್ನು ಕೊಂದು ಹಾಕಿದಳು ಎಂದೊಂದು ಐತಿಹ್ಯ. ಮ್ಲೇಂಛ ಹನನದ ನಂತರವೇ ಅವಳು ಹಿಂಗಲಾಜ್‌ನಲ್ಲಿ ನೆಲಸಿ ಅದೇ ಹೆಸರನ್ನು ಪಡೆದಳಂತೆ.

ಹಿಂಗಲಾಜ್ ವಾಯುವ್ಯ ಸರಹದ್ದಿನಲ್ಲಿರುವ ಹಿಂದೂ ತೀರ್ಥಕ್ಷೇತ್ರಗಳಲ್ಲಿ ಕೊನೆಯದು, ನಾಥಪಂಥದ ಯೋಗಿಗಳಿಗೆ ಇದಕ್ಕಿಂತ ಪವಿತ್ರವಾದ ಕ್ಷೇತ್ರ ಬೇರೆ ಇಲ್ಲ. ಇದು ವಾಮಾಚಾರ, ಚಕ್ರಪೂಜೆಯ ಸ್ಥಾನ. ಇಲ್ಲಿ ದೇವಿಯನ್ನು ಹಿಂಗುದಾ, ಹಿಂಗಳಾ, ಹಿಂಗಲಾಜ್ ಎಂದು ಹಿಂದೂಗಳು, ಬೀಬಿ 'ನಾನಿ' ಎಂದು ಮುಸ್ಲಿಮರೂ ಕರೆಯುತ್ತಾರೆ. ಅವಳೇ ಕಾಳಿ, ಪಾರ್ವತಿ. ಮಾತಾ ಎಂದು ನಂಬುಗೆ. ಗಂಗೆಯಿಂದ ಯುಫ್ರಟೀಸ್ ವರೆಗೆ ಇವಳ ಕೀರ್ತಿ ಇದೆ, ಅಬ್ರಹಾಮನಿಗಿಂತ ಸಾವಿರ ವರ್ಷ ಹಿಂದಿನ Chaldean Nana ಎಂಬ ದೇವಿ ಇವಳೇ ಎಂದು ಕೂಡಾ ಚಾರಿತ್ರಿಕ ನಂಬಿಕೆ, ನಾಥಪಂಥವೇ ಭಾರತಕ್ಕೆ ಬಂದುದು ಹೊರಗಿನಿಂದೆಂಬ ವಾದಕ್ಕೆ ಇದು ಪುಷ್ಟಿ ಕೊಡುತ್ತದೆ, ಪಶ್ಚಿಮ ಹಿಂದೂಸ್ಥಾನದ ಕಾಡುಜನರು, ಮೂಲ ನಿವಾಸಿಗಳು ಇವಳ ಆರಾಧಕರು. ಸುಮಾರು 16ನೆಯ ಶ. ದ ವರೆಗೆ ನಾಥಪಂಥದ ಸಾಧುಗಳ ವಶವಿದ್ದ ಈ ಸ್ಥಾನವು ಅನಂತರ ಅತೀತ ಸಾಧುಗಳ ವಶವಾಯಿತು.

ಕರಾಚಿಯಿಂದ 150 ಮೈಲು ದೂರ ಮಕರಾನ್ ಕರಾವಳಿಯಲ್ಲಿ ದುರ್ಗಮವಾದ ಮರುಭೂಮಿಯನ್ನು ದಾಟಿ, ಜನವಸತಿ ಇಲ್ಲದ ಕಗ್ಗಾಡುಗಳನ್ನು ಹಾದು, ಬಿಸಿ ನೀರಿನ ಕುಂಡಗಳಲ್ಲಿ ತಮ್ಮ ಸತ್ಯ ಸತ್ವಗಳ ಪರೀಕ್ಷೆ ಕೊಟ್ಟು ಪವಿತ್ರಾತ್ಮರಾಗಿ, ಪರ್ವತಗಳಿಂದಾವೃತವಾದ ಕಣಿವೆಯಲ್ಲಿ, ರುದ್ರಭೀಕರವಾದ ತಾಣದಲ್ಲಿ ನೆಲಸಿದ ದೇವಿಯ ದರ್ಶನಕ್ಕೆ ಬೇಕಾದ ಅರ್ಹತೆಯನ್ನು ಸಂಪಾದಿಸುತ್ತಾರೆ.

ಗುಜರಾತಿನ ಸೌರಾಷ್ಟ್ರದ ಆಹೀರ್, ಭರವಾಡ್ ಎಂಬ ಬಿಗೆಲ್ಲ ಜಾತಿಗಳಿಗೂ. ಖಾರ್ವಿ. ಜೋಷಿ, ಸಲಾಟ್. (ಶಿಲ್ಪಿ) ಕೋಳಿ. ಭಣಸಾಲಿ, ಮೊದಲಾದ ನಿಮ್ನ ಜಾತಿಗಳವರಿಗೆ ಇವಳೇ ಕುಲದೇವಿ. ಪ್ರಭಾಸ, ವೇರಾವಳ್, ಮಾಂಗರೋಲ್, ಪೋರ್‌ಬಂದರ್, ಜಾಮ್‌ನಗರ ಮತ್ತು ಕಚ್-ಇಲ್ಲೆಲ್ಲ ಹಿಂಗುಳಾದೇವಾಲಯಗಳಿವೆ. ಬೊಂಬಾಯಿಯ ಬಳಿಯೂ ಎಲ್ಲೋ ಒಂದು ಗುಡಿ ಇರಬೇಕು. ಇಲ್ಲೆಲ್ಲ ದೇವಿಗೆ ಸಿಂಧೂರ, ಹರಕೆಯಾಗಿ

ಮುಖ, ಹುಬ್ಬು, ಕಿರೀಟ, ಪೀತಾಂಬರ ಅರ್ಪಿಸುತ್ತಾರೆ. ಆಶಾಪುರಿ ಎಂಬ ಬಹು ಪ್ರಚಾರದಲ್ಲಿರುವ ದೇವಿಯೂ ಹಿಂಗಲಾಜ್‌ನ ಒಂದು ಅವತಾರವೇ ಎಂದು ನಿರೂಪಿಸುವ ಒಂದು 'ದೋಹಾ' ಗುಜರಾತಿಯಲ್ಲಿದೆ. ಅದರಂತೆ ಬ್ರಾಹ್ಮಣನಾದ ಪರಶುರಾಮನು ಪೃಥ್ವಿಯನ್ನು ಕ್ಷತ್ರಿಯ ರಹಿತಳನ್ನಾಗಿ ಮಾಡುತ್ತಿರುವಾಗ ಹಿಂಗಲಾಜ್ ದೇವಿಯು ಅವರಲ್ಲಿ ಕಷ್ಟದಿಂದ ಪಾರಾಗಿಸುವಳೆಂಬ ಆಸೆಯನ್ನು ಮೂಡಿಸಿದುದರಿಂದ ಅವಳೇ ಆಶಾಪುರಿಯಾಗಿ (ಆಸೆ ಪೂರ್ತಿಮಾಡುವವಳು) ಜಾಡೇಜಾ ಕ್ಷತ್ರಿಯರ ಕುಲದೇವಿಯಾಗಿ ಆರಾಧಿಸಲ್ಪಡುತ್ತಾಳೆ. ಇವಳಿಗೆ ೪ ಕೈಗಳು-ಆಯುಧಗಳಾಗಿ ತ್ರಿಶೂಲ, ಢಾಲು, ಖಡ್ಗ, ಡಮರು ಕಮಲ ಇತ್ಯಾದಿ ಇವೆ ಎಂದು ಕಲ್ಪಿಸುತ್ತಾರೆ. ಆದರೆ ಹೆಚ್ಚಿನ ಕಡೆಗಳಲ್ಲಿ ಇವಳ ಮುಖವನ್ನಷ್ಟೇ ಇಟ್ಟು ಪಾದಗಳಿಗೆ ಪೂಜೆ ಸಲ್ಲಿಸುತ್ತಾರೆ. ನಮ್ಮಲ್ಲೂ ಮಾರಿಯಮ್ಮ, ಅಮ್ಮನವರು ಸ್ಥಾನಗಳಲ್ಲಿ ಈ ತರದ ಪೂಜೆ ನಡೆಯುತ್ತದೆ. ಕಚ್‌ನಲ್ಲಿ ಈ ದೇವಿಗೆ ಮಾಮಾಯಿ (ಮಹಾಮಾಯಿ, ಮಹಾತ್ಮಾಯಿ) ಎಂಬ ಹೆಸರು. ಮರುಭೂಮಿಯ ಸಂಕೇತವಾಗಿ ಒಂಟೆ ಇವಳ ವಾಹನ. ಬಾರಕೂರಿನ ಕಾಳಿಕಾಂಬಾ ದೇವಿಯ ಪೀಠದ ಮೇಲೆ ಒಂಟೆಯ ಚಿತ್ರವಿದ್ದುದನ್ನು ಗಮನಿಸಬೇಕು. ಜೋಗಿಗಳ ಪ್ರಭಾವ ಇಲ್ಲಿಯ ಶಿಲ್ಪಗಳ ಮೇಲೆ ಕಾಣಬಾರದೇನಿಲ್ಲ. ಗೊಂಡಾಲ್ ರಾಜವಂಶದವರು ಈ 'ಮಾಮಾಯಿ' ಸ್ವರೂಪವನ್ನು ಪೂಜಿಸುತ್ತಾರೆ. ಕೆಲವೆಡೆ ಖಡ್ಗ, ತ್ರಿಶೂಲ, ಕಮಲ, ಢಾಲು ಅವಳ ನಾಲ್ಕು ಕೈಗಳಲ್ಲಿರುತ್ತವೆ.

ದೇವಿಯ ಈ ಬಹುರೂಪ, ನಾಮ, ಆಕೃತಿಗಳ ಅಧ್ಯಯನದಿಂದ ಹಿಂಗುಳಾ ದೇವಿಯ ಮೂರ್ತಿ ಕಲ್ಪನೆಮಾಡಬೇಕಾಗಿದೆ.

ಕರಾಚಿಯಿಂದ 150 ಮೈಲು ದೂರದ ದುರ್ಗಮವಾದ ಯಾತ್ರೆಯನ್ನು (1861 ರಲ್ಲಿ) ಕೈಕೊಂಡ Goldsmid ಎಂಬವನು ಹಿಂಗುಳಾ ದೇವಿಯನ್ನು ಕಂಡ ಸನ್ನಿವೇಶವನ್ನು ರೋಮಾಂಚಕಾರಿಯಾಗಿ ವರ್ಣಿಸಿದ್ದಾನೆ. ಬಿಸಿನೀರ ಕುಂಡಗಳನ್ನೂ ಮರುಭೂಮಿಯನ್ನೂ ದಾಟಿ, ಅಘೋರ್ ನದಿಯ ಗುಂಟ ಸಾಗುತ್ತಿರುವಾಗ ಒಂದು ಬೆಟ್ಟದ ಸಣ್ಣ ಗುಹೆಯಂತಿರುವ ಸ್ಥಳವೇ ಬಲಿಸ್ಥಾನವೆಂದು ಕಂಡುಕೊಂಡನಂತೆ. ಆ ಪ್ರದೇಶವೆಲ್ಲ ರಕ್ತರಂಜಿತವಾಗಿದ್ದುದಲ್ಲದೆ, ಆಳವಾದ ಗವಿಯಲ್ಲಿ ನೆಲಸಿದ ದೇವಿಯನ್ನು ಸೇರುವ ಮಾರ್ಗವೆಲ್ಲ ರಕ್ತ ಬಳಿಯಲ್ಪಟ್ಟಿದ್ದಿತಂತೆ. ತೆವಳಿಕೊಂಡೇ ಕಣಿವೆಯ ಆಳಕ್ಕಿಳಿದು ದೇವಿಯ ದರ್ಶನ ಮಾಡುವುದೊಂದು ಸತ್ವಪರೀಕ್ಷೆಯಾಗಿದ್ದಿತಂತೆ. ಹಿಂಗಲಾಜ್‌ನಿಂದ ಬರುತ್ತಾ ದಾರಿಯಲ್ಲಿ ಪವಿತ್ರ ಕ್ಷೇತ್ರ, ಕುಂಡಗಳ ದರ್ಶನ ಮಾಡುತ್ತಾ ಕೋಟೇಶ್ವರದಲ್ಲಿ ಮುದ್ರೆಯನ್ನು ಒತ್ತಿಸಿಕೊಂಡು ಪುನಃ ಹಿಂಸೆಯವಾಗಿ ಮುಸ್ಲಿಮ ಪ್ರದೇಶದಿಂದ ಹೊರಬರುವ ರೋಮಾಂಚಕಾರಿ ಕಥನ ಯುರೋಪಿಯನ್ನರದು.

20ನೆ ಶತಮಾನದಲ್ಲಿ ಆ ಸ್ಥಳಗಳೆಲ್ಲ ಎಷ್ಟೋ ಬದಲಾಗಿರಬೇಕು. ಧಾಂಯಾ ಗ್ರಾಮದ ಅಹೀರ್ ಜಾತಿಯ ಮುದುಕರೊಬ್ಬರು 45 ವರ್ಷಗಳ ಹಿಂದೆ ಕೈಕೊಂಡ

ಯಾತ್ರೆಯ ಅನುಭವವನ್ನು ಈಶ್ವರಲಾಲ್ ಗೋವಿಂದಜೀ ಯಾಗ್ನಿಕ್ ಎಂಬ ನಿವೃತ್ತ ಅಧ್ಯಾಪಕರು ತಮ್ಮ ಬಂಧುಗಳಾದ ಉಡುಪಿಯ ಜಯಂತಿಲಾಲ್ ನಾನಾಲಾಲ್ ಪಾಂಡ್ಯರಿಗೆ ಒದಗಿಸಿ ಈ ಲೇಖನಕ್ಕೆ ಪರೋಕ್ಷವಾಗಿ ಸಹಾಯಮಾಡಿತ್ತರು. ಕರಾಚಿಯಲ್ಲಿ ದೊರಕುವ ಮಾರ್ಗದರ್ಶಕರ ನೆರವಿನಿಂದ ಹೊರಟ ಯಾತ್ರಿಕರು ತಮ್ಮ 40 ದಿನದ ಪಡಿಯನ್ನೂ ಬೇಕಾದಷ್ಟು ನೀರನ್ನೂ ತಾವೇ ಹೊತ್ತು ಸೋನಾಮಿಯಾನಿ, ಸೋಯಿನು ನಾಕೂರ್‌ಗಳೆಂಬ ತಾಣ್ಯಗಳಲ್ಲಿ ತಂಗಿ ಅಘೋರ್ ನದಿಯ ದಡದ ಮೇಲಿನ ಕಾಳಿಕಾ ದೇವಿಯನ್ನು ಸಂದರ್ಶಿಸಿ, ಪಶುಬಲಿ, ಮದಿರೆಗಳನ್ನು ಅರ್ಪಿಸಿ ಚಂದ್ರಕೋಶದ ಕುಂಡದ ಭಸ್ಮದ ಪಾಕದಂಥ ನೀರಿನಲ್ಲಿ ದೇವದರ್ಶನಕ್ಕಾಗಿ ಹರಕೆ ಸಲ್ಲಿಸಿ ಲಿಂಗ ರೂಪದಲ್ಲಿ ಅವಳನ್ನು ಕಾಣುತ್ತಾರೆ ಎಂದು ಹೇಳಿಕೆ. ದರ್ಶನಮಾಡಿದ ಪಾಪಿಗಳ ಪಾಪವನ್ನು ಕೆಲವೊಮ್ಮೆ ಸಹಯಾತ್ರಿಕರು ಹಂಚಿಕೊಳ್ಳುವ ವಿಚಿತ್ರ ಸಂಪ್ರದಾಯವಿದೆಯಂತೆ. ಮತ್ತೆ ಘೋರಕ್ ಅಮ್ಲಿಯನ್ನು ದಾಟಿ ಅನಿಲ ಪರ್ವತದ ಗುಹೆಯಲ್ಲಿ ಪ್ರಾಣದ ಪಣವನ್ನಿಟ್ಟು ಇಳಿದರೆ ಹಿಂಗುಳಾ ದೇವಿಯ ಮೂರ್ತಿಯನ್ನು ಕಣ್ಣಾರೆ ಕಾಣಬಹುದು. ಪೀಠದ ಮೇಲೆ 3 ಅಡಿ ಎತ್ತರದ ದ್ವಿಬಾಹು ಮೂರ್ತಿಯನ್ನು ಕಣ್ಣಾರೆ ಕಂಡುದನ್ನು ವರ್ಣಿಸಿದ್ದಾರೆ. ಎದುರಿನ ಪರ್ವತದ ಏರಿನ ಮೇಲೆ ಸಿಂಧೂರದಿಂದ ಸೂರ್ಯ ಚಂದ್ರರನ್ನು (ದೇವಿ, ಶಿವ ಸಂಕೇತ) ಹೇಗೆ ಬಿಡಿಸಿದರೆಂಬುದೇ ಯಾತ್ರಿಕರಿಗೆ ಬಗೆಹರಿಸಲಾಗದ ಸಮಸ್ಯೆ. ದೇವಿಗೆ ಬೆಲ್ಲ, ಗೋದಿಹಿಟ್ಟು, ತುಪ್ಪದಿಂದ ತಯಾರಿಸಿದ ಭಕ್ಷ್ಯವನ್ನು ಅರ್ಪಿಸಿ ಹಿಂದಕ್ಕೆ ಬರುತ್ತಾ ಕೋಟೇಶ್ವರವೆಂಬಲ್ಲಿ ನಾರಾಯಣ ಸರೋವರದಲ್ಲಿ ಸ್ನಾನ ಮುಗಿಸಿ ಮುದ್ರೆ ಒತ್ತಿಸಿಕೊಳ್ಳುತ್ತಾರಂತೆ, ಯೋನಿ ಮತ್ತು ಲಿಂಗದ ಸಂಕೇತ ಮಿಶ್ರಣಗೊಂಡ ತಾಂತ್ರಿಕ ಆಚಾರದ ತಪ್ತಮುದ್ರೆ ಅವರನ್ನು ಪುನಃ ಹಿಂದುಗಳನ್ನಾಗಿ ಪರಿವರ್ತಿಸುತ್ತದೆ ಎಂದು ಭಾವನೆ; ಅದಿಲ್ಲವಾದರೆ ಅವರು ಹಿಂದುವೂ ಅಲ್ಲ, ಮುಸ್ಲಿಮರೂ ಅಲ್ಲ.

ಇತಿಹಾಸಕ್ಕೆ ಪೂರಕವಾಗಿ ಯಾವುದೇ ಒಂದು ಸ್ಥಳದ ವಿಷಯವಾಗಿ ಕಟ್ಟುಕತೆ ಐತಿಹ್ಯ, ಸ್ಥಳಪುರಾಣಗಳು, ಪೂರ್ತಿ ಸತ್ಯಾಂಶವಿಲ್ಲದಿದ್ದರೂ ಕೆಲವಂಶವನ್ನು ಮಾಹಿತಿ ವಸ್ತುವಿಗೆ ಸೇರಿಸುತ್ತವೆ. ಅಂಥ ಕೆಲವಂಶ ಉತ್ತರ ಹಿಂದೂಸ್ಥಾನದ ಚಾರಣರ ಲಾವಣಿಯಿಂದ ದೊರೆಯುತ್ತದೆ. ನವದುರ್ಗೆಯರಿಗಿಂತ ಮುಂಚಿನವಳು ಈ ದೇವಿ. ಚಾರಣ ಜಾತಿಯಲ್ಲೇ ಹುಟ್ಟಿದವಳು. 7 ಮಂದಿ ಸಹೋದರಿಯರಲ್ಲಿ ಮೊದಲನೆಯವಳು. ಅವಳಿಗೆ ಅಲೌಕಿಕವಾದ ಉದ್ದುದ್ದ ಚಿನ್ನದ ಉಗುರುಗಳಿದ್ದುವು. ನಾಪಿತರಿಗೂ ಅವುಗಳನ್ನು ಕತ್ತರಿಸಲಾಗಲಿಲ್ಲ. ಆ ಊರ ರಾಜನ ಬಳಿಗೆ ಅವಳನ್ನು ಕೊಂಡು ಹೋದಾಗ ಆ ಸಹೋದರಿಯರ ಸುತ್ತಲೂ ಜಾಜ್ವಲ್ಯಮಾನವಾದ ಬೆಳಕನ್ನು ಕಂಡು, ಅದನ್ನು ಎದುರಿಸಲಾಗದೆ ರಾಜನು ದೇಶದಿಂದಲೇ ಓಡತೊಡಗಿದನು. ಸಪ್ತ ಸಹೋದರಿಯರು ಅವನ ಬೆನ್ನಟ್ಟಿದರು. ಸಾಗರತಟಕ್ಕೆ ಬಂದರು. ಹಿಂಗುಳಾ ಆ ಸಮುದ್ರವನ್ನು ಅಪ್ಪೋಷಣಗೈದು ಹಿಂದೂಸ್ಥಾನದ ವಾಯುವ್ಯ ಸಂಧಿಸ್ಥಾನ ಬಲೂಚಿಸ್ಥಾನದಲ್ಲಿ ನೆಲಸಿದಳು. ಕಥೆಯಲ್ಲಿನ ಸತ್ಯಾಂಶಕ್ಕಿಂತ ಪೌರಾಣಿಕವಾಗಿ ದೇವಿಯನ್ನು ಸಪ್ತ ಮಾತೃಕೆಯಲ್ಲಿ

ಒಬ್ಬಳೆಂದು ಪರಿಗಣಿಸಿದ ವಿಷಯ ಗಮನಿಸಬೇಕು. ಹಾಗೆಯೇ ಅನಾರ್ಯರು ಪೂಜಿಸುವ ಸ್ತ್ರೀ ಶಕ್ತಿಗಳೂ ಆರ್ಯರ ಶಕ್ತಿದೇವತೆಗಳಾಗಿ ಮಾರ್ಪಾಟಾಗಿವೆ. ಇದನ್ನು ನಿರೂಪಿಸುವ ಜಾನಪದ ಹಾಡುಗಳಿವೆ.

ಯೋಗಸಾಧನೆಯಲ್ಲಿ ಇಡಾ ಮತ್ತು ಪಿಂಗಳಾ ಎಂಬ ನಾಡಿಗಳ ವೈಶಿಷ್ಟ್ಯವಿದೆ. ಪಿಂಗಳಾ ಸೌರ್ಯ ಸಂಬಂಧವಾದುದು-ಹಿಂಗಳಾ ಅಥವಾ ಪಿಂಗಳಾ ಅಗ್ನಿದೇವತೆ ಎಂದು ಕೂಡಾ ಕರೆಯಲ್ಪಡುತ್ತಾಳೆ. ನಾಥ ಪಂಥದ ಯೋಗಿಗಳ ಅತಿರೇಕ ವರ್ತನೆಯೇ ಕಾರಣವಾಗಿ ಅದರ ದುರ್ಗತಿಯಾಗಿ ಕರ್ನಾಟಕದಲ್ಲಿ ಅದರ ಹೆಸರು ಅಳಿಸುತ್ತಿರುವಾಗಲೇ ಹಿಂಗುಳಾ ದೇವಿಯ ಗುಡಿ ಭಂಗವಾಗಿರಬೇಕು. ಇದಕ್ಕೆ ಮತ್ತವೂ, ರಾಜಕೀಯ ಅವ್ಯವಸ್ಥೆಯೂ ಕಾರಣವಾಗಿರಬಹುದು. ಹಿಂಗಲಾಜ್‌ನಲ್ಲಿ ಕೂಡಾ ಕೆಲವು ವರ್ಷದ ಹಿಂದೆ ಪಾಕಿಸ್ಥಾನದ ಕುಕರ್ಮಿಗಳು ಅವಳನ್ನು ಕೆಳಕ್ಕೆ ಕೆಡವಿದರೆಂದು ವದಂತಿ. ಆದರೂ ಪ್ರಸಿದ್ಧ ಡಕಾಯಿತ ಭಾಪಟ್ ಸುಮಾರು 10-12 ವರ್ಷಗಳ ಹಿಂದೆ ತನ್ನ ಗುಂಪಿನವರು ಪೋಲೀಸರೊಡನೆ ಹೋರಾಡಿ ಸತ್ತಾಗ, ಡಕಾಯಿತಿಗೆ ಕಷ್ಟವಾಗಿ ತನ್ನ ಪಾಪದ ಪ್ರಾಯಶ್ಚಿತ್ತಕ್ಕಾಗಿ ಹಿಂಗಲಾಜ್‌ಗೆ ಹೋಗುತ್ತಿರುವ ದಾರಿಯಲ್ಲಿ ಪಾಕಿಸ್ಥಾನದವರು ಅವನನ್ನು ಹಿಡಿದು ಮತಾಂತರಿಸಿದರು. ಒಂದು ಕಾಲದಲ್ಲಿ ಹಿಂದುಗಳಿಗೆ ಹಿಂಗಲಾಜ್ ಯಾತ್ರೆಯು, ಮುಸ್ಲಿಮರಿಗೆ ಮಕ್ಕಾ ಇದ್ದಂತೆ ಪವಿತ್ರವಾದಿತ್ತು. ಈಚೆಗೆ (1947ರ ನಂತರ) ಆ ಯಾತ್ರೆಗೆ ಜನಹೋಗುವುದು ಕಡಿಮೆ. ಹೀಗೆ ಹಲವಾರು ಅನುಭವ, ಕಥೆ, ಊಹನೆಗಳ ನೆರವಿನಿಂದ ಅವಳ ಮೂರ್ತಿ ಕಲ್ಪನೆ ಮಾಡಬಹುದು. ಬಾರಕೂರಿನ ಮೂರ್ತಿ ಎಂದಾದರೂ ಮಣ್ಣಿನಿಂದೆದ್ದು ಬಂದರೆ ಬಳಿಯಲ್ಲೇ ತ್ರಿಶೂಲವನ್ನಿರಿಸಿಕೊಂಡ ಅಭಯ ವರದ ಹಸ್ತಗಳಿಂದ ಸಿಂಹಲಾಂಛನದಿಂದ ಕೋಟದ ಅಮೃತೇಶ್ವರಿಯನ್ನು ಹೋಲುವಂತಿರಬಹುದೆಂದು ಯಾಕೆ ಕಲ್ಪನೆ ಓಡಿಸಬಾರದು? ಉತ್ತರದಲ್ಲಿದ್ದಂತೆ ದಕ್ಷಿಣದಲ್ಲೂ ಒಂದು ದೇವಿಯ ಸ್ಥಾನವನ್ನೂ, ಬಳಿಯಲ್ಲೇ ಕೋಟೇಶ್ವರವೆಂಬ ಊರು, ಪ್ರಸಿದ್ಧವಾದ ಕೆರೆಯನ್ನೂ ಕಟ್ಟಿಸಿ ನಾಥ ಪಂಥದ ಸಾಧುಗಳು ತೃಪ್ತರಾಗಿದ್ದಿರಬೇಕು. ಬಾರಕೂರಿಗೂ ಬಾರಾ ಪಂಥದ ಸಾಧುಗಳಿಗೂ ನಿಕಟ ಸಂಬಂಧವಿದ್ದುದರಿಂದ ಆ ಹೆಸರು ಆ ಊರಿಗೆ ಬಂದಿರಬಹುದು, ಇದರಲ್ಲಿ ಹೆಚ್ಚಿನ ಸಂಶೋಧನೆಗೆ ಅವಕಾಶವಿದೆ. × ×

('ಹಿಂಗಲಾಜ್ ಮಾತಾ' ವಿಷಯವಾಗಿ ಉತ್ಸಾಹದಿಂದ ವಿವರಗಳನ್ನು ಸಂಗ್ರಹಿಸಿ ಈ ಲೇಖನಕ್ಕೆ ನೆರವನ್ನಿತ್ತ-ಶ್ರೀ ದೇವೇಂದ್ರ ಕುಮಾರ್ ರಾಮ ಶಂಕರ್ ಮೆಹ್ತಾ, (ಗೋಂಡಾಲ್) ಶ್ರೀ ಮಣಿ ಭಾಯಿ ವೋರಾ (ಪೋರ್‌ಬಂದರ್) ಶ್ರೀ ಛೀನಾಭಾ ಪಟೇಲ್ (ಅಹಮ್ಮದಾಬಾದ್) ಪ್ರೊ. ಇಂದ್ರವದನ ಭಾ ಆಚಾರ್ಯ (ರಾಜಕೋಟ್) ಶ್ರೀ ಮಾಪಾದನ ಭಾ ರತ್ನುಭಾ ಗಢವಿ (ಜಾಮ್‌ನಗರ) ಶ್ರೀ ಜಯಸ್ವಾಲ ಭಾ ಪರಮಾರ (ರಾಜಕೋಟ್)-ಈ ಮಹಾಶಯರುಗಳಿಗೆ ಕೃತಜ್ಞತೆಗಳು. ಶ್ರೀ ಈಶ್ವರಲಾಲ್ ಗೋವಿಂದಜೀ ಯಾಗ್ನಿಕರನ್ನೂ, ಎಲ್ಲಕ್ಕಿಂತ ಹೆಚ್ಚಾಗಿ ವಿವರ ಸಂಗ್ರಹಿಸುವಲ್ಲಿ ತರುಣರಲ್ಲಿಲ್ಲದ ಹುಮ್ಮಸ್ಸು, ಮತ್ತು ಆಸಕ್ತಿ ತೋರಿಸಿ ಲೇಖನಕ್ಕೆ ಹೆಚ್ಚು ಪ್ರೋತ್ಸಾಹಕೊಟ್ಟ ಜಯಂತಿಲಾಲ್ ನಾನಾಲಾಲ್ ಪಾಂಡ್ಯ ಅವರನ್ನೂ ಮುದ್ದಾಂ ಸ್ಮರಿಸುವುದು ನನ್ನ ಕರ್ತವ್ಯ)

× × × ×

೬. ಕದಂಬ ಶಿವ ಮೃಗೇಶವರ್ಮನ ಹಿಟ್ನೆ ಹೆಬ್ಬಾಗಿಲು ತಾಮ್ರಶಾಸನ

ಶ್ರೀ ಪಿ. ಯನ್. ನರಸಿಂಹ ಮೂರ್ತಿ, ಕಾರ್ಕಳ

ಪ್ರಥಮ ಬಾರಿಗೆ ಈ ಶಾಸನವನ್ನು ಬೆಳಕಿಗೆ ತಂದವರು ಶ್ರೀಮಾನ್ ಲೂಯಿ ರೈಸ್. ಇದರ ಭಾಷೆ ಸಂಸ್ಕೃತ. ಇಪ್ಪತ್ತೈದು ಸಾಲುಗಳುಳ್ಳ ಈ ಶಾಸನವನ್ನು ನಾಲ್ಕು ತಾಮ್ರದ ಹಲಗೆಗಳ ಮೇಲೆ ಬರೆದಿದೆ. ಒಂದು ಮತ್ತು ನಾಲ್ಕನೆ ಹಲಗೆಗಳ ಮೇಲೆ ಕ್ರಮವಾಗಿ ಹಿಂಭಾಗ ಮತ್ತು ಮುಂಭಾಗಗಳಲ್ಲಿ ಮಾತ್ರ ಬರೆಯಲಾಗಿದೆ. ಉಳಿದ ಎರಡು ಹಲಗೆಗಳ ಎರಡೂ ಬದಿಗಳಲ್ಲಿ ಬರಹ ಇದೆ. ಇದು ಸಿಂಹ ಲಾಂಛನವನ್ನು ಹೊಂದಿದೆ.

ಈ ಶಾಸನವು ಕದಂಬರಾಜ ಶಿವಮೃಗೇಶವರ್ಮನು ಸರ್ವ ಸ್ವಾಮಿಯೆಂಬ ಬ್ರಾಹ್ಮಣನಿಗೆ ಕಿಜು ನೀರಲ್ಲಿ ಎಂಬ ಗ್ರಾಮವನ್ನು 'ದಾನವಾಗಿ ಕೊಟ್ಟ ವಿಚಾರವನ್ನು ತಿಳಿಸುತ್ತದೆ.

ಕರ್ನಾಟಕದ ಪಶ್ಚಿಮ ಘಟ್ಟಗಳ ಪ್ರದೇಶದಲ್ಲಿ ಕದಂಬ ವಂಶವು ಮಯೂರಶರ್ಮನಿಂದ ಪ್ರಾರಂಭಿಸಲ್ಪಟ್ಟಿತು, ಮುಂದೆ ಕಾಕುಸ್ಥವರ್ಮ ಮತ್ತು ಅವನ ಮಗ ಶಾಂತಿವರ್ಮ ಇವರ ಕಾಲದಲ್ಲಿ ಕದಂಬ ಮಂಡಲವು ಬಹಳ ವಿಸ್ತಾರವಾಗಿ ಬೆಳೆಯಿತು, ಶಾಂತಿವರ್ಮನ ಮಗನೆ ಮೃಗೇಶವರ್ಮ. ಶಾಸನದಲ್ಲಿ ಈತನನ್ನು "ಶ್ರೀ ವಿಜಯ ಶಿವ ಮೃಗೇಶವರ್ಮ್ಮ ಧರ್ಮ್ಮ ಮಹಾರಾಜ:" ಎಂದು ಕರೆದಿದೆ. ರಾಜನು 'ಹಾರಿತಿಪುತ್ರ': 'ಮಾನವ್ಯಸಗೋತ್ರ'ಕ್ಕೆ ಸೇರಿದವನು, ಸ್ವಾಧ್ಯಾಯ ಚರ್ಚಾಪರನು, ಧರ್ಮಜ್ಞ, ಸತ್ಯವಾದಿ.

ಮೃಗೇಶವರ್ಮನು ತನ್ನಾಳ್ವಿಕೆಯ ಏಳನೆ ವರ್ಷದ ಮಾರ್ಗಶಿರ ಮಾಸ ಶುಕ್ಲ ಪಕ್ಷ ದಶಮಿಯಂದು ಸರ್ವಸ್ವಾಮಿಯೆಂಬ ಬ್ರಾಹ್ಮಣನಿಗೆ ಕಿಜುನೀರಲ್ಲಿ ಎಂಬ ಗ್ರಾಮವನ್ನು ಸಹಿರಣ್ಯೋದಕವಾದಿ ಧಾರೆಯನೆರೆದು ಕೊಟ್ಟನು. ಈ ಬ್ರಾಹ್ಮಣನು ಅಥರ್ವಣ ಶಾಖೆ, ಔಪಗಹನಿ ಗೋತ್ರದ ವೇದ ವೇದಜ್ಞನಾದ ಪಿಂಗಲ ಸ್ವಾಮಿಯ ಪುತ್ರನು. ಬ್ರಹ್ಮದೇಯವಾದ ಗ್ರಾಮವು 'ಅಭಟ ಪ್ರವೇಶ'ವೆಂದು ಸಾರಲಾಗಿತ್ತು. ಅಲ್ಲದೆ ಅನ್ತ್ಯಕರ, ಪಂಗ ಮತ್ತು ಉತ್ಕೋಟ ಎಂಬ ತೆರಿಗೆಗಳಿಂದ ಮುಕ್ತವಾಗಿದ್ದಿತು.

ಡಾ॥ ಪಿ. ಬಿ. ದೇಸಾಯಿಯರ ಪ್ರಕಾರ ಮೃಗೇಶವರ್ಮನು ಕ್ರಿ. ಶ. 455ರಿಂದ 480*ರ ವರೆಗೆ ಆಳಿದನು. ದಾನಕೊಟ್ಟದ್ದು ಅವನಾಳ್ವಿಕೆಯ ಏಳನೆ ವರ್ಷದಲ್ಲಿ. ಅಂದರೆ ಶಾಸನವು ಕ್ರಿ. ಶ. 462-63ಕ್ಕೆ ಸೇರಿದ್ದೆಂದು ಊಹಿಸಬಹುದು.

---

* ಇತರರ ಪ್ರಕಾರ ಕ್ರಿ.ಶ.475-490

"ದಾನಕೊಟ್ಟ ಕಿಜಾನೀರಲ್ಲಿ ಗ್ರಾಮವನ್ನು ಗುರುತಿಸುವುದು ಸಾಧ್ಯವಾಗಿಲ್ಲ. ಆದರೆ ಈಗ ಶಾಸನ ದೊರೆತಿರುವ ಗ್ರಾಮವು ಕದಂಬ ರಾಜ್ಯದಿಂದ ಬಹುದೂರದಲ್ಲಿರುವುದರಿಂದ ಮೂಲತಃ ತುಂಗಭದ್ರಾ ಪ್ರದೇಶದ ಸುತ್ತಮುತ್ತಲಿನ ಯಾವುದೋ ಸ್ಥಳದಿಂದ ಈ ತಾಮ್ರ ಶಾಸನವು ಇಲ್ಲಿಗೆ ಬಂದಿರುವ ಸಾಧ್ಯತೆ ಇದೆ" ಎಂಬುದಾಗಿ ಪ್ರಕಟಿತ ಶಾಸನದ ಟೀಕೆಯಲ್ಲಿ ಹೇಳಿದೆ.

ಆದರೆ ಈ ಗ್ರಾಮವನ್ನು ಬಹು ಸುಲಭವಾಗಿ ಗುರುತಿಸಬಹುದಾಗಿದೆ. ಶಾಸನ ದೊರೆತಿರುವುದು ಮೈಸೂರು ಜಿಲ್ಲೆ. ಪಿರಿಯಾಪಟ್ಟಣ ತಾಲೂಕಿನ ಹಿಟ್ನೆ ಹೆಬ್ಬಾಗಿಲಿನಲ್ಲಿ. ಕಿಜಾನೀರಲ್ಲಿ ಇದರ ಸಮೀಪವೇ ಇರುವ ಗ್ರಾಮ. ಈಗ ಹೆಸರು ಸ್ವಲ್ಪ ಬದಲಾವಣೆ ಹೊಂದಿ ಕಿರುನೆಲ್ಲಿ ಎಂದು ಕರೆಯಲ್ಪಡುತ್ತಿದೆ. ಕಿಜಾನೀರಲ್ಲಿಗೂ, ಕಿರುನೆಲ್ಲಿಗೂ ಹೆಚ್ಚಿನ ವ್ಯತ್ಯಾಸವೇನೂ ಕಂಡುಬರುವುದಿಲ್ಲ. ಅಂದಮೇಲೆ "ತುಂಗಭದ್ರಾ ಪ್ರದೇಶದ ಯಾವುದೋ ಒಂದು ಸ್ಥಳದಿಂದ" ಈ ಶಾಸನವನ್ನು ತಂದಿರುವುದಲ್ಲ.

ರಾಜಧಾನಿ ಬನವಾಸಿಗೂ ದಾನಕೊಟ್ಟ ಗ್ರಾಮ ಕಿರುನೆಲ್ಲಿ. (ಕಿಜಾ ನೀರಲ್ಲಿ)ಗೂ ಇರುವ ದೂರ ಗಮನಿಸಬೇಕಾದ ಅಂಶ. ಪ್ರಾಯಶಃ ಗಂಗರಾಜ್ಯಕ್ಕೆ ಸೇರಿದಬಹುದಾದ ಗ್ರಾಮ ಕಿಜಾನೀರಲ್ಲಿ. ಇದನ್ನು ಕದಂಬ ಮೃಗೇಶವರ್ಮನು ದಾನಕೊಟ್ಟಿದ್ದೇ ಆದರೆ ಆ ವೇಳೆಗೆ ಈ ಗ್ರಾಮ ಕದಂಬರ ವಶವಾಗಿರಬೇಕು. ಮೃಗೇಶವರ್ಮನೇ ಈ ಭಾಗವನ್ನು ಗೆದ್ದು ಆ ಜ್ಞಾಪಕಾರ್ಥ ಕಿರುನೆಲ್ಲಿಯನ್ನು ಸರ್ವಸ್ವಾಮಿಗೆ ದಾನಮಾಡಿರಬೇಕು. ಶಾಸನದಲ್ಲಿ ಗೆದ್ದ ವಿಚಾರ ನಿರೂಪಿಸದಿದ್ದರೂ ಇದೊಂದು ಊಹಿಸಬಹುದಾದ ಅಂಶ. ಮೇಲಾಗಿ ಕದಂಬ ಮೃಗೇಶವರ್ಮನು ಗಂಗ ಹಾಗು ಪಲ್ಲವರೊಡನೆ ಯುದ್ಧದಲ್ಲಿ ನಿರತನಾಗಿದ್ದನು. ಇದು ತಿಳಿದ ಸಂಗತಿ. ಈ ಯುದ್ಧಗಳಲ್ಲಿ ಮೃಗೇಶನು ಜಯಗಳಿಸಿರಬೇಕು. ಈ ಊಹೆಗೆ ಪೂರಕವಾಗಿ ಶಾಸನದಲ್ಲಿ ಈತನನ್ನು ""ಮಹತಿಸಮರ ಸಂಕಟೇ ಸ್ವಭುಜಬಲ ಪರಾಕ್ರಮಾವಾಪ್ತ ವಿಶಾಲ ವಿಭವೈಶ್ವರ್ಯಃ, ಶ್ರೀ ವಿಜಯ ಶಿವ ಮೃಗೇಶವರ್ಮಾ" ಎಂದು ಮುಂತಾಗಿ ವರ್ಣಿಸಲಾಗಿದೆ. ಸ್ವಭುಜ ಬಲಪರಾಕ್ರಮದಿಂದ ರಾಜ ವಿಶಾಲವಾದ ಸಾಮ್ರಾಜ್ಯವನ್ನು ಅತುಲ ಐಶ್ವರ್ಯವನ್ನು ಗಳಿಸಿದ್ದ,

"ಸ್ವಸ್ತಿ ವಿಜಯ ವೈಜಯನ್ತ್ಯಾಂ" ಎಂದು ಶಾಸನದಲ್ಲಿ ಹೇಳಿರುವುದು ಹಲವರ ಅನುಮಾನಕ್ಕೆ ಎಡೆಕೊಟ್ಟಿದೆ. ಅನುಮಾನಿಗಳ ಪ್ರಕಾರ ಈ ಶಾಸನ ಕದಂಬರ ರಾಜಧಾನಿ ವೈಜಯಂತಿ (ಉತ್ತರ ಕನ್ನಡ ಜಿಲ್ಲೆಯ ಬನವಾಸಿ)ಯಲ್ಲಿ ಹುಟ್ಟಿದ್ದು; ಅಲ್ಲಿಗೂ ಕಿಜಾನೀರಲ್ಲಿ (ಕಿರುನೆಲ್ಲಿ)ಗೂ ಬಲುದೂರ. ಆದರೆ ಸಾಮಾನ್ಯವಾಗಿ ಪೂರ್ವ ಕಾಲೀನ ಕದಂಬ ಶಾಸನಗಳೆಲ್ಲವೂ "ಸ್ವಸ್ತಿ ವಿಜಯ ವೈಜಯನ್ತ್ಯಾಂ" ಎಂದೇ ಪ್ರಾರಂಭವಾಗುತ್ತವೆ. ಹಾಗೆಂದ ಮಾತ್ರಕ್ಕೆ ಅವು ರಾಜಧಾನಿ ಬನವಾಸಿಯಲ್ಲೇ ಕೊಡಲ್ಪಟ್ಟವು ಎಂದಲ್ಲ. ಪ್ರಾಯಶಃ ಅದು ವೈಜಯಂತಿಗೆ ಅಥವಾ ಆ ನಾಡಿಗೆ ವಿಜಯವಾಗಲಿ ಎಂದು ಸೂಚಿಸುವ ಸ್ವಸ್ತಿವಾಚನವಿರ

ಬಹುದು. ಅಂದಮೇಲೆ ಮೃಗೇಶವರ್ಮನು ದಾನಮಾಡಿದ ಕಿಱುನೀರಲ್ಲಿ ಯಲ್ಲಿ ಅಥವಾ ಅದರ ಸಮೀಪದಲ್ಲಿ ಇದ್ದಿರಬಹುದಾದ ಅವನ ಸೈನಿಕ ಠಾಣೆಯಲ್ಲಿ ಈ ಶಾಸನವು ಹುಟ್ಟಿಕೊಂಡಿರಬೇಕು. ಹಿಟ್ನೆ ಹೆಬ್ಬಾಗಿಲು ಚೆಂಗಾಳ್ವರ ಕಾಲದಿಂದಲೂ ಪ್ರಮುಖ ಸೈನಿಕ ಠಾಣೆಯಾಗಿತ್ತು. ಮೈಸೂರಿನ ಒಡೆಯರು ಪಿರಿಯಾ ಪಟ್ಟಣದ ಕೋಟೆಗೆ ಮುತ್ತಿಗೆ ಹಾಕಬೇಕಾದಾಗ ಈ ಭಾಗದಿಂದಲೇ ಮುದ್ದಿನ ಧಾಳಿ ಪ್ರಾರಂಭಿಸಿ ಕೋಟೆಯನ್ನು ವಶಪಡಿಸಿಕೊಂಡರು. ಬಹುಶಃ ಈಗ ಹಳ್ಳಿಯಾಗಿರುವ ಹಿಟ್ನೆ ಹೆಬ್ಬಾಗಿಲು ಪ್ರಾಚೀನ ಕಾಲದಲ್ಲಿ ಬಹಳ ಆಯಕಟ್ಟಿನಲ್ಲಿದ್ದ ಪ್ರಮುಖ ಸೈನಿಕ ನೆಲೆಯಾಗಿದ್ದಿರಬೇಕು. ಅಲ್ಲದೆ ದಾನ ಮಾಡಿದ ಕಿಱುನೀರಲ್ಲಿ ಈ ಊರಿಗೆ ಬಹಳ ಸಮೀಪವೇ ಇದೆ ಎಂದು ಮೇಲೆ ತಿಳಿಸಿದೆ.

ಒಟ್ಟಿನಲ್ಲಿ ಮೃಗೇಶವರ್ಮನ ಈ ಶಾಸನವು ಬಹು ಮುಖ್ಯವಾದ ಅಂಶವೊಂದನ್ನು ಪರೋಕ್ಷವಾಗಿ ತಿಳಿಸುತ್ತದೆ. ಅದೇನೆಂದರೆ ಕದಂಬ ರಾಜನು ತನ್ನ ಆಳ್ವಿಕೆಯ ಏಳನೇ ವರ್ಷಕ್ಕೆ ಮುಂಚೆಯೇ ತಲಕಾಡಿನ ಗಂಗರನ್ನು ಸೋಲಿಸಿ ಅವರ ರಾಜ್ಯದ ಬಹು ಭಾಗವನ್ನು ಆಕ್ರಮಿಸಿಕೊಂಡಿದ್ದನು. ಇದರಿಂದಾಗಿ ಅವನ ರಾಜ್ಯವು ದಕ್ಷಿಣದಲ್ಲಿ (ಮೈಸೂರು ಜಿಲ್ಲೆಯ) ಪಿರಿಯಾ ಪಟ್ಟಣದ ವರೆಗೆ ಹರಡಿದ್ದಿತು.

TEXT

ಒಂದನೆ ಹಲಗೆಯ ಹಿಂಭಾಗ

1. ಸಿದ್ಧಮ್[1] ॥ ಜಯತಿ ಸುರಾಸುರ ಮುಕುಟ ಪ್ರಣಿಹಿತ ಮಣಿ ಕಿರಣಖಚಿ [ತಚರಣ ಯುಗಃ]
2. ದಣ್ಡ ಕಮಣ್ಡಲು ಹಸ್ತಶ್ಶ್ವೇತಪ್ರವರಾಸನೇ ಬ್ರಹ್ಮಾ ॥ ಸ್ವಸ್ತಿ ವಿಜಯವೈಜ
3. ಯನ್ತ್ಯಾಃ ಸ್ವಾಮಿ ಮಹಾಸೇನ ಮಾತೃಗಣಾನುಧ್ಯಾತಾಭಿಷಿಕ್ತಸ್ಯ ಮಾನವ್ಯ
4. ಸಗೋತ್ರಸ್ಯ ಹಾರಿತೀ ಪುತ್ರಸ್ಯ ಪ್ರತಿಕೃತ ಸ್ವಾಧ್ಯಾಯ ಚರ್ಚ್ಚಾಪಾರಸ್ಯ,

ಎರಡನೆ ಹಲಗೆಯ ಮುಂಭಾಗ

5. ಕದಮ್ಬಾನಾಮ್ ಧರ್ಮ್ಮ ಮಹಾರಾಜಸ್ಯ ಶ್ರೀ ವಿಜಯ ಶಿವಮೃಗೇಶವರ್ಮ್ಮಣ
6. ಸಂವತ್ಸರೇ ಸಪ್ತಮೇ ಮಾರ್ಗ್ಗಶಿರಮಾಸ ಶುಕ್ಲ ಪಕ್ಷ ದಶಮ್ಯಾಮನಯಾನು
7. ಪೂರ್ವ್ವಾ ಅನೇಕ ಜನ್ಮಾನ್ತರೋಪಾರ್ಜ್ಜಿತವಿಪುಲ ವಿಶಿಷ್ಟ ಪುಣ್ಯಸ್ಕನ್ಧ (ಃ)
8. ಮಹತಿಸಮರ ಸಂಕಟೇ ಸ್ವಭುಜಬಲ ಪರಾಕ್ರಮಾವಾಪ್ತ ವಿಶಾಲ.

ಎರಡನೆ ಹಲಗೆಯ ಹಿಂಭಾಗ

9. ವಿಭವೈಶ್ವರ್ಯಃ ಸಮ್ಯಕ್ಪ್ರಜಾಪರಿಪಾಲನದಕ್ಷಃ ಸರ್ವ್ವಜೀವಬನ್ಧುಃ

---

1. ಈ ಶಬ್ದವನ್ನು 1 ಮತ್ತು 2ನೇ ಸಾಲುಗಳ ಪ್ರಾರಂಭದಲ್ಲಿ ಪ್ರತ್ಯೇಕವಾಗಿ ಬರೆಯಲಾಗಿದೆ.

10. ದೇವದ್ವಿಜಗುರು ಪ್ರಾಜ್ಞ ಜನಾಭ್ಯರ್ಚನಪರಃ ದ್ವಿಜವರೇಭ್ಯೋಜಸ್ರ
11. ಮನೇಕಗೋ ಸಹಸ್ರ ನವಕ್ಷೇತ್ರ ಹಲಷಣ್ಣ ವರ್ತ್ತನೀಗ್ರಾಮ ಹಿರಣ್ಯಾನ್ನಾದಿ
12: ನೈಕವಿಧ ಪ್ರದಾನ ನಿತ್ಯಃ ಯುಧಿಷ್ಠಿರ ಇವ ಧರ್ಮಜ್ಞಃ ಪ್ರತರ್ದ್ದನ ಇವ

ಮೂರನೆ ಹಲಗೆಯ ಮುಂಭಾಗ

13. ಸತ್ಯವಾದೀ ವಿಷ್ಣುರಿವ ಬ್ರಾಹ್ಮಣ್ಯಃ ಶ್ರೀ ವಿಜಯ ಶಿವಮೃಗೇಶ ವರ್ಮ್ಮಧರ್ಮ್ಮ
14, ಮಹಾರಾಜಃ ಬ್ರಾಹ್ಮಣಾಯ ಆಥರ್ವ್ವಣಿಕಾಯ ಔಪಗಹನಿಸಗೋ
15. ತ್ರಾಯ ವೇದವೇದಾಙ್ಗ ವಿದೇ ಪಿಙ್ಗಲಸ್ವಾಮಿ ಪುತ್ರಾಯ ಸರ್ವ್ವಸ್ವಾಮಿನೇ
16. ಕಿಱುನೀರಿಲ್ಲಿ ಗ್ರಾಮಮ್ ಸಪಾನೀಯ ಪಾತಾ ಸದಕ್ಷಿಣಮ್ ಬ್ರಹ್ಮದೇಯ

ಮೂರನೆ ಹಲಗೆಯ ಹಿಂಭಾಗ

17, ಸಮಯೇನ ಅಭಟಪ್ರವೇಶಮನ್ತ [ಷ್ಕರ] ವಿಷ್ಟಿಕಮ್ಪರಿಹತ
18. ಪಞ್ಚೋಗ್ಗೀತ್ಕೋಟವರ್ ದತ್ತವಾನ್ಯೋಸ್ಯಾಭಿರಕ್ಷಿತಾ ಸ ತತ್ಪುಣ್ಯ ಫಲಭಾ
19. ಗ್ಭವತಿ ॥ ಅಪಿಚಾತ್ರ ಭೀಷ್ಮಗೀತ ಶ್ಲೋಕಃ ॥ ಪೂರ್ವದತ್ತಾನ್ದ್ವಿಜಾತಿಭ್ಯೋ
20; ಯತ್ನಾದ್ರ [ಕ್ಷ] ಯುಧಿಷ್ಠಿರ ಮಹೀಮ್ಮಹೀಮತಾಂ ಶ್ರೇಷ್ಠ
ದಾನಚ್ಛ್ರೇಯೋನು ಪಾಲನಮ್ ॥

ನಾಲ್ಕನೆ ಹಲಗೆಯ ಮುಂಭಾಗ

21, ಇದಞ್ಚ ರಾಮಗೀತ ಶ್ಲೋಕಃ ॥ ಯಾನೀಹ ದಾನಾನಿಪುರಾ
ನರೇನ್ದ್ರೈರ್ದ್ದ [ತ್ತಾ] ನಿ ಧರ್ಮ್ಮಾರ್ತ್ಥ [ಯ] ಶ
22. ಸ್ಕರಾಣಿ ಧರ್ಮಾನುರೋಧಾನ್ನೃಪಗೌರವಾಚ್ಚ ಮಯಾಪ್ಯನುಜ್ಞಾತ
ಫಲಾನಿ ತಾನಿ ಇದಞ್ಚ
23. ಯೋಸ್ಯಾಪಹರ್ತ್ತಾ ಸ ಪಞ್ಚಮಹಾಪಾತಕ ಸಂಯುಕ್ತೋ ಭವತ್ಯು
ಕ್ತಞ್ಚ ಬಹುಭಿರ್ವ್ವಸುಧಾ
24. ಭುಕ್ತಾ ರಾಜಭಿಸ್ಸಗರಾದಿಭಿಃ ಯಸ್ಯ ಯಸ್ಯ ಯದಾಭೂಮಿಸ್ತಸ್ಯತಸ್ಯ
ತದಾಫಲಮಿತಿ ॥ [ಕೀರ್ತ್ತಿ] ವ [ರ್ಮ್ಮ]
25; ಣ ಲಿಖಿತಾ ಪಟ್ಟಿಕಾ ॥

ಆಕರ ಗ್ರಂಥಗಳು:

1. ಎಪಿಗ್ರಾಫಿಯಾ ಕರ್ನಾಟಕಾ, ಸಂಪುಟ ನಾಲ್ಕು (1975)
2. A History of Karnataka— ಡಾ। ಪಿ. ಬಿ. ದೇಸಾಯಿ ಮತ್ತು ಇತರರು.
3. ಕರ್ನಾಟಕದ ಅರಸು ಮನೆತನಗಳು — ಡಾ। ಯನ್. ಲಕ್ಷ್ಮೀನಾರಾಯಣ ರಾವ್.
4. ಕದಂಬ ಕುಲ— ಮೊರೇಸ್.
5. Karnataka Through the Ages— Ed. ಆರ್. ಆರ್. ದಿವಾಕರ,
6. ಕರ್ನಾಟಕದ ಇತಿಹಾಸ ದರ್ಶನ— ಕೃಷ್ಣರಾವ್ ಮತ್ತು ಕೇಶವ ಭಟ್ಟ.

೭ ಕವಿ ಕುಮಾರವ್ಯಾಸ

—ಡಾ। ಶ್ರೀಮತಿ ವಸುಂಧರಾ ಫಿಲಿಯೋಜಾ, ಪಾಂಡಿಚೇರಿ.

ಕವಿ ಕುಮಾರವ್ಯಾಸ ಎಂದ ತತ್‌ಕ್ಷಣ ಗದುಗಿನ ಭಾರತ ಕಣ್ಮುಂದೆ ಕುಣಿಯುವದು. 'ಕಲಿಯುಗ ದ್ವಾಪರವಾಗುವುದು, ಮೈ ನವಿರೇಳುವುದು' ಆದರೆ, ಈ ಕವಿಯ ಕಾಲಮಾನ ಯಾವುದು ಇವನ ನಿಜನಾಮವೇನು ಎಂಬ ಪ್ರಶ್ನೆ ಏಳುತ್ತದೆ. ಈ ವಿಷಯಕ್ಕೆ ಅನೇಕ ಊಹಾಪೋಹಗಳು ನಡೆದಿದ್ದುವು, ನಡೆಯುತ್ತಲೇ ಇವೆ. ಆದರೂ ಕೆಲವು ಕಾವ್ಯಗಳನ್ನು ಆಧಾರಕ್ಕಿಟ್ಟುಕೊಂಡು, 'ಈ ಕವಿ ವಿಜಯನಗರದ ಅರಸು ಇಮ್ಮಡಿ ದೇವರಾಯನ ಕಾಲಕ್ಕೆ ಇದ್ದ' ಎಂದು ಇತ್ತೀಚಿನ ಸಂಶೋಧಕರು ಒಮ್ಮತಕ್ಕೆ ಬಂದಿದ್ದಾರೆ. ಇದೇ ಅಭಿಪ್ರಾಯವನ್ನು ಶ್ರೀ ಎನ್. ಅನಂತರಂಗಾಚಾರ್ಯರು "ಕುಮಾರ ವ್ಯಾಸನು ೧೫ನೆಯ ಶತಮಾನದ ಉತ್ತರಾರ್ಧದಲ್ಲಿದ್ದನೆಂದು ತಿಳಿಯಬಹುದು. ಅದು ಕವಿಚರಿತೆಕಾರರ ಸಿದ್ಧಾಂತಕ್ಕಿಂತ ಬಲು ದೂರವಿರಲಾರದು" ಎಂದು ಪ್ರತಿಪಾದಿಸಿದ್ದಾರೆ, 'ಕುಮಾರ ವ್ಯಾಸ' ಎಂಬ ಪುಸ್ತಕದಲ್ಲಿ (ಐ. ಬಿ. ಎಚ್. ಪ್ರಕಾಶನ, ೧೯೭೩ ಪುಟ ೧೨) ಅವರು ಈ ಅಭಿಪ್ರಾಯಕ್ಕೆ ಬರುವ ಮುನ್ನ ಕುಮಾರವ್ಯಾಸ ಹಾಗೂ ಚಾಮರಸ ಕವಿದ್ವಯರ ಬಗೆಗಿರುವ ದಂತಕಥೆಗಳ ಕಂತೆ ಕಾವ್ಯಗಳನ್ನು ಚೆನ್ನಾಗಿ ವಿಮರ್ಶಿಸಿ, ಅವು ಐತಿಹಾಸಿಕ ಆಧಾರಗಳಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಅವರು ಬರೆದುದನ್ನೆ ಇಲ್ಲಿ ನಾವು ಮತ್ತೆ ಮತ್ತೆ ಹೇಳುವುದರಲ್ಲಿ ಸ್ವಾರಸ್ಯವೇನಿಲ್ಲ. ಈ ಲೇಖನದ ಮುಖ್ಯ ಉದ್ದೇಶ ಕವಿಯ ಕಾಲ, ಹಾಗೂ ನಾಮ ಅಥವಾ ಹೆಸರುಗಳ ಚರ್ಚೆಯ ವಿಮರ್ಶನ.

"ನಾರಣಪ್ಪ" ಎಂಬುದು ಕವಿಯ ಹೆಸರೋ ಅಥವಾ ಬಿರುದೋ? ಅಡ್ಡ ಗೋಡೆಯ ಮೇಲೆ ದೀಪ ಇಟ್ಟಂತೆ, ಸುಮಾರು ಇಷ್ಟರಿಂದ ಇಷ್ಟು ವರೆಗೆ ಎಂದು ಹೇಳುವ ಬದಲು, ನಿರ್ದಿಷ್ಟ ಕಾಲಮಾನ ಸೂಚಿಸಲು ಸಾಧ್ಯವೋ? ಎಂದು ಪುನಃ ವಿಮರ್ಶಿಸಬಹುದಾಗಿದೆ.

"ಕುಮಾರವ್ಯಾಸ" ಎಂಬುದು ಆ ಕವಿಯ ಕಾವ್ಯನಾಮ, ಇದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಆದರೆ ಶ್ರೀ ಎಂ. ಎ. ದೊರೆಸ್ವಾಮಯ್ಯಂಗಾರ್ಯರು "ಕುಮಾರವ್ಯಾಸ", "ಶುಕರೂಪ" ಎಂಬುದು ಕವಿಯ ಹೆಸರೇ ಹೊರತು ಬಿರುದಲ್ಲ; "ನಾರಣಪ್ಪ" ಎಂಬುದು ಕವಿಯ ಹೆಸರಲ್ಲ"ವೆಂದಿದ್ದಾರೆ. ಈ ವಿಷಯದ ಮೇಲೆ ಶ್ರೀ ಎನ್. ಅನಂತರಂಗಾಚಾರ್ಯರು ಏನೂ ಹೇಳಿಲ್ಲ. ತಮ್ಮ ಲೇಖನದುದ್ದಕ್ಕೂ "ಕುಮಾರವ್ಯಾಸ", "ನಾರಣಪ್ಪ" ಎರಡೂ ಹೆಸರುಗಳನ್ನು ಧಾರಾಳವಾಗಿ ಬಳಸಿದ್ದಾರೆ. ಶ್ರೀ ದೊರೆಸ್ವಾಮಯ್ಯಂಗಾರ್ಯರು ಕವಿಯ ಹೆಸರು 'ನಾರಣಪ್ಪ' ಎಂಬುದನ್ನು ಏಕೆ ಒಪ್ಪುವುದಿಲ್ಲವೋ ತಿಳಿಯದು. ಬಹುಶಃ

ಕವಿ ಶ್ರೀ ವೈಷ್ಣವ ಎಂದು ಪ್ರತಿಪಾದಿಸುವುದಕ್ಕೆ 'ನಾರಣಪ್ಪ' ಅಡ್ಡಿ ಒದಗುತ್ತದೆ ಎಂಬ ಕಾರಣದಿಂದಾಗಿ, ಕವಿಯ ಹೆಸರು 'ಕುಮಾರವ್ಯಾಸ' ಎಂದು ಹೇಳಿ, 'ನಾರಣಪ್ಪ' ಎಂಬುದನ್ನು ಅಲ್ಲಗಳೆದಿದ್ದಾರೆ. ಆದರೆ, ಇದನ್ನೇ ಅನುಮೋದಿಸುವಂತೆ ಗದುಗಿನ ವೀರನಾರಾಯಣರ ದೇವಸ್ಥಾನದಲ್ಲಿರುವ ಶಾಸನದಲ್ಲಿದೆ, 'ಕುಮಾರವ್ಯಾಸನಿಗೊಲಿದ ಗದುಗಿನ ವೀರನಾರಾಯಣ' ಎಂದು. ಆ ಶಾಸನ ವಿಜಯ ನಗರದ ಅರಸು ಅಚ್ಯುತರಾಯನ ಕಾಲದ್ದು (೧೫೩೦–೧೫೪೨) ಮೇಲಿನ ಸಂಶೋಧಕರೆಲ್ಲ ಬರಿಯ ಕಾವ್ಯಗಳನ್ನು ಆಧಾರ ಕೊಟ್ಟುಕೊಂಡು ಅಂತೆಕಂತೆ, ಊಹಾಪೋಹಗಳ ಬುನಾದಿಯ ಮೇಲೆ ತಮ್ಮ ಅಭಿಪ್ರಾಯಗಳನ್ನು 'ಬಹುಶಃ' 'ಬಹುದು'ಗಳೊಡನೆ ಕೊಡುತ್ತಾರೆ. ಶಾಸನಗಳು ಸಮಕಾಲೀನ ಪ್ರಮಾಣಪತ್ರಗಳು. ಇವನ್ನು ಆಧಾರವಾಗಿಟ್ಟುಕೊಂಡು ಸಂಶೋಧನೆ ಮುಂದುವರಿಸಿದರೆ ಬರುವ ಪರಿಣಾಮವೇ ಬೇರೆ.

ಎಪಿಗ್ರಾಫಿಯ ಕರ್ನಾಟಿಕ ೧ ನೆಯ ಗ್ರಂಥದಲ್ಲಿ ತುಮಕೂರು ತಾಲೂಕ ಮೊದಲನೆಯ ಶಾಸನ ಕವಿಕಾವ್ಯ ಕಾಲಮಾನಗಳ ವಿಷಯದಲ್ಲಿ ಬಹು ಮಹತ್ವದ್ದು. ಇದೊಂದು ತಾಮ್ರ ಶಾಸನ. ವಿಜಯನಗರದ ಪತನದ (೧೫೬೫) ಅನಂತರ ಆರವೀಡು ವಂಶದ ತಿರುಮಲರಾಯ ಪೆನುಗೊಂಡೆಯಿಂದ ರಾಜ್ಯಭಾರ ಮಾಡುತ್ತಿದ್ದ ಕಾಲ. ಈ ಶಾಸನದಲ್ಲಿ ಏಳು ಪತ್ರಗಳಿದ್ದು ನಾಗರಾಕ್ಷರದಲ್ಲಿ ಬರೆದಿದೆ, ಉಂಗುರದ ಮೇಲೆ ವಿಜಯ ನಗರದ ರಾಜ ಮುದ್ರೆಯಾದ 'ವರಾಹ'ವಿದೆ. ತಿರುಮಲ ರಾಯ ಆರವೀಡು ವಂಶದ ಅಳಿಯ ರಾಮರಾಯನ ತಮ್ಮ. ವಿಜಯನಗರದ ಪತನಕ್ಕೆ ಕಾರಣವಾದ ತಾಳಿಕೋಟೆ ಕಾಳಗದಲ್ಲಿ ಅಳಿದುಳಿದ ರಾಜವಂಶಕ್ಕೆ ಸಂಬಂಧಪಟ್ಟ ವೀರಾಧಿವೀರ. ಶಾ. ಶ. ೧೪೯೩ ಎಂದರೆ ಕ್ರಿ. ಶ. ೧೫೭೧ರಲ್ಲಿ ಪೆನುಗೊಂಡೆಯಲ್ಲಿ ಆತನ ಪಟ್ಟಾಭಿಷೇಕ ಸಮಯದಲ್ಲಿ ಕೊಟ್ಟ ದಾನ ವಿವರಣೆಗಳಿವೆ, ಈ ತಾಮ್ರ ಶಾಸನದಲ್ಲಿ– ಈ ಶಾಸನದ ೬ನೆ ಪತ್ರದ ಹಿಂಭಾಗದಲ್ಲಿ ದಾನಪಡೆದ ಅನೇಕ ಬ್ರಾಹ್ಮಣರ ಹೆಸರಿನ ಯಾದಿಯಲ್ಲಿದೆ: "ಆತ್ರೇಯ ಗೋತ್ರಜ: ಯಾಜುಷ ಶ್ರೀ ಗದುಗಿನ ನಾರಣಯ್ಯ ತನೂಭವ: ಗೌತಮಾನ್ವಯ ಜೋಂತಪ್ಪೋ ವೃತ್ತೇರರ್ಧಮಿಹಾಪ್ನುತೇ"

ಇಲ್ಲಿ ಬಂದಿರುವ 'ಗದುಗಿನ ನಾರಣಯ' ಎಂಬುದು ಬೇರೆ ಯಾರ ಹೆಸರೂ ಅಲ್ಲದೆ, ಕವಿಕುಮಾರ ವ್ಯಾಸನದೇ ಎಂದು ಹೇಳಿದರೆ ತಪ್ಪೇನಿಲ್ಲ. ಆಗಿನ ಕಾಲದಿಂದಲೂ 'ಗದುಗಿನ ನಾರಾಯಣ'ನೆಂದೇ ಪ್ರಸಿದ್ಧನಾಗಿರುವ ಈ ಕವಿ 'ಆತ್ರೇಯ ಗೋತ್ರ, ಗೌತಮಾನ್ವಯ'ದವನು. ಕವಿಗೆ 'ಅಜೋಂತಪ್ಪ' ಅಥವಾ 'ಒಜಂತಪ್ಪ' ಎಂಬ ಹೆಸರುಳ್ಳ ಮಗನಿರಬೇಕೆಂದರೆ, ಕವಿ ಸನ್ಯಾಸಿಯಾಗಿದ್ದನೆಂಬುದು ವಿವಾದಾಸ್ಪದ. ಬಹುಶಃ ಮಗ ಹುಟ್ಟಿದ ನಂತರ ಸನ್ಯಾಸಿಯಾಗಿದ್ದರೂ ಆಗಿರಬಹುದು. ಅದು ಬೇರೆ ಮಾತು (ಯೋಗೀಂದ್ರನೆಂಬುದರಿಂದ ಕವಿ ಸನ್ಯಾಸಿಯಾಗಿರಲೇ ಬೇಕೆಂದಿಲ್ಲ; ಯೋಗಾಭ್ಯಾಸದಲ್ಲಿ

ನಿನ್ನೆಣನೆಂದು ಅರ್ಥ ಸಂ-ಕಂ-ಸಂ) ಈ ಶಾಸನ ಕವಿ ಮುಮುಕ್ಷುವಾಗಿ, ಗೃಹಸ್ಥಾಶ್ರಮ ಸ್ವೀಕರಿಸಿದ್ದನೆಂಬುದಕ್ಕೆ ಸಾಧುವಾಗಿದೆ.

ಈ ಶಾಸನದ ಕಾಲ ೧೫೧೧. ಈ ಸಮಯಕ್ಕೆ ನಾರಣಪ್ಪನಿಗೆ ಬೆಳೆದ ಮಗನಿದ್ದ ನೆಂದ ಮೇಲೆ, ತಂದೆಯ ಕಾಲ ಇದಕ್ಕಿಂತ ಸ್ವಲ್ಪ ಮುಂಚೆ ಎಂದೆ ಆಯಿತು. 'ಕವಿಯ ಕಾಲ ನಿರ್ಣಯಕ್ಕೆ ತಿಮ್ಮಣ್ಣನ ಭಾರತವೇ ಈಚಿನ ಗಡಿಗಲ್ಲು' ಎಂದು ಶ್ರೀ ಆನಂದರಂಗಾ ಚಾರ್ಯರು ಹೇಳಿರುತ್ತಾರೆ.

ಕವಿ ತಿಮ್ಮಣ್ಣ ಕೃಷ್ಣರಾಯನ ಕಾಲಕ್ಕೆ, ಅರಸನ ಹೇಳಿಕೆಯ ಮೇರೆಗೆ ಭಾರತ ವನ್ನು ಬರೆದು ಮುಗಿಸಿದ. ಕೃಷ್ಣರಾಯನ ಕಾಲ ೧೫೦೯ ರಿಂದ ೧೫೨೯. ಕವಿ ಕುಮಾರ ವ್ಯಾಸನೂ ಇದೇ ಕಾಲಕ್ಕೆ ಇದ್ದು ಅರಸನ ಪ್ರಿಯನಾಗಿರುವಂತೆ ಭಾರತ ಬರೆದಿದ್ದ ಎಂದು ಹೇಳಲಿಡ್ಡಯಿಲ್ಲ. ಅಲ್ಲಲ್ಲಿ ಕವಿ 'ಕೃಷ್ಣ', 'ಕೃಷ್ಣ' ಎಂದು ಹೇಳುವದೂ, ಕೃಷ್ಣನ ಬಾಲ ಲೀಲೆ ಬಣ್ಣಿಸುವದೂ ದೊರೆ ಕೃಷ್ಣರಾಯನನ್ನೇ ನೆನಸಿ, ಎಂತಹ ಕಲ್ಲು ಹೃದಯವೂ ಕರಗುವಂತೆ ವರ್ಣಿಸಿರುವನು.

'ಅರ್ಜುನ-ಸುಭದ್ರೆಯರ ಶೋಕ'-ಅಭಿಮನ್ಯುವಿನ ಮರಣಾನಂತರ ಹೇಳಿದೆ. ಆ ಅಭಿಮನ್ಯು ಮತ್ತಾರೂ ಆಗಿರದೆ, ಕೃಷ್ಣರಾಯನ ಆರು ವರ್ಷದ ಕುವರ ತಿರುಮಲ ರಾಯ ಅಕಸ್ಮಾತ್ ಅಸು ನೀಗಿದಾಗ, ಅರಸ ಕೃಷ್ಣರಾಯ ಹಾಗೂ ರಾಣಿ ತಿರುಮಲದೇವಿ ಯರ ಶೋಕ. ರಾಜಕುವರ ಕ್ರಿ. ಶ. ೧೫೨೪ ರಲ್ಲಿ ತೀರಿಕೊಂಡ.

(೧೫೨೯ರೊಳಗೆ) ತಿಮ್ಮಣ್ಣ ಭಾರತ ಬರೆದು ಮುಗಿಸಿದ್ದರೆ, ಕವಿಯು ರಾಜ ಕುಮಾರನ ಮರಣಾನಂತರ ಬಹುದಿನ ಬಾಳಿರಬೇಕೆಂದು ಹೇಳಬಹುದು. ಇದರ ಮೇಲಿಂದ ಕವಿಯ ಕಾಲಮಾನ ೧೫೦೦ ರಿಂದ ೧೫೨೫ ಎಂದು ತಿಳಿದುಬರುವುದು. ರೈಸ್ ಹಾಗೂ ಕಿಟೆಲ್ಲರ 'ಕವಿ ಕೃಷ್ಣರಾಯನ ಕಾಲದಲ್ಲಿದ್ದ' ಎಂಬ ಅಭಿಪ್ರಾಯಕ್ಕೆ ಪುಷ್ಟಿಕೊಡು ತ್ತದೆ. ಈ ಶಾಸನ ವಿಷಯ.

ಕವಿಯ ಹೆಸರು 'ನಾರಣಪ್ಪ' ಎಂದಿದ್ದು, 'ಕುಮಾರವ್ಯಾಸ' ಎಂಬುದು ಆತನ ಕಾವ್ಯನಾಮ ಎಂಬುದು ಸ್ಪಷ್ಟವಾಗುತ್ತದೆ, ಈ ಮೇಲಿನ ಶಾಸನ ಹಾಗೂ ಅಚ್ಯುತ ರಾಯನ ಶಾಸನಗಳಿಂದ.

ಕೊನೆಯದಾಗಿ 'ಹಲಗೆ ಬಳಪವ ಹಿಡಿಯದ' ಎಂದು ಕವಿ ತನ್ನ ಬಗೆಗೆ ಹೇಳಿ ಕೊಂಡಿರುವನು, ಈ ಮಾತಿನಿಂದ 'ಆತನೇನೂ ನಿರಕ್ಷರ ಕುಕ್ಷಿ'ಯೆಂದು ಹೇಳಲು ಬಾರದು. ದಂತ ಕಥೆಗಳನ್ನು ದಂತ ಕತೆಗಳೆಂದೇ ಒಪ್ಪಬೇಕು. ಮೇಲೆ ನಾವು ಹೇಳಿದ ತಾಮ್ರ ಶಾಸನದ ಪ್ರಕಾರ ನಾರಣಪ್ಪ ಯಜುಃಶಾಖೆ-ಯಜುರ್ವೇದವನ್ನು ಕಲಿತವನು, ಯಜ್ಞ ಮಾಡು ತ್ತಿದ್ದವನು ಎಂದ ಬಳಿಕ, ಸಾಕಷ್ಟು ಸಂಸ್ಕೃತ ಬಲ್ಲವನು ಎಂದು ಬೇರೆ ಹೇಳಬೇಕಿಲ್ಲ.

ಭಾರತೀಯ ಪಂಡಿತರ ಪರಂಪರೆ ನೋಡುತ್ತಿರಲಾಗಿ, ಅನೇಕ ವಿದ್ವಾಂಸರು ಚಿಂತನೆಯಲ್ಲಿ ತೊಡಗಿ ನಿರರ್ಗಳವಾಗಿ ಮಾತನಾಡುತ್ತಿದ್ದರು, ಅವರ ಸುತ್ತಲಿದ್ದ ಶಿಷ್ಯರು ಅವನ್ನು ಬರೆದಿಡುವದು ಪದ್ಧತಿ. ಪಾಣಿನಿ, ಪತಂಜಲಿಯ ಕಾಲದಿಂದಲೂ ಈ ಪದ್ಧತಿ ಬಳಕೆಯಲ್ಲಿತ್ತು, ಕಳೆದ ಶತಮಾನದಲ್ಲಿ, ಪುಣೆಯಲ್ಲಿ ಇತ್ತೀಚೆಗೆ ಅಮಾನುಷ ಕೊಲೆಗೀಡಾದ ಅಭ್ಯಂಕರ ಅವರ ತಂದೆ ವಾಸುದೇವ ಶಾಸ್ತ್ರಿ ಶ್ರೇಷ್ಠ ವೈಯಾಕರಣಿ. ಪತಂಜಲಿಯ ಭಾಷ್ಯದ ಮೇಲೆ ಅವರ ಪಾಂಡಿತ್ಯ. ಆದರೆ ಅವರಿಗೆ ಬರೆಯಲು ಬರುತ್ತಿರಲಿಲ್ಲ. ಅವರ ಸುತ್ತಲಿದ್ದ ಶಿಷ್ಯರು ಅವರು ಮಾತನಾಡುತ್ತಿರುವಾಗ ಬರೆದಿಡುತ್ತಿದ್ದರು. ಅದೇ ರೀತಿ ನಮ್ಮ ಕವಿ ಕುಮಾರವ್ಯಾಸನದೂ ಇರಬೇಕು. ಎಂತಲೆ ಆತ ಹೇಳಿಕೊಂಡಿರುವದು. 'ಹಲಗೆ ಬಳಪವ ಪಿಡಿಯದೆ' ಎಂದು.

೮ 'ಕಚ್ಚೆಗ' ಎಂದರೇನು?

— ಶ್ರೀ ಗುಂಡ್ಮಿ ಚಂದ್ರಶೇಖರ ಐತಾಳ, ಮಂಗಳ ಗಂಗೋತ್ರಿ.

೧. "...ಸ್ವಸ್ತಿ ಅಮೋಘವರಿಷದೇವ ಶ್ರೀ ಪ್ರಿಥುವೀ ವಲ್ಲಭ ಪರಮೇಶ್ವರ ಪರಮ ಭಟಾರಕ ಪಾದಪಜ್ಞಜ ಭ್ರಮರನಜ್ಞ ತ್ರಿಣೇತ್ರನಾನೆವೆಡೆಙ್ಗಂ ವನಗಜ ಮಲ್ಲಂ ಕಚ್ಚೆಗ ಕ್ರಿಷ್ಣರಾಜ ಶ್ರೀಮತ್ ಕನ್ನರದೇವಲ್ಲೋವದೆ ಚೋಳರಾಜಾದಿತ್ಯನ ಮಾಳಿಪನ್ನು ..."

೨. "ಸ್ವಸ್ತಿ ಪರಮಭಟ್ಟಾರಕ ಪರಮೇಶ್ವರ ಶ್ರೀ ಪೃಥ್ವೀವ [ಲ್ಲಭ] ಮಹಾರಾಜಾ [ಧಿ] ರಾ [ಜನ] ಲ್ಲರ ಮರುಳನಾನೆ [ವೆಡೆ]ಂಗಂ ಚಲಕೆನ [ಲ್ಲಾ]ತಕ [ವೈರಿ] ವಿಳಾಸಂ ಮದ [ಗ]ಜ ಮಲ್ಲಂ ಪರಾಂಗನಾ ಪುತ್ರಂ ಗ [ಣ್ಡ] ಮಾರ್ತಂಡನಕಾಳವರಿಷಂ ನೃ [ಪತು]ಂಗಂ ಕ[ಚ್ಚೆ] ಗಂ ಶ್ರೀಮತ್ಕನ್ನರದೇವಂ"[2]

ಈ ಎರಡೂ ಶಾಸನಗಳು ರಾಷ್ಟ್ರಕೂಟರ ಮೂರನೆಯ ಕೃಷ್ಣನಾದ ಕನ್ನರದೇವನನ್ನು ಕುರಿತಿವೆ. ಕನ್ನರದೇವನಿಗೆ 'ಕಚ್ಚೆಗ' ಎಂಬ ಪ್ರಶಸ್ತಿ ಯಾಕೆ ಬಂತು ಎಂಬುದು ಸಮಸ್ಯೆ. "ಕ್ರಿ. ಶ, ಸುಮಾರು 943ರಲ್ಲಿ ಕೃಷ್ಣನು ತಮಿಳುನಾಡಿನ ಮೇಲ್ವಾಯ್ದು, ಅದರ ಎರಡು ಮುಖ್ಯ ಪಟ್ಟಣಗಳಾದ ಕಾಂಚಿ ಮತ್ತು ತಂಜಾವೂರುಗಳನ್ನು ಹಿಡಿದನು."[3] ಇದರಿಂದ ಕೃಷ್ಣನು "ಕಚ್ಚಿಯುಂ ತಂಜೈಯುಂ ಕೊಂಡ" ಎಂಬ ಬಿರುದನ್ನು ಧರಿಸಿದ.[4]

ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟುವಿನಲ್ಲಿ "ಕಚ್ಚೆಗ" ಎಂಬುದಕ್ಕೆ ಮೇಲಿನೆರಡು ಶಾಸನಗಳ ಆಧಾರಗಳನ್ನು ಕೊಟ್ಟು "ಒಂದು ಬಿರುದು" ಎಂದೂ, "ಈ ಶಬ್ದ "ಕಂಚಿಗೊಂಡ (ಕಂಚಿಯನ್ನು ಗೆದ್ದ)" ಎಂಬುದರ ಸಂಕ್ಷಿಪ್ತ ರೂಪವಿರಬಹುದು" ಎಂದೂ ಸೂಚಿಸಲಾಗಿದೆ:

ಆದರೆ ಈ ಊಹೆ ಸರಿ ಎಂದು ತೋರುವುದಿಲ್ಲ. 'ತಲಕಾಡು ಗೊಂಡ' ಎಂಬ ಬಿರುದು ಇದೇ ರೀತಿಯಲ್ಲಿ ಸಂಕ್ಷಿಪ್ತರೂಪವಾಗಬೇಕಿತ್ತು. ಅದು ಹಾಗೇನೂ ಆಗಲಿಲ್ಲ. ಅಲ್ಲದೆ '+ಗ' ಎಂಬ ಪರಪ್ರತ್ಯಯ ಬಂದಂಥ ಬಿರುದುಗಳನ್ನೂ ಹೆಸರುಗಳನ್ನೂ ನೋಡಿದರೆ ಇದು '+ಗೊಂಡ' ಎಂಬ ಅರ್ಥದಲ್ಲಿ ಬರುವುದಿಲ್ಲ ಎಂಬುದು ಸ್ಪಷ್ಟ. ಈ ಕೆಳಗಿನ ಪ್ರಯೋಗಗಳನ್ನು ನೋಡಿರಿ:

ಬದ್ದೆಗ < ಭದ್ರದೇವ[5] = ಮೂರನೆಯ ಅಮೋಘ ವರ್ಷ,
ಬಿಟ್ಟಿಗ < ವಿಷ್ಣುವರ್ಧನ
ನರಗ < ನರಸಿಂಹ[6]

ಅರಿಗ < ಅರಿಕೇಸರಿ[7]

ಗೊಜ್ಜಿಗ < ಗೋವಿಂದ[8]

ಹಾಗೆಯೇ 'ಕಚ್ಚೆಗ' ಎಂಬ ಬಿರುದು ದೊರೆಗೊಂಡಿದೆ. ಇದರ ನಿಷ್ಪತ್ತಿ ಏನು ಎಂಬುದನ್ನು ಇನ್ನು ವಿಚಾರಿಸೋಣ. ಈ ಕೆಳಗಿನ ಪ್ರಯೋಗಗಳನ್ನು ನೋಡಿರಿ:

೧. "ಇಂತು ಶೀಲನಗೇಂದ್ರದೊಳ್ ಇಂದ್ರನ ಬೆಸದೊಳ್ ತಪೋವಿಘಾತಂ ಮಾಡಲೆಂದು ಬಂದ ಪುರಂದರನ ಗಣಿಕೆಯರ ಕಡೆಗಣ್ಣ ನೋಟಕ್ಕಂ ಕಾಟಕ್ಕಮಳ್ಕದ ಶೌಚಾಂಜನೇಯನ ಶೌಚಮುಂ...[9],

೨, "ಗಂಡರ ನಾಲಗೆಯು ಸನ್ನಿಯುಂ ಕಚ್ಚೆಯು ಶೌಚಮುಂ ಮಿವೆಲ್ಲ ನಿರ್ಮಲಂ ವೃಷ"[10]

೩. "ಸಾಗರವ ದಾಂಟಿ ಹೊನ್ನಾಗರಕೆ ಹಾಯ್ದ ರಾಘವನ ಬಂಟ ಹನುಮಂಗೆ ಕಚ್ಚುಟವು ಹೋಗಬೇಕೆಂದ"[11]

ಈ ಪ್ರಯೋಗಗಳಿಂದ 'ಕಚ್ಚೆ'ಯು ಶೌಚ, ಇಂದ್ರಿಯ ನಿಗ್ರಹ, ಬ್ರಹ್ಮಚರ್ಯದ ಸಂಕೇತ ಎಂಬುದು ಸ್ಪಷ್ಟವಾಗುತ್ತದೆ. ಅರಿಕೇಸರಿಯ ಬಿರುದುಗಳಲ್ಲಿ ಒಂದು 'ಶೌಚಾಂಜನೇಯ' ಎಂಬುದು ಪಂಪಭಾರತದಿಂದ ತಿಳಿದು ಬರುತ್ತದೆ. ಆಂಜನೇಯ ಶೌಚಗುಣಕ್ಕೆ ಪ್ರಸಿದ್ಧನಾಗಿರುವುದು ನಮಗೆಲ್ಲ ತಿಳಿದಿದೆ. ಅರಿಕೇಸರಿಯ ಬಿರುದುಗಳಲ್ಲಿ 'ಶೌಚಾಂಜನೇಯ' ಒಂದಾಗಿರುವಂತೆ ರಾಷ್ಟ್ರಕೂಟರ ಮೂರನೆಯ ಕೃಷ್ಣ ಕನ್ನರದೇವನಿಗೂ 'ಕಚ್ಚೆಗ' ಎಂಬ ಬಿರುದು ಆತನ ಶೌಚಗುಣವನ್ನು ಎತ್ತಿ ಹೇಳಲು ಬಂದಿದೆ. ಇದು 'ಕಚ್ಚೆಹರುಕ' ಎಂಬ ಶೀಲಭ್ರಷ್ಟತನದ ವಿರೋಧ ಶಬ್ದವಾಗಿದೆ. ಇದರ ಅರ್ಥ ಹೀಗಿದೆ:

ಕಚ್ಚೆ + ಗ = ಕಚ್ಚೆ ಭದ್ರವಿರುವವನು = ಶೀಲವಂತ.

ಇದಕ್ಕೆ ಪೂರಕವಾಗಿ ಕನ್ನರದೇವನಿಗೆ 'ಪರಾಂಗನಾ ಪುತ್ರಂ' ಎಂಬ ಪ್ರಶಸ್ತಿ ಇರುವುದು ಜೂರ ಪ್ರಶಸ್ತಿಯಿಂದ ತಿಳಿಯುತ್ತದೆ:

...... ಕಣ್ದಂ ನೋಡ –
ದು ಕಣ್ಣಡಿಯದು ಬಾ [ಯ್ಯಾ]-
ಡದು ಚಿತ್ತಂ ಪರಾಂಗನಾ ಪುತ್ರಕನ ॥ ೧ ॥

ನೋಲದ ಪರವನಿತೆಗೆ ಕ–
ಸೊಲ್ಲದು ನೋಲೆವಾಲನೂಡಿ ನಡಪಿದ ತಾಯಿಂ
ಮೇಲೆನೆ ಬಗೆಗುಂ ನೋಡಿರೆ
ನೋಲದು ಚಿತ್ತಂ ಪರಾಂಗನಾ ಪುತ್ರಕನ ॥ ೩ ॥

ನೋಡಿರೆ ಪರವಧುಗೆ ಮನಂ
ಕೂಡದು ಸೂಟಿಲ್ಲ ಬಿಡುಳೆತ್ತಿ ನಡಪಿದ ತೋಳ್–
ಣ್ಡಿದ ಪೊಲೆ ಬಸಿಜಿಡುಳಗಿ–
ಟ್ಟಿಡಿದ ಚಿತ್ತಂ ಪರಾಂಗನಾ ಪುತ್ರಕನ ॥ ೪ ॥ [12]

ಹೀಗೆ 'ಕಚ್ಚೆಗ' ಎಂದರೆ ಶೌಚಾಂಜನೇಯ, ಪರಾಂಗನಾ ಪುತ್ರಕ ಎಂಬುದಕ್ಕೆ ಸಂವಾದಿಯಾದ ಕನ್ನಡದ ಬಿರುದಾಗಿದೆ. ಹೀಗೆ ಕನ್ನಡದಲ್ಲಿ ಬಿರುದನ್ನು ಕೊಡುವಂಥ ಸಂಪ್ರದಾಯ ಪಡೆಮೆಚ್ಚೆ ಗಂಡ, ಗುಣಕಿನಲ್ಲ, ಆನೆವೆಡಂಗ, ನಲ್ಲರ ಮರುಳ, ಚಲಕೆನಲ್ಲ-ಎಂಬಿತ್ಯಾದಿ ಪ್ರಶಸ್ತಿಗಳಲ್ಲಿ ಕಂಡುಬರುತ್ತದೆ. ಆದುದರಿಂದ 'ಕಚ್ಚೆಗ' ಎಂದರೆ ಕಚ್ಚೆಭದ್ರ, ವಿರುಪವಮ, ಶೌಚಾಂಜನೇಯ, ಪರಾಂಗನಾ ಪುತ್ರಕ, ಪರದಾರ ಸಹೋದರ, ಶೌಚ ಗುಣೋನ್ನತ, ಶೀಲವಂತ ಎಂಬ ಅರ್ಥದಲ್ಲಿರುವ ಅಚ್ಚಗನ್ನಡದ ಬಿರುದು ಎಂಬುದು ಸ್ಪಷ್ಟವಾಗಿ ತೋರುತ್ತದೆ.

ಟಿಪ್ಪಣಿಗಳು

1. ಆತಕೂರು ಶಾಸನ, ಶಾಸನಸಂಗ್ರಹ. ಪು ೯ ಕನ್ನಡ ಸಾಹಿತ್ಯಪರಿಷತ್ತು.
2. ಜೂರ ಶಾಸನ, ಅದೇ ಪುಟ ೧೪ ,,
3. ಕರ್ಣಾಟಕದ ಪರಂಪರೆ. ಪು ೨೮೮
4. ಕನ್ನಡ ಸಾಹಿತ್ಯ ಚರಿತ್ರೆ: ಮೂರನೆಯ ಸಂ. ಪು ೧೧೯, ಪ್ರ್ಯ ವಿ. ಎ. ನಿಲಯ,
5. ಪಂಪಭಾರತ ೧–೨೯
6. ಅದೇ. ೧–೩೫, ೩೭
7. ಅದೇ, ೧–೪೯, ೯–೫೪
8. ಅದೇ. ೯–೫೨ ವ
9. ಅದೇ. ೯–೫೨ ವ
10. ಲೀಲಾವತೀ ಪ್ರಬಂಧಂ
11. ಸರ್ವಜ್ಞ ವಚನಗಳು ೮೫೫
12. ಶಾಸನ ಸಂಗ್ರಹ, ಪು, ೧೪–೧೫

೯ ಆಡಳಿತದಲ್ಲಿ ಅತಿರೇಕಗಳು–ಇತಿಹಾಸದ ಪುನರಾವರ್ತನೆ

ಶ್ರೀ ಬಿ. ವಸಂತ ಶೆಟ್ಟಿ, ಬ್ರಹ್ಮಾವರ

ಹಿಂದೆ ಉನ್ನತಾಧಿಕಾರದಲ್ಲಿದ್ದವರು ತಮ್ಮ ಅಧಿಕಾರ ಚಲಾವಣೆ ಮಾಡುವಾಗ ಹಲವು ತಪ್ಪುಗಳನ್ನು ಎಸಗಿದ್ದಾರೆ. ಸ್ವೇಚ್ಛಾಚಾರದಿಂದ ವರ್ತಿಸಿದ್ದಾರೆಂಬ ಕೂಗು ಎಲ್ಲೆಡೆಯೂ ಇಂದು ಮೊಳಗುತ್ತಿದೆ. ಇತ್ತೀಚೆಗಿನದ್ದನ್ನೇ ಕೇಳಿ ಕೇಳಿ ಬೇಸತ್ತಿದ್ದೀರಾದರೆ ಸ್ವಲ್ಪ ಹಿಂದಿನದ್ದನ್ನು ಕೇಳಿ.

ವಿಜಯನಗರ ಸಾಮ್ರಾಜ್ಯದಲ್ಲಿ ಸಂಗಮ ವಂಶದ ಆಳ್ವಿಕೆಯ ಕಾಲ. ದೊರೆ ಇಮ್ಮಡಿ ಬುಕ್ಕರಾಯ ಆಳುತ್ತಿದ್ದಾಗಿನ ಶಾಸನ (ಕ್ರಿ. ಶ. 1405)ವೊಂದರಿಂದ[1] ಆ ಕಾಲದ ಅತಿರೇಕದ ಪರಿಚಯವಾಗುತ್ತದೆ. ವಿಜಯನಗರದ ಒಂದು ವಿಭಾಗವಾಗಿದ್ದ ಬಾರಕೂರು ರಾಜ್ಯದಲ್ಲಿ ಮಹಾಬಲದೇವ ಒಡೆಯ ರಾಜ್ಯಪಾಲನಾಗಿದ್ದಾಗ ಅವನು ಯಾವುದೋ ಕಾರಣಕ್ಕಾಗಿ ಬಾರಕೂರಿನ ಹತ್ತು ಕೇರಿಯ ನಖರ, ಹಂಜಮಾನ ಮುಂತಾದ ವರ್ತಕ ಸಂಘಗಳ ಸೆಟ್ಟಿತನದ ಅನ್ಯಮಾನ್ಯ ಸಮಯ ಸಂಕೇತಗಳನ್ನು ತೆಗೆದು ಹಾಕಿದ್ದ. ಇದು ನ್ಯಾಯ ಸಮ್ಮತವಲ್ಲವೆಂದು ಸಾಮ್ರಾಟನಿಗೆ ದೂರು ಬಂದ ಪ್ರಯುಕ್ತ ರಾಯ ಗೋವೆಯ ರಾಜ್ಯಪಾಲನಾಗಿದ್ದ ಬಾಚಣ್ಣ ಒಡೆಯನಿಂದ ತನಿಖೆ ಮಾಡಿಸಿ, ಅಪರಾಧ ಸಾಬೀತಾದಾಗ ಕಷ್ಟ ನಷ್ಟಗಳಿಗೆ ಪರಿಹಾರವಿತ್ತು, ಮಹಾಬಲದೇವ ಒಡೆಯ ಅಧಿಕಾರ ಕಳೆದುಕೊಂಡ.

ಕ್ರಿ. ಶ. 1418ರಲ್ಲಿ ಮಂಗಳೂರಲ್ಲೂ ಇಂತಹದೇ ಒಂದು ಘಟನೆ. ಪೂರ್ವ ಮರ್ಯಾದೆಗಳನ್ನು ಶಿಸ್ತಿನಿಂದ ಕಾಪಾಡಿಕೊಂಡು ಬಂದಿದ್ದ ಮಂಗಳೂರು ನಗರದ ಹಂಜಮಾನಾವರೊಡನೆ ಅಲ್ಲಿನ ರಾಜ್ಯಪಾಲನಾಗಿದ್ದ ತಿಮ್ಮಣ್ಣ ಒಡೆಯ ವಿವೇಚನೆಯಿಲ್ಲದ ರೀತಿಯಲ್ಲಿ ವರ್ತಿಸಿ ಅವರ ಮೇಲೆ ಸಾಮ್ರಾಜ್ಯದ ಸೇನೆಯನ್ನು ಹರಿಯಬಿಟ್ಟು ನಾಲ್ಕು ಪಳ್ಳಿಗಳನ್ನು ಸುಟ್ಟು ಹಾಳುಗೆಡಹಿದ. ವಿಷಯ ತಿಳಿದಾಗ ಸಾಮ್ರಾಟ ಬೈಚಪ್ಪ ದಂಡನಾಯಕನನ್ನು ಕಳುಹಿಸಿ ವಿಚಾರಣೆ ನಡೆಸಿ ಪಳ್ಳಿಗಳನ್ನೆಲ್ಲಾ ಪುನರ್ನಿರ್ಮಿಸಿ ಕೊಟ್ಟುದಲ್ಲದೆ ಹಂಜಮಾನದವರಿಗೆ ಮೊದಲಿನ ಸ್ಥಾನಮಾನವನ್ನೂ ಕೊಡಿಸಿದ. ಪರಿಹಾರವೂ ದೊರೆಯಿತು. ಅದೇ ರಾಜ್ಯಪಾಲನ ಕೈಯಿಂದಲೇ.[2]

1436ರಲ್ಲಿ ಬಾರಕೂರು ರಾಜ್ಯವನ್ನು ಅಣ್ಣಪ್ಪ ಒಡೆಯ ಆಳುತ್ತಿದ್ದಾಗಲಂತೂ ಶಿವಳ್ಳಿ ಗ್ರಾಮಕ್ಕೆ ದಾಳಿಯನ್ನೇ ಮಾಡಿ ಹಾಳುಗೆಡಹಿದ್ದಲ್ಲದೆ ಆ ಸಮಯದಲ್ಲಿ ಉಡುಪಿ ಶ್ರೀ ಕೃಷ್ಣನ ಪ್ರತಿಮೆ ಚಲನೆಯಾಗಿ ಪೂಜೆ ಪುರಸ್ಕಾರಗಳೂ ನಿಂತುಹೋಗುವ ಪರಿಸ್ಥಿತಿ ಒದಗಿತ್ತು.[3] ಸಾಮ್ರಾಟನಿಗೆ ದೂರಿತ್ತಾಗ ಪುನರ್ವ್ಯವಸ್ಥೆಗೆ ಆರ್ಥಿಕ ಸಹಾಯ ಒದಗಿಸಲಾಯಿತು.

ವಿಜಯನಗರದ ದೊರೆ ಮಲ್ಲಿಕಾರ್ಜುನನ ಆಳ್ವಿಕೆಗೆ ಸಂಬಂಧಿಸಿದ ಎರಡು ಶಾಸನಗಳು ಇತ್ತೀಚೆಗೆ ದೊರೆತಿದ್ದು[4] (1447ರಲ್ಲಿ ಬರೆಸಿದುದು) ಅವು ಬಾರಕೂರಿನಲ್ಲಿ ರಾಜ್ಯಪಾಲನಾಗಿದ್ದ ಚಾವದ ತಿಮ್ಮಣ್ಣ ಒಡೆಯನು ಎಸಗಿದ ಅತಿರೇಕವನ್ನು ಹೊರಗೆಡಹುತ್ತವೆ. ಅವನು ಚಾಂತಾರಿನಲ್ಲಿ (ಬ್ರಹ್ಮಾವರದ ಸಮೀಪ) ಈಶ್ವರ ಉಂಗುರಹಳ್ಳಿಯವರ ಮನೆಯನ್ನು ಸುಟ್ಟು ಸೂರೆ ಮಾಡಿದ್ದಲ್ಲದೆ ಹಾರಾಡಿಯಲ್ಲೂ ಯಾವುದೋ ದ್ವೇಷದಿಂದ ಅಂಗಮಾರಂಬಳ್ಳಿಯ ಮನೆಯನ್ನೂ ಸೂರೆ ಮಾಡಿದ್ದ. ಆ ಎರಡು ಮನೆಯವರು ಅನುಭವಿಸಿದ ಕಷ್ಟ ನಷ್ಟಗಳಿಗೆ ಅನಂತರ ಬಂದ ರಾಜ್ಯಪಾಲ ಪರಿಹಾರವಿತ್ತುದನ್ನು ಈ ಎರಡು ಶಾಸನಗಳು ತಿಳಿಸುತ್ತವೆ.

ವಿಜಯನಗರದ ಅತಿ ಪ್ರಸಿದ್ಧ ದೊರೆ ಕೃಷ್ಣದೇವರಾಯನ ಕಾಲದಲ್ಲಿ ಬಾರಕೂರು ರಾಜ್ಯವನ್ನಾಳುತ್ತಿದ್ದ ವಿಜಯಣ್ಣ ಒಡೆಯನು ನೀರುವಾರ (ನೀಲಾವರ) ಗ್ರಾಮದ ಮೇಲೆ ಧಾಳಿಮಾಡಿ ಗ್ರಾಮದ ಸ್ಥಾನಮಾನಗಳನ್ನು ಹಾಳುಮಾಡಿದ. ಕೊನೆಗೆ ತನ್ನ ಅಂತಹ ಕಾರ್ಯದಿಂದ ತನಗೆ ದೋಷ ತಟ್ಟಬಹುದೆಂಬ ಭಯದಿಂದ ಆ ಗ್ರಾಮದ ದುರ್ಗಾದೇವಿಗೆ ದಾನವಿತ್ತ ಸಂಗತಿ ಅಲ್ಲಿನ ಒಂದು ಶಾಸನದಿಂದ ತಿಳಿಯುತ್ತದೆ.[5]

ಅನಂತರ ವಿಜಯನಗರದಲ್ಲಾಳಿದ ಅಚ್ಯುತರಾಯನ ಕಾಲದಲ್ಲಿ (1536 ಕ್ರಿ.ಶ.) ಬಾರಕೂರಿನ ರಾಜ್ಯಪಾಲ ಕೊಂಡಪ್ಪ ಒಡೆಯನು "ಉಪ್ಪೂರು ಗ್ರಾಮದ ಮೇಲೆ ರಾಜಕಾರ್ಯವ ಮಾಡುವಾಗ" ಸ್ತ್ರೀಯರ ಪರಿಶುದ್ಧತೆಯನ್ನು ಹಾಳುಮಾಡಿದುದಾಗಿಯೂ, ಕೊನೆಗೆ ಅವನು ಆ ಊರಿನ ಸ್ತ್ರೀಯರ ಪರಿಶುದ್ಧಿಗಾಗಿ ಅಲ್ಲಿನ ನಿವಾಸಿ ಶಿವ ಕೋಟಡೆಯರಿಗೆ ಪರಿಹಾರವಿತ್ತುದೂ ಉಪ್ಪೂರಿನ ಒಂದು ಶಾಸನದಿಂದ ತಿಳಿಯುತ್ತದೆ. ಅದೇ ಕಾರಣಕ್ಕಾಗಿ ಅವನು ತನ್ನ ರಾಜ್ಯಪಾಲ ಹುದ್ದೆಯನ್ನು ಕಳೆದುಕೊಳ್ಳಬೇಕಾಯಿತು.[6]

ಇವು ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯಲ್ಲಿ ಬೇರೆ ಬೇರೆ ಕಾಲದಲ್ಲಿ ದಕ್ಷಿಣ ಕನ್ನಡದಲ್ಲಷ್ಟೇ ನಡೆದ ಅತಿರೇಕಗಳ ಕೆಲವು ಉದಾಹರಣೆಗಳು ಅಷ್ಟೆ. ಅನಂತರ ಅಥವಾ ಅದಕ್ಕಿಂತ ಮೊದಲು ಅಂತಹ ಘಟನೆಗಳು ನಡೆಯಲಿಲ್ಲವೆಂದಲ್ಲ. ಇತಿಹಾಸ ನಮಗಿಲ್ಲಿ ಕಲಿಸುವ ಪಾಠವೆಂದರೆ ಎಲ್ಲಾ ಆಡಳಿತೆಯಲ್ಲೂ ಅತಿರೇಕ ನಡೆಯುತ್ತಿರುತ್ತದೆ; ಕೆಲವು ತಡವಾಗಿ ತಪ್ಪಿತಸ್ಥರಿಗೆ ಶಿಕ್ಷೆಯಾಗಿ ನೊಂದವರಿಗೆ ಪರಿಹಾರ ದೊರೆಯುತ್ತದೆ. ಇನ್ನಷ್ಟು ತಿಳಿಯದೇ ಹೋಗಬಹುದು. ಇವತ್ತಿನವರ ಅತಿರೇಕ ನಾಳಿನವರಿಂದ ತನಿಖೆ, ಪರಿಹಾರ; ನಾಳಿನವರದ್ದು ಅನಂತರ ಬರುವವರಿಂದ—ಹೀಗೆ ಇಲ್ಲಿನ ವರೆಗೂ ಮುಂದುವರಿದಿದೆ. History repeats ಅಲ್ಲವೆ?. "what we learn from history is that we don't learn any thing from history" (ಬರ್ನಾರ್ಡ್ ಶಾ) — ಈ ಮಾತು ಸತ್ಯವಾಗದಿರಲಿ. ನಮ್ಮ ಮುಂದಿನ ಪೀಳಿಗೆಯಾದರೂ ಅತಿರೇಕ, ವಿಚಾರಣೆ ಆಯೋಗಗಳಂತಹ ಪಿಡುಗಿಗೆ ತುತ್ತಾಗದಿರಲಿ.

ಟಿಪ್ಪಣಿಗಳು

1. S.I.I. Vol. VII No. 349
2. Ibid No. 182 (& Dr. P. Gururaj Bhat, Studies in Tuluva—History and culture, P. 194)
3. Ibid No. 296.
4. ಬ್ರಹ್ಮಾವರದ ಸಮೀಪದ ಚಾಂತಾರು ಹಾಗೂ ಹಾರಾಡಿಯಲ್ಲಿ ನನಗೆ ಹೊಸತಾಗಿ ದೊರೆತ ಶಾಸನಗಳು.
5. A. R. S. I. E 1928–29 No. 494.
6. Ibid No. 487 & Dr. K. V. Ramesh, A History of South Kanara P. 225

೧೦. ಉಡುಪಿಯ ಶ್ರೀ ಕೃಷ್ಣ

—ಶ್ರೀ ಎಂ. ಎಂ. ಪ್ರಭು, ಮಂಗಳೂರು.

ಶ್ರೀಕ್ಷೇತ್ರ ಉಡುಪಿಯಲ್ಲಿ ಶ್ರೀ ಮಧ್ವಾಚಾರ್ಯರಿಂದ ಪ್ರತಿಷ್ಠಿತವಾದ ಶ್ರೀಕೃಷ್ಣ ಮೂರ್ತಿ ಇರುವ ಕೃಷ್ಣ ಮಠವು ದೇಶದ ಮೂಲೆಮೂಲೆಗಳಿಂದ ಭಾವುಕರನ್ನು ಆಕರ್ಷಿಸುತ್ತಾ ಇದೆ. ಶ್ರೀ ಆಚಾರ್ಯರು ಸ್ವೀಕರಿಸಿದ ಎಂಟು ಮಂದಿ ಶಿಷ್ಯರ ಪೀಳಿಗೆಯ ಅಷ್ಟಮಠಗಳೂ ಇಲ್ಲಿಯೇ ಇವೆ. ಈ ಮಠಗಳ ಯತಿಗಳು ಸರದಿ ಪ್ರಕಾರ ಎರಡು ವರ್ಷಗಳ ಪರ್ಯಾಯ ಕಾಲದಲ್ಲಿ ಶ್ರೀಕೃಷ್ಣನ ಪೂಜೆಯನ್ನು ನೆರವೇರಿಸುತ್ತಾ ಇದ್ದಾರೆ. ಶ್ರೀಕೃಷ್ಣ ಮಠದ ವಾಸ್ತು ವಿನ್ಯಾಸ ಹಾಗೂ ಮಠದ ಮತ್ತು ಮೂರ್ತಿಯ ಬಗೆಗೆ ಹಲವಾರು ಐತಿಹ್ಯಗಳೂ ಕತೆಗಳೂ ಇವೆಯಾದರೂ, ಕೆಲವು ವಿಷಯಗಳು ಇಂದಿಗೂ ಸಮಸ್ಯೆಯಾಗಿಯೇ ಉಳಿದಿವೆ. ಉಡುಪಿಯ ದೇವಾಲಯಗಳ ಹಾಗೂ ಉತ್ಸವಾದಿಗಳ ವಿಷಯದಲ್ಲಿ ಇದಕ್ಕೆ ಮೊದಲೇ ಹಲವು ಪುಸ್ತಕ-ಪುಸ್ತಿಕೆಗಳು ಪ್ರಕಟವಾಗಿವೆ (ಅನುಬಂಧ ನೋಡಿರಿ). ಇಷ್ಟಾದರೂ ನಮಗೆ ತೋರುವ ಸಮಸ್ಯೆಗಳು ಬಗೆಹರಿಯದೆ ಉಳಿದಿವೆ. ಈ ಲೇಖದಲ್ಲಿ, ಅನುಬಂಧದಲ್ಲಿ ಹೇಳಿದ ಪುಸ್ತಕಗಳಿಂದಲೂ, ಉಡುಪಿಯ ಶ್ರೀಕೃಷ್ಣ ಮಠದಲ್ಲಿರುವ ಹತ್ತು ಶಿಲಾಶಾಸನಗಳ ಆಧಾರದಿಂದಲೂ ಇದು ವರೆಗೆ ಪ್ರಚಲಿತ ವಿಷಯಗಳ ಮೇಲೆ ಏನಾದರೂ ಕೊಂಚ ಹೊಸ ಬೆಳಕನ್ನು ಹಾಯಿಸಲು ಪ್ರಯತ್ನವನ್ನು ಮಾಡಿದ್ದೇವೆ.

ಮೊದಲಿಗೆ ಶ್ರೀಕೃಷ್ಣಮಠದ ಸ್ಥಳದ ಬಗಗೆ ವಿಚಾರಿಸುವ. "ಶ್ರೀಕೃಷ್ಣ ಮಠಕ್ಕೆ ಮುಖ್ಯದ್ವಾರವೆಂಬುದಾಗಿ ಇಲ್ಲ—ಬದಲಾಗಿ ಒಂದು ಕಿಟಕಿ ಇದೆ. ಇದರ ಮೂಲಕ ಶ್ರೀದೇವರ ದರ್ಶನವನ್ನು ಯಾವಾಗಲೂ ಪಡೆಯಬಹುದು" [1]. "ಮಾರ್ಗದಿಂದ ಪ್ರವೇಶಿಸುವಾಗ ದಕ್ಷಿಣಾಭಿಮುಖವಾಗಿರುವ ಬಾಗಿಲಿನ ಮೂಲಕ ಒಳಗೆ ಬರುವಾಗ ಬಲಬದಿಯಲ್ಲಿ ಮಧ್ವಸರೋವರವಿದೆ. ಈ ಸರೋವರಕ್ಕೆ ಎದುರಾಗಿ ಪೂರ್ವಾಭಿಮುಖವಾಗಿರುವ ಬಾಗಿಲಿದೆ. ಆದರೆ ಈ ಬಾಗಿಲು ಯಾವಾಗಲೂ ಮುಚ್ಚಿ ಇದ್ದು ವಿಜಯದಶಮಿಯಂದು ಹೊಸ ಪೈರಿನ ತೆನೆಗಳನ್ನು ತರುವಾಗ ಮಾತ್ರ ತೆರೆಯುತ್ತಾರೆ" [2]. "ಶ್ರೀಕೃಷ್ಣಮಠವು ಅನಂತೇಶ್ವರ ದೇವಾಲಯದ ಈಶಾನ್ಯದಲ್ಲಿದ್ದು, ಆದರ ಮುಖ್ಯದ್ವಾರವು ದಕ್ಷಿಣ ದಿಕ್ಕಿನಲ್ಲಿದೆ. ಉತ್ತರ ಪಾರ್ಶ್ವದಲ್ಲಿಯೂ ಒಂದು ಚಿಕ್ಕ ದ್ವಾರವಿದೆ. ಉತ್ತರ ದಿಕ್ಕಿನ ಬಾಗಿಲ ಬಳಿ ಶ್ರೀ ಮಧ್ವಾಚಾರ್ಯರ ವಿಗ್ರಹ ಇದೆ. ಶ್ರೀ ದೇವರಿಗೆ ಎಲ್ಲ ಸೇವೆಗಳನ್ನು ಆಚಾರ್ಯರೇ ನಡೆಸುತ್ತಾ ಇದ್ದಾರೆ ಎಂಬ ಭಾವನೆ ಇದೆ" [3]. "ಪೂರ್ವ ದಿಕ್ಕಿನ ಬಾಗಿಲು ಯಾವಾಗಲೂ ಮುಚ್ಚಿಯೇ ಇದ್ದು ವಿಜಯದಶಮಿಯಂದು ಹೊಸ ತೆನೆಯನ್ನು ತರುವಾಗ ಮಾತ್ರ ತೆರೆಯಲ್ಪಡುತ್ತದೆ. ಈ ಬಾಗಿಲಿನಲ್ಲಿ ಚೆನ್ನಕೇಶವನ ಮೂರ್ತಿ ಇದ್ದು ದ್ವಾರದ ಬದಿಗಳಲ್ಲಿ ಕಪ್ಪು ಶಿಲೆಯ ದ್ವಾರಪಾಲಕ ವಿಗ್ರಹಗಳಿವೆ". [4]. "ಗರ್ಭಗೃಹಕ್ಕೆ ಪ್ರವೇಶ ದ್ವಾರವು ಉತ್ತರ

ದಿಕ್ಕಿನಲ್ಲಿದೆ. ಈ ಬಾಗಿಲಿನ ಎಡಕ್ಕೆ ಶ್ರೀ ವಾದಿರಾಜರಿಂದ ಪ್ರತಿಷ್ಠಿತವಾದ ಶ್ರೀ ಮಧ್ವಾಚಾರ್ಯರ ವಿಗ್ರಹವಿದೆ. ಗರ್ಭಗುಡಿಯು ಎರಡು ಕೋಣೆಗಳುಳ್ಳದಾಗಿದೆ ಮತ್ತು ದಕ್ಷಿಣ ಭಾಗದಲ್ಲಿರುವ ಚಿಕ್ಕಕೋಣೆ (ಇದರ ವಿಸ್ತಾರ ಇಡೀ ಕೋಣೆಯ ಮೂರನೇ ಒಂದು ಪಾಲಿನಷ್ಟು)ಯಲ್ಲಿ ಶ್ರೀ ಕೃಷ್ಣನ ಮೂರ್ತಿ ಇದ್ದು ಇದರ ಎರಡೂ ಬದಿಗಳಲ್ಲಿ ಸಂದಾದೀಪಗಳಿವೆ. — ದೊಡ್ಡ ಕೋಣೆಯಲ್ಲಿ ಸ್ವಾಮಿಯವರು ದೈನಂದಿನ ತರ್ಪಣವನ್ನು ಕೊಡುತ್ತಾರೆ. ಈ ಕೋಣೆಯಲ್ಲಿ ಬೆಳ್ಳಿಯ ತೊಟ್ಟಿಲು ಇರುವ ಮಂಟಪವಿದೆ. ದೈನಿಕ ಪೂಜೆಗಳಲ್ಲಿ ಕೊನೆಯದಾದ ಶಯನೋತ್ಸವ ಅಥವಾ ಏಕಾಂತ ಸೇವೆಯೆನ್ನುವ ಪೂಜೆ ಇಲ್ಲಿ ನಡೆಯುತ್ತಿದೆ"[5]. ಈ ಎಲ್ಲ ವಿವರಗಳನ್ನು ಈ ಮೊದಲು ಪ್ರಕಟಿತ ಪುಸ್ತಕಗಳಿಂದ ಎತ್ತಿಕೊಂಡಿದ್ದೇವೆ.

ಒಂದರಲ್ಲಿ ಮಠಕ್ಕೆ ಮುಖ್ಯದ್ವಾರವೆನ್ನುವುದು ಇಲ್ಲ ಎಂದಿದೆ, ಇನ್ನೊಂದರಲ್ಲಿ ಮುಖ್ಯದ್ವಾರ ದಕ್ಷಿಣದಲ್ಲಿದೆ ಎಂಬುದಾಗಿ ಇದೆ. ಮುಖ್ಯದ್ವಾರವು ಒಂದು ಕಾಲಕ್ಕೆ ಪೂರ್ವಾಭಿಮುಖವಾಗಿ ಮಧ್ವಸರೋವರದ ನೇರಕ್ಕಿದ್ದಿರಬೇಕು ಎಂದು ಊಹಿಸಬಹುದು. ಇದರ ನೇರಕ್ಕೆ ಈಗ ಯಾವಾಗಲೂ ಮುಚ್ಚಿಕೊಂಡಿದ್ದು ವಿಜಯದಶಮಿಯಂದು ತೆನೆ ತರಲು ಮಾತ್ರ ತೆರೆಯುವ 'ದೊಡ್ಡಕೋಣೆಯ ಬಾಗಿಲು' ಇದೆ. ಈ ಬಾಗಿಲು ಒಂದು ಕಾಲಕ್ಕೆ ಗರ್ಭಗುಡಿಯ ದ್ವಾರವಿದ್ದುದಕ್ಕೆ ದ್ವಾರಬಂಧದ ಇಕ್ಕೆಲಗಳಲ್ಲಿರುವ ದ್ವಾರಪಾಲಕರೇ ಸಾಕ್ಷಿ. ಈ ಗರ್ಭಗುಡಿಯೇ ಒಂದು ಕಾಲಕ್ಕೆ ಮೂಲಸ್ಥಾನವಾಗಿದ್ದುದನ್ನು ಅನುಮಾನಿಸಬಹುದು. ವಿಜಯದಶಮಿಯಂದು ಹೊಸ ತೆನೆಯನ್ನು ಈ ಬಾಗಿಲ ಮೂಲಕವೇ ತರುವಂತಹ ಸಂಪ್ರದಾಯವೂ ಇದನ್ನು ಪುಷ್ಟೀಕರಿಸುತ್ತದೆ. ಕಾಲಾಂತರದಲ್ಲಿ ಯಾವುದೇ ದೇವಾಲಯದ ವಾಸ್ತುವಿನ್ಯಾಸ ಬದಲಾಗಬಹುದು, ಆದರೆ ಸಂಪ್ರದಾಯಗಳಲ್ಲಿ ಬದಲಾವಣೆಯಾಗುವುದು ತೀರ ವಿರಳ. ಈ ಗರ್ಭಗುಡಿಯಲ್ಲಿ ಬೇರೆಯೇ ಒಂದು ಕೃಷ್ಣನ ಮೂರ್ತಿ ಇರಬಹುದಾದುದನ್ನು ಅನುಮಾನಿಸಲೂ ಬರುತ್ತದೆ. (ಶಂಕರವಿಜಯ_ಆನಂದಗಿರಿವಿರಚಿತದಲ್ಲಿ, ಹಸ್ತಾಮಲಕರು ರಜತಪೀಠ ಪುರದಲ್ಲಿ ಶ್ರೀಕೃಷ್ಣನ ಪ್ರತಿಮೆಯನ್ನು ಸ್ಥಾಪಿಸಿದರೆಂದು ಹೇಳಿದೆ.)

ಕೃಷ್ಣಮಠದಲ್ಲಿರುವ ಎರಡು ಶಾಸನಗಳಲ್ಲಿ[6, 8] . ಪ್ರತಿಪೋತ್ಕರುಷೆಯ ವಿದ್ಯಾವೇದ ತೀರ್ಥಪಾದಂಗಳು ಮೊದಲಾದ ಎಂಟು ಉತ್ಕರುಷೆಯವರು ಆರಾಧಿಸುವಂತಹ ಉಡುಪಿನ ಶ್ರೀ ಕೃಷ್ಣದೇವರ....." ಎಂದೂ ".....ವಿದ್ಯಾಮೂರ್ತಿ ಶ್ರೀಪಾದಂಗಳು ಮೊದಲಾದ ಎಂಟು ಉತ್ಕರಿಸೆಯವರು ಆರಾಧಿಸುವಂಥಾ"[7] ಎಂಬ ವಿಶೇಷಣಗಳು ಇರುವುದರಿಂದ ಅಲ್ಲಿಯೇ ಈ ಉತ್ಕರಿಷೆಯವರು ಆರಾಧಿಸುವಂತಹ ಬೇರೊಬ್ಬ ಕೃಷ್ಣ ಇದ್ದಿರಬೇಕೆಂಬ ಅನುಮಾನ ಬಲಗೊಳ್ಳುತ್ತದೆ.

ಶ್ರೀ ಕೃಷ್ಣನ ಪ್ರತಿಷ್ಠೆಯನ್ನು ಶ್ರೀ ಮಧ್ವಾಚಾರ್ಯರು ಶಕ 1160 ಹೇವಿಳಂಬ ಮಾಘಶುದ್ಧ ಹಿರಲ್ಲಿ ಮಾಡಿದರೆಂಬ ಐತಿಹ್ಯವಿದೆ[8]. "ಸುಮಧ್ವವಿಜಯ"ದಲ್ಲಿದೆ: "ಒಮ್ಮೆ

ಚಾರ್ಯರು ಉಡುಪಿಯಲ್ಲಿದ್ದಾಗ, ಸಜ್ಜನರಿಗೆ ಕಲಿಕಾಲ ದೋಷದಿಂದ ಸಚ್ಛಾಸ್ತ್ರಾಭ್ಯಾಸ ಕ್ಕೆ ವೈರಾಗ್ಯ ಉಂಟಾಗುವುದನ್ನು ಕಂಡು ಕರುಣದಿಂದ ಈ ರೋಗಗಳಿಗೊಂದು ಚಿಕಿತ್ಸೆ ಮಾಡಬೇಕೆಂದು ಬಯಸಿದರು. ಆ ಮೇಲೆ ಮೂರು ನಾಲ್ಕು ಜನ ಶಿಷ್ಯರಿಂದ ಗೋಪೀ ಭನ ಶಿಲಾಮಯವಾದ ವಿಗ್ರಹವನ್ನು ಶೋಧಿಸಿ ಜಲಾವಗಾಹನವನ್ನು ಮಾಡಿಸಿ ರು. ಶ್ರೀ ಮಧ್ವಾಚಾರ್ಯರ ಕರಸ್ಪರ್ಶದಿಂದ ವಿಗ್ರಹದಲ್ಲಿ ಭಗವತ್ ಸನ್ನಿಧಾನವುಂಟಾ ಗ್ರಹವು ಭಾರವತ್ತು ಜನರಿಂದಲೂ ಎತ್ತಲಸಾಧ್ಯವಾಗಲು ಸ್ವಯಂ ಆಚಾರ್ಯರೇ ಗ್ರಹವನ್ನು ತಲೆಯಾಕ್ಕೆ ಒಯ್ದರು. ವಿಧ್ಯುಕ್ತವಾಗಿ ಪ್ರತಿಷ್ಠಿಸಿ ಶ್ರೀ ಮಧ್ವಾಚಾರ್ಯರು ತೀಂದ್ರಿಯಾಕೃತಿಯೂ ಮಂದಹಾಸಪ್ರದ ಸುಂದರಾನನನೂ ಆದ ನಂದ ನಂದನನನ್ನು ಲ್ಲಿ ನೆಲೆ ನಿಲ್ಲಿಸಿದರು" ೨. ಇಲ್ಲಿ ಗಮನಿಸಬೇಕಾದ ವಿಷಯ ಆಲಯವು ಮೊದಲೇ ದ್ದಿತ್ತು ಎಂಬುದನ್ನು.

ಈ ಕೃಷ್ಣನ ಮೂರ್ತಿಯನ್ನು ಆಚಾರ್ಯರು ಶಿಷ್ಯರ ಮೂಲಕ ಶೋಧಿಸಿದರು. ದು ಎಲ್ಲಿಂದ ಬಂದಿರಬಹುದು? ಈ ಮೂರ್ತಿಯು ಬಲಕೈಯಲ್ಲಿ ದಂಡವೂ ಎಡಕೈಯಲ್ಲಿ ಾಶವೂ ಇದೆ ಎಂಬುದನ್ನು —

'ಧ್ಯಾಯೇತ್ ಇಂದೀವರಾಭಂ ನಿಜಕರಕಮಲೇ ದಕ್ಷಿಣೇ ದಂಡಮಗ್ರ್ಯಂ
ಸವ್ಯೇ ಪಾಶಂ ದಧಾನಂ ಜಘನತಟಗತೇ ರೂಪ್ಯಪೀಠಾಲಯಸ್ಥಮ್" ॥

ಂಬ ಧ್ಯಾನಶ್ಲೋಕದಲ್ಲಿ ಕಾಣಬಹುದು. ಅಪರೆ ಈ ಮೂರ್ತಿಯಲ್ಲಿ ವೈಖಾನಸ ಆಗಮ ಲ್ಲಿ ಹೇಳಿರುವಂತೆ "... ಸರ್ವಾಭರಣ ಭೂಷಿತಂ ಕಿರೀಟಿನಮುದ್ಬದ್ಧ ಕುಂತಲಂ ವಾ ಕ್ಷಣೇನ ಹಸ್ತೇನ ಕ್ರೀಡಾಯಷ್ಟಿಧರಂ ವಾಮೇನೋದ್ಯತಕರ ಕಪೂರ್ಣ ಶಿಕ್ಯಸೂತ್ರಾ ಧಾನ್ಯಾತ್ ..." ಲಕ್ಷಣಗಳಿರುವುದನ್ನು ಕಾಣಬಹುದು. ಬಾಲಕೃಷ್ಣನ ಕೈಯಲ್ಲಿ ಆಟದ ಾಲು ನೂಲುಗಳಿಗಿಂತ ಸಹಜವಾದುವು ಬೇರೇನು ಇರಬಹುದು? ಈ ಮೂರ್ತಿಯನ್ನು ಣ, ಶೈಲಿ, ಕಾಲಮಾನದಲ್ಲಿ ಹೋಲುವ ಸಮಕಾಲೀನವಾಗಿರಬಹುದಾದ ಒಂದೇ ಒಂದು ರ್ತಿ ಗೋವೆಯ ಪೆಡ್ನೆ ತಾಲೂಕಿನ ಕೋರಗಾಂವ್ ಎಂಬಲ್ಲಿಯ "ಕಮಲೇಶ್ವರ" ೇವಾಲಯದ ಅಂಗಳದಲ್ಲಿ ಭಿನ್ನವಾಗಿ ಬಿದ್ದಿದೆ. ಈಗ ಪೂಜೆಗೊಳ್ಳುತ್ತಿರುವ ಆ ದೇವಳದ ರ್ತಿ ಸುಮಾರು 17ನೇ ಶತಮಾನದ್ದು. ಇದು ಅದರ ಕೈಯಲ್ಲಿ ಕಡೆಗೋಲಿದೆ... ಡುಪಿಯ ಕೃಷ್ಣನ ಬಲಿಮೂರ್ತಿಯ ಕೈಯಲ್ಲಿರುವಂತೆ ಎಂದರೆ ಆಶ್ಚರ್ಯವೇ ಸರಿ. 17ನೇ ತಮಾನದ ಈ ಮೂರ್ತಿಯನ್ನು ಉಡುಪಿಯ ಬಲಿಮೂರ್ತಿಯ ಲಕ್ಷಣಗಳೊಳ್ಳದು ಂದಾಗ ಇವೆರಡು ಮೂರ್ತಿಗಳ ಸಂಬಂಧವನ್ನು ಭಾವಿಸಬಹುದು.

ಆಚಾರ್ಯರ ಶಿಷ್ಯರು ಉಡುಪಿಯ ಕೃಷ್ಣನ ಮೂರ್ತಿಯನ್ನು ಗೋವೆಯಲ್ಲಿ ಡುಕಿದಿರಬಹುದು. ಅಲ್ಲಿಂದ ಅದನ್ನು ಸಾಗಿಸುವಾಗ ಭಿನ್ನವಾಗದಂತೆ ಗೋಪೀ ಂದನವನ್ನು ಮೆತ್ತಿ ಗೋಪೀಚಂದನದ ಪೆಟ್ಟಿಗೆಯೊಳಗೆ ಇಟ್ಟು ಈ ಪೆಟ್ಟಿಗೆಯನ್ನು ಹಾಯಿ

ಹಡಗದಲ್ಲಿ ಗೋವೆಯಿಂದ ರವಾನಿಸಿರಬಹುದಾಗಿ ತಿಳಿದರೆ ಆಚಾರ್ಯರಿಗೆ ಹಡಗದಲ್ಲಿದ್ದ ಗೋಪೀಚಂದನದ ಹೆಂಟೆಯಲ್ಲಿ ಮೂರ್ತಿಯು ದೊರಕಿತೆಂಬ ಕತೆಯ ಮೂಲವೂ ಬಯಲಾಗುತ್ತದೆ. ಈ ಕೃಷ್ಣನಿಗೆ ಗೋವೆಯ ಸಂಬಂಧವಿದ್ದಿರಬೇಕೆಂಬ ಊಹೆಗೆ ಬಲವತ್ತರವಾದ ಶಾಸನ ಪ್ರಮಾಣಗಳಿವೆ. ಮಠದಲ್ಲಿ ಎರಡು ಶಾಸನಗಳಿವೆ. ಅದರೊಂದರಲ್ಲಿ "ಸಾಷಷ್ಟಿ ದ್ವೀಪದೊಳಗಣ ಅಷ್ಟಗ್ರಾಮ ಮುಖ್ಯವಾದ ಮಠಗ್ರಾಮಕ್ಕೆ ಮೊದಲಿಗರಾದ ಕೌಶಿಕಗೋತ್ರದ ರುಕ್ಶಾಖೆಯ ನಾಂ ಪ್ರಭುಗಳ ಮಗ ದಾಮಾಪ್ಪ ಪ್ರಭು" ಮಾಡಿದ ಧರ್ಮದ ವಿವರವಿದೆ.[10] ಇದೇ ಶಾಸನದಲ್ಲಿ ದಾಸರ ದಾಂ ಪ್ರಭು ಮಗ ಗೋವಿಂದ ಪ್ರಭು ಕೂಡ ತನ್ನ ಮಾತಾಪಿತೃಗಳಿಗೆ ಅಕ್ಷಯ ಪುಣ್ಯಲೋಕ ಪ್ರಾಪ್ತಿಯಾಗಬೇಕೆಂದೂ, ತನ್ನ ಮಕ್ಕಳಿಗೆ ಪುತ್ರ ಪೌತ್ರಾಭಿವೃದ್ಧಿಯಾಗಬೇಕೆಂದೂ "ಕೃಷ್ಣದೇವರ ಗರ್ಭಗೃಹದ ಜೀರ್ಣೋದ್ಧಾರಕೆ ಗುಂಡೋತ್ತರ ತಳಗಲ್ಲು, ಪಾಣಿಪೀಠ, ಚೌಕದ ಭಿತ್ತಿ, ದ್ವಾರಬಂಧ, ತೊಲೆಮುಚ್ಚಳ ... ಮಾಡಿಸುವ ಕೆಲಸಕೆ ಮುಟ್ಟಿದ ಅರ್ಥವನು ಸಹಿರಣ್ಯೋದಕ ಧಾರಾಪೂರ್ವಕವಾಗಿ" ಕೊಟ್ಟದನ್ನು ಕಾಣಬಹುದು. ಇನ್ನೊಂದರಲ್ಲಿ "ಕೊಳಪಿ ಗ್ರಾಮದೊಳಗಣ ಸಂಕುಮಾಳಿ ಅಗ್ರಹರದ ಕೊಂಕಣ ವರ್ಗದ ಬ್ರಾಂಹ್ಮಣ ರುಕುಶಾಖೆ ಭಾರದ್ವಾಜ ಗೋತ್ರದ ಸೌದ[illegible] ಜಿಂಸವರದ ನಾರಣಪ್ಪಯ್ಯ ಮಗ ಲಿಂಗಪ್ಪಯ್ಯ ಶ್ರೀಕೃಷ್ಣದೇವರ ಸಂಮುಖದಲ್ಲಿ" ದಾನ ಕೊಟ್ಟಿರುವ ವಿವರಗಳಿವೆ[11]. ಇವೆರಡೂ ಶಾಸನಗಳು ಕ್ರಿ. ಶ. 1614ರವು. ಆ ಕಾಲಕ್ಕೆ ಜಿಲ್ಲೆಯಲ್ಲಿ 'ಕೊಂಕಣ ವರ್ಗದ' ಬ್ರಾಹ್ಮಣರ ದೇವಾಲಯಗಳು ಇದ್ದವು, ಆದರೂ ಈ ದಾತರು ಉಡುಪಿಯ ಕೃಷ್ಣನಿಗೆ ದತ್ತಿಯನ್ನು ಕೊಟ್ಟಿರುವುದನ್ನು ಕಂಡರೆ ಈ ಕೃಷ್ಣನು ಅವರಿಗೆ ಪರಿಚಿತನಾದ ದೈವತವೆಂಬುದನ್ನು ಅನುಮಾನಿಸಬಹುದು.

ಕ್ರಿ. ಶಕ 1437ರಲ್ಲಿ ಹೊರಟ ಒಂದು ಶಾಸನದ ಪ್ರಕಾರ ಅದರ ತೇದಿಯ ಹಿಂದಿನ ಆನಂದ ಸಂವತ್ಸರದಲ್ಲಿ "ಅಣಪ ವೊಡೆಯರು ಶಿವಳಿಯ ಗ್ರಾಮಕ್ಕೆ ಧಾಳಿಯ ಮಾಡಿ ನಾಡನಿರಿಂತಮಾದ್ದಲ್ಲಿ ಬಾರಕೂರ ಹತ್ತುಕೇರಿ ಮೊದಲಾದ ಕಟ್ಟಳೆಯವರು ಕೂಡಿ ಶಿವಳಿಯ ಗ್ರಾಮ ಸಂತೈಸುವಲ್ಲಿ ಅಲ್ಲಿಯ ದೇವಸ್ತಾನದ ಅನ್ನಮಾನ್ಯಗಳು ತಪ್ಪಿದ್ದಲ್ಲಿ ಉಡುಪಿನ ಶ್ರೀಕೃಷ್ಣದೇವರ ಪ್ರತಿಮಾ ಛಲನೆಮಾದ್ದಲ್ಲಿ ಶ್ರೀಕೃಷ್ಣದೇವರಿಗೆ ಕಟ್ಟಳೆಯವರು ಅರಸಿಗೆ ಬಿನ್ನಹ ಮಾಡಿದ್ದಲ್ಲಿ–"[12] ಮೊದಲಾದ ವಿವರಗಳಿವೆ. ಇವರಿಂದ ಶ್ರೀ ಆಚಾರ್ಯರು ಪ್ರತಿಷ್ಠೆ ಮಾಡಿದ ಮೂರ್ತಿ ಆನಂದ ಸಂವತ್ಸರದಲ್ಲಿ ಅಲ್ಲಿಂದ ಚಲಿಸಿದ್ದಿತೆಂಬ ವಿಷಯವನ್ನು ಗ್ರಹಿಸಬಹುದು.

ಶಕ 1536 ಪ್ರಮಾದಿ ಸಂವತ್ಸರದಲ್ಲೂ "ಶ್ರೀಕೃಷ್ಣದೇವರನು ಹೊರ ಮಂಟಪಕೆ ಬಿಜೆಮಾಡಿಸಿ ಅಲ್ಲಿಯೂ ದೇವರ ಪೂಜೆಯನು ಸಾಂಗವಾಗಿ ನಡೆಸುತಲೆ ದೇವರ ಗರ್ಭಾಗಾರ ಮುಂದಣ ಮಠವನೂ ಶಿಲಾಮಯವ ಮಾಡಿಸಿ ಆ ಮೇಲೆ ಎರಡು ನೆಲೆಯಾಗಿ ತಾಂಬ್ರದ ಹೊದಕೆಯನೂ ಮಾಡಿಸಿ ಆ ಮೇಲೆ ಕಲಶ ಸ್ಥಾಪನೆ ಮಾಡಿಸಿ .... ತಥಾತಿಥಿಯಲ್ಲಿ ವಿದ್ಯುಕ್ತ ಪ್ರಕಾರದಿಂದ ಶ್ರೀಕೃಷ್ಣದೇವರನೂ ಪುನಃ ಪ್ರತಿಷ್ಠೆಯ ಮಾಡಿದ

ಲದಲ್ಲಿ..."[13] ಎಂಬ ವಿವರಗಳಿದ್ದು ಅದಕ್ಕೆ ಮೊದಲು "ಉಡುಪಿನ ಶ್ರೀಕೃಷ್ಣದೇವರ ಮಠವು ಮೊದಲೆ ಮಂಗಲಕವಾಗಿ" ಇದ್ದುದನ್ನೂ ತಿಳಿಸುತ್ತದೆ. ಈ ಪುನಃ ಪ್ರತಿಷ್ಠೆ ಮಾಡಿದ "ಶ್ರೀಮತ್ಪರಮ ಹಂಸ ಪರಿವ್ರಾಜಕಾಚಾರ್ಯರಾದ ಶ್ರೀ ಹಯಗ್ರೀವ ದೇವರ ಪಾದಪದ್ಮಾರಾಧಕರಾದಂತಹ ಶ್ರೀಮನ್ಮಧ್ವ ಸಿದ್ಧಾಂತ ಪ್ರತಿಷ್ಠಾಪನಾಚಾರ್ಯರಾದ ಶ್ರೀವಾದಿರಾಜ ತೀರ್ಥ ಶ್ರೀಪಾದಂಗಳವರ ಕರಕಮಲ ಸಂಜಾತರಾದ ಶ್ರೀ ವೇದವೇದ್ಯ ತೀರ್ಥರ" ಪೂಜಾ ಪರ್ಯಾಯ ಕಾಲದಲ್ಲಿ,

ಅದುವರೆಗೆ ಮರಕಲಶವಾಗಿದ್ದ ಮಠವನ್ನು ಶಿಲಾಮಯ ಮಾಡಿದುದೂ, ಗರ್ಭಗೃಹದ ಜೀರ್ಣೋದ್ಧಾರದ ಸಮಯದಲ್ಲಿ ಕಲ್ಲಿನ ಗುಂಡುಕಲ್ಲಿನ ತಳಗಲ್ಲು, ಪಾಣಿಪೀಠ, ...ಕದ ಭಿತ್ತಿ, ದ್ವಾರಬಂಧ, ತೊಲೆಯ ಮುಚ್ಚಳಿಗಳನ್ನು ಶಿಲಾಮಯ ಮಾಡುವ ವೆಚ್ಚವನ್ನು ಗೋವಿಂದ ಪ್ರಭು ಮುಟ್ಟಿಸಿದುದೆಂಬುದನ್ನು ಮೊದಲೇ ವಿವರಿಸಿದ್ದೇವೆ. ಈ ಎಲ್ಲ ವಿವರಗಳಿಂದ ಶ್ರೀಕೃಷ್ಣನ ಗರ್ಭಗುಡಿಯು ಹಿಂದೆ ಇದ್ದ ರೀತಿಯಲ್ಲೇ ಇಲ್ಲ, ಕಾಲದಿಂದ ಕಾಲಕ್ಕೆ ಪರಿವರ್ತಿತವಾಗಿದೆ ಎಂಬುದನ್ನು ಕಾಣಬಹುದು. ಕಳೆದ ಶತಮಾನದಲ್ಲಿ ಕೂಡ ಜೀರ್ಣೋದ್ಧಾರವಾಗಿ ಶೈಲಮಂಟಪವನ್ನು ಕಟ್ಟಿಸಿ ಹರಿಗೆ ಸಂತೋಷದಿಂದ ಅರ್ಪಿಸಿದ ಶಾಸನವೊಂದು ದೇವಾಲಯದ ತೀರ್ಥಮಂಟಪದ ಕಂಭದಲ್ಲಿದೆ. ಕ್ರಿ. ಶ. 1390ರಲ್ಲಿ ...ಕ್ಷಪ್ಪ ಒಡೆಯರು ಕೃಷ್ಣದೇವರ ದರುಶನಕ್ಕೆ ಬಂದಾಗ "ದೇವರ ಶ್ರೀ ಮುಂಬಗದಲಿ ...ಂಬದ ...ದಕಗಳ ಮಂಟಪ ಕಟ್ಟಿಸಿ ಕಂಚಿನ ತೊಳಸಿ ವೃಂದಾವನ ಹಕಿಸಿದು ಮಾಕ್ಷಪ ಒಡೆಯರು"[14] ಎಂದು ಒಂದು ಶಾಸನ ಹೇಳುತ್ತದೆ. ಆದರೆ ಇವೆರಡೂ ದೇವರ ಶ್ರೀ ಮುಂಭಾಗದಲ್ಲಿ ಇಲ್ಲ, ಬದಿಯಲ್ಲಿ ಇವೆ,

ಎರಡು ಕೋಣೆಗಳಿರುವ ಗರ್ಭಗುಡಿಯಿರುವಲ್ಲಿ ಆಗಮ ಶಾಸ್ತ್ರಗಳ ಪ್ರಕಾರ ಒಂದು ಇನ್ನೊಂದರ ಮುಂದೆಯೇ ಇರಬೇಕು, ಬದಿಯಲ್ಲಲ್ಲ. ಶ್ರೀ ಆಚಾರ್ಯರ ತಂತ್ರಸಾರವೂ ಇದನ್ನೇ ವಿಧಿಸುತ್ತದೆ. ಈಗ ಇರುವಂತಹ ಮಠದ ವಾಸ್ತು ಪ್ರಕಾರ ತಂತ್ರಸಾರಕ್ಕೆ ವಿರೋಧವಾಗಿಯೇ ಇದೆ, ಹಲವಾರು ವಿವರಗಳಲ್ಲಿ, ಶ್ರೀಕೃಷ್ಣನ ಮೂರ್ತಿ ಕೋಣೆಯಲ್ಲಿ ಮಧ್ಯದಲ್ಲಿಲ್ಲ, ಮಧ್ಯಕ್ಕಿಂತ ಮುಂದಕ್ಕೆ ಇದೆ. ಅಂದರೆ, ಹಿಂದೆ ಮಧ್ಯದಲ್ಲಿದ್ದರೂ, ಆ ಮೇಲೆ ಪುನಃ ನಿರ್ಮಾಣವಾದಾಗ ದೇವರ ಹಿಂಭಾಗದಲ್ಲಿ ಕಟ್ಟಡವನ್ನು ವಿಸ್ತರಿಸಿದ್ದರೆಂಬುದು ಕಾಣುತ್ತದೆ. ನವಗ್ರಹ ಕಿಂಡಿ ಇರುವಲ್ಲಿ ದ್ವಾರಬಂಧವೂ ದ್ವಾರಪಾಲಕರೂ ಇದ್ದಾರೆ, ಆದುದರಿಂದ ಹಿಂದೆ ಇಲ್ಲಿ ಈ ಗರ್ಭಗುಡಿಯ ದ್ವಾರವಿತ್ತೆಂಬುದು ನಿಶ್ಚಯ. ಕಾರಣಾಂತರಗಳಿಂದ ಇಲ್ಲಿ ಕಿಟಿಕಿಯನ್ನು ಇರಿಸಲಾಯಿತು. ಅಷ್ಟೇ. ಇವೆಲ್ಲ ವಿವರಗಳಿಂದ ನಿಷ್ಕರ್ಷೆ ಮಾಡಬಹುದಾದುದಿಷ್ಟೆ. "ದೊಡ್ಡ ಕೋಣೆ"ಯು ಒಂದು ಕಾಲಕ್ಕೆ ಬೇರೆಯೇ ಕೃಷ್ಣನ ಮೂರ್ತಿಯ, ಅಥವಾ ಆಚಾರ್ಯರು ಮೊದಲು ಪ್ರತಿಷ್ಠೆ ಮಾಡಿದ ಗರ್ಭಗೃಹವಿದ್ದಿರಬೇಕು. ಇಲ್ಲಿನ ...ಜಾಲಬೇರವು ಪೂರ್ವಾಭಿಮುಖವಾಗಿದ್ದುದರಿಂದಲೇ ಹೊಸ ತೆನೆಯನ್ನು ಪೂರ್ವದ ಬಾಗಿಲಿನಿಂದ ಇಂದಿಗೂ ತೆರೆವಂತಹ ಸಂಪ್ರದಾಯಕ್ಕೆ ಕಾರಣವಿರಬೇಕು. ಅಂಣಪ

ವೊಡೆಯರ ಧಾಳಿಯ ಕಾರಣದಿಂದಲೋ, ಇನ್ನಾವ ಕಾರಣದಿಂದಲೋ ಶ್ರೀಕೃಷ್ಣನ ಮೂರ್ತಿ ಚಲಿಸಿ "ಮರಗೆಲಸ"ವಾಗಿದ್ದ ಮಠದಲ್ಲಿ ಸ್ವಲ್ಪ ಸಮಯದ ವರೆಗೆ ಇದ್ದು, ಅಮೇಲೆ ಈಗ ಇರುವ ಚಿಕ್ಕ ಕೋಣೆಯನ್ನು ಶಿಲಾಮಯವನ್ನಾಗಿ ಮಾಡಿ ಪುನಃ ಪ್ರತಿಷ್ಠೆ ಮಾಡಿರಬೇಕು. ಈ ಚಿಕ್ಕ ಕೋಣೆಗೂ ಕಾಲಾಂತರದಲ್ಲಿ ಮಾರ್ಪಾಟು ಆಗಿರಬೇಕು ಎಂಬುದನ್ನು ಶಾಸನಗಳ, ಐತಿಹ್ಯಗಳ ಪರಿಶೀಲನೆಯಿಂದ ತಿಳಿಯಬಹುದು. ಇಂತಹ ಮಾರ್ಪಾಟುಗಳು ಯಾಕಾದವು ಎಂಬುದು ಅಷ್ಟಮಠಗಳ ಸಂಬಂಧವಿರುವವರಲ್ಲಿ ಕೆಲವರಾದರೂ ತಿಳಿದವರು ಇರಬಹುದು. ಜಿಜ್ಞಾಸುಗಳಿಗೋಸ್ಕರ ತಿಳಿದವರು ಇದರ ಕಾರಣವನ್ನು ತಿಳಿಸಲೆಂದು ಆಶಿಸುವೆವು.

ಟಿಪ್ಪಣಿಗಳು

1. ಶ್ರೀ ಕೃಷ್ಣಪುರ ಮಠದ "ಉಡುಪಿ" ಪುಟ 14
2. ,, ,, 17
3. Hand book of Udipi P. 16
4. ,, P. 17
5. Udipi: an introduction P. 18/19
6. South Indian inscriptions VII No. 298
7. ,, ,, 303
8. ಅದಮಾರು ಮಠದ ಕೈಫಿಯತ್ತು (ಬೆನಗಲ್ ರಾಮರಾಯರು)
9. ಶ್ರೀಕೃಷ್ಣನ ಉಡುಪಿ ಪು. 15. ಮಧ್ವವಿಜಯ ಸರ್ಗ ೯. ೪೦–೪೩
10. South Indian Inscriptions VII No. 302
11. ,, ,, ,, 301
12. ,, ,, ,, 296
13. ,, ,, ,, 297
14. ,, ,, ,, 305

ಅನುಬಂಧ: (ಉಡುಪಿಯ ಬಗೆಗೆ ನೋಡತಕ್ಕವು):

1. ಶ್ರೀ ಬಿ. ರಾಮಕೃಷ್ಣಾಚಾರ್ಯರು. Hand Book of Udupi
2. ಶ್ರೀ ಕೃಷ್ಣಪುರ ಮಠದ ಪ್ರಕಟನೆ: ಉಡುಪಿ
3. ಶ್ರೀ ಬನ್ನಂಜೆ ರಾಮಾಚಾರ್ಯರು; ಶ್ರೀಕೃಷ್ಣನ ಉಡುಪಿ
4. ಶ್ರೀ ಅಗ್ರಹಾರ ನಾರಾಯಣ ತಂತ್ರಿ: ರಜತಪೀಠ ಪುರ ಮತ್ತು ಪಾಜಕ ಕ್ಷೇತ್ರ
5. ಡಾ। ಪಿ. ಗುರುರಾಜ ಭಟ್ಟ: ಉಡುಪಿ (ಐ. ಬಿ. ಎಚ್.)
6. ಗೋವಿಂದ ಪೈ: ತೆಂಕನಾಡು; ಉಡುಪಿ ನಗರಸಭೆಯ ರಜತೋತ್ಸವ ಸಂಚಿಕೆ
7. ಶ್ರೀ ವೆಂಕಟರಾಯಾಚಾರ್ಯ: ಶ್ರೀಕೃಷ್ಣನೂ ಕನಕದಾಸನೂ (ವಿ, ಸಾ. ಮಾ.)

೧೧ ಸಾಹಿತ್ಯ

ಶ್ರೀ ತಾಳ್ತಜೆ ಕೃಷ್ಣ ಭಟ್ಟ, ಉಪ್ಪಿನಂಗಡಿ.

ಸಾಹಿತ್ಯ ಸಂಗೀತ ಶಿಲ್ಪ ಇವು ಜನಾಂಗದ ಸಂಸ್ಕೃತಿಯ ಪ್ರತಿಬಿಂಬ ಸ್ವರೂಪಗಳು. ಂಗೀತದಲ್ಲಿ ಸಾಹಿತ್ಯವಿದೆ. ಶಿಲ್ಪದಲ್ಲಿಯೂ ಸಾಹಿತ್ಯವು ಅಂತರ್ನಿಹಿತವಾಗಿದೆ. ಅಂತೂ ಇವು ಮೂರೂ ಒಂದೇ ಆದ ಮೂಲ ಕಲೆಯ ರೂಪಭೇದಗಳೆನ್ನಬಹುದು. ಸದ್ಯ ಾಹಿತ್ಯದ ಕುರಿತಾಗಿಯೇ ಹೇಳಲಿರುವುದರಿಂದ ಉಳಿದವುಗಳಿಲ್ಲಿ ಅಪ್ರಸ್ತುತ. ಕಾವ್ಯ, ್ರಬಂಧ, ಕಾದಂಬರಿ ಮೊದಲಾದುವೆಲ್ಲಾ ಪ್ರಾಚೀನ ಸಾಹಿತ್ಯ ಪ್ರಕಾರಗಳು. ಇವೇ ಅಲ್ಲದೆ. ಅನೇಕ ಪ್ರಕಾರಗಳಾದ ಪಾಕಶಾಸ್ತ್ರ, ವೈದ್ಯಶಾಸ್ತ್ರ, ಅಶ್ವ-ಗಜ-ಶಾಸ್ತ್ರ, ಜ್ಯೋತಿಷ್ಯ ಶಾಸ್ತ್ರ ಮೊದಲಾದುವುಗಳೂ ಸಾಹಿತ್ಯಿಕವಾಗಿ ಬರೆದವುಗಳಿರುತ್ತವೆ. ಅವುಗಳನ್ನೂ ಆಯಾ ಶಾಸ್ತ್ರದ ಸಾಹಿತ್ಯವೆಂದೇ ಕರೆಯುವುದು ವಾಡಿಕೆ. ಈ ಮಾತು ವ್ಯಾಕರಣ ಶಾಸ್ತ್ರಕ್ಕೂ ಅನ್ವಯಿಸುವುದಾಗಿದೆ. ಓದಿದೊಡನೆ ಅಂತರ್ಯವು ಭಾವನಾಮಯವಾಗುವಂತೆ ಮಾಡುವ, ಮಾಗನ ಅಭಿರುಚಿಗೆ ತಕ್ಕುದಾಗಿ ಆತನಿಗರಿಯದಂತೆಯೇ ಆತನನ್ನು ಸುಸಂಸ್ಕೃತನನ್ನಾಗಿಸ ಲ್ಲ, ಆತನಿಗೆ ಆನಂದವನ್ನುಂಟುಮಾಡಬಲ್ಲ, ಆತನ ಚಿತ್ತವನ್ನು ಸೆರೆಹಿಡಿಯಬಲ್ಲ ಬರ ವಣಿಗೆಯೇ ಸಾಹಿತ್ಯವೆನಿಸುವುದು. ಅದು ಪದ್ಯವಿರಬಹುದು, ಗದ್ಯವಿರಬಹುದು ಇಲ್ಲವೇ ಗದ್ಯಪದ್ಯಮಯವಾಗಿ ಚಂಪೂ ಇರಬಹುದು. ಹಳೆಗನ್ನಡವಿರಬಹುದು, ಹೊಸಗನ್ನಡವಿರ ಬಹುದು, ಸಾಹಿತ್ಯವೆಂದರೆ ಅದು 'ಸತ್ಯಂ-ಶಿವಂ-ಸುಂದರಂ' ಎಂಬ ಈ ತ್ರಿಗುಣಾತ್ಮಕ ವಾದ ಬರೆಹವಾಗಿರಬೇಕು.

ಸಾಹಿತ್ಯ ಗಂಗೆಯು ಉತ್ತುಂಗ ಬುದ್ಧಿಗಿರಿ ಶಿಖರದಲ್ಲಿ ಉದ್ಭವವಾಗುತ್ತದೆ. ರ್ಯಮೃತ ಧ್ವನಿಯಿಂದ ಕೆಳ ಜಗತ್ತಿಗೆ ಅಕ್ಷರ ಧಾರಾಪ್ರವಾರವಾಗಿ ಧುಮುಕುತ್ತದೆ. ಾಪ ಪರಿಹಾರಮಾಡಿ ಪುಣ್ಯವಾಹಿನಿಯಾಗಿ ಜೀವನಾನಂದದಾಯಕವಾಗಿ ಪ್ರವಹಿಸುತ್ತದೆ. ್ರಗತಿಶೀಲವಾಗಿ ಅಭಿವೃದ್ಧಿ, ಆಹ್ಲಾದವನ್ನಿತ್ತು ರತ್ನಾಕರ ಸಂಪರ್ಕವನ್ನು ಪಡೆಯುತ್ತದೆ. ಾಹಿತ್ಯದ ಮಹಿಮೆ ಅಗಾಧವಾದದ್ದು, ಅದು ಪಾಮರನನ್ನು ಪಂಡಿತನನ್ನಾಗಿಸುತ್ತದೆ. ೇಡಿಯನ್ನು ಕಡುಗಲಿಯನ್ನಾಗಿಸುತ್ತದೆ. ದುಷ್ಟನನ್ನು ಸಜ್ಜನನನ್ನಾಗಿ ಮಾಡುತ್ತದೆ. ಆದ್ದ ಂದ ಸಾಹಿತ್ಯಕ್ಕಾಗಿ ಸಾಹಿತ್ಯವೆಂಬ ಮಾತಿಗೆ ಅರ್ಥವಿಲ್ಲ. ಸಾಹಿತ್ಯವು ಜ್ಞಾನಕ್ಕಾಗಿ, ಆನಂದ ಕ್ಕಾಗಿ, ಪೌರುಷಕ್ಕಾಗಿ, ಉದಾರತೆಗಾಗಿ, ಹೀಗೆ ಸಾವಿರಾರು ಬಗೆಯ ತೆರವುಗಳಿಗಾಗಿ ಸಾಹಿತ್ಯ ದೆ.

ನಮ್ಮ ದೇಶದ ಪ್ರಾಚೀನ ಸಾಹಿತಿಗಳೆಲ್ಲಾ ಋಷಿಗಳೆನಿಸಿದವರು. ಅವರು ್ರಚಾರ ಮಾಡಿದ ಸಾಹಿತ್ಯಗಳು ವೇದೋಪನಿಷತ್ತುಗಳು. ಇವುಗಳ ಸಾರ ಸರ್ವಸ್ವವನ್ನೇ ಥಾರೂಪವಾಗಿ ರೂಪಿಸಿದವರೆಂದರೆ ವಾಲ್ಮೀಕಿ ಮತ್ತು ವೇದವ್ಯಾಸರು. ವಾಲ್ಮೀಕಿಯ

ರಾಮಾಯಣ ಹಾಗೂ ವ್ಯಾಸರ ಮಹಾಭಾರತ, ಭಗವದ್ಗೀತೆಗಳು ಅನೇಕಾನೇಕ ದೇಶಭಕ್ತರನ್ನೂ, ವೀರರನ್ನೂ, ತ್ಯಾಗಿಗಳನ್ನೂ ನಿರ್ಮಾಣ ಮಾಡಿವೆ. ಇಂದಿಗೂ ಅವು ಚಿರನೂತನವಾಗಿವೆ. ('ಅಹಂ ಬ್ರಾಹ್ಮಣಃ ಅಹಂ ಕ್ಷತ್ರಿಯಃ, ಶಾಪಾದಪಿ ಶರಾದಪಿ' ಎಂಬ ಪುರಾಣ ವಾಕ್ಯವೇ ಮಯೂರ ಶರ್ಮನಿಗೆ ಪ್ರೇರಕ ಮಂತ್ರವಾಗಿತ್ತು. ತನ್ನವರ ಸಂಘಟನೆಗೆ ಶ್ರೀರಾಮನ ವಾನರ ಬಲ ಹಾಗೂ ಶ್ರೀ ಕೃಷ್ಣನ ಗೋಪಾಲರ ಸಂಘಟನೆಯೇ ಮೇಲ್ಪಂಕ್ತಿಗಳಾದುವು. ಆ ದಾರಿಯಿಂದ ಆತನು ಕನ್ನಡ ರಾಜ್ಯವನ್ನು ಸ್ವತಂತ್ರವಾಗಿ ಮಾಡಿದನು.) ಮಾಧವ ಸಾಯಣರ ವೇದ ಭಾಷ್ಯಗಳು ಮತ್ತು ತತ್ತ್ವಬೋಧೆಗಳು ದೇಹ ಮತ್ತು ಆತ್ಮದ ವಿವರವನ್ನು ಕೊಟ್ಟುದರಿಂದ ದೇಹ ಸುಖಕ್ಕಾಗಿ ಪರಕೀಯರಾಗುತ್ತಿದ್ದ ನಮ್ಮ ಜನತೆ ಎಚ್ಚರಗೊಂಡಿತು. ಸ್ವಾಭಿಮಾನದ ಕಾವೇರಿಸಿತು 'ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ' ಎಂಬ ಮಾತು ತಿಳಿವಳಿಕೆಗೆ ಬಂತು. 'ಸಂಗಚ್ಛಧ್ವಂ ಸಂವದಧ್ವಂ' ಎಂಬ ಶ್ರುತಿವಚನವು ಸಂಘಟಿಸಲು ಪ್ರೇರಣೆಯಾಯಿತು, ಇದರಿಂದ ಅವರು ಶೌರ್ಯ ತ್ಯಾಗ ಸಾಹಸದ ಅಸಂಖ್ಯ ಕನ್ನಡ ಕಲಿಗಳು ಕಾಣಿಸಿಕೊಂಡರು. ಇಡೀ ವಿಶ್ವವೇ ಕಂಡರಿಯದ, ಕೇಳರಿಯದ ಮಹಾ ವೈಭವಶಾಲೀ ವಿಜಯನಗರ ಸಾಮ್ರಾಜ್ಯವು ಸ್ಥಾಪನೆಯಾಯಿತು. ಭಾರತ ಸ್ವಾತಂತ್ರ್ಯದ ಹೋರಾಟಕ್ಕೆ ಠಾಗೋರರ "ಜನಗಣಮನ"ವೂ, ಬಂಕಿಮ ಚಂದ್ರರ 'ವಂದೇ ಮಾತರಂ'ವೂ ಬೀಜಮಂತ್ರವಾದುದು ಮರೆಯುವಂತಿಲ್ಲ! 'ನಿಯತಂ ಕುರು ಕರ್ಮ ತ್ವಂ' ನಿಶ್ಚಿತವಾದ ಅಥವಾ ನೀನು ಮಾಡಲೇಬೇಕಾದ ಕರ್ಮವನ್ನು ಮಾಡು ಎಂಬ ಗೀತಾ ವಾಕ್ಯವೇ ಒಂದು ವೈರಾಗಿಯನ್ನು ದೇಶದ ಕಾರ್ಯಕ್ಕೆ ಇಳಿಯಿಸಿತು. ಶಿವಾಜಿ ಮಹಾರಾಜರಿಗೆ ಚಿಕ್ಕಂದಿನಲ್ಲಿ ಅವರ ತಾಯಿಯು ಶ್ರೀರಾಮನ ಮತ್ತು ಶ್ರೀಕೃಷ್ಣನ ಕಥೆಗಳನ್ನು ಹೇಳುತ್ತಿದ್ದಳಂತೆ. ಆ ಕಥಾನಾಯಕರನ್ನೇ ಆದರ್ಶರನ್ನಾಗಿ ಶಿವಾಜಿ ಮಹಾರಾಜರು ಇಟ್ಟುಕೊಂಡಿದ್ದುದು ಅವರ ಜೀವನಕಾಲದ ಪ್ರತಿಘಟನೆಯಿಂದಲೂ ತಿಳಿಯುತ್ತದೆ. ಕನ್ನಡದ ಚರಿತ್ರೆಯನ್ನು ನೋಡಿದರೂ ಕಾಲಕಾಲದಲ್ಲಿ ಜನವೃತ್ತಿಯನ್ನು ಚೇತರಿಸುತ್ತಾ ಬಂದುದು ಸಾಹಿತ್ಯವೆಂಬುದು ಮನವರಿಕೆಯಾಗಬಹುದು. ಜೈನ, ಬ್ರಾಹ್ಮಣ ಹಾಗೂ ಶೈವ, ವೈಷ್ಣವ ಮುಂತಾದ ಮತ ತತ್ತ್ವಗಳನ್ನು ಬೋಧಿಸಿ ಎಲ್ಲರನ್ನು ಸಂಘಟಿಸುವುದರಲ್ಲಿ ಆ ಆ ಕಾಲದ ಸಾಹಿತ್ಯಕೃತಿಗಳು ಪ್ರೇರಕವಾಗಿ ನಿಂದಿವೆ. ಸಾಹಿತ್ಯವು ಅಣು ಶಕ್ತಿಯಂತೆ ಒಳಿತನ್ನು ಮಾಡುವಂತೆಯೇ ಕೆಡುಕನ್ನೂ ಮಾಡಬಲ್ಲುದು. (ನಮ್ಮ ರಾಷ್ಟ್ರವು ಮೊನ್ನೆಯ ತನಕ ಪರತಂತ್ರಕ್ಕೊಳಗಾಗಲೂ ಈ ದೇಶದ ಕೆಲವು ಸಾಹಿತ್ಯ ವಿಚಾರಧಾರೆಯೇ ಕಾರಣವಾಗಿದೆ.)

ಮಹಾಭಾರತ ಯುದ್ಧವಾದನಂತರ ಭಕ್ತಿ ಕಾಲವೆಂದು ಭಾರತೀಯ ಸಾಹಿತ್ಯದ ಒಂದು ಕಾಲವನ್ನು ವಿದ್ವಾಂಸರು ವಿಂಗಡಿಸಿ ಹೇಳುತ್ತಾರೆ. ಆಗ ಎಲ್ಲೆಲ್ಲಿಯೂ ಭಕ್ತಿ ಗೀತಗಳು, ಭಕ್ತಿ ಕಾವ್ಯಗಳು ಹುಟ್ಟಿಕೊಂಡುವು. ಭಕ್ತಿ ಪಂಥಗಳೂ ಅವುಗಳಿಂದಲಾಗಿ ಹುಟ್ಟಿಕೊಂಡುವು. ಪ್ರಪಂಚದ ನಶ್ವರತ್ವವೇ ಭಕ್ತಿ ಕಾವ್ಯಗಳು ವರ್ಣಿಸಿದ ವಸ್ತುಗಳು. ಯಜ್ಞ

…ಾಗಾದಿಗಳು ಹಿಂಸಾಪರವೆಂದು ನಿಂದಿಸಲ್ಪಟ್ಟವು. ಅಹಿಂಸಾಪರವಾಗಿ ಬೌದ್ಧ ಮತ್ತು …ನ ಸಂಘಗಳು ತಲೆದೋರಿದುವು. ಆ ಬಗೆಯ ಸಾಹಿತ್ಯ ನಿರ್ಮಾಣವಾಗಿ ಪ್ರಚಾರ …ಯಿತು. 'ವೀರ ಭೋಗ್ಯಾ ವಸುಂಧರಾ' ಎಂಬ ಮಾತು ಸಾಹಿತ್ಯದಲ್ಲಿ ಬರಲಿಲ್ಲ. ಹೆಚ …ವರು ಅಹಿಂಸಾವಾದಿಗಳಾಗಿ ವೀರ ವೃತ್ತಿಯನ್ನು ಮರೆತವರು.

ವೈದಿಕದವರೆಲ್ಲ 'ಉದ್ಧರೇತ್ ಆತ್ಮನಾತ್ಮಾನಂ' ಎಂಬುದನ್ನೂ 'ಸೋಽಹಂ' …ಬ ಅನನ್ಯ ಭಾವವನ್ನೂ ಮರೆತರು. ಘಜನಿಯ ಮಹಮ್ಮದನಂತಹ ಕೊಳ್ಳೆ ಹೊಡ …ು ಬಂದಾಗ ಕೈಯಲ್ಲಿ ಆಯುಧವಿತ್ತು, ಮೈಯಲ್ಲಿ ಬಲವಿತ್ತು. ಆದರೆ ದೇವರಿಗೆ ಮಾಡಿ …ಟ್ಟಲೆಯ ಪಂಚಕಜ್ಜಾಯವನ್ನು ನೈವೇದ್ಯ ಮಾಡಿ ಕಣ್ಣು ಮುಚ್ಚಿ ಧ್ಯಾನದಲ್ಲಿ ಕುಳಿತರು, …ಮಸ್ಥಾನ ನೆಲಕ್ಕುರುಳಿತು. ಭಕ್ತಿಯಿಂದ ಮುಚ್ಚಿದ ಕಣ್ಣು ತೆರೆಯಲೇ ಆಗಲಿಲ್ಲ.

ಇಂದಿನ ಬಿಹಾರವೆಂದು ಬಲುದೊಡ್ಡ ಬೌದ್ಧ ವಿಹಾರವಾಗಿತ್ತು. ಪಠಾಣರದನ್ನು …ುತ್ತಿದ್ದಾಗ ಅಲ್ಲಿದ್ದವರು ಅಹಿಂಸಾವಾದಿಗಳಾದ ಬೌದ್ಧರು. ಅವರಿಗೆ ಕ್ಷತ್ರಿಯತ್ವವು …ರೆತಿದ್ದಿತು. ವಿಹಾರದಲ್ಲಿದ್ದ ಬಲುದೊಡ್ಡ ಸಾಹಿತ್ಯ ಭಂಡಾರವು ಯವನರ ಕುದುರೆ …ಗೆ ಹುರುಳಿ ಬೇಯಿಸಲಿಕ್ಕೆ ಕಟ್ಟಿಗೆಯಾಯಿತು. ತಾತ್ಪರ್ಯವಿಷ್ಟೆ. ಸಾಹಿತ್ಯವು ಸಂತೋಷ …ಗುವಂತೆ ಹೇಳಿದರೆ ಮಾತ್ರ ಸಾಲದು, ಅದು ಕ್ಷೇಮಕರವೂ ಆಗಿರಬೇಕು. ಭಕ್ತಿ, ಅನು …ತ್ತಿ, ವಿರಕ್ತಿ ಇವುಗಳನ್ನು ಅಳವಡಿಸುವಿಕೆಯಲ್ಲಿಯೇ ಪುರುಷಾರ್ಥವೃತ್ತಿಯನ್ನೂ, ತನನು …ಲವಾದ ಕರ್ತವ್ಯವನ್ನೂ ಮರೆಯದಂತಹ ಸಾಹಿತ್ಯಗಳು ಎಲ್ಲಾ ಕಾಲಗಳಲ್ಲಿಯೂ ಹೊಸ …ಹೊಸತು ನಿರ್ಮಾಣವಾಗುತ್ತಿರಬೇಕು.

X X X X

೧೨. ಸಾಹಿತ್ಯವೂ ಸಂಸ್ಕೃತಿಯೂ

ಪ್ರೊ. ಎಂ. ಆರ್. ಭಟ್, ವಿಟ್ಲ.

"ವಿನೋದಕ್ಕಾಗಲಿ ಜ್ಞಾನಾರ್ಜನೆಗಾಗಲಿ ಜನರು ಹೊತ್ತಗೆಗಳನ್ನು ಓದುತ್ತಾರೆ" ಎಂದು ಆಂಗ್ಲ ಬರೆಹಗಾರನ ಉಕ್ತಿಯಿದೆ. ಸಾಹಿತ್ಯವನ್ನು ತಾತ್ಕಾಲಿಕ ಮೌಲ್ಯ, ಶಾಶ್ವತ ಮೌಲ್ಯಗಳೆಂದು ಎರಡು ಬಗೆಯಾಗಿ ವಿಭಾಗಿಸುವುದುಂಟು. ಸಾಹಿತ್ಯವೆಂದರೆ ಏನೆಂಬ ಪ್ರಶ್ನೆ ಇಲ್ಲಿ ಉದ್ಭವಿಸುತ್ತದೆ. ಆಚಾರ್ಯ ದಂಡಿಯು 'ಕಾವ್ಯ ಸದಲಂಕೃತಿಯಾಗಿ ಕಲ್ಪಾಂತರ ಸ್ಥಾಯಿ'ಯಾಗಬೇಕೆಂದನು, 'ಇಷ್ಟಾರ್ಥವ್ಯವಚ್ಛಿನ್ನಾ ಪದಾವಲೀ', 'ರಮಣೀಯಾರ್ಥ ಪ್ರತಿಪಾದಕಃ ಶಬ್ದಃ ಕಾವ್ಯಂ', 'ವಾಕ್ಯಂ ರಸಾತ್ಮಕಂ ಕಾವ್ಯಂ' ಎಂದೂ ಕೆಲವರು ಹೇಳಿದ್ದಾರೆ. ಇಷ್ಟ, ರಮಣೀಯ, ರಸಾತ್ಮಕವೆಂಬ ಶಬ್ದಗಳು ಸಾಮಾನ್ಯವಾಗಿ ಒಂದೇ ತಾತ್ಪರ್ಯದವು. ಕಾವ್ಯದ ಪ್ರಯೋಜನ – ಲಕ್ಷಣಗಳಲ್ಲಿ ಪ್ರಧಾನವಾದವು: 'ಶಿವೇತರಕ್ಷತಿ (ಅಮಂಗಲ ನಿವಾರಣ,)' ಪರ ನಿರ್ವೃತಿ (ವಾಚಾಮಗೋಚರ ಅಲೌಕಿಕಾನಂದ), 'ಕಾಂತಾ ಸಮ್ಮಿತೋಪದೇಶ (ಮನದನ್ನೆಯಂತೆ ಮನಸ್ಸನ್ನೊಲಿಸುತ್ತಾ ಸನ್ಮಾರ್ಗದತ್ತ ಒಯ್ಯುವುದು)' ಎಂದಿದೆ. ಇದೇ ಧರ್ಮಶಾಸ್ತ್ರಕ್ಕೂ ಕಾವ್ಯಕ್ಕೂ ಇರುವ ಭೇದ. 'ಹಿತದಿಂದ ಕೂಡಿದ್ದರೆ ಮಾತ್ರ ಸಾಹಿತ್ಯ'ವೆಂದಲ್ಲಿ, ಹಿತವೇನೆಂದು ವಿಚಾರ ಬರುತ್ತದೆ. ಐಹಿಕ ಆಮುಷ್ಮಿಕ ಸುಖವೆಂದು, ತಾತ್ಕಾಲಿಕ–ಸಾರ್ವಕಾಲಿಕ ಆನಂದವೆಂದು ಅದು ಇಬ್ಬಗೆಯಿದೆ. ಪಾರಮಾರ್ಥಿಕ ಶಾಶ್ವತ ಸುಖವನ್ನೇ ಮಾನವ ಬಯಸಬೇಕು, ಆದರೆ ಸಾಂಸಾರಿಕ ಭಾವವಿರುವನಕ 'ಧರ್ಮವಿರುದ್ಧಗಳಾದ ಅರ್ಥಕಾಮಗಳ' ಅವಶ್ಯಕತೆಯಿರುವುದು ಸ್ವಾಭಾವಿಕ. ಹಾಗಾಗಿ, ಲೋಕಯಾತ್ರೆ ನಡೆಸುತ್ತಿರುವಾಗಲೆ ಪಾರಮಾರ್ಥಿಕವನ್ನು ಅಭ್ಯಸಿಸಬೇಕು. ಆ ಅಭ್ಯಾಸ ಊರ್ಜಿತವಾಗಲು ಸಂಸ್ಕೃತಿ ಬೇರುಬಿಟ್ಟಿರಬೇಕು, ಅದಿಲ್ಲದವನು ಸಾಮಾನ್ಯ ಮರ್ತ್ಯನಷ್ಟೆ; ಸಹೃದಯನಾಗಲಾರನು, ಅವನಿಗೆ ಸಾಹಿತ್ಯದಿಂದ ಹೆಚ್ಚು ಪ್ರಯೋಜನವಾಗಲಾರದು. 'ಅಂತಹನು ಇದಾನೀಂತನ ಸಂಸ್ಕಾರವನ್ನು ಮಾತ್ರ ಪಡೆದವನಾದುದರಿಂದ ತಾತ್ಕಾಲಿಕ ರಾಜಸ–ತಾಮಸ ಸುಖವನ್ನು ಮಾತ್ರ ಹೊಂದಲರ್ಹ'ನೆಂದು ವಿಶ್ವನಾಥನ ವಾಕ್ಯವಿದೆ. ಸಾಹಿತ್ಯ ಬಹು ಪರಿಣಾಮಕಾರಿಯಾಗಲು ಬಹುಮುಖ ಸಂಸ್ಕೃತಿಯನ್ನು ಸ್ವಚ್ಛವಾದ ಕನ್ನಡಿಯಂತೆ ಪ್ರತಿಬಿಂಬಿಸಬೇಕು.

ಸಾಹಿತ್ಯ ಶಾಸ್ತ್ರಗ್ರಂಥವಾಗಬೇಕೆ ಎಂಬ ಪ್ರಶ್ನೆಯೇಳುತ್ತದೆ. ಅವೆರಡರ ಮಾರ್ಗಗಳು, ರೂಪಗಳು ಬೇರೆ ಬೇರೆಯೆಂದೆ ಅದಕ್ಕೆ ಸಮಾಧಾನ. ಕಾವ್ಯರಸಾಸ್ವಾದನ ಮಾಡುವ ಸಹೃದಯನಿಗೆ ಶಾಸ್ತ್ರತತ್ತ್ವಗಳನ್ನು ಗ್ರಹಿಸುತ್ತೇನೆಂಬ ಅರಿವಾಗದೆಯೆ ಅವುಗಳ ಬೋಧನೆಯಾಗುತ್ತದೆ. ಈ ಮಾತು ಕವಿಗೂ ಸಲ್ಲುವುದು. ಸಾಹಿತ್ಯವನ್ನು ನಿರ್ಮಿಸುವಾಗ ಧರ್ಮತತ್ತ್ವವನ್ನೂ ಸಂಸ್ಕೃತಿಯನ್ನೂ ಜನರಿಗೆ ಬೋಧಿಸುತ್ತಿದ್ದೇನೆಂಬ ಪ್ರಜ್ಞೆ ಕವಿಗುಂಟಾಗುವ

ಲ್ಲಿ. ಅದಮೊಟಾದರೆ ಆ ಕೃತಿ ಕೃತ್ರಿಮವೆನಿಸುವುದು. ಸಂಸ್ಕೃತಿ ಕವಿಯ ಪ್ರಕೃತಿಯೊಡ
ಂದಿ. ಉಚಿತ [illegible] ಅವನ ನುಡಿಗಳೂ ಸ್ವಾಭಾವಿಕವಾಗಿ ಹೊರಹೊಮ್ಮುತ್ತವೆ,

[illegible] ನವ್ಯಕವಿಗಳು 'ಪ್ರಗತಿ'ಶೀಲ ಸಾಹಿತ್ಯವನ್ನು ನಿರ್ಮಿಸುವ ಮಹಾಕಾರ್ಯಕ್ಕೆ
ಟಿಬದ್ಧ [illegible]ಂತೆ ತೋರುತ್ತಾರೆ. ಕೆಲವರಿಗೆ 'ಪುರಾಣಮಿತ್ಯೇತದಸಾಧು ಸರ್ವಂ,
ವ್ಯಂತು ಸಾಹಿತ್ಯ ದ:ಘನವದ್ಯಂ' ಎಂದೇ ಪರಮಮಂತ್ರ. ಪ್ರಾಚೀನ ಕವಿಪುಂಗವರು
ರತೀಯ ಸನಾತನ ಸಂಸ್ಕೃತಿಯ ಶಾಶ್ವತಿಕ ಮೌಲ್ಯವನ್ನು, ಮಹಿಮೆಯನ್ನು ತಮ್ಮ
ಅರತ್ನಗಳಲ್ಲಿ ಲೋಕಹಿತಕ್ಕಾಗಿ ಬೆಳಗಿಸಿದ್ದಾರೆ. ಇನ್ನಾವ ಸ್ವಾರ್ಥ ಅವರಿಗಿಲ್ಲ. 'ಧರ್ಮೋ
ಕ್ಷತಿ ರಕ್ಷಿತಃ' ಎಂಬ ಉದಾತ್ತತತ್ತ್ವವೇ ಅವರ ಸಾಧನೆಯಾಗಿದೆ. ನವೀನ ಬುದ್ಧಿ
ಧಾನರ ಅಭಿಪ್ರಾಯವಿದು: "ಭಾರತೀಯ ಜೀವನ ತತ್ತ್ವ ಸಾಮಾಜಿಕ ವ್ಯತ್ಯಾಸಕ್ಕೆ
ರೋಧಿಯಾಗಿದೆ. ನಮ್ಮ ದೇಶವನ್ನು ಆಧುನಿಕತೆಯತ್ತ ಒಯ್ಯಲು, ಬಹುಸಂಖ್ಯಾಕರ
ಸ್ಕೃತಿ ಪ್ರಜ್ಞೆಯನ್ನು ಸುಧಾರಿಸಿ ತರ್ಕಾನುಬಂಧಿಯನ್ನಾಗಿ ಮಾರ್ಪಡಿಸಬೇಕು.
ಂತೋದ್ಯಮದ ಮುನ್ನಡೆಗೆ ಯಾವೊಂದು ಹೊಸ ತೆರನಾದ ಸಂಸ್ಕೃತಿಯ ವಾತಾವರಣ
ಕೋ ಅದನ್ನು ಸಂಪ್ರದಾಯದಾಸ ಭಾರತೀಯ ನಿರ್ಮಿಸಲಸಮರ್ಥ"ನೆಂದು. ಯಂತ್ರೋ
ಮದ ಬೆಳವಣಿಗೆಯಾಗಲು ಹಿಂದಿನ ಸಂಸ್ಕೃತಿಯನ್ನು ನಾಶಮಾಡಬೇಕೆ? ಸಮಾಜದ
ದಲಾವಣೆಗೆ ಪ್ರಾಚೀನ ಸಂಸ್ಕೃತಿಯನ್ನು ಕಡಿಯಬೇಕೆ? ಯಾವ ಸಂಸ್ಕೃತಿ ಪ್ರಿಯನೂ
ರಿಜನಾದಿ ವರ್ಗಗಳ ಉದ್ಧಾರವನ್ನು ತಡೆಯುವುದಿಲ್ಲ. 'ಸರ್ವೇ ಜನಾಃ ಸುಖಿನೋ
ವಂತು' ಎಂಬ ಸಂಸ್ಕೃತಿ ರಾಷ್ಟ್ರದ ಸರ್ವಾಂಗೀಣ ಅಭ್ಯುದಯವನ್ನು ಅದೆಂತು ವಿರೋ
ಧಿಸೀತು? ಎಲ್ಲಾ ಧರ್ಮಗಳ ತಿರುಳೊಂದು, ದೃಷ್ಟಿಕೋನಗಳು ಬೇರೆಬೇರೆ, ಪ್ರತಿರಾಷ್ಟ್ರಕ್ಕೂ
ನತೆಗೂ ಕಾಲಕ್ಕನುಗುಣವಾದ, ಅದರ ದೋಷಗಳನ್ನು ನೀಗಿಸುವ ಆಚಾರಾದಿಗಳು
ವ್ಯವಿಸಿ ಮಾರ್ಗದರ್ಶನವನ್ನು ಮಾಡಿರುತ್ತವೆ. ಪ್ರಗತಿಯ ನೆಪದಲ್ಲಿ ವರ್ಣಾಶ್ರಮ
ರ್ಮವನ್ನು ತೆಗಳುವುದು ಸಲ್ಲಕ್ಷಣವಲ್ಲ! ಪ್ರಗತಿಯ ಸೋಗಿನಲ್ಲಿ ಕೆಲವರು ಸಾಹಿತ್ಯ
ಕ್ಷೇತ್ರವನ್ನು ಸ್ವಾರ್ಥಸಾಧನೆಗೆ ಕಲುಷಿತಗೊಳಿಸುವುದು ವಿಷಾದಕರ, ಇದರಿಂದ ಚಿರ
ಸ್ಥಾಯಿಯಾದ ಸಾಹಿತ್ಯದ ಸನಾತನ ತತ್ತ್ವಕ್ಕೆ ಯಾವ ಬಾಧೆಯೂ ತಗುಲಲಾರದು!

'ಸಂಸ್ಕೃತಿ'ಯೆಂಬುದು 'ಸಂಸ್ಕಾರ'ದ ಪರ್ಯಾಯ; ಸಮಾನಾರ್ಥಕ; ಪರಿಷ್ಕಾರ,
ಲಂಕಾರವೆಂದಾಗುತ್ತದೆ, ಅದು ಹಿಂದಿನ ಜನ್ಮಗಳಿಂದ, ಪೂರ್ವಜರಿಂದ ಅವಿಚ್ಛಿನ್ನ
ರಂಪರಾರೂಪ ಪ್ರವಾಹದಲ್ಲಿ ಇಳಿದು ಈ ಜನ್ಮದಲ್ಲಿ ಸೇರಿಕೊಂಡು, ಮಾನವ ಜೀವಿತ
ನ್ನು ಬೆಳಗುವ ಒಂದು ವಿಶಿಷ್ಟವಾದ ಆಭ್ಯಂತರ ಧರ್ಮವೆನ್ನಬಹುದು, ಕಲಾತ್ಮಕವಾಗಿ,
ಧ್ಯಾತ್ಮಿಕ ತತ್ತ್ವಾನುಭೂತಿಯಾಗಿ, ಲೋಕ ಸಂಗ್ರಹ ಪ್ರಸಕ್ತಿಯಾಗಿ, ಸಾತ್ವಿಕ ಗುಣರೂಪ
ಗಿ, ಪ್ರತಿಭಾರೂಪವಾಗಿ ಅದು ಬೆಳಕಿಗ ಬರುತ್ತದೆ. ಗುಣ ದೋಷಗಳ ತಾರತಮ್ಯ
ನ್ನು ಕಂಡು ಸುಸಂಸ್ಕೃತನೆಂದೊ, ಸಂಸ್ಕಾರ ಹೀನನೆಂದೊ ಗುರುತಿಸುತ್ತೇವೆ. ಹಾಗೆ,
ಹಿತ್ಯದಲ್ಲೂ, ಸಂಸ್ಕೃತಿ ಮತ್ತು ಪ್ರಯೋಜನಗಳ ದೃಷ್ಟಿಯಿಂದ ಉತ್ತಮ, ಮಧ್ಯಮ,

ಅರ್ಥವುಗಳೆಂಬ ವ್ಯತ್ಯಾಸವನ್ನು ಮಾಡಬಹುದು. 'ಸ-ಹಿತತ್ವ'ವಿದ್ದರೆ 'ಸಾಹಿತ್ಯ'ವೆಂಬ ಹೆಸರು ಸಲ್ಲುವುದು! ಸಾಹಿತ್ಯದಲ್ಲಿ ಯಥಾರ್ಥ್ಯವಾದಿ, ಆದರ್ಶವಾದಿ ಎಂದು ಎರಡು ವಿಭಾಗ ಮಾಡುವುದುಂಟು. ಸಂಸ್ಕೃತದ ಪ್ರಾಚೀನ ಸಾಹಿತ್ಯ ಹೆಚ್ಚಾಗಿ ಆದರ್ಶವಾದಿಯಾಗಿ ಬೆಳೆದು ಬಂದಿದೆ. ಕನ್ನಡದಲ್ಲೂ ಪ್ರಾಚೀನ ಸಾಹಿತ್ಯ ಆದರ್ಶಪ್ರಾಯವಾಗಿತ್ತು. ಪಾಶ್ಚಾತ್ಯ ಸಣ್ಣ ಕತೆಗಳು, ಕಾದಂಬರಿಗಳು ಸಮಾಜದ ಕುಂದುಕೊರತೆಗಳನ್ನು ಎತ್ತಿ ತೋರಿಸುತ್ತ, ಹಾಸ್ಯ ಕರುಣಾದಿಗಳ ಮೂಲಕ ಜನತೆಗೆ ಮಾರ್ಗದರ್ಶನವನ್ನು ಮಾಡುತ್ತವೆ. ಕು. ವೆಂ. ಪು. ಮಾಸ್ತಿ, ಶಿವರಾಮ ಕಾರಂತ ಮೊದಲಾದ ಸಾಹಿತಿ ಕತೆ ಕಾದಂಬರಿಗಳಲ್ಲೂ ಆದರ್ಶವನ್ನು ಬಿಡದೆ, ಹೊಸತನ್ನು ಹೆಚ್ಚಾಗಿ ಅಳವಡಿಸಿ ಜನಮನದಲ್ಲಿ ಶಾಶ್ವತ ಸ್ಥಾನವನ್ನು ಸ್ಥಾಪಿಸಿಕೊಂಡಿದ್ದಾರೆ.

'ಕಲ್ಚರ್' ಎಂಬ ಇಂಗ್ಲೀಷಿನ ಪದ ಪ್ರಯತ್ನಜನ್ಯವಾದ ಇದಾನೀಂತನ ಸಂಸ್ಕಾರವನ್ನು ಮಾತ್ರ ಸೂಚಿಸುತ್ತದೆ. ಇದಕ್ಕೂ ಯಥಾರ್ಥತಾವಾದಕ್ಕೂ ನಿಕಟ ಸಂಬಂಧವಿದೆ. ಪ್ರಾಚೀನ ಸತ್ಸಂಪ್ರದಾಯಗಳನ್ನು 'ಸಂಸ್ಕೃತಿ'ಯೆಂದು ಹೆಸರಿಸುತ್ತೇವೆ. ಕೆಲವರು ಅವನ್ನು ಅಂಧ ವಿಶ್ವಾಸಗಳೆಂದು ತೆಗಳುತ್ತಾರೆ. ಅವು ಕೇವಲ ಅಂಧ ವಿಶ್ವಾಸಗಳಲ್ಲ, "ಕಳಬೇಡ, ಕೊಲಬೇಡ"ವೆಂದು, "ಸತ್ಯಂ ವದ, ಧರ್ಮಂ ಚರ"ವೆಂದು ನಮ್ಮ ಸಂಪ್ರದಾಯಗಳಲ್ಲಿ ಕೂಡಿವೆ, ಸಂಸ್ಕೃತಿಯೆಂದು ಹೆಸರು ಪಡೆದಿವೆ. ಉತ್ತಮ ಸಾಹಿತ್ಯವನ್ನು ಓದುವವನ ಎಂತಹ ಕಲ್ಲೆದೆಯೂ ಕರಗಿ ನೀರಾಗದಿರದು. ಆನಂದವರ್ಧನಾಚಾರ್ಯರು ಕರುಣರಸದಲ್ಲಿ ಮಾಧುರ್ಯದ ಆಧಿಕ್ಯಕ್ಕೆ ಕಾರಣ ಹೇಳಿದ್ದಾರೆ: 'ಇದರಲ್ಲಿ ಮನಸ್ಸು ಅತ್ಯಧಿಕವಾಗಿ ಕರಗುತ್ತದೆ" 'ತಸ್ಮೈ ಸ್ಪೃಹಾಂ ಕುರ್ಮಹೇ' ನಮ್ಮ ಕಾವ್ಯಗಳಲ್ಲಿ–ಜೀವನದಲ್ಲಿ–ಅಂತಹ ಸಂಸ್ಕೃತಿ ಹೊಸತರ ಜೊತೆಗೆ ಬೆರೆದು, ಹೊನ್ನಿಗೆ ರನ್ನ ಸೇರಿದಂತೆ ಜನಾದರವನ್ನುಂಟುಮಾಡಲಿ!

X X X X

೧೩. ಪುಸ್ತಕ

(ಅಂದು—ಇಂದು ಹಾಗೂ ಮುಂದು)

—ಡಾ। ಶ್ರೀನಿವಾಸ ಹಾವನೂರ, ಮುಂಬಯಿ,

ಮನುಷ್ಯನು ತನ್ನ ಭಾವನೆಗಳನ್ನು ಬರಹದ ಮೂಲಕ ಇತರರಿಗೆ ತಿಳಿಯು ಡಿಸಬೇಕೆಂದು ಯೋಚಿಸಿದಂದಿನಿಂದಲೇ 'ಪುಸ್ತಕ'ದ ಉದಯವಾಯಿತೆನ್ನಬಹುದು. ರಹಕ್ಕಾಗಿ ಮೊದಲು ಚಿತ್ರಲಿಪಿ, ಅನಂತರ ಭಾವ ಲಿಪಿ ಹುಟ್ಟಿತು. ಬರಹವು ಮನುಷ್ಯನ ಗರಿಕ ಜೀವನದಲ್ಲಿಯ ಒಂದು ಮೈಲಿಗಲ್ಲು. ಪುಸ್ತಕ–ಎಂದೊಡನೆ ಕಾಗದದ ಮೇಲೆ ಕ್ಷರ/ಚಿತ್ರಗಳನ್ನು ಮುದ್ರಿಸಿ ಅದಕ್ಕೆ ರಟ್ಟು ಕಟ್ಟಿ, ಲೇಖಕನ ಬರಹ ಮೂಲಕವಾದ ಚಾರಗಳನ್ನು ವ್ಯಕ್ತಪಡಿಸುವ ಒಂದು ಸಾಧನವಾಗಿದೆ. ಇದು ಕಳೆದ ೫೦೦ ವರ್ಷಗಳಿಂದ ಡೆದು ಬಂದ ಕ್ರಮ. ಅದಕ್ಕೂ ಪೂರ್ವದಲ್ಲಿ ಪುಸ್ತಕದ ಸ್ವರೂಪ ವೈವಿಧ್ಯಮಯವಾಗಿತ್ತು.

ಶಿಲಾಬರಹ: ಇಂದಿನ ಬರಹಕ್ಕೆ ಕಾಗದವನ್ನು ಸಾರ್ವತ್ರಿಕವಾಗಿ ಬಳಸಲಾಗುತ್ತಿದೆ ಷ್ಟೆ. ವಿಚಾರದ ಅಭಿವ್ಯಕ್ತಿಗಾಗಿ ಶಿಲೆಯನ್ನು ಅತಿ ಪ್ರಾಚೀನ ಕಾಲದಿಂದಲೂ ಪಯೋಗಿಸಲಾಗುತ್ತಿತ್ತು, ಬಂಡೆಗಲ್ಲಿನ ಮೇಲೆ ಪ್ರಾಚೀನ ಮಾನವನು ಕೊರೆದ ಕೇತಗಳಿಂದ ಮೊದಲ್ಗೊಂಡು ಇತಿಹಾಸ ಕಾಲದ ವರೆಗೂ ಶಿಲಾ ಬರಹಗಳು ರೆಯುತ್ತವೆ. ಈ ಬಗೆಯ ಬರಹ ಬಹು ಮಟ್ಟಿಗೆ ಶಾಶ್ವತ, ಕಗ್ಗಲ್ಲಿಗಿಂತ ಮೃದುವಾದ ಲ್ಲು ಬರಹಕ್ಕೆ ಅನುಕೂಲವಾದುದು.

ನಮ್ಮ ದೇಶದಲ್ಲಿ ಲೆಕ್ಕವಿಲ್ಲದಷ್ಟು ಶಿಲಾಬರಹಗಳಿವೆ. ಅವು ಹೆಚ್ಚಾಗಿ ಜಕಾರಣ, ಧರ್ಮಕಾರ್ಯ–ಇವುಗಳಿಗೆ ಸಂಬಂಧಿಸಿದುವು. ಕಲ್ಲಿನ ಮೇಲೆ ಕಾವ್ಯ ಳನ್ನೂ ವಿರಚಿಸಲಾಗಿದೆ. ಉದಾಹರಣೆಯಾಗಿ ಅಜಮೀರದ ಎರಡು ಮಧ್ಯಯುಗೀನ ಟಕಗಳನ್ನು ಪ್ರಸ್ತಾಪಿಸಬಹುದು. ಧಾರಾನಗರದ ಒಂದು ಶಾಸನದಲ್ಲಿ ವ್ಯಾಕರಣ ಚಾರ ಬಂದದಿದೆ. ಕರ್ನಾಟಕವಂತೂ ಶಿಲಾಶಾಸನಗಳ ತವರೂರು. ಬ್ರಹ್ಮಗಿರಿಯಲ್ಲಿ ರೆತ ಅಶೋಕನ ಧರ್ಮಶಾಸನದಿಂದ (ಕ್ರಿ. ಶ. ಪೂ. 3ನೇ ಶತ) ಅವುಗಳ ಆಸ್ತಿತ್ವ ಣವಾಗಿದೆ. ನಾಡಿನ ಎಲ್ಲ ರಾಜಮನೆತನಗಳ ಕಾಲದಲ್ಲಿ ಶಿಲಾಶಾಸನಗಳು ಅಸಂಖ್ಯ ಗಿ ನಿರ್ಮಿತವಾಗಿವೆ. ಕಾವ್ಯಮಯ ಶೈಲಿಯಲ್ಲಿ ಬರೆಯಲಾದ ಶಾಸನಗಳು ಬೇಕಾದಷ್ಟು ರೆಯುತ್ತಿದ್ದು ಶಾಸನ ಕವಿಗಳ ದೊಡ್ಡ ಪಡೆಯನ್ನೆ ನಾವು ಕಾಣುತ್ತೇವೆ. ಹದಿನಾಲ್ಕನೇ ತಮಾನದಿಂದ ನಾಡಿನಲ್ಲಿ ಕಾಗದದ ಬಳಕೆಯಿದ್ದಾಗಲೂ ಶಿಲೆಯನ್ನು ಬರಹಕ್ಕಾಗಿ ಬದಲಿನಂತೆಯೇ ಉಪಯೋಗಿಸಿದ್ದು ಕಂಡು ಬರುತ್ತಿದೆ. ಮುದ್ರಣ ಯುಗ ಆರಂಭ ದಾಗಿನಿಂದ ಮಾತ್ರ ಅದರ ಬಳಕೆ ಕಡಿಮೆಯಾಗುತ್ತ ನಡೆಯಿತು.

ಮಣ್ಣು: ಕಲ್ಲಿನಂತೆಯೇ ಮಣ್ಣು ಸುಲಭವಾಗಿ ದೊರೆಯುವ ಸಾಧನವಾದರೂ ಅದರಷ್ಟು ಶಾಶ್ವತವಲ್ಲ. ಆದರೆ ಪ್ರಾಚೀನ ಕಾಲದಲ್ಲಿ ಒಣಗಿಸಿದ ಅಥವಾ ಸುಟ್ಟ ಮಣ್ಣಿನ ಚದರ ಬಿಲ್ಲೆಗಳನ್ನೇ ಬರಹಕ್ಕಾಗಿ ಬಳಸುತ್ತಿದ್ದುದು ಕಂಡು ಬರುತ್ತದೆ. ಸುಮಾರು ಐದು ವರುಷಗಳ ಹಿಂದೆ ಸುಮೇರಿಯನ್ನರು ಮಣ್ಣಿನ ಇಟ್ಟಿಗೆಯ ಮೇಲೆ ತ್ರಿಕೋಣಾಕಾರದ ಅಕ್ಷರಗಳನ್ನು ಒರೆದಿದ್ದರ ದಾಖಲೆಗಳಿವೆ. ಇವು ಭೂತಪೂರ್ವ ಅಸ್ಸೀರಿಯಾದ ರಾಜಧಾನಿಯಾಗಿದ್ದ ನಿನೆವಾದಲ್ಲಿ ದೊರೆತವುಗಳು. ಅವುಗಳನ್ನು ನಿರ್ಮಿಸಿದವನು ಅಸುರ್‌ಬನಿಪಾಲ್ ಎಂಬ ರಾಜನು. ಈ ಇಟ್ಟಿಗೆಗಳ ಮೇಲೆ ಸಾಹಿತ್ಯ, ಚರಿತ್ರೆ, ಮತಧರ್ಮ, ವಿಜ್ಞಾನ–ಇವುಗಳನ್ನು ಕುರಿತ ವಿವೇಚನೆ ಇದೆ. ಇಟ್ಟಿಗೆಯಲ್ಲದೆ ಮಣ್ಣಿನ ಮಡಕೆ–ಪಾತ್ರೆಗಳ ಮೇಲೂ ಬರೆದಿಡುವ ಕ್ರಮವಿದ್ದಿತು ಭಾರತದ ಉತ್ತರ ಪ್ರದೇಶದಲ್ಲಿ ಇಂಥ ಮೃತ್ತಿಕಾ ಲೇಖನಗಳು ದೊರೆತಿವೆ. ಪ್ರಾಚೀನ ಯುಗಗಳಲ್ಲಿ ಬರಹಕ್ಕಾಗಿ ಮಣ್ಣಿನ ಬಳಕೆ ಸಾಕಷ್ಟು ಇದ್ದಿರಬಹುದಾದರೂ, ಬಲು ಬೇಗ ನಶಿಸಿ ಹೋಗುವವವಾದ್ದರಿಂದ ಕಲ್ಬರಹಗಳಷ್ಟು ಇವು ಇಂದಿನ ವರೆಗೆ ಉಳಿದುಕೊಂಡು ಬಂದದ್ದು ಕಡಿಮೆ.

ಲೋಹದ ಉಪಯೋಗ: ಕಬ್ಬಿಣ, ಹಿತ್ತಾಳೆ, ಚಿನ್ನ, ಬೆಳ್ಳಿ, ತಾಮ್ರ ಮುಂತಾದ ಲೋಹಗಳನ್ನೂ ಬರಹಕ್ಕಾಗಿ ಉಪಯೋಗಿಸುತ್ತಿದ್ದುದು ಕಂಡು ಬರುತ್ತದೆ. ಚೀನಾ ದೇಶದಲ್ಲಿ ಕ್ರಿ. ಶ. ಪೂ. ೧೬ನೇ ಶತಮಾನದಷ್ಟು ಹಿಂದಿನ ಕಂಚಿನ ಬರಹ ದೊರೆತಿದೆ, ಭಾರತದಲ್ಲಿ ಹೆಚ್ಚು ಪ್ರಚುರವಾಗಿದ್ದ ಲೋಹವೆಂದರೆ ತಾಮ್ರ. ಕರ್ನಾಟಕದಲ್ಲಿ ಗಂಗ, ಕದಂಬ, ಚಳುಕ್ಯ ಮತ್ತು ರಾಷ್ಟ್ರಕೂಟರ ಕಾಲಾವಧಿಯ ತಾಮ್ರಶಾಸನಗಳು ದೊರೆಯುತ್ತವೆ. $2\frac{1}{2}'' \times 2\frac{1}{2}''$ ಇಲ್ಲವೆ $1' \times 2\frac{1}{2}''$ ಆಕಾರದ ಪಟ್ಟಿಕೆಗಳನ್ನು ಮಾಡಿ ಅವರಲ್ಲಿ ಬರೆಯುತ್ತಿದ್ದರು. ದತ್ತಿಯ ಶಾಸನಗಳಲ್ಲದೆ ಕಾವ್ಯ ಹಾಗೂ ಸಂಗೀತ ಕೃತಿಗಳೂ ತಾಮ್ರ ಪಟ್ಟಿಕೆಗಳ ಮೇಲೆ ಒಡಮೂಡಿವೆ.

ಚರ್ಮದ ಬರಹವು ಪರದೇಶಗಳಲ್ಲಿ ಕಂಡುಬಂದಷ್ಟು ಭಾರತದಲ್ಲಿ ಇಲ್ಲ. ಅದನ್ನು ಅಪವಿತ್ರ ವಸ್ತುವೆಂದು ತಿಳಿಯಲಾಗುತ್ತಿದ್ದುದೇ ಕಾರಣವಿರಬೇಕು.

ಗಿಡದ ತೊಗಟೆಗಳು: ಪ್ರಾಚೀನ ಬರಹದ ಸಾಧನಗಳಲ್ಲಿ ಪಪ್ಪೈರಸ್‌ಗೆ ವಿಶೇಷ ಸ್ಥಾನವಿದೆ. ಇಜಿಪ್ತದ ನೈಲ ನದಿಯ ಮೇಲೆ ಬೆಳೆಯುತ್ತಿದ್ದ ಜೊಂಡು ಗಿಡದ ಕಾಂಡದಿಂದ ಇದು ಸಿದ್ಧವಾಗುತ್ತಿತ್ತು. ಪುರಾತನ ಕಾಲದಿಂದ ಸುಪ್ರಸಿದ್ಧವಾಗಿದ್ದ ಅಲೆಕ್ಸಾಂಡ್ರಿಯ ಗ್ರಂಥಾಲಯದಲ್ಲಿ ಹಲವಾರು ಲಕ್ಷ ಪಪ್ಪೈರಸ್ ಸುರುಳಿಗಳಿದ್ದುವು. ಕ್ರಿ. ಶ. ಪೂ. ೪೮ರಲ್ಲಿ ಜ್ಯೂಲಿಯಸ್ ಸೀಸರ್ ಇಜಿಪ್ತದ ಮೇಲೆ ದಂಡೆತ್ತಿ ಬಂದಾಗ ಅಲ್ಲಿಯ ಪಪ್ಪೈರಸ್ ಬರಹಗಳು ಬಹಳಷ್ಟು ನಾಶಹೊಂದಿದುವು. ಮಾರ್ಕ್ ಅಂಟೊನಿಯು ತನ್ನ ಪ್ರೇಯಸಿ ಕ್ಲಿಯಾಪಾತ್ರಳಿಗೆ ಸಾವಿರಾರು ಪಪ್ಪೈರಸ್ ಸುರುಳಿಗಳನ್ನು ಉಡುಗೊರೆಯಾಗಿ ಕೊಟ್ಟಿದ್ದನಂತೆ. ಇಜಿಪ್ತದಲ್ಲಿ ಜನ್ಮತಾಳಿದ ಪಪ್ಪೈರಸ್ ಕೃತಿಗಳು ಗ್ರೀಕರ ಮುಖಾಂತರ ಯುರೋಪದ ಹಲವು ರಾಷ್ಟ್ರಗಳಲ್ಲಿ ಕಾಣಿಸಿಕೊಂಡವು.

ನಮ್ಮ ದೇಶದಲ್ಲಿಯು ಭೂರ್ಜಪತ್ರ ಮತ್ತು ತಾಳೆಗರಿಗಳು ಪಪೈರಸ್‌ಗೆ ಸಮಾನ ...ದವುಗಳು. ಹಿಮಾಲಯದ ಪರ್ವತ ಸಾಲಿನ ಕೆಳ ಅಂಚಿನಲ್ಲಿ ಬೆಳೆಯುತ್ತಿರುವ ...ರ್ಜ ವೃಕ್ಷದ ತೊಗಟೆಯನ್ನು ಹದಮಾಡಿ ಚತುರಸ್ರಕವಾಗಿ ಕತ್ತರಿಸಿ ಮಸಿ-ಲೇಖನಿ ...ಂದ ಬರೆಯಲಾಗುತ್ತಿತ್ತು. ಕಾಶ್ಮೀರ, ನೇಪಾಳಗಳಲ್ಲಿ ಇವುಗಳ ಬಳಕೆ ಅಧಿಕ ...ಗಿದ್ದುದು ಸಹಜವಾಗಿದೆ, ಸಮಗ್ರವಾದ ಮಹಾಭಾರತವನ್ನು ಇಂಥ ಭೂರ್ಜಪತ್ರದ ...ಮೇಲೆ ಬರೆದ ಕೃತಿಯೊಂದು ಲಭ್ಯವಿದೆ.

ತಾಳೆಪತ್ರವು ದಕ್ಷಿಣ ಭಾರತದ ವೈಶಿಷ್ಟ್ಯವಾಗಿದೆ. ಇಲ್ಲಿಂದ ಉತ್ತರಕ್ಕೂ ಅದು ...ಂಚಾರಮಾಡಿದೆ. ವಿವಿಧ ಚತುರಸ್ರಕದಲ್ಲಿ ಇವನ್ನು ಕೊರೆದು, ಕಂಟವೆಂಬ ದಬ್ಬಳಿ ...ರೂಪದ ಲೇಖಣಿಯಿಂದ ಬರೆದು, ಮೇಲೆ ಕಾಡಿಗೆ ಅಥವಾ ಇದ್ದಲಿಯ ಮಸಿಯನ್ನು ...ರೆಸಿ ಅಳಿಸಿಬಿಡುತ್ತಿದ್ದರು. ನಮ್ಮ ಹಳಗನ್ನಡ ಕಾವ್ಯಗಳಿಗೆಲ್ಲ ಇದುವೆ ಸರ್ವಮಾನ್ಯ ...ಧನವಾಗಿದ್ದಿತು. ಊರೂರುಗಳಲ್ಲಿ, ಮನೆಮನೆಗಳಲ್ಲಿ ಇವುಗಳ ಮೇಲೆ ಕಾವ್ಯ-ಕೃತಿ ...ಳನ್ನು ಪ್ರತಿ-ಮಾಡಿ ಇಟ್ಟುಕೊಳ್ಳುವ ಪರಂಪರೆ ಸಾಕಷ್ಟು ಪರಿಚಿತವಾದುದು. ಇದರ ...ನಪ್ರಿಯತೆ ಎಷ್ಟಿತ್ತೆಂದರೆ, ಮದ್ರಾಸದಲ್ಲಿ ಆದಾಗಲೇ ಮುದ್ರಣ ಹೊಂದಿದ್ದ, (ಕ್ರಿ. ಶ. ...೮೭) ಜೈಮಿನಿ ಭಾರತ ಕೃತಿಯನ್ನು ಒಬ್ಬ ವಾಚಕ ತಾಳೆಗರಿಯ ಮೇಲೆ ಬರೆದಿಟ್ಟು ...ಕೊಂಡ ಹಸ್ತಪ್ರತಿಯೊಂದು ಇದೆ.

ಬಟ್ಟೆ: ಶಿಲೆ, ತಾಮ್ರ, ತಾಳೆಪತ್ರ—ಇವು ಮೂರರ ಅನಂತರ ಕರ್ನಾಟಕದಲ್ಲಿ ...ಚ್ಚು ಬಳಕೆಯಲ್ಲಿರುವ ಬರಹದ ಸಾಧನವೆಂದರೆ ಬಟ್ಟೆ, ಒಂದು ಅಡಿ ಅಗಲದ ಬಟ್ಟೆ ...ಯನ್ನು ಬೇಕಾದಷ್ಟು ಉದ್ದವಾಗಿಟ್ಟುಕೊಂಡು ಅದಕ್ಕೆ ಹುಣಿಸೆಬೀಜದ ಚರಿಯನ್ನು ಮೆತ್ತಿ ...ಸು ಬಿರುಸುಗೊಳಿಸಿ ದೀಪದ ಕಾಡಿಗೆಯನ್ನು ಮೆತ್ತುತ್ತಿದ್ದರು. ಅಲ್ಲಿಂದ ಆದರ ಮೇಲೆ ...ಳಿಯ ಬಳಪದಿಂದ ಬರೆಯುತ್ತಿದ್ದರು. ಇದನ್ನು ಕಡ(ಡಿ)ತವೆಂದು ಕರೆಯುತ್ತಿದ್ದರು. ...ಜಕೀಯ ಇತಿ-ವೃತ್ತ ಹಾಗೂ ಲೆಕ್ಕಪತ್ರಗಳನ್ನು ಬರೆಯಲು ಇದನ್ನು ಬಳಸಲಾಗು ...ತ್ತು. ವಂಶಾವಳಿ, ಬಖೈರು ಚರಿತ್ರೆಗಳನ್ನು ಕಡತದ ಮೇಲೆ ಬರೆಯುವುದು ವಂಶ ...ಪಾರಂಪರ್ಯವಾಗಿ ನಡೆದು ಬಂದದ್ದಿದೆ. ಹತ್ತೊಂಬತ್ತನೇ ಶತಮಾನದ ಆರಂಭದಲ್ಲಿ, ...ನಾಡಿನೊಳಗೆ ಸಂಚಾರಮಾಡಿದ ಮೆಕೆಂಜಿ, ಬುಕನನ್ ಮೊದಲಾದ ಅಧಿಕಾರಿಗಳು ಇಂಥ ...ನೂರಾರು ಕಡತಗಳನ್ನು ಅನೇಕ ಮನೆತನಗಳಿಂದ ಸಂಗ್ರಹಿಸಿಕೊಂಡು ಒಯ್ದಿದ್ದಾರೆ. ...ಭಾರತದ ಇತರ ಕಡೆಗಳಲ್ಲಿಯೂ ಇದು ಪಟ, ಪಟಿಕಾ, ಕಾರ್ಪಾಸಿಕ ಪಟ ಎಂಬ ಹೆಸರಿನಿಂದ ...ಪ್ರಚಾರದಲ್ಲಿದ್ದಿತು. ರೇಶ್ಮೆ ಬಟ್ಟೆಯ ಉಪಯೋಗವೂ ತುಸು ಮಟ್ಟಿಗೆ ಕಂಡುಬರುತ್ತದೆ.

ಕಟ್ಟಿಗೆ: ಬರಹದ ಇನ್ನೊಂದು ಸಾಧನ ಹಲಗೆ, ಕಟ್ಟಿಗೆಯನ್ನು ತೆಳುವಾಗಿ ...ತ್ತಿ, ಕಪ್ಪು ಬಣ್ಣ ಬಳಿದು ಬಳಪದಿಂದ ಬರೆಯುತ್ತಿದ್ದುದೂ ಕಂಡುಬರುತ್ತದೆ. ಇದು ...ಲಾ ಮಕ್ಕಳ ಇಂದಿನ ಪಾಟಿಗೆ ಸಮನಾದದ್ದು, ಅಳಿಸಲು ಸುಲಭವೆಂಬುದೇ ಇದರ

ಮುಖ್ಯ ಅನುಕೂಲತೆಯಾಗಿದ್ದಿತು. 'ಹಲಗೆ ಬಳಪವ' ಹಿಡಿಯದೊಂದಗ್ಗಳಿಕೆ,—ಎಂಬ ಕುಮಾರವ್ಯಾಸನ ಉಕ್ತಿಯನ್ನು ಇಲ್ಲಿ ನೆನೆಯಬಹುದು.

ಕಾಗದ: ಮುದ್ರಣ ಯುಗದಲ್ಲಿ ಮತ್ತು ಆ ಪೂರ್ವದಲ್ಲಿ ಸಹ ವಿಶೇಷ ಬಳಕೆಯಲ್ಲಿರುವ ಬರಹದ ಸಾಮಗ್ರಿ ಇದು. ನಿರುಪಯುಕ್ತ ರೇಶಿಮೆಯಿಂದ ಇದನ್ನು ತಯಾರಿಸಬಹುದೆಂಬ ಕಲ್ಪನೆಯು ಮೊದಲು ಮೂಡಿದುದು ಚೀನ ದೇಶದಲ್ಲಿ (ಕ್ರಿ. ಶ. [illegible]ನೇ ಶತಮಾನ). ಕಾಗದದ ತಯಾರಿಕೆಯ ಈ ಗುಟ್ಟು ೮ನೆಯ ಶತಮಾನದಲ್ಲಿ ಅರಬರಿಗೆ ತಿಳಿಯ ಬಂದಿತು. ಅಲ್ಲಿಂದ ಯುರೋಪ, ಭಾರತಗಳಿಗೂ ಅದು ಸಾಗಿಬಂದಿತು. ಹನ್ನೆರಡನೆಯ ಶತಮಾನದಲ್ಲಿ ಕಾಶ್ಮೀರ, ಗುಜರಾತ ಮೊದಲಾದ ಉತ್ತರ ಭಾರತದ ಪ್ರದೇಶಗಳಲ್ಲಿ ಕಾಗದದ ಬಳಕೆ ಇದ್ದತೆಂಬುದು ತಿಳಿದುಬಂದಿದೆ.

ಮುಂದಿನ ಶತಮಾನದಲ್ಲಿಯೇ ಅದು ಕರ್ನಾಟಕವನ್ನು ಪ್ರವೇಶಿಸಿರಬೇಕು. ಕ್ರಿ. ಶ. ೧೩೯೮ರಲ್ಲಿ ರಚಿತವಾದ ಮಂಗರಾಜನ ನಿಘಂಟಿನಲ್ಲಿ ಅದನ್ನು ಕೊಟ್ಟಿದಿದೆ. ಹದಿನಾರನೇ ಶತಮಾನದ ಚೆನ್ನಬಸವ ಪುರಾಣದಲ್ಲಿಯೂ ಅದರ ಉಲ್ಲೇಖವಿದೆ. ಕ್ರಮೇಣ ಅದೊಂದು ಗೃಹಕೈಗಾರಿಕೆಯಾಗಿ ಪರಿಣಮಿಸಿತು. ಉತ್ತರ ಕರ್ನಾಟಕದ ಹಲವು ಮುಸ್ಲಿಂ ಮನೆತನಗಳ ಅಡ್ಡ-ಹೆಸರು 'ಕಾಗಜ' ಎಂದಿದ್ದುದನ್ನು ಗಮನಿಸಬೇಕು. ವಿಜಯನಗರ, ಬಹಮನೀ ಮುಂತಾದ ರಾಜ ಮನೆತನಗಳ ಕಾಲದಲ್ಲಿ, ಕಾಗದವನ್ನು ವ್ಯಾಪಕವಾಗಿ ವಿಶೇಷತಃ ರಾಜಕೀಯ ವ್ಯವಹಾರಗಳಿಗಾಗಿ ಬಳಸುತ್ತಿದ್ದರು. ರೇಶ್ಮೆಯಲ್ಲದೆ ಚಿಂದಿಬಟ್ಟೆ, ಸಣಬು ಮುಂತಾದವುಗಳಿಂದಲೂ ರಚಿಸಲಾಗುತ್ತಿದ್ದ ಕಾಗದವು ಶುರುವಿಗೆ ಮಡಿವಂತರಿಗೆ ತ್ಯಾಜ್ಯವೆನಿಸಿತ್ತಾದರೂ, ಕ್ರಮೇಣ ೧ ನೇ ಶತಮಾನದಷ್ಟೊತ್ತಿಗೆ ಅದನ್ನು ಎಲ್ಲ ವರ್ಗಗಳವರೂ ಬಳಸುತ್ತಿದ್ದರು. ಶಾಸನಗಳಿಗಾಗಿ ಶಿಲೆ ಅಥವಾ ಲೋಹವನ್ನು ಉಪಯೋಗಿಸುವ ಕ್ರಮ ಇದ್ದಿರುವಾಗ ಎರಡನೆಯ ಕಂಠೀರವ ನರಸರಾಜನ ಕಾಲದ ಒಂದು ಶಾಸನವು (ಕ್ರಿ. ಶ. ೧೭೦೯) ಕಾಗದದ ಮೇಲೆ ಬರೆಯಲ್ಪಟ್ಟಿದೆ.

ಇತರ ಸಾಧನಗಳು ಇನ್ನು ಬರಹದ ಇತರ ಸಾಧನಗಳನ್ನು ಪರಿಶೀಲಿಸೋಣ. ಬಟ್ಟೆ, ಭೂರ್ಜಪತ್ರ, ಕಾಗದ ಮುಂತಾದವುಗಳ ಮೇಲೆ ಬರೆಯುವುದಕ್ಕೆ ಮಸಿಯು ಬೇಕಲ್ಲವೆ. ಕ್ರಿ. ಶ. ಪೂ. ೨ನೇ ಶತಮಾನದಲ್ಲಿ ಮಸಿಯನ್ನು ಭಾರತದಲ್ಲಿ ಬಳಸಿದುದರ ಪ್ರಾಚೀನ ಉಲ್ಲೇಖವಿದೆ. ಹತ್ತನೇ ಶತಮಾನದ ಕನ್ನಡ ಕಾವ್ಯಗಳಲ್ಲಿಯೂ ಇವರ ಪ್ರಸ್ತಾಪ ಬಂದಿದೆ. ನಮ್ಮ ನಾಡಿನಲ್ಲಿ ರಾಗಿಯ, ಅದರಂತೆ ಅಳಲೇಕಾಯಿಯ ಮಸಿಗಳು ಪ್ರಸಿದ್ಧವಾಗಿವೆ. ಇತರ ಬಣ್ಣದ ಮಸಿಗಳೂ ಇದ್ದುವು. ಮಸಿಯಿಂದ ಬರೆಯಲು ಲಾಳದಕಡ್ಡಿ, ಬಿದಿರಿನ ಸೀಳು, ನವಿಲುಗರಿಯ ಕಾಂಡ, ಗಲಗು – ಇವನ್ನು ಲೆಕ್ಕಣಿಕೆಯಾಗಿ ಉಪಯೋಗಿಸುತ್ತಿದ್ದರು. ತಾಳಪತ್ರದ ಮೇಲೆ ಬರೆಯಲು ಉಕ್ಕಿನ ಕಂಟ ಮತ್ತು ಭೂರ್ಜಪತ್ರದ ಮೇಲೆ ಬರೆಯುವುದಕ್ಕೆ ಕುಂಚಿಕೆಯು ಬಳಸಲ್ಪಡುತ್ತಿತ್ತು.

ಶಿಲೆ, ಲೋಹ, ತಾಳಪತ್ರ—ಮುಂತಾದವುಗಳ ಮೇಲೆ ಬರೆಯುವುದಕ್ಕೆಂದು
ಕಾರರು ಪ್ರತ್ಯೇಕವಾಗಿ ಇರುತ್ತಿದ್ದರು. (ಕವಿಯೇ ಲಿಪಿಕಾರನಾಗಿದ್ದ ಸಂದರ್ಭ
ಳೂ ಇವೆ.) ಇನ್ನು ಒಂದು ಪ್ರತಿಯನ್ನು ನೋಡಿ, ಅದರಂತೆ ಪ್ರತಿಮಾಡುತ್ತಿದ್ದ
ಕಾರರ ಉಲ್ಲೇಖವೂ ದೊರೆಯುತ್ತದೆ. ತಾಮ್ರ ಅಥವಾ ಶಿಲಾಬರಹಗಳಾದರೆ
, ಲಿಪಿಕಾರ (ಬರೆಹಗಾರ) ಇವರ ಜೊತೆಗೆ ಮೂರನೆಯವನ ಅಗತ್ಯ ಬೀಳುತ್ತಿದ್ದಿತು.
ವನೇ ಕೆತ್ತುಗಾರ ಅಥವಾ ಕಂಡರಿಸುವವ; ಶಾಸನಗಳಲ್ಲಿ ಅವನನ್ನು ಕಣ್ಡರಣೆಕಾರ
ಂದೂ ಕರೆದುದಿದೆ.

ಲಿಪಿಕಾರರೆಂದರೆ ಬರಿ ಪ್ರತಿ-ಮಾಡುವವರೆಂದಲ್ಲ. ಅದರಲ್ಲಿ ಅವರು ಸ್ವವಿಷಯ
ನ್ನು ಸೇರಿಸುತ್ತಿದ್ದರು. ಸುಂದರವಾಗಿ ಬರೆಯುವುದು ಒಂದು ಕಲೆಯೇ ಸೈ. ಅದನ್ನು
ಗತಮಾಡಿಕೊಂಡವರಿದ್ದರಲ್ಲದೆ ಸೊಗಸಾದ ಚಿತ್ರಗಳನ್ನೂ ಅವರು ಬಿಡಿಸಬಲ್ಲವರಾಗಿ
ರು. ಅಕ್ಷರಗಳಲ್ಲಿಯೆ ಆನೆ, ಸಿಂಹ, ಗಿಳಿಗಳನ್ನು ಬಿಡಿಸಿದುದೂ ಇದೆ. ಕರ್ನಾಟಕ
ಲ್ಲಿದ್ದ ಲಿಪಿಕಾರರಲ್ಲಿ, ಸದ್ಯದ ಮಟ್ಟಿಗೆ ತಿಳಿದು ಬಂದ ಅತಿ-ಪ್ರಾಚೀನ ವ್ಯಕ್ತಿಯೆಂದರೆ
ಪಡ. ಕ್ರಿ. ಶ. ಪೂ. 3ನೇ ಶತಮಾನದ ಅಶೋಕನ ಬ್ರಹ್ಮಗಿರಿಯ ಶಾಸನಾಂತ್ಯದಲ್ಲಿ
ವನ ಹೆಸರಿದೆಯಾಗಿ ಶ್ರೀ ಡಿ. ವಿ. ಜಿ. ಹೇಳಿದ್ದಾರೆ. (ಕನ್ನಡ ಗ್ರಂಥ ಸಂಸ್ಕರಣ).

ಸಿರಿವಂತರು ಮತ್ತು ಧರ್ಮಾಭಿಮಾನಿಗಳು ಲಿಪಿಕಾರರಿಂದ ಪ್ರತಿ-ಮಾಡಿಸಿ,
ವನ್ನು ದಾನವಾಗಿ ಕೊಡುತ್ತಿದ್ದರು. ಧರ್ಮಾಭಿಮುಖವಾದ ಪ್ರಾಚೀನ ಸಾಹಿತ್ಯ
ತಿಗಳನ್ನು ಹೀಗೆ ಹಲವಾರು ಪ್ರತಿ-ಮಾಡಿಸಿ ವಿತರಣ ಮಾಡುವ ಪರಂಪರೆ ಇದ್ದಿತು.
ಬಳುವಳಿಯು ಯುರೋಪದ ಕ್ರೈಸ್ತ ಮಠಗಳಲ್ಲಿದ್ದಂತೆ ಕರ್ನಾಟಕದಲ್ಲಿಯೂ ಕಂಡು
ಂದಿದೆ. ಅದಕ್ಕೆ ದೊಡ್ಡ ನಿದರ್ಶನವೆಂದರೆ, ‘ದಾನಚಿಂತಾಮಣಿ’ ಅತ್ತಿಮಬ್ಬೆಯು
ನ್ನನ ಶಾಂತಿ ಪುರಾಣದ ಒಂದು ಸಾವಿರ ಪ್ರತಿಗಳನ್ನು ಮಾಡಿಸಿ, ವಿತರಣ ಮಾಡಿದುದು
0ನೇ ಶತಮಾನ). ಗ್ರಂಥ ಪ್ರಸಾರದ ಅಂದಿನ ಈ ಕ್ರಮವು ವೈಶಿಷ್ಟ್ಯಪೂರ್ಣವಾಗಿದೆ.

ಎಲ್ಲ ಲಿಪಿಕಾರರೂ ಸಾಹಿತ್ಯ, ಶಾಸ್ತ್ರಗಳಲ್ಲಿ ಬಲ್ಲವರಿರಲಿಲ್ಲ. ಆದಕಾರಣ ಪ್ರತಿ-
ಮಾಡುವಲ್ಲಿ ತುಂಬಾ ತಪ್ಪು ಮಾಡುತ್ತಿದ್ದರು. ಅದರಿಂದಾಗಿ, ಇಂದಿನ ಗ್ರಂಥ ಸಂಪಾದನ
ರ್ಯದಲ್ಲಿ ಪಾಠಾಂತರಗಳನ್ನು ಕಂಡು ಹಿಡಿಯುವುದು ಕಠಿಣವಾಗುತ್ತದೆ. ಹದಿಮೂರ
ನೆ ಶತಮಾನದ ಶ್ರೀ ಮಧ್ವಾಚಾರ್ಯರಿಗೂ ಈ ತೊಂದರೆಯಿದ್ದಿತೆಂಬುದು ಅವರ
ಚಿತ್ ಗ್ರಂಥಾನ್ ಪ್ರಕ್ಷಿಪಂತಿ ಕ್ವಚಿದಂತರಿತಾನಪಿ । ಕುರ್ಯುಃ ಕ್ವಚಿಚ್ಚ ವ್ಯತ್ಯಾಸಂ
ಪ್ರಮಾದಾತ್ ಕ್ವಚಿದನ್ಯಥಾ ॥’ ಶ್ಲೋಕದಿಂದ ಸ್ಪಷ್ಟವಾಗುತ್ತದೆ.

ಮುದ್ರಣಪೂರ್ವ ಯುಗದ ಇದುವರೆಗಿನ ವಿವರಣೆಯಿಂದ ಎರಡು ಅಂಶಗಳು
ಹೊರಪಡುತ್ತವೆ. ಮಾನವನು ಕಾಗದವನ್ನುಳಿದು ಹತ್ತಾರು ಬಗೆಯ ಬರಹದ ಸಾಧನ

ಗಳನ್ನು ಕಂಡುಹಿಡಿದು, ಆದರಲ್ಲಿ ಜಾಣ್ಮೆಯಿಂದ ತನ್ನ ವಿಚಾರಗಳನ್ನು ಅಭಿವ್ಯಕ್ತಗೊಳಿಸಿದುದು, ಇನ್ನೊಂದೆಂದರೆ, ವಿಶೇಷ ಪರಿಶ್ರಮಪಟ್ಟು ಗ್ರಂಥರಚನೆ, ಪ್ರಸಾರಗಳನ್ನು ಕೈಗೊಂಡಿದ್ದುದು.

ಮುದ್ರಣ ಯುಗ

ಕಾಗದ ತಯಾರಿಕೆಯು ಚೀನದಿಂದ ಮೊದಲಾಗಿ ಯುರೋಪ್ ಮುಂತಾದ ದೇಶಗಳಿಗೆ ಸಾಗಿ ಬಂದಿತೆಂಬುದನ್ನು ನೋಡಿದ್ದೇವೆ. ಮುದ್ರಣ ಕಲೆಯಾದರೂ ಚೀನದಲ್ಲಿಯೇ ಮೊದಲು ಜನ್ಮ ತಾಳಿತು, ಆದರೆ ಯುರೋಪದ ವರೆಗೆ ಸಾಗಿ ಬರಲಿಲ್ಲ; ಅದರ ಶೋಧವು ಯುರೋಪ್ ಖಂಡದಲ್ಲಿ ಪ್ರತ್ಯೇಕವಾಗಿಯೇ ನಡೆಯಿತು. ಹದಿಮೂರು-ಹದಿನಾಲ್ಕನೆಯ ಶತಮಾನಗಳಲ್ಲಿ ಕಟ್ಟಿಗೆಯ ಮೇಲೆ ಅಕ್ಷರ, ಚಿತ್ರಗಳನ್ನು ಕೊರೆದು, ಪಡಿಯಚ್ಚುಗಳನ್ನು ಮಾಡಿ ಮುದ್ರಿಸಿದ್ದುದು ಕಂಡುಬರುತ್ತದೆ. ಅಕ್ಷರಗಳನ್ನು ಈ ರೀತಿಯಾಗಿ ಪ್ರತಿಸಲ ಕೊರೆಯುತ್ತ ಹೋಗುವುದು ತುಂಬ ತೊಂದರೆದಾಯಕವಾಗಿದ್ದಿತು. ಆಗ ಬಿಡಿ ಮೊಳೆಗಳ ಶೋಧವಾಯಿತು. ಅವನ್ನು ಬೇಕಾದ ರೀತಿಯಲ್ಲಿ ಜೋಡಿಸಿಕೊಂಡು ಮುದ್ರಿಸುವುದಕ್ಕೆ ಮೊದಲಾಯಿತು. ಮುದ್ರಣ ಯುಗದ ನಿಜವಾದ ಪ್ರಾರಂಭವನ್ನು ಬಿಡಿ ಮೊಳೆಗಳ ಶೋಧದಿಂದ ಗಣಿಸಲಾಗುತ್ತಿದೆ.

ಯುರೋಪದಲಿ ಆದನ್ನು ಮೊದಲು ಕಂಡುಹಿಡಿದು ಬೈಬಲನ್ನು ಆ ರೀತಿಯಾಗಿ ಮುದ್ರಿಸಿದವನು, ಜರ್ಮನಿಯ ಯೋಹಾನ್ ಗುಟೆನ್‌ಬರ್ಗ್. ಅಂದಿನಿಂದ ಜಗತ್ತಿನ ನಾಗರಿಕತೆಯಲ್ಲಿ ಕ್ರಾಂತಿಯಾಯಿತೆನ್ನಬಹುದು. ಅಣುಬಾಂಬಿನ ಶೋಧಕ್ಕಿಂತ ಹೆಚ್ಚಿನ ಮಹತ್ವ ಇದಕ್ಕೆ ಪ್ರಾಪ್ತವಾಗಿದೆ. ಯಾವ ದೇಶದಲ್ಲಿಯೇ ಆಗಲಿ, ಮುದ್ರಾಯಂತ್ರವು ಕಾಲಿರಿಸಿದ ಕೆಲವೇ ಸಮಯದಲ್ಲಿ ಆ ದೇಶವು ಪ್ರಗತಿ-ಪಥದಲ್ಲಿ ಮುನ್ನಡೆದುದು ಐತಿಹಾಸಿಕವಾಗಿ ಸಿದ್ಧವಾದ ಮಾತಾಗಿದೆ. ಇಷ್ಟು ದಿನಗಳ ವರೆಗೆ ಕೇವಲ ರಾಜ, ಮಹಾರಾಜರ ಮತ್ತು ಸಿರಿವಂತರ ಸೊತ್ತಾಗಿದ್ದ ಜ್ಞಾನಾರ್ಜನೆ, ಗ್ರಂಥರಚನೆಗಳು ಸಾರ್ವತ್ರಿಕವಾದುವು. ಆದಕ್ಕೂ ಪೂರ್ವದಲ್ಲಿದ್ದ ಪುಸ್ತಕ ಭಂಡಾರಗಳಲ್ಲಿ ಗ್ರಂಥಗಳನ್ನು ಸಂಗ್ರಹಿಸಿ ಇಡುವ ವಿಚಾರವೇ ಪ್ರಧಾನವಾಗಿದ್ದು, ಮುದ್ರಣದ ಶೋಧದಿಂದಾಗಿ ಸಾವಿರಾರು, ಸಮಾನ ಪ್ರತಿಗಳುಳ್ಳ ಪುಸ್ತಕಗಳು ಅಸ್ತಿತ್ವದಲ್ಲಿ ಬಂದುವು.

ಜರ್ಮನ್ ದೇಶವನ್ನು ದಾಟಿಕೊಂಡು ಮುದ್ರಣಕಲೆಯು ಯುರೋಪದ ಇತರ ದೇಶಗಳಲ್ಲಿ ಕೂಡಲೇ ಪ್ರಸಾರಗೊಂಡಿತು. ಆ ಶತಮಾನದ ಅಂತ್ಯದಲ್ಲಿ ಇಂಗ್ಲಂಡಿನಲ್ಲಿಯೂ ನೆಲೆಗೊಂಡಿತು. ಇಂಗ್ಲಿಷ್ ಭಾಷೆಯಲ್ಲಿ ಮುದ್ರಣವನ್ನು ಕೈಕೊಂಡು ಅದನ್ನು ಬಹಳಷ್ಟು ಪ್ರಚುರಪಡಿಸಿದ ಶ್ರೇಯಸ್ಸು ವಿಲಿಯಮ್ ಕ್ಯಾಕ್ಸಟನ್ನನಿಗೆ ಸಲ್ಲುತ್ತದೆ.

ಗುಟೆನ್‌ಬರ್ಗ್‌ನ ಬೈಬಲ್ ಮುದ್ರಿತವಾದ ಒಂದು ನೂರು ವರ್ಷಕ್ಕೆ ಸರಿಯಾಗಿ,

…ದ್ರಾಯಂತ್ರವೊಂದು ಗೋವೆಯ ಮಾರ್ಗವಾಗಿ ಭಾರತದಲ್ಲಿ ಕಾಲಿರಿಸಿತು. ಕ್ರೈಸ್ತ …ರ್ಮ ಪ್ರಸಾರಕ್ಕೆಂದು ಬಂದಿದ್ದ ಪೋರ್ತುಗೀಜ ಪಾದ್ರಿಗಳು ಸಂತ ಝೇವಿಯರ್ …ರಚಿತ 'ಡಾಕ್ಟ್ರಿನಾ ಕ್ರಿಸ್ತಾ' ಎಂಬ ಗ್ರಂಥವನ್ನು ಮುದ್ರಿಸಿ, ಪ್ರಕಟಿಸಿದರು. (ಕ್ರಿ. ಶ. …೫೭). ಇದುವೆ ಭಾರತದಲ್ಲಿ ಮುದ್ರಣವಾದ ಮೊದಲ ಪುಸ್ತಕ. ದೇಶೀಯ ಭಾಷೆಯಲ್ಲಿ …ಮುದ್ರಿತವಾದ ಮೊದಲ ಕೃತಿಯ ಹೆಸರು 'ಕ್ರಿಸ್ತವಣ್ಣಕಣಮ್.' (ಕ್ರಿ ಶ. ೧ ೭೭). …ವನ್ನು ಮುದ್ರಿಸಿದವನು ಗೊನ್ಸಾಲ್ವಿಸ್ ಎಂಬವನು.

ಮುದ್ರಣ ಯುಗದ ಆರಂಭ ಕಾಲದಲ್ಲಿ ಭಾರತದ ಮುದ್ರಣಾಲಯಗಳ ಒಂದು …ವಿಶಿಷ್ಟ್ಯವೆಂದರೆ ಅವು ಸಮುದ್ರದ ದಂಡೆಗುಂಟ ಹಬ್ಬುತ್ತ ಹೊರಟಿದ್ದುದು. ಗೋವೆಯ …ನಂತರದ ಮುದ್ರಣ ಸ್ಥಳಗಳಾದ ಅಂಬಲತ್ಕಾಡು, ವೈಪಿಕೋಟಾ, ಮುಂಬಯಿ, …ಟ್ರಂಕ್ವೆಬಾರ್, ಮದ್ರಾಸ, ಕಲ್ಕತ್ತಾ, ಶ್ರೀರಾಮಪುರ ಇವೆಲ್ಲವೂ ಕಡಲ ತೀರದ …ಪ್ರದೇಶಗಳೇ.

ಕ್ರಿ. ಶ. ೧೮೦೦ರಿಂದ ಕಲ್ಕತ್ತೆಯ ಸನಿಹದಲ್ಲಿದ್ದ ಶ್ರೀರಾಮಪುರದಲ್ಲಿ ನಡೆದ …ಮುದ್ರಣ ಕಾರ್ಯವು ಅಖಿಲಭಾರತ ವ್ಯಾಪ್ತಿಯದಾಗಿತ್ತು. ಇಷ್ಟೇ ಅಲ್ಲ. ಪ್ರಾಚ್ಯ …ಶಿಯಕ್ಕೂ ಹಬ್ಬಿತು. ಅದರ ಪ್ರವರ್ತಕನಾದ ವಿಲಿಯಂ ಕೇರಿಯು ಭಾರತದ …ಒಂದೊಂದು ಭಾಷೆಯಲ್ಲಿ ವ್ಯಾಕರಣ, ಶಬ್ದಕೋಶ, ಬೈಬಲ್ ಅನುವಾದ–ಈ ಬಗೆಯ …ಕೃತಿಗಳನ್ನು ತಾನೇ ರಚಿಸಿ, ಮುದ್ರಿಸಿ ಪ್ರಕಟಿಸುತ್ತ ಬಂದನು. ಅದರ ಒಟ್ಟಿನ ಫಲಶ್ರುತಿ …ಎಂದರೆ ಕ್ರಿ. ಶ. ೧೮೦೧ರಿಂದ ೧೮೩೨ರ ವರೆಗಿನ ಅವಧಿಯಲ್ಲಿ ಸುಮಾರು ೪೦ ಭಾಷೆ…ಗಳಲ್ಲಿ ೨ ಲಕ್ಷ ೧೨ ಸಾವಿರದಷ್ಟು ಪ್ರತಿಗಳನ್ನು ಮುದ್ರಿಸಿದ್ದುದು ಮುದ್ರಿತ 'ಪುಸ್ತಕ'ದ …ಆರಂಭ ಕಾಲೀನ ಪ್ರಸಾರವು ಗಣನೀಯವಾಗಿದೆ.

ವಿಲಿಯಂ ಕೇರಿಯ ಬಹು ಭಾಷಾ ಕಾರ್ಯದಲ್ಲಿ ಕನ್ನಡಕ್ಕೂ ಇಂಬು ದೊರೆಯಿತು. …ಶ. ೧೮೧೭ರಲ್ಲಿ ಅವನು 'A Grammar of the Karnata language' ಎಂಬ …ಗ್ರಂಥವನ್ನು ತಾನೇ ಬರೆದು, ಹೊರತಂದನು. ಇದುವೆ ಕನ್ನಡ ಅಕ್ಷರ ಮುದ್ರಣವುಳ್ಳ …ಪ್ರಥಮ ಪುಸ್ತಕವಾಗಿದೆ. ಅನಂತರದ ಕನ್ನಡ ಮುದ್ರಣ ಸ್ಥಳವೆಂದರೆ ಮದ್ರಾಸ (೧೮೨೦)

ಒಳನಾಡಿನಲ್ಲಿ ಮುದ್ರಣ ಕಾರ್ಯವನ್ನು ಆರಂಭಿಸಿದವರು ಮಿಶನರಿಗಳು. …ಲಂಡನ್ ಮಿಶನ್ನಿನವರು ಬಳ್ಳಾರಿಯಲ್ಲಿಯೂ, ವೆಸ್ಲಿಯನ್ನರು ಬೆಂಗಳೂರಿನಲ್ಲಿಯೂ …(೧೮೪೦), ಬಾಸೆಲ್ ಮಿಶನ್ನಿನವರು (೧೮೪೨) ಮಂಗಳೂರಿನಲ್ಲಿಯೂ ಮುದ್ರಣ …ಕಾರ್ಯಕ್ಕೆ ಅಣಿಯಾದರು. ಇತ್ತ ಮೈಸೂರು ನಗರದಲ್ಲಿ ಮುಮ್ಮಡಿ ಕೃಷ್ಣರಾಜರು, …ಬೆಂಗಳೂರಿನಲ್ಲಿ ಆಗಿನ ಮೈಸೂರ ಸರಕಾರದವರು ಹಾಗೂ ಬೆಳಗಾಂವಿಯಲ್ಲಿ ಸಮಾಚಾರ …ಪ್ರೆಸ್‌ನವರು ೧೮೪೦ನೆಯ ದಶಕದಲ್ಲಿ ಕನ್ನಡ ಮುದ್ರಣವನ್ನು ಕೈಕೊಂಡರು. ಆದರಿಂದಾಗಿ …ಹೊಸಗನ್ನಡ ಸಾಹಿತ್ಯದ ಉದಯವಾಯಿತು.

ಆರಂಭದಲ್ಲಿ ಕಲ್ಲಚ್ಚಿನ ಮುದ್ರಣವು ಕಂಡು ಬರುತ್ತದೆ. ಮಿಶನರಿಗಳ ಪ್ರಯತ್ನದಿಂದಾಗಿ ಬಿಡಿ ಮೊಳೆಗಳ ಮುದ್ರಣವು ವಿಸ್ತಾರವನ್ನು ಹೊಂದಿತಲ್ಲದೆ, ಸೌಲಭ್ಯ ಮತ್ತು ಚೆಲ್ವಿಕೆಗಳ ದೃಷ್ಟಿಯಿಂದ ತುಂಬಾ ಸುಧಾರಣೆ ಹೊಂದುವು. ೧೮೬೦ನೆಯ ದಶಕದಲ್ಲಿ ದೇಶೀಯರು ಈ ರಂಗದಲ್ಲಿ ಹೆಚ್ಚು ಸಂಖ್ಯೆಯಲ್ಲಿ ಪ್ರವೇಶಿಸಿ ಇದೊಂದು ಉದ್ದಿಮೆಯೆಂಬಂತೆ ನಡೆಸಿಕೊಂಡು ಬಂದರು. ಇವೆಲ್ಲ ಪ್ರಯತ್ನಗಳ ಫಲವಾಗಿ ಹತ್ತೊಂಭತ್ತನೆಯ ಶತಮಾನದ ಅಂತ್ಯದೊಷ್ಟಿಗೆ ಮುದ್ರಿತ ಪುಸ್ತಕಗಳು ನಮ್ಮ ಜೀವನದ ಆವಶ್ಯಕ ಅಂಗವಾಗಿ ನೆಲೆಗೊಂಡುವು.

ಆಧುನಿಕ ಪುಸ್ತಕವೊಂದನ್ನು ಕೈಗೆತ್ತಿಗೊಂಡಾಗ, ಅದರಲ್ಲಿ ಮೂರು ಭಾಗಗಳನ್ನು ಗುರುತಿಸಬಹುದು. ಮೊದಲ ಭಾಗವೆಂದರೆ, ಮೇಲು ಹೊದಿಕೆ (dest cover ಅಥವಾ book jacket) ಮುಖಪುಟ, ಅರ್ಪಣೆಯ ಪುಟ, ಪೀಠಿಕೆ, ಮುನ್ನುಡಿ, ಪರಿವಿಡಿಗಳನ್ನು ಒಳಗೊಂಡಿರುತ್ತದೆ. ಮೇಲು ಹೊದಿಕೆಯು ಸುಂದರವೂ, ಕಲಾತ್ಮಕವೂ ಆಗಿದ್ದಷ್ಟೂ, ಪುಸ್ತಕ ಆಕರ್ಷಕವಾಗಿ ತೋರುತ್ತದೆ. ಮುಖಪುಟದ ಹಿಂಬದಿಗೆ ಕೊಟ್ಟಿರುವ ಮುದ್ರಕ, ಪ್ರಕಾಶಕರ ವಿವರಗಳು ಸಾಮಾನ್ಯ ವಾಚಕನಿಗೆ ಅಗತ್ಯವೆನಿಸದಿದ್ದರೂ, ಸರಕಾರೀ ಕಾಯಿದೆ ಗನುಸಾರವಾಗಿ ಅವು ಇರಲೇಬೇಕು. ಅರ್ಪಣೆಯು ಲೇಖಕನ ಸ್ವಕೀಯ ವಿಷಯು ಹೌದು. ಆದರೆ ಅರ್ಪಣೆಯ ರೀತಿ ಎಷ್ಟೋ ಬಾರಿ ಮನರಂಜಕವಿರುತ್ತದೆ. ನಾನು ಕಂಡ ಒಂದು ಪುಸ್ತಕದಲ್ಲಿ ಓರ್ವ ಗಣಿತಜ್ಞ ತನ್ನ ಹೆಂಡತಿಗೆ ಆ ಕೃತಿಯನ್ನು ಅರ್ಪಣೆ ಮಾಡಿದ್ದ ಕಾರಣ ವೇನು ಗೊತ್ತೆ? ಗಣಿತ ಸಮಸ್ಯೆಗಳ ಬಗ್ಗೆ ಯೋಚಿಸುವಾಗ ಅವಳು ಗಂಡನ ಬಳಿ ಬಂದು ತೊಂದರೆ ಕೊಟ್ಟಿರಲಿಲ್ಲವಂತೆ!

ಪುಸ್ತಕದ ಮಧ್ಯಭಾಗವೆಂದರೆ ಪುಸ್ತಕದ ಮುಖ್ಯ ವಿಷಯುವೇ ಸೈ. ಅದುವ ಲೇಖಕನು ಪ್ರತಿಪಾದಿಸಬೇಕೆಂದಿರುವ ವಿಷಯದ ವಿವರಣೆ, ಉತ್ತರ ಭಾಗದಲ್ಲಿ ಅಕಾರಾದಿ ಸೂಚಿ, ಅನುಬಂಧ ಇ. ಗಳು ಬರುತ್ತವೆ, ವಿಚಾರ ಸಾಹಿತ್ಯದ ಪುಸ್ತಕವಿದ್ದುದಾದರೆ, ಅಕಾರಾದಿ ಸೂಚಿ ಅವಶ್ಯಬೇಕು, ಆದರೆ ಎಷ್ಟೋ ಲೇಖಕರು ಈ ವಿಷಯದಲ್ಲಿ ಗಮನ ಕೊಡುವುದೇ ಇಲ್ಲ.

ಭಾವೀ ಪುಸ್ತಕ

ಇದುವೆ ನಮಗೆಲ್ಲ ಪರಿಚಿತವಿರುವ ಪುಸ್ತಕ. ಆದರೆ ಜನಸಂಖ್ಯೆಯಂತೆ ಗ್ರಂಥ ಸಂಖ್ಯೆ ಬೆಳೆಯುತ್ತಲೇ ಇರುವಂತಹದು. ಆದರ ಶೇಖರಣೆ, ರಕ್ಷಣೆಯು ಒಂದು ಸಮಸ್ಯೆ ಯಾಗುತ್ತದೆ. ಒಂದನೆಯದು ಸ್ಥಳಾಭಾವ: ಇನ್ನೊಂದು ಕಾಲ ಗತಿಸಿದಂತೆ ಅವು ಕೆಡುವ ಮತ್ತು ನಶಿಸಿ ಹೋಗುವ ಸಂದರ್ಭ. ಇವನ್ನು ನೀಗುವುದಕ್ಕೆಂದು ಮೈಕ್ರೋಫಿಲ್ಮ್/ ಮೈಕ್ರೋಕಾರ್ಡ್ ರೂಪಗಳನ್ನು ಈಚೆಗೆ ಕಂಡುಹಿಡಿಯಲಾಗಿದೆ. (೨೦ನೇ ಶತಕದ

...ಧ್ಯಕಾಲ). ಇವರಲ್ಲಿ ಛಾಯಾಗ್ರಹಣ (ಫೋಟೋಗ್ರಾಫ್) ಹಾಗೂ ಸೂಕ್ಷ್ಮದರ್ಶಕ ...ಮೈಕ್ರೋ) ಯಂತ್ರದ ತಂತ್ರಗಳನ್ನು ಅಳವಡಿಸಿಕೊಂಡು, ಪುಸ್ತಕವನ್ನು ಅತಿ ಚಿಕ್ಕದಾದ ...ಕೃತಿಗೆ ಕುಗ್ಗಿಸಲಾಗುವುದು ಮತ್ತು ಅದರ 'ಮುದ್ರಣ'ವನ್ನು ಫಿಲ್ಮ್ ಇಲ್ಲವೆ ಕಾರ್ಡಿನ ...ಲೆ ಮಾಡಲಾಗುವುದು. ಆ ರೂಪದಲ್ಲಿ ಅದನ್ನು ಬರಿಗಣ್ಣಿನಿಂದ ಓದಲಾಗುವುದಿಲ್ಲ ...ದ ಕಾರಣ ಅದನ್ನು ಓದ ಪುನಕ್ಕೆಂದು, ವಿವಿಧ ಬಗೆಯ ವಾಚಕ ಸಾಧನಗಳು ...readers) ಬೇಕಾಗುತ್ತವೆ. ಮೈಕ್ರೋರೂಪಗಳು ಇಂತಿವೆ:

ಮೈಕ್ರೋಫಿಲ್ಮ್—ಇದು ೩೫ ಮಿಲಿಮೀಟರಿನ ಫಿಲ್ಮ್ ಇದ್ದು, ಅದರಲ್ಲಿ ...೨×೪೫ ಮಿ. ಮೀ ಗಳ ಒಂದೊಂದು ಪಟಲವಿರುತ್ತದೆ. ಒಂದು ನೂರು ಅಡಿಯ ...ರುಳಿಯಲ್ಲಿ ಸುಮಾರು ೮೦೦ ಪಟಲಗಳಿರುತ್ತವೆ. ಒಂದೊಂದು ಪಟಲದಲ್ಲಿ ಎರಡು ...ಟಗಳನ್ನು ಮೂಡಿಸಬಹುದು. ಇದರಲ್ಲಿ ಪುಟವೊಂದರ ಕುಗ್ಗುವಿಕೆಯು $\frac{1}{12}$ ರಿಂದ $\frac{1}{24}$ ರ ...ರೆಗೆ ಇರುತ್ತದೆ. ಕನ್ನಡ ದಿನಪತ್ರಿಕೆಯೊಂದರ ಒಂದು ವರ್ಷದ ಸಂಚಿಕೆಗಳನ್ನು ಇಂಥ ೫ ...ರುಳಿಗಳಲ್ಲಿ ಮೂಡಿಸಿ ಇಡಬಹುದು. ಅಷ್ಟೊಂದು ಸಂಚಿಕೆಗಳನ್ನು ಬೈಂಡ್ ಮಾಡಿಸಿ ...ಟ್ಟದ್ದಾದರೆ ಅದು ಆಕ್ರಮಿಸುವ ಜಾಗಕ್ಕೂ, ಒಂದು ಬೊಗಸೆಯಲ್ಲಿ ಹಿಡಿಯಬಹುದಾದ ಇಂಥ ...೫ ಸುರುಳಿಗಳಿಗೆ ಬೇಕಾಗುವ ಜಾಗಕ್ಕೂ ಹೋಲಿಸಿದಾಗ, ಎಷ್ಟೊಂದು ಸ್ಥಳದ ಉಳಿತಾಯ ...ಗುವುದೆಂಬುದರ ಕಲ್ಪನೆ ಬರುವುದು. ಹತ್ತಿಪ್ಪತ್ತು ಪುಟಗಳ ಲೇಖನದ ಮೈಕ್ರೋ ಪ್ರತಿ ...ಗೆಯುವುದಾದರೆ ಫಿಲ್ಮ್ ಸುರುಳಿಯ ಅಗತ್ಯವಿಲ್ಲ. ಕೆಲವೇ ಪಟಲಗಳಿರುವ ಪಟ್ಟಿಕೆ ...Strip) ಸಾಕಾಗುತ್ತದೆ.

ಮೈಕ್ರೋ ಕಾರ್ಡ್—ಮೈಕ್ರೋಫಿಲ್ಮ್ ಪಾರದರ್ಶಕವಿದ್ದರೆ ಮೈಕ್ರೋಕಾರ್ಡ್ ...ಗಲ್ಲ. ಇದರಲ್ಲಿ ವಿಶಿಷ್ಟವಾದ ಬಿಳಿಯ ಹಿನ್ನೆಲೆಯಲ್ಲಿ ಕರಿಯ ಅಕ್ಷರಗಳನ್ನು ...ಮೂಡಿಸಿರುತ್ತಾರೆ. ಮೈಕ್ರೋ ರೂಪದ ಕುಗ್ಗುವಿಕೆಯು ಇದರಲ್ಲಿ ಸಾಮಾನ್ಯವಾಗಿ ...ರಷ್ಟು ಇದ್ದು, 7.5 × 12.5 ಸೆಂಟಿಮೀಟರಿನ ಒಂದು ಕಾರ್ಡಿನ ಮೇಲೆ ಪುಸ್ತಕ ...ಂದರ 60–70 ಪುಟಗಳನ್ನು ಮೂಡಿಸಬಹುದು.

ಮೈಕ್ರೋಫಿಷ್ (microfische) ಎಂಬುದು ಅವೆರಡರ ಮಧ್ಯದಲ್ಲಿದೆ. ಮತ್ತು ...ವುಗಳ ಸುಧಾರಿತ ರೂಪವಾಗಿದೆ. ಇದರ ಆಕಾರವು ಕಾರ್ಡಿನಂತೆಯೇ ಇದ್ದು ಕುಗ್ಗು ...ಕೆಯ ಪ್ರಮಾಣವು ಬಹುಮಟ್ಟಿಗೆ ಅಷ್ಟೇ ಇರುತ್ತದೆ. ಆದರೆ ಫಿಲ್ಮಿನ ಹಾಗೆ ಇದು ...ಾರದರ್ಶಕವಾದುದು. ಇದರ ಮೇಲ್ಗಡೆ ಬರಿಗಣ್ಣಿನಿಂದ ಓದಲು ಅನುಕೂಲವಾಗು ...ಂತೆ ಆ ಪುಸ್ತಕದ (ಪತ್ರಿಕೆಯ) ಹೆಸರನ್ನು ಕಾಣಿಸುತ್ತದೆ. ಆದರಿಂದ ಅನ್ವೇಷಣೆಯು ...ುಲಭವಾಗುತ್ತದೆ.

ಮೇಲಿನ ಮೈಕ್ರೋ ರೂಪದಲ್ಲಿ ಕುಗ್ಗುವಿಕೆಯು $\frac{1}{12}$ ರಿಂದ $\frac{1}{24}$ ರ ವರೆಗೆ ಇದ್ದು ...ದರೆ, 'ಮೈಕ್ರೋ ಇಮೇಜರಿ'ಯಲ್ಲಿ ಅದನ್ನು $\frac{1}{40,000}$ ರಷ್ಟು ಕುಗ್ಗಿಸಬಹುದಾಗಿದೆ.

ಇದೊಂದು ಅದ್ಭುತ ಹೊಸ ಸಂಶೋಧನೆ. ಫೊಟೊಕ್ರೊಮಿಕ್ ಎಂಬ ವಿಶಿಷ್ಟವಾದ ಫಿಲ್ಮ್ ಮೇಲೆ ವಿಶೇಷ ರೀತಿಯಲ್ಲಿ ಲೇಪಿಸಲಾದ ಅತಿ ಸೂಕ್ಷ್ಮ ಗುಳ್ಳೆಗಳಿರುತ್ತವೆ. ಒಂದೊಂದು ಗುಳ್ಳೆಯ ಮೇಲೆ ಒಂದೊಂದು ಪುಟವನ್ನು ಮುದ್ರಿಸಬಹುದು.

ಮೈಕ್ರೋರೂಪದಿಂದ ಶುರುವಿಗೆ ಹೇಳಿದ ಸ್ಥಳಾಭಾವ ಮತ್ತು ಪುಸ್ತಕ ಕೆಡುವ ಸಂದರ್ಭಗಳು ನೀಗುವುವಲ್ಲದೆ ಆದರಿಂದ ಇತರ ಅನುಕೂಲತೆಗಳೂ ಇವೆ. ಅಪೂರ್ವ ಪುಸ್ತಕವಿದ್ದರೆ ಅದರ ದ್ವಿಪ್ರತಿಯನ್ನು ಮೈಕ್ರೋರೂಪದಲ್ಲಿ ಇಟ್ಟುಕೊಳ್ಳಬಹುದು. ಮೊದಲಿನದು ಕಳೆದು ಹೋದರೆ ಈ ಪ್ರತಿಯಿಂದ ಮತ್ತೊಂದು ಕಾಗದ ಪ್ರತಿಯನ್ನು ತಯಾರಿಸಬಹುದು. ಅಲ್ಲದೆ ಅಪೂರ್ವ ಗ್ರಂಥ ಅಥವಾ ಗ್ರಂಥ ಭಾಗಗಳನ್ನು ಮೈಕ್ರೋ ರೂಪದಲ್ಲಿ ಹೊರಗೆ ಕಳಿಸುವುದು ಸುಲಭ. ಅಪೂರ್ವ ಗ್ರಂಥಗಳ ಪುನರ್ಮುದ್ರಣಕ್ಕೂ ಇದು ಸಹಾಯಕವಾಗುತ್ತದೆ.

ಶಿಲಾರೂಪದಿಂದ ಮೊದಲ್ಗೊಂಡು ಇಂದಿನ 'ಮೈಕ್ರೋ'ರೂಪದ ವರೆಗಿನ ನಾಲ್ಕು ಸಾವಿರ ವರ್ಷಗಳ ಕಾಲಾವಧಿಯಲ್ಲಿ ಪುಸ್ತಕವು ಅನೇಕ ರೂಪ ತಾಳಿದುದನ್ನು ನೋಡಿದೆವು. ಇಂದಿನ ಪುಸ್ತಕದ ಕಲ್ಪನೆಯನ್ನೇ ತೊಡೆದು ಹಾಕುವ ಹೊಸ ರೂಪವು ಜನ್ಮ ತಾಳಿದೆ! ಅದಕ್ಕೆ ಕಾರಣವಾದದ್ದು ಗಣಕಯಂತ್ರ. ಒಂದು ಪುಸ್ತಕದಲ್ಲಿಯ ವಿಷಯ ವನ್ನೆಲ್ಲ ಕಂಪ್ಯೂಟರ್ ವಿಭಾಗದ 'ಮ್ಯಾಗ್ನೆಟಿಕ್ ಟೇಪ್'ಗಳಲ್ಲಿ ಹಿಡಿದಿಟ್ಟಿರುತ್ತಾರೆ. ಗಣಕ ಯಂತ್ರಕ್ಕೂ ನಿಮ್ಮ ಓದುವ ಕೋಣೆಗೂ ಸಂಪರ್ಕ ಸಾಧನವನ್ನು ಒದಗಿಸಲಾಗುತ್ತದೆ. ಆಗ ಕೋಣೆಯಲ್ಲಿಯೇ ಕುಳಿತು ನಿಮಗೆ ಬೇಕಾದ ಪುಸ್ತಕದ ಪುಟಗಳನ್ನು ಒಂದು ಪರದೆಯ ಮೇಲೆ ಮೂಡಿಸಬಹುದು. ಹಾಗೆ ಆದರೆ ಪುಸ್ತಕವನ್ನು ಬಳಿಯಲ್ಲಿಟ್ಟುಕೊಂಡು ಓದುವ ಪ್ರಸಂಗ ಇನ್ನಿಲ್ಲವಾಗಬಹುದು. ಹೀಗಿದ್ದರೂ ಇಂದಿನ ಕಾಗದ-ಮುದ್ರಣವುಳ್ಳ ಪುಸ್ತಕಕ್ಕೆ ತನ್ನದೇ ಆದ ಸುಭಗತೆ-ಸೌಲಭ್ಯಗಳಿದ್ದು ನೂರಾರು ವರ್ಷ ಮುಂದೆಯೂ ವಾಚನ ಸಾಧನವಾಗಿ ಉಳಿಯುವುದರಲ್ಲಿ ಸಂದೇಹವಿಲ್ಲ.

X X X X

೧೪. 'ವೃತ್ತ' ಮತ್ತು 'ಜಾತಿ'

ಶ್ರೀ ಸೇಡಿಯಾಪು ಕೃಷ್ಣ ಭಟ್ಟ, ಮಣಿಪಾಲ.

ನಮ್ಮ ಛಂದಃಶಾಸ್ತ್ರ ಗ್ರಂಥಗಳಲ್ಲಿ ಲಕ್ಷಣ ನಿರೂಪಣ ಮಾಡಲಾಗಿರುವ ದ್ಯಗಳ ದ್ವೈವಿಧ್ಯವನ್ನು ತಿಳಿಸುವ ಅಜ್ಞಾತ ಕರ್ತೃಕವಾದ ಹಳೆಯ ಶ್ಲೋಕವೊಂದು ೀಗಿದೆ:—

ಪದ್ಯಂ ಚತುಷ್ಪದಂ, ತಚ್ಚ ವೃತ್ತಂ ಜಾತಿರಿತಿ ದ್ವಿಧಾ ।
ಏಕದೇಶಸ್ಥಿರಾ ಜಾತಿಃ ವೃತ್ತಂ ಗುರು ಲಘು ಸ್ಥಿರಂ ॥

ಈ ಶ್ಲೋಕದ ಪೂರ್ವಾರ್ಧವು ದಂಡಿಯ ಕಾವ್ಯಾದರ್ಶದಲ್ಲಿಯೂ ಕಾಣಿಸಿ ಕೊಳ್ಳುತ್ತದೆ; ರಿಚ್ಛೇದ ೧–೧೧) ಇದರ ತಾತ್ಪರ್ಯ: "ಪದ್ಯ ಎಂದರೆ ನಾಲ್ಕು ಪಾದಗಳುಳ್ಳ ಛಂದೋ ಚನೆ. ಅದು ವೃತ್ತ ಮತ್ತು ಜಾತಿ ಎಂದು ಎರಡು ವಿಧವಾಗಿದೆ; ಒಂದು ಪದ್ಯವರ್ಗದಲ್ಲಿ ಲವು ಅಂಶಗಳು ಮಾತ್ರ 'ಸ್ಥಿರ'ವಾಗಿದ್ದರೆ–ಎಂದರೆ ಆ ವರ್ಗದ ಪ್ರತಿಯೊಂದು ಪದ್ಯವು ಲವು ಅಂಶಗಳಲ್ಲಿ ಮಾತ್ರ ಸಮಾನವಾಗಿದ್ದರೆ–ಆ ವರ್ಗದ ಪದ್ಯವು 'ಜಾತಿ' ಎನಿಸಿ ಳ್ಳುತ್ತದೆ. ಒಂದು ವರ್ಗದ ಪದ್ಯಗಳ ಎಲ್ಲಾ ಅಕ್ಷರಗಳು 'ಸ್ಥಿರ' ವಾಗಿದ್ದರೆ– ದರೆ ಆ ಪದ್ಯಾಕ್ಷರಗಳ ಗುರುಲಘುತ್ವವು ಆಮೂಲಾಗ್ರವಾಗಿ, ಅನುಕ್ರಮ ತಪ್ಪದೆ, ಕಪ್ರಕಾರವಾಗಿ ಇರುವುದಾದರೆ–ಆ ವರ್ಗದ ಪದ್ಯವು 'ವೃತ್ತ' ಎಂದೆನಿಸಿಕೊಳ್ಳುತ್ತದೆ"–

[ಪಿಂಗಲನ ಛಂದಃ ಶಾಸ್ತ್ರದ ವ್ಯಾಖ್ಯಾನದಲ್ಲಿ ಹಲಾಯುಧನು ಉದ್ಧರಿಸಿದ ಈ ್ಲೋಕದ ಪಾಠವು (ನಿರ್ಣಯಸಾಗರ ಮುದ್ರಣ, ಪುಟ ೫೭) 'ಏಕ ದೇಶ ಸ್ಥಿತಾ ಜಾತಿಃ ್ತಂ ಗುರುಲಘು ಸ್ಥಿತಂ' ಎಂದು–'ಗುರುಲಘು ಸ್ಥಿರಂ' ಎಂಬ ಪಾಠಾಂತರ ಸೂಚನೆ ಹಿತ–ಮುದ್ರಿತವಾಗಿದೆ. ಈ ಪಾಠಭೇದದಿಂದಾಗಿ ಆ ಶ್ಲೋಕದ ಅರ್ಥವು ಬೇರಾಗುವು ಲ್ಲವಾದರೂ ಪೂರ್ವೋಕ್ತ ಪಾಠವು ಅರ್ಥಸ್ವರೂಪವನ್ನು ವಿಶದತರವಾಗಿ ತಿಳಿಸುವುದ ಂದ ಆ ಪಾಠವೇ ಗ್ರಾಹ್ಯವಾಗಿದೆ.]

ವೃತ್ತ ಮತ್ತು ಜಾತಿ ಎಂಬ ಸಂಜ್ಞೆಗಳ ಮೂಲವೇನೆಂಬುದನ್ನು ಖಚಿತವಾಗಿ ಿದುಕೊಳ್ಳುವ ವಿಷಯದಲ್ಲಿ ಈ ಶ್ಲೋಕಕ್ಕೆ ಬಹಳ ಮಹತ್ವವಿದೆ. 'ವೃತ್ತ' ಎಂಬ ಪದ ನ್ನು ಛಂದಃ ಶಾಸ್ತ್ರಕಾರರು ಸಹ ನಿಶ್ಚಿತವಾದ ಒಂದೇ ಅರ್ಥದಲ್ಲಿ ಬಳಸಿಲ್ಲ; 'ಪದ್ಯ' ಂಬುದಕ್ಕೆ ಪರ್ಯಾಯವಾಗಿಯೂ ಅದನ್ನು ಬಳಸಿದ್ದಾರೆ (ಉದಾ: ಮಾತ್ರಾವೃತ್ತ; ೃತ್ತ ರತ್ನಾಕರ' ಇತ್ಯಾದಿ), ಇದರಿಂದಾಗಿ 'ವೃತ್ತ' ಎಂಬುದರ ಮೂಲಾರ್ಥವು ್ಮರೆಯಾಗಿದೆ. ಹೀಗಿದ್ದರೂ, ಲೋಕರೂಢಿಯಲ್ಲಿ ಇಂದು ಕೂಡ, ಖ್ಯಾತಕರ್ಣಾಟಕಾದಿ ಕ್ಷರವೃತ್ತಗಳಿಗೆ ಮಾತ್ರ ವೃತ್ತವೆಂಬ ಹೆಸರು ಬಳಕೆಯಾಗುತ್ತದೆ. ಈ ರೂಢಿಯ

ಸಾಧುತ್ವವನ್ನೂ, ವೃತ್ತ ಮತ್ತು ಜಾತಿ ಎಂಬ ಸಂಜ್ಞೆಗಳ ಅರ್ಥವ್ಯಾಪ್ತಿ ಹಾಗೂ ಅನ್ವರ್ಥತೆಯನ್ನೂ ಈ ಶ್ಲೋಕವು ನಮಗೆ ನಿಸ್ಸಂದಿಗ್ಧವಾಗಿ ತಿಳಿಸಬಲ್ಲದಾಗಿದೆ. ಹಲಾಯುಧನು ಪಿಂಗಲ ವ್ಯಾಖ್ಯಾನದಲ್ಲಿ ಈ ಶ್ಲೋಕವನ್ನು ಉದ್ಧರಿಸಿರುವನಾದರೂ. ಇದರ ಅರ್ಥದ ಕುರಿತು ಅವನು ಸಾಕಷ್ಟು ಚಿಂತನಮಾಡಿದಂತೆ ತೋರುವುದಿಲ್ಲ. ಅವನು ಹಾಗೆ ಮಾಡಿದ್ದಪಕ್ಷದಲ್ಲಿ, ವೃತ್ತಂ ಎಂಬ ಸಂಜ್ಞೆಗೆ-"ಗಾಯತ್ರ್ಯಾದೌ ಛಂದಸಿ ವರ್ತತೇ ಇತಿ ವೃತ್ತಂ" ಎಂದು ಒಂದು ನಿಷ್ಪತ್ತಿಯನ್ನು ಹೇಳಿದ ಹಾಗೆ ಮಾಡಿ ತೃಪ್ತನಾಗುತ್ತಿರಲಿಲ್ಲವೆಂದು ನನ್ನ ಅಲ್ಪಮತಿಗೆ ತೋರುತ್ತದೆ. ಏಕೆಂದರೆ, ಆ ಸಂಜ್ಞೆಯ ನಿಜವಾದ ಅರ್ಥವನ್ನು ಹೇಳುವ ಮೂಲಕ ಅದರ ನಿಷ್ಪತ್ತಿಯನ್ನು "ಗುರು ಲಘು ಸ್ಥಿರಂ" ಎಂಬ ಆ ಶ್ಲೋಕ ಭಾಗವೇ ಸೂಚಿಸುತ್ತದೆ. ಅದು ಹೇಗೆಂದರೆ-ಯಾವುದೊಂದು ಹೆಸರಿನ ವೃತ್ತವರ್ಗದ (ಉದಾ: ಚಂಪಕಮಾಲಾ) ಪ್ರತಿಯೊಂದು ಪದ್ಯದಲ್ಲಿಯೂ ಅಕ್ಷರಸಂಖ್ಯೆ ಸಮಾನವಾಗಿದ್ದು ಗುರುಲಘುಗಳು ಕ್ರಮತಪ್ಪದೆ ಸ್ವಸ್ಥಾನಗಳಲ್ಲಿರುತ್ತವೆ. ಹಾಗಿದ್ದರೆ ಮಾತ್ರ ಆ ಪದ್ಯವು ಆ ಹೆಸರನ್ನು ಪಡೆಯುತ್ತದೆ; ಅರ್ಥಾತ್ ಆ ಹೆಸರಿನ ಪದ್ಯಗಳೆಲ್ಲವೂ ಏಕಪ್ರಕಾರವಾದ ಒಂದು ಸ್ಥಿರರೂಪದಲ್ಲಿರುತ್ತವೆ, ಇದಕ್ಕೆ ಅಪವಾದವಿಲ್ಲವೇ ಇಲ್ಲ. ವೃತ್ತ ಎಂಬ ಪದದ ನಾನಾರ್ಥಗಳಲ್ಲಿ 'ದೃಢ (=ಸ್ಥಿರ)' ಎಂಬುದೂ ಒಂದು ಎಂಬುದನ್ನು ಸಂಸ್ಕೃತ ಶಬ್ದ ಕೋಶಗಳೂ ಹೇಳುತ್ತವೆ, (ಉದಾ:-ಅಮರಕೋಶ ವ್ಯಾಖ್ಯಾನದಲ್ಲಿ ಭಾನುಜಿದೀಕ್ಷಿತನು ಉದ್ಧರಿಸಿರುವ ಹೈಮ ಕೋಶದ ಶ್ಲೋಕಭಾಗ-"ವೃತ್ತಂ ವೃತ್ತೌ ದೃಢೇ ವೃತೇ ಚರಿತ್ರೇ ವರ್ತುಲೇ ......" — ನಿರ್ಣಯಸಾಗರ ಮುದ್ರಣ, ಪುಟ-೩೭೬). ಆದುದರಿಂದ 'ಸ್ಥಿರ ರೂಪದ ಪದ್ಯ' ಎಂಬುದೇ 'ವೃತ್ತ' ಎಂಬ ಸಂಜ್ಞೆಯ ಮೂಲಾರ್ಥವೆಂಬುದರಲ್ಲಿ ಸಂದೇಹ ವಿಲ್ಲ. ಏವಂಗುಣವಿಶಿಷ್ಟವಾದ ವೃತ್ತಗಳ ಹಾಗೆ ಪ್ರತಿಯೊಂದು ಪದ್ಯವೂ ಸ್ವವರ್ಗದ ಇನ್ನೊಂದು ಪದ್ಯದ ಪಡಿಯಚ್ಚಾಗಿರದೆ, 'ಏಕ ದೇಶ ಸ್ಥಿರ' ಎಂದರೆ ಪದ್ಯದ ಕೆಲವು ಅಂಶ ಮಾತ್ರ ಆ ವರ್ಗದ ಎಲ್ಲಾ ಪದ್ಯಗಳಲ್ಲಿ 'ಸ್ಥಿರ' (=ಏಕರೂಪ, ಸಮಾನ) ವಾಗಿದ್ದು. ಉಳಿದ ಅಂಶಗಳು ಅಸ್ಥಿರ ಎಂದರೆ ಐಚ್ಛಿಕವಾಗಿರುವುದಾದರೆ ಅದು 'ಜಾತಿ' ಎಂದು ಈ ಶ್ಲೋಕ ಹೇಳುತ್ತದೆ. ಹಾಗಾದರೆ ಇದಕ್ಕೆ 'ಜಾತಿ' ಎಂಬ ಹೆಸರೇಕೆ ಬಂತು?

ಸಾಧಾರಣವಾಗಿ ಛಂದಃಶಾಸ್ತ್ರ ಗ್ರಂಥಗಳಲ್ಲಿ ಮಾತ್ರಾಬಂಧಗಳಿಗೆ 'ಜಾತಿ' ಎಂಬ ಹೆಸರು ಕೊಡಲ್ಪಟ್ಟಿದೆ. ಆದರೆ ಈ 'ಜಾತಿ' ಎಂಬ ಶಬ್ದದಲ್ಲಿ 'ಮಾತ್ರಾಬಂಧ' ಎಂಬ ಅರ್ಥವನ್ನು ಕೊಡುವ ಶಕ್ತಿ ಇರುವಂತೆ ಕಾಣುವುದಿಲ್ಲ. ಈ ಕಾರಣದಿಂದ ಕೆಲವರು 'ವೃತ್ತ' ಎಂದರೆ (ಮೊದಲು) 'ಇದ್ದದ್ದು' ಎಂದೂ, 'ಜಾತಿ' ಎಂದರೆ (ಮತ್ತೆ) 'ಹುಟ್ಟಿದ್ದು' ಎಂದೂ ಅರ್ಥ ನಿರೂಪಣ ಮಾಡಿ,-ಸಂಸ್ಕೃತದಲ್ಲಿ ಮೊದಲು 'ಅಕ್ಷರ ಬಂಧ'ಗಳು ಮಾತ್ರ ಇದ್ದುದರಿಂದ ಅವುಗಳಿಗೆ 'ವೃತ್ತ'ಗಳೆಂದೂ, ಮಾತ್ರಾಬಂಧಗಳು ಮತ್ತೆ ಸಂಸ್ಕೃತ ಪ್ರಾಕೃತಗಳಲ್ಲಿ ಹುಟ್ಟಿ ಬಂದುದರಿಂದ ಅವುಗಳಿಗೆ 'ಜಾತಿ'ಗಳೆಂದೂ ಹೆಸರು ಬಂತು-ಇತ್ಯಾದಿಯಾಗಿ ಏನೇನೋ ಅನುಮಾನಿಸಿದ್ದಾರೆ. ಆದರೆ ಪೂರ್ವೋಕ್ತ

ಶ್ಲೋಕದ 'ಏಕದೇಶ ಸ್ಥಿರಾ ಜಾತಿಃ' ಎಂಬ ಭಾಗದ ಅರ್ಥವನ್ನು ಸರಿಯಾಗಿ ತಿಳಿದು ಕೊಳ್ಳುವ ಪ್ರಯತ್ನ ಮಾಡಿದರೆ, ಒಂದು ಬಗೆಯ ಪದ್ಯವರ್ಗಕ್ಕೆ 'ಜಾತಿ' ಎಂಬ ಹೆಸರೇಕೆ ಬಂತೆಂಬುದರ ನಿಜವಾದ ಕಾರಣ ಗೊತ್ತಾಗುತ್ತದೆ. ಅದು ಹೇಗೆಂದರೆ–ಒಂದು ವಸ್ತುವಿನಲ್ಲಿ ಸಹಜವಾಗಿ ಇರುವ ಗುಣಧರ್ಮಗಳು ಅನೇಕ ವಸ್ತುಗಳಲ್ಲಿ ಇರುವುವಾದರೆ, ಆ ವಸ್ತುಗಳೆಲ್ಲ 'ಒಂದು ಜಾತಿ' ಎನ್ನಿಸಿಕೊಳ್ಳುತ್ತವೆ. (ಉದಾ:– ವೃಕ್ಷಜಾತಿ, ಮೃಗಜಾತಿ, ಪಕ್ಷಿಜಾತಿ, ಮನುಷ್ಯಜಾತಿ, ಗೋಜಾತಿ, ರತ್ನಜಾತಿ, ಫಲಜಾತಿ, ಇತ್ಯಾದಿ). ಒಂದು ಜಾತಿಗೆ ಒಳಪಡುವ ಒಂದು ವಸ್ತು 'ವ್ಯಕ್ತಿ' ಎನಿಸಿಕೊಳ್ಳುತ್ತದೆ. ಒಂದೇ ಜಾತಿಗೆ ಸೇರಿರುವವೆಂಬುದರಿಂದ ಆ 'ಜಾತಿ'ಯ 'ವ್ಯಕ್ತಿ'ಗಳೆಲ್ಲ ಒಂದಕ್ಕೊಂದು ಸಂಪೂರ್ಣವಾಗಿ ಸಮಾನವಾಗಿರುವುದಿಲ್ಲ; ಆ ಪ್ರತಿಯೊಂದು 'ವ್ಯಕ್ತಿ'ಗೂ ತನ್ನ 'ವಿಶೇಷತೆ' (=ವಿಶಿಷ್ಟತೆ, ವ್ಯತ್ಯಾಸ ಅಥವಾ 'ವ್ಯಕ್ತಿತ್ವ') ಇದ್ದೇ ಇರುತ್ತದೆ. ಈ ತತ್ತ್ವವನ್ನು ಪ್ರಸ್ತುತಕ್ಕೆ ಅನ್ವಯಿಸಿದಾಗ, ಮಾತ್ರಾಬಂಧಗಳಿಗೆ 'ಜಾತಿ' ಎಂಬ ಹೆಸರು ಏಕೆ ರೂಢವಾಯಿತೆಂಬುದು ಗೊತ್ತಾಗುತ್ತದೆ. ಯಾವುದೊಂದು ಮಾತ್ರಾಬಂಧದಲ್ಲಿಯೂ ತನ್ನ 'ಜಾತಿ'ಯ ಸಾಮಾನ್ಯ ಲಕ್ಷಣಗಳೊಡನೆ 'ವೈಯಕ್ತಿಕ' ವಿಶೇಷತೆ ಇದ್ದೇ ಇರುತ್ತದೆ. ಉದಾಹರಣವಾಗಿ 'ಕಂದಪದ್ಯ'ವನ್ನೆತ್ತಿಕೊಳ್ಳೋಣ: ಪ್ರತಿಯೊಂದು ಕಂದಪದ್ಯದಲ್ಲಿ ಮಾತ್ರಾಸಂಖ್ಯೆ, ಗಣಸಂಖ್ಯೆ, ಪಾದಪ್ರಮಾಣ ಸಮಾನವಾಗಿರುತ್ತದೆ; ಇದು 'ಕಂದಜಾತಿ'ಯ ಸಾಮಾನ್ಯ ಧರ್ಮ, ಆದರೆ ಗಣಾಂತರ್ಗತವಾದ ಛಂದೋರೂಪವು (=ಗುರುಲಘುವಿನ್ಯಾಸ) ಎಲ್ಲಾ ಕಂದ ಪದ್ಯಗಳಲ್ಲಿ ಒಂದೇ ವಿಧವಾಗಿರುವುದಿಲ್ಲ, ಇರಬೇಕಾಗಿಲ್ಲ; ಇದು 'ಕಂದ ವ್ಯಕ್ತಿ'ಯ ವಿಶೇಷ ಧರ್ಮ, ಹೀಗೆ 'ಕಂದಪದ್ಯ'ದ ಸ್ವರೂಪವು 'ಏಕ ದೇಶ ಸ್ಥಿರ' ಎಂದರೆ ಅಂಶತಃ ಸ್ಥಿರವೂ ಅಂಶತಃ ಅಸ್ಥಿರವೂ ಆಗಿರುವುದರಿಂದಲೇ ಅದು 'ಜಾತಿ' ಎನಿಸಿಕೊಂಡಿದೆ ಎಂದು ತಿಳಿಯುವುದು ಯುಕ್ತವಾಗಿದೆ ಹೊರತು, ಅದೊಂದು ಮಾತ್ರಾಬಂಧವೆಂಬುದರಿಂದಲ್ಲ. ಆದರೆ, ಮಾತ್ರಾಬಂಧಗಳೆಲ್ಲವೂ ನಿರಪವಾದವಾಗಿ ಹೀಗೆ 'ಏಕ ದೇಶ ಸ್ಥಿರ'ವಾಗಿರುವ ಕಾರಣ, 'ಮಾತ್ರಾಬಂಧ'ವೆಂದರೂ 'ಜಾತಿ' ಎಂದರೂ ಒಂದೇ ಅರ್ಥವೆಂಬ ಭಾವನೆ ಹುಟ್ಟಿಬೆಳೆದು ರೂಢವಾಗಿ ಹೋದುದರಿಂದ, ಛಂದೋ ಗ್ರಂಥಗಳಲ್ಲಿಯೂ ಹಾಗೆ ಹೇಳಲ್ಪಡುವಂತಾಯಿತು (ಉದಾ:– "ಜಾತಿರ್ಮಾತ್ರಾಗಣಾಶ್ರಿತಾ" ಜಯಕೀರ್ತಿಯ ಛಂದೋನುಶಾಸನ. ೧–೨೦). ವಸ್ತುತಃ 'ಜಾತಿ' ಎಂಬ ಸಂಜ್ಞೆಯ ಅರ್ಥವು 'ಮಾತ್ರಾಬಂಧ'ವೆಂಬುದೂ ಅಲ್ಲ, ಛಂದಃ ಶಾಸ್ತ್ರದಲ್ಲಿ ಆ ಸಂಜ್ಞೆಯ ವ್ಯಾಪ್ತಿ ಮಾತ್ರಾಬಂಧಗಳಿಗೇ ಸೀಮಿತವಾಗಿಯೂ ಇಲ್ಲ. ಮಾತ್ರಾಬಂಧಗಳಲ್ಲದ, ಆದರೆ 'ಏಕ ದೇಶ ಸ್ಥಿರ'ವಾದ ಅಕ್ಕರ, ತ್ರಿಪದಿ, ಮೊದಲಾದುವುಗಳಿಗೂ ಛಂದೋ ಗ್ರಂಥಗಳಲ್ಲಿ 'ಜಾತಿ' (ಕರ್ಣಾಟಕ ವಿಷಯ ಜಾತಿ) ಎಂದೇ ಹೆಸರು ಕೊಡಲಾಗಿದೆ. ಇಷ್ಟು ಮಾತ್ರವಲ್ಲ, ಅಕ್ಷರಚ್ಛಂದಗಳೇ ಆಗಿರುವ 'ಇಂದ್ರ ವಜ್ರ' ಹಾಗೂ 'ಉಪೇಂದ್ರ ವಜ್ರ'ಗಳ ಮತ್ತು 'ಇಂದ್ರವಂಶ' ಹಾಗೂ 'ವಂಶಸ್ಥ'ಗಳ ಸಂಸೃಷ್ಟಿರೂಪವಾಗಿದ್ದು 'ಅಂಶತಃ ಸ್ಥಿರವಾಗಿರುವ' ಪದ್ಯಗಳಿಗೆ ಛಂದಃಶಾಸ್ತ್ರದಲ್ಲಿ 'ಉಪಜಾತಿ' ಎಂಬ ಹೆಸರಿರುವುದನ್ನೂ ಕಾಣಬಹುದಾಗಿದೆ. ಈ ವಿಷಯಗಳನ್ನೆಲ್ಲ ಭಾವಿಸಿದರೆ, ಯಾವುದೊಂದು ಪದ್ಯವು

ಅದು ಮಾತ್ರಾಬಂಧವಾಗಿರಲಿ, ಅಲ್ಲದಿರಲಿ—'ಏಕದೇಶ ಸ್ಥಿರ'ವಾಗಿರುವುದಾದರೆ ಅದು 'ಜಾತಿ' ಎಂಬ ಹೆಸರಿಗೆ ಪಾತ್ರವಾಗುತ್ತದೆಂಬುದು ಸ್ಫುಟವಾಗದಿರದು. ಈ ದೃಷ್ಟಿಯಿಂದ ನೋಡಿದಾಗ-ಸಂಸ್ಕೃತ ವಾಙ್ಮಯದ ಅಧಿಕಭಾಗವನ್ನು ಆಕ್ರಮಿಸಿ ಆಳುತ್ತಿರುವ 'ಶ್ಲೋಕ' (=ಅನುಷ್ಟುಪ್ ಶ್ಲೋಕ)ವನ್ನು 'ಜಾತಿ' ಎಂಬ ಪದ್ಯವರ್ಗದಲ್ಲಿ ಸೇರಿಸುವುದು ಯುಕ್ತವೆನಿಸುತ್ತದೆ, ಏಕೆಂದರೆ, ಅದಕ್ಕೆ 'ಏಕ ದೇಶ ಸ್ಥಿರಾ ಜಾತಿಃ' ಎಂಬ ಲಕ್ಷಣವು ಸರಿಯಾಗಿ ಅನ್ವಯಿಸುತ್ತದೆ. ಅದನ್ನಿಲ್ಲಿ ಸ್ವಲ್ಪ ವಿವರಿಸೋಣ: ಅನುಷ್ಟುಪ್ ಶ್ಲೋಕದ ನಾನಾಭೇದಗಳನ್ನು ಛಂದೋಗ್ರಂಥಗಳಲ್ಲಿ ಕಾಣುವೆವಾದರೂ, ಸಂಸ್ಕೃತ ಗ್ರಂಥ ರಾಶಿಯಲ್ಲಿ ನಮಗೆ ಕಾಣಸಿಕ್ಕುವುದು (ಅಷ್ಟೊಂದು ಕಟ್ಟುನಿಟ್ಟಾದ ನಿಯಮವಿಲ್ಲದ) ಅದರ ಒಂದೇ ರೂಪ ಎಂದರೆ ತಪ್ಪಾಗಲಾರದು, ಅದರ ಲಕ್ಷಣವನ್ನು ಸ್ಥೂಲವಾಗಿ ಹೀಗೆ ಹೇಳಬಹುದು:— "ಅದಕ್ಕೆ ನಾಲ್ಕು ಪಾದಗಳು, ಪಾದಕ್ಕೆ ಎಂಟು ಅಕ್ಷರಗಳು, ಸಮಪಾದಗಳ ಮತ್ತು ವಿಷಮ ಪಾದಗಳ ಛಂದೋರೂಪ ಒಂದೇ ಅಲ್ಲ. ಸಮಪಾದಗಳ ಉತ್ತರಾರ್ಧವು ನಿಯತವಾಗಿ

ು — ು —
ಲ ಗಂ ಲ ಗಂ ಎಂದಿರುತ್ತದೆ. ವಿಷಮಪಾದಗಳ ಉತ್ತರಾರ್ಧದಲ್ಲಿ ಲಗಂ ಲಗಂ ಇರುವುದಿಲ್ಲ. — ಇಷ್ಟು ಭಾಗ ಮಾತ್ರ ಶ್ಲೋಕದಲ್ಲಿ ಸ್ಥಿರ; ಉಳಿದುದು ಅಸ್ಥಿರ." ಹೀಗೆ 'ಏಕ ದೇಶ ಸ್ಥಿರಾ ಜಾತಿಃ' ಎಂಬ ಲಕ್ಷಣವು 'ಶ್ಲೋಕ'ಕ್ಕೆ ಪೂರ್ಣವಾಗಿ ಅನ್ವಯಿಸುವುದಾದರೂ, ಯಾವ ಛಂದೋಗ್ರಂಥದಲ್ಲಿಯೂ ಅದನ್ನು 'ಜಾತಿವರ್ಗ'ದ ಬಂಧವೆಂದು ಹೇಳಿದ್ದನ್ನು ನಾನು ಕಂಡಿಲ್ಲ. 'ಜಾತಿಚ್ಛಂದ'ವೆಂದರೆ 'ಮಾತ್ರಾಚ್ಛಂದ'ವೆಂಬ ಭಾವನೆ ರೂಢಮೂಲವಾಗಿ ಹೋಗಿದ್ದುದೇ ಇದಕ್ಕೆ ಕಾರಣವೆಂಬುದರಲ್ಲಿ ಸಂದೇಹವೇನೂ ನನಗೆ ತೋರುವುದಿಲ್ಲ. ಏಕೆಂದರೆ, ಒಂದಾನೊಂದು ಕಾಲದಲ್ಲಿ 'ಶ್ಲೋಕ'ವು 'ಜಾತಿ' ವರ್ಗದ ಪದ್ಯವೆಂದೇ ತಿಳಿಯಲ್ಪಡುತ್ತಿತ್ತೆಂಬುದಕ್ಕೆ ಸಾಕ್ಷ್ಯಗಳು ದೊರಕುತ್ತವೆ.—ಒಂದು ಅನುಷ್ಟುಪ್ ಶ್ಲೋಕಕ್ಕೆ ತದರ್ಥವನ್ನು ಸೇರಿಸಿದಾಗ ಅದು 'ಜಾತಿಗಾಥಾ' ಎನ್ನಿಸಿ ಕೊಳ್ಳುತ್ತದೆಂದು ಜಯಕೀರ್ತಿ ಸೋದಾಹರಣವಾಗಿ ನಿರೂಪಿಸಿದ್ದಾನೆ. (ಅನುಷ್ಟುಪ್ ಶ್ಲೋಕವನ್ನು, ಆತಏವ ಜಾತಿಗಾಥೆಯನ್ನೂ ವಿಷಮ ವೃತ್ತಾಧಿಕಾರದಲ್ಲಿ ಸೇರಿಸಿ) ಅವನು ಹೀಗೆ ಹೇಳುತ್ತಾನೆ: (ಛಂದೋನು ಶಾಸನ ೪-೩೧.೩೨)

ಅನುಷ್ಟುಪ್ ವಿಷಮಾಖ್ಯಾನಾಂ ಷಡ್ಭಿಃಪಾದೈರ್ಯಥೋದಿತೈಃ ।
ಜಾತಿಗಾಥಾ ಭವತ್ಯೇವಮೇನಾಂತು ಛ್ಛಂದಸೀಂ ವಿದುಃ ।
'ದಶಧರ್ಮಂ ನಜಾನಂತೀ'ತ್ಯಾದೇರಾದಿಪ್ರಯೋಗತಃ ॥
ಯಥಾ। ದಶಧರ್ಮಂ ನ ಜಾನಂತಿ ಧೃತರಾಷ್ಟ್ರ ನಿಬೋಧ ತಾನ್ ।
ಮತ್ತಃ ಪ್ರಮತ್ತ ಉನ್ಮತ್ತಃ ಶ್ರಾಂತಃ ಕ್ರುದ್ಧೋ ಬುಭುಕ್ಷಿತಃ ।
ತ್ವರಮಾಣಶ್ಚ ಭೀರುಶ್ಚ ಲುಬ್ಧಃ ಕಾಮೀ ಚ ತೇ ದಶ ॥


ಇದಲ್ಲದೆ ಅನುಷ್ಟುಪ್ ಶ್ಲೋಕದ್ದೇ ಆದ ಒಂದು ವಿಕೃತಿಯನ್ನು ನಿರೂಪಿಸಿ, ಅದರ ಹೆಸರು 'ವಿಜಾತಿಗಾಥಾ' ಎಂದೂ ತಿಳಿಸಿದ್ದಾನೆ. 'ಜಾತಿಗಾಥೆ'ಯ ಸ್ವರೂಪ ನಿರೂಪಣೆ ನಾಗವರ್ಮನ ಛಂದೋಂಬುಧಿಯಲ್ಲಿಯೂ ಇದೆ. 'ಗಾಥಾ' ಎಂದರೆ 'ಹಾಡು' ಅಥವಾ 'ಪದ್ಯ' ಎಂದರ್ಥ. ಆದುದರಿಂದ 'ಜಾತಿಗಾಥಾ' ಎಂದರೆ 'ಜಾತಿ ಆಗಿರುವ ಪದ್ಯ' ಅಥವಾ 'ಜಾತಿವರ್ಗದ ಪದ್ಯ' ಎಂದರ್ಥವಾಗುತ್ತದೆ. ಜಾತಿ ಗಾಥೆಗೂ ಅನುಷ್ಟುಪ್ ಶ್ಲೋಕಕ್ಕೂ ಇರುವ ವ್ಯತ್ಯಾಸವು ಪಾದಸಂಖ್ಯೆಯಲ್ಲಿ ಮಾತ್ರ; ಛಂದೋರೂಪ ಅಭಿನ್ನ. ಜಾತಿ ಗಾಥೆ ಎಂದರೆ ಒಂದೂವರೆ ಶ್ಲೋಕ, ಬೇರೇನೂ ಅಲ್ಲ. 'ಒಂದೂವರೆ ಶ್ಲೋಕ'ವು ಜಾತಿ ಎಂದಾದರೆ, ಒಂಟಿ ಶ್ಲೋಕವೂ ಜಾತಿಯೇ ಸೈ. ಆದುದರಿಂದ 'ಜಾತಿಗಾಥಾ' ಎಂಬ ಹೆಸರು ಹುಟ್ಟಿದ ಕಾಲದಲ್ಲಿ, ಜಾತಿ ಎಂದರೆ ಮಾತ್ರಾಬಂಧವೆಂಬ ಸಂಕುಚಿತವಾದ ಅರ್ಥವಿರಲಿಲ್ಲವೆಂದೂ, 'ಜಾತಿ' ಎಂದರೆ 'ಏಕದೇಶಸ್ಥಿರವಾದ ಪದ್ಯ' ಎಂಬ ವ್ಯಾಪಕವಾದ ಅರ್ಥವೇ ಮಾನ್ಯವಾಗಿತ್ತೆಂದೂ, ತದನುಸಾರವಾಗಿ ಅನುಷ್ಟುಪ್ ಶ್ಲೋಕವೂ ಅದರ ವಿಕೃತಿಗಳೂ 'ಜಾತಿ'ಗಳೆಂದೇ ತಿಳಿಯಲ್ಪಡುತ್ತಿದ್ದುವೆಂದೂ ನ್ಯಾಯವಾಗಿ ಅನುಮಾನಿಸಬೇಕಾಗುತ್ತದೆ.

'ಜಾತಿ' ಎಂದರೆ ಮಾತ್ರಾಬಂಧವೆಂಬ ಅರ್ಥವನ್ನೇ ಅವಲಂಬಿಸಿದ್ದ ಛಂದೋಗ್ರಂಥಕಾರರಿಗೆ – ಗುರುಲಘುಸ್ಥಿರವಾದ ಅಕ್ಷರವೃತ್ತವಲ್ಲದ, ಮಾತ್ರಾಬಂಧವೂ ಅಲ್ಲದ ಅರ್ಧ ಸಮಸ್ವರೂಪದ 'ಶ್ಲೋಕ'ವನ್ನು ತಮ್ಮ ಗ್ರಂಥಗಳ ಯಾವ ಪ್ರಕರಣದಲ್ಲಿ ಸೇರಿಸುವುದೆಂಬುದೊಂದು ಸಮಸ್ಯೆಯಾಗಿದ್ದುದು ಕಂಡುಬರುತ್ತದೆ. ಜಯಕೀರ್ತಿ ಅದನ್ನು ವಿಷಮವೃತ್ತಾಧಿಕಾರದಲ್ಲಿ ಸೇರಿಸಿದ್ದಾನೆ; ಹೇಮಚಂದ್ರನು ಅರ್ಧಸಮವೃತ್ತಗಳ ಮತ್ತು ವಿಷಮವೃತ್ತಗಳ ಎಡೆಯಲ್ಲಿ ಅದನ್ನು ತುರುಕಿದ್ದಾನೆ, ಕೇದಾರ ಭಟ್ಟನು ಅದನ್ನು 'ಮಾತ್ರಾವೃತ್ತಾಧಿಕಾರ'ದಲ್ಲಿ ಹಾಕಿದ್ದಾನೆ. ಅದು ಮಾತ್ರಾಬಂಧವಲ್ಲವೆಂಬ ಅರಿವು ಭಟ್ಟನಿಗೆ ಇದ್ದಿಲ್ಲವೆಂದು ಹೇಳಿದರೆ, ಅದು ಮೂರ್ಖತನವಾದೀತು. ಹಾಗಾದರೆ ಅವನು ಅದನ್ನು ಅಲ್ಲಿ ಏಕೆ ಸೇರಿಸಿರಬಹುದು? ಮಾತ್ರಾಬಂಧಗಳಂತೆ 'ಶ್ಲೋಕ'ವೂ ಜಾತಿವರ್ಗಕ್ಕೆ ಸೇರಿದ ಪದ್ಯವೆಂಬುದರಿಂದಲೇ ಅವನು ಹಾಗೆ ಮಾಡಿದ್ದಿರಬಹುದೆಂದು ತೋರುತ್ತದೆ. ಅವನು ತನ್ನ 'ವೃತ್ತರತ್ನಾಕರ'ದ ದ್ವಿತೀಯಾಧ್ಯಾಯಕ್ಕೆ 'ಮಾತ್ರಾವೃತ್ತಾಧಿಕಾರ' ಎಂದು ಹೆಸರಿಡದೆ 'ಜಾತ್ಯಧಿಕಾರ' ಎಂದಿರಿಸುತ್ತಿದ್ದರೆ 'ಶ್ಲೋಕ'ವನ್ನು ಆ ಅಧ್ಯಾಯದಲ್ಲಿ ಸೇರಿಸಿದುದರ ಔಚಿತ್ಯವು ಪ್ರಕಟವಾಗುತ್ತಿತ್ತು. (ಒಂದು ವೇಳೆ, ಅವನು 'ಜಾತ್ಯಧಿಕಾರ'ವೆಂದೇ ಇಟ್ಟಿದ್ದಿರಬಹುದಾದ ಹೆಸರು, ಅನಂತರ ಕಾಲದ ಲಿಪಿಕಾರರಿಂದ ರೂಪಾಂತರ ಪಡೆಯಿತೋ ಏನೋ, ಯಾರು ಹೇಳಬಲ್ಲರು?)

ಈ ಮೇಲೆ ಸಂಕ್ಷಿಪ್ತವಾಗಿ ಮಾಡಲಾದ ಅನುಷ್ಟುಪ್ ಶ್ಲೋಕಸ್ವಭಾವ ವಿಚಾರದ ಫಲಿತಾಂಶ ಇದು:– 'ಶ್ಲೋಕ'ವು 'ಏಕದೇಶ ಸ್ಥಿರ'ವಾದ ಪದ್ಯವಾಗಿರುವುದರಿಂದ ಅದು

‘ಜಾತಿ’ಯೇ ಆಗಿದೆ: ಆದರೆ ಕಂದ, ಷಟ್ಪದಿ ಇತ್ಯಾದಿಗಳಂತೆ ‘ಮಾತ್ರಾಜಾತಿ’ ಅಲ್ಲ; ಅಕ್ಕರೆ, ತ್ರಿಪದಿ ಇತ್ಯಾದಿಗಳಂತೆ ‘ತ್ರಿಮೂರ್ತಿ ಜಾತಿ’ಯೂ ಅಲ್ಲ; ಜಾತಿಗಾಥೆ, ವಿಜಾತಿಗಾಥೆ, ಉಪಜಾತಿ ಇತ್ಯಾದಿಗಳು ಹೇಗೋ ಹಾಗೆ, ಅದು “ಅಕ್ಷರಜಾತಿ” (ಶ್ಲೋಕದಲ್ಲಿ ಅರ್ಧ ಸಮತ್ವವಿರುವಂತಿದ್ದರೂ ಗುರುಲಘು ಸ್ಥಿರತೆ ಇಲ್ಲದಿರುವುದರಿಂದ ಅದು ‘ಅರ್ಧ ಸಮವೃತ್ತ’ ವರ್ಗದಲ್ಲಿ ಸೇರುವುದಿಲ್ಲ. ಆದರ ಪಾದಾಕ್ಷರ ಸಂಖ್ಯೆಯಲ್ಲಿ ಸಮತ್ವವಿರುವುದರಿಂದ, ಮತ್ತು ಅದು ‘ಗುರುಲಘು ಸ್ಥಿರ’ವಲ್ಲದುದರಿಂದ. ‘ಉದ್ಗತಾ’ ಇತ್ಯಾದಿಗಳೊಡನೆ ಅದನ್ನು ‘ವಿಷಮವೃತ್ತ’ ವರ್ಗದಲ್ಲಿ ಹಾಕಿಬಿಡುವುದರಲ್ಲಿ ಔಚಿತ್ಯವೂ ಇಲ್ಲ.)

“ಏಕದೇಶಸ್ಥಿರಾ ಜಾತಿಃ ವೃತ್ತಂ ಗುರುಲಘುಸ್ಥಿರಂ” ಎಂಬ ಲಕ್ಷಣೋಕ್ತಿಯನ್ನು ಅವಲಂಬಿಸಿದರೆ, ಎಲ್ಲಾ ಪದ್ಯಗಳನ್ನು ಸುವ್ಯವಸ್ಥಿತವಾದಿ ಈ ಕೆಳಗಿನಂತೆ ವರ್ಗೀಕರಿಸಬಹುದಾಗಿದೆ.



[*‘ಪದ್ಯಂ ಚತುಷ್ಪದಂ’ ಎಂಬ ನಿರ್ವಚನಕ್ಕೆ ತ್ರಿಪದಿ ಷಟ್ಪದಿಗಳು ಹೊರಗಲ್ಲ; ತತ್ವತಃ ತ್ರಿಪದಿ ಷಟ್ಪದಿ ಉ ಚತುಷ್ಪದಿಗಳೇ ಆಗಿವೆ. ಈ ತಥ್ಯದ ವಿವೃತಿಗೆ ಈ ಚಿಕ್ಕ ಲೇಖನದಲ್ಲಿ ಅವಕಾಶವಿಲ್ಲ]

೧೫. 'ದರ್ಪಣ'ದಲ್ಲಿ ನೇಯು

ಶ್ರೀ ತಕ್ಕುಂಜ ಗೋಪಾಲಕೃಷ್ಣ ಭಟ್ಟ, ಮಂಗಳೂರು.

ಶಬ್ದಮಣಿ ದರ್ಪಣದಲ್ಲಿ (ಇಲ್ಲಿ "ದರ್ಪಣ" ಎನ್ನಲಾಗಿದೆ) ಒಂದು ಸೂತ್ರವು ಹೀಗಿದೆ:—

ಸಾರಮುದಧ್ಯಾರೋಪಂ
ಕಾರಕಕಂ ಕ್ರಿಯೆಗಮುಗಲೆ ನೇಯುದ ದೋಷಂ ॥
ಧೀರರ್ಕಳಿಂ ವಿಶಂಕೆಯೆ
ಕಾರಕ್ಕಂ ಪೇಳ್ವುದಾ ಸಮುಚ್ಚಯದುಮುಗಂ ॥ ೧೫೬ ॥

ಇದರ ವೃತ್ತಿ ಹೀಗಿದೆ:– "ಕಾರಕಕ್ಕಂ ಕ್ರಿಯೆಗಂ ನೇಯುದ ದೋಷಮಿಲ್ಲದಂ ಅಧ್ಯಾರೋಪಮುಂ ಮಾಳ್ಪುದು; ವಿಶಂಕೆಯು ಎತ್ವಕ್ಕೆಯುಂ ಸಮುಚ್ಚಯದುಮುವಿಗಂ ಅಧ್ಯಾರೋಪಮುಂಟು; ತಾಂ ಮಾಡಿದಧ್ಯಾರೋಪಮುಸಮರ್ಥಮಾಗಿ ಮತ್ತೆ ಕೆಲವರ್ಕೆ ಪತ್ತುವೊಡೆ ಅದು ನೇಯುದ ದೋಷಂ." [ಈ ಸೂತ್ರವೃತ್ತಿಗಳನ್ನು ಡಿ ಎಲ್. ನರಸಿಂಹಾಚಾರ್ಯರ ಸಂಪಾದಕತ್ವದಲ್ಲಿ ೧೯೫೪ರಲ್ಲಿ ಪ್ರಕಟವಾದ ಶಬ್ದಮಣಿ ದರ್ಪಣದಿಂದ ಆಯ್ದುಕೊಳ್ಳಲಾಗಿದೆ.]

ಈ ಸೂತ್ರ–ವೃತ್ತಿಗಳಲ್ಲಿ, ಮೇಲಿಂದ ಮೇಲೆ ನೋಡಿದರೆ, ಏನೂ ತೊಡಕಿಲ್ಲ ವಂತೆ ಕಾಣಬಹುದು. ಒಳಹೊಕ್ಕು ನೋಡಿದರೆ ಇವುಗಳಲ್ಲಿ ಕೆಲವು ಸಮಸ್ಯೆಗಳು ಕಾಣಿಸಿ ಕೊಳ್ಳುತ್ತವೆ. ಸೂತ್ರವನ್ನೂ ವೃತ್ತಿಯನ್ನೂ ಒಟ್ಟಿಗಿಟ್ಟು ನೋಡುವಾಗ ಸೂತ್ರದಲ್ಲಿ ಹೇಳಿದುದು "ನೇಯುದ ದೋಷ"ವನ್ನು, ಎಂದು ಕಾಣುವಂತಿದೆ. ಏಕೆಂದರೆ ವೃತ್ತಿಯ ಮೊದಲನೆಯ ವಾಕ್ಯವನ್ನು ಓದಿ, ಎರಡನೆಯ ವಾಕ್ಯವನ್ನು ಬಿಟ್ಟು, ಮೂರನೆಯ ವಾಕ್ಯವನ್ನು ಓದಿದರೆ ಈ ಅಭಿಪ್ರಾಯವಾಗುತ್ತದೆ. ಮಧ್ಯದ ವಾಕ್ಯವೂ ಈ ನೇಯುದ ದೋಷಕ್ಕೇ ಸಂಬಂಧಿಸಿದುದೇ ಎಂದು ಭಾವಿಸಲೂ ಅವಕಾಶವುಂಟಾಗುತ್ತದೆ. ಈ ಮಧ್ಯದ ವಾಕ್ಯದ ವಿಷಯಕ್ಕೂ ನೇಯುದ ದೋಷದ ವಿಷಯಕ್ಕೂ ಸಂಬಂಧವಿಲ್ಲವೆಂಬುದು ವೃತ್ತಿಯ ಸೂಕ್ಷ್ಮಾವಲೋಕನದಿಂದ ಗೊತ್ತಾಗುತ್ತದೆ. ಆಗ ಸೂತ್ರದ ಕೊನೆಯ ಭಾಗದಲ್ಲಿರುವ "ವಿಶಂಕೆಯೆಕಾರಕ್ಕಂ ಪೇಳ್ವುದಾ ಸಮುಚ್ಚಯದುಮುಗಂ" ಎಂಬುದು ವೃತ್ತಿಯಲ್ಲಿ ನಡುವೆ ಸೇರಿಕೊಂಡಿರುವುದರಿಂದ ಇದನ್ನಷ್ಟು ಕಳೆದು ಉಳಿದ ಮಾತುಗಳಿಗೆ ಅರ್ಥಮಾಡಬೇಕು ಎಂಬುದು ಸ್ಪಷ್ಟವಾಗುತ್ತದೆ. ಈ ಕೊನೆಯ ಭಾಗದಲ್ಲಿ 'ಪೇಳ್ವುದು' ಎಂಬ ಕ್ರಿಯಾಪದವಿರುವುದರಿಂದ ಇದಕ್ಕೆ "ಧೀರರ್ಕಳಿಂ" ಎಂಬುದು ಕರ್ತೃವಾಗಲು ಸಾಧ್ಯ

ವಿಲ್ಲದ ಕಾರಣ – ಕನ್ನಡದ ಸಾಮಾನ್ಯ ಜ್ಞಾನವುಳ್ಳವರಿಗೂ ಇದು ಗೊತ್ತಾಗುವ ವಿಷಯಂ – ಆ ಪದವು ಹಿಂದಣ ಭಾಗಕ್ಕೆ ಸೇರಬೇಕಾದುದೆಂಬುದು ಅವಗತವಾಗುತ್ತದೆ, ಇನ್ನು, ಈ ಪೂರ್ವಭಾಗದ ಸರಿಯಾದ ಅರ್ಥವೇನೆಂದು ನೋಡಬಹುದು,

"ಸಾರಮದಧ್ಯಾರೋಪಂ" ಎಂಬುದನ್ನು ಸಾರಂ + ಅದು + ಅಧ್ಯಾರೋಪಂ ಎಂದು ವಿಂಗಡಿಸಬೇಕೆ, ಸಾರಮತ್ + ಅಧ್ಯಾರೋಪಂ ಎಂದು ವಿಂಗಡಿಸಬೇಕೆ? ವೃತ್ತಿಯ ಮೂರನೆಯ ವಾಕ್ಯದಲ್ಲಿ "ಅದು" ಎಂಬ ಸರ್ವನಾಮವಿರುವುದರಿಂದ, ಇಲ್ಲಿ ಮೊದಲ ನೆಯ ರೀತಿ ವಿಂಗಡಿಸಬೇಕಾದುದು ವಿಹಿತ ಎಂದು ಸೂಚಿತವಾಗುವಂತಿದೆ. ಆಗ ಕಿಟ್ಟೆಲ್ ಪ್ರತಿಯ (1920 ನೆಯ ಇಸವಿ) ಟೀಕುವಿನಲ್ಲಿರುವಂತೆ, "ಕಾರಕಕ್ಕೂ ಕ್ರಿಯೆಗೂ ಅಧ್ಯಾರೋಪವು ಅದು ಶ್ರೇಷ್ಠವಾದುದು" ಎಂದೂ ಇದರ ಮುಂದಣ ಭಾಗಕ್ಕೆ "... ಹೊಂದುಗೆಯಾಗದಿದ್ದರೆ ನೇಯದ ದೋಷವು ಬರುತ್ತದೆ, ವಿದ್ವಾಂಸರಿಂದ" ಎಂದೂ ಅರ್ಥಮಾಡಬೇಕಾಗುತ್ತದೆ. ಈ ಎರಡಂಶವನ್ನು ಕೂಡಿಸಿ ಹೀಗೆ ವಿವರಿಸಬಹುದು: "ಕಾರಕಕ್ಕೂ ಕ್ರಿಯೆಗೂ (ಮಾಡುವ) ಅಧ್ಯಾರೋಪವು, ಅದು ಶ್ರೇಷ್ಠವಾದುದು. ವಿದ್ವಾಂಸರಿಂದ ಈ ಅಧ್ಯಾರೋಪವು ಹೊಂದುಗೆಯಾಗದ ಪಕ್ಷದಲ್ಲಿ (ಅದು) ನೇಯದ ದೋಷವಾಗುತ್ತದೆ." ಇಡೀ ಸೂತ್ರಕ್ಕೆ ಲಿಂಗಣಾರಾಧ್ಯನ ವೃತ್ತಿ ಹೀಗಿದೆ:–

ಕಾರಕಕ್ಕಂ ಕ್ರಿಯೆಗಂ ನೇಯದ ದೋಷಮಗಲೆ ಧೀರರ್ಕಳಿಂ ಅದು ಅಧ್ಯಾರೋಪಂ ಸಾರಂ; ವಿಶಂಕೆಯೆ ಕಾರಕ್ಕಂ ಆ ಸಮುಚ್ಚಯದುಮುಗಂ ಅಧ್ಯಾರೋಪಂ ಪೇಳ್ವುದು; ತಾಂ ಮಾಡಿದ ಅಧ್ಯಾರೋಪಮಸಮರ್ಥಮಾಗಿ ಮತ್ತೆ ಕೆಲವರ್ಕೆ ಪತ್ತುವುಡದು ನೇಯದ ದೋಷಂ.

ಇಲ್ಲಿ ಎರಡು – ಮೂರನೆಯ ವಾಕ್ಯಗಳು ಡಿ. ಎಲ್. ಎನ್. ಪ್ರತಿಯಲ್ಲಿರುವಂತೆ – ಸ್ವಲ್ಪ ವ್ಯತ್ಯಾಸವಿಲ್ಲವೆಂದಲ್ಲ – ಇವೆ. ಮೊದಲನೆಯ ವಾಕ್ಯವೊಂದು ವಿಶಿಷ್ಟವಾಗಿದ್ದು ಗಮನಾರ್ಹವಾಗಿದೆ, ಈ ವಾಕ್ಯದ ಅಭಿಪ್ರಾಯವು ಹೀಗಾಗುತ್ತದೆ:– ಕಾರಕಕ್ಕೂ ಕ್ರಿಯೆಗೂ ನೇಯದ ದೋಷವು ಅಗಲುವಂತೆ (=ಇಲ್ಲದಂತೆ) ವಿದ್ವಾಂಸರಿಂದ ಆ ಅಧ್ಯಾರೋಪವು ಶ್ರೇಷ್ಠವಾದುದು. ಈ ಹಿಂದೆ ಹೇಳಿದಂತೆ ಸಾರಮತ್ + ಅಧ್ಯಾರೋಪಂ ಎಂದು ವಿಂಗಡಿಸಿದರೆ "ಧೀರರ್ಕಳಿಂ ಕಾರಕಕಂ ಕ್ರಿಯೆಗಂ ಅಧ್ಯಾರೋಪಂ ಸಾರಮತ್; ಅಗಲೆ, ನೇಯದ ದೋಷಂ" ಎಂದು ಅನ್ವಯಮಾಡಿ ಹೇಳಿದರೆ, "ವಿದ್ವಾಂಸರು ಕಾರಕಕ್ಕೂ ಕ್ರಿಯೆಗೂ ಅಧ್ಯಾರೋಪಮಾಡಿದರೆ (ಅದು) ಸಾರವುಳ್ಳದಾಗುತ್ತದೆ; (ಕಾರಕಕ್ಕೂ ಕ್ರಿಯೆಗೂ ಮಾಡಿದ ಅಧ್ಯಾರೋಪವು) ಅಗಲಿದರೆ (ಅದು) ನೇಯದ ದೋಷವಾಗುತ್ತದೆ" ಎಂಬ ಅಭಿಪ್ರಾಯವಾಗುತ್ತದೆ. ಈ ಅಭಿಪ್ರಾಯವು ಸರಿ ಎನ್ನಿಸುವುದಕ್ಕೆ ನಾಗವರ್ಮನ "ಕಾವ್ಯಾಲೋಕನ"ದ "ಶಬ್ದಸ್ಮೃತಿ" ವಿಭಾಗದ ೩೪ನೆಯ ಸೂತ್ರವು ಅವಕಾಶ ಕೊಡುತ್ತದೆ. ಆ ಸೂತ್ರ ಹೀಗಿದೆ:

ಕಾರಕಮುಂ ಕ್ರಿಯೆಯುಂ ಕ್ರಿಯೆ ।
ಕಾರಕದಿಂದನ್ವಿತಾರ್ಥ ವಾಗಿರ್ಪನವು ॥
ಧ್ಯಾರೋಪಮೆಯ್ದುಗುಂ ತ ।
ತ್ಕಾರಕಗತಿಯೊಳ್ ವಿಭಕ್ತಿ ಪರಿಣತಮಕ್ಕುಂ ॥

(ಕ್ರಿಯೆ ಕಾರಕದಿಂದ ಯುಕ್ತಾರ್ಥವಾಗಿರುವಂತೆ ಕಾರಕವಾಗಲಿ ಕ್ರಿಯೆಯಾಗಲಿ ಅಧ್ಯಾರೋಪವನ್ನು ಪಡೆಯುತ್ತದೆ. ಆ ಕಾರಕಗತಿಯಲ್ಲಿ ವಿಭಕ್ತಿ ಪರಿಣಾಮವಾಗುತ್ತದೆ) ಎಂಬ ಸೂತ್ರದ ಕೊನೆಯ ವಾಕ್ಯವನ್ನು (ತತ್ಕಾರಕಗತಿಯೊಳ್ ವಿಭಕ್ತಿ ಪರಿಣತಮಕ್ಕುಂ) ಬಿಟ್ಟರೆ "ಕ್ರಿಯೆಗೂ ಕಾರಕಕ್ಕೂ ಅರ್ಥವು ಸುಸಂಗತವಾಗಿರಬೇಕು, ಹೀಗಿರುವಂತಿದ್ದರೆ ಕ್ರಿಯೆಯನ್ನಾಗಲಿ ಕಾರಕವನ್ನಾಗಲಿ ಅಧ್ಯಾರೋಪಮಾಡಿಕೊಳ್ಳಬಹುದು" ಎಂದು ಅರ್ಥವಾಗುತ್ತದೆ, ಇದರಲ್ಲಿ ನೇಯ ಎಂಬ ಶಬ್ದವನ್ನು ಕಾಣುವುದಿಲ್ಲ ಎಂಬುದು ನಿಜವಾದರೂ "ದರ್ಪಣ"ದ ಸೂತ್ರಕ್ಕೆ ಇದು ಸಂವಾದಿಯಾಗಿದೆ ಎನ್ನುವುದಕ್ಕೆ ಇದರ ಪ್ರಯೋಗ ಭಾಗವು ಪ್ರಮಾಣವನ್ನೊದಗಿಸುತ್ತದೆ. ಈ ವಿಷಯದ ಹೆಚ್ಚಿನ ವಿವರವು ಈಗ ಪ್ರಸಕ್ತವಲ್ಲವಾದ ಕಾರಣ ನೇಯದ ವಿಷಯವನ್ನು ನೋಡಬಹುದಾಗಿದೆ.

ಇನ್ನೊಂದು ವಿಷಯವನ್ನು ಸರಿಯಾಗಿ ಅರಿತುಕೊಂಡೇ ಪ್ರಯೋಗಭಾಗವನ್ನು ನೋಡುವುದು ವಿಹಿತ. ಸೂತ್ರದಲ್ಲಿಯೂ ವೃತ್ತಿಯಲ್ಲಿಯೂ "ನೇಯದ ದೋಷ" ಎಂಬ ಪ್ರಯೋಗವಿದೆ. ಇಲ್ಲಿರುವ ನೇಯದ ಎಂಬ ಷಷ್ಠೀಪ್ರಯೋಗವು ಸಂಬಂಧವನ್ನು ಸೂಚಿಸುವುದಲ್ಲ. "ಹಣ್ಣಿನ ದೋಷ" ಎಂಬಲ್ಲಿ ದೋಷವು ಹಣ್ಣಿಗೆ ಸಂಬಂಧಿಸಿದುದು ಎಂದೋ ಹಣ್ಣಿನ ಆಶ್ರಯವನ್ನು ಹಿಡಿದುದು ಎಂದೋ ಅರ್ಥಮಾಡಬೇಕು. "ನೇಯದ ದೋಷ" ಎಂಬಲ್ಲಿ ನೇಯ ಎಂಬುದರಲ್ಲಿ ಕಂಡುಬರುವ ದೋಷವೆಂದಾಗಲಿ ನೇಯಕ್ಕೆ ಸಂಬಂಧಿಸಿದ ದೋಷವೆಂದಾಗಲಿ ಅರ್ಥವಲ್ಲ. ಏಕೆಂದರೆ "ನೇಯ" ಅಥವಾ "ನೇಯಾರ್ಥ" ಎಂಬುದೇ ಒಂದು ದೋಷ ಎಂದು ಆಲಂಕಾರಿಕರು ಹೇಳುತ್ತಾ ಬಂದಿದ್ದಾರೆ. ಆದುದರಿಂದ ನೇಯದ ಎಂಬಲ್ಲಿರುವ ಷಷ್ಠಿ ಏಕಾಶ್ರಯತ್ವವನ್ನು ತಿಳಿಸುವ ಷಷ್ಠಿ ಎಂದೇ ತಿಳಿಯಬೇಕು. ಹೀಗೆ "ನೇಯದ ದೋಷ" ಎಂಬುದಕ್ಕೆ "ನೇಯ ಎಂಬ ಹೆಸರಿನ ದೋಷ" ಎಂದರ್ಥವಾಗುತ್ತದೆ.

ಇಷ್ಟನ್ನು ತಿಳಿದುಕೊಂಡ ಮೇಲೆ ಕೇಶಿರಾಜನು ಕೊಡುವ ಉದಾಹರಣೆಗಳನ್ನು ಪರಿಶೀಲಿಸಬಹುದು, ಅವನು ನೇಯಕ್ಕೆ

ಆರಕ್ತವಪಾಗಿ ನೇಜಿಲ ।
ದೋರೆಯನನುಕರಿಪುದಾದುದಾಗಸಮೆಸೆ ಸಂ ॥
ಧ್ಯಾರುಚಿಯಿನಕ್ಕುಮೆಂದವ ।
ಧಾರಿಸಿ ನೆಜಿಯಿಜಿದು ಕೊಳ್ವುದದು ನೇಯಾರ್ಥಂ ॥

ಎಂಬುದನ್ನು ಉದ್ಧರಿಸಿ "ಇಂತು ಸಂಧ್ಯಾರುಚಿಯಿನೆಂದು ಬಗೆವುದು ನೇಯಂ ಕೆಂದೊಳಿ ಯಿಂದಾಗಸಂ ಕೆಂಪಾದುದಾಗಿ" ಎಂದು ಲಕ್ಷಣ ಸಮನ್ವಯ ಮಾಡಿದ್ದಾನೆ. [ಕಿಟ್ಟೆಲ್ ಪ್ರತಿಯಲ್ಲಿ "ಸಂಧ್ಯಾರುಚಿಯಿನೆಂದು ಬಗೆವುದನೇಯಂ, ಕೆಂದೊಳಿಯಿಂದಾಗಸಂ ಕೆಂಪಾದುದಾಗಿ" ಎಂದಿದೆ. ಇಲ್ಲಿ "ಅನೇಯಂ" ಎಂಬ ಪದವಿರುವಂತೆ ಸಂಧಿಯಾಗಿರುವುದರಿಂದ ಉದಾಹೃತ ಪದ್ಯದಲ್ಲಿ ನೇಯ(ದ ದೋಷ)ವಿಲ್ಲ ಎಂದರ್ಥವಾಗುತ್ತದೆ, ಆದುದರಿಂದ ಈ ಪಾಠವನ್ನು ಪರಿಗ್ರಹಿಸಲಾಗದು.] ಪದ್ಯವನ್ನು ಅರ್ಥಮಾಡಿದರೆ ವಿಷಯವು ಮುಂದಟ್ಟಾಗುತ್ತದೆ:– ಆಕಾಶವು ಸುತ್ತೂ ಕೆಂಪಾದಿ ನೇರಳೆಯ ದೋರೆಹಣ್ಣನ್ನು ಅನುಕರಿಸಿತು ಎನ್ನುವಾಗ ಸಂಜೆಯ ಬಣ್ಣದಿಂದ ಎಂದು ಗ್ರಹಿಸಿಕೊಳ್ಳುವುದು, ಅದು ನೇಯಾರ್ಥವಾಗುತ್ತದೆ,

ಲಕ್ಷಣ ಸಮನ್ವಯ ಮಾಡುವಾಗ ಹೇಳಿದ ಮಾತಿನ ಪ್ರಕಾರ ಇದು ದೋಷವೆನ್ನಿಸುವುದು ಹೇಗೆಂದರೆ, ಆಕಾಶವು ಕೆಂಪಾದುದು ಸಂಜೆಯ ಕೆಂಬಣ್ಣದಿಂದಲ್ಲ. ಕೆಂದೊಳಿಯಿಂದ. ವಾಕ್ಯದಲ್ಲಿ ಆಕಾಶವು ಕೆಂಪಾಗಲು ಕಾರಣವೇನೆಂದು ಹೇಳದ ಕಾರಣ ಅದನ್ನು ಅಧ್ಯಾರೋಪಮಾಡಬೇಕಾಗಿದೆ. ಸಂಜೆಯ ಕೆಂಬಣ್ಣದಿಂದ ಎಂದು ಅಧ್ಯಾರೋಪಮಾಡಿಕೊಂಡು ಅರ್ಥಗ್ರಹಿಸಲೂ ಸಾಧ್ಯವಾಗುವಂತೆ ವಾಕ್ಯರಚನೆಯಾದುದು ಈ ನೇಯವೆಂಬ ದೋಷಕ್ಕೆ ಉದಾಹರಣೆಯಾಗುತ್ತದೆ. ಈ ದೋಷದ ವಿಷಯವನ್ನು ಇನ್ನಷ್ಟು ಸ್ಫುಟವಾಗಿ ತಿಳಿಯಬೇಕಾದರೆ "ಕವಿರಾಜಮಾರ್ಗ"ದ ಮೊರೆಹೊಗಬೇಕು. ಅಲ್ಲಿ,

ಕುಱಿತಂತೆ ಪೇೞ್ದ ಪದದೊಳ್ ।
ಮೆಱೆಯದೊಡೆಲ್ಲಂ ವಿವಕ್ಷಿತಾರ್ಥಮಶೇಷಂ ॥
ಪೆಱತೊಂದಲ್ಲಿಲ್ಲದುಮುಮ ।

ನಱಿವವರಿಟ್ಟಱಿಯೆ ಪೇೞ್ವೊಡದು ನೇಯಾರ್ಥಂ ॥ ೧೦೧ ॥

(ಮದ್ರಾಸು ಪ್ರತಿಃ ಪ್ರಥಮಪರಿಚ್ಛೇದ) ಎಂದು ನೇಯಾರ್ಥದ ಲಕ್ಷಣವನ್ನು ಹೇಳಲಾಗಿದೆ. ಉದ್ದೇಶಪಟ್ಟು (ಕುಱಿತಂತೆ) ಹೇಳಿದ ಸಂದರ್ಭ (ಪದ)ದಲ್ಲಿ ಹೇಳಬೇಕೆಂದಿರುವ ಎಲ್ಲ ಅರ್ಥವು ಸುಪೂರ್ಣವಾಗಿ ಮೆರೆಯದಿದ್ದರೆ, ಅರ್ಥಮಾಡುವವರು ಅಲ್ಲಿಲ್ಲದ ಇನ್ನೊಂದನ್ನೂ ಇಟ್ಟುಕೊಂಡು ಅರ್ಥಮಾಡುವಂತೆ ಹೇಳಿದರೆ ಅದು ನೇಯಾರ್ಥ"ವೆಂದು ಇದರ ಅರ್ಥ. ಎಂದರೆ ಏನೋ ಒಂದು ಅರ್ಥವು ಕೇಳುವವರಿಗೆ (ಅಥವಾ ಓದುವವರಿಗೆ) ಆಗಬೇಕೆಂದು ಉದ್ದೇಶಪಟ್ಟುಕೊಂಡು ಒಬ್ಬನು ಒಂದು ಮಾತನ್ನು ಹೇಳುತ್ತಾನೆ ಎಂದು ಇಟ್ಟುಕೊಳ್ಳೋಣ. ಅವನು ಹೇಳಬಯಸಿದ ಎಲ್ಲ ಅರ್ಥವೂ ಆ ಮಾತಿನಲ್ಲಿ ಗೋಚರಿಸದಿದ್ದರೆ, ಆ ಮಾತಿಗೆ ಅರ್ಥಮಾಡುವವನು ಅಲ್ಲಿರುವ ಮಾತಿನಲ್ಲಿ ಇಲ್ಲದ ಬೇರೊಂದು ಅರ್ಥವನ್ನು ಗ್ರಹಿಸುವಂತೆ ಆ ಮಾತಿದ್ದರೆ, ಎಂದರೆ ಹೇಳಿದವನು ಉದ್ದೇಶಪಟ್ಟುಕೊಂಡ ಅಭಿಪ್ರಾಯಕ್ಕೆ ಹೊಂದಿಕೆಯಾಗದಂತೆ ಕೇಳುವವನು ಅರ್ಥಮಾಡುವಂತಾದರೆ. ಉದ್ದಿಷ್ಟಾರ್ಥವೇ ಅಲ್ಲಿ ಬಾರದೆ ಬೇರೆಯೇ ಅರ್ಥವಾಗುವುದು. ಅದು ಸರಿಯಲ್ಲ, ಅದು ದೋಷ.

ಈ ವಿಷಯದ ಸಮರ್ಥನೆಗಾಗಿ ಕೊಟ್ಟಿರುವ ಪದ್ಯವಿದು:-

ಪರೆದಿರೆ ರಾಗಂ ತನ್ನೊಳ್ ।
ನಿರಂತರಂ ಗಗನ ವಿವರವೊಪ್ಪಿತ್ತಾದಂ ॥
ವರ ಪಾರಿಜಾತ ಕುಸುಮೋ ।
ತ್ಕರ ಸಾಂದ್ರಪರಾಗ ವಿಸರಪಿಂಜರಿತಂಬೋಲ್ ॥ ೧೦೨ ॥

ಇದರ ಅರ್ಥವಿಷ್ಟು:- ಆಕಾಶದಲ್ಲಿ ಕೆಂಬಣ್ಣವು ಹಬ್ಬಿಕೊಂಡಾಗ ಶ್ರೇಷ್ಠ ಪಾರಿಜಾತ ಪುಷ್ಪಗಳ ತುಂಬಿದ ಪರಾಗಸಮುದಾಯದಿಂದ ಕೆಂಪಾದಂತೆ ಆಕಾಶವು ಬಹಳವಾಗಿ ಶೋಭಿಸಿತು (ಎನ್ನುವುದು ನೇಯಾರ್ಥ).

ಇದು ನೇಯಾರ್ಥವೆಂಬುದು ಹೇಗೆ ಎಂದು ಮುಂದಣ ಪದ್ಯದಲ್ಲಿದೆ:

ಪರೆದಿರೆ ಸಂಧ್ಯಾರಾಗಂ ।
ನಿರಂತರಂ ಗಗನ ವಿವರ ವೊಪ್ಪಿತ್ತೆಂಬಾ ॥
ದರದಿಂ ಪೇಟಲ್ ಬಗೆದಂ ।
ತಿರೆ ಸಂಧ್ಯಾ ಪದಮನಿಡದೆ ಪೇಟ್ವುದು ದೋಷಂ ॥ ೧೦೩ ॥

(ಸಂಜೆಯ ಕೆಂಬಣ್ಣವು ಹಬ್ಬಿದಾಗ ಆಕಾಶವು ಬಹಳ ಶೋಭಿಸಿತು ಎಂದು ಹೇಳಬಯಸಿ ಸಂಧ್ಯಾ ಎಂಬ ಪದವನ್ನು ಪ್ರಯೋಗಿಸದೆ ಹೇಳುವುದು ದೋಷ).

ಆಕಾಶವು ಸಂಜೆಯ ಕೆಂಬಣ್ಣದಿಂದ ಕೆಂಪಾಗಿರುವಾಗ ಸುಮ್ಮನೆ ಆಕಾಶವು ಕೆಂಪಾಗಿದೆ ಎಂದು ಹೇಳಿದರೆ ಹಾಗಾದುದು ಸಂಜೆಯ ಕೆಂಬಣ್ಣದಿಂದ ಎಂದು ಅರ್ಥವಾಗಬೇಕಾಗಿಲ್ಲ. ಸೇನೆ ಹೋಗುವಾಗ ಎದ್ದ ದೂಳಿನಿಂದಲೋ, ಗಾಳಿಯಿಂದಾಗಿ ಎದ್ದ ದೂಳಿನಿಂದಲೋ, ಹಸುಗಳ ಗುಂಪು ಓಡುವಾಗ ಎದ್ದ ದೂಳಿನಿಂದಲೋ ಆಕಾಶವು ಕೆಂಪಾಗಿ ಕಂಡುದಿರಬಹುದು. ಸಂಧ್ಯಾರಾಗ ಹಬ್ಬಿದೆ ಎಂದು ಹೇಳಬೇಕಾದರೆ ಸಂಧ್ಯಾ ಎಂಬ ಶಬ್ದವನ್ನು ಬಿಟ್ಟು ರಾಗವು ಹಬ್ಬಿದೆ ಎಂದಷ್ಟೇ ಹೇಳುವುದು ದೋಷ.

ಕೇಶಿರಾಜನ ಉದಾಹರಣೆಯಲ್ಲಿ ಆಕಾಶವು ಕೆಂಪಾದುದಕ್ಕೆ ನಿಜವಾದ ಕಾರಣ ಧೂಳು. ಅರ್ಥಮಾಡುವವನು ಸಂಜೆಯ ಬಣ್ಣದಿಂದ ಎಂದು ಗ್ರಹಿಸಿದ್ದಾನೆ. ಹೀಗೆ ನಿಷ್ಕೃಷ್ಟಾರ್ಥವನ್ನು ಮಾಡಲು ಸಾಧ್ಯವಾಗದಂತೆ ಮಾತನ್ನು ಪ್ರಯೋಗಿಸುವುದು ದೋಷವಾಗುತ್ತದೆ. ಇಲ್ಲಿ ಕೆಂಪಾದ ಕ್ರಿಯೆಗೆ ಕಾರಣರೂಪವಾದ ಕಾರಕವನ್ನು ಅಧ್ಯಾರೋಪ ಮಾಡಿಕೊಳ್ಳುವಲ್ಲಿ ಅಸಮರ್ಥತೆ ಕಂಡುಬರುತ್ತದೆ, ಅಧ್ಯಾರೋಪ ಮಾಡಿಕೊಳ್ಳಬಹುದಾದ ಕಾರಕವು ನಿಜವಾದ ಕಾರಕಕ್ಕಲ್ಲದೆ ಬೇರೆಯ ಕಾರಕಕ್ಕೂ ಸಮನ್ವಯಿಸಬಹುದಾದುದರಿಂದಲೇ ಇಂತಹ ಪ್ರಯೋಗವು ದುಷ್ಟವಾಗುವುದು, ಈ ಬಗೆಯ ದೋಷವಿಲ್ಲದಂತೆ

ಕಾರಕವನ್ನಾಗಲಿ ಕ್ರಿಯೆಯನ್ನಾಗಲಿ ಅಧ್ಯಾರೋಪ ಮಾಡಿಕೊಳ್ಳುವ ಸಾಮರ್ಥ್ಯವುಳ್ಳ ವಾಕ್ಯಗಳ ಉದಾಹರಣೆಗಳನ್ನು ಕೇಶಿರಾಜ ಮುಂದೆ ಕೊಡುತ್ತಾನೆ.

೧. ಏಕೆ ನಿರ್ವಹಣಕ್ಕೆ ಸಲ್ಲುಗುವೆಂ. ಪೂರ್ವೊದ್ದಿಷ್ಟಂ ಕೃತಿಬಂಧಮುಂ ಎಂಬುದನ್ನು ಉದ್ಧರಿಸಿ "ಎಂಬಲ್ಲಿ ಕೃತಿಬಂಧವೆಂಬುದಧ್ಯಾಹಾರ್ಯಂ" ಎಂದಿದ್ದಾನೆ. ಈ ನೆಲೆಯಿಂದ ಮೇಲಿನ ವಾಕ್ಯದ ಅರ್ಥವನ್ನು ಮಾಡಬೇಕು: ಕೃತಿಬಂಧ (ಕಾವ್ಯರಚನಾಕಾರ್ಯ)ವನ್ನು ಪ್ರತಿಜ್ಞೆಮಾಡಿದ್ದರೂ (ಕೃತಿಬಂಧವು) ನಿರ್ವಹಣಕ್ಕೆ (ಪೂರಯಿಕೆಗೆ) ಏಕೆ ಸಲ್ಲುತ್ತದೆ? ಇಲ್ಲಿ ಕೃತಿಬಂಧವೆಂಬ ಕಾರಕವು ತಾನಾಗಿಯೆ ಅಧ್ಯಾಹೃತವಾಗುತ್ತದೆ. ಹೀಗೆಯೆ "ಕರ್ಣನುಂ ದಾನಿ ಮೇಣೀತನುಂ ಎಂಬಲ್ಲಿ ದಾನಿಯೆಂಬುದಧ್ಯಾರೋಪಂ" ಎಂದಿದೆ. ಕರ್ಣನೂ ದಾನಿ ಹೌತ್ತು (?) ಇವನೂ ಎಂಬ ಮಾತಿದ್ದರೆ ಇವನೂ ದಾನಿ ಎಂಬರ್ಥವು, ವಾಕ್ಯದಲ್ಲಿ ಎರಡನೆಯ ಬಾರಿ ದಾನಿ ಎಂಬ ಪದವಿಲ್ಲದಿದ್ದರೂ, ಆಗುತ್ತದೆ. ದಾನಿ ಎಂಬುದು ಇಲ್ಲಿ ಕಾರಕ.

೨ ಕ್ರಿಯೆಯೂ ಅಧ್ಯಾರೋಪಗೊಳ್ಳುತ್ತದೆ ಎಂಬುದಕ್ಕೆ ಕೇಶಿರಾಜನು,

"ಪುರುಷೋತ್ತಮಂ ಮನುಷ್ಯ ಮಾತ್ರಮೆ ಎನೆ ಅಲ್ಲವೆಂಬುದಧ್ಯಾಹಾರ್ಯಂ" ಎಂದೂ

"ಧೃತರಾಷ್ಟ್ರಂ ನುಡಿದಾರ್ತನೇ ಹರಿ ಭರಂಗೆಯ್ದಾರ್ತನೇ...ಎಂದೊಡಾಜನೆಂಬುದಧ್ಯಾಹಾರ್ಯಂ" ಎಂದೂ ಹೇಳಿದ್ದಾನೆ. ಎರಡೂ ವಾಕ್ಯಗಳಲ್ಲಿ ಕ್ರಿಯೆ (ಅಲ್ಲಂ ಮತ್ತು ಆಜಂ) ಅಧ್ಯಾರೋಪಗೊಳ್ಳಬೇಕಾದುವು. ಈ ಅಧ್ಯಾರೋಪಗಳು ಸಹಜವಾಗಿ, ಯಾವ ವಿಕಲ್ಪಕ್ಕೂ ಎಡೆಯಿಲ್ಲದೆ, ಆಗುತ್ತವೆ. ಹೀಗಿದ್ದರೆ ಕೆಲವು ಪ್ರಕರಣಗಳಲ್ಲಿ ಅಲಂಕಾರವೂ ಆಗುವುದಿದೆ. "ಕುವಲಯಾನಂದ"ವೆಂಬ ಆಲಂಕಾರ ಗ್ರಂಥದಲ್ಲಿ ಬರುವ ಅರ್ಥಾಪತ್ತಿ (ಕಾವ್ಯಾರ್ಥಾಪತ್ತಿ) ಎಂಬ ಅಲಂಕಾರದ ಲಕ್ಷಣೋದಾಹರಣೆಗಳನ್ನು ನೋಡಬಹುದು:

ಕೈಮುತ್ಯೇನಾರ್ಥಸಂಸಿದ್ಧಿ: ಕಾವ್ಯಾರ್ಥಾಪತ್ತಿರಿಷ್ಯತೇ ॥
ಸ ಜಿತಸ್ತ್ವನ್ಮುಖೇನೇಂದು: ಕಾ ವಾರ್ತಾ ಸರಸೀರುಹಾಮ್ ॥ ೧೧೯ ॥

(ಮತ್ತೇನು ಎಂಬುದರಿಂದ [ಉದ್ದಿಷ್ಟವಾದ] ಅರ್ಥವು ಸಿದ್ಧಿಸುವುದಾದರೆ ಅದಕ್ಕೆ ಕಾವ್ಯಾರ್ಥಾಪತ್ತಿ ಎಂದು ಹೆಸರು. [ಉದಾ:-] ನಿನ್ನ ಮುಖದಿಂದ ಆ ಚಂದ್ರನೇ ಸೋತಿದ್ದಾನೆ ಎಂದ ಮೇಲೆ ತಾವರೆಗಳ ಕತೆ ಮತ್ತೇನು?)

ಲಕ್ಷ್ಯ ಲಕ್ಷಣ ಸಮನ್ವಯ ಮಾಡುವಾಗ, ಯಾವಾತನಿಂದ ತಾವರೆಗಳು ಜಯಿಸಲ್ಪಟ್ಟವೆಯೋ ಆ ಚಂದ್ರನೂ ನಿನ್ನ ಮುಖದಿಂದ ಸೋತಿದ್ದಾನೆ. ಇನ್ನು ಆ ತಾವರೆಗಳನ್ನು ನಿನ್ನ ಮುಖವು ಸೋಲಿಸದೆ ಮತ್ತೇನು ಎಂದು ಇದರ ತಾತ್ಪರ್ಯವೆಂದು ಉತ್ತರಾರ್ಧದ ಬಗೆಗೆ ವಿವಕ್ಷೆಯಿದೆ. ಇಲ್ಲಿ ತಾವರೆಗಳನ್ನು ಮುಖವು ಸೋಲಿಸುವುದಿಲ್ಲವೆ ಎಂಬ ಪ್ರಶ್ನೆಗೆ ಖಂಡಿತವಾಗಿ ಸೋಲಿಸುತ್ತದೆ ಎಂಬ ಉತ್ತರ ತಾನಾಗಿಯೇ ದೊರೆಯುತ್ತದೆ. ಈ ರೀತಿ ಇದ್ದರೆ ಇದಕ್ಕೆ ಅರ್ಥಾಪತ್ಯಲಂಕಾರವೆಂದು ಹೆಸರು, ಎಂದು ಪೂರ್ವಾರ್ಧವನ್ನು ಇದಕ್ಕೆ ಸಮನ್ವಯಿಸಬೇಕು.

ಈ ಅಲಂಕಾರದಲ್ಲಿ ಉತ್ತರವು ತಾನಾಗಿ ಅಧ್ಯಾರೋಪಗೊಳ್ಳುವುದನ್ನು ಕಾಣುತ್ತೇವೆ.

ಕಾವ್ಯಲಕ್ಷಣ ಅಥವಾ ಅಲಂಕಾರ ಶಾಸ್ತ್ರಕ್ಕೆ ಸಂಬಂಧಿಸಿ ಪೂರ್ವಾಚಾರ್ಯರು ಹೇಳಿದ ನೇಯ (ದ ದೋಷ)ವನ್ನು ಕೇಶಿರಾಜನು ತನ್ನ ವ್ಯಾಕರಣದಲ್ಲಿ ಏಕೆ ಹೇಳಿದನು? ವ್ಯಾಕರಣವೆಂಬುದಕ್ಕೆ ಶಬ್ದ ಶಾಸ್ತ್ರವೆಂಬ ಹೆಸರಿರುವುದನ್ನು ಗಮನಿಸಿ ಬರಿಯ ಶಬ್ದಗಳಿಗೆ ಸಂಬಂಧಿಸಿದ ನಿಯಮಗಳನ್ನು ಮಾತ್ರ ಹೇಳುವ ಶಾಸ್ತ್ರವೇ ವ್ಯಾಕರಣ ಎಂದು ಸೀಮಿತವಾದ ಅರ್ಥವನ್ನು ಮಾಡಿದರೆ ನೇಯುವೆಂಬುದು "ದರ್ಪಣ"ಕ್ಕೆ ಸಂಬಂಧಿಸಿದುದಲ್ಲ ಎಂದು ದೂರ ತಳ್ಳಬಹುದು. ವ್ಯಾಕರಣವು ವಾಕ್ಯ ರಚನೆಗೂ ಸಂಬಂಧಪಟ್ಟುದೆಂಬುದನ್ನು ನೆನಪಿಟ್ಟುಕೊಂಡರೆ ಹಾಗೂ "ದರ್ಪಣ"ದಲ್ಲಿ ಹಲವು ಕಡೆ ವಾಕ್ಯ ರಚನಾ ವಿನ್ಯಾಸವನ್ನು ತಿಳಿಸುವ ಪ್ರಯೋಗ ಮತ್ತು ಸೂತ್ರಗಳಿರುವುದನ್ನು ಕಂಡರೆ, ವಾಕ್ಯ ರಚನೆಯಲ್ಲಿ ಕಂಡುಬರುವ ದೋಷವನ್ನೊಂದನ್ನು ಈ ಸೂತ್ರದಲ್ಲಿ ಹೇಳಿದ್ದಾನೆಂದು ಅರಿತುಕೊಳ್ಳಬಹುದು. ಅರ್ಥಕ್ಕೆ ಬಾಧೆಯಿಲ್ಲದಂತೆ ಅಧ್ಯಾಹಾರ ಮಾಡಿಕೊಳ್ಳಬಹುದಾದ ಪ್ರಯೋಗವಿದ್ದರೆ ಅದು ಅಲಂಕಾರವಾಗುತ್ತದೆ, ಕಾವ್ಯವು ನಿರ್ದುಷ್ಟವೆನ್ನಿಸುತ್ತದೆ ಎಂಬುದನ್ನು ತಿಳಿಸುವು ದಕ್ಕಾಗಿಯೋ ಈ ನೇಯ(ದ ದೋಷ)ವನ್ನು ಹೇಳಿದ್ದಾನೆ. ಮಾರ್ಗದರ್ಶನ ಮಾಡಿದ್ದಾನೆ.

x x x x

೧೬. ಸಂಧ್ಯಕ್ಷರಗಳು (Diphthongs)

—ಶ್ರೀ ಪಿ. ರಾಮ ಭಟ್, ಉಡುಪಿ.

ಕೇಶಿರಾಜನ ಪ್ರಕಾರ 'ಪಂಚವಿಧ' ವರ್ಣಗಳಲ್ಲಿ ಮೊದಲನೆಯದಾಗಿ ೧೪ ಸ್ವರಗಳು. ಸಂಸ್ಕೃತವ್ಯಾಕರಣವನ್ನನುಸರಿಸಿ ಕನ್ನಡ ವ್ಯಾಕರಣಗಾರರೆಲ್ಲರೂ ಆ ವರ್ಣಗಳನ್ನೇ ಇಲ್ಲೂ ಹೇಳಿದ್ದಾರೆ. ಋ, ಲ್ ವರ್ಣಗಳನ್ನು ಕಳೆದರೆ ಉಳಿಯುವ ಅ, ಆ, ಇ, ಈ, ಉ. ಊ, ಏ, ಐ, ಓ, ಔ ಈ ಸ್ವರಗಳು ಕನ್ನಡಕ್ಕೂ ಸಂಸ್ಕೃತಕ್ಕೂ ಸಮ. ಕನ್ನಡಕ್ಕೆ ವಿಶಿಷ್ಟವಾದ ದೇಶೀಯ ವರ್ಣಗಳಲ್ಲಿ ಸೇರಿದ ಹ್ರಸ್ವ ಎ, ಒ ಗಳನ್ನು ಈ ಸ್ವರಗಳೊಡನೆ ಸೇರಿಸಿಕೊಳ್ಳಬೇಕು. 'ಸವನಿಸಿದ ಎ. ಏ ಒ, ಓ ಎಂಬಿವು ಕನ್ನಡದೊಳ್ ಸ್ವಭಾವದಿಂದೊಳವು. ಸವರ್ಣಮಪ್ಪುವು' ಎಂದು ಕನ್ನಡಸ್ವರಗಳಲ್ಲಿ ಎ, ಒ ಗಳ ಹ್ರಸ್ವದೀರ್ಘಗಳನ್ನೂ ಸೇರಿಸಬೇಕೆಂದಿದ್ದಾನೆ. ಸ್ವರಗಳಲ್ಲಿ ಹ್ರಸ್ವದೀರ್ಘ ಪ್ಲುತಗಳಲ್ಲದೆ 'ಸಂಧ್ಯಕ್ಷರಗಳು' ಎಂಬ ಭೇದವನ್ನು "ಕ್ರಮದೆ ಗುರುದೀರ್ಘ ಮೇಕಾರ ಮುಖ್ಯ ಸಂಧ್ಯಕ್ಷರಂಗಳವು"[1]. ಎಂದು ತಿಳಿಸಿ ಅವು ಗುರು ಮತ್ತು ದೀರ್ಘ ಎಂದಿದ್ದಾನೆ. 'ಏಕಾರ ಮುಖ್ಯ ಸಂಧ್ಯಕ್ಷರಗಳು' ಏ ಮೊದಲಾದುವು–ಏ, ಓ. ಐ. ಔ. ಕನ್ನಡದ ಸಹಜ ಎ, ಒ ಮತ್ತವುಗಳ ಸವರ್ಣಗಳಾದ ದೀರ್ಘಗಳು ಸಂಧ್ಯಕ್ಷರಗಳಲ್ಲ ಎಂಬ ಅರ್ಥ ಈ ಮಾತಿನಲ್ಲೇ ಅಡಕವಾಗಿದೆ. ಹಾಗಾದರೆ, ಅವನು ಸಂಧ್ಯಕ್ಷರಗಳೆಂದಿರುವುದು ಸಂಸ್ಕೃತದ ಈ ನಾಲ್ಕು ಅಕ್ಷರಗಳನ್ನೇ ಎಂದು ಭಾವಿಸಬೇಕಾಗಿದೆ. ಸಂಯುಕ್ತಸ್ವರ, ಸಂಧಿಸ್ವರ ಎಂದರೂ ಇವೇ. ಕೆಲವು ಸಂಸ್ಕೃತ ವ್ಯಾಕರಣಗಳಲ್ಲಿ ಇವನ್ನು ಸಂಧ್ಯಕ್ಷರವೆನ್ನಲಾಗಿದೆ. ಕೇಶಿರಾಜನು ಕಾತಂತ್ರ ವ್ಯಾಕರಣವನ್ನೇ ಹೆಚ್ಚು ಅವಲಂಬಿಸಿರುವುದರಿಂದ ಅದರಲ್ಲಿ ಬರುವ "ಏಕಾರಾದೀನಿ ಸಂಧ್ಯಕ್ಷರಾಣಿ"[2] ಎಂಬ ಸೂತ್ರವನ್ನು ಅನುಸರಿಸಿ ಹೇಳಿರಬಹುದು. ಶಬ್ದಸ್ಮೃತಿಯಲ್ಲಿ, "ಸಂಧ್ಯಕ್ಷರವೆನೆಯುಧಾರ್ಥದಿಂ ವ್ಯವಹರಿಸುಗುಮೇಕಾರಮಾದಿಯಾಗಿರೆ ನಾಲ್ಕುಂ" (ಸೂ. 3) ಎಂದಿದೆ. ಭಾಷಾಭೂಷಣದಲ್ಲಿ ಈ ವಿಚಾರವಿಲ್ಲ. ಕರ್ಣಾಟಕ ಶಬ್ದಾನುಶಾಸನದ ಸೂತ್ರದಲ್ಲಿ ಹೇಳದಿದ್ದರೂ ವ್ಯಾಖ್ಯಾನದಲ್ಲಿ ಸಂಧ್ಯಕ್ಷರ ಚತುಷ್ಟಯವೆಂದು ವರ್ಣಗಳನ್ನು ಲೆಕ್ಕಿಸುವಲ್ಲಿ ಹೇಳಿದೆ, ಪತಂಜಲಿಯು ಮಹಾಭಾಷ್ಯದಲ್ಲಿ "ಏ ಓ ಙ್ [3] ಐ ಔ ಚ್ [4] ಇದಂ ವಿಚಾರ್ಯತೇ ಇಮಾನಿ ಸಂಧ್ಯಕ್ಷರಾಣಿ"[3] ಎಂದು ಸಂಧ್ಯಕ್ಷರವೆಂಬ ಹೆಸರನ್ನು ಪ್ರಯೋಗಿಸಿದ್ದಾನೆ. ವರ್ಣಗಳ ಸ್ಥಾನ ಉತ್ಪತ್ತಿ ಆದಿಗಳ ಬಗ್ಗೆ ವಿಶೇಷವಾಗಿ ಹೇಳಿದ ತೈತ್ತಿರೀಯ ಪ್ರಾತಿಶಾಖ್ಯದಲ್ಲಿ ಈ ವರ್ಣಗಳನ್ನು ಹೇಳಿದರೂ ಇವಕ್ಕೆ ಆ ಸಂಜ್ಞೆಯನ್ನು ಹೇಳಿಲ್ಲ. ಸಾರಸ್ವತ ವ್ಯಾಕರಣದಲ್ಲಿ "ಏ, ಐ, ಓ, ಔ ಸಂಧ್ಯಕ್ಷರಾಣಿ ಏಷಾಂ ಹ್ರಸ್ವಾನಿ ಸಂತಿ"— ಇವು ಸಂಧ್ಯಕ್ಷರಗಳು, ಇವಕ್ಕೆ ಹ್ರಸ್ವವಿಲ್ಲ ಎಂದಿದೆ. ಪಾಣಿನಿಯು ತಾನೇ ಆವಕ್ಕೆ ಸಂಧ್ಯಕ್ಷರಗಳೆಂಬ ಸಂಜ್ಞೆ ನೀಡಿಲ್ಲ. ಮಿಶ್ರಸ್ವರಗಳಾದ್ದರಿಂದಲೇ ಸ್ವರಗಳಲ್ಲಿ ಕೊನೆಯ ಸ್ಥಾನ ನೀಡಿದ್ದಾನೆ, ಪಾಲಿ, ಅರ್ಧ

ಮಾಗಧಿ ಮೊದಲಾದ ಪ್ರಾಕೃತ ವ್ಯಾಕರಣಗಳಲ್ಲಿ ಹೇಳಿದ ನಲುವತ್ತು ಅಕ್ಷರಗಳಲ್ಲಿ ಐ, ಔ ಎಂಬ ಸ್ವರಗಳಿಲ್ಲ. ಸಂಧ್ಯಕ್ಷರವೆಂಬ ಸಂಜ್ಞೆಯೂ ಇಲ್ಲ. ಈ ಅಕ್ಷರಗಳ ಪ್ರವೃತ್ತಿಯಿಂದ ಇವಕ್ಕೆ ಆ ಹೆಸರು ಬಂದಿರಬೇಕು. ಸಂಸ್ಕೃತದಲ್ಲಿ ಸಂಧ್ಯಕ್ಷರಗಳೆನಿಸಿದ ಇವು ಕನ್ನಡದಲ್ಲಿ ವೆಯೋ? ಸಂಧ್ಯಕ್ಷರಗಳೆನಿಸುತ್ತವೆಯೋ? ವಿಚಾರಿಸಬೇಕು.

ಸಂಸ್ಕೃತ ಭಾಷೆಯಲ್ಲಿ ಇವಕ್ಕೆ ಸಂಧ್ಯಕ್ಷರಗಳೆಂಬ ಹೆಸರು ಹೇಗೆ ಒಪ್ಪುತ್ತದೆ? ಯಾವ ಯಾವ ಅಕ್ಷರಗಳಲ್ಲಿ ಸಂಧಿಗೊಂಡವು ಯಾವುವು?

ಸಂಧ್ಯಕ್ಷರವೆಂಬ ಶಬ್ದದ ಅರ್ಥ–ಕೂಡಿದ ಸ್ವರಾಕ್ಷರ. ಒಂದಕ್ಕಿಂತ ಹೆಚ್ಚು ಸ್ವರಾಕ್ಷರಗಳು ಕೂಡಿ ಆದವು ಇವು ಎಂಬ ಅಭಿಪ್ರಾಯ. ಸಂಸ್ಕೃತದಲ್ಲಿರುವುದನ್ನು ಕನ್ನಡಕ್ಕೆ ಅಳವಡಿಸುವ ನಮ್ಮ ವೈಯಾಕರಣರು ಸಂಸ್ಕೃತ ಶಬ್ದಗಳನ್ನು ದೃಷ್ಟಿಯಲ್ಲಿಟ್ಟು ಕೊಂಡು ಅವು ಕನ್ನಡದಲ್ಲಿ ಉಪಯೋಗವಾಗುವುದರಿಂದ ಮಾತ್ರ ಅವನ್ನು ಹೇಳಿದರೆ? ಅಥವಾ ಕನ್ನಡದ ದೇಶೀ ಶ್ರಾವಣ ವರ್ಣಗಳಲ್ಲೂ ಇವು ಇವೆಯೋ. ಇಲ್ಲೂ ಇವು ಸಂಧ್ಯಕ್ಷರಗಳಾಗಿವೆಯೋ?

ಏ, ಓ:– ಹ್ರಸ್ವ ಅಕಾರ, ಏಕಾರ, ಓಕಾರಗಳಿಗೆ ಪಾಣಿನಿ 'ಗುಣ'[4] ಸಂಜ್ಞೆಯನ್ನಿತ್ತಿದ್ದಾನೆ. ಮುಂದೆ "ಅದ್ಗುಣ":–(೬–೧–೮೭) ಎಂಬ ಸೂತ್ರದಲ್ಲಿ ಅವರ್ಣದಿಂದ ಪರದಲ್ಲಿ ಸ್ವರವಿದ್ದರೆ ಗುಣ ಏಕಾದೇಶವಾಗುತ್ತದೆ ಎಂದಿದ್ದಾನೆ. ಆದರಂತೆ, ಉಪ್ (ಅ) ಇಂದ್ರ: ಎಂಬಲ್ಲಿ ಪಕಾರದ ಮೇಲಿನ ಅಕಾರ ಮತ್ತು ಮುಂದಿನ ಇ ಕಾರಕ್ಕೆ ಒಂದಾಗಿ ಅವೆರಡರ ಕಂಠತಾಲು ಸ್ಥಾನವುಳ್ಳ ಏಕಾರ ಆದೇಶವಾಗಿ ಉಪ್ (ಏ) ಂದ್ರಃ = ಉಪೇಂದ್ರ: ಎಂದಾಗುತ್ತದೆ. ಅದೇ ರೀತಿ, ಗಂಗಾ + ಉದಕಮ್

ಓ

ಗಂಗ್ + (ಅ + ಉ)ದಕಮ್ = ಗಂಗೋದಕಮ್

ಅಕಾರ ಮತ್ತು ಇಕಾರ ಸೇರಿ ಏಕಾರವಾಯಿತು. ಅಕಾರ ಮತ್ತು ಉಕಾರ ಸೇರಿ ಓಕಾರವಾಯಿತು. ಆದ್ದರಿಂದಲೇ ಇವೆರಡೂ ಸಂಧ್ಯಕ್ಷರಗಳೆಂದು ಸಂಸ್ಕೃತದಲ್ಲಿ ಸಾರ್ಥಕವಾಗಿ ವ್ಯವಹರಿಸಲಾಗುತ್ತದೆ. ಏ, ಓಗಳನ್ನು ಪ್ರತ್ಯೇಕ ಉಚ್ಚರಿಸಿದಾಗ ಎರಡು ಸ್ವರಗಳ ಸಂಧಿಯ ಅರಿವು ಸ್ವಲ್ಪವೂ ಆಗದಷ್ಟು ಅವು ಒಂದಾಗಿವೆ. "ಎಲ್ಲಿ 'ಅ' ಕೊನೆಯಾಗುತ್ತದೆ, ಎಲ್ಲಿ ಇ ಅಥವಾ ಉ ಮೊದಲಾಗುತ್ತದೆ ಎಂದು ಗೊತ್ತಾಗುವುದಿಲ್ಲ"[5]. ಏ ಕಾರಕ್ಕೆ ಕಂಠತಾಲು ಸ್ಥಾನ, ಏಕಾರವನ್ನುಚ್ಚರಿಸುವಾಗ ನಾಲಿಗೆ ಸಮತಲದಲ್ಲಿರುತ್ತದೆ. ಇಯ್‌ಕಾರವನ್ನು ಉಚ್ಚರಿಸುವಾಗ ನಾಲಿಗೆಯ ಮಧ್ಯಭಾಗ ಸ್ವಲ್ಪ ಮೇಲಕ್ಕೆ ಉಬ್ಬಿ ಗಾಳಿಯನ್ನು ತಳ್ಳುತ್ತದೆ. ಏ, ಇ. ಯ್ ಕಾರಗಳಿಗೆ ಹೆಚ್ಚಿನ ವ್ಯತ್ಯಾಸವಿಲ್ಲ. ಆದ್ದರಿಂದಲೇ ಇ. ಏ ಕಾರಗಳು ಯ ಕಾರವಾಗಿ ಉಚ್ಚಾರದಲ್ಲಿ ಮಾರ್ಪಡುತ್ತವೆ. ಉದಾ; ಹರೇ + ಇಹ → ಹರಯಿಹ. ಉ, ಓಗಳಿಗೂ ಇದೇ ರೀತಿ ಸಾಮ್ಯವಿದೆ. ತುಟಿಗಳನ್ನು ದುಂಡಾಗಿಸಿ ಉಸಿರು

ಬಿಟ್ಟರೆ ಉಕಾರ, ಆದ್ದರಿಂದ ಓಷ್ಠಸ್ಥಾನ. ಒ ಕಾರಕ್ಕೂ ತುಟಿಗಳನ್ನು ಸ್ವಲ್ಪ ಅಗಲವಾಗಿ ದುಂಡಾಗಿಸಬೇಕು. ಕಂಠದಿಂದ ಧ್ವನಿ ಹೊರಹೊಮ್ಮಬೇಕು. ಆದ್ದರಿಂದ ಕಂಠೋಷ್ಠ.

ವ ಕಾರಕ್ಕೂ ಓಷ್ಠ ಮತ್ತು ದಂತವೇ ಸ್ಥಾನವಾದ್ದರಿಂದ ಉ, ಓ–ವ ಪರಿವರ್ತನೆಯಾಗುತ್ತದೆ. ಮಧು + ಅರಿ; ಎಂಬಲ್ಲಿ ಉ ಕಾರದ ಸ್ಥಾನಕ್ಕೆ ವಕಾರ ಬಂದು ಮಧ್ವರಿ; ಇದೇ ಹಿನ್ನೆಲೆಯಲ್ಲಿ ಏ, ಓ, ಐ, ಔಗಳಿಗೆ ಕ್ರಮವಾಗಿ ಅಯ್. ಅವ್: ಆಯ್. ಆವ್ ಆದೇಶವಾಗುತ್ತವೆ[6]. ಹರೇ + ಏ = ಹರಯೇ, ವಿಷ್ಣೋ + ಏ = ವಿಷ್ಣವೇ ನೈ + ಅಕ: = ನಾಯಕ:, ಪೌ + ಅಕ: = ಪಾವಕ:, ಅ + ಇ = ಏ, ಅ + ಉ = ಓ. ಈ ಪ್ರಕಾರದಲ್ಲಿ ಉಂಟಾದ ಸಂಧ್ಯಕ್ಷರಗಳಲ್ಲಿ ಏ ಕಾರಕ್ಕೆ ಅಯ್, ಓ ಕಾರಕ್ಕೆ ಅವ್ ಆದೇಶ ಹೇಗೆ? 'ಇ' ಗೆ ಯ್ (ಸಮಾನ ತಾಲು ಸ್ಥಾನಿಗಳು), 'ಉ'ಗೆ ವ್ (ಓಷ್ಠಸ್ಥಾನ ಸಮಾನ) ಆದೇಶ ಅಂದರೆ ಇಲ್ಲಿ ಉಚ್ಚಾರಣೆಯಲ್ಲಿ ಜಾರುವಿಕೆ, ಇದು ಸ್ವಾಭಾವಿಕ. ಯ್, ವ, ಲ ಗಳು ಅರ್ಧಸ್ವರ (Semi Vowels) ಗಳೆಂದು ಈ ಕಾರಣದಿಂದಲೇ ಹೇಳಲಾಗುತ್ತದೆ. ಅ. ಇ. ಗಳನ್ನು ಕೂಡಿ ಉಚ್ಚರಿಸುವಾಗ 'ಅಯ್', ಅ, ಉ ಗಳನ್ನು ಉಚ್ಚರಿಸುವಾಗ 'ಅವ್' ಎಂದಾಗುತ್ತದೆ. ಸಂಸ್ಕೃತ ಧ್ವನಿಯ ಈ ಪರಿವರ್ತನೆ ನೋಡಿದರೆ, ಏ ಓಗಳು ಸಂಧಿ ಸ್ವರಗಳೆಂದೂ ಅವು ಸೇರಿ ಮತ್ತೆ ಸಂಧಿಯಾಗುವಾಗ ಯ್, ವ್‌ಗಳ ಸ್ವಲ್ಪ ವ್ಯಂಜನಾಂಶ ಸೇರುವುದೆಂದೂ ಸ್ಪಷ್ಟವಾಗುತ್ತದೆ,

ಐ. ಔ:–ಅ, ಐ, ಔಗಳಿಗೆ ವೃದ್ಧಿಯೆಂಬ ಸಂಜ್ಞೆಯಿದೆ[7] (ಏ, ಓ ಗಳದೇ ವರ್ಧಿಸಿದ ರೂಪ, ಅವರ್ಣದಿಂದ ಪರದಲ್ಲಿ ಏ, ಓ, ಐ, ಔ ಗಳಲ್ಲಿ ಯಾವುದಾದರೂ ಒಂದು ಇದ್ದಲ್ಲಿ ವೃದ್ಧಿಯು ಏಕಾದೇಶವಾಗುತ್ತದೆ.

ಕೃಷ್ಣ (ಅ + ಏ) ಕತ್ವಂ = ಕೃಷ್ಣೈಕತ್ವಂ (ಐ)	ಅ + ಏ = ಐ.
ಗಂಗ್ (ಅ + ಓ) ಘಃ = ಗಂಗೌಘಃ (ಔ)	ಅ + ಓ = ಔ.
ದೇವ್ (ಅ + ಐ) ಶ್ವರ್ಯಂ = ದೇವೈಶ್ವರ್ಯಂ (ಐ)	ಅ + ಐ = ಐ.
ಕೃಷ್ಣ (ಅ + ಔ) ತ್ಕಂಠ್ಯಂ = ಕೃಷ್ಣೌತ್ಕಂಠ್ಯಂ (ಔ)	ಅ + ಔ = ಔ,

ಐ, ಔಗಳು ಹೇಗೆ ಸಂಧ್ಯಕ್ಷರಗಳಾಗುತ್ತವೆಂಬುದು ಮೇಲಿನ ಉದಾಹರಣೆಯಿಂದ ಸ್ಪಷ್ಟ. ಸಂಧಿಸ್ವರಗಳಾದ ಏ ಓಗಳೇ ಮತ್ತೆ ಅಕಾರದೊಡನೆ ಸಂಧಿಯಾಗಿ ಐ. ಔ ಆಗುತ್ತವೆ.

ಅಂದರೆ, ಅ + ಇ = ಏ. ಅ + ಏ (ಅ + ಇ) = ಐ,

ಅ + ಉ = ಓ. ಅ + ಓ (ಅ + ಉ) = ಔ,

ಸಂಧ್ಯಕ್ಷರಕ್ಕೆ ಮತ್ತೆ ಸಂಧಿಯಾದಂತೆ ತೋರುವುದರಿಂದ ಐ, ಔಗಳನ್ನು ದ್ವಿಸಂಧ್ಯಕ್ಷರವೆನ್ನಬಹುದೇನೋ. ಮುಖ್ಯ ಗಮನಕ್ಕೆ ಬರುವ ಇನ್ನೊಂದು ವಿಷಯ ವೆಂದರೆ, ಅ, ಇ, ಉಗಳೇ ಪ್ರಧಾನವಾಗಿರುವುದು. ಆದ್ದರಿಂದಲೇ ಇವುಗಳಿಗೆ 'ಮೂಲಸ್ವರ' ಎಂಬ ಹೆಸರು ಸಾರ್ಥಕವೆನಿಸುತ್ತವೆ[9],

ಪಾಣಿನಿಯ ಚತುರ್ದಶ ಸೂತ್ರಗಳಲ್ಲಿ ಮೊದಲಾಗಿ ಇವನ್ನೇ ಹೇಳಲು ಇದೇ ಕಾರಣವಿರಬೇಕು. ಇವುಗಳಲ್ಲಿ ಇವುಗಳ ದೀರ್ಘಗಳೂ ಅಂತರ್ಗತವಾಗುತ್ತವೆ.

ಐ, ಔಗಳಿಗೆ ಅಯ್, ಅವ್‌ಗಳು ಕ್ರಮವಾಗಿ ಆದೇಶವಾಗುವ ವಿಚಾರ ಹಿಂದೆ ಹೇಳಿದೆ. 'ಅ' ದಲ್ಲೇ 'ಆ' ಅಂತರ್ಗತವಾದ್ದರಿಂದ ಇವನ್ನು ಹೀಗೂ ಬಿಡಿಸಬಹುದು, ಆ ಅಂದರೆ ಅ + ಅ ಎಂದಿಟ್ಟುಕೊಂಡರೆ,

ಆ + ಅ = ಆ + ಏ (ಅ + ಇ) = ಐ, ಅ + ಅ = ಆ + ಓ (ಅ + ಉ) = ಔ, ಪ್ರತಿಯೊಂದರಲ್ಲಿ ಮೂರು ಬಾರಿ ಅಕಾರ ಬಂದಿದ್ದರೂ, ಇವುಗಳು ದೀರ್ಘ ಮಾತ್ರ, ಅಂದರೆ ಗುರು–ಎರಡು ಮಾತ್ರೆ. ಐ ಕಾರಕ್ಕೆ ಕಂಠತಾಲು ಸ್ಥಾನವಾದ್ದರಿಂದ ತಾಲು ಸ್ಥಾನದ ಯಕಾರಕ್ಕೆ ಹತ್ತಿರವಾಗಿದ್ದು ಆ ಕಡೆಗೆ ಜಾರುವುದರಿಂದಲೇ 'ಐ' ಕಾರಕ್ಕೆ 'ಆಯ್' ಮತ್ತು ಅದೇ ರೀತಿ ಕಂಠೋಷ್ಠ ಸ್ಥಾನದ ಔಕಾರಕ್ಕೆ ದಂತೌಷ್ಠದ 'ವ' ಕಾರ ಓಷ್ಠ ಸಮಾನಸ್ಥಾನ ವಾದ್ದರಿಂದ 'ವ' ಕಾರಕ್ಕೆ ಜಾರುವುದರಿಂದಲೇ 'ಆವ್' ಆದೇಶ ಎನ್ನುವುದು. ಆದ್ದರಿಂದ ಐ, ಔ ಗಳಲ್ಲಿ (ಅಯ್, ಅವ್) ವ್ಯಂಜನಾಂಶಗಳು ಸೇರಿಕೊಂಡಿವೆಯೆನ್ನಬಹುದು.

ಮೇಲಿನ ವಿವೇಚನೆಯಿಂದ ಸಂಸ್ಕೃತದಲ್ಲಿ ಏ, ಓ, ಐ, ಔ ಗಳು ಸಂಧಿಸ್ವರ ಗಳೆಂಬುದು ಸ್ಪಷ್ಟ. ಆದರೆ, ಕನ್ನಡದಲ್ಲಿ ಇವುಗಳ ಸ್ಥಿತಿಯೇನು? ಸಂಸ್ಕೃತದಲ್ಲಿ ಇವೆಲ್ಲ ದೀರ್ಘಮಾತ್ರವಾದರೆ ಕನ್ನಡದಲ್ಲಿ ಏ, ಓ ಗಳಿಗೆ ಹ್ರಸ್ವಗಳಿವೆ. "ಸಮನಿಸಿದ ಎ, ಏ, ಒ, ಓ ಎಂಬಿವು ಕನ್ನಡದೊಳ್ ಸ್ವಭಾವದಿಂದೊಳವು. ಸವರ್ಣಮಪ್ಪುವು"[10] "ಏದೋತೌ ಹ್ರಸ್ವೌಚ"[11] ಎಂಬ ಮಾತುಗಳಿಂದ ಇದು ಸ್ಪಷ್ಟ. ಕರ್ಣಾಟಕ ಶಬ್ದಾನುಶಾಸನಕಾರನು ಸಿದ್ಧಿಃ ಶುದ್ಧಕಾಃ ಎಂಬ ಒಂದನೇ ಸೂತ್ರದ ವೃತ್ತಿಯಲ್ಲಿ ವರ್ಣಮಾಲೆಯಲ್ಲಿ ಹ್ರಸ್ವ ಎ, ಒ ಗಳನ್ನು ಹೇಳದಿದ್ದರೂ ವೃತ್ತಿಯಲ್ಲಿ 'ಸಾಮಾನ್ಯಾವಲಂಬನಾದ್ದೀರ್ಘಾದಿಪರಿಗ್ರಹ:' ಎಂದಿರುವುದರಿಂದ ವ್ಯಾಖ್ಯಾನಕಾರ ಅವನ್ನು ಸೇರಿಸಿದ್ದಾನೆ. ಸ್ವತಃ ಪಾಣಿನಿಗೇ ಏ, ಓ, ಐ, ಔಗಳಿಗೆ ಹ್ರಸ್ವವಿದೆಯೆಂಬ ಸಂದೇಹ ಬಂದದ್ದರಿಂದಲೇ "ಏಚಇಗ್ಘ್ರಸ್ವಾದೇಶೇ" (೧–೧–೪೮) "ಆದಿಶ್ಯಮಾನೇಷು ಹ್ರಸ್ವೇಷು ಏಚಃ ಇಗೇವಸ್ಯಾತ್, ಓಕಾರ ಔಕಾರ ಯೋಃಸು ಉಕಾರಃ ಏಚಃ ಉತ್ತರಭಾಗಾಂತರಂತವಾತ್ ಇ, ಉ ವರ್ಣಾಪೇಕ್ಷಿಸಿದ್ದವು" ಅಂದರೆ ಹ್ರಸ್ವ

ಹೇಳಬೇಕಾದಲ್ಲಿ ಏ, ಓ ಗಳಿಗೆ ಇ, ಉ ಓಕಾರ ಔಕಾರಗಳಿಗೆ ಉಕಾರವೇ ಹ್ರಸ್ವವೆಂದಿದ್ದಾನೆ. ಸೂತ್ರ-೧-೧-೪೮. ಪತಂಜಲಿಯೂ ಸಂಧ್ಯಕ್ಷರಗಳಿಗೆ ಹ್ರಸ್ವಗಳನ್ನು ಶಂಕಿಸಿ ಇಲ್ಲವೆಂದಿದ್ದಾನೆ. ಒಂದು ಮಂತ್ರವನ್ನುದ್ಧರಿಸಿ ಇದು ಪಾರಿಷದಕೃತಿ ಲೌಕಿಕದಲ್ಲಾಗಲೀ, ವೇದದಲ್ಲಾಗಲೀ ಅರ್ಧ ಏಕಾರ ಓಕಾರಗಳಿಲ್ಲ – (ನನುಚೈಜಃ ಸಸ್ಥಾನತರಾವರ್ಧ ಏಕಾರ ಅರ್ಧ ಓಕಾರ ನತೌಸ್ತಃ ………ಸುಜಾತೇ ಏ ಅಶ್ವಸೂನೃತೇ, ಅಧ್ವರ್ಯೋಽ ಅದ್ರಿಭಿಃ ಸುತವರ್ ………ನೈವಹಿ ಲೋಕೇ ನಾನ್ಯಸ್ಮಿನ್ ವೇದೇ ಅರ್ಧ ಏಕಾರೋ ಅರ್ಧ ಓಕಾರೋ ವಾಸ್ತಿ" [12] ಎಂದು ತೀರ್ಮಾನಿಸಿದರೂ ಹ್ರಸ್ವದ ಸಂದೇಹ ಅವನಿಗಿದ್ದುದು ಸ್ಪಷ್ಟ, ತೈತ್ತಿರೀಯ ಪ್ರಾತಿಶಾಖ್ಯದ ವೈದಿಕಾಭರಣ ವ್ಯಾಖ್ಯಾನದಲ್ಲೂ ಇದೇ ಪತಂಜಲಿಯ ವಾಕ್ಯಗಳನ್ನು ಉದ್ಧರಿಸಿ ಅರ್ಧ ಏಕಾರ ಅರ್ಧ ಓಕಾರಗಳನ್ನು ತಳ್ಳಿ ಹಾಕಲಾಗಿದೆ [13]. ಹಿಂದಿಯಲ್ಲೂ ಎ. ಒ ಗಳಿಲ್ಲ. ದ್ರಾವಿಡ ಭಾಷೆಗಳಲ್ಲಿ ಕನ್ನಡದಲ್ಲಿ ಈ ಹಿಂದೆ ಹೇಳಿದಂತೆ ಎ, ಒ ಗಳಿವೆ. ಅವುಗಳ ದೀರ್ಘಗಳೂ ಇವೆ. ಉದಾ: ಎಳೆ (ಕ್ರಿ. to pull, ನಾ. ದಾರ), ಏಳೆ-ಛಂದಸ್ಸು, ಒಲೆ (ಅಡುಗೆಗೆ ಬೆಂಕಿ ಉರಿಸುವ ಜಾಗ), ಓಲೆ (ತಾಳೆಗರಿ), ಆದರೆ ಹ್ರಸ್ವ ದೀರ್ಘಗಳಿಗೆ ಪ್ರತ್ಯೇಕ ಲಿಪಿ ಇರಲಿಲ್ಲ. ಎರಡಕ್ಕೂ ಒಟ್ಟಿಗೆ ಒಂದೇ ಲಿಪಿಯಿತ್ತು. ಮುಂದೆ ಎರಡೆರಡು ಲಿಪಿಗಳಾದುವು." [14] ಬ್ರಾಹ್ಮೀಲಿಪಿಯಿಂದಲೇ ಈ ದ್ರಾವಿಡ ಭಾಷಾಲಿಪಿಗಳು ಉಂಟಾದುವು ಎಂಬುದಕ್ಕೆ ಇದೂ ಒಂದು ನಿದರ್ಶನವೆನ್ನುತ್ತಾರೆ, ಕಾಲ್ಡ್‌ವೆಲ್ [14].

ಸಂಸ್ಕೃತದ ಎ, ಒಗಳಂತೆ ಕನ್ನಡದವುಗಳಲ್ಲ.

ಸಂಸ್ಕೃತದಲ್ಲಿ ಅ + ಇ ಸೇರಿ ಏ. ಅ + ಉ ಸೇರಿ ಓ ಆದಂತೆ ಕನ್ನಡದಲ್ಲಾಗದು. ಆ ರೀತಿ ಸ್ವರಗಳು ಪರಸ್ಪರ ಎದುರಾದಾಗ ನಾಮರೂಢಿಯುಳಿಯದ ಪಕ್ಷದಲ್ಲಿ ಪೂರ್ವಸ್ವರ ಲೋಪವಾಗುತ್ತದೆ, [15] ಇಲ್ಲದಿದ್ದರೆ ಯ ಅಥವಾ ವಕಾರ ಆಗಮವಾಗುತ್ತದೆ.

ಈಶ್ವರನ + ಇರವು= ಈಶ್ವರನಿರವು (ಏಕಾರವಿಲ್ಲ).

ಕಡ + ಉಂಟು= ಕಡವುಂಟು (ಓಕಾರವಿಲ್ಲ),

ರಾವಣನ + ಉಪಟಳ= ರಾವಣನುಪಟಳ (ಓಕಾರವಿಲ್ಲ).

ಕೆಲವೊಮ್ಮೆ ಸಂಸ್ಕೃತ ಸಂಧಿಯ ಅನುಕರಣೆಯಲ್ಲಿ ಅಜ್ಞತೆಯಿಂದ ಅಂತಹ ಸಂಧಿಗಳನ್ನು ಮಾಡಿದರೂ ಸರಿಯಲ್ಲ.

[ಉದಾ;- ಊಟ + ಉಪಚಾರ = ಊಟೋಪಚಾರ ಅಲ್ಲ. ಊಟವುಪಚಾರ, ಕೈಗಾರಿಕಾ + ಉದ್ಯಮ= ಕೈಗಾರಿಕೋದ್ಯಮವಲ್ಲ, ಕೈಗಾರಿಕೆಯುದ್ಯಮ.]

ಕನ್ನಡದ ಹ್ರಸ್ವ ಎ, ಒಗಳಾಗಲೀ, ಅವುಗಳ ದೀರ್ಘಗಳಾಗಲೀ ಸಂಧಿಸ್ವರಗಳಲ್ಲಿ ಇವು ಸ್ವತಂತ್ರಗಳು,

ಕನ್ನಡ ವ್ಯಾಕರಣಗಾರರು ಸಂಧಿಸ್ವರಗಳಲ್ಲಿ ಎ, ಒಗಳನ್ನು ಸೇರಿಸದಿರುವುದೂ ಗಮನಾರ್ಹ. ಅವುಗಳ ಸವರ್ಣಗಳಾದ ದೀರ್ಘಗಳೂ ಅವುಗಳಲ್ಲಿ ಅಂತರ್ಗತವಾದುವರಿಂದ

ಅವೂ ಸಂಧಿಸ್ವರಗಳಲ್ಲ. ಅವರು ಸಂಸ್ಕೃತ ಐ, ಔಗಳನ್ನೇ ಹೇಳುವುದೆಂಬುದು ಸ್ಪಷ್ಟ. ಸಂಸ್ಕೃತದಂತೆ ಕನ್ನಡದಲ್ಲೂ ಕೆಲವೊಮ್ಮೆ ಏಕಾರವು ಯಾಕಾರವಾಗಿ ಮಾರ್ಪಡುತ್ತದೆ.

ಉದಾ:- ಏತ,-ಯಾತ, ಏಕೆ-ಯಾಕೆ, ಬೇಡ-ಬ್ಯಾಡ, ಬೇಟೆ-ಬ್ಯಾಟೆ.

ಕನ್ನಡದಲ್ಲೂ ಒ, ಓಕಾರಗಳು ವಕಾರವಾಗಿ ಮಾರ್ಪಡುತ್ತವೆ. ಉದಾ: ಕೋಪ-ಕ್ವಾಪ, ಒಲಗ-ವಾಲಗ. ಒರಟು-ವರಟು, ಓಲೆ--ವಾಲೆ, ಒರತೆ-ವರತೆ ಇತ್ಯಾದಿ, ಇದೇ ರೀತಿ ಯಕಾರವು ಎಕಾರವಾಗಿ ವಕಾರವು ಒಕಾರವಾಗಿ ಮಾರ್ಪಡುವುದಿದೆ.

ಉದಾ:-ಉದಯಕಾಲ-ಉದೆಕಾಲ (ಹವ್ಯಕ ಕನ್ನಡ), ಬಂದಯ್-ಬಂದೆ, ಮಾಡಿದಯ್-ಮಾಡಿದೆ.

ಕಂತುವನೆಂತಳಲಿಸಿದೆ ಕೃ
ತಾಂತನನುರದೆಂತು ಗೆಲ್ದೆ ಮುಕ್ತ್ಯಂಗನೆಯಂ
ಎಂತೊಲಿಸಿದೆ ನಿರವಧಿ ಸುಖ
ಸಂತತಿಯನದೆಂತು ಪಡೆದೆ ಪೇಳಿನಗರ್ಹಾ 16.

ಮೇಲಿನ ಪದ್ಯದಲ್ಲಿ ಅಯ್ ಎಂಬ ಮಧ್ಯಮ ಪುರುಷ ಏಕವಚನ ಎಕಾರವಾಗಿದೆ, ವಕಾರವು ಒಕಾರವಾಗಿ-ಮೊದಲೊಂದಿಪೆ ನಿನಗೆ ಗಣನಾಥ, ಮೊದಲು + ವಂದಿಪೆ, ವ್ಯಾಖ್ಯಾನ-ಒಕ್ಕಣೆ, ವಟಕ-ವಡೆ-ಒಡೆ.

ಐ, ಔ: ಈ ಎರಡು ಧ್ವನಿಗಳೂ ಕನ್ನಡಕ್ಕೆ ಹೊರತಾದುವು. ಸಂಸ್ಕೃತದಿಂದ ಬಂದುವು. ಪ್ರಾಕೃತಗಳಲ್ಲೂ ಈ ಧ್ವನಿಗಳಿಲ್ಲ. ಸಂಸ್ಕೃತದಲ್ಲಿ ಐ ಎಂದಿದ್ದರೆ ಕನ್ನಡದಲ್ಲಿ ಅಯ್ ಮಾತ್ರವಾಗಿದೆ. ಅಯ್ದು, ಕಯ್ವಾರ ಇತ್ಯಾದಿ, ಐ ಎಂಬುದು ದ್ರಾವಿಡದಲ್ಲಿ ಎಯ್ ಎಂಬಂತೆ ಉಚ್ಚಾರವಾಗುವುದೆಂಬ ಕಾಲ್ಡ್‌ವೆಲ್ಲರ ಅಭಿಪ್ರಾಯವನ್ನು ಸಾಧಾರವಾಗಿ ಖಂಡಿಸಿ ಅದು ಅಯ್ ಎಂದೂ ಎಯ್ ಎಂಬುದು ಬೇರೆ ಧ್ವನಿ, ದ್ರಾವಿಡ ಭಾಷೆಗಳ ಶ್ರಾವಣ ವರ್ಣಮಾಲೆಗೆ ಐ ಎಂಬ ಶುದ್ಧ ಸಂಧಿಸ್ವರ ಹೊರಗಾಗಿದೆ. ಅಯ್ ಎಂಬ ಧ್ವನಿಯನ್ನು ಸ್ವರವೆಂದು ಭಾವಿಸಿದರೆ ಎಯ್, ಉಯ್, ಒಯ್ ಎಂಬವುಗಳನ್ನು (ಇವು ಭಾಷೆಯಲ್ಲಿ ತುಂಬಾ ಇವೆ) ಸ್ವರಗಳೆಂದು ಭಾವಿಸಬೇಕಾಗುವುದು. ಆದ್ದರಿಂದ ಅವು ಸ್ವರಗಳಲ್ಲ. ಕೇವಲ ವರ್ಣಗಳೂ ಅಲ್ಲ. ಸವ್ಯಂಜನಾಕ್ಷರಗಳು 17 ಎಂದು ಸೇಡಿಯಾಪು. ಕೃಷ್ಣಭಟ್ಟರು ಪ್ರತಿಪಾದಿಸಿದ್ದಾರೆ.

ಅಯ್ ಎಂಬುದೇ ಐ ಆಗಿ ಮಾರ್ಪಡುವುದೆಂಬುದಕ್ಕೆ ಮಠಗಳಲ್ಲಿ ಪಾಠಹೇಳುತ್ತಿದ್ದ ಐಗಳು ಇನ್ನೊಂದು ಸಾಕ್ಷಿಯಾಗಬಹುದು. ಅಯ್‌ಗಳು ಅಥವಾ ಅಯ್ಯಗಳೇ ಐಗಳಾಗಿರಬೇಕು. ಅಯ್ಯ ಎಂಬುದು ಅಂಕಿತನಾಮಗಳಲ್ಲಿ ಪುರುಷವಿಶೇಷವಾಚಕವಾಗಿ, ವಿಶೇಷ ಹೆಸರಾಗಿ (Surname) ಬಳಸಲಾಗುತ್ತದೆ. ಮಾದಾರ ಚೆನ್ನಯ್ಯ, ಅಂಬಿಗರ

ಕಾಳಿದಯ್ಯ, ಇತ್ಯಾದಿ, 'ಅಯ್ಯ' ದ್ರಾವಿಡ ಭಾಷೆಗಳಲ್ಲೆಲ್ಲಾ ಇವೆ. ತುಳುನಾಡಿನಲ್ಲಿ ತುಳು ಮಾತನಾಡುವವರು ಉನ್ನತ ವರ್ಗದವರನ್ನು, ಬ್ರಾಹ್ಮಣರನ್ನು ಅಯ್ಯ ಎನ್ನುತ್ತಾರೆ. ತುಳುವಿನಲ್ಲಿ ಆಯೆ (ಅವನು) ಎಂಬ ಶಬ್ದವೂ ಇದೇ ಮೂಲದ್ದಿರಬೇಕು. ಕನ್ನಡದಲ್ಲಿ ಅವನು ಎಂದಿರುವಂತೆ ಆಯೆ. ಆಯ್ ಅಥವಾ ಆಯ್ 'ಎ' ಆಗುವುದಿದೆ. ಅದೇ ರೀತಿ ತುಳುವಿನಲ್ಲಿ ಅಕಾರಾಂತದಲ್ಲಿ ಪುಲ್ಲಿಂಗಸೂಚಕವಾದಿ ತೋರುವ-ಉದಾ: ರಾಮೆ, ಕೃಷ್ಣೆ ಎಕಾರ ಹೀಗೆ ರೂಪಾಂತರ ಹೊಂದಿರಬಹುದು. ಪುಲ್ಲಿಂಗದಲ್ಲಿ ಮಾತ್ರ ಈ 'ಎ' ಬರುವುದರಿಂದ ಹಾಗೆ ಊಹಿಸಲೆಡೆಯಿದೆ. ಅವ್-ಓ ಆಗುತ್ತದೆ. ತುಳುವಿನಲ್ಲಿ ಅವ್ = ಅದು, ಇದೇ ಓ ಆಗಿ ಅಕಾರಾಂತ ನಪುಂಸಕಲಿಂಗ ಶಬ್ದಗಳಿಗೆ ಸೇರಿರಬಹುದೇ? ನಪುಂಸಕಲಿಂಗ ಸೂಚಕವಾಗಿ, ಉದಾ: ಮರೋ (ಮರ), ನಾಗೋ (ನಾಗ), ಗುಂಟೊ (ಗೂಟ).

ಇದೇ ರೀತಿ ಔ ವಿಚಾರವೂ ಕೂಡ, ಇದರ ಉಚ್ಚಾರ 'ಅವ್'. ಇದೂ ದ್ರಾವಿಡದಲ್ಲಿ ಸಂಸ್ಕೃತದಂತೆ ಸಂಧಿಸ್ವರವಲ್ಲ, ಸವ್ಯಂಜನ ಅಕ್ಷರ, ಇದರ ಬಗ್ಗೆ ಕಾಲ್ಡ್‌ವೆಲ್ ಹೇಳಿದ್ದಾರೆ.[18] — ದ್ರಾವಿಡ ಭಾಷೆಗಳಲ್ಲಿ ಈ ಧ್ವನಿಯಿಲ್ಲ. ಸಂಸ್ಕೃತದಿಂದ ಅನುಕರಿಸಲಾಗಿದೆ. ಅ, ಉಗಳನ್ನು ಕೂಡಿಸಿ ಅವ್ ಎಂದುಂ ಉಚ್ಚರಿಸಲೂ; ಬರೆಯಲೂ ಆಗುತ್ತದೆ. ಉದಾ: ಸೌಖ್ಯಂ-ಸವ್ಖ್ಯಂ ॥ ಎಂಬ ಆವರ ಮಾತು ಕನ್ನಡಕ್ಕೂ ಹೊಂದುತ್ತದೆ. ಔಕಾರವಿಲ್ಲದೆ 'ಅವ್' ನಿಂದಲೇ ನಮ್ಮ ಕೆಲಸ ಸಾಗುತ್ತದೆ. ಉದಾ: ಕವುಂಗು (ಕೌಂಗು) ಸಂಸ್ಕೃತ ಶಬ್ದಗಳ ಅನುಕರಣೆಗಾಗಿ ಸೌಲಭ್ಯಕ್ಕಾಗಿ 'ಔ'ವನ್ನು ಇರಿಸಿಕೊಳ್ಳಲಾಗಿದೆ. ಹಲವಾರು ಆಧುನಿಕ ವಿದ್ವಾಂಸರು ಈ ಎರಡು ವರ್ಣಗಳ ಬಗ್ಗೆ ಚರ್ಚಿಸಿ ಇವು ಅಚ್ಚಗನ್ನಡಕ್ಕೆ ಅನವಶ್ಯವೆಂದು ತೀರ್ಮಾನಿಸಿದ್ದಾರೆ (ಕನ್ನಡ ಕೈಪಿಡಿಕಾರರು). ಕನ್ನಡ ಕೈಪಿಡಿಯಲ್ಲಿ[19] ತೋಗೆರೆ ನಂಜುಂಡ ಶಾಸ್ತ್ರಿಯವರು ತಮ್ಮ "ಕರ್ಣಾಟಕ ವರ್ಣಸಮಾಮ್ನಾಯಂ" ಎಂಬ ಲೇಖನದಲ್ಲಿ[20] ಈ ಕುರಿತು ಚರ್ಚಿಸಿದ್ದಾರೆ. ಪ್ರ. ಗೋ. ಕುಲಕರಣಿ ಅವರು "ಕನ್ನಡ ಭಾಷೆಯ ಚರಿತ್ರೆ" ಎಂಬ ಗ್ರಂಥದಲ್ಲಿ ಈ ಕುರಿತು ಚರ್ಚಿಸಿದ್ದಾರೆ.[21] ಸಂಗಮೇಶ ಸವದತ್ತಿಮಠ ಅವರು 'ದ್ರಾವಿಡ ಸಂಧ್ಯಕ್ಷರಗಳು'[22] ಎಂಬ ಲೇಖನದಲ್ಲಿ ಕನ್ನಡದಲ್ಲಿ ಈಗಾಗಲೇ ಅ, ಯ್, ವ್ ಇರುವುದರಿಂದ ಐ, ಔಗಳನ್ನು ಬಿಟ್ಟರೆ ವರ್ಣಗಳ ಸಂಖ್ಯೆ ಭೌತಿಕವಾಗಿ ಎರಡು ಕಡಿಮೆಯಾಗುವುದರಿಂದ ಇವುಗಳನ್ನು ವರ್ಣಮಾಲೆಯಿಂದ ತೆಗೆದುಹಾಕುವುದರಿಂದ ಯಾವ ಕೊರತೆಯೂ ಆಗುವುದಿಲ್ಲ. "ಅಯ್"ನ್ನು ಸಂಧ್ಯಕ್ಷರವೆಂದು ಪರಿಗಣಿಸಿ ಐ ಎಂಬ ಚಾಕ್ಷುಷ ರೂಪವನ್ನು ಕೊಟ್ಟಿರುವಂತೆ 'ಆಯ್' ರೂಪವನ್ನು ದೀರ್ಘ ಸಂಧ್ಯಕ್ಷರವೆಂದು ಪರಿಗಣಿಸಿ ಅದಕ್ಕೊಂದು ಹೊಸ ಚಾಕ್ಷುಷ ರೂಪವನ್ನೇಕೆ ಕೊಡಬಾರದೆಂದು ತರ್ಕಿಸಿದ್ದಾರೆ.

ಕನ್ನಡ ಶಬ್ದಗಳ ಮಧ್ಯದಲ್ಲಿರುವ ವ,ಯಕಾರಗಳಿಗೆ ಔ, ಐಕಾರಗಳೂ ಪದಾಂತ್ಯದ ಅಕಾರಕ್ಕೆ ಒಕಾರವೂ ಬರುತ್ತವೆಂದು ಕೇಶಿರಾಜ "ಪದಮಧ್ಯವತ್ವಯುತ್ವಕ್ಕೊದವುಗುವೌತ್ವೈತ್ವವಿಧಿಯುದಂತಕ್ಕೊತ್ವಂ" ಎಂದು. ಕೌಂಗು-ಕವುಂಗು. ಕಯ್ವಾರ–

ಕೈವಾರಂ, ಅವಂ-ಅವೊಂ ಉದಾಹರಿಸಿದ್ದಾನೆ.[23] ಇದೇ ರೀತಿ ಭಾಷಾ ಭೂಷಣದಲ್ಲಿ[24] ಶಬ್ದಸ್ಮೃತಿ[25]ಯಲ್ಲೂ ನಿರೂಪಿಸಲಾಗಿದೆ.

ಐ ಔ ಕಾರಗಳು, ಅಯ್, ಅವ್‌ಗಳಿಗೆ ಆದೇಶವಾಗಿ ಬರುವವೆಂಬುದರಿಂದ ಮೂಲದಲ್ಲಿರತಕ್ಕವು ಅಯ್, ಅವ್‌ಗಳೇ ಎಂಬುದನ್ನು ಈ ವೈಯಾಕರಣರೂ ಭಾವಿಸಿದಂತಿದೆ. ಆದರೆ, ಐ, ಔ ಕನ್ನಡಕ್ಕೆ ಬೇಕಿಲ್ಲವೆನ್ನಲಿಲ್ಲ. ಏಕೆಂದರೆ, ಸಂಸ್ಕೃತದಲ್ಲಿ ಅವು ಇವೆ. ಸಂಸ್ಕೃತ ಶಬ್ದಗಳು ಕನ್ನಡಕ್ಕೆ ಬರುವಾಗ ಅವನ್ನು ಬಳಸಬೇಕಾಗುತ್ತದಲ್ಲಾ ಎಂದಿರಬಹುದು. ಸಂಸ್ಕೃತ ಶಬ್ದಗಳನ್ನೇ ಆದರೂ ಕನ್ನಡದ ರೀತಿಯಲ್ಲಿ ಬರೆದರೆ ತಪ್ಪಾಗದೆನ್ನಿಸುತ್ತದೆ, ತಮಿಳಿನಲ್ಲಿರುವಂತೆ ಐ, ಔಗಳೆರಡನ್ನೂ ಬಿಟ್ಟರೆ ಎರಡಕ್ಷರಗಳು ಕಡಿಮೆಯಾಗುತ್ತವೆ. ಮುದ್ರಣ, ಬೆರಳಚ್ಚುಗಳಿಗೂ ಸೌಕರ್ಯ, ಯ್, ವ ಕಾರಗಳು ಹೇಗೂ ಬೇಕಾಗುವುದರಿಂದ ಅವನ್ನು ಬಿಡಲಾಗುವುದಿಲ್ಲ.

ಈ ವಿಸ್ತೃತ ವಿವೇಚನೆಯಿಂದ ತಿಳಿದು ಬರುವ ಮುಖ್ಯ ವಿಚಾರಗಳೆಂದರೆ—

ಏ. ಐ, ಓ, ಔಗಳಿಗೆ ಸಂಸ್ಕೃತದಲ್ಲಿ ಸಂಧ್ಯಕ್ಷರಗಳೆಂಬ ಹೆಸರು ಸಾರ್ಥಕವಾಗಿ ಸಲ್ಲುತ್ತದೆ. ಸಂಧ್ಯಕ್ಷರಗಳಾದರೂ ಇವುಗಳಲ್ಲಿ ಏ, ಐ, ಓ, ಔಗಳಿಗೆ ಕ್ರಮವಾಗಿ ಯ, ವಗಳ ಧ್ವನಿಸಂಬಂಧ ಕೆಲವೆಡೆ ಬರುತ್ತದೆ. ಆದರೂ ಸಂಸ್ಕೃತದಲ್ಲಿ ಶುದ್ಧ ಸಂಧಿ ಸ್ವರಗಳಾದ ಇವು ಅನಿವಾರ್ಯ, ಸಂಸ್ಕೃತದಲ್ಲಿ ಏ, ಓಗಳಿಗೆ ಹ್ರಸ್ವಗಳಿಲ್ಲ.

ಕನ್ನಡದಲ್ಲಿ ಹ್ರಸ್ವ ಎ ಒ ಗಳು ಮತ್ತು ಅವುಗಳ ದೀರ್ಘಗಳು ಸಹಜವಾಗಿವೆ. ಆದರೆ, ಕನ್ನಡದಲ್ಲಿ ಇವು ಸಂಧಿಸ್ವರಗಳಲ್ಲ. ಐ ಔಗಳು ಸಹಜವಾಗಿ ಅಚ್ಚ ಕನ್ನಡದಲ್ಲಿಲ್ಲ, ಇವು ಸಂಸ್ಕೃತದಿಂದ ಬಂದುವು. ಅಯ್. ಅವ್ ಎಂಬ ವ್ಯಂಜನಯುಕ್ತ ಅಕಾರಗಳೇ ಇವುಗಳ ಕೆಲಸವನ್ನು ಮಾಡುವುದರಿಂದ ಇವು ಬೇಕಾಗಿಲ್ಲ. ಸಂಸ್ಕೃತ ಶಬ್ದಗಳನ್ನು ಕನ್ನಡದಲ್ಲಿ ಬಳಸಲಾಗುವುದರಿಂದ ಇವು ಉಳಿದುಕೊಂಡಿವೆ.

ಟಿಪ್ಪಣಿಗಳು

1. ಶ. ಮ. ದ. ಕಿಟ್ಟೆಲ್ ಪ್ರತಿ. ಸೂ. ೧೦.
2. ಕಾತಂತ್ರ ಸೂತ್ರ ೮
3. ಮಹಾಭಾಷ್ಯ, ಪತಂಜಲಿ ಪುಟ ೪೧
4. ಅದೇಙ್ಗುಣಃ ೧-೧-೨, ಲಘು ಸಿದ್ಧಾಂತ ಕೌಮುದೀ
5. ಕೇಶಿರಾಜನ ಶಬ್ದಮಣಿ ದರ್ಪಣ-ಜೆ. ಎಸ್. ಕುಳ್ಳಿ – ಪುಟ 58
6. ಏಚೋಽಯವಾಯಾವಃ ೬-೧-೭೮ ಲಘು ಸಿ. ಕೌ.

7. ವೃದ್ಧಿರಾದೈಚ್. ೧-೧-೧. ಅದೇ
8. ವೃದ್ಧಿರೇಚಿ, ೬-೧-೮೮. ಅದೇ
9. ಸಂಸ್ಕೃತ ವ್ಯಾಕರಣಕಾ ಉದ್ಭವ ಔರ್ ವಿಕಾಸ್, ಸತ್ಯಕಾಮ ವರ್ಮಾ ಪುಟ 454
10. ಶ. ಮ. ದ. ಕಿಟ್ಟೆಲ್ ಪ್ರತಿ. ಸೂತ್ರ ೮
11. ಕರ್ಣಾಟಕ ಭಾಷಾ ಭೂಷಣ ಸೂತ್ರ ೫
12. ಮಹಾಭಾಷ್ಯ, ಪುಟ ೬೭
13. ತೈತ್ತಿರೀಯ ಪ್ರಾತಿಶಾಖ್ಯ. ಪುಟ ೮
14. ದ್ರಾವಿಡೀಯ ತುಲನಾತ್ಮಕ ವ್ಯಾಕರಣ. ಪುಟ 130, 126
15. ಶ. ಮ. ದ. ಕಿಟ್ಟೆಲ್ ಪ್ರತಿ. ಸೂತ್ರ ೫೨, ಕರ್ಣಾಟಕ ಶಬ್ದಾನುಶಾಸನ ಸೂತ್ರ ೩೬, ಕರ್ಣಾಟಕ ಭಾಷಾ ಭೂಷಣ ಸೂತ್ರ ೧೨
16. ಕರ್ಣಾಟಕ ಶಬ್ದಾನುಶಾಸನ. ೪೪೨ರ ವ್ಯಾಖ್ಯಾನ.
17. ಕನ್ನಡದ ವರ್ಣಗಳು. ಪುಟ ೬೧
18. ದ್ರಾವಿಡೀಯ ತುಲನಾತ್ಮಕ ವ್ಯಾಕರಣ. ಪುಟ ೧೩೬
19. ಕನ್ನಡ ಕೈಪಿಡಿ I ಪುಟ ೩೦೪
20. ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ. ಸಂ ೫ ಸಂ ೩
21. ವರ್ಣಕಾಂಡ. ಪುಟ ೧೪೫
22. ಕರ್ನಾಟಕ ಭಾರತಿ. ಸಂ ೮. ಸಂ. ೨
23. ಶ, ಮ. ದ. ಕಿಟ್ಟೆಲ್ ಪ್ರತಿ ಸೂತ್ರ ೧೫೨
24. ಸೂತ್ರ ೧೨೩
25. ಸೂತ್ರ ೬೬

X X X X

೧೭. "ವಿಭಕ್ತಿ ಕೂಡೆ ಬಂದಿರದೆಯುಂ – – –"

— ಶ್ರೀ ಪಿ. ಶ್ರೀಕೃಷ್ಣಭಟ್, ಕಾಸರಗೋಡು.

'ಕಾರಕ ಸಂಪದವಿರುವಲ್ಲಿ ವಚನ ದೋಷ ಅಲ್ಪ' ಎಂಬ ವಿವರಣೆ ಕವಿರಾಜಮಾರ್ಗದಲ್ಲಿ ಇಂತಿದೆ—

"ಬೆರೆಸಿರೆ ಮುಂ ಸಮುಚ್ಚಯ ಪದ ದ್ವಿತಯೋಕ್ತಿ ವಿಭಕ್ತಿ ಕೂಡೆ ಬಂ
ದಿರದೆಯುಮೇಕ ವಾಕ್ಯದೊಳೆ ಕಾರಕ ಸಂಪದಮಂ ತಗುಳ್ಚುಗುಂ
ನರಪತಿಯುಂ ನೃಪಾಂಗನೆಯರುಂ ನೆರೆದಚ್ಚಿಯಿನಾಡಿ ಪೋದರಾ
ಪರಿಜನಮುಂ ಮಹೋತ್ಸವದೊಳೊಂದಿದುದೆಂಬುದಿದಲ್ಪದೂಷಿತಂ" I. ೧೨೧,

ವಿದ್ವಾಂಸರು ಹೇಳುವಂತೆ "ವಿಭಕ್ತಿ ಪ್ರತ್ಯಯಗಳು ಎರಡು ಕರ್ತೃಪದಗಳೊಳಗೆ ಒಂದೇ ರೀತಿಯಲ್ಲಿ (ಕೂಡೆ) ಇರದಿದ್ದರೂ ಅವುಗಳ ಮುಂದೆ ಒಂದೇ ಕ್ರಮವಾಗಿ ಎರಡು ಸಮುಚ್ಚಯಗಳು ಬೆರಸಿಕೊಂಡಿದ್ದರೆ ಅವುಗಳಿಗೆ ಏಕವಾಕ್ಯದಲ್ಲಿ ಕಾರಕ ಸಂಪದವುಂಟಾಗುವದು"[1] ಎಂದೀ ಪದ್ಯದ ಪೂರ್ವಾರ್ಧದ ತಾತ್ಪರ್ಯ. ಉತ್ತರಾರ್ಧ ಈ ಲಕ್ಷಣಕ್ಕೆ ಲಕ್ಷ್ಯವಾಗಿದೆ.

"ನರಪತಿಯುಂ ನೃಪಾಂಗನೆಯರುಂ ನೆರೆದಚ್ಚಿಯಿಂ ಆಡಿಪೋದರ್"

"ಆ ಪರಿಜನಮುಂ ಮಹೋತ್ಸವದೊಳ್ ಒಂದಿದುದು".

ಇಲ್ಲಿನ ಮೊದಲ ವಾಕ್ಯ ವಿಚಾರಿಸತಕ್ಕುದಾಗಿದೆ 'ನರಪತಿ' ಮತ್ತು 'ನೃಪಾಂಗನೆಯರ್'—ಈ ಎರಡು ಕರ್ತೃಪದಗಳೂ 'ಉಂ' ಎಂಬ ಸಮುಚ್ಚಯವನ್ನು ಪಡೆದಿವೆ. ಆ ಮಟ್ಟಿಗೆ ಲಕ್ಷಣದಲ್ಲಿ ಹೇಳಿದುದಕ್ಕೆ ಅದು ಸಮರ್ಪಕವಾಗಿದೆ. ಆದರೆ 'ವಿಭಕ್ತಿ ಕೂಡೆ ಬಂದಿರದೆಯುಂ' ಎಂಬ ಲಕ್ಷಣಕ್ಕೆ ಮಾತ್ರ ಅವು ಉದಾಹರಣೆಯಾಗಲಾರವು. ಹಳಗನ್ನಡ ವ್ಯಾಕರಣ ಮಾರ್ಗದೆಗನುಸರಿಸಿ ಹೇಳುವುದಾದರೆ ಆ ಕರ್ತೃಪದಗಳೆರಡೂ ಪ್ರಥಮಾ ವಿಭಕ್ತಿಯಲ್ಲಿವೆ, ಎಂದರೆ ವಿಭಕ್ತಿ ಕೂಡಿಬಂದಿದೆ. ಹಾಗಿರಲು ಲಕ್ಷ್ಯ ಲಕ್ಷಣ ಸಮನ್ವಯ ಹೇಗೆ?

ವಿದ್ವಾಂಸರು ಮೇಲಿನ ಪದ್ಯದ ಅರ್ಥವನ್ನು ಹೊಂದಿಸುವ ಸಲುವಾಗಿ "ಇಲ್ಲಿಯ 'ವಿಭಕ್ತಿಕೂಡೆ ಬಂದಿರದೆಯುಂ' ಎಂಬುದಕ್ಕೆ 'ಹಿಂದಿನ ಪದಗಳೆರಡರ ವಿಭಕ್ತಿಗಳೂ ಒಂದೇ ರೀತಿಯಲ್ಲಿ ಕೂಡಿ ಇಲ್ಲವಾದರೂ'—ಎಂದರೆ 'ಒಂದು ಏಕವಚನ ಸೂಚಕವಾಗಿ ಇನ್ನೊಂದು ಬಹುವಚನ ನಿರೂಪಕವಾಗಿದ್ದರೂ'—ಎಂಬರ್ಥವೆಂಬುದನ್ನು ಅವಗಾಹಿಸಿಕೊಳ್ಳಬೇಕು[2] ಎಂದು ಸೂಚಿಸಿದ್ದಿದೆ, "ಇಲ್ಲಿ ವಿಭಕ್ತಿಯೆಂದರೆ ವಚನಸೂಚಕ ಪ್ರತ್ಯಯ"[3] ಎಂಬ ಅಭಿಪ್ರಾಯವೂ ಇದೆ. ಪ್ರಯೋಗವನ್ನು ನೋಡಿದರೆ ಈ ಅಭಿಪ್ರಾಯವನ್ನು ಒಪ್ಪದೆ ಗತ್ಯಂತರವಿಲ್ಲ. ಆದರೆ ಹಾಗೆ ಕನ್ನಡವ್ಯಾಕರಣದಲ್ಲಿ ಅಭ್ಯಸಲೆಡೆಯಿದೆಯೇ ಎಂಬುದು ಪ್ರಶ್ನೆ, ಕನ್ನಡ ಭಾಷೆಯಲ್ಲಿ (ನಾಮ) ವಿಭಕ್ತಿ ಪ್ರತ್ಯಯ ಬೇರೆ, ವಚನ

ಪ್ರತ್ಯಯು ಬೇರೆ[4], ಕನ್ನಡ ವೈಯಾಕರಣರಾರೂ 'ವಚನ ಸೂಚಕ ಪ್ರತ್ಯಯ' ಎನ್ನುವ ಅರ್ಥದಲ್ಲಿ ವಿಭಕ್ತಿ ಎನ್ನುವ ಪದಪ್ರಯೋಗ ಮಾಡಿದಂತಿಲ್ಲ. 'ವಾಗಧಿಪ'ನಾದ ಕವಿರಾಜ ಮಾರ್ಗಕಾರನ ನಿರೂಪಣೆಯಲ್ಲಿ ಇಂತಹ ಒಂದು ಸಾಮಾನ್ಯ ದೋಷ ತಲೆಯಿಕ್ಕಲವಕಾಶ ವಿಲ್ಲ. ಹಿಂದೆ ಹೇಳಿದ [5] "ವಿಭಕ್ತಿಗಳೇೞನಿಕ್ಕುಂ', 'ವಚನಮೇಕ ಬಹುಕ್ರಮದಿಂದೆರಡುತೆ[3] ರಕ್ಕೆ' ಎಂಬ ಮಾತುಗಳು ಅವನ ಶುದ್ಧ ಶಾಸ್ತ್ರದೃಷ್ಟಿಗೆ ಸಾಕ್ಷಿಯಾಗಿವೆ. ಹೀಗಿರಲು, 'ವಚನಸೂಚಕ ಪ್ರತ್ಯಯ' ಎಂಬರ್ಥದಲ್ಲಿ 'ವಿಭಕ್ತಿ'ಯೆಂಬ ಪದಪ್ರಯೋಗಕ್ಕೆ ಭದ್ರವಾದ ಹಿನ್ನೆಲೆಯೊಂದು ಇದ್ದೇ ಇರಬೇಕೆಂದು ಅನ್ನಿಸಿದರೆ ಆಶ್ಚರ್ಯವಿಲ್ಲ. ಅದನ್ನು ಕಾಣುವ ಪ್ರಯತ್ನ ಮಾಡುವುದವಶ್ಯ.

ಹಳಗನ್ನಡ ವ್ಯಾಕರಣದ ಹೆಚ್ಚಿನ ಪಾರಿಭಾಷಿಕ ಪದಗಳು ಸಂಸ್ಕೃತ ವ್ಯಾಕರಣ ದಿಂದ ನೇರವಾಗಿ ಎತ್ತಿಕೊಂಡವುಗಳಾಗಿವೆ. ಅಂತಹವುಗಳಲ್ಲಿ 'ವಿಭಕ್ತಿ'ಯೂ ಒಂದು, ಸಂಸ್ಕೃತ ಭಾಷೆಯಲ್ಲಿ 'ಸುಪ್' ವಿಭಕ್ತಿಗಳು ಒಂದೆಡೆ ವಿಭಕ್ತಿಗಳ (Case affixed) ಕಾರ್ಯ ವೆಸಗಿದರೆ ಇನ್ನೊಂದೆಡೆಯಲ್ಲಿ ವಚನದ (number) ಕಾರ್ಯಭಾರವನ್ನೂ ನಿಭಾಯಿಸುತ್ತವೆ. ಆದುದರಿಂದ ಮೂರು ವಚನಗಳಿಗೆ ಹೊಂದಿಕೊಂಡು ಪ್ರಥಮಾದಿ ವಿಭಕ್ತಿಗಳಲ್ಲಿ ಪ್ರತಿ ಯೊಂದರಲ್ಲೂ ಮೂರು ಮೂರು (ವಿಭಕ್ತಿ) ಪ್ರತ್ಯಯಗಳಿವೆ, [6] ಕನ್ನಡದಲ್ಲಾದರೋ ವಚನ ಪ್ರತ್ಯಯಕ್ಕಿಂತ ವಿಭಕ್ತಿ ಪ್ರತ್ಯಯ ಭಿನ್ನವಾಗಿದೆ. ಆದುದರಿಂದ ವಚನಕ್ಕೆ ಹೊಂದಿ ಕೊಂಡು ವಿಭಕ್ತಿ ಪ್ರತ್ಯಯದಲ್ಲಿ ಯಾವ ಭೇದವೂ ಇಲ್ಲ. ನಾಮಪದ ನಿರ್ಮಾಣದಲ್ಲಿ ಸಂಸ್ಕೃತ ಮತ್ತು ಕನ್ನಡಕ್ಕಿರುವ ಅಂತರದಿಂದ ಈ ವಿಚಾರವನ್ನು ಖಚಿತಪಡಿಸಬಹುದು:

I ಸಂಸ್ಕೃತ.

೧. ಏಕವಚನ: ನಾಮ ಪ್ರಕೃತಿ + ಪ್ರತ್ಯಯ (ನಾಮ ವಿಭಕ್ತಿ + ಏಕವಚನ)
= ನಾಮಪದ. ಉದಾ:- ರಾಮಂ, ಹರಿಂ ಇತ್ಯಾದಿ.

೨. ದ್ವಿವಚನ: ನಾಮಪ್ರಕೃತಿ + ಪ್ರತ್ಯಯ (ನಾಮವಿಭಕ್ತಿ + ದ್ವಿವಚನ)
= ನಾಮಪದ, ಉದಾ:- ರಾಮೌ, ಹರೀ, ಇತ್ಯಾದಿ.

೩. ಬಹುವಚನ: ನಾಮಪ್ರಕೃತಿ + ಪ್ರತ್ಯಯ (ನಾಮವಿಭಕ್ತಿ + ಬಹುವಚನ)
= ನಾಮಪದ. ಉದಾ;- ರಾಮಾನ್, ಹರೀನ್ ಇತ್ಯಾದಿ.

II ಕನ್ನಡ.

೧. ಏಕವಚನ: ನಾಮ ಪ್ರಕೃತಿ + ಪ್ರತ್ಯಯ (ನಾಮ ವಿಭಕ್ತಿ) = ನಾಮಪದ.
ಉದಾ:- ರಾಮನನ್ನು, ಹರಿಯನ್ನು ಇತ್ಯಾದಿ.

೨. ಬಹುವಚನ: ನಾಮಪ್ರಕೃತಿ + ಬಹುವಚನ ಪ್ರತ್ಯಯ + ಪ್ರತ್ಯಯ (ನಾಮವಿಭಕ್ತಿ) = ನಾಮಪದ.

ಉದಾ:– ರಾಮರನ್ನು, ಹರಿಯರನ್ನು ಇತ್ಯಾದಿ.

ಈ ತುಲನೆಯಿಂದ ಸಂಸ್ಕೃತ – ಕನ್ನಡ ಭಾಷೆಗಳ ವ್ಯವಸ್ಥೆಯಲ್ಲಿರುವ ವ್ಯತ್ಯಾಸ ಸರಿಯಾಗಿ ಮನವರಿಕೆಯಾಗಬಹುದು, ಸಂಸ್ಕೃತದಲ್ಲಿ ವಿಭಕ್ತಿ ಬೇರೆಯೆಂದೊಡನೆ ವಚನವೂ ಬೇರೆಯೆಂದು ಅರ್ಥೈಸಲೆಡೆಯಿದೆ. ಏಕೆಂದರೆ ವಚನಕ್ಕೆ ಹೊಂದಿಕೊಂಡು ಅಲ್ಲಿ ವಿಭಕ್ತಿ ಪ್ರತ್ಯಯದಲ್ಲಿ ಅಂತರವಿದೆ, ಕನ್ನಡದಲ್ಲಿ ವಿಭಕ್ತಿ ಬೇರೆಯೆಂದೊಡನೆ ವಚನ ಬೇರೆಯಾಗಬೇಕೆಂದಿಲ್ಲ. ಒಂದೇ ವಿಭಕ್ತಿಯು (ಪ್ರಥಮಾ, ದ್ವಿತೀಯಾ ಇತ್ಯಾದಿ) ಎರಡು ವಚನಗಳಲ್ಲಿ (ವಿಭಕ್ತಿ) ಪ್ರತ್ಯಯ ಬೇರೆ ಬೇರೆಯಾಗುವ (ಉಚ್ಚಾರ ಸಂಬಂಧವಾದ ವ್ಯತ್ಯಾಸವನ್ನು ಬಿಟ್ಟು) ಸಾಧ್ಯತೆಯೂ ಕನ್ನಡದಲ್ಲಿಲ್ಲ, ಈ ಹಿನ್ನೆಲೆಯಲ್ಲಿ ಕವಿರಾಜಮಾರ್ಗಕಾರನ ನಿರೂಪಣೆಯನ್ನು ಅವಲೋಕಿಸಬೇಕು. ಆತನು 'ವಿಭಕ್ತಿ ಕೂಡೆ ಬಂದಿರದೆಯುಂ' ಎಂದು ಸಂಸ್ಕೃತ ವ್ಯಾಕರಣವನ್ನನುಸರಿಸಿ ಹೇಳಿರುವನು. ಅವನ ಉದ್ದಿಷ್ಟ ಅರ್ಥ 'ವಚನಂ ಕೂಡಿ ಬಂದಿರದೆಯುಂ' ಎಂಬುದೇ ಆಗಿದೆ. ಕನ್ನಡ ಭಾಷೆಯ ಸ್ವಭಾವವನ್ನನುಸರಿಸಿ ಹೇಳುವುದಾದರೆ ಈ ಅರ್ಥದಲ್ಲಿ ಹಾಗೆ ಹೇಳಲು ಬರುವುದಿಲ್ಲವೆನ್ನುವುದು ಅಷ್ಟೇ ಸತ್ಯವೂ ಹೌದು. (ಏಕೆಂದರೆ, ಕನ್ನಡದಲ್ಲಿ ವಚನಪ್ರತ್ಯಯವನ್ನು ಪಡೆದ ಮಾತ್ರಕ್ಕೆ ಪ್ರಕೃತಿಗೆ 'ಪದತ್ವ' ದೊರಕಲಾರದು.) ಕವಿರಾಜಮಾರ್ಗಕಾರ ಸಂಸ್ಕೃತದ ಪಾರಿಭಾಷಿಕ ಪದವೊಂದನ್ನು ಅಲ್ಲಿನ ಅರ್ಥದಲ್ಲಿಯೇ ಸ್ವೀಕರಿಸಿ ಕಣ್ಣುಮುಚ್ಚಿ ಕನ್ನಡದಲ್ಲಿ ಪ್ರಯೋಗಿಸಿದುದಕ್ಕೆ ಇದೊಂದು ದೃಷ್ಟಾಂತವಾಗಬಹುದು, ಕವಿರಾಜಮಾರ್ಗದಲ್ಲಿ ಇದೊಂದು ಸಂದರ್ಭ ಬಿಟ್ಟರೆ ಬೇರೆಲ್ಲಿಯೂ 'ವಿಭಕ್ತಿ' ಎನ್ನುವ ಪದ ಈ ಅರ್ಥದಲ್ಲಿ ಪ್ರಯೋಗವಾಗಿಲ್ಲವೆಂಬುದೂ ಗಮನಾರ್ಹ.

ವಚನ ಪ್ರತ್ಯಯಗಳನ್ನು ವಿವರಿಸುವಲ್ಲಿ ಹಳೆಗನ್ನಡ ವೈಯಾಕರಣರು ಭಿನ್ನ ದೃಷ್ಟಿ ಹೊಂದಿದ್ದಾರೆ. ಕನ್ನಡದ ವಚನ ಪ್ರತ್ಯಯಗಳನ್ನು "ಪ್ರತ್ಯಯ"ವೆನ್ನಬೇಕೇ, ಅಲ್ಲ ಬೇಡವೇ? — ಕೆಲವರಿಗೆ ಇದೊಂದು ಪ್ರಶ್ನೆಯಾಗಿದ್ದಂತೆ ಭಾಸವಾಗುತ್ತದೆ. 'ವಚನ ಪ್ರತ್ಯಯ'ವೆನ್ನೋಣವೆಂದರೆ ಸಂಸ್ಕೃತದಲ್ಲಿ ಹಾಗೆ ಕರೆಯಿಸಿಕೊಳ್ಳುವ ಪ್ರತ್ಯಯವಿಲ್ಲ [7]. ಪ್ರತ್ಯಯ ಸ್ವರೂಪದಲ್ಲಿ ವ್ಯಕ್ತವಾಗುವ ಬಹುವಚನ ಸೂಚಕ ಅಂಶಗಳನ್ನು ಅವಗಣಿಸುವಂತೆಯೂ ಇಲ್ಲ. ಸಂಸ್ಕೃತದಂತೆ ವಿಭಕ್ತಿಗಳಲ್ಲಿ ಅವುಗಳನ್ನು ಅಂತರ್ಗತಗೊಳಿಸುವುದು ಕಷ್ಟಸಾಧ್ಯ. ಈ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಿ ಅವರು ವಚನ ಪ್ರತ್ಯಯಗಳನ್ನು 'ಶಬ್ದ' ಎಂದಾಗಲಿ, 'ಆಗಮ' ಎಂದಾಗಲಿ ಕರೆಯಬೇಕಾಯಿತು. ಕರ್ಣಾಟಕ ಶಬ್ದಾನುಶಾಸನದಲ್ಲಿ ಮಾತ್ರ 'ಗಳ್', 'ಅರ್' ಇತ್ಯಾದಿ ಬಹುವಚನ ಸೂಚಕಗಳಿಗೆ 'ಪ್ರತ್ಯಯ' ಎಂಬ ವರ್ಗನಾಮ ಲಭ್ಯವಾಗಿದೆ.

೧. "ಆವಱಿೊಳ್ ದ್ವಿತ್ವ ಬಹುತ್ವಂ
ಬವರಿಸೆ ತಳ್ತಿರ್ಕುಮಲ್ಲಿ ಗಳ್ ಶಬ್ದಂ"......... ಶಬ್ದಸ್ಮೃತಿ ಸೂತ್ರ ೧೭

೨. "ತಾಸಾಂ ವಿಭಕ್ತೀನಾಮಾದೌ ದ್ವಿತ್ವ ಬಹುತ್ವ ವಿಷಯೇ ವಿವಕ್ಷಿತೇ
ಗಳಾಗಮೋ ಭವತಿ" —— ಕರ್ಣಾಟಕ ಭಾಷಾ ಭೂಷಣ; ಸೂತ್ರ ೪೦ ರ ವೃತ್ತಿ

೩. "ಸಮನಿಸುಗುವಾ ವಿಭಕ್ತಿಗೆ
ಳ ಮೊದಲೊಳಾದಂ ಗಳಾಗಮಂ ದ್ವಿತ್ವ ಬಹು
ತ್ವಮದಾಗೆ ...." ಶಬ್ದಮಣಿದರ್ಪಣ ಸೂತ್ರ ೧೦೫.

೪. "ಲಿಂಗಾತ್ 'ಗಳ್' ಪ್ರತ್ಯಯೋ ಭವತಿ ಅನೇಕತ್ವೇ ಸುಪಿ ಪರೇ"
—ಕರ್ಣಾಟಕ ಶಬ್ದಾನುಶಾಸನ ಸೂತ್ರ ೨೩೨ ರ ವೃತ್ತಿ.

ಒಂದು ಭಾಷೆಗೆ ವ್ಯಾಕರಣವನ್ನು ರಚಿಸುವಲ್ಲಿ ಅಥವಾ ಒಂದು ವ್ಯಾಕರಣಾಂಶವನ್ನು ಹೇಳುವಲ್ಲಿ ಆಗತ್ಯವೆನಿಸಿದಂತೆ ಪಾರಿಭಾಷಿಕ ಪದಗಳನ್ನು ಬಳಸುವುದು ಅನಿವಾರ್ಯ. ಬೇರೊಂದು ಜಾಯಮಾನದ ಭಾಷೆಯ ವ್ಯಾಕರಣದ ಪಾರಿಭಾಷಿಕ ಪದಗಳನ್ನು ಎತ್ತಿಕೊಂಡು ಬಳಸುವುದಿದ್ದಲ್ಲಿ ಅಗತ್ಯವೆನಿಸಿದಂತೆ ಅವುಗಳ ಅರ್ಥವ್ಯಾಪ್ತಿಯಲ್ಲಿ ಬದಲಾವಣೆಯನ್ನು ತರುವುದು ಅವಶ್ಯ. ಇಲ್ಲದಿದ್ದರೆ ಖಚಿತವಾದ ಅರ್ಥವನ್ನೀಯಬೇಕಾದ ಶಾಸ್ತ್ರ ವಿಚಾರಗಳಲ್ಲಿ ಅನ್ಯಾರ್ಥ ಕಲ್ಪನೆಯ ಅಪಾಯವಿದೆ. ಕವಿರಾಜಮಾರ್ಗಕಾರ ವಚನವೆನ್ನಬೇಕಾದಲ್ಲಿ 'ವಿಭಕ್ತಿ' ಯೆಂದಲ್ಲಿ, ಅಂತೆಯೆ ನಾಗವರ್ಮ ಕೇಶಿರಾಜಾದಿಗಳು 'ಗಳ್', 'ಕಳ್', 'ಅರ್' ಇತ್ಯಾದಿ ಆಕೃತಿಮಾಗಳಿಗೆ (Morphene) 'ವಚನಪ್ರತ್ಯಯ'ವೆಂಬ ಅಭಿಧಾನವನ್ನು ಕೊಡದಿರುವಲ್ಲಿ ನಾವದನ್ನೇ ಕಾಣುತ್ತೇವೆ. ಈ ದೃಷ್ಟಿಯಿಂದ ಭಟ್ಟಾಕಳಂಕನದು ದಿಟ್ಟ ಹೆಜ್ಜೆಯೆನ್ನುವುದರಲ್ಲಿ ಸಂದೇಹವಿಲ್ಲ.

ಟಿಪ್ಪಣಿಗಳು

೧. ಕವಿರಾಜಮಾರ್ಗವಿವೇಕ — ಮುಳಿಯ ತಿಮ್ಮಪ್ಪಯ್ಯ (೧೯೭೩)
ಪುಟ ೧೫೨

೨. ಅದೇ ಪುಟ

೩. ಶ್ರೀವಿಜಯಕೃತ ಕವಿರಾಜಮಾರ್ಗ — ಸಂ. ಎಂ. ವಿ. ಸೀತಾರಾಮಯ್ಯ (೧೯೬೮)
ಟಿಪ್ಪಣಿಗಳು ಪುಟ. ೧೭೬.

೪. ಕನ್ನಡ ಆಖ್ಯಾತ ವಿಭಕ್ತಿಗಳ ರೀತಿಯೇ ಬೇರೆ, ಅವುಗಳು ಏಕವಚನ ಮತ್ತು ಬಹು ವಚನಗಳಲ್ಲಿ ಬೇರೆ ಬೇರೆಯಾಗಿವೆ. ಮಾತ್ರವಲ್ಲ, ಅವುಗಳು ತಮ್ಮಲ್ಲಿ ಪುರುಷ ಮತ್ತು ವಚನದ ಅಂಶವನ್ನೂ ಪ್ರಥಮ ಪುರುಷದಲ್ಲಿ ಲಿಂಗದ ಅಂಶವನ್ನೂ ಗರ್ಭೀಕರಿಸಿಕೊಂಡಿವೆ. ಆದುದರಿಂದ ಅಲ್ಲಿ ವಿಭಕ್ತಿ ಬೇರೆಯೆಂದರೆ (ಒಂದೇ ಪುರುಷ ದಲ್ಲಿ) ವಚನ ಬೇರೆಯೆಂದು ತಿಳಿಯಲೆಡೆಯಿದೆ.

೫. ಕವಿರಾಜಮಾರ್ಗ —— ಪದ್ಯ I ೧೧೪.

೬. "ಸುಪಶ್ಚ ತ್ರೀಣಿ ತ್ರೀಣಿ ಪದಾನಿ ಏಕಶ ಏಕವಚನದ್ವಿವಚನ ಬಹುವಚನ ಸಂಜ್ಞಾನಿ ಭವಂತಿ" — ಕಾಶಿಕಾವೃತ್ತಿ — ವಾಮನ ಜಯಾದಿತ್ಯ, ೧–೪–೧೦೩.

೭. ಕನ್ನಡದಲ್ಲಿ ಪ್ರಕೃತಿಯೇ ಏಕವಚನವನ್ನು ಸೂಚಿಸುವುದರಿಂದ ಆದಕ್ಕಾಗಿ ಪ್ರತ್ಯೇಕ ಪ್ರತ್ಯಯದ ವ್ಯವಸ್ಥೆಯಿಲ್ಲ.

XXXXXX

೧೮. ಅಜ್ (ಅಳ್, ಅಲ್) – ಧಾನ್ಯವಾಚಿಯೆ?

—ಶ್ರೀ ಅಮೃತ ಸೋಮೇಶ್ವರ, ಕೋಟೆಕಾರ್—

ನಾನಾ ಕಾರಣಗಳಿಂದಾಗಿ ಎಷ್ಟೋ ಶಬ್ದಗಳು ರೂಢಿಯ ಭಾಷೆಯಿಂದ ಜಗುಳಿ ಹೋಗುವುದೂ, ಹೊಸ ಶಬ್ದಗಳ ಅವತರಣವಾಗುವುದೂ. ಹಳೆಯ ಬೇರಿಗೆ ಹೊಸ ಚಿಗುರು ಸೇರಿಕೊಳ್ಳುವುದೂ, ಶಬ್ದಗಳ ಮೂಲಾರ್ಥ ವಿಸ್ತಾರವಾಗುವುದೂ, ಸಂಕೋಚವಾಗುವುದೂ ಜೀವಂತ ಭಾಷೆಯಲ್ಲಿ ಸದಾ ಜರಗುತ್ತಿರುವ ಕ್ರಿಯೆಗಳಾಗಿವೆ. ಶಬ್ದಗಳ ಈ ಕಣ್ಣುಮುಚ್ಚಾಲೆಯಾಟವನ್ನು ಗಮನಿಸುವುದು ಜಿಜ್ಞಾಸುವಿಗೆ ಕುತೂಹಲದ ವಿಚಾರವಾಗಿದೆ. ಈ ಆಟದಲ್ಲಿ ಸ್ವತಃ ಭಾಗವಹಿಸಿದಾಗ ಕೆಲವೊಮ್ಮೆ ಸರಿಯಾದ ಗುರಿಮುಟ್ಟಬಹುದು. ಕೆಲವೊಮ್ಮೆ ಕಟ್ಟಿದ ಕಣ್ಣುಪಟ್ಟಿಯೇ ಬಿಗಿಯಾಗಿ, ಬರಿಯ ಊಹೆ ಮಾತ್ರ ಮುನ್ನುಗ್ಗಬಹುದು. ಏನಿದ್ದರೂ ಆಟವಂತೂ ಉತ್ಸಾಹದಾಯಕ!

ನಮ್ಮ ಅಸ್ತಿತ್ವಕ್ಕೆ ಅವಶ್ಯಕವಾದ ಆಹಾರ ಪದಾರ್ಥಗಳ ಹಲವು ಹೆಸರುಗಳಲ್ಲಿ ಕಂಡೂ ಕಾಣದಂತೆ ಅಡಗಿ ಹೋಗಿರುವ ಕೆಲವೊಂದು ಶಬ್ದಗಳ ಬೇರುಗಳನ್ನು ಗೊತ್ತುಹಚ್ಚಲೆಳಸುವುದು ಈ ಚಿಕ್ಕ ಬರವಣಿಗೆಯ ಉದ್ದೇಶ.

ತಮಿಳು, ಕನ್ನಡ, ತೆಲುಗು, ಮಲಯಾಳ, ತುಳು, ಕೊಡಗು, ಬಡಗ, ಇರುಳ ಕುರುಕ್, ಮಾಲ್ಟೋ, ಕೂಯಿ, ಗೋಂಡಿ, ಬ್ರಾಹುವಿ, ನಾಯಿಕಿ, ಭೀಲಿ, ಕೋಲಾಮಿ — ಮೊದಲಾದ ಭಾಷೆಗಳು ಮೂಲತಃ ಒಂದೇ ಬುಡದಿಂದ ಕವಲೊಡೆದುವೆಂದೂ; ಮೂಲದಲ್ಲಿದ್ದಿರಬಹುದಾದ ಆ ಭಾಷೆಗೆ 'ಮೂಲದ್ರಾವಿಡ' ಎನ್ನಬಹುದೆಂದೂ ಭಾಷಾ ಶಾಸ್ತ್ರಿಗಳು ಅಭಿಪ್ರಾಯಪಡುತ್ತಾರಷ್ಟೆ. 'ದ್ರಾವಿಡ' ಎಂದು ಕರೆಯಲ್ಪಡುವ ಈ ಸೋದರ ಭಾಷೆಗಳ ನೆತ್ತರ ಸಂಬಂಧ ಅನೇಕ ವಿವರಗಳಲ್ಲಿ ನಮಗೆ ಕಾಣುತ್ತದೆ — ವಸ್ತುಗಳ ಹೆಸರುಗಳ ಸಾದೃಶ್ಯ ಅವುಗಳಲ್ಲಿ ಒಂದು ಮುಖ್ಯ ಅಂಶವಾಗಿದೆ,

ಉದಾ:–	(1) ಅಕ್ಕಿ (ಕನ್ನಡ)	(2, ಅವಲಕ್ಕಿ (ಕನ್ನಡ)
	ಅರಿಶಿ (ತಮಿಳು)	ಅವಲ್ (ತಮಿಳು)
	ವರಿ (ತೆಲುಗು)	ಅವಲ್ (ಮಲೆಯಾಳಂ)
	ಅರಿ (ತುಳು)	ಬಜಿಲ್ (ತುಳು)
	ಅರಿ (ಮಲೆಯಾಳಂ)	

ಅವಲಕ್ಕಿ ಎಂಬುದರಲ್ಲಿನ ಅಕ್ಕಿಯನ್ನು ಬೇರ್ಪಡಿಸಿದರೆ ಉಳಿಯುವ ಅವಲ್ ಎಂಬುದಕ್ಕೂ 'ಅವಲಕ್ಕಿ' ಎಂದೇ ಅರ್ಥ – ಈ ಅವಲ್ ಎಂಬ ಪದವಾದರೋ ಅವ್ + ಅಲ್ ಎಂಬ ಎರಡು ತುಣುಕುಗಳು ಸೇರಿ ಉಂಟಾದುದಾಗಿದೆ ಎನ್ನಬೇಕು. ಅವ್ ಎಂಬುದಕ್ಕೆ ಬೇಯಿಸು, ಕುಟ್ಟು ಎಂಬ ಅರ್ಥಗಳಿವೆ. 'ಅಲ್' ಎಂಬುದರ ಅರ್ಥವನ್ನು ಸ್ಪಷ್ಟಪಡಿಸುವ ಮೊದಲು ಇನ್ನೂ ಕೆಲವು ಶಬ್ದಗಳನ್ನು ನೋಡೋಣ:

ಬುರುಗಲ್ (ಲು) = ಹುರಿಯಕ್ಕಿ
ಹೊದಿಲು, ಹೊದಲು = ಲಾಜ
ಪೊದ್ದೊಲು (ತುಳು = ,,

ಕುಸುಬಲು,
ಕುದುಪಲು,
ಕುದುಕಲು,
ಕುಚ್ಚಲು,) = ಬತ್ತವನ್ನು ಒಮ್ಮೆ ಬೇಯಿಸಿ, ಒಣಗಿಸಿ ಕುಟ್ಟಿ ಮಾಡಿದ ಅಕ್ಕಿ.

ಕುದುಪೆಲ್ (ತುಳು)
ಉರುಪೆಲ್ (ತುಳು) } = ,, ,, ,,

ನಿಂಗಾಲ್ (ತುಳು) = ಕಡಿಯಕ್ಕಿ
ಬೊರುವುಲು (ತೆಲುಗು) = ಅರಳು
ಅಟುಕುಲ (ತೆಲುಗು) = ಅವಲಕ್ಕಿ
ಅಂಬಲ್ (ನಾಯಿಕಿ ಭಾಷೆ) = ಗಂಜಿ
ಪೊಮ್ಮಲ್ (ತೆಲುಗು) = ಗಂಜಿ
ಪೊಜಿಲ್ ಅರಿ (ತುಳು) = ಮೊಳಕೆ ಬಂದ ಬತ್ತದಿಂದ ಮಾಡಿದ ಅಕ್ಕಿ
ಕೋರಲ್ (ತುಳು) = ಕಾಳುಗಳ ತೆನೆ
ಅಗುಳ್ = ಅನ್ನದ ಹರಳು

ಈ ಪದಗಳನ್ನು ಒಡೆದಲ್ಲಿ, ಇವುಗಳಲ್ಲಿ ಸೇರಿಕೊಂಡಿರುವ ಅಲ್, ಇಲ್, ಉಳ್ ಎಲ್ ಎಂಬೀ ಅಂಶಗಳು ಧಾನ್ಯವಾಚಕ, ಅದರಲ್ಲೂ ಮುಖ್ಯವಾಗಿ ಅಕ್ಕಿಗೆ ಸಂವಾದಿಯಾದ ಅಂಶ ಎಂದು ಊಹಿಸಬಹುದು. ಆದರೆ ಪ್ರಸಿದ್ಧವಾದ Dravidian Etymological Dictionary ಯಲ್ಲಾಗಲೀ, ಕಿಟ್ಟೆಲ್ ಕೋಶದಲ್ಲಾಗಲೀ ಅಲ್, ಇಲ್, ಎಲ್ ಎಂಬುದಕ್ಕೆ ಅಕ್ಕಿ ಅಥವಾ ಕಾಳು ಎಂಬರ್ಥ ಸೂಚಿತವಾದಂತಿಲ್ಲ. ಮೇಲಿನ ಶಬ್ದಗಳನ್ನೂ, ವಿವಿಧ ಭಕ್ಷ್ಯಗಳಿಗೆ ಸಂಬಂಧಪಟ್ಟ ಇನ್ನೂ ಕೆಲವು ಶಬ್ದಗಳನ್ನೂ ವಿಶ್ಲೇಷಣೆ ಮಾಡಲು ಯತ್ನಿಸಿದರೆ ಆ ಶಬ್ದಾವಯವಗಳಲ್ಲಿ ಹುದುಗಿದ ಕೆಲವೊಂದು ಅರ್ಥರಹಸ್ಯಗಳು ಬಯಲಾಗಬಹುದು.

ಅಗ್ + ಅಳ್ (ವಿಸ್ತೃತವಾದ ಅಕ್ಕಿ) → ಅಗಳ್, ಅಗುಳ್ = ಅನ್ನದ ಬಿಡಿ ಹರಳು.
ಅರ್ + ಅಳ್ (ಬೆಂದು ಶುಷ್ಕವಾದ ಅಕ್ಕಿ) → ಅರಳ್, ಅರಳು = ಲಾಜ
ಪೊತ್ + ಅಳ್ (ಕರಿದ ಅಕ್ಕಿ) → ಹೊದಳ್ ಹೊದಳು, = ,,
ಕುತ್ + ಪ + ಅಲ್ (ಕುದಿಸಿ–ಬೇಯಿಸಿ–ಸಿದ್ಧಗೊಳಿಸಿದ ಅಕ್ಕಿ) → ಕುದಪಲಕ್ಕಿ
ಉರ್ + ಪ + ಅಲ್ (ತುಳು) ,, ,, ,, → ಉರುಪಲ್, ಉರುಪೆಲ್
= ಕುಚ್ಚಿಲಕ್ಕಿ
ಬಜ್ + ಅಲ್ (ಬೆಂದು ಒಣಗಿದ ಕಾಳು) → ಬಜಲ್, ಬಜಿಲ್ (ತುಳು)= ಅವಲಕ್ಕಿ.
ಕುರ್ + ಅಲ್ + ಅರಿ (ಹುರಿದ ಅಕ್ಕಿ) → ಕುರ್ಲರಿ (ತುಳು) = ಹುರಿಯಕ್ಕಿ.
(ಇಲ್ಲಿ ಅರಿ ಎಂಬುದು ದ್ವಿರುಕ್ತಿಯಾಗಿದೆ).
ಅಣ್ + ಪ + ಅಲ್ (ಅಂಟಾದ, ಆರ್ದ್ರವಾದ ಕಾಳು)→ಅಂಬಲ್, ಅಂಬಲಿ
ಕೇಯಿ + ಅಳ್ (ಬೇಯಿಸಿದ ಕಾಳು) → ಕೂಳ್, ಕೂಳು.

ಅಕ್ಕಿ ಎಂಬ ಪದದಲ್ಲೂ ಅಳ್ (ಅಚ್) ಮೂಲತಃ ಇತ್ತೆಂದು ಊಹಿಸಬೇಕಾಗುತ್ತದೆ. ಅಚ್ಚರೆ–ಅಕ್ಕರೆ, ಅಚ್ಚಜ – ಅಕ್ಕಜ. ಅಚ್ಚವೆ= ಆಕ್ಕವೆ, ಅಚ್ಕಿ – ಅಕ್ಕಿ. ತಚ್ಕಿ – ತಕ್ಕಿ – ಎಂಬಿತ್ಯಾದಿ ಪರಿವರ್ತನೆಗಳಂತೆ ಅಚ್ಕಿ ಎಂದಿದ್ದುದು ಅಕ್ಕಿ ಎಂದಾಗಿಂಲು ಸಾಧ್ಯವಿದೆ. ತುಳುವಿನಲ್ಲಿ ಅಕ್ಕಿಗೆ 'ಅರಿ' ಎನ್ನುವುದೂ ಈ ಊಹೆಗೆ ಪುಷ್ಟಿ ನೀಡುತ್ತದೆ. ಏಕೆಂದರೆ ಕನ್ನಡದಲ್ಲಿ ಜಕಾರ ಯುಕ್ತವಾದ ಪದಗಳು ತುಳುವಿನಲ್ಲಿ ಬಹುತೇಕ ರಕಾರಯುಕ್ತವಾಗುತ್ತವೆ. ಉದಾ: ಬಾಜಿ – ಬಾರೆ, ಕೋಜಿ – ಕೋರಿ, ಕೂಜು – ಕೂರು, ಬೀಜು – ಬೂರು, ಇತ್ಯಾದಿ. ಹೀಗಾಗಿ ಅಚ್ + ಕಿ(ಅಚ್ಕಿ) ಎಂದೇ ಮೂಲರೂಪ ಇದ್ದಿರಬೇಕೆಂದು ಊಹಿಸುವುದು ಅಸಂಗತವಾಗಲಾರದು.

ಅಂತೂ ಅಲಿತ್ ಎಂಬ ಮೂಲರೂಪದಿಂದಲೇ ಅಳ್, ಅಲ್, ಎಲ್, ಇಲ್, ಉಳ್ ಇತ್ಯಾದಿ ರೂಪಗಳು ಉಂಟಾಗಿರಬೇಕೆಂದೂ, ಅಚ್ ಎಂಬುದು ಧಾನ್ಯವಾಚಿಯಾಗಿತ್ತೆಂದೂ ಅನುಮೇಯ ಮಾಡಿಕೊಳ್ಳಬಹುದು. ಬೇರೆ ಬೇರೆ ಅರ್ಥದ ತುಣಕುಗಳ ಸಂಬಂಧ ಬೆಳೆಸಿ ವಿವಿಧ ಸ್ವರೂಪ ಧರಿಸಿ, ಹಿಟ್ಟು, ಗಂಜಿ, ಅನ್ನ, ತುತ್ತು, ತಿಂಡಿ ಮೊದಲಾದ ಅರ್ಥಗಳನ್ನೂ ಈ ಶಬ್ದ ಪಡೆದುಕೊಂಡಿರುವುದನ್ನು ಕಾಣುತ್ತೇವೆ.

ಉದಾ: ಅಗಲು (ಅಗೆಲು) = ಭೂತಗಳಿಗೆ ಪಸರಿಸಿ ಬಳಸುವ ಪಸಾರ್ನೆ (ಎಡೆ)
ಮೊಸಲ್ = ಪ್ರತ್ಯೇಕಿಸಿ ಇರಿಸಲ್ಪಟ್ಟ ಆಹಾರ.
ಪೊಂಗಲ್ = ಒಂದು ಸಿಹಿ ಖಾದ್ಯ. ಈ ಭಕ್ಷ್ಯದ ಕಾರಣಕ್ಕಾಗಿ ತಮಿಳುನಾಡಿನ ಒಂದು ಹಬ್ಬಕ್ಕೂ ಪೊಂಗಲ್ ಎಂದೇ ಹೆಸರಾಗಿದೆ.
ಪೊಂಗಲಿ (ತೆಲುಗು)= ,, ,,
ಪೂಸಲ್ ಕಡುಬು = ಸಿಹಿ ಹಿಟ್ಟನ್ನು ಒಳಗೊಂಡ ಒಂದು ಜಾತಿಯ ಕಡುಬು.
ಪುಯ್ಯಲ್ = ಸಿಹಿ ಹಿಟ್ಟು (ಪಾಯಸ.)

ಇದರಂತೆ, ಚಕ್ಕಲಿ, ಚಕ್ಕುಲಿ, ಚಕ್ಕಿಲ (ತೆಲುಗು), ಚಂಗುಲ್ಲಿ (ತಮಿಳು), ಇತ್ತಲಿಗೆ, ಉಂಡಲಿಗೆ, ಉಂಡ್ಲುಕ (ತಮಿಳು), ಅಪ್ಪಳ. ಹಪ್ಪಳ, ಪಪ್ಪಳ, ಹಪ್ಪಳಿಗೆ, ಚಂಗುಳಿ, ಚಂಡುರ್ಳಿ (ತುಳು) ಎಂಬಲ್ಲಿಯೂ ಅಳ್ (ಅಲ್) ಎಂಬುದು ವಿವಿಧ ವೇಷಗಳಲ್ಲಿ ನುಸುಳಿಕೊಂಡಿರುವುದನ್ನು ಗುರುತಿಸಬಹುದು,

ಪರ್ಬೆಲ್ ಎಂಬುದಕ್ಕೆ ತುಳು ಕೋಶದಲ್ಲಿ food or drink of a pariah ಎಂಬ ಅರ್ಥ ನೀಡಲಾಗಿದೆ. ಈ ಶಬ್ದದಲ್ಲೂ, ಕವಳ (ಕವ್ + ಅಳ) ಎಂಬಲ್ಲೂ ತುತ್ತು, ಊಟ ಎಂಬರ್ಥದ ತುಣುಕು ಇಣುಕುತ್ತದೆ,

ಚಂಗುಳಿ ಎಂಬುದು ತುಳುಭಾಷೆಯಲ್ಲಿ ಮೆತ್ತಗಿನ, ಮುದ್ದೆಯಾದ ಒಂದು ಭಕ್ಷ್ಯಕ್ಕೆ (ಉದಾ: ಹಲಸಿನ ಚಂಗುಳಿ) ಹೆಸರಾಗಿ ಕ್ರಮೇಣ ಮೆತ್ತಗಿನ, ನಿಷ್ಪ್ರಯೋಜಕ ವ್ಯಕ್ತಿಯನ್ನು ಉದ್ದೇಶಿಸಿ ಹೇಳುವಲ್ಲಿಯೂ ಅರ್ಥವಿಸ್ತಾರವನ್ನು ಪಡೆಯಿತು. (ಉದಾ: ಚಂಗುಳಿ ನರಮಾನಿ),

ಕಂಬಳ, (ಕುಂಬಳಿ= ದಿನಗೂಲಿ), ಸಂಬಳ –ಎಂಬಲ್ಲಿಯೂ ದಿನವಹಿ ನೀಡುವ ಕಾಳಿನ 'ಬತ್ತ' ಎಂಬರ್ಥದಲ್ಲಿ ಅಳ್ ಕಾಣಿಸಿಕೊಂಡಿದೆಯೆನ್ನಬಹುದು,

ಅಡುಗೆ ಎಂದರ್ಥದ ಅಟ್ಟಿಲ್ ಎಂಬ, ಹಾಗೂ ಆಹಾರವಿಲ್ಲದೆ ಒಣಗು ಎಂಬರ್ಥದ ಒರೆಲು ಎಂಬ ತುಳುಶಬ್ದಗಳಲ್ಲಿಯೂ, ಎಂಜಲ್ (ಮಲೆಯಾಳ – ಎಚ್ಚಿಳ್) ಎಂಬಲ್ಲಿಯೂ ಆಹಾರಾರ್ಥದ ಈ ಶಬ್ದ ಅಂತರ್ಗತವಾಗಿದೆ. ಕುಯಿ ಭಾಷೆಯಲ್ಲಿ ಅಲ್ಲು ಎಂದರೆ ಬೆಳ್ತಿಗೆ ಅಕ್ಕಿಯೆಂದರ್ಥ. ಕುರುಕ್ ಭಾಷೆಯಲ್ಲಿ ಅಲ್‌ಕ್ರ ಎಂದರೆ ಹುರಿಯಕ್ಕಿ. ಈ ಎರಡು ಶಬ್ದಗಳಲ್ಲಿ ಅಲ್ ಎಂಬುದು ಪದಾದಿಯಲ್ಲಿ ಕಾಣಿಸಿಕೊಳ್ಳುತ್ತದೆ, ಕಾಳು ಎಂಬ ಪದ ಹೇಗೆ ಸೃಷ್ಟಿಯಾಯಿತೆಂದು ಈಗ ವಿಚಾರಿಸಬಹುದು, ಕಟ್ + ಅಳ್ → ಕಾಳ್ ಎಂದಾಗಿರುವುದೇ ಸಂಭವನೀಯ. 'ಕಟ್' ಎಂದರೆ ಗಟ್ಟಿಯಾದ ಎಂಬರ್ಥದ ಬೇರು, ಬಿರುಸಾದ ಧಾನ್ಯಗಳನ್ನು ಮಾತ್ರ ಆರಂಭದಲ್ಲಿ ಕಾಳು ಎಂದು ಕರೆದಿರಬಹುದು. ಹಾಗೆಯೆ, ಜೋಳ, ಕಡಲೆ, ಹುರುಳಿ, ನೆಲ್ಲು –ಇವುಗಳಲ್ಲಿಯೂ ಅಳ್, ಅಲ್ ಹುದುಗಿರಬಹುದೆನಿಸುತ್ತದೆ.

ಜೋಳ ಎಂಬುದು ಯವನಾಲ ಎಂಬುದರ ತದ್ಭವವೆಂದು ಕಿಟ್ಟೆಲ್ ಕೋಶ ಹೇಳುತ್ತದೆ. ಹಾಗಿದ್ದರೆ, ಯವನ + ಆಲ ಎಂದು ಆ ಶಬ್ದವನ್ನು ವಿಂಗಡಿಸಿದರೆ ಮೂಲತಃ ಅದು ಯವನ ದೇಶದಿಂದ ಬಂದ ಧಾನ್ಯವೆಂದು ಅರ್ಥವಿಸಬಹುದು. ಅಲ್ಲದೆ ಧಾನ್ಯವಾಚಿಯಾಗಿ ಆಲ ಎಂಬುದು ಸಂಸ್ಕೃತವನ್ನೂ ಸೇರಿಕೊಂಡಿತೆಂದು ಭಾವಿಸಬಹುದು.

ಕಡಲೆ ಎಂಬುದರ ಅರ್ಥ ಸ್ಪಷ್ಟವಾಗಿಯೇ ಇದೆ: ಕಟ್ + ಅಲ(ಯ್)–ಗಟ್ಟಿಯಾದ ಕಾಳು.

ಅಂತೂ ಶಬ್ದಗಳನ್ನು ಒಂದು ಗೊತ್ತಾದ ರೀತಿಯಲ್ಲಿ ಮುರಿಯುತ್ತಾ ಹೋದರೆ ಹಚ್ಚಿನವುಗಳ ಮೂಲಾರ್ಥಗಳನ್ನು ಆ ಮುರಿತದ ಮೂಲಕ ಗೊತ್ತು ಹಚ್ಚುವುದು ಸಾಧ್ಯ.

ಅವಲ್ ಎಂಬ ಪದ ಕ್ರಮೇಣ 'ಮುಸಲಕ್ರಿಯೆ' ಎಂಬ ಕ್ರಿಯಾಪದವಾದಿಯೂ ಮೂರ್ಪಟ್ಟಿದೆ. 'ಒರಳು' ಎಂಬಲ್ಲೇನೋ ಅಳ್ ನಂಟನ್ನು ಹತ್ತಿಸಬಹುದು. ಆದರೆ 'ಮುಸಲ'ದಲ್ಲಿಯೂ 'ಅಲ' ಎಂಬುದು ಧಾನ್ಯವಾಚಿಯಲ್ಲವೇ ಎಂದು ಪ್ರಶ್ನಿಸುವುದು ದುರೂಹ್ಯವಾದೀತೇನೋ. ಆದರೆ ಶಬ್ದಗಳ ಕತೆಗಳನ್ನು ಇದಮಿತ್ಥಂ ಎಂದು ಹೇಳುವುದು ಹೇಗೆ? 'ಶಬ್ದಪಾರಮಾರ್ಗಂ ಅಶಕ್ಯಂ'.

[ಶಬ್ದರೂಪಗಳ ವಿಚಾರದಲ್ಲಿ ಎಮಿನೋ ಮತ್ತು ಬರೋ ಅವರ Dravidian Etymological Dictionary, ಕಿಟ್ಟೆಲರ ಕೋಶ, ಪ್ರೊ। ಮರಿಯಪ್ಪ ಭಟ್ಟರಿಂದ ಪರಿಷ್ಕೃತವಾದ ತುಳುಕೋಶ – ಇವುಗಳಿಗೆ ಋಣಿಯಾಗಿದ್ದೇನೆ. — ಲೇ.]

x x x x x x

೧೯. ತುಳು ಭಾಷೆಯ ಕೆಲವು ವೈಶಿಷ್ಟ್ಯಗಳು

— ಕುಮಾರಿ ಕೆ. ವಿ. ಜಲಜಾಕ್ಷಿ, ಅಣ್ಣಾಮಲೈ.

ದ್ರಾವಿಡ ಭಾಷೆಗಳನ್ನು ಮೂರು ಭಾಗಗಳಾಗಿ ವಿಂಗಡಿಸುತ್ತೇವೆ. ಅವುಗಳು ದಕ್ಷಿಣ ದ್ರಾವಿಡ, ಮಧ್ಯದ್ರಾವಿಡ, ಮತ್ತು ಉತ್ತರ ದ್ರಾವಿಡಗಳೆಂದು ಕರೆಯಲ್ಪಟ್ಟಿವೆ. ತುಳು ಭಾಷೆಯು ಇವುಗಳಲ್ಲಿ ದಕ್ಷಿಣ ದ್ರಾವಿಡ ಭಾಷಾಗುಂಪಿಗೆ ಸೇರುತ್ತದೆ. ಪ್ರಸ್ತುತ ಲೇಖನದಲ್ಲಿ, ತುಳುವು ದಕ್ಷಿಣ ದ್ರಾವಿಡ ಭಾಷಾವರ್ಗದಲ್ಲಿದ್ದೂ ಹೇಗೆ ತನ್ನದೇ ಆದ ಕೆಲವೊಂದು ವೈಶಿಷ್ಟ್ಯಗಳನ್ನು ಹೊಂದಿದೆ ಎಂಬ ಸಂಗತಿಯತ್ತ ಗಮನ ಹರಿಸಲಾಗಿದೆ.

ಮೊದಲನೆಯದಾಗಿ ಸ್ಥಾಯೀ ಭಾವ ಸೂಚಕ ಧಾತುಗಳಾದ ಇರ್ ಮತ್ತು ಉಳ್‌ಗಳು ಪ್ರಮುಖ ದಕ್ಷಿಣ ದ್ರಾವಿಡ ಭಾಷೆಗಳಲ್ಲಿ ಪ್ರಯೋಗವಾಗುವ ರೀತಿಯನ್ನು ತುಳುವಿನಲ್ಲಿ ಅವುಗಳ ಪ್ರಯೋಗವನ್ನೂ ಇಲ್ಲಿ ವಿವೇಚಿಸಲಾಗಿದೆ, ಇರ್ ಮತ್ತು ಉಳ್ ಧಾತುಗಳು ತುಳುವಿನಲ್ಲಿ ಭೂತ ಮತ್ತು ವರ್ತಮಾನ ಕಾಲಗಳಲ್ಲಿ ಪರಸ್ಪರ ಪೂರಕವಾಗಿ ಬಳಕೆಯಾಗುತ್ತವೆ. ಅಂದರೆ ಭೂತಕಾಲದಲ್ಲಿ ಎಲ್ಲೆಡೆ ಇರ್ ಧಾತುವೂ, ವರ್ತಮಾನ ಕಾಲದಲ್ಲಿ ಎಲ್ಲೆಡೆ ಉಳ್ ಧಾತುವೂ ಪ್ರಯೋಗದಲ್ಲಿವೆ. ಭವಿಷ್ಯತ್ ಕಾಲದಲ್ಲಿ ಇರ್ ಧಾತುವೇ ಬಳಕೆಯಲ್ಲಿದೆಯಾದರೂ ತುಳುವಿನಲ್ಲಿ ಭವಿಷ್ಯತ್ ಕಾಲಸೂಚಕ ಪ್ರತ್ಯಯ – ವ್ ಇದ್ದು, ಆದಿಯ ಇ ಕಾರಕ್ಕೆ ಪರವಾಗುವ ವ್ಯಂಜನ ಉಭಯೋಷ್ಠ್ಯಯಾಗಿರುವುದರಿಂದ ಇ ಕಾರವು ಉಕಾರವಾಗಿ ಪ್ರಯೋಗವಾಗುವುದೂ ಉಂಟು. ಒಟ್ಟಿನಲ್ಲಿ ತುಳುವಿನಲ್ಲಿ ಇರ್ ಉಳ್ ಧಾತುಗಳ ಹಂಚಿಕೆ ಪರಸ್ಪರ ಪೂರಕವೆಂದು ತೋರುತ್ತದೆ,

ಪ್ರಾಚೀನ ತಮಿಳಿನಲ್ಲಿ (ಸಂಗಮ್ ಸಾಹಿತ್ಯದಲ್ಲಿ) ಉಳ್ ಧಾತುವು ವರ್ತಮಾನ ಕಾಲದಲ್ಲಿ ಪ್ರಯೋಗದಲ್ಲಿದ್ದಂತೆ ಕಂಡುಬರುತ್ತದ. ಆದರೆ ಆಧುನಿಕ ತಮಿಳಿನಲ್ಲಿ ಮತ್ತು ಕನ್ನಡದಲ್ಲಿ ಇರ್ ಧಾತುವೇ ಪ್ರಯೋಗವಾಗುತ್ತದೆ. ಉಳ್‌ನ ಕ್ರಿಯಾರೂಪಾವಳಿಗಳು ಕಂಡುಬರುವುದಿಲ್ಲ. ವರ್ತಮಾನ ಕಾಲದ ನಪುಂಸಕ ಲಿಂಗ ಏಕವಚನದಲ್ಲಿ ಮಾತ್ರ ಈ ಎರಡೂ ಭಾಷೆಗಳಲ್ಲಿ ಉಳ್ ಧಾತುವು ಪ್ರಯೋಗವಾಗುತ್ತದೆ, ಅಂದರೆ ಮಾನವೇತರ ಕರ್ತೃಕಗಳೊಂದಿಗೆ ಮಾತ್ರ ಉಳ್ ಧಾತುವು ಪ್ರಯೋಗವಾಗುತ್ತದೆ. ಮಲಯಾಳಂನಲ್ಲಿ ಉಳ್ ಧಾತುವು ಭೂತ, ವರ್ತಮಾನ, ಭವಿಷ್ಯತ್‌ಗಳಲ್ಲಿ ಪ್ರಥಮ, ಮಧ್ಯಮ, ಉತ್ತಮ ಪುರುಷಗಳೊಂದಿಗೆಲ್ಲ ಬಳಕೆಯಾಗುತ್ತದಾದರೂ ಅಲ್ಲಿ ಪುರುಷವಾಚಕ ಪ್ರತ್ಯಯಗಳ ಬಳಕೆಯಿಲ್ಲವೆಂಬ ಅಂಶವನ್ನು ಗಮನಿಸಬೇಕು, ಈ ಎಲ್ಲ ಅಂಶಗಳನ್ನು ಗಮನಿಸುವಾಗ ತುಳುವು ತನ್ನದೇ ಆದೊಂದು ಕ್ರಮವನ್ನು ಅನುಸರಿಸಿರುವುದು ವ್ಯಕ್ತವಾಗುತ್ತದೆ.

ಉದಾ: ವರ್ತಮಾನಕಾಲ. ಧಾತು.

ತುಳು : ಆಯೆ ಓದೊಂತುಳ್ಳೆ (ಉಳ್)
ಕನ್ನಡ: ಅವನು ಓದುತ್ತಿದ್ದಾನೆ (ಇರ್)
ತಮಿಳು: ಅವನ್ ಪಡಿಕ್ಕುಕೊಂಡಿರುಕ್ಕಿರಾನ್ (ಇರ್) ...... ಇತ್ಯಾದಿ.

ಹಾಗೆಯೇ ಭೂತಕಾಲದಲ್ಲಿ,

ತುಳು : ಆಯೆ ಓದೊಂತಿತ್ತೆ (ಇರ್)
ಕನ್ನಡ: ಅವನು ಓದುತ್ತಿದ್ದ (ಇರ್)
ತಮಿಳು: ಅವನ್ ಪಡಿತ್ತುಕೊಂಡಿರುನ್ದಾನ್ (ಇರ್)

ಭವಿಷ್ಯತ್ ಕಾಲದಲ್ಲಿ,

ತುಳು ; ಆಯೆ ಓದೊಂತಿಪ್ಪೆ (ಇರ್) (ಇಪ್ಪೆ → ಉಪ್ಪೆ)
ಕನ್ನಡ: ಅವನು ಓದುತ್ತಿರುತ್ತಾನೆ (ಇರ್)
ತಮಿಳು: ಅವನ್ ಪಡಿತ್ತುಕೊಂಡಿರ್ಪಾನ್ (ಇರ್)

ತುಳುವಿನಲ್ಲಿ ಬ್ರಾಹ್ಮಣರ ತುಳು, ವ್ಯಾವಹಾರಿಕ ತುಳು ಎಂಬ ಎರಡು ವರ್ಗಗಳಿವೆ. ಬ್ರಾಹ್ಮಣರ ತುಳು ಎಂಬುದು ಬ್ರಾಹ್ಮಣ ಸಮುದಾಯದಲ್ಲಿ ಮಾತ್ರ ಬಳಕೆಯಲ್ಲಿರುವ ತುಳು; ವ್ಯಾವಹಾರಿಕ ತುಳು, ಬ್ರಾಹ್ಮಣರಿಂದ ಹೊರತಾಗಿ ಎಲ್ಲ ವರ್ಗದ ಜನರಲ್ಲೂ ವ್ಯವಹಾರದಲ್ಲಿ ಬಳಕೆಯಾಗುವ ತುಳು, ಎಂದು ಹೇಳಬಹುದು. ಬ್ರಾಹ್ಮಣರ ತುಳುವಿನಲ್ಲಿ ಉಳ್ ಧಾತುವು ಭೂತಕಾಲದಲ್ಲಿ ಪ್ರಯೋಗವಾಗುವುದಿಲ್ಲ. ವ್ಯಾವಹಾರಿಕ ತುಳುವಿನಲ್ಲಿ ಸಾಮಾನ್ಯವಾಗಿ ಎಲ್ಲ ಧಾತುಗಳೊಂದಿಗೂ ಕರ್ತೃಕವು ಮಾನವೇತರವಾಗಿದ್ದಲ್ಲಿ ಉಳ್ ಧಾತುವು ಸಹಾಯಕ ಕ್ರಿಯಾಪದವಾಗಿ ಪ್ರಯೋಗವಾಗುತ್ತದೆ.

ಉದಾ: ಬ್ರಾ. ತು: ಪುಸ್ತಕ ಮೇಜಿದ ಮಿತ್ತ್ ಇತ್ತ್.
ವ್ಯಾ. ತು: ಪುಸ್ತಕ ಮೇಜಿದ ಮಿತ್ತ್ ಇತ್ತ್ಂಡ್.
ಕನ್ನಡ; "ಪುಸ್ತಕ ಮೇಜಿನ ಮೇಲೆ ಇತ್ತು"

ಹೀಗೆ ಉಳಿದ ದಕ್ಷಿಣ ದ್ರಾವಿಡ ಭಾಷೆಗಳಲ್ಲಿ ಕಂಡುಬರದ ವಿಶಿಷ್ಟ ಪ್ರಯೋಗ ತುಳುವಿನಲ್ಲಿ ಕಂಡುಬರುತ್ತದೆ ಎನ್ನಬಹುದು.

ಹೀಗೆಯೇ ಮಧ್ಯಮ ಪುರುಷ ವಾಚಕ ಸರ್ವನಾಮಗಳನ್ನು ಗಮನದಲ್ಲಿರಿಸಿ ತುಳುವಿನಲ್ಲಿಯೂ, ದಕ್ಷಿಣ ದ್ರಾವಿಡ ಭಾಷೆಗಳಲ್ಲಿಯೂ ಆದಿರುವ ಬದಲಾವಣೆಗಳನ್ನು ಹೀಗೆ ವಿವರಿಸಬಹುದು. ತಮಿಳು, ಮಲಯಾಳಂ, ಕನ್ನಡ, ಕೊಡಗುಗಳೊಂದಿಗೆ ತುಳುವನ್ನು ಹೋಲಿಸುವುದಾದರೆ,—

ಮಧ್ಯಮಪುರುಷ:

	ಏ. ವ.	ಬ. ವ.
ತಮಿಳು:	ನೀ (ನಿನ್. – ಎನ್)	ನೀವರ್
ಮಲೆಯಾಳ:	ನೀ (ನಿನ್ (ನ್) –)	ನಿಜ್ಙಳ್
ಕನ್ನಡ:	ನೀನ್ (ಉ) (ನಿನ್ –)	ನೀವರ್, ನೀವು
ಕೊಡಗು:	ನೀ (ನ್)	ನಿಜ್ಞ (ನಿಜ್ಞ–)
ತುಳು:	ಈ	ಈರು, ನಿಕುಳು, ನಿಜ್ಙಳು (ನಿಕ್ಲ್–)

(ಕಂಸದಲ್ಲಿರುವ ರೂಪಗಳು ವಿಭಕ್ತ್ಯಂಗಗಳು)

ಈ ರೂಪಗಳನ್ನು ನೋಡಿದರೆ, ಉಳಿದೆಲ್ಲ ದಕ್ಷಿಣ ದ್ರಾವಿಡ ಭಾಷೆಗಳಲ್ಲಿ ಮೂ. ದ್ರಾ. ದ *ನೀನ್ ರೂಪದ ಉಳಿಕೆ ಕಂಡುಬರುತ್ತದೆ. ತಮಿಳು, ಕನ್ನಡಗಳಲ್ಲಿಯೂ ಆಡು ಮಾತಿನಲ್ಲಿ ಅಂತ್ಯದ ಅನುನಾಸಿಕ ವರ್ಣ ಲೋಪವಾಗುವುದುಂಟು. ತುಳುವಿನ ವೈಶಿಷ್ಟ್ಯ ವೆಂದರೆ ಆದಿ ಮತ್ತು ಅಂತ್ಯಗಳೆರಡರಲ್ಲೂ ಅನುನಾಸಿಕ ಲೋಪವಾಗುವುದೆನ್ನಬಹುದು. ಮಧ್ಯ ದ್ರಾವಿಡದ ತೆಲುಗು ಮತ್ತಿತರ ಭಾಷೆಗಳಲ್ಲೂ ಈ ರೂಪ ಕಂಡುಬರುವುದು ಗಮನಿಸಬೇಕಾದ ಅಂಶ.

ಅಂತೆಯೇ ಕೆಲವು ದ್ರಾ. ಭಾ. ಗಳಲ್ಲಿ ಪುರುಷವಾಚಕ ಸರ್ವನಾಮದ ವಿಭಕ್ತ್ಯಂಗವು ಮೂಲ ಸರ್ವನಾಮ ರೂಪವನ್ನೂ ಸ್ಥಳಾಂತರಿಸಿ ತಾನೇ ಅದರ ಸ್ಥಾನವನ್ನು ಆಕ್ರಮಿಸುವುದೂ ಕಂಡುಬರುತ್ತದೆ. ಇಂಥ ವೈಶಿಷ್ಟ್ಯವನ್ನು ಹೊಂದಿರುವ ಕೆಲವೇ ಭಾಷೆಗಳಲ್ಲಿ ತುಳುವೂ ಒಂದು. ಇದಕ್ಕೆ ಕಾರಣ ಮೂಲ ಸರ್ವನಾಮ ರೂಪಕ್ಕಿಂತ, ವಿಭಕ್ತ್ಯಂಗವೇ ಹೆಚ್ಚಾಗಿ ಒಂದು ಭಾಷೆಯಲ್ಲಿ ಬಳಕೆಯಲ್ಲಿರುವುದೆಂದು ತೋರುತ್ತದೆ.

ಉದಾ: ತುಳುವಿನಲ್ಲಿ ವ್ಯಾವರ್ತಕ (ಶ್ರೋತೃವನ್ನೊಳಗೊಳ್ಳದ) ಬಹುವಚನ ರೂಪ, ಎಂಕುಳು (ಎಂಕುಳೆ–). ಮೂ. ದ್ರಾ, ದಲ್ಲಿ * ಯಾವರ್ (* ಯವರ್–). ಹಾಗೆಯೇ ಅಭಿವ್ಯಾಪಕ ರೂಪ (ಶ್ರೋತೃವನ್ನೊಳಗೊಂಡದ್ದು) ತುಳುವಿನಲ್ಲಿ ನಮ, ನಾವು. (ನವರ್ (ವರ್–,). ಮೂ. ದ್ರಾ. ರೂಪ * ನಾವರ್ (* ನವರ್ –]. ವ್ಯಾವರ್ತಕ ಮತ್ತು ಅಭಿವ್ಯಾಪಕ ಬಹುವಚನಗಳೆರಡರಲ್ಲಿಯೂ ಮೂಲ ಸರ್ವನಾಮದ ಸ್ಥಾನವನ್ನು ವಿಭಕ್ತ್ಯಂಗವು ಆಕ್ರಮಿಸಿರುವುದು ಕಂಡುಬರುತ್ತದೆ.

ತುಳುವಿನ ಕೆಲವು ಸಂಖ್ಯಾವಾಚಕಗಳನ್ನು ಉಳಿದ ಪ್ರಮುಖ ದಕ್ಷಿಣ ದ್ರಾವಿಡದ ಕೆಲ ಸಂಖ್ಯಾವಾಚಕಗಳೊಂದಿಗೆ ಹೋಲಿಸಿದರೆ, ತುಳು ಅವುಗಳಿಗಿಂತ ಹೇಗೆ ಭಿನ್ನವಾಗುತ್ತ ದೆಂಬುದು ತಿಳಿದುಬರುತ್ತದೆ.

ಉದಾ;	ತುಳು.	ಅಯ್ಮ್	ಎಣ್ಮ	ಎಣ್ಪ
	ತುಮಿಳು,	ಅಯಿನ್ದ್	ಎಟ್ಟ್	ಎಣ್ಪತು
	ಮಲೆಯಾಳಂ	ಅಂಜ್	ಎಟ್ಟು	ಎಣ್ಪತು
	ಕೊಡಗು	ಅಂಜ್	ಎಟ್ಟ್	ಎವರ್–ಬದು
	ಕನ್ನಡ	ಅಯರ್ (ಇ) ದು–	ಎಣ್ಟು	ಎವರ್–ಬತ್ತು:

ಹೀಗೆಯೇ ತುಳುವಿನ ಒರ್ಮ್ಬ 'ಒಂಬತ್ತು', ಸೊಣ್ಪ 'ತೊಂಬತ್ತು'ಗಳನ್ನು ಗಮನಿಸಬಹುದು. ತಮಿಳು, ಮಲಯಾಳಂ, ಕನ್ನಡ, ಕೊಡಗಿನ ರೂಪಗಳಿಗೂ. ತುಳುವಿಗೂ ಇರುವ ಮುಖ್ಯ ವ್ಯತ್ಯಾಸವನ್ನು ಗಮನಿಸುವುದಾದರೆ ತುಳುವಿನ ಹೊರತಾಗಿ ಉಳಿದೆಲ್ಲ ಭಾಷೆಗಳ ರೂಪಗಳಿಗೂ ಮೂಲರೂಪ * ಅಯರ್ – ತ್. ಐದಕ್ಕೆ, * ಎಣ್ – ತ್ – ಎಂಟಕ್ಕೆ – ಎಂಬುದಾಗಿ ವಿದ್ವಾಂಸರೇ ತೀರ್ಮಾನಿಸಿದ್ದಾರೆ. ಈ ರೂಪಗಳಲ್ಲಿ ಕಂಡುಬರುವ ನಿಷ್ಪತ್ತಿ ಪ್ರತ್ಯಯಗಳು. ತುಳುವಿನಲ್ಲಿ ಕಂಡುಬರದಿರುವುದನ್ನು ನೋಡಿದಾಗ, ಬಹುಶಃ ಮೂಲ ದಕ್ಷಿಣ ದ್ರಾವಿಡದಲ್ಲಿ 'ತಮಿಳು ಮಲಯಾಳಂ–ಕನ್ನಡ–ಕೊಡಗು –ತುಳು—'– ಇತ್ಯಾದಿ ಭಾಷೆಗಳೆಲ್ಲಾ ಒಂದಾಗಿದ್ದು, ತುಳು ಮೊದಲಿಗೆ ಅವುಗಳಿಂದ ಬೇರೆಯಾಗಿದ್ದಿರಬೇಕು. ಹೀಗಾಗಿ ತುಳು ನಿಷ್ಪತ್ತಿ ಪ್ರತ್ಯಯಗಳನ್ನು ಸೇರಿಸಿಕೊಳ್ಳಲಿಲ್ಲ, ಉಳಿದೆಲ್ಲ ಭಾಷೆಗಳೂ ನಿಷ್ಪತ್ತಿ ಪ್ರತ್ಯಯಗಳನ್ನು ಸೇರಿಸಿಕೊಂಡಿವೆ ಎಂದು ಹೇಳಬಹುದು,

ತುಳುವಿನಲ್ಲಿ ನಿಷೇಧಾರ್ಥಕ ಪ್ರತ್ಯಯ – ಅಯರ್, ಕ್ರಿಯಾಧಾತುವಿಗೆ ಕಾಲವಾಚಕ ಪ್ರತ್ಯಯ ಸೇರಿದ ನಂತರ, ಪುರುಷವಾಚಕ ಪ್ರತ್ಯಯ ಸೇರುವ ಮೊದಲು ಸೇರುತ್ತದೆ,

ಉದಾ: ಬಲ್ — 'ಓಡು'

	ಏಕವಚನ	ಬಹುವಚನ
ಉ. ಪು.	ಬಲ್ಪಯೆ 'ಓಡೆನು' (ಹ, ಗ.) (ಓಡುವುದಿಲ್ಲ (ಹೊ. ಗ)	ಬಲ್ಪಯೊ 'ಓಡೆವು' (ಓಡುವುದಿಲ್ಲ)
ಮ. ಪು.	ಬಲ್ಪಯ 'ಓಡೆ' (ಓಡುವುದಿಲ್ಲ)	ಬಲ್ಪಯರ್ 'ಓಡರಿ' (ಓಡುವುದಿಲ್ಲ)

ಪ್ರ. ಪು. ಪುಲ್ಲಿಂಗ-ಬಲ್ಪಯೆ 'ಓಡನು'
ಸ್ತ್ರೀ–ಬಲ್ಪಯಳ್, 'ಓಡಳು' } ಓಡುವುದಿಲ್ಲ, ಬಲ್ಪಯೆರ್ 'ಓಡರ್'

ನ. – ಬಲ್ಪಂದ್ 'ಓಡದು' ಬಲ್ಪಯೊ 'ಓಡವು'

ಉಳಿದೆಲ್ಲ ದ್ರಾ. ಭಾಷೆಗಳಲ್ಲಿಯೂ ಮೂರ್ತ ನಿಷೇಧಾರ್ಥಕ ಪ್ರತ್ಯಯ -- ಆ, ವು (ಹೊಸಗನ್ನಡದಲ್ಲಿ – ಅ) ಕೇವಲ ಪ್ರಥಮ ಪುರುಷ ನಪುಂಸಕಲಿಂಗ ಏಕವಚನ ಮತ್ತು ಬಹುವಚನಗಳೊಂದಿಗೆ ಬರುತ್ತಿದ್ದು ಅದರ ಉಪ ಆಕೃತಿಮಾ ವಾದ ಶೂನ್ಯ ಪ್ರತ್ಯಯ ϕ ವುಎಲ್ಲ

ಪುರುಷವಾಚಕ ಪ್ರತ್ಯಯಗಳ ಹಿಂದೆಯೂ ಬರುತ್ತದೆ. ತುಳುವಿನಂತೆ ತೆಲುಗು ಮತ್ತು ಉಳಿದ ಮಧ್ಯದ್ರಾವಿಡ ಭಾಷೆಗಳಲ್ಲಿ ಹಾಗೂ ಬ್ರಾಹೂಯಿಯಲ್ಲಿ ಪೂರ್ತ ನಿಷೇಧಾರ್ಥಕ ಪ್ರತ್ಯಯಗಳು (ಮೂ, ದ್ರಾ, - *ಆ ನಿಂದ ಬಂದವು), ಎಲ್ಲ ಪು. ವಾ. ಪ್ರತ್ಯಯಗಳ ಹಿಂದೆಯೂ ಬರುವುದನ್ನು ಕಾಣಬಹುದು. ಆದ್ದರಿಂದ ಇಲ್ಲಿಯೂ ತುಳು ದ. ದ್ರಾ. ಭಾಷೆಗಳಿಗಿಂತ ಹೆಚ್ಚಾಗಿ ಮಧ್ಯದ್ರಾವಿಡ ಮತ್ತು ಬ್ರಾಹೂಯಿ ಭಾಷೆಗಳೊಂದಿಗೆ ಸಾಮ್ಯತೆ ಹೊಂದಿದೆ ಎಂಬುದು ಸ್ಪಷ್ಟವಾಗುತ್ತದೆ.

ವಿಧ್ಯರ್ಥಸೂಚಕ – ಲ ಪ್ರತ್ಯಯದ ಬಳಕೆ ತುಳುವಿನಲ್ಲಿ ಗಮನಿಸಬೇಕಾದ ಇನ್ನೊಂದು ಮುಖ್ಯ ಅಂಶ. ತುಳುವಿನ ಎಲ್ಲ ಉಪ ಭಾಷಾ ಪ್ರಭೇದಗಳಲ್ಲಿಯೂ ಇದನ್ನು ಕಾಣಬಹುದು. ಶಿಷ್ಟ ಕನ್ನಡದಲ್ಲಿಯಾಗಲೀ ಇತರ ದ. ದ್ರಾ. ಭಾಷೆಗಳಲ್ಲಿಯಾಗಲೀ ಇದು ಕಂಡುಬರದು. (ಆದರೆ ಕನ್ನಡದ ಕೆಲವು ಉಪಭಾಷೆಗಳಲ್ಲಿ ಇದರ ಬಳಕೆಯಿದೆ. ಆದರೆ ಈ ಕುರಿತು ಇನ್ನೂ ಹೆಚ್ಚಿನ ಅಧ್ಯಯನ ನಡೆಯಬೇಕಾಗಿದೆ.)

ಉದಾ: ತುಳು,

ಏ. ವ. ಅಂಪ್ಲ 'ಮಾಡು' (ಬಲ 'ಬಾ'
ಬ. ವ. ಅಂಪ್ಲೆ 'ಮಾಡಿ' (ಬಲೆ 'ಬನ್ನಿ'

ಕನ್ನಡದ ಮಾಡಲ್ –, ನೋಡಲ್ –, ಇತ್ಯಾದಿ ರೂಪಗಳನ್ನು ನೋಡುವಾಗ, ಹಳಗನ್ನಡದ ಧಾತ್ವರ್ಥ ಪ್ರತ್ಯಯ – ಅಲ್ ಗೂ, ತುಳುವಿನ – ಲ ಪ್ರತ್ಯಯಕ್ಕೂ ಏನೋ ಸಂಬಂಧವಿರುವಂತೆ ತೋರುತ್ತದೆ. ಡಾ। ಪಿ. ಎಸ್. ಸುಬ್ರಹ್ಮಣ್ಯಂರವರು, ತ. ಮ. ಭಾಷೆಗಳಲ್ಲಿರುವ – ಅಲಾವರ್ (< ಕ್ರಿಯಾರ್ಥ ನಾಮಪದ ಪ್ರತ್ಯಯ ಅಲ್ + ಆಕುವರ್ 'ಆಗುತ್ತದೆ/ಬರುತ್ತದೆ') ನೊಂದಿಗೆ ಇದನ್ನು ಹೋಲಿಸಿದ್ದಾರೆ; ಅವರ ಹೇಳಿಕೆಯಂತೆ,

ತ. ಮ. ಪೋಕಲಾವರ್ 'ಹೋಗಬಹುದು'
ತುಳು ಪೋಲೆ 'ಹೋಗಿರಿ'

ತುಳುವು ಅಂತ್ಯದ ಮಕಾರವನ್ನೂ ಕಳೆದುಕೊಂಡು, ಅದರ ಸ್ಥಾನದಲ್ಲಿ ವಚನ ಸೂಚಕ ಪ್ರತ್ಯಯ – ಅ, ಎ, ಗಳನ್ನೂ ಸೇರಿಸಿಕೊಂಡಿದೆ. ಹೀಗೂ – ಲ ಪ್ರತ್ಯಯಕ್ಕೆ ಮೂಲ ಈ – ಅತ, – ಅಲಾವರ್‌ಗಳಿರಬಹುದೆನ್ನುತ್ತಾರೆ. ಅಂತೆಯೇ ಒಟ್ಟೋ ಎಸ್ಪರ್‌ಸನ್ (Otto Jasperson, 1974, Revised Ed, Essentials of English Grammar pp. 295) ತಮ್ಮ ಪುಸ್ತಕದಲ್ಲಿ ವಿಧ್ಯರ್ಥದ ಬಗ್ಗೆ ಬರೆಯುತ್ತಾ, "ನಿಜವಾಗಿಯೂ ವಿಧ್ಯರ್ಥವು, ಧಾತ್ವರ್ಥದ ಇನ್ನೊಂದು ಪ್ರಯೋಗವೆಂದೇ ಅನ್ನಿಸುತ್ತದೆ"ಯೆಂದು ಅಭಿಪ್ರಾಯ ಪಡುತ್ತಾರೆ. (The frequent addition of will you (or won't you) goes to show that the imperative is really felt to be merely a separate use of the infinitive). ಇದನ್ನು ಗಮನಿಸುವಾಗ, ಕನ್ನಡದ ಧಾತ್ವರ್ಥ ರೂಪಗಳಿಗೂ,

ಕನ್ನಡದ ಉಪ ಭಾಷೆಗಳಲ್ಲಿ ಕಂಡುಬರುವ ವಿಧ್ಯರ್ಥರೂಪಗಳಾದ, ಮಾಡ್ಲ, ಹೋಗ್ಲ, ಬರ್‍ಲ ಇತ್ಯಾದಿಗಳಿಗೂ ಹತ್ತಿರದ ಸಂಬಂಧವಿದೆಯೆಂದೂ, ಧಾತ್ವರ್ಥದ – ಅಲ್ ವಿಧ್ಯರ್ಥದ –ಲ ವಾಗಿ ಮಾರ್ಪಟ್ಟಿರಬಹುದೆಂದೂ, ತೋರುತ್ತದೆ. ಈ ಅಂಶ ತುಳುವಿಗೆ ಎಷ್ಟರಮಟ್ಟಿಗೆ ಅನ್ವಯಿಸಬಹುದೆಂಬುದರ ಬಗ್ಗೆ ಇನ್ನೂ ಹೆಚ್ಚಿನ ಸಂಶೋಧನೆ ನಡೆಯಬೇಕಾಗಿದೆ.

ಉಳಿದ ದ್ರಾ. ಭಾ.ಗಳೊಂದಿಗೆ ಹೋಲಿಸುವಾಗ ತುಳುವಿನ ಭೂತಕಾಲದ ರಚನೆ ವಿಶೇಷ ರೀತಿಯದಾಗಿ ತೋರುತ್ತದೆ, ಡಾ। ಬಿ. ರಾಮಚಂದ್ರ ರಾವ್‌ರವರು ತುಳುವಿನ ಭೂತಕಾಲವನ್ನು ಅದಕ್ಕೆ ಸೇರುವ ಪ್ರತ್ಯಯಗಳ ಹಾಗೂ ಅದು ಸೂಚಿಸುವ ಕಾಲಾನು ಸಾರಿಯಾಗಿ ಎರಡು ವಿಧವಾಗಿ ವಿಂಗಡಿಸುತ್ತಾರೆ.

೧. ಸಾಮೀಪ್ಯ ಭೂತಕಾಲ (ಅಪೂರ್ಣ) (immediate past)

೨. ದೂರದ ಭೂತಕಾಲ (ಪೂರ್ಣ) (distant past)

ಸಾಮೀಪ್ಯ ಮತ್ತು ದೂರ ಸೂಚಕ ಭೂತಕಾಲಗಳೆರಡರಲ್ಲಿಯೂ – ತ್, – ದ್. ಪ್ರತ್ಯಯಗಳು ಕಂಡುಬರುತ್ತವೆಯಾದರೂ ಅವುಗಳ ಹಂಚಿಕೆಯಲ್ಲಿ ಬಹಳಷ್ಟು ವ್ಯತ್ಯಾಸವಿದೆ ಎಂಬುದನ್ನೂ ಗಮನಿಸಬೇಕು,

ಉದಾ:

ಸಾ. ಭೂ.		ದೂ. ಭೂ.	
ಕಲ್ – ತೆ	'ಕಲಿತ'	ಕಲ್‌ತ್‌ದೆ	'ಕಲಿತಿದ್ದಾನೆ'
ಪರ್ – ಎ	'ಕುಡಿದ'	ಪರ್ – ತೆ	'ಕುಡಿದಿದ್ದಾನೆ'
ಕಾ – ತೆ	'ಕಾದ'	ಕಾತ್ – ದೆ	'ಕಾದಿದ್ದಾನೆ'
ತಿನ್ – ದೆ	'ತಿಂದ'	ತಿನ್ – ತೆ	'ತಿಂದಿದ್ದಾನೆ'

ಹೀಗೆ ಭೂತಕಾಲದ ರಚನೆಯನ್ನೂ ತುಳುವಿನಲ್ಲಿ ಕಾಣುವಾಗ, ಉಳಿದ ಭಾಷೆಗಳಿಗಿಂತ ಭಿನ್ನ ರೀತಿಯ ರಚನೆ, ಇಲ್ಲಿರುವುದು ಸ್ಪಷ್ಟವಿದೆ, ದೂರದ ಭೂತಕಾಲವು, ಸಮೀಪದ ಭೂತಕಾಲದಿಂದಲೇ ಬೆಳವಣಿಗೆ ಹೊಂದಿಬಂದಿರಬಹುದೆಂದು ತೋರುತ್ತದಾದರೂ ಅದರ ಬೆಳವಣಿಗೆಯ ಸ್ಪಷ್ಟ ವಿವರಣೆ ಇನ್ನೂ ತಿಳಿಯದು.

ಒಟ್ಟಿನಲ್ಲಿ ಮೂಲ ದ್ರಾವಿಡದಿಂದ ಕವಲೊಡೆದ ದಕ್ಷಿಣ ದ್ರಾವಿಡ ಭಾಷಾ ಸಮೂಹದಿಂದ ತುಳುವು ಮೊತ್ತಮೊದಲು ಬೇರೆಯಾದ ಕಾರಣವೇ ತುಳುವಿನಲ್ಲಿ ಈ ಮೇಲೆ ಹೇಳಿದ ವಿಶಿಷ್ಟ ಅಂಶಗಳ ಉಳಿಕೆ ಬೆಳವಣಿಗೆ ಕಂಡುಬರುತ್ತದೆ. (ಸ್ಥಳಾಭಾವದ ಕಾರಣ ತುಳುವಿನ ಇನ್ನೂ ಕೆಲ ವಿಶಿಷ್ಟತೆಗಳನ್ನು ಇಲ್ಲಿ ಹೇಳಿಲ್ಲ.) ತುಳು ಭಾಷೆಯ ಕುರಿತ ಇನ್ನೂ ಹೆಚ್ಚಿನ ಸಂಶೋಧನೆ ಇನ್ನೂ ಅನೇಕ ಅಂಶಗಳನ್ನೂ ಬೆಳಕಿಗೆ ತರಲಿದೆ ಎನ್ನಬಹುದು,

೨೦. ತುಳುವಿನ ಮೊದಲ ಕಾದಂಬರಿ—

‘ಮಿತ್ಯ ನಾರಾಯಣ ಕತೆ’

—ಶ್ರೀ ಮುರಳೀಧರ ಉಪಾಧ್ಯ, ಹಿರಿಯಡಕ,

ಎ. ಎನ್. ಶೀನಪ್ಪ ಹೆಗ್ಡೆ (1887-1966) ಅವರು ಬರೆದಿರುವ ‘ಮಿತ್ಯ ನಾರಾಯಣ ಕತೆ’ ಮತ್ತು ಎಸ್. ಯು. ಪಣಿಯಾಡಿ (1897-1959) ಯವರ ‘ಸತಿ ಕಮಲೆ’ ನನಗೆ ಸಿಕ್ಕಿರುವ ಕನ್ನಡ ಲಿಪಿಯಲ್ಲಿ ಅಚ್ಚಾಗಿರುವ ಎರಡು ತುಳು ಕಾದಂಬರಿಗಳು. ಶೀನಪ್ಪ ಹೆಗ್ಡೆಯವರ ಕೃತಿಯ ಒಂದು ಪರಿಚಯ ಈ ಬರೆಹದ ಉದ್ದೇಶ.

ಇದು ಎಸ್. ಯು. ಪಣಿಯಾಡಿಯವರ ‘ತುಳುವ ಸಾಹಿತ್ಯಮಾಲೆ’ಯ ಹತ್ತನೇ ಪ್ರಕಟಣೆಯಾಗಿದೆ. (1935). ಈ ಕಾದಂಬರಿ ತುಳುವಿನ ಮೊದಲ ಕಾದಂಬರಿ ಎಂದು ಹೇಳಬಹುದು ಮಹಾತ್ಮಾ ಗಾಂಧೀಜಿಯವರ ಸತ್ಯಾಗ್ರಹದಲ್ಲಿ ಸೇರಿದ್ದಕ್ಕಾಗಿ ಬ್ರಿಟಿಷ್ ಸರಕಾರ ಶೀನಪ್ಪ ಹೆಗ್ಡೆ, ಕಿಲ್ಲೆ ನಾರಾಯಣ ಶೆಟ್ಟಿ, ಮತ್ತು ಎಸ್. ಯು. ಪಣಿಯಾಡಿ ಅವರನ್ನು ಐದೂವರೆ ತಿಂಗಳು ವೆಲ್ಲೂರಿನ ಸೆರೆಮನೆಯಲ್ಲಿರಿಸಿತು. ಶೀನಪ್ಪ ಹೆಗ್ಡೆಯವರು ತಮ್ಮ ಮುನ್ನುಡಿಯಲ್ಲಿ ಹೀಗೆ ಹೇಳಿದ್ದಾರೆ— “ಒಂದು ದಿನ ರಾತ್ರಿ ನಿದ್ದೆ ಬಾರದಿದ್ದಾಗ ಕಿಲ್ಲೆ ನಾರಾಯಣ ಶೆಟ್ಟರು ಒಂದು ಕತೆ ಹೇಳಿದರು. ಮರುದಿನ ಬೇರೇನೂ ಕೆಲಸವಿಲ್ಲದ್ದರಿಂದ ನಾನು ಆ ಕತೆಯನ್ನು ಬರೆಯತೊಡಗಿದೆ.”

‘ಮಿತ್ಯ ನಾರಾಯಣ ಕತೆ’-ಕಾದಂಬರಿಯ ವಸ್ತುವನ್ನು ಸಂಗ್ರಹಿಸಬಹುದು, ತುಳುನಾಡಿನ ಆಡಳಿತ ಜೈನರ ಕೈಯಲ್ಲಿದ್ದ ಕಾಲ, ಒಂದು ಹೆಣ್ಣಿನ ಒಂದು ಗಂಡಿನ ಪ್ರಣಯದ ಕತೆ. ವೆಂಕಟ್ರಮಣ ಭಟ್ಟರ ಮಗ ನಾರಾಯಣ. ಸಂಕ್ರಯಾಚಾರಿ ಅವನ ಗೆಳೆಯ. ಚೌಟರ ಅರಸು ಚೆನ್ನರಾಯನ ತಂಗಿಯ ಮಗಳು ಸಿರಿ. ಅರಸು ಮನೆತನದ ಏಕಮಾತ್ರ ಸಂತಾನ, ಸಿರಿ ಚದುರ ತರುಣಿ, ಅವಳಿಗೆ ಬಂಗಾರದ ಆಸೆಯಿಲ್ಲ. ‘ಹಣವನ್ನು ಊರಿನ ಅಭಿವೃದ್ಧಿಗಾಗಿ ಖರ್ಚು ಮಾಡಬೇಕು’ ಎನ್ನುವವಳು. ಚೌಟರ ಪುತ್ತಿಗೆಯ ಜಾತ್ರೆ ನೋಡಲು ಬಂದ ನಾರಾಯಣ ಸಿರಿಯ ಚಂದ ನೋಡಿ ಮರುಳಾಗುತ್ತಾನೆ. ಮನೆಗೆ ಹೋಗಿ ಹಾಸಿಗೆ ಹಿಡಿಯುತ್ತಾನೆ. ‘ಪ್ರೇಮಜ್ವರದಿಂದ’. ಭವಿಷ್ಯ ಕೇಳುತ್ತಾರೆ. ರಾಶಿ ನೋಡುತ್ತಾರೆ, ಪುಟ್ಟಣ್ಣ ಭಟ್ಟರು ‘ಇದು ಪಿತ್ತರೋಗ’ ಎನ್ನುತ್ತಾರೆ ಮಂತ್ರವಾದಿ ‘ಇದು ರಾವು ಗುಳಿಗನ ಸೋಂಕು’ ಎನ್ನುತ್ತಾನೆ. ‘ಒಂದು ಸ್ತ್ರೀ ಪ್ರೇತದ ಸೋಂಕು’ ಎನ್ನುತ್ತಾನೆ ಕನ್ನಬಲ್ಲಾಯ. ಏನು ಮಾಡಿದರೂ ನಾರಾಯಣನ ಅನಾರೋಗ್ಯ ಹೆಚ್ಚಾಗುತ್ತದೆ, ಸಂಕ್ರಯ ಗುಟ್ಟಿನಲ್ಲಿ ಕೇಳಿದಾಗ ನಾರಾಯಣ “ನಿದ್ದೆ ಮಾಡಿದರೆ ಬೆಳಗ್ಗಿನ ವರೆಗೆ ಸಿರಿಯೇ ಕನಸಿನಲ್ಲಿ ಬರುತ್ತಾಳೆ” ಎನ್ನುತ್ತಾನೆ. ನಾರಾಯಣ ಯಾರಿಗೂ ತಿಳಿಯದಂತೆ

ಸಿರಿ ಇರುವ ಉಪ್ಪರಿಗೆಗೆ ಹೋಗಲು ಅನುಕೂಲವಾಗುವಂತೆ ಸಂಕ್ರಯ ಒಂದು ಮರದ 'ಕೆಂಗಿಡುಗ'ವನ್ನು ಮಾಡಿಕೊಡುತ್ತಾನೆ. ಈ ಕೀಲಿನ ಕೆಂಗಿಡುಗದ ಮೇಲೆ ಕುಳಿತು ಹಾರಿ ಕೊಂಡು ಎಲ್ಲಿಗೂ ಹೋಗಿಬರಬಹುದು. ನಾರಾಯಣ ಕೀಲಿನ ಕೆಂಗಿಡುಗದ ಮೇಲೆ ಕುಳಿತು ಸಿರಿ ಇದ್ದ ಅರಮನೆಯ ಉಪ್ಪರಿಗೆಗೆ ಹೋಗುತ್ತಾನೆ. ಅವನು ಸಿರಿಯನ್ನು ತಬ್ಬಿಕೊಳ್ಳು ವಷ್ಟರಲ್ಲಿ ಅವಳಿಗೆ ಎಚ್ಚರವಾಗುತ್ತದೆ. 'ಬಾಯಿ ಇದ್ದ ಮಗ ಬದುಕುತ್ತಾನೆ' ಎನ್ನುವಂತೆ ನಾರಾಯಣ ಸಿರಿಯೊಡನೆ 'ನಾನು ದ್ವಾಪರ ಯುಗದ ಕೃಷ್ಣ, ನೀನು ರಾಧೆ' ಎನ್ನುತ್ತಾನೆ. ಹದಿಹರಯದ ಹುಡುಗಿ ಸಿರಿ, ನಾರಾಯಣ ದೇವರೆಂದೇ ನಂಬುತ್ತಾಳೆ. ಹೀಗೆ ಸಿರಿ-ನಾರಾಯಣರು ಗುಟ್ಟಿನಲ್ಲಿ ಒಟ್ಟಾಗುತ್ತ ಸುಖಿಸುತ್ತಿರುತ್ತಾರೆ, ಸಿರಿ ಬಸುರಿಯಾದಾಗ ಇದು 'ದೇವರೆ ಮಾಡಿದ ಬಸಿರು' ಎಂದು ಅರಮನೆಯ ಹೆಂಗಸರು ಮತ್ತು ಅವಳ ಮಾವ ಅರಸನೂ ನಂಬುತ್ತಾರೆ, ಊರಿನ ಕೆಲವರು ಮಾತ್ರ 'ಅರಸನ ಸೊಸೆ ಮದುವೆಯಾಗದೆಯೇ ಹೆತ್ತಳಂತೆ' ಎಂದು ಮಾತನಾಡಿಕೊಳ್ಳುತ್ತಾರೆ. ಚೌಟರ ಅರಸನ ರಾಜ್ಯದಲ್ಲಿ ಅಧಿಕಾರಿಗಳ ಕಾಟ ಜಾಸ್ತಿಯಾಗುತ್ತದೆ. ಏನೂ ತಪ್ಪು ಮಾಡದ ಜನರನ್ನೂ ಸೆರೆಮನೆಗೆ ತಳ್ಳುತ್ತಾರೆ. ಇದನ್ನು ಕೇಳಿ ನಂದಾವರದ ರಾಜ ಮತ್ತು ಕಾರ್ಕಳದ ರಾಜ ಯುದ್ಧಕ್ಕೆ ಬರುತ್ತಾರೆ. ಅರಸ ಮತ್ತು ಸಿರಿ- ಯುದ್ಧದಲ್ಲಿ ಗೆಲ್ಲಿಸಬೇಕೆಂದು 'ಕೀಲಿಯ ಕೆಂಗಿಡುಗ'ದ ನಾರಾಯಣ ನನ್ನು ಪ್ರಾರ್ಥಿಸುತ್ತಾರೆ. ನಾರಾಯಣನಿಗೆ ತಲೆಬಿಸಿಯಾಗಿ, ಇದುವರೆಗೆ ಮರೆತಿದ್ದ ತನ್ನ ಗೆಳೆಯ ಸಂಕ್ರಯನಲ್ಲಿಗೆ ಹೋಗುತ್ತಾನೆ. ಸಂಕ್ರಯ ಒಂದು ಮರದ ಚಕ್ರ ಮಾಡಿಕೊಟ್ಟು ನಾರಾಯಣನನ್ನು 'ಮಿತ್ಯ ನಾರಾಯಣ' (ಸುಳ್ಳು ನಾರಾಯಣ) ದೇವರಾಗಿ ಮಾಡು ತ್ತಾನೆ. ಈ ಮಿತ್ಯನಾರಾಯಣ 'ಕೀಲಿನ ಕೆಂಗಿಡುಗ'ದಲ್ಲಿ ಕುಳಿತುಕೊಂಡು ಹಾರುತ್ತಿದ್ದಾಗ ಸತ್ಯನಾರಾಯಣ ದೇವರ ಚಕ್ರ ಬಂದು 'ಕೀಲಿನ ಕೆಂಗಿಡುಗ'ದ ರೆಕ್ಕೆಗೆ ಬೆಂಕಿಕೊಟ್ಟು ಹೋಗುತ್ತದೆ. 'ಮಿತ್ಯನಾರಾಯಣ' ಕೆಳಗೆ ಬಿದ್ದು ಒಂದೂವರೆ ಕಾಲಿನವನಾಗುತ್ತಾನೆ. ಆ ಮೇಲೆ ಎಲ್ಲಿಗೆ ಹೋಗಬೇಕಾದರೂ ಅವನನ್ನು ಹೊತ್ತುಕೊಂಡು ಹೋಗಬೇಕಾಗುತ್ತದೆ.

ಶೀನಪ್ಪ ಹೆಗ್ಗಡೆಯವರು ಈ ಕೃತಿಯ ಮುನ್ನುಡಿಯಲ್ಲಿ "ನಮ್ಮ ಮಾತೃಭಾಷೆ ಯಾಗಿರುವ ತುಳುವಿನಲ್ಲಿ ಬ್ರಾಹ್ಮಣರ ತುಳು, ಉದ್ಯಾವರದ ತುಳು, ಕಾರ್ಕಳದ ತುಳು, ಉಬಾರ್ ತುಳು (ಉಪ್ಪಿನಂಗಡಿ, ಪುತ್ತೂರು), ಕನಿಯಾರ ತುಳು (ಕಾಸರಗೋಡು), ಫಲಿ ಮಾರು ತುಳು (ಮೂಲ್ಕಿ, ಪಡುಬಿದ್ರೆ), ಪುರಾಲ್ ತುಳು (ಪೊಳಲಿ) ಮೊದಲಾದ ಆರೇಳು ತರದ ತುಳುಗಳಿವೆ. ಎಲ್ಲ ಕಡೆಯ ತುಳು ನನಗೆ ತಿಳಿದಿಲ್ಲವಾದ್ದರಿಂದ 'ಪುರಾಲ್ (ಪೊಳಲಿ)' ತುಳು ಭಾಷೆಯಲ್ಲಿ ಈ ಕತೆಯನ್ನು ಬರೆದಿದ್ದೇನೆ. ಬೇರೆ ಊರಿನವರೂ ಅವ ರವರ ಊರಿನಲ್ಲಿ ಮಾತನಾಡುವ ತುಳುಭಾಷೆಯಲ್ಲಿ ಪುಸ್ತಕಗಳನ್ನು ಬರೆದರೆ. ತುಳು-ನಿಘಂಟು ರಚಿಸುವವರಿಗೆ ಸರಿ-ತಪ್ಪು ತಿಳಿಯಲು ಸಹಾಯವಾದೀತು" ಎಂದಿದ್ದಾರೆ. ಈ ಕಾದಂಬರಿಯಲ್ಲಿ 'ಪುರಾಲಿನ ತುಳು'ವಲ್ಲದೆ ಜೈನರ ತುಳುವೂ ಇದೆ, ಶೀನಪ್ಪ ಹೆಗ್ಗ ಡೆಯವರು ಜೈನರ ಸಂಭಾಷಣೆಯನ್ನು ಜೈನರ ತುಳುವಿನಲ್ಲಿಯೇ ಬರೆದಿದ್ದಾರೆ. ಈ

ಕಾದಂಬರಿಯಲ್ಲಿ ಅಲ್ಲಲ್ಲಿ ಬರುವ ಸಂಭಾಷಣೆ ಸಹಜವಾಗಿದೆ. ಇಲ್ಲಿನ ಹೆಣ್ಣುಮಕ್ಕಳು ಅಡುಗೆ, ಬಂಗಾರ, ಸೀರೆಗಳ ವಿಷಯವನ್ನೇ ಮಾತನಾಡುತ್ತಾರೆ.

ಈ ಕಾದಂಬರಿಗೆ 'ಮುನ್ನುಡಿ' ಬರೆದಿರುವ ಬಡಕಬೈಲು ಪರಮೇಶ್ವರಯ್ಯನವರು ಈ ಕೃತಿಯಲ್ಲಿ, "ಒಂದು ಇದೆ, ಒಂದು ಇಲ್ಲ ಎಂದು ಹೇಳಲಸಾಧ್ಯವಾಗುವಂತೆ ಎಲ್ಲ ವಿಷಯಗಳೂ ಇವೆ" ಎಂದು ಹೇಳಿರುವುದು ಒಪ್ಪಬೇಕಾದ ಮಾತು. ತುಳುನಾಡಿನ ಸಂಸ್ಕೃತಿಯ ಅಧ್ಯಯನಾಸಕ್ತರಿಗೆ ಬೇಕಾದ ಎಷ್ಟೋ ವಿವರಗಳು–ಪೊಳಲಿಯ ದೇವಸ್ಥಾನ ಉತ್ಸವಗಳ ವಿವರ. ತುಳುನಾಡಿನ ಗಾದೆಗಳು, ಆಭರಣಗಳು, ಬಿರುದಾವಳಿ, ಯುದ್ಧದ ತಯಾರಿ, ನಾಗಕಟ್ಟು–ಇಲ್ಲಿ ಸಿಗುತ್ತವೆ. ಅಡಿಯಿಂದ ಮುಡಿಯತನಕ ಹೆಣ್ಣಿನ ದೇಹದ ಒಂದಂಗುಲವೂ ಕಾಣದಂತೆ ಮುಚ್ಚುವ ಬಂಗಾರದ ಆಭರಣಗಳ ಪಟ್ಟಿ ಹೀಗಿದೆ— "ಬಂಗಾರದ ಒಂಕಿ, ಪೈಜನಿ, ಕಾಲಿನ ಸರಪಳಿ. ಪಿಲ್ಲಿಮೆಂಟ. ಕಾಲುಂಗುರ, ಸೊಂಟಕ್ಕೆ ನೂಲು. ಸರಪಳಿ. ಡಾಬು, ದೋರೆ, ದಂಡು, ಚಲಕಿ, ದೆಕ್ಕಾಜಿ, ಚೂಡ, ವಜ್ರಚೂಡ, ಕಿಂಕಿನಿ, ಕಡವು, ಬಳೆ, ಕಂಕಣ, ಗಟ್ಟಿಬಳೆ, ಮುದ್ರೆಯುಂಗುರ, 'ಕಜೆಪ್ಪುದುಂಗೀ', ಕೊರಳಿಗೆ ಗೆಜ್ಜೆಟೀಕು. ಅಡ್ಡಿಗೆ, ಕಾಸಿನ ಮಾಲೆ, ಅರ್ಧಕಾಸಿನ ಮಾಲೆ, ಪುತ್ಥಳಿಸರ. ಇಸ್ತಾಂಬುಲು ಸರ, ಚಕ್ರಸರ, ಬಜಿಲ್‌ಸರ. ಕಂಠಿಸರ, ಗುಂಡುಸರ, ನೆಲ್ಲಿಮಾಲೆ. ಕರಿಮಣಿ, ಕಜಿಪುಕ್ಯಾಸರ, ಕಿವಿಗೆ ಕೊಪ್ಪು, ಬುಗುಡಿಸರಪಳಿ, ಚಂದ್ರಮುರಸರಪಳಿ, ಓಲೆ, ಬೆಂಡೋಲೆ, ತಲೆಗೆ ಕೇದಗೆ, ಬೇರೆ ಬೇರೆ ಹೂಗಳು, ಉದುರಿದ ದಂಡೆ, ಚೂಡಾಮಣಿ ......" ಈ ಪಟ್ಟಿ ಇಲ್ಲಿಗೆ ಮುಗಿಯುವುದಿಲ್ಲ. ತುಳುನಾಡಿನಲ್ಲಿ ಒಂದು ಊರಿನಿಂದ ಇನ್ನೊಂದು ಊರಿಗೆ ದೂರ ಎಷ್ಟು ಎಂದು ಹೇಳುತ್ತಿದ್ದ ರೀತಿ ಹೀಗಿತ್ತು—"ಹೌದ ಬೀರ, ಇಲ್ಲಿಂದ ಪುತ್ತಿಗೆಗೆ ದೂರ ಎಷ್ಟು?" ಎಂದು ಕೇಳಿದ್ದಕ್ಕೆ ಬೀರ, "ಇಲ್ಲಿಂದ ಎಷ್ಟುಂಟು, ಮಣೇಲ್‌ನಿಂದ ಆನೆಗೆ ಒಮ್ಮೆ ಕರೆದಷ್ಟು. ಅಲ್ಲಿಂದ ದೆಪ್ಪದವಿಗೆ ಒಮ್ಮೆ ಕೂ ಹಾಕಿ ಕರೆದಷ್ಟು, ಮಿಜಾರಿನಿಂದ ತೋಡಾರಿಗೆ ಒಂದು ಕೊಂಬಿನ ಧ್ವನಿ ಕೇಳಿಸುವಷ್ಟು. ಅಲ್ಲಿಂದ ಮೇಲೆ ಹತ್ತುವಾಗ ಮಾತಾಡುವುದು ಕೇಳುತ್ತದೆ"

ಶೀನಪ್ಪ ಹೆಗ್ಗಡೆಯವರು ಬೇಕಾದಲ್ಲೆಲ್ಲ ತುಳುಗಾದೆಗಳನ್ನು ಪ್ರಯೋಗಿಸಿದ್ದಾರೆ. ಇದರಿಂದಾಗಿ ಅವರ 'ಪುರಾಲಿನ ತುಳು'ವಿನ ಸೊಗಸು ಹೆಚ್ಚಿದೆ– (೧) ನುಡಿಯೆರೆ ತೆರಿಯಂದಿನಾಲೆಗ್ ಪಿನ್ನಿ, ಅಡಿಯೆರೆ ತೆರಿಯಂದಿನಾಲೆಗ್ ಮನ್ನಿ [ಮಾತಾಡಲು ಬಾರದವಳಿಗೆ 'ಪಿನ್ನಿ' (ತವಡು), ಅಡುಗೆ ಮಾಡಲು ಬಾರದವಳಿಗೆ ಮನ್ನಿ (ಮಣ್ಣು)] (೨) ಎಡ್ಡೆ ಮರಕ್ ಬಂಜಲಿಗೆ ಬೇಗ (ಒಳ್ಳೆಯ ಮರಕ್ಕೆ ಬಂದಣಿಗೆ ಬೇಗ) (೩) ಕುರಿದ್ ಪೋಂಡಲಾ ಕೊರ್‌ದ್ ಪೋವೆರೆ ಆವಂದ್ (ಕೊಳೆತು ಹೋದರೂ ಕೊಟ್ಟು ಹೋಗಬಾರದು.) (೪) ಎಡ್ಡೆ ಬುದ್ದಿಡ್ ಗುಡ್ಡೆಡ್‌ಲಾ ಉಪ್ಪೊಲಿ (ಒಳ್ಳೆ ಬುದ್ಧಿಯಲ್ಲಿ ಬೆಟ್ಟದಲ್ಲೂ ಬದುಕಬಹುದು.) (೫) ಅಪ್ಪೆ ಎಡ್ಡೆ ಆಂಡ ಬಾಲೆ ಎಡ್ಡೆ, ಜಾಲ್ ಎಡ್ಡೆ ಆಂಡ ಅರಿ ಎಡ್ಡೆ (ತಾಯಿ ಒಳ್ಳೆಯವಳಾದರೆ ಮಗು ಒಳ್ಳೆಯದು, ಅಂಗಳ ಒಳ್ಳೆಯದಾದರೆ ಅಕ್ಕಿ ಒಳ್ಳೆಯದು.) (೬) ಅಂದಾಯಿ

ಪಾತೆರೊಗು ಸಂದಾಯ ಇಜ್ಜಿ (ಒಪ್ಪಬೇಕಾದ ಮಾತಿಗೆ ಪ್ರತ್ಯುತ್ತರವಿಲ್ಲ.) (೭) ಮಯಿರ್ ಮಯಿರೇ, ಕಕ್ಕೆ ಕಕ್ಕೆನೇ (ನವಿಲು ನವಿಲೇ, ಕಾಗೆ ಕಾಗೆಯೇ) (೮) ಕಂಚಾಲ್ ಇತ್ತ್‌ಂಡ ಎಂಚಲಾ ಉಣೊಲಿ (ಹಾಗಲಕಾಯಿ ಇದ್ದರೆ ಹೇಗಾದರೂ ಊಟ ಮಾಡ ಬಹುದು.) (೯) ಎಂಕೊಂಜಿ ಬಾಲೆ ಉಂಡು ಲೆಕ್ಕೆಸಿರಿ, ಯಾನ್ ಮಲ್ತಿ ಬದ್‌ಕ್ ಮಾತ ಐಕ್ ಸರಿ. (ನನಗೊಂದು ಮಗು ಇದೆ – ರಕ್ತೇಶ್ವರಿ, ನಾನು ಮಾಡಿದ ಸಂಪಾದನೆಯೆಲ್ಲ ಅದಕ್ಕೇ ಸರಿ.)

ಶೀನಪ್ಪ ಹೆಗ್ಗಡೆಯವರ ಶೈಲಿಗೆ ಉದಾಹರಣೆಯಾಗಿ ಅವರ ಗದ್ಯದ ತುಣು ಕೊಂದನ್ನು ಕನ್ನಡಕ್ಕೆ ಭಾಷಾಂತರಿಸುವುದರಿಂದ ಅದರ ಸ್ವಾರಸ್ಯ ಕೆಡುವುದೆಂಬ ಭಯ ನನಗಿದೆ, ಆದರೂ, ಅವರು ಜಾತ್ರೆಗೆ ಬರುವ ಜನರ ಮನೋಧರ್ಮವನ್ನು ವಿವರಿಸುವ ಭಾಗವನ್ನ ಇಲ್ಲಿ ಅನುವಾದಿಸಿದ್ದೇನೆ - "ಆದರೆ ಎಲ್ಲರೂ ಜಾತ್ರೆಗೆ ಬರುವುದು ದೇವರ ಮೇಲೆ ಭಕ್ತಿಯಿಂದಲೇ ಅಲ್ಲವೆಂದು ಎಲ್ಲರಿಗೂ ಗೊತ್ತಿದೆ, ಕೆಲವು ಜನರು ವ್ಯಾಪಾರ ಮಾಡಿ ಹೊಟ್ಟೆತುಂಬಿಸಲು; ಕೆಲವು ಜನ ಕಣ್ಣುಕಟ್ಟು ಮಾಡಿ ಕಾಸು ಸಂಪಾದಿಸಲು; ಕೆಲವು ಜನ ಕೂಟ. ಆಟಗಳನ್ನು ನೋಡಲು; ಕೆಲವು ಪಡ್ಡೆಹುಡುಗರ ಪೋಲಿ ಮಾತನಾಡಲು; ಕೆಲವು ಜನರು ಮುಂಡಕ್ಕಿ, ಹಣ್ಣು, ಚಕ್ಕುಲಿ, ತಿನ್ನಲು; ಕೆಲವು ಜನ ಮನೆಯಲ್ಲಿ ಹೆಂಗಸರು ಜಾತ್ರೆಗೆ ಹೋಗಬೇಕೆಂದು ಕಾತುಸಾಯಲು ಬಿಡದ್ದಕ್ಕೆ; ಕೆಲವು ತರುಣರು ಚಂದದ ತರುಣಿ ಯರಿಗೆ ತಮಾಷೆಮಾಡಲು; ಕೆಲವು ಜನ ತಮ್ಮ ಬಂಗಾರ ಆಭರಣ, ಉಡುಪುಗಳನ್ನು ಧರಿಸಿ ದೊಡ್ಡತನ ಮೆರೆಸಲು; ಹೀಗೆ ಬೆ ರೆ ಬೇರೆ ಹುಚ್ಚಿನಿಂದ ಬರುವುದರಿಂದಾಗಿ 'ಜನ ಮರುಳೋ ಜಾತ್ರೆ ಮರುಳೋ' ಎಂಬ ಗಾದೆ ಹುಟ್ಟಿದೆ".

ಉತ್ತಮ ಸಾಹಿತ್ಯದಲ್ಲಿ 'ಮಣ್ಣಿನ ವಾಸನೆ' ಇರಬೇಕು ಎನ್ನುತ್ತೇವೆ, 'ಮಿತ್ಯ ನಾರಾಯಣ ಕತೆ'ಯಲ್ಲಿ ತುಳುನಾಡಿನ ಮಣ್ಣಿನ ವಾಸನೆ ಎಲ್ಲೆಲ್ಲೂ ತುಂಬಿದೆಯೆಂದು ಹಿಂದೆ ಮುಂದೆ ನೋಡದೆ ಹೇಳಬಹುದು. ಎಷ್ಟೋ ಕಾವ್ಯಗಳಲ್ಲಿ ಕವಿಗಳು ಹೇಳುವ ಹಸಿ ಹಸಿ ಸುಳ್ಳುಗಳನ್ನು ನಾವು 'ಕಾವ್ಯಸತ್ಯ' ಎಂದು ಸ್ವೀಕರಿಸುತ್ತೇವೆ. 'ಮಿತ್ಯನಾರಾಯಣ ಕತೆ' ಯನ್ನು ಅದೇ ದೃಷ್ಟಿಯಿಂದ ನೋಡಿದರೆ ನಮಗೆ ತುಂಬ ಖುಷಿಯಾಗುತ್ತದೆ. ಈ 'ಮಿತ್ಯ ನಾರಾಯಣ' ನಮ್ಮನ್ನು 'ಕೀಲಿನ ಕೆಂಗಿಡುಗ'ದಲ್ಲಿ ಕುಳ್ಳಿರಿಸಿಕೊಂಡು ಕನಸಿನ ನಾಡೊಂದಕ್ಕೆ ಕರೆದುಕೊಂಡು ಹೋಗುತ್ತಾನೆ. ಈ ಕಾದಂಬರಿಯ ಚೆಲುವು ಏನೆಂದು ಅದನ್ನು ಓದಿದವರಿಗೇ ಗೊತ್ತು.

ಈ ಕಾದಂಬರಿಯಲ್ಲಿ ದೋಷಗಳಿಲ್ಲವೆಂದಲ್ಲ, 'ನಡೆವರೆಡಹದೆ ಕುಳಿತರೆಡಹು ವರೆ?'. ಇಂದಿಗೆ ನಲುವತ್ತು ವರುಷಗಳ ಹಿಂದೆ ಪ್ರಕಟವಾದ ಈ ತುಳು ಕಾದಂಬರಿ 'ಪಂಚತಂತ್ರ'ದ ಕತೆಯೊಂದರಿಂದ ಸ್ಫೂರ್ತಿ ಪಡೆದುದಾದರೂ, ಅನುವಾದವಲ್ಲ! ಇದೊಂದು ತುಳುವಿನ ಸ್ವತಂತ್ರ ಕಾದಂಬರಿಯೆಂಬುದು ಹೆಮ್ಮೆ ಪಡಬೇಕಾದ ಸಂಗತಿ!

X X X X X X

೨೧. ನಾಗವರ್ಮ II ನ "ವರ್ಧಮಾನ ಪುರಾಣ"ದ ಸರಿಯಾದ ಹೆಸರು

—ಡಾ. ಎಂ. ಚಿದಾನಂದ ಮೂರ್ತಿ, ಬೆಂಗಳೂರು.

ಇಮ್ಮಡಿ ನಾಗವರ್ಮನು ಒಂದು ಜೈನಪುರಾಣವನ್ನು ಬರೆದಿರಬಹುದೆಂಬ ಶ್ರೀ ಆರ್. ನರಸಿಂಹಾಚಾರ್ಯರ ಒಂದು ಸಾಧಾರವಾದ ಊಹೆ. ಕೆಲವು ಕಾಲ ಹಾಗೇ ಪ್ರಚಲಿತವಾಗಿದ್ದಿತು. ಆರಾದಲ್ಲಿ ದೊರೆತ ಆಚಣ್ಣನ ವರ್ಧಮಾನ ಪುರಾಣದ ಒಂದು ಹಸ್ತ ಪ್ರತಿಯಲ್ಲಿ "ನಾಗವರ್ಮ ಕೃತವರ್ಧ = 4" ಎಂದಿರುವುದನ್ನು ಆಧರಿಸಿ ಶ್ರೀ ಶೇಷಯ್ಯಂಗಾರ್ಯರು ಅಲ್ಲಿ ಸೂಚಿತವಾಗಿರುವ ಕಾವ್ಯ ವರ್ಧಮಾನ ಪುರಾಣವೆಂದೂ ಅದರ ಕರ್ತೃವಾದ ನಾಗವರ್ಮನು ಬೇರೊಬ್ಬನೆಂದೂ, ಕಾಲ ಸು ಕ್ರಿ. ಶ. 900 ಎಂದೂ ಊಹಿಸಿದರು.[1] ನಾಗವರ್ಮ IIನ ಕೃತಿಗಳಾದ ಕಾವ್ಯಾವಲೋಕನ, ಅಭಿಧಾನ ವಸ್ತುಕೋಶ, ಹಲಾಯುಧ ವಿರಚಿತ 'ಅಭಿಧಾನ ರತ್ನಮಾಲಾ' ಕೃತಿಗೆ ಬರೆದ ಕನ್ನಡ ಟೀಕು ಇವುಗಳ ಆರಂಭದಲ್ಲಿ ಬರುವ ವರ್ಧಮಾನ ಸ್ತೋತ್ರವನ್ನು ಗಮನಿಸಿ; ನಾಗವರ್ಮ II ನ ಅನುಪಲಬ್ಧ ಕೃತಿ ವರ್ಧಮಾನ ಪುರಾಣವಿರಬೇಕೆಂದೂ ಡಾ. ಎಂ. ಎಂ. ಕಲಬುರ್ಗಿಯವರು[2] ಊಹಿಸಿದ್ದು ಮುಂದೆ ಆ ಕೃತಿಯೇ ಸಿಕ್ಕಾಗ ಆ ಊಹೆ ನಿಜವಾಯ್ತು, ಮೂಡಬಿದರೆಯಲ್ಲಿ ತಮಗೆ ಅಕಸ್ಮಾತ್ ದೊರೆತ ಏಕೈಕ ಹಸ್ತಪ್ರತಿಯನ್ನು ಆಧಾರವಾಗಿಟ್ಟುಕೊಂಡು 1974ರಲ್ಲಿ ಶ್ರೀ ಬಿ. ಎಸ್. ಸಣ್ಣಯ್ಯನವರು ವರ್ಧಮಾನ ಪುರಾಣವನ್ನು ಪ್ರಕಟಿಸಿದ್ದು ಮಾತ್ರವಲ್ಲದೆ, ತಮ್ಮ ಪ್ರೌಢ ಉಪೋದ್ಘಾತದಲ್ಲಿ ಆ ಕೃತಿ ರಚನಾಕಾಲವು ಕ್ರಿ. ಶ. 1042 ಎಂದು ಸ್ಪಷ್ಟವಾಗಿ ಪ್ರತಿಪಾದಿಸಿದರು[3]. ಒಂದು ಸಂಗತಿ ಊಹೆಯಾಗಿದ್ದುದು ಕ್ರಮೇಣ ವಿಶದಗೊಳ್ಳುತ್ತಾ, ಸಮಸ್ಯೆಯಾಗಿದ್ದುದು ಬಿಚ್ಚಿಕೊಳ್ಳುತ್ತಾ ಬರುತ್ತದೆಂಬುದಕ್ಕೆ, ಅದೃಷ್ಟವಿದ್ದರೆ ಅದು ಪೂರ್ತಿ ಪರಿಹಾರವಾಗುತ್ತದೆಯೆಂಬುದಕ್ಕೆ ಮೇಲಿನದು ಒಂದು ನಿದರ್ಶನ. ಈ ಕೃತಿ ದೊರೆತದ್ದರಿಂದ, ಆಚಣ್ಣನ (1190) ವರ್ಧಮಾನ ಪುರಾಣವೇ ಕನ್ನಡದಲ್ಲಿ ಮಹಾವೀರನ ಬಗ್ಗೆ ಹುಟ್ಟಿರುವ ಮೊದಲ ಕಾವ್ಯವೆಂಬ ಪ್ರಾಶಸ್ತ್ಯ ತಪ್ಪಿ, ಆ ಕೀರ್ತಿ ನಾಗವರ್ಮನಿಗೆ ಲಭಿಸಿತು.

ನಾಗವರ್ಮ II ನ ಕೃತಿಯನ್ನು ವರ್ಧಮಾನ ಪುರಾಣವೆಂದು ಕರೆದಿರುವುದರಲ್ಲಿ ಅಂತಹ ದೊಡ್ಡ ಪ್ರಮಾದವೇನೂ ಇಲ್ಲ, ಆದರೆ, ಒಂದು ಕೃತಿಗೆ ಆ ಕೃತಿಕಾರ ಯಾವ ಹೆಸರನ್ನು ಕೊಟ್ಟಿದ್ದಾನೆಯೋ ಅದನ್ನೇ ಸ್ವಲ್ಪವೂ ವ್ಯತ್ಯಾಸವಿಲ್ಲದೆ ಗ್ರಂಥಸಂಪಾದಕ ಕೊಡುವುದು ಅಪೇಕ್ಷಣೀಯ ಮಾತ್ರವಲ್ಲ; ಕಡ್ಡಾಯವಾಗಿ ಹಾಗೇ ಕೊಡಬೇಕು. ನಾಗವರ್ಮ ತನ್ನ ಕೃತಿಯನ್ನು ಸ್ಪಷ್ಟವಾಗಿ ವೀರ ವರ್ಧಮಾನ ಪುರಾಣವೆಂದೇ ಕರೆದುಕೊಂಡಿ

ದ್ದಾನೆ. ತನ್ನ ಕೃತಿಯ ಹದಿನೈದನೆ ಆಶ್ವಾಸಾಂತ್ಯದ ಪುಷ್ಟಿಕೆಗಳಲ್ಲೂ (Colophon's) ವೀರ ವರ್ಧಮಾನ ಪುರಾಣವೆಂದೇ ಹೆಸರಿಸಿದ್ದಾನೆ! ಉದಾ:

"ಇದು ಸಕಳ ಸುಕವಿಜನ ಮನಸ್ಸರೋಜಿನೀ ರಾಜಹಂಸಾಯಮಾನ ಮಾನಾನೂನ ಕವಿತಾ ಗುಣೋದಯಂ ಶ್ರೀಮನ್ನಾಗವರ್ಮ ವಿರಚಿತಮಪ್ಪ ಶ್ರೀ ವೀರ ವರ್ಧಮಾನ ಪುರಾಣದೊಳ್ ಚತುರ್ವರ್ಗ ಸ್ವರೂಪೋಪದೇಶ ಕಥನದೊಳರ್ಥೋದ್ದೇಶಕಥನಂ ಪೀಠಿಕಾಪ್ರಕರಣಂ ಪ್ರಥಮಾಶ್ವಾಸಂ"

ಹದಿನಾರನೆ ಅಂದರೆ ಕೊನೆಯ ಅಶ್ವಾಸಾಂತ್ಯದ ಪುಷ್ಟಿಕೆಯಲ್ಲಿ ಮಹಾವೀರ ಸ್ವಾಮಿ ಚರಿತ ಎಂದು ಕರೆದಿದ್ದರೂ, ಆ ಪುಷ್ಟಿಕೆಯ ಅನಂತರ ಮತ್ತೆ ವೀರ ವರ್ಧಮಾನ ಪುರಾಣಂ ಎಂದು ಸ್ಪಷ್ಟವಾಗಿ ಹೇಳಿ ತನ್ನ ಕೃತಿಯ ನಿಜವಾದ ಹೆಸರೇನೆಂಬುದನ್ನು ಸೂಚಿಸಿದ್ದಾನೆ! ಆ ಭಾಗ ಹೀಗಿದೆ:

"ಇದು ಸಕಲ ಸುಕವಿಜನಮನಸ್ಸರೋಜಿನೀ ವನಹಂಸಾಯಮಾನ ಮಾನಾನೂನ ಕವಿತಾಗುಣೋದಯ ಶ್ರೀಮನ್ನಾಗವರ್ಮ ವಿರಚಿತಮಪ್ಪ ಶ್ರೀ ಮಹಾವೀರ ಸ್ವಾಮಿ ಚರಿತದೊಳ್ ಚತುರ್ವರ್ಗ ಸ್ವರೂಪೋಪದೇಶ ಕಥನದೊಳ್ ಮೋಕ್ಷೋದ್ದೇಶ ಕಥನಂ ಷೋಡಶಾಶ್ವಾಸಂ".

ಶ್ರೀ ವೀರ ವರ್ಧಮಾನ ಪುರಾಣಂ ಸಮಾಪ್ತಂ"

ಕವಿಯ ಹೆಸರಿನ ಹಿಂದೆ ಬಂದಿರುವ 'ಶ್ರೀಮನ್' ಎಂಬುದು ಹೇಗೆ ಸಾಂಪ್ರದಾಯಿಕ ಉಕ್ತಿಯೋ ಅಂತೆಯೇ ಕೃತಿಯ ಹೆಸರಿನ ಹಿಂದ ಇರುವ 'ಶ್ರೀ' ಭಾಗವನ್ನು ಹಾಗೆಯೇ ಭಾವಿಸಬೇಕು, ಅವೆರಡೂ ಹೆಸರುಗಳ ಭಾಗಗಳಲ್ಲ.

'ವೀರ' ಎಂಬುದು ಕೃತಿಯ ನಾಯಕನಾದ ವರ್ಧಮಾನನ ಹೆಸರಿನ ಮುಖ್ಯ ಭಾಗವೆಂಬುದು ಕವಿಯ ಇತರ ಮಾತುಗಳಿಂದಲೂ ಸೂಚಿತವಾಗುತ್ತದೆ,

"ಈ ಕೃತಿಗಧಿನಾಯಕಂ ನೆಗೞ್ದ ವೀರ ಜಿನಂ" (ವ. ಪು. 1.21)

"ಪೇೞಲ್ಕಂ ಬಗೆದೆಂ ವೀರನಾಥ ಚರಿತಾಗಮುಮಂ" (ಅದೇ 1-33)

"ಶ್ರೀ ವೀರ ಚರಿತಮಂ"(ಅದೇ 1 -36)

ಕವಿಯ ತಾಯಿ ವೀರಕಬ್ಬೆ ಮತ್ತು ಗುರುಗಳು ವೀರಭಟ್ಟಾರಕರು ಎಂಬುದನ್ನು ಗಮನಿಸಿದರೆ (1–23), ಕವಿ 'ವೀರ ವರ್ಧಮಾನ'ನ ಕತೆಯನ್ನು ತನ್ನ ಕೃತಿಗೆ ಆರಿಸಿಕೊಳ್ಳಲೂ ಅವು ಪ್ರೇರಣೆ ಕೊಟ್ಟಿರಬಹುದು. ಹೀಗಿದ್ದೂ, ಶ್ರೀ ಬಿ. ಎಸ್. ಸಣ್ಣಯ್ಯನವರು 'ವೀರ' ಎಂಬುದು 'ವಿಶೇಷಣ'ವಾಗಿರುವುದರಿಂದ ಹೆಸರಿನ ಭಾಗದಿಂದ ಅದನ್ನು ತೆಗೆದು ಹಾಕಲಾಗಿದೆಯೆಂದು ಎರಡು ಕಡೆ ಸೂಚಿಸಿದ್ದಾರೆ[1]. ಆದರೆ ಮೇಲೆ ತೋರಿಸಿರುವಂತೆ 'ವೀರ' ಎಂಬುದು 'ಶ್ರೀ'ಯಂತೆ ತೆಗೆದುಹಾಕಬಹುದಾದ ಭಾಗವಲ್ಲವೆಂಬುದನ್ನು ಒತ್ತಿ ಹೇಳಬೇಕಾಗಿಲ್ಲ. 'ಶ್ರೀ' ಮತ್ತು 'ವೀರ' ಎಂಬವು ಒಂದೇ ಸ್ತರದ ವಿಶೇಷಣಗಳಲ್ಲ, (ಮತ್ತು ನೋಡಿ-'ವೀರ ಜಿನಂ; 'ವೀರ' ಸ್ವಾಮಿ', 'ಮಹಾವೀರ ಸ್ವಾಮಿ', 'ಮಹಾವೀರ ಯೋಗಿ'), ಜೊತೆಗೆ 'ವೀರ' ಎಂಬುದು ಜಿನಶಿಶುವಿಗೆ ಇಂದ್ರನು ಇಟ್ಟ ಹೆಸರು ಎಂಬು

ದನ್ನು ಮರೆಯಬಾರದು. ("ಚತುರ್ವಿಂಶತೀ ಪರಮಾತ್ಮಂ ಭುವನತ್ರಯಾಭಿವಿನುತಶ್ರೀ ವೀರ ನಾಮಮಂ ಶುಭಾಕರನೆಂದೊಂದಿರೆ ಪುಣ್ಯನಾಮಕರಣಂ ಗೆಯ್ದಂ ಸಹಸ್ರೇಕ್ಷಣಂ"– ವ. ಪು. 12–57) ಆದ್ದರಿಂದ, ವೀರ ವರ್ಧಮಾನ ಪುರಾಣ ಎಂಬುದೇ ಕವಿ ತನ್ನ ಕೃತಿಗೆ ಇಟ್ಟಿರುವ ಹೆಸರೆಂಬಲ್ಲಿ ಯಾವ ಅನುಮಾನವೂ ಕಾಣುವುದಿಲ್ಲ.

ಆಚಣ್ಣನದು ವರ್ಧಮಾನ ಪುರಾಣ ಎಂಬುದು ಎಲ್ಲರಿಗೂ ತಿಳಿದ ಸಂಗತಿ. (ಆಶ್ವಾಸಾಂತ್ಯದ ಪುಷ್ಪಿಕೆಯಲ್ಲಿ ಇದೇ ಹೆಸರಿದೆ.) ಇಮ್ಮಡಿ ನಾಗವರ್ಮನದು ವೀರ ವರ್ಧಮಾನ ಪುರಾಣ. ಈ ಎರಡೂ ಚಂಪೂ ಕಾವ್ಯಗಳು. ಮತ್ತು ಕೃತಿಯ ಹೆಸರಿನಿಂದಲೇ ಸುಲಭವಾಗಿ ಬೇರೆ ಬೇರೆ ಎಂದು ಗುರುತಿಸಬಹುದಾದ ಹೆಸರುಗಳನ್ನು ಹೊಂದಿವೆ. 'ವೀರ ವರ್ಧಮಾನ ಪುರಾಣ'ವೆಂದು ಹೇಳಿದಾಗ ಅದು ಯಾರ ಕೃತಿ ಎಂಬುದು ಆ ಹೆಸರಿನಿಂದಲೇ ಸ್ಪಷ್ಟವಾಗುತ್ತವೆ, 'ವರ್ಧಮಾನ ಪುರಾಣ'ವೆನ್ನುವ ಒಂದು ಸಾಂಗತ್ಯವೂ ಉಂಟು. (ಕರ್ತೃ ಸು, 1600ರಲ್ಲಿದ್ದ ಜಿನಸೇನ ದೇಶವ್ರತಿ). ಪದ್ಮಕವಿ ಎಂಬುವನು (ಸು. 15-8) ಬರೆದ 'ವರ್ಧಮಾನ ಚರಿತೆ' ಎಂಬ ಸಾಂಗತ್ಯ ಕೃತಿಯೂ ಉಂಟು. 'ವೀರ ವರ್ಧಮಾನ ಪುರಾಣ'ವೆಂಬುದು ತನ್ನ ಹೆಸರಿನಿಂದಲೇ ಉಳಿದ ಕೃತಿಗಳಿಂದ ಬೇರ್ಪಡಿಸಿಕೊಳ್ಳುವುದರಿಂದ, ಎಲ್ಲಕ್ಕಿಂತ ಹೆಚ್ಚಾಗಿ ಅದು ಕವಿಯೇ ಇಟ್ಟ ಹೆಸರಾಗಿರುವುದರಿಂದ ಅದೇ ಗ್ರಂಥ ಸಂಪಾದಕರು ಇಡಬೇಕಾದ್ದು, ಲೇಖಕರು ಬಳಸಬೇಕಾದ್ದು.

ಒಮ್ಮೆ ಒಂದು ಕೃತಿಗೆ ತಪ್ಪಾಗಿ ಹೆಸರು ಕೊಟ್ಟು, ಅದು ಬಳಕೆಗೆ ಬಂದಮೇಲೆ ಅದನ್ನು ತಿದ್ದುವುದು ಎಷ್ಟು ವ್ಯರ್ಥ ಪ್ರಯಾಸ! ಆದರೂ, ಈಗಲಾದರೂ ಇಮ್ಮಡಿ ನಾಗವರ್ಮನ ಕೃತಿ ವೀರ ವರ್ಧಮಾನ ಪುರಾಣವೆಂದು ವ್ಯವಹರಿಸಲಾರಂಭಿಸುವುದು ತೀರ ಅಗತ್ಯವಾಗಿ ತೋರುತ್ತದೆ.

ಹೀಗೆ ಕೃತಿಗಳಿಗೆ ತಪ್ಪಾಗಿ ಹೆಸರು ಕೊಟ್ಟು ಅವು ಬಳಕೆಗೆ ಬಂದಿರುವುದಕ್ಕೆ ಇನ್ನೂ ಕೆಲವು ಉದಾಹರಣೆಗಳು ಇವೆ. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಉಲ್ಲೇಖಿಸುತ್ತೇನೆ.

ಪ್ರಚಲಿತ ಹೆಸರು	ಕೃತಿಕಾರ ಕೊಟ್ಟ ಹೆಸರು
1) ಕಮಲಭವನ 'ಶಾಂತೀಶ್ವರಪುರಾಣ'	1. ಪುಷ್ಪಿಕೆಗಳಲ್ಲಿ 'ಶಾಂತೇಶ್ವರ ಪರಮ ಪುರಾಣ' 2. ಕಾವ್ಯದಲ್ಲಿ 'ಶಾಂತೇಶ್ವರ ಚರಿತ'
2) ದೇವ ಕವಿಯ 'ಕುಸುಮಾವಳೀ ಕಾವ್ಯ'	1. ಪುಷ್ಪಿಕೆಗಳಲ್ಲಿ 'ಕುಸುಮಾವಳೀ ಮಹಾಪ್ರಬಂಧ' 2, ಕಾವ್ಯದಲ್ಲಿ 'ಕುಸುಮಾವಳಿ'

3) ರುದ್ರಭಟ್ಟನ 'ಜಗನ್ನಾಥ ವಿಜಯ' — 1. ಪುಷ್ಪಿಕೆಗಳಲ್ಲಿ 'ಜಗನ್ನಾಥ ವಿಜಯಾ ಮಹಾ ಪ್ರಬಂಧ', 2. ಕಾವ್ಯದಲ್ಲಿ 'ಜಗನ್ನಾಥ ವಿಜಯಂ'

4) ಇಮ್ಮಡಿ ಚಿಕ್ಕ ಭೂಪಾಲನ[6] ಸಾಂಗತ್ಯ — 1. ಪುಷ್ಪಿಕೆಯ ಭಾಗ ಇಲ್ಲ 2. ಕಾವ್ಯದಲ್ಲಿ ತನ್ನ ಕೃತಿಯ ಹೆಸರು 'ಕರ್ಣ ರಸಾಯನ' ಎಂದು ಸ್ಪಷ್ಟವಿದೆ,

ಪುಷ್ಪಿಕೆಯಲ್ಲಿ ಕವಿ ಕೊಟ್ಟಿರುವ ಹೆಸರಿಗೂ, ಅವನೇ ತನ್ನ ಕಾವ್ಯದ ಆರಂಭದ. ಅಂತ್ಯದ ಪದ್ಯಗಳಲ್ಲಿ ಕೊಟ್ಟಿರುವ ಹೆಸರಿಗೂ ಸ್ವಲ್ಪ ಭೇದವಿದ್ದರೆ ಒಟ್ಟಾರೆ ಪುಷ್ಪಿಕೆಯಲ್ಲಿ ಬಂದಿರುವ ಹೆಸರೇ ಸ್ವೀಕಾರಾರ್ಹವಾಗುತ್ತದೆ. ಏಕೆಂದರೆ, ಆ ಹೆಸರು ಎಲ್ಲ ಕಡೆಗೂ ಬಂದಿರುತ್ತದೆ. ಮತ್ತು ಪುಷ್ಪಿಕೆಯು ಗದ್ಯದಲ್ಲಿರುವುದರಿಂದ ಅಲ್ಲಿ ಕವಿ ತಾನು ಇಡಬೇಕೆಂದಿರುವ ಹೆಸರನ್ನು ಮಾರ್ಪಾಟು ಮಾಡುವ ಆಗತ್ಯವಿರುವುದಿಲ್ಲ, ಪದ್ಯದಲ್ಲಾದರೆ, ತನ್ನ ಕೃತಿಯ ಹೆಸರನ್ನು ಛಂದಸ್ಸಿಗೆ ಅನುಗುಣವಾಗಿ ಸ್ವಲ್ಪ ಹಿಗ್ಗಿಸಿಬಹುದು ಅಥವಾ ಕುಗ್ಗಿಸಿರಬಹುದು ಅಥವಾ ಅದೇ ಅರ್ಥ ಬರುವಂತಹ ವಿವರಣಾತ್ಮಕ ಪದವನ್ನು ಹಾಕಿರಬಹುದು, ಆದರೆ ಆಶ್ವಾಸಾಂತ್ಯ ಗದ್ಯದಲ್ಲಿ ಈ ನಿರ್ಬಂಧವಿರುವುದಿಲ್ಲ.

ಆಶ್ವಾಸಾಂತ್ಯ ಪುಷ್ಪಿಕೆಗಳಲ್ಲಿ ಏಕಪ್ರಕಾರವಾಗಿ ಒಂದೇ ಹೆಸರು ಕಂಡುಬರುವುದಾದರೂ, ಒಂದೊಂದು ಪುಷ್ಪಿಕೆಯಲ್ಲಿ ತೀರ ವಿರಳವಾಗಿ ಸ್ವಲ್ಪ ವ್ಯತ್ಯಾಸದ ಹೆಸರು ಇರುವುದೂ ಆಶ್ಚರ್ಯವಲ್ಲ. ನಾಗವರ್ಮ IIನ ವೀರ ವರ್ಧಮಾನ ಪುರಾಣದಲ್ಲೇ ಹೀಗಾದಿದ್ದರೂ ಅವನ ಮನಸ್ಸಿನಲ್ಲಿದ್ದ ನಿರ್ದಿಷ್ಟ ಹೆಸರಾವುದು ಎಂಬ ಬಗ್ಗೆ ಅನುಮಾನ ಉಳಿಯುವುದಿಲ್ಲ ಮಲ್ಲಿನಾಥ ಪುರಾಣದಲ್ಲಿ (ಸಂ. ಶ್ರೀ ಬಿ. ಹೆಂಡಿ) ಎಲ್ಲ ಪುಷ್ಪಿಕೆಗಳಲ್ಲಿ 'ಮಲ್ಲಿನಾಥ ಪುರಾಣ' ವೆಂದೇ ಇದೆ, ಆದರೆ ಹದಿನಾಲ್ಕನೆ ಆಶ್ವಾಸಾಂತ್ಯ ಪುಷ್ಪಿಕೆಯಲ್ಲಿ 'ಮಲ್ಲಿನಾಥ ಚರಿತ ಪುರಾಣ'ವೆಂದಿದ್ದರೂ, 'ಚರಿತ' ಎನ್ನುವ ಭಾಗ ಎಲ್ಲ ಪ್ರತಿಗಳಲ್ಲಿಯೂ ದೊರಕದಿರುವ ಕಾರಣ ಅದನ್ನು ಕೈಬಿಡಬಹುದು.

ಗ್ರಂಥ ಸಂಪಾದಕರು ಗ್ರಂಥಗಳಿಗೆ ಹೆಸರು ಕೊಡುವಾಗ ಇನ್ನೂ ಹೆಚ್ಚಿನ ಲಕ್ಷ್ಯ ವಹಿಸುವುದು ತೀರಾ ಅಗತ್ಯವಾದಿದೆ[7].

ಟಿಪ್ಪಣಿಗಳು :

1. 'ನಾಗವರ್ಮ ಕವಿಗಳು ಎಷ್ಟು ಮಂದಿ' (Annuals of oriental Research, Madras. Vol VII–No. 1)

(ಉದ್ಧೃತ– ವರ್ಧಮಾನ ಪುರಾಣ ಸಂ, ಬಿ. ಎಸ್. ಸಣ್ಣಯ್ಯ, ಮೈಸೂರು ವಿಶ್ವವಿದ್ಯಾನಿಲಯ, 1974 ಪುಟ XIV)

2. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ (ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1973) ಪುಟ 274.

ಹಲಾಯುಧನ 'ಅಭಿಧಾನ ರತ್ನಮಾಲಾ' ಕೃತಿಯ ಅಪೂರ್ಣ ಕನ್ನಡ ಟೀಕು ಅಚ್ಚಾಗಿದೆ. (ಅ. ರ. ಮಾ. ಟೀಕಿ. ಸಂ. ಎ. ವೆಂಕಟ ರಾವ್ ಮತ್ತು ಎಚ್. ಶೇಷಯ್ಯಂಗಾರ್, ಮದ್ರಾಸ್ ವಿ. ವಿ. ನಿ. ಮದ್ರಾಸ್. 1940) ಈ ಟೀಕು ನಾಗವರ್ಮII ನದೆಂದು ಅವರು ಊಹಿಸಿದ್ದರೂ, ಆ ಊಹೆಗೆ ಆಧಾರಗಳೇ ಇಲ್ಲ. ಕೃತಿಯಲ್ಲಿ ಎಲ್ಲೂ ನಾಗವರ್ಮನ ಹೆಸರೇ ಬರುವುದಿಲ್ಲ. ನಾಗವರ್ಮII ನ 'ಅಭಿಧಾನ' ವಸ್ತುಕೋಶ', ಈ 'ಅಭಿಧಾನ ರತ್ನಮಾಲಾ ಟೀಕೆ' ಇವೆರಡರಲ್ಲೂ 'ಅಭಿಧಾನ' ಎಂಬ ಶಬ್ದವಿರುವುದು. ಇವೆರಡೂ ಆರಾದ ಒಂದೇ ಹಸ್ತಪ್ರತಿಯಲ್ಲಿ ದೊರಕಿರುವುದು–ಇಷ್ಟೇ ಈ ಟೀಕು ನಾಗವರ್ಮನ ದೆಂದು ಹೇಳಲು ಅವರಿಗೆ ಇರುವ ಮುಖ್ಯ ಆಧಾರ (ಪೀಠಿಕೆ. ಪು. 29). 'ಸ್ವರ್ಗಕಾಂಡಂ' ಕೊನೆಯಲ್ಲಿ, ಕನ್ನಡ ಟೀಕೆಯ ಬಳಿಕ "ನಾಗವರ್ಮ ವಿರಚಿತಾಭಿಧಾನ ರತ್ನಮಾಲೆಯ ಟೀಕೆಯೊಳ್ ಸ್ವರ್ಗಕಾಂಡಂ ಪ್ರಥಮಂ ಸಮಾಪ್ತಂ ಶ್ರೀ ವೀತರಾಗಾಯ ನಮಃ" ಎಂದು ಅಚ್ಚಾಗಿದೆ (ಪು. 25). "ಹಸ್ತಲಿಖಿತ ಪ್ರತಿಯಲ್ಲಿ ಈ ಟೀಕಾಕಾರನೆಂಬುದನ್ನು ಎಲ್ಲಿಯೂ ಹೇಳಿಲ್ಲ. ಕವಿಯ ವಿಷಯವನ್ನು ತಿಳಿಸತಕ್ಕ ಪ್ರಕರಣಾಂತ್ಯ ಗದ್ಯ ಭಾಗವೂ ಇಲ್ಲ" ಎಂದು ಸಂಪಾದಕರೇ ಹೇಳಿರುವಾಗ ಮೇಲೆ ಉದ್ಧರಿಸಿದ ಭಾಗವು ಈ ಟೀಕು ನಾಗವರ್ಮನದೆಂದು ಭಾವಿಸಿ ಅವರೇ ಬರೆದು ಸೇರಿಸಿದ್ದು ಎಂಬಲ್ಲಿ ಯಾವ ಅನುಮಾನವೂ ಕಾಣದು. ಗ್ರಂಥ ಸಂಪಾದನಾ ಶಾಸ್ತ್ರದ ದೃಷ್ಟಿಯಿಂದ ಇದು ತಪ್ಪುದಾರಿಗೆ ಒಯ್ಯುವಂತಹುದು.

ಭೂಮಿಕಾಂಡ ಪಾತಾಳ ಕಾಂಡಗಳ ಕೊನೆಯಲ್ಲೂ ಇಂತಹುದೇ ಮಾತಿದೆ. ಕೊನೆಯಲ್ಲಿ "ಶ್ರೀ ಗುರುಭ್ಯೋ ನಮಃ" ಎಂದಿದೆ (ಪುಟ, 102-113). ಸಾಮಾನ್ಯಕಾಂಡದ ಕೊನೆಯಲ್ಲೂ ಇಂತಹುದೇ ಮಾತಿದೆ, ಆದರೆ, ನಮಸ್ಕಾರ ವಾಕ್ಯ ಅಲ್ಲಿಲ್ಲ. ಸಂಪಾದಕರು ಈ ಮಾತುಗಳನ್ನು ಬರೆದು ಸೇರಿಸಿದ್ದಾರೆಂಬುದು ಸ್ಪಷ್ಟ.

ಡಾ. ಕಲಬುರ್ಗಿಯವರು 'ಅಭಿಧಾನ ರತ್ನಮಾಲಾ' ಕನ್ನಡ ಟೀಕಿನ ಆರಂಭದಲ್ಲಿ ವರ್ಧಮಾನ ಸ್ತೋತ್ರವಿದೆಯೆಂದು ಹೇಳಿರುವುದನ್ನು ನೋಡಿದರೆ, ಅವರು ವಾಸ್ತವವಾಗಿ ಗ್ರಂಥವನ್ನು ನೋಡಿಲ್ಲವೆಂಬುದು ಸ್ವಯಂ ವೇದ್ಯವಾಗುತ್ತದೆ, ಆರಂಭದಲ್ಲಿ ಅಂತಹ ಸ್ತೋತ್ರವೇ ಇಲ್ಲ. "ವೀತರಾಗಾಯ ನಮಃ" ಎಂಬ (ಸಂಪಾದಕರು ಬಹುಶಃ ಬರೆದು ಸೇರಿಸಿದ) ಒಂದೇ ಒಂದು ವಾಕ್ಯವನ್ನು ಬಿಟ್ಟರೆ ಈ ಟೀಕಿನ ಕೃತಿಕಾರ ಜೈನನೆಂಬುದಕ್ಕೆ ಹೇಳಲು ಬೇರೆ ಆಧಾರಗಳಿಲ್ಲ. ಆರಂಭದಲ್ಲಿರುವ "ನಾಗವರ್ಮ ವಿರಚಿತಮಪ್ಪ ಟೀಕು" ಎಂಬುದೂ (ಪು. 1) ಸಂಪಾದಕರೇ ಬರೆದು ಸೇರಿಸಿದ್ದು,

ಡಾ. ಕಲಬುರ್ಗಿಯವರು "ಅಭಿಧಾನ ವಸ್ತುಕೋಶ, (ಸಟೀಕು)" ಎಂಬ ಹಸ್ತಪ್ರತಿಯ ಪರಿಚಯಾತ್ಮಕ ವರದಿಯನ್ನು ನೋಡಿ (ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ

ಸೂಚಿ I ಸಂ, ಎಚ್, ದೇವೀರಪ್ಪ. ಮೈಸೂರು ವಿ. ವಿ. ನಿಲಯ, ಮೈಸೂರು. (1962 ಪು. 73). ಅದರ ಆರಂಭದಲ್ಲಿ ಬರುವ ವರ್ಧಮಾನ ಸ್ತುತಿಯನ್ನು ಕಂಡು, ಆ ಕೃತಿಯೇ ಅಭಿಧಾನ ರತ್ನಮಾಲಾ ಟೀಕು ಎಂದು ಭಾವಿಸಿರುವಂತಿದೆ.

ಗ್ರಂಥ ಸಂಪಾದಕರು, ಸಂಶೋಧಕರು ಎಚ್ಚರಿಕೆ ವಹಿಸದಿದ್ದರೆ ಓದುಗರನ್ನು ತಪ್ಪುದಾರಿಗೆಳೆದಂತಾತ್ತದೆಯೆಂಬುದಕ್ಕೆ ಇವೆರಡು ಒಳ್ಳೆಯ ನಿದರ್ಶನಗಳು.

3. ವರ್ಧಮಾನ ಪುರಾಣ(ಮೈ. ವಿ. ವಿ. ನಿ. ಮೈಸೂರು 1974) ಪು. XX

4. (1) ಅದೇ ಪೀಠಿಕೆ. ಪು. XXXIII (ಇಲ್ಲಿ "ನಾಗವರ್ಮನ ವರ್ಧಮಾನ ಪುರಾಣದಲ್ಲಿ 'ವರ್ಧಮಾನ ಚರಿತೆ' ಎಂಬ ಹೆಸರು ಪ್ರತಿ ಆಶ್ವಾಸದ ಅಂತ್ಯದಲ್ಲಿಯೂ ಇದೆ" ಎಂದು ಹೇಳುತ್ತಾರೆ, ಈ ಹೆಸರು ಯಾವ ಆಶ್ವಾಸಾಂತ್ಯ ಗದ್ಯದಲ್ಲಿಯೂ ಇಲ್ಲ.) (2) ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ (ಪ್ರ. ಸಂ. ಹಾ. ಮಾ. ನಾಯಕ, ಸಂ, ಟಿ. ವಿ. ವೆಂಕಟಾಚಲ ಶಾಸ್ತ್ರಿ, ಮೈಸೂರು ವಿ. ವಿ. ನಿ. ಮೈಸೂರು 1976) ಪುಟ. 714.

5. ಈ ಕೃತಿಯನ್ನು ಬಿ. ಎಸ್. ಸಣ್ಣಯ್ಯನವರು ಪ್ರಕಟಿಸಿದ್ದಾರೆ (ಪ್ರ: ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು. 1978) ಇದರ ಆಶ್ವಾಸಾಂತ್ಯ ಗದ್ಯದಲ್ಲಿ 'ವರ್ಧಮಾನ ಪುರಾಣ' ಎಂಬ ಹೆಸರಿದ್ದರೂ, ಪ್ರತಿ ಆಶ್ವಾಸದ ಕೊನೆಗೆ ಬರುವ ಕಂದಪದ್ಯದಲ್ಲಿ 'ಮದನವಿಜಯ ವರ್ಧಮಾನ ಪುರಾಣ' ಎಂಬುದು ಕೃತಿಯ ಹೆಸರಾಗಿಯೂ ಬರುತ್ತದೆ.

6. ಕೃತಿಯ ಹೆಸರನ್ನು ಪೂರ್ತಿ ಮಾರ್ಪಡಿಸಿ ಕೊಟ್ಟಿರುವುದಕ್ಕೆ ಇದರ ಸಂಪಾದಕ ರಾದ ಎಂ. ಎಂ. ಕಲಬುರ್ಗಿ ಮತ್ತು ಬಿ. ಆರ್. ಹಿರೇಮಠರು ಉಪೋದ್ಘಾತದಲ್ಲಿ ಕೊಟ್ಟಿ ರುವ ಕಾರಣಗಳು ಸಮರ್ಥನೀಯವಾಗಿಲ್ಲ.

7. ಶ್ರೀ ಬಿ. ಎಸ್. ಕುಲಕರ್ಣಿಯವರು ಚಾವುಂಡರಾಯನ ಗದ್ಯಕೃತಿಗೆ ಜನಪ್ರಿಯ ವಾದ 'ಚಾವುಂಡರಾಯ ಪುರಾಣ'ವೆಂಬ ಹೆಸರು ಕೊಡಲು, ಪುಷ್ಪಿಕೆಗಳಲ್ಲಿ ಬರುವ 'ತ್ರಿಷಷ್ಟಿ ಲಕ್ಷಣ ಮಹಾಪುರಾಣ'ವೆಂಬ ಹೆಸರು ಕೊಟ್ಟಿರುವುದು ಮೆಚ್ಚಬಹುದಾದರೂ, ಅನೇಕ ಕಡೆ, ಪುಷ್ಪಿಕೆಗಳಲ್ಲಿ 'ತ್ರಿಷಷ್ಟಿಲಕ್ಷಣ ಮಹಾಪುರಾಣ'ವೆಂದು ಅಚ್ಚಾಗಿರುವುದು ಅಪ್ಪು ಹಿತ ಸಂಗತಿಯೇನಲ್ಲ.

ಅನುಬಂಧ

1967 ರಲ್ಲಿ ಅಚ್ಚಾದ 'ಕರ್ಣಾಟಕ ಕವಿಚರಿತೆಯ ಅನುಕ್ತ ಕೃತಿಸೂಚಿ' ಎಂಬ ಗ್ರಂಥದಲ್ಲಿ ಶ್ರೀ ಎಸ್. ಶಿವಣ್ಣನವರು 'ವರ್ಧಮಾನ ಪುರಾಣ'ವು ಇಮ್ಮಡಿ ನಾಗವರ್ಮನ

ದೆಂಬುದನ್ನು ಗುರುತಿಸಿದ್ದಾರೆ. ಇದಕ್ಕೆ ಅವರಿಗೆ ಆಧಾರ 1953 ರಲ್ಲಿ ಮದ್ರಾಸ್ ವಿಶ್ವ ವಿದ್ಯಾನಿಲಯದಿಂದ ಪ್ರಕಟವಾದ ಆಚಣ್ಣನ 'ವರ್ಧಮಾನ ಪುರಾಣ'ದ ಮುನ್ನುಡಿ (ಪು. V. VIII). ಶ್ರೀ ಎಚ್, ಶೇಷ ಅಯ್ಯಂಗಾರ್ ಅವರು ಆರಾದ ಹಸ್ತಪ್ರತಿಯ ಪದ್ಯವನ್ನು ಗಮನಿಸಿದರೂ. ಆ ಪುರಾಣದ ಕರ್ತೃ ಇನ್ನೊಬ್ಬ ನಾಗವರ್ಮನಿರಬೇಕೆಂದು ಊಹಿಸಿದ್ದರು. ಆದರೆ, ಆಚಣ್ಣನ ಕೃತಿಯ ಸಂಪಾದಕರಾದ ಶ್ರೀ ಮರಿಯಪ್ಪ ಭಟ್ಟ ಮತ್ತು ಎಂ, ಗೋವಿಂದ ರಾವ್ ಅವರು 'ಕಾವ್ಯಾವಲೋಕನ' ಮತ್ತು 'ಅಭಿಧಾನ ವಸ್ತು ಕೋಶ'ಗಳ ಆರಂಭದಲ್ಲಿ ಬರುವ ವರ್ಧಮಾನ ಸ್ವಾಮಿಯ ಸ್ತೋತ್ರವನ್ನು ಗಮನಿಸಿ (ಡಾ. ಕಲಬುರ್ಗಿಯವರಿಗೆ ಇದೇ ಆಧಾರ). ಇಮ್ಮಡಿ ನಾಗವರ್ಮ ಒಂದು 'ವರ್ಧಮಾನ ಪುರಾಣ'ವನ್ನು ಬರೆದಿರುವನೆಂದು ಊಹಿಸಿದರು. ಅವನ ಆ ಕೃತಿ ವಾಸ್ತವ ವಾಗಿ ದೊರಕುವ ಮುನ್ನವೇ ಆಕೃತಿಯ ಬಗ್ಗೆ ಮೊದಲು ಸರಿಯಾದ ಊಹಿಸಿದ ಕೀರ್ತಿ ಡಾ. ಕಲಬುರ್ಗಿಯವರಿಗೆ ಸಲ್ಲುವುದಿಲ್ಲ. ಶ್ರೀ ಮರಿಯಪ್ಪ ಭಟ್ಟ ಮತ್ತು ಗೋವಿಂದ ರಾಯರಿಗೆ ಸಲ್ಲುತ್ತದೆ.

x x x x x x

೨೨. ಅಜ್ಞಾತ ಕರ್ತೃವಿನ 'ರುಕ್ಮಾಂಗದ ಚರಿತೆ-' ಒಂದು ಟಿಪ್ಪಣಿ

—ಶ್ರೀ ಎಸ್. ಶಿವಣ್ಣ, ಬೆಂಗಳೂರು.

ವೈದಿಕ ವಾಙ್ಮಯದಲ್ಲಿ ಏಕಾದಶೀ ಮಹಾತ್ಮ್ಯೆಯನ್ನು ನಿರೂಪಿಸುವ 'ರುಕ್ಮಾಂಗದ ಚರಿತೆ' ಬಹು ಜನಪ್ರಿಯವಾದ ಕಥಾನಕಗಳಲ್ಲೊಂದಾಗಿದೆ. ಸಂಸ್ಕೃತದ 'ನಾರದೀಯ ಪುರಾಣ'ದಲ್ಲಿ ವಸಿಷ್ಠ-ಮಾಂಧಾತರ ಸಂವಾದ ರೂಪದಲ್ಲಿ ರುಕ್ಮಾಂಗದನ ಕಥೆ ಉಕ್ತವಾಗಿದೆ. ಕನ್ನಡದಲ್ಲಿ ರುಕ್ಮಾಂಗದ ಚರಿತೆಯನ್ನು ಸೋಮನಾಥ (ಸು. 1650) [ಸಾಂಗತ್ಯ], ಶೇಷ (ಸು. 1650) [ಸಾಂಗತ್ಯ], ಚಿಕ್ಕುಪಾಧ್ಯಾಯ (1672) [ಚಂಪೂ], ಲಕ್ಷ್ಮೀಶ ಕವಿ (1723) [ವಾರ್ಧಕ ಷಟ್ಪದಿ], ತಿಪ್ಪೇಂದ್ರ (18 ಶ. 1823-74) [?] ರಚಿಸಿದ್ದಾರೆ.

ವೀರಣಾರಾಧ್ಯನ ಮಗನಾದ ಚೆನ್ನವೀರ ದೇಶಿಕ (ಸು. 1650) 'ವೈಷ್ಣವ ಪುರಾಣಂಗಳಲ್ಲಿರ್ದ ಶಿವಾಧಿಕ್ಯ ಸಂಗ್ರಹ'ವೆಂಬ ಕೃತಿಯೊಂದನ್ನು ಸಂಕಲಿಸಿದ್ದಾನೆ. [ಕೆ. 8/6 (ಗರಿ 75) ಕನ್ನಡ ಅಧ್ಯಯನ ಕೇಂದ್ರ (ಬೆಂಗಳೂರು ವಿಶ್ವವಿದ್ಯಾನಿಲಯ)ದ ಸಂಗ್ರಹ].

ಇದರಲ್ಲಿ 'ಕುಮಾರವ್ಯಾಸ ಭಾರತ,' 'ಜೈಮಿನಿಭಾರತ', 'ಅಕ್ರೂರ ಚರಿತ್ರೆ', 'ಪ್ರಹ್ಲಾದ ಚರಿತ್ರೆ', 'ರುಕ್ಮಾಂಗದ ಚಾರಿತ್ರ' ಮೊದಲಾದ ಕೃತಿಗಳಲ್ಲಿನ ಶಿವಸ್ತುತಿಪರವಾದ ಪದ್ಯಭಾಗಗಳನ್ನು ಸಂಧಿ-ಪದ್ಯ ಸಂಖ್ಯೆಗಳ ಉಲ್ಲೇಖಸಹಿತ ಉದಾಹರಿಸಿದ್ದಾನೆ. ಚೆನ್ನವೀರ ದೇಶಿಕ 'ರುಕ್ಮಾಂಗದ ಚರಿತ್ರೆ' ಎಂಬ ವಾರ್ಧಕ ಷಟ್ಪದಿ ಕೃತಿಯಿಂದ 5 ಷಟ್ಪದಿಗಳನ್ನು ಉದ್ಧರಿಸಿದ್ದಾನೆ, ನಮಗೆ ಈಗ ತಿಳಿದಿರುವಂತೆ, ರುಕ್ಮಾಂಗದನನ್ನು ಕುರಿತು ವಾರ್ಧಕದಲ್ಲಿ ರಚಿತವಾಗಿರುವ ಲಕ್ಷ್ಮೀಶ ಕವಿಯ (1723) ಕೃತಿಯಲ್ಲಿ ಈ ಪದ್ಯಗಳಿಲ್ಲ. ಹೀಗಾಗಿ ಈ ಪದ್ಯಗಳನ್ನೊಳಗೊಂಡ ಸಮಗ್ರ ಕೃತಿ ಪ್ರಸ್ತುತದಲ್ಲಿ ಅಲಭ್ಯವಾಗಿದೆ, ಅಲಭ್ಯ. ಕೃತಿಯ ಉದ್ಧೃತ 5 ಪದ್ಯಗಳನ್ನು ಈ ಮುಂದೆ ಕೊಟ್ಟಿದೆ—

"ಮತ್ತಂ ಇನ್ನು ವೈಷ್ಣವ ಪುರಾಣದ ಏಕಾದಶಿಯ ಫಲದ 'ರುಕ್ಮಾಂಗದ ಚರಿತ್ರ'ದಲ್ಲಿ ೨ ನೆಯ ಸಂಧಿ ೨೮ನೆ ಪದ.

॥ ಇನ್ನು ॥ ವಾರ್ಧಕ ಷಟ್ಪದಿ ॥ ಬ್ರಹ್ಮ ಪುತ್ರಿಯಾದ ಮೋಹಿನಿಯ ವಾಕ್ಯ-ಮುರದ ಪರ್ವತದಲ್ಲಿ:

॥ ಪದಾ ॥ ಅಲ್ಲಿರ್ಪುದೇಳು ಯೋಜನದ ಶಿಲೆಯೊಂದದಱೊಳ್ ।
ಳೆಲ್ಲ ದೇವರ ವಲ್ಲಭಂ ದಿವ್ಯಲಿಂಗನಿಹ ।
ನಲ್ಲಿಗೆಯ್ತಂದಾತನಂಘ್ರಿ ಕಮಲಕ್ಕೆಱಗಿ
ಫುಲ್ಲಾರವಿಂದ ವದನೆ ॥
ವಲ್ಲಿಕೆಯುನೊಲಿದು ಕರದೊಳ್ದಳೆದು ರಾಗರಸ ।
ವೆಲ್ಲವಾರಾಜಿಸಲ್ತೋಱಿಸುತ್ತಾಗ ನನೆ !
ವಿಲ್ಲನಂ ಜಯಿಸಿ ಜಸವಡೆದನಂ ಕೊಂಡಾಡುವಲ್ಲಿ
ತತ್ಪರೆಯಾದಪಳ್ ॥ ೪೫ ॥

ಈಶ ಭೂತೇಶ ಶಿವ ಕೈಲಾಸಗಿರಿ ವಾಸ ।
ವಾಸವ ಪ್ರಮುಖ ದೇವೇಶಾಗ್ರ ಸಂಸಾರ ।
ಪಾಶ ಹರ ಪರಮ ಪರಮೇಶ ವರ ಗಿರಿಜೇಶ
ಶೇಷ ಭೂಷಣ ವಿಶೇಷ ॥
ಈಶಾನ ಸರ್ವಾತ್ಮ ಸರ್ವೇಶ ಶರ್ವ ಶಶಿ ।
ಭಾಸ ಭಾಸ್ವಜ್ಜಟಾಜೂಟ ಭವ ಭಾಳಾಕ್ಷ ।
ವಾಸರಾಧೀಶ ರಾತ್ರಿಶಾಶ್ರಯ–ಶಾ ತ್ರಿನೇತ್ರ
ನೀಂ ಸಲಹೆಂದಪಳ್ ॥ ೪೬ ॥

ಜಿತಕಾಮ ನುತಸೋಮ ಸುರರಾಜ ವರತೇಜ ।
ಮತಿದೂರ ಶ್ರುತಿಸಾರ ಪುರವಿಜಯ ವರಸುಜಯ ।
ಪ್ರತಿರಹಿತ ಧೃತಿಸಹಿತ ಕರಿಮಥನ ವರಕಥನ
ದುರಿತಹರ ಹರ ಶಂಕರ ॥
ಹೃತಕಾಲ ಧೃತಶೂಲ ನಿರವದ್ಯ ಸುರಹೃದ್ಯ ।
ಗತಮಾಯ ಜಿತಕಾಯ ಭೃತಸೋಮ ಧೃತರಾಮ ।
ಸತತಗುಣ ವಿತತಗಣ ಸಕಲಸುರ ನಿಕರ ಸನ್ನುತನೆ
ನೀಂ ಸಲಹೆಂದಪಳ್ ॥ ೪೭ ॥

ನಿರವದ್ಯಾ ನಿರ್ಮಳ ನಿರಾಲಂಬ ನಿರ್ಮಾಯ ।
ನಿರುಪಮ ನಿರಾಧಾರ ನಿರ್ಭಯ ನಿರಾವರಣ ।
ನಿರಸೂಯ ನಿತ್ಯನಿರ್ಗುಣ ನಿರಾಡಂ–ಶಿವ
ನಿರ್ಲೇಪ ನಿರ್ವಿಕಲ್ಪ ॥

ನಿರಪೇಕ್ಷ ನಿರ್ದ್ವಂದ್ವ ನಿರ್ಭಿನ್ನ ನಿರ್ದೋಷ ।
ನಿರಪಾಲ ನಿಃ ಕಳ ನಿರಾಳ ನಿರಹಂಕಾರ ।
ನಿರುತ ನಿಃ ಶಂಕ — – ರನೆ ಕಿಂಕರಗೆ ದಯ
ದಂಕುರವನೀವುದೆಂದಳ್ ॥ ೪೮ ॥

ನಿತ್ಯ ನಿರ್ಮಲ ನಿರಾಲಂಬ ನಿರಹಂಕಾರ ।
ಸತ್ಯ ಸದ್ಗುಣ ಸದಾನಂದ ಸದಸದ್ರೂಪ ।
ಭೃತ್ಯ ವತ್ಸಲ ಭೀಮ ಸಕಲಸುರ ನಿಕರ
ಸಂಸ್ತುತ್ಯ ಭವ ಮೃತ್ಯುಂಜಯ ॥
ಕೃತ್ತಿವಾಸನೆ ಕೃಪಾನಿಧಿಯೆ ದಯೆಯಿಂದೆ ವರ ।
ವಿತ್ತೆನ್ನುವಂ ಸಲಹು ಸಲಹು ನೀನೆನುತಲಾ ।
ಗತ್ಯಧಿಕವಾದಿ ಕೊಂಡಾಡಿದಳ್ಹಾಡಿಮಿಗೆ
ಪಾಡಿದಳ್ಪರಮೇಶನಂ ॥ ೪೯ ॥

॥ ವಚನ ॥ ಇಂತದ್ರಿಜಾರಮಣನಂ ಪರಾತ್ಪರ ವಸ್ತುವೆಂದು ವೈಷ್ಣವ ಶಾಸ್ತ್ರದೊಳ್ ಮೋಹಿನಿಯು ಪ್ರತಿಷ್ಠೆಯಂ ಮಾಡಿದಳಾರಿ ॥

X X X X

೩೩. ಶಿವಕಲ್ಯಾಣ ಯಕ್ಷಗಾನ-ಕೆಳದಿ ಲಿಂಗಣ್ಣ ಕವಿ ಕೃತ

—ಶ್ರೀ ಕೆ. ಗುಂಡಾ ಜೋಯಿಸ, ಕೆಳದಿ,

ಕ್ರಿ. ಶ. ೧೭೬೩ರಿಂದ ೧೮೦೪ರ ವರೆಗೆ ಸರಿಸುಮಾರಿನಲ್ಲಿ ಕೆಳದಿ ಅರಸರ ಆಸ್ಥಾನದಲ್ಲಿ ಪ್ರಸಿದ್ಧ ಇತಿಹಾಸಕಾರ ಹಾಗೂ ಕವಿಯಾದಿದ್ದ ಲಿಂಗಣ್ಣನಿಂದ ರಚಿಸಲ್ಪಟ್ಟ ಹಲವಾರು ಕೃತಿಗಳು ಈಚೆಗೆ ಬೆಳಕಿಗೆ ಬರುತ್ತಿವೆ. ಇತಿಹಾಸದ ವಿದ್ವಾಂಸರಿಗೆ ಈತನು ರಚಿಸಿದ 'ಕೆಳದಿ ನೃಪವಿಜಯು'ವು ಚಿರಪರಿಚಿತ ಆಕರ ಗ್ರಂಥವೆನಿಸಿದೆ. ಈ ಕವಿಯು ಐತಿಹಾಸಿಕ ಕೃತಿಗಳನ್ನು ರಚಿಸುವಲ್ಲಿ ನಿಷ್ಣಾತನಾಗಿರುವಂತೆಯೇ, ಅನೇಕ ಕಾವ್ಯ ಹಾಗೂ ಯಕ್ಷಗಾನವನ್ನೂ ರಚಿಸಿರುವುದು ಕಂಡುಬರುತ್ತದೆ[1].

ನಾನು ವಿದ್ಯಾರ್ಥಿ ದೆಸೆಯಲ್ಲಿ ಬೆಂಗಳೂರಿನಲ್ಲಿ ನಮ್ಮ ತಾತ ದಿ॥ ಲಿಂಗಣಯ್ಯ ನವರ ಮನೆಯಲ್ಲಿದ್ದಾಗ ಅಲ್ಲಿ ಅನೇಕ ತಾಡೆಯೋಲೆಗಳು ಗೋಚರಿಸಿದುವು[2]. ಆವುಗಳ ಅವಲೋಕನದಲ್ಲಿ ಅಮೂಲ್ಯವಾದ ಕವಿ ಲಿಂಗಣ್ಣನ ಈ ಕೆಳಗಿನ ಕೃತಿಗಳು ನನ್ನ ಗಮನ ವನ್ನು ಸೆಳೆದುವು:

೧. ಪಾರ್ವತೀ ಪರಿಣಯ
೨. ಶಿವ ಪೂಜಾ ದರ್ಪಣ
೩. ದಕ್ಷಾಧ್ವರ ವಿಜಯ
೪. ಶಿವ ಕಲ್ಯಾಣ.

ಇವಲ್ಲದೆ ಕವಿ ಲಿಂಗಣ್ಣನ ಮಗ ವೆಂಕಣ್ಣ ಕವಿಯೂ ಹಲವಾರು ಕೃತಿಗಳನ್ನು ರಚಿಸಿರು ವುದು ಕಂಡುಬರುತ್ತದೆ[3].] ಇವುಗಳಲ್ಲಿ, ಸ್ಕಾಂದಪುರಾಣದ ಕಥಾವಸ್ತುವನ್ನು ಬೃಹತ್ಕಾವ್ಯ ವಾಗಿ ಮಾರ್ಪಡಿಸಿ 'ಶಿವ ಕಲ್ಯಾಣ'ವೆಂಬ ಯಕ್ಷಗಾನವೊಂದನ್ನು ರಚಿಸಿದ್ದಾನೆ. ಲಿಂಗಣ್ಣ ಕವಿ, ಕರ್ನಾಟಕ ಕವಿ ಚರಿತೆಯಲ್ಲಿ ಇದರ ಪ್ರಸ್ತಾಪವು ಕೈಬಿಟ್ಟು ಹೋಗಿರುವುದು ಕಂಡು ಬರುತ್ತದೆ. ನನಗೆ ದೊರೆತ ತಾಡೆಯೋಲೆಯಲ್ಲಿ ಕವಿಯೇ ನಿರೂಪಿಸಿದಂತೆ 'ಶಿವ ಕಲ್ಯಾಣ ಯಕ್ಷಗಾನ ಕೃತಂ ಪ್ರಬಂಧಮಂ ಬರಉದಕ್ಕೆ ಶುಭಮಸ್ತು' ಎಂದಿದ್ದು, ಪೀಠಿಕಾ ಪ್ರಬಂಧೋಪಾದಿಯಲ್ಲಿ ಮೂರು ಓಲೆಗರಿಗಳಿವೆ. 23·3 CM × 5·2 CM. ಪ್ರಮಾಣವುಳ್ಳ ಈ ಗರಿಗಳು ಓಲೆಯಂ ಕಟ್ಟಿನಲ್ಲಿ ದೊರೆತ ಕೃತಿಯ ಭಾಗಗಳು. ಈವರೆಗೆ ನಾನು ನಡೆಸಿದ ಸಂಶೋಧನೆಯಲ್ಲಿ ಇದರ ಪ್ರತಿ ಕೃತಿಗಳಾಗಲೀ ಅಥವಾ ಇದಕ್ಕೆ ಸಮೀಪ ವಿರುವ ವತ್ತಾವ ಕೃತಿಯಾಗಲೀ ಕಂಡುಬರುವುದಿಲ್ಲ. ಆದ್ದರಿಂದ ಇದನ್ನೇ ಮೂಲವಾದಿ ದ್ದ ಪ್ರತಿಯೆಂದು ಪರಿಗಣಿಸಿದೆ[4].

ದಿ॥ ಎ. ಆರ್. ಕೃ. ರವರು 'ಕೆಳದಿ ನೃಪವಿಜಯ'ದ ತಮ್ಮ ಉಪೋದ್ಘಾತದಲ್ಲಿ ಇದನ್ನು ಕುರಿತು ಪ್ರಸ್ತಾವಿಸಿದ್ದಾರೆ. ಅವರು ದಿ॥ ಲಿಂಗಣ್ಣಯ್ಯನವರ ಸಂಗ್ರಹದಲ್ಲಿ, 'ಶಿವ ಕಲ್ಯಾಣ'ವೆಂಬ ಯಕ್ಷಗಾನವನ್ನು ತಾವು ನೋಡಿರುವುದಾಗಿಯೂ, ಇತರ ಯಾವ ಯಕ್ಷಗಾನವೂ ಇದರಷ್ಟು ಪ್ರೌಢವಾಗಿಯೂ ಹಾಗೂ ದೊಡ್ಡದಾಗಿಯೂ ಇಲ್ಲವೆಂದು ಸಮರ್ಥಿಸಿದ್ದಾರೆ.— ಇದರ ಪ್ರತಿಯೊಂದು ಆಶ್ವಾಸದ ಕೊನೆಯಲ್ಲಿಯೂ 'ಇದಖಿಲ ಸುರನರೋರಗಮಕುಟ ಘಟಘಟಿತ ಶ್ರೀಮತ್ಸಾಂಬ ಸದಾಶಿವ ಚರಣಾರವಿಂದ ದ್ವಂದ್ವ ಭಕ್ತಿರಸ ನವೀನ ಮಕರಂದ ಮತ್ತ ಮಧುಕರಾಯಮಾಣ ಮಾನಸ ಹರಿತಗೋತ್ರೋದ್ಭವ ಭೂಸುರವರ್ಯ ಲಿಂಗಣಸೂರಿ ವಿರಚಿತ ಶಿವಕಲ್ಯಾಣ ಪುಣ್ಯಕಥಾ ಸಮನ್ವಿತ ಯಕ್ಷಗಾನ ಮಹಾ ಪ್ರಬಂಧದೊಳ್–' ಎಂಬುದಾಗಿ ಇರುವುದಾಗಿ ನಿರೂಪಿಸಿದ್ದಾರೆ[5].

ಪ್ರಕೃತ ನನಗೆ ದೊರೆತ ತಾಡೆಯೋಲೆಯಲ್ಲಿನ ಯಥಾಭಾಗವನ್ನು (ಮೂಲಪಾಠವನ್ನು) ಇಲ್ಲಿ ಉಲ್ಲೇಖಿಸಲಾಗಿದೆ. ಪುಟ ೧ ರಿಂದ ೩ ರ ವರೆಗೆ ಗರಿಯಲ್ಲಿ ಹತ್ತು ಸಾಲುಗಳಿವೆ. ೪ ಮತ್ತು ೫ ನೆಯ ಪುಟಗಳಲ್ಲಿ ಒಂಬತ್ತು ಸಾಲುಗಳಿವೆ. ೬ ನೆ ಪುಟದಲ್ಲಿ ಎರಡು ಸಾಲುಗಳಿದ್ದು ಅಂತ್ಯಗೊಳ್ಳುತ್ತದೆ. ಅಕ್ಷರ ಹಾಗೂ ಲಿಪಿ ವಿನ್ಯಾಸದಲ್ಲಿ ಇದೂ ೧೮ನೆ ಶತಮಾನದ ಅಂತ್ಯ ಅಥವಾ ೧೯ ರ ಆರಂಭದಲ್ಲಿ ರಚಿಸಿರಬಹುದಾಗಿ ಊಹಿಸಬಹುದಾಗಿದೆ. ಗರಿಗಳು ಭಿನ್ನವಾಗದೆ ಅಕ್ಷರಗಳು ಓದಲು ಮುದ್ದಾಗಿವೆ. ಗರಿಗಳ ಸಂಖ್ಯೆ ಹಾಕಿರುವುದಿಲ್ಲ. ೧ ನೆ ಗರಿಯಲ್ಲಿ ಮಾತ್ರ ಅಂತ್ಯಭಾಗದಲ್ಲಿ '೧' ಎಂದು ಉಲ್ಲೇಖವಿರುತ್ತದೆ[6],

ಮೂಲಪಾಠ ೧ನೆ ಗರಿಯ ಮುಂಭಾಗ ಪುಟ ೧ (ಕುಸದಲ್ಲಿ–ನಾವು ಬರೆದುದು.)

1. ಶ್ರೀ ಗಣಾಧಿಪತಯೇ ನಮಃ । ನಿರ್ವಿಘ್ನ ಮಸ್ತು । ಶಿವ ಕಲ್ಯಾಣ ಯಕ್ಷಗಾನ ಶ್ರುತಂ ಪ್ರಬಂಧವಂ ಬರ
2. ಉದಕೆ ಶುಭಮಸ್ತು ॥ ಉೃತ್ತ ॥ ಶ್ರೀಮಚ್ಚಂದ್ರ ಕಲಾಧರಂ (–) ನೀಹ (ಹಾ)ರ ಶೈಲಾತ್ಮಜಾಮಾ
3. ವಹಾಂಗಂ ವರದಂ ವಿರಿಂಚಿವಿನುತಂ ವಿಶ್ವೈಕ ಸಂಸೇವಿತಂ ಸೋಮಾರ್ಕಾನಲ ಲೋಚನಂ ಶು
4. ಭಕ(ರಂ ಕಾರು)ಣ್ಯ ರತ್ನಾಕರಂ ಪ್ರೇಮಂಬೆತ್ಯ (ತ್ರೈ)ಮಗೀಗೆ ಶಂಭು ನಲವಿಂದಾನಂದ ಸಂದೋಹಹ
5. ಮಂ ॥ ೧ ॥ ವಚನಯಿಂತೆಂದು ॥ ಶ್ರೀಮತ್ಪರಮೇಶ್ವರನಂ ಪ್ರಾರ್ಥನಂಗೈದೊಡನೆ ಪಾರ್ವ
6. ತಿದೆ (ದೇ) ವಿಯುಂ ನುತಿಪೆನದೆಂತೆಂದೆನೆ । ಕಂದ । ಪರಮ ಪುರಾಣ (ಣಾ) ಗಮ ಭಾಸುರದಾಂ (ತ)
7. ತ್ವಾರ್ಥ ತತಿಗೆ ನಿಲ್ಕದ ಶಿವನಂ ಮೆರೆವರೆವೆಂಣಂ ಮಾಡಿದ ಗಿರಿರಾಜ ತನೂಜೆಮು–(ದ) ದೆ ರಕ್ಷಿ

8. ಪುದೆಂಮಂ ॥ ೧ ॥ ವಚನ ಯಿಂತೆಂದು ಪರ್ವತರಾಜ ಪುತ್ರಿಯಂ ಪೂ (ಪೊ) ಗಳ (ಳ್ದ) ನಂತರಂ ಶ್ರಿ (ಶ್ರೀ) ಮತ್ಸಿ ದಿ (ದ್ಧಿ) ವಿನಾ
9. ಯಾಕ ಸ್ವಾಮಿಯಂ ಪ್ರಾಥಿ (ರ್ಥಿ) ಪೆನದೆಂತೆಂದೆನೆ. ತ್ರಿವಡೆ ಶ್ರಿ (ಶ್ರೀ) ಗಣಾಧಿಪ ನಿಂಮಡಿಗೆ ತಲೆವಾಗಿ ಪೆ (ಪೇ)ಳಿಳೆ ಸು ಕ್ರು (ಕೃ)ತಿ
0. ಯನಿದು ಚೆಲ್ವಾಗುವಂತಿರೆ ಮತಿಯನಿ (ನೀ) ಉ (ವ್ವ) ದು ರಾಗದಿಂದ ॥ ಪಾಶ ಮೊ (ಮೋ) ದಕ ಪರಶು ನಿರುಪಮ ಖಾ (ಭಾ) ಸುರಾ(೦)ಕು

ನೆ ಗರಿಯ ಹಿಂಭಾಗ – ೨ನೆ ಪುಟ:

1. ಶ ಹಸ್ತದ (ದೇ) ವಾಧೀಶ ವರಗಳ ನಿ (ನೀ) ಉ (ವ್ವ) ದೆನಗೊಲಿದಿ (ದೀ) ಶ ತನೂಜ ॥ ೨ ॥ ನಾಕಪತಿ ಹರಿಮುಖ್ಯ ದೇವಾನೀಕ ಪೂಜಿತ
2. ಪಾದ ನಿ (ನೀ) ಮಾಡಿ (ಡೀ) ಕ್ರು (ಕೃ) ತಿಗೆ ನಿರ್ವಿಘ್ನತೆಯು ಮೆರೆವೆ (ವೇ) ಕ ದಂತ । ರಾಗ । ನಾಟಿ । ಜಯ ಜಯ ಗಣಾಧೀಶ ರವಿ ಕೂ (ಕೋ) ಟ (ಟಿ) ಸಂ
3. ಕಾಶ ಭಯನಿವಾರಕ ದುರಿತ ಚಯ ವನಹುತಾಶಾ । ಪಲ್ಲ । ಹರನ ಮೊ (ಮೋ) ಹದ ಪುತ್ರ ವರಪುಣ್ಯ ಚಾರಿತ್ರ ಪ
4. ರಮಪಾವನ ಗಾತ್ರ ಫಣಿಯಜ್ಞ ಸು (ಸೂ) ತ (ತ್ರ) ಪಿರಿದು ವಿಘ್ನಗಳ ಪರಿಹರಿಸಿ ಭಕ್ತರನೊಲಿದು ಪೊರ (ರೆ) ವ ದೇ (+ವರ ದೇ)
5, ವ ವಿತತ ಪ್ರಭಾವಾ ॥ ಚಾರು ಪಾಶಂ (ಶಾಂ) ಕುಶ ಕುಠಾರ ಮೊ (ಮೋ) ದಕ ಹಸ್ತ ಭೂರಿ ವೆ (ವೇ) ದಾಗಮ ಸುಸಾರ ಸಂಸ್ತು
6. ತ್ಯಾ ॥ ವಾರಣ ಮುಖಾಸುರನ ಗೆಲಿದು ಸುಂದ (ರ) ರನು ಕಾಯ್ದ ಪಾರ ಮಹಿಮ ಲಲಾಟನೇತ್ರ ಗಜವಕ್ತ್ರ । ೨ । ಸ್ಮರಣೆ
7. ಮಾತ್ರದೆ ಜಗವನಾರೆ ಪುಟಿ (ಟ್ಟಿ) ಸ (ಸು) ವ ಪೊ (+ರೆ) ವ ಸುರರೊಳಗ ತ್ರಿ (ತಿ) ಶ್ರೆ (ಶ್ರೇ)ಷ್ಠರೆಂದೆನಿಶಿ (ಸಿ) ವ (ಮ) ರ (ರೆ) ವ ಹರಿಕ
8. ಮಲಜಾದ್ಯರಿಂ ಚರಣ ಸೆ (ಸೇ) ವೆಯ್ಯ ಕೊಂಡಾ ಕರ (ರೆ) ದ ಭಿ (ಭೀ) ಷ್ಟ (+ವ) ನೀವ ಶರಸಂ (ಣ) ಸಂಜೀವ ॥ ೩ ॥
8. ಹರಿ ಸುತ (ರ) ಪ ಮುಖ್ಯದೇವೊ (ವೋ)ತ್ಕರ ವಂದಿತ ಚಾರು ಚೆ (ಚ) ರಣಂಗಾ (ನಾ) ನತ ಶರಣಂ ಪರ ತರ ಮುನಿ (ನ)
0. ಮಂ ವಿಘ್ನೆ (ಘ್ನೇ) ಶ್ವರ ನಿ (ನೀ) ಸ್ಕ್ರು (ಸತ್ಕೃ) ತಿಗೆ ಮಾಳ್ಕೆ ನಿರ್ವಿಘ್ನತೆಯಂ ॥ ೧ ॥ ವಚನಯಿಂತೆಂದು ॥ ವಿಘ್ನೆ (ಘ್ನೇ) ಶ್ವರ ಸ್ವ (ಸ್ವಾ) ಮಿಯಂ

೨ನೆ ಗರಿ ಮುಂಭಾಗ ಪುಟ ೩

1. ಪ್ರಾರ್ಥನಂ ಗೈದೊಡನೆ ಕುಮಾರ ಸ್ವ (ಸ್ವಾ) ಮಿಯಂ ಕೊಂಡಾಡುವದ (ದೆಂ ತೆಂದೆನೆ । ಯ (ಏ) । ದಿರ
2. ಜಯ ಮೊ (ಮೋ) ಹದ ಕರುಣ (ಕುವರ) ನೆಂದೆನಿಸುವ ಶರಜನ್ಮ ನಿಮ್ಮಡಿ। ಯ (ಗೆ) ರಗಿ ನುತಿಸುವೆ ॥ ೧ ॥ ಶೂರಪದ್ಮನ ಗೆಲ್ದ ಧಾರಿಣಿ
3. ಯೆ (ಯ) ರಿಯೆ ಮಯೂರ ವ (ವಾ) ಹನನಾದ ಶ್ರಿ (ಶ್ರೀ) ರುದ್ರತನುಜ ॥ ೨ ॥ ದಾರುಣ ಕ್ರೌಂಚ ವಿದಾರಣ ವೆ (ದೇ) ವ ಮಂದಾರ ನಿ (ನೀ) ನಿ (ನೀ) ಉ (ವು) ದು
4. ಚಾರು ಸನ್ಮತಿಯ ॥ ೩ ॥ ವಚನ ಯಿಂತು ಕುಮಾರ ಸ್ವಾಮಿಯಂ ಕೊಂಡಾಡಿ ದಕ್ಷಗರ್ವ ನಿವಾರಕನಪ್ಪ ।
5. ಶ್ರಿ (ಶ್ರೀ) ವಿ (ವೀ) ರ ಭದ್ರ ಸ್ವಾಮಿಯಂ ನುತಿಗೈವ (ವೆ) ಆದಂ (ದೆಂ) ತೆಂದೆನೆ ॥ ರಘಂಪೆ ॥ ರುದ್ರಸುತ ಸಾಹಸ ಸಮುದ್ರ ಶಿವನಿಂ
6. ದ ಕಮಹಾದ್ರಿಚಯ ಕುಲಿಶ ಜಯ ಭದ್ರಕಾಳಿ (ಳೀ) ಶ ॥ ೧ ॥ ಹಿಂಡು ದೆ (ದೇ)ವಾ ಸುರರ ಗಂಡನೆನಿಸುವ
7. ಸುಪ್ರ (ಪ್ರ) ಚಂಡ ಪ್ರಾ (ಪ್ರ) ತಾಪ ಶಶಿಖಂಡ ಕೊ (ಕೋ) ಟೀರ ॥ ೨ ॥ ಶ್ರಿ (ಶ್ರೀ) ವಿ (ವೀ) ರ ಭದ್ರ ಜಯ ಪಾವನಾತ್ಮಕ ದೆ (ದೇ) ವ ದೆ (×)
8. ದೇವ ಮಂಗಳ ಮತಿಯ ನಿ (ನೀ) ಉ (ವು) ದನವರತ ॥ ೩ ॥ ವಚನಯಿಂ ತ್ತೆ (ತೆ) ಂದು ವಿ (ವೀ) ರ ಭದ್ರ ಸ್ವಾಮಿಯಂ ಪ್ರಾರ್ಥನೈ (ನೆ)
9. ಗೈದೊಡನೆ ನಂದಿ (ದೀ) ಶ್ವರನಂ ಪ್ರಾರ್ಥಿಪೆನದೆಂತೆಂದನೆ ॥ ಕಂದ ॥ ಅತುಳ ಪ್ರಭಾವನಮರಸ್ತುತ
10. (+ಮಾ) ನಿತ ಪದಾಬ್ಜ ಮತ ಮಧುಕರನತ್ಯದ್ಭುತ ಮಹಿಮಂ ಪ್ರಮಥ ಗಣೋ (೧ ಪಾದದಷ್ಟು ಅಸ್ಪಷ್ಟ) ॥

೨ನೆ ಗರಿಯ ಹಿಂಭಾಗ – ಪುಟ ೪

1. ವಚನಯಿಂತ್ತು (ತು) ಸರ್ವ ಜಗತ್ಪು (ತ್ಪೂ) ಜ (ಜ್ಯ) ನಪ್ಪ ಶ್ರಿ (ಶ್ರೀ) ಶಿ(ಸಿ)ಧಿ (ದ್ಧಿ) ವಿನಾಯ (+ ಕ) ಸ್ವಾಮಿಯಂ ಪ್ರಾರ್ಥನಂ ಗೈದೊಡನೆ ।
2. ಶಾರದಾ ದೆ (ದೇ) ವಿಯಂ ಪೊಗಳ್ವೆ ಅದ (ದೆ) ಂತೆಂದೆನೆ ; ಕಂಡು (ದ) ಶಾರದೆ ನಿಜಾಂಗ ರುಚಿ ಜಿತ ಪಾರದೆ ಜನ (ಗ) ದೆ (ದೇ) ಕ ಮಾತೆ

3 ಯ (ಮ) ಜ್ಜಿಹ್ವೆಯೊಳಂ ಚಾರು ವಾಗ್ಮ್ಯ ಪದಿಂ (ವಚೋ ರೂಪದಿ) ನೆಲಸೊ (ಸೋ) ರಂತ್ರಿ (ತಿ) ರೆ ಮುದದೆ ನಲಿದು ನರ್ತ್ತಿ (ರ್ತಿ) ಪುದನಿರಶಂ। ೧। ರಾಗ ಭೈ

4. ರ್ವಿ (ರವಿ) ಮತಿಯಾ ನೀ ಉ (ವು) ದು ದೆ ದೇ) ವಿ ಶಾರದೆ । ಸರಸ್ವತಿ ಸರ್ವ ಶಾಸ್ತ್ರವಿಶಾರದೆ ಬ್ರಹ್ಮ (+ನ) ಸತಿ ನಿಂನ ಮಹಿಮೆಯಾನುತಿ

5. ಸ ಲೆಂಗ (ನ) ಳವ ಸನ್ಮತಿಯು ॥ ಪಲ್ಲ ॥ ಶರದಿಂದು ಬಿಂಬನಿಭಾನನೆ ಪುಣ್ಯ ಚರಿತೆ ವೆಾ (ವೇ) ಹಿತ ಹಂಸ

6. ವಾಹನೆ ॥ ನಿಂನ ಚಾ (ಚ) ರಣಾರವಿಂದವ ಸ್ಮರಿವೆ (ಪೆ) ನೊಲಿದು ನಿ (ನೀ) ವೆ ಮತಿಯು ॥ ೧ ॥ ವಾಣಿಪುಸ್ತಕ ಪದ್ಮ ಧಾ

7. ರಿಣಿ । ಫಣಿ ವೇಣಿ ಭಕ್ತಾನಂದ ಕಾರಿಣಿ । ವಿ (ವೀ) ಣ (ಣಾ) ಪಾಣಿ ಪಾಲಿತ ಸುರ ಶ್ರೆ (ಶ್ರೇ) ಣಿ ನಿತ್ಯ ಕಲ್ಯಾಣಿ ॥ ೨ ॥

8. ವಾಸವ ಮುಖ್ಯಿ (ಖ್ಯಾ) ಸು (ಸು) ರ ಸೆ (ಸೇ) ವಿತೆ (ೀ) । ವೇ ದೌ (ದ) ವ್ಯಾಸ (ಸಾ)ದಿ ಮುನಿಜನ ಭಾವಿತ್ತೆ (ತೇ) । ಸುವಿಲ್ಲಾ (ಲಾ) ಸ(ೀ)ದೊ (ದೋ)ಹನಮಂ

9. ದಹಾಸೆ(ೀ) ವಾಗೀಶ್ವರಿ ॥ ೩ ॥ ವಚನ ಯಿಂತೆಂದು ಸರಸ್ವತಿ (ೀ) ದೆ (ದೇ) ವಿಯುಂ

ನೆ ಗರಿ ಮುಂಭಾಗ – ಪುಟ ೫

1. ನ (ನ್ನ) ತನೆನಿಸುವ ನಂದಿ ಕೆ (ಕೇ) ಶ ರಕ್ಷಿಪುದೆಂದುಂ । ವಚನ । ಯಿಂತ್ತೆ(ತೆ)ಂದು ನಂದಿ (ದೀ) ಶ್ವರನಂ ಪ್ರಾರ್ಥನಂಗೈದನಂತ್ತ (ತ)

2. ರಂ ॥ ತ್ರಿವಡೆ ॥ ಪುರಹರ ಪ್ರತಿಮಾನರಹ ಭಾಸುರಮಹಾ ಪ್ರ (+ಬು)ದೆ (ಧೇ)ಂದ್ರ ರಂಘ್ರಿಗೆ ಶಿರವ ಮಣಿದೀ ಕ್ರು (ಕೃ)

3. ತಿಯ ಚೆಲ್ವನೆ ವಿರಚಿಸುವೆನು ॥ ೧ ॥ ವ್ಯಾಸ ವರ ವಾಲ್ಮೀಕಿ ಕಾಳಿ (ಳೀ) ದಾಸ ಬಾಣ ಮಯೂರ ಮುಖ್ಯ ಕವಿ (ವೀ)

4. ಶರಂ ಬ (+ಲ) ಗೊಂಬೆನಧಿಕ ವಿಲಾಸದಿಂದ ॥ ೨ ॥ ಚಾಮರಸ ಹಂಪೆಯ ಹರಿ (ರೀ) ಶ್ವರ ಭಿ (ಭೀ) ಮ ಸೊ (ಸೋ) ಮ (ಮಾ)

5. ರಾಧ್ಯ ಕವಿ ನಿ ಶ್ಕಿ (ಸ್ಸಿ) ಮ ಪದ್ಮರಸರನು ನುತಿಪೆನು ಪ್ರೆ (ಪ್ರೇ) ಮದಿಂದ ॥ ೩ ॥ ವಚನ ಯಿಂತೆಂದು ಪು

6. ರಾತ (+ನ) ಕವಿಗಳಂ ಬಲಗೊಂಡು । ಕ್ಸಾ (ಸ್ಕಾ) ಂದಾದಿ ಪುರಾಣಂಗಳೊಳ್ವೇಳ (ಳ್ವ ಪಾರ್ವತಿ ಶೀ) ದೆ (ದೇ) ವಿಯ ವಿವಾಹೊ (ಹೋ)

7. ತ್ಸವ ಪುಣ್ಯಕಥಾ ಪ್ರಸಂಗಮಂ । ಸೂಕ್ಷ್ಮ ರೂಪದಿಂ ಕೆರ್ರು (ಕೆರ್ರೀ) ಡೀ ಕರಿಸಿ ಧೀವಾರ್ಣ

8. ಕರ್ಣಾಟಕಾದಿ ವಿಶ್ರಭಾಷೆಗಳಿಂದೊಡಗೂಡಿ । ಪದ ಪದ್ಯವಚನ ಪ್ರಚಯುಗಳಿಂ ।
9. (+ವಿ) ರಚನೆಯುಪ್ಪಂತು । ತರವರಿದು । ಸೆ (ಸೇ) ರುವೆ ಗೊಳಿಶಿ (ಸಿ) ಶಿವ ಕಲ್ಯಾಣ ಯುಕ್ತ

೩ನೆ ಗರಿ ಹಿಂಲಾಗ – ಪುಟ ೬

1. ಗಾನ ಪ್ರಬಂಧವೆಂದೀ ಕೃತಿಗೆ ನಾಮವಾಂಕಿತಂ ಗೈದು ಸಕಲ ಜನ ಶ್ರಾವ್ಯ
2. ಮುಪ್ಪಂತುಸುರ್ವೆನ ದೆಂತೆಂದೆನೆ ॥ ಕಂ ॥ ಶ್ರೀ

ಟಿಪ್ಪಣಿಗಳು

1, ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಸಾದರ ಪಡಿಸಿದ ಡಾ, ಸಾ. ಶಿ, ಮರುಳಯ್ಯನವರ 'ಕೆಳದಿ ಅಸರರು ಮತ್ತು ಕನ್ನಡ ಸಾಹಿತ್ಯ' ಎಂಬ ಮಹಾಪ್ರಬಂಧಕ್ಕೆ ಡಾ, ಆರ್. ಸಿ. ಹಿರೇಮಠ್‌ರವರ ಅಪೇಕ್ಷೆಯಂತೆ ನಾನು ಇವುಗಳನ್ನು ಒದಗಿಸಿದ್ದೇನೆ.

2, ಕೆ. ನೃ ವಿ, ಮೈಸೂರು ವಿಶ್ವವಿದ್ಯಾನಿಲಯ ಉಪೋದ್ಘಾತ. ಪುಟ. XV(ದ್ವಿ. ಮು), ಇದೇ ಕಟ್ಟನಲ್ಲಿ ದೊರೆತ 'ಕವಿ ಜಿಹ್ವಾಬಂಧನಂ' ದಿ॥ ಎ. ಆರ್, ಕೃ, ರವರು ಪ್ರಕಟಿಸಿದ್ದಾರೆ.

3, ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಪ್ರಕಟವಾದ 'ಕೆಳದಿ ವೆಂಕಣ್ಣ ಕವಿಯ ಕೀರ್ತನೆಗಳು' ನೋಡಿರಿ (1977)

4. ಇದು ಕವಿ ಲಿಂಗಣ್ಣ ಸ್ವಹಸ್ತಾಕ್ಷರ ಕೃತಿಯೇ? (ಇದು ವಿಚಾರ್ಯ).

೨, ಕೆ. ನೃ ವಿ. (ದ್ವಿ. ಮು). ಪುಟ XV ಉಪೋದ್ಘಾತದಲ್ಲಿರುವ ವಿವರಣೆಯನ್ನು ಗಮನಿಸಿರಿ,

6. ಕೆಳದಿ ಪ್ರಾಚ್ಯ ಸಂಶೋಧನಾಲಯದಲ್ಲಿ ಇದನ್ನು ಪ್ರದರ್ಶಿಸಲಾಗಿದೆ'

X X X X X X

೨೪. ಶ್ರೀ ರಾಮ ಪಟ್ಟಾಭಿಷೇಕದಲ್ಲಿ ಕೆಲವು ಕೌತುಕಗಳು

—ಶ್ರೀ ರಾಮಚಂದ್ರ ಉಚ್ಚಿಲ, ಮುಂಬಯಿ.

'ವ್ಯಾಸೋಚ್ಛಿಷ್ಟಂ ಜಗತ್ಸರ್ವಂ' 'ಬಾಣೋಚ್ಛಿಷ್ಟಂ ಜಗತ್ಸರ್ವಂ' ಎಂಬ ವಾಕ್ಯಗಳು ಯಾವ ಕವಿಯನ್ನೂ ಕಾವ್ಯಸೃಷ್ಟಿ ಮಾಡಲು ಪ್ರೇರೇಪಿಸಲಾರವು. ಆದರೆ ನಮ್ಮ ಸಾಹಿತ್ಯದ ಇತಿಹಾಸವನ್ನು ನೋಡಿದಾಗ ಈ ವಾಕ್ಯಗಳು ಯಾರನ್ನೂ ಎದೆಗೆಡಿಸಲಿಲ್ಲ ಎಂಬುದು ಕಂಡುಬರುತ್ತದೆ. ಪಂಪನಿಂದ ಸ್ಫೂರ್ತಿ ಪಡೆದ ರನ್ನ ಸಾಹಸಭೀಮ ವಿಜಯವನ್ನೇ ಬರೆದ. ಪಂಪನ ಒಂದು ಆಶ್ವಾಸ ರನ್ನನ ಕೈಯಲ್ಲಿ ಒಂದು ಮಹಾಕಾವ್ಯವಾಗಿ ಅವನಿಗೆ ಮಹಾಕವಿ, ಕವಿಚಕ್ರವರ್ತಿ ಎಂಬ ಬಿರುದನ್ನೂ ತಂದಿತು. ಇಂತಹ 'ಕೊಡು ಕೊಳುವ' ಪ್ರವೃತ್ತಿಗೆ ನಮ್ಮ ಮುದ್ದಣನೂ ಹೊರತಲ್ಲ; ಮುದ್ದಣನ ರಾಮಾಶ್ವಮೇಧ. ರಾಮಪಟ್ಟಾಭಿಷೇಕಗಳ ಕೆಲವು ವರ್ಣನೆಗಳಿಗೆ, ಸನ್ನಿವೇಶಗಳಿಗೆ, ಪಾತ್ರ ಚಿತ್ರಣಕ್ಕೆ ಜೈಮಿನಿ ಭಾರತದ ಬೇರೆ ಬೇರೆ ಭಾಗಗಳು ಸ್ಫೂರ್ತಿ ನೀಡಿವೆ ಎಂಬುದನ್ನು ಗ್ರಂಥಸ್ಥ ಆಧಾರಗಳಿಂದ ಕಂಡುಕೊಳ್ಳಬಹುದು. ಹಳೆಯ ಕವಿಗಳಿಂದ ಸ್ವೀಕರಿಸಿದ ಅಭಿಪ್ರಾಯಗಳು ಮುದ್ದಣನ ಸ್ವಂತಿಕೆಯ ಲೇಪಗೊಂಡು ಹೊಚ್ಚಹೊಸತೆನ್ನುವಂತಹ ಕೌತುಕವನ್ನುಂಟುಮಾಡುವುದು ಮುದ್ದಣ್ಣನ ಹಿರಿಮೆಗಳಲ್ಲಿ ಪ್ರಧಾನವಾದುದು. ಶ್ರೀರಾಮ ಪಟ್ಟಾಭಿಷೇಕದಲ್ಲಿ ಇಂತಹ ಅನೇಕಾನೇಕ ಕೌತುಕಗಳನ್ನು ವಿವರಿಸಲು ಇಲ್ಲಿ ಎಡೆಯಿಲ್ಲವಾದರೂ ಕೆಲವನ್ನಾದರೂ ನೋಡಬಹುದು,

ಪುಷ್ಪಕ ವಿಮಾನದಲ್ಲಿ ಕುಳಿತು ಶ್ರೀರಾಮಂ ಸೀತೆಯರು ಲಂಕೆಯಿಂದ ಅಯೋಧ್ಯೆಗೆ 'ಶಕ್ರ ವಿಧಿ ಮುಖ್ಯರ ವಿಮಾನಂಗಳೊಡನೆ' ಪ್ರಯಾಣಿಸುತ್ತಿರುವಾಗ ಕೆಳಗೆ 'ತಂಗಡಲು' ಮೊರೆಯುವುದು ಮುದ್ದಣನಿಗೆ ಕಾಣುತ್ತದೆ. ಕಡಲು ಮೊರೆಯುವುದು ವಿಚಿತ್ರವಲ್ಲ, ಮೊರೆಯುವುದೇ ಅದರ ಸ್ವಭಾವ. ಯಾಕೆ ಮೊರೆಯುತ್ತದೆ?

> ಕೊಡನಣುಗನರಸಿಗಿಂಬಿತ್ತನಾದೊಡಮವಂ । ಕುಡಿದನಂದಳಿಯ ನೀ
> ರಾಘವಂ ಬಂಧಿಸಿದ । ನೆಡೆಗೊಂಡುದಂ ಮರೆತು ವಜ್ರ ಜೀವನವನಪಹರಿ
> ಸುವಂ ಮೇಘ ಭಟರಿಂ ॥ ಪಡೆದುಮೆನ್ನಿಂದಧಿಕ ಸಂಪದವನೆಂದೊದರಿ ।
> ಮೃಡನೊರ್ವ ವಿಷವನಿತ್ತೊಡೆ ವಿಷಮವೆನಿಸನೆ । ನ್ನೊಡೆಯನೆಂದಿರದೆ
> ಪೊಗಳುವೊಲಬ್ಧಿ ಮೊರೆವುದೋರೊರ್ಮೆ ಕಿರುಪೆರ್ದನಿಗಳಿಂ ॥

ಈ ವರ್ಣನೆಗೆ ಮುದ್ದಣ ಲಕ್ಷ್ಮೀಶನಿಗೆ ಋಣಿ. ಅಶ್ವಮೇಧ ಯಾಗಕ್ಕೆ ಶ್ರೀ ಕೃಷ್ಣನನ್ನು ಕರೆತರಲು ಧರ್ಮರಾಯ ಭೀಮನನ್ನು ದ್ವಾರಕೆಗೆ ಕಳುಹಿಸುತ್ತಾನಷ್ಟೆ.

ದ್ವಾರಕೆ ಇರುವುದು ಕಡಲಿನ ಮಧ್ಯದಲ್ಲಿ. ಭೀಮನಿಗೆ ಕಾಣಿಸಿದ್ದು "ನಿಟ್ಟುಸಿರ್ ಬಿಟ್ಟು ಸುಯ್ವ ಉದಧಿ". ಯಾಕೆ ಈ ನಿಟ್ಟುಸಿರು ಎಂಬುದನ್ನು ಲಕ್ಷ್ಮೀಶನ ಬಾಯಿಯಿಂದಲೇ ಕೇಳೋಣ:

> ಮುನಿಮುನಿದು ಪೀರ್ದುದಂ ರಾಜವಂಶ ಕುಠಾರ। ಕನ ಕನಲ್ಕೆಗೆ ನೆಲಂ
> ಬಿಟ್ಟುದಂ ರಘುಜರಾ। ಮನ ಮನದ ಕೋಪದುರುಬೆಗೆ ಬಟ್ಟೆಗೊಟ್ಟುದಂ
> ವಡಬಾನಲಂ ತಿನ್ನೊಳು॥ ದಿನದಿನದೊಳವಗಡಿಸುತಿರ್ಪುದಂ ಬಹಳ ಜಡ।
> ತನ ತನಗೆ ಬಂದುದಂ ಭಂಗವಡೆಗೊಂಡುದಂ। ನೆನೆನೆನೆದು ನಿಟ್ಟುಸುರ್ವಿಟ್ಟು
> ಸುಯ್ವಂತುದಧಿ ತೆರೆವೆರ್ಚುಗೆಯೊಳಿರ್ದುದು॥

ಅಗಸ್ತ್ಯಮುನಿ ಕೋಪದಿಂದ ಸಮುದ್ರವನ್ನು ಕುಡಿದನು ಲಕ್ಷ್ಮೀಶ ಅಗಸ್ತ್ಯನ ಕೋಪಕ್ಕೆ ಕಾರಣವನ್ನು ಹೇಳುವುದಿಲ್ಲ. ಪುರಾಣೋಕ್ತ ಕಥೆಗಳಿಂದ ಅಗಸ್ತ್ಯನ ಪತ್ನಿಯಾದ ಕಾವೇರಿಯನ್ನು ಸಮುದ್ರರಾಜ ಮೋಹಿಸಿದ್ದನ್ನು ನಾವು ಕೇಳಿದ್ದೇವೆ. ಮುದ್ದಣ ಅದೇ ಅಗಸ್ತ್ಯನ ಕುರಿತಾದ ಸಮುದ್ರರಾಜನ ವಿರೋಧವನ್ನು ಹೇಳದೆ 'ಕೊಡನಣುಗನಾಸಿಗಿಂಬಿತ್ತನಾದೊಡಮವಂ ಕುಡಿದ' ಎಂದು ಹೇಳುತ್ತ–ಹೆಂಡತಿಗೆ ಆಶ್ರಯ ಕೊಟ್ಟ ತನ್ನಲ್ಲಿ ಒಂದಿಷ್ಟೂ ಕನಿಕರವನ್ನೂ ತೋರದೆ ಕುಡಿದೇಬಿಟ್ಟ ಎಂಬ ಅಗಸ್ತ್ಯನ ಕೃತಜ್ಞತೆ ಇಲ್ಲದ ಪ್ರವೃತ್ತಿಯನ್ನು ಎತ್ತಿಹೇಳುತ್ತಾನೆ. 'ರಘುಜ ರಾಮನ ಮನದ ಕೋಪದುರುಬೆಗೆ ಬಟ್ಟೆಗೊಟ್ಟುದು' ಲಕ್ಷ್ಮೀಶನಲ್ಲಿ ಸಮುದ್ರರಾಜನ ಹಳಹಳಿಕೆಯಾದರೆ, ಮುದ್ದಣನ ಸಮುದ್ರರಾಜ 'ಅಳಿಯ ನೀ ರಾಘವಂ ಬಂಧಿಸಿದ' ಎಂದು ತನ್ನ ಅಳಿಯನಾದ ಶ್ರೀರಾಮ (ಲಕ್ಷ್ಮಿ ಸಮುದ್ರದಲ್ಲಿ ಹುಟ್ಟಿದ್ದರಿಂದ ಸಮುದ್ರರಾಜನ ಮಗಳು; ಸೀತೆಯೇ ಲಕ್ಷ್ಮಿ; ಅವಳ ಗಂಡ ರಾಮ) ಮಾವನೆಂಬ ಸಂಬಂಧವನ್ನು ಮರೆತು ತನ್ನನ್ನು ಬಂಧಿಸಿದನಲ್ಲ ಎಂದು ವಿಷಾದಿಸುತ್ತಾನೆ. ಲಕ್ಷ್ಮೀಶನಲ್ಲಿ ಪರಶುರಾಮ, ಬಡಬಾನಲ, ಭಂಗ (ತೆರೆಗಳು). ಜಡತನಗಳು ಸಮುದ್ರರಾಜನ ಮೊರೆತಕ್ಕೆ ಅನ್ಯ ಕಾರಣಗಳು. ಮುದ್ದಣ ಅವನ್ನು ಕೈಬಿಟ್ಟು ದೇವೇಂದ್ರ. ವ್ಯಾಡರನ್ನು ಸೇರಿಸಿಕೊಂಡಿದ್ದಾನೆ, 'ದೂರ್ವಾಸ ಶಾಪದಿಂದ ಪದಭ್ರಷ್ಟನಾದ ದೇವೇಂದ್ರನಿಗೆ ಸಮುದ್ರ ದ್ವೀಪದಲ್ಲಿ ಆಶ್ರಯ ಕೊಟ್ಟ; ಆದರೂ ವಜ್ರ ಅದನ್ನು ಜ್ಞಾಪಿಸಿಕೊಳ್ಳದೆ ಜೀವನವನ್ನು (ಸಮುದ್ರದ ನೀರನ್ನು) ಮೇಘಭಟರ ಮೂಲಕ ಅಪಹರಿಸುತ್ತಾನೆ, ಸಮುದ್ರಮಥನದಲ್ಲಿ ಹುಟ್ಟಿದ ವಿಷವನ್ನು ನೀಲಕಂಠ ಕುಡಿದ. ಆದರೂ ಆತ ನನಗೆ ಕೇಡೆಣಿಸಲಿಲ್ಲ. ಅಂಥ ನನ್ನ ಒಡೆಯ ಶಿವನನ್ನೆ ಹೊಗಳುವೆನೆಂಬಂತೆ ಕಿರುಪೆರ್ದನಿಗಳಿಂದ ಕಡಲು ಮೊರೆಯುತ್ತಿತ್ತು. ಲಕ್ಷ್ಮೀಶನ ಸಮುದ್ರರಾಜ ಕೈಲಾಗದ ಅಸಹಾಯಕ; ಮುದ್ದಣನ ಸಮುದ್ರ ಕೃತಘ್ನತೆಗಳನ್ನು ಎತ್ತಿತೋರಿಸಿ ಶಿವಚಿಂತನ ಮಾಡುವ ದೈವಭಕ್ತ. ಮುದ್ದಣ ಲಕ್ಷ್ಮೀಶನ ಅಭಿಪ್ರಾಯವನ್ನು ಸ್ವೀಕರಿಸಿ ಅವುಗಳಿಗೆ ತನ್ನ ಸ್ವಂತಿಕೆಯ ಮುದ್ರೆಯೊತ್ತಿ ವೃದ್ಧಿ ಮಾಡಿದ್ದಾನೆ.

'ಶ್ರೀರಾಮ ಪಟ್ಟಾಭಿಷೇಕ' ಅನೇಕ ಕೌತುಕಗಳಿಂದ ಕೂಡಿದ ಕೃತಿ. ಮೊದಲ ನೆಯ ಕೌತುಕ 'ಚಾವಡಿ ರಂಗ ಭಟ್ಟನಾತ್ಮಜೆ ಮಹಾಲಕ್ಷ್ಮಿ' ಎಂದು ತನ್ನನ್ನು ಕರೆದು ಕೊಂಡ ತಟವಟ. ಈ ತಟವಟವೀಗ ತುಬ್ಬಾಗಿ ಶ್ರೀರಾಮ ಪಟ್ಟಾಭಿಷೇಕ ಮುದ್ದಣ್ಣನ ಮೂರು ಕಾವ್ಯಗಳಲ್ಲಿ ಮೊತ್ತಮೊದಲಿಗೆ ಬರೆಯಲ್ಪಟ್ಟುದೆಂದು ಆಂತರಿಕ ಮತ್ತು ಬಾಹ್ಯ ಆಧಾರಗಳಿಂದ ಸಿದ್ಧಪಟ್ಟಿದೆ. ಎರಡನೆಯ ಕೌತುಕ ಮುದ್ದಣನಿಗೆ ಸಾಕಷ್ಟು ಸಂಸ್ಕೃತ ಜ್ಞಾನ ಇರಲಿಲ್ಲವೆಂಬ ಮಿತ್ರರ ಹೇಳಿಕೆಗಳು. ಈ ಹೇಳಿಕೆಗಳಿಗೆ ಸವಾಲೆಂಬಂತೆ ರಾಮ ಪಟ್ಟಾಭಿಷೇಕದ ಕೆಳಗಿನ ರಚನೆಗಳನ್ನು ಪರಾಂಬರಿಸಬಹುದು:

ಪರಮರಣಕಾಂಕ್ಷಿಯಾಗಿರ್ದು ಭಗವತ್ಕೃಪಾ। ಶರಧಿ ಭವದೂರನಾಗಿರ್ದುಂ ಭವಪ್ರಿಯಂ।
ನೆರೆ ನೃಶಂಸನ ಪಾತ್ರನಾಗಿಯುಂ ಸಜ್ಜನವತ್ಸಲನುಂ ಜಗತ್ಪೂಜ್ಯನುಂ॥ ಅರಸಂ ಸದಾ
ವಿನುತ ನಾಕಲಂಕಾ ಪ್ರಥಿತ। ನರಿಯಲ್ಕು ರೂಪಾತ್ತ ವಿಗ್ರಹನುಮಾಗಿರ್ದು। ದಯಿಂ
ಸರಸೋ ನಿಷ್ಕಲಂಕ ನಾಗಸೆನಂ ತ್ರಿಲೋಕಾಭಿ ರಾಮನೆನಿಸಿ॥ (ರಾಮ ಪ, ೫/೬೧)

ಸುರರಿಗಮೃತಂ ಬೇಕೆ ಮನಮುಂಟೆ ಕಾಲಕಂ। ಧರೆಗೆ ವಿಷದೊಳ್, ಬಾಲ ಚಂದ್ರಂಗೆ
ಪಯುಮಿಹುದೆ। ಶರಮುಂಟೆ ವೀರರ್ಗೆ, ಕೀಲಾಲಮುಸುರರ್ಗೆ ದೊರೆತುದೇ ಲಾವಣ್ಯಮಂ॥
ಸ್ಮರಸಿಚ್ಛಿಪನೆ, ಕುಶಮನಂಸುವರೆ ಯಮಿಗಳ್ ಘ। ನರಸಮಂ ಕೊಂಡರೆ ರಸಜ್ಞರುಂ
ಟೆನ್ನುವೊ। ದರದೆ ತಾನೀವೆನೆಂದೊರವಂತೆ ಮೊರವಂತೆ ತೆರತೆರದಿನಬ್ಧಿರಾಜಂ॥

(ರಾಮಪ. ೩/೨೪)

ಮಕರ ಕರ್ಕಟಕ ಹರಿ ಮಿಥುನದಿಂದನಿಮೇಷ। ನಿಕರದಿಂ ದ್ರೋಣಂ ತಿಮಿಂಗಿಲಗಳಿಂದೊಪ್ಪ।
ತಕಳಂಕಮೆನೆ ಧನ-ಷ್ಕೋಟಿಯಿಂ ಬೆರೆದತುಳ ವೃಷಕೆ ನೆಲೆವನೆಯಿದೆನಿಸಿ॥
ಪ್ರಕಟದಿಂ ಕುಂಭ ಜನ್ಮಪೋಶನಕೆ ಸಂದು। ಸಕಳ ಸೌಭಾಗ್ಯ ಸಹ ಕನ್ನೆಯುಂ
ಪದೆ ದಿತ್ತು। ಸುಕರಮೆನೆ ರಂಜಿಸಿತು ವಾರಾಶಿ ರಾಶಿ ರಾಶಿಯನಾಂತ ಗಗನದಂತೆ॥

(ರಾಮಪ. ೩/೨೯)

ಶರಣಾಗೆ ಸಾಧ್ಯನಿಶ್ಚಿಂತ್ಯ ಚಿದ್ಘನ ಚರಾ। ಚರದ ಚೈತನ್ಯಾತ್ಮ ಪರಮಾತ್ಮ ಪೋಂ ಪರಾ।
ತ್ಪರ ಪರಂಬ್ರಹ್ಮ ನಿರ್ಗುಣ ನಿಸ್ತುಲಾಂಗ ಸತ್ತಾಮಾತ್ರ ಸಚ್ಚಿತ್ಪ್ರಭಾ॥ ಸ್ಥಿರ ತತ್ವ
ವಿಚ್ಚಿದಂಬರ ರಂಗೆ ನಟ ಜಗ। ದ್ಭರ ನಿಗಮಯೋನಿ ನಿರವದ್ಯ ನಾಸ್ತಿಕ ಭಯಂ।
ಕರ ಭೀಮ ಕಾಮದ ಮಹಾಮಹಿಮ ಮಾಯಾರಮಾರಾಮ ರಾಮನಾಮ॥

(ರಾಮಪ. ೫/೬೬)

ದ್ರಾವಕಂ ವಿನತಾತ್ಮ ಬಂಧಸಚ್ಚರಿತ ನಿ। ದ್ರಾವಕಂ ನಾಗಾವೃತಾಂಗಂ ದಯಾ ಸಮು।
ದ್ರಾವಕರಕಂ ದೀರ್ಘ ನಾಸಿಕ ನವೋಘು ಸುವರ್ಣಪಕ್ಷ ಪ್ರಭಾವಂ॥ ಭಾವರಹಿತಂ ಬಾಧ

ಜನೌಘವಂದಿತಪದನ । ಭಾವ ಜನ್ಮಂ ವಿನಾಯಕನೆಮ್ಮ ನಾವಗಂ । ಭಾವ ಶುದ್ಧಿಯ
ನಿತ್ತು ಕೃತಿಗೆ ನಿರ್ವಿಘ್ನತೆಯನೆಸರಿ ತಾನೊಲಿದು ಪೊರೆಗೆ ॥ (ರಾಮ ಪ. ೧/೫)

ಕುಸ್ತಿ ಮಾಸ್ತರಿಕೆಯ ತರಬೇತಿ ಪಡೆದು ಕನ್ನಡ ಪಂಡಿತನ ಕೆಲಸಮಾಡುತ್ತಿದ್ದ ಮುದ್ದಣನಿಗೆ ಸಾಕಷ್ಟು ಸಂಸ್ಕೃತ ಜ್ಞಾನವಿದ್ದಿರಲಿಲ್ಲವೆಂದು ಹೇಳಿದರೆ ಅದನ್ನು ತಪ್ಪೆನ್ನಲಾಗದು. ಸಂಸ್ಕೃತ ಸಾಕಷ್ಟು ತಿಳಿಯದ ಈ ಕುಸ್ತಿ ಮಾಸ್ತರನ ಶಬ್ದ ಭಾಂಡಾರ ದಿಂದ ಶ್ಲೇಷ, ಪರ್ಯಾಯ ಪದಗಳ ಬಳಕೆ, ಆಧ್ಯಾತ್ಮಿಕ ವಿವರಣೆ, ಇಷ್ಟು ವಿಪುಲವಾಗಿ ಬಂದಿರುವುದು ಕೌತುಕವೇ ಆಗಿದೆ. ಶ್ರೀರಾಮ ಪಟ್ಟಾಭಿಷೇಕದಲ್ಲಿ ಕಾಣುವ ಸಂಸ್ಕೃತ ಪ್ರಾಚುರ್ಯವನ್ನು ಕೊಂಚ ಬದಿಗಿಡುವ. ಯಕ್ಷಗಾನದಲ್ಲಿಯೂ ಆತ ಸಂಸ್ಕೃತ ಶ್ಲೋಕ ಗಳನ್ನು ಒಳ್ಳೆಯ ವಿದ್ವಾಂಸನಂತೆ ಅನುವಾದಿಸಿದ್ದಾನೆ. ಕುಮಾರ ವಿಜಯದಲ್ಲಿ ಬರುವ ಈ ಹಾಡನ್ನು ನೋಡುವ:

ಉದ್ಯೋಗವು ಛಲ । ಬದ್ಧ ಪ್ರಯತ್ನ ಸು । ಬುದ್ಧಿ ಪರಾಕ್ರಮ । ಇದ್ದರೆ ಭಯವೇನೈ ॥
ಆಪತ್ತಿಲಿ ಕೈ । ಲಾಪನಿತೆಸಗೆಮ । ಗಾಪುದು ಸುಕೃತ ಫ । ಲಾ ಫಲ ಹೊಂದುತ—

ಸಂಸ್ಕೃತ ಸುಭಾಷಿತವೊಂದನ್ನು ಇದರೊಂದಿಗೆ ಹೋಲಿಸಿ ನೋಡಿ:

ಉದ್ಯಮಃ ಸಾಹಸಂ ಧೈರ್ಯಂ ಬುದ್ಧಿಃ ಶಕ್ತಿಃ ಪರಾಕ್ರಮಃ ॥
ಷಡೇತೇ ಯತ್ರ ವರ್ತಂತೇ ತತ್ರ ದೈವಂ ಪ್ರಸೀದತಿ ॥

ಮುದ್ದಣ ಬಾಲ್ಯವನ್ನು ಉಡುಪಿಯ ಅಷ್ಟಮಠದ – ಮುಖ್ಯವಾಗಿ ಕೃಷ್ಣಾಪುರ ಮಠದ–ಪರಿಸರದಲ್ಲಿ ಕಳೆದವನಷ್ಟೆ. ಸಂಸ್ಕೃತ ವ್ಯಾಸಂಗದ ಮೊದಲ ಮೂರು ಘಟ್ಟ ಗಳನ್ನು ದಾಟಿದ್ದಾನೆನ್ನುವುದಕ್ಕೆ ಮೇಲೆ ಉದ್ಧರಿಸಿದ ಪದ್ಯಗಳು ಸಾಕ್ಷಿ. ಮೊದಲ ಮೂರು ಘಟ್ಟಗಳನ್ನು ದಾಟಿದ ಮೇಲೆ ಕಾವ್ಯ. ನಾಟಕ, ವ್ಯಾಕರಣ, ಮತತತ್ತ್ವ ವಿಚಾರ, ವೇದೋಪ ನಿಷತ್ತು. ಇವುಗಳಲ್ಲಿ ವ್ಯಾಕರಣ ಒಂದನ್ನು ಬಿಟ್ಟು ಉಳಿದುವುಗಳಲ್ಲಿ ಆತ ಸಾಕಷ್ಟು ಪರಿಣತ ನಾಗಿದ್ದನೆಂಬುದಕ್ಕೆ ರಾಮ ಪಟ್ಟಾಭಿಷೇಕದಲ್ಲೆ ಸಾಕಷ್ಟು ಉದಾಹರಣೆಗಳಿವೆ. ಪಟ್ಟಾಭಿ ಷೇಕದಲ್ಲಿರುವ 'ಶ್ರೀರಾಮ ಚಂದ್ರಾಭು ನಮಾಮಿ' ಎಂಬ ವ್ಯಾಕರಣ ದೋಷದ ವಾಕ್ಯಕ್ಕೂ ಶ್ರೀ ತೆಕ್ಕುಂಜೆ ಗೋಪಾಲಕೃಷ್ಣ ಭಟ್ಟರು ಒಂದು ಸಮಾಧಾನವನ್ನು ಒದೆಡೆ ಕೊಟ್ಟಿದ್ದಾರೆ. ಇಷ್ಟಲ್ಲದೆ, ನಮ್ಮ ಕವಿ ಕುಲಗುರು ಕಾಳಿದಾಸನೇ ತನ್ನ ಕೃತಿಯಲ್ಲಿ ವ್ಯಾಕರಣ ದೋಷಕ್ಕೆ ಎಡೆಮಾಡಿಕೊಟ್ಟಿದ್ದಾನೆ ಎಂಬ ಅಂಶವನ್ನು ರಾಷ್ಟ್ರಕವಿ ಗೋವಿಂದ ಪೈಯವರು 20 ವರ್ಷಗಳ ಹಿಂದೆಯೇ ತೋರಿಸಿಕೊಟ್ಟಿದ್ದಾರೆ,

ಶ್ರೀರಾಮ ಪಟ್ಟಾಭಿಷೇಕದಲ್ಲಿ ಇನ್ನೂ ಒಂದು ಕೌತುಕವಿದೆ. ಮುದ್ದಣ ಬರೆಯ ಬೇಕೆಂದಿದ್ದ 'ಕರ್ಣಾಟಕ ರಾಮಾಯಣ'ವೇ ಇದೀಗ ನಾವು ಕಾಣುವ ಪಟ್ಟಾಭಿಷೇಕ. ಇದರಲ್ಲಿ 250 ವಾರ್ಧಿಕ ಷಟ್ಪದಿಗಳಿವೆ. 250 ಷಟ ದಿಗಳ ಕೃತಿಗೆ ಪೀಠಿಕಾ ಸಂಧಿ; ನಾಂದೀ ಸಂಧಿ ಎಂಬ 20 ಷಟ್ಪದಿಗಳು! ಇದನ್ನು ಬರೆದು ಬವುಲಾಡಿ ಹೆಬ್ಬಾರರಿಗೆ

ತೋರಿಸಿದಾಗ ಅವರು 'ಇದು ಬರಿಯ ಶಬ್ದಮಾಲೆ, ಜೈಮಿನಿ ಭಾರತದ ಕುರುಡು ಶೈಲಿ' ಎಂದು ಹೇಳಿದರಂತೆ. ಹೆಬ್ಬಾರರು ಮುದ್ದಣನಿಗಿಂತ ಮೂರು ವರ್ಷಕ್ಕೆ ಕಿರಿಯರು. ಅವರ ಟೀಕೆ ಕಟುವಾಗಿದ್ದರೂ ಸತ್ಯವಾಗಿತ್ತು. ಮುದ್ದಣ ಈ ವಿಮರ್ಶೆಯನ್ನು ಸ್ವೀಕರಿಸಿ ಹೆಬ್ಬಾರರೇ ಹೇಳಿದಂತೆ ಅದ್ಭುತ ರಾಮಾಯಣವನ್ನು ಗದ್ಯದಲ್ಲೇ ಬರೆದ, 'ಕರ್ಣಾಟಕ ರಾಮಾಯಣ' ವಿಸ್ತಾರವಾದ ಹೊಳಹಿನಿಂದ ಪ್ರಾರಂಭವಾಗಿ ಎರಡೇ ಷಟ್ಪದಿಗಳ ಮಂಗಲ ದೊಂದಿಗೆ ಮುಕ್ತಾಯಗೊಂಡಿತು, 'ಶ್ರೀಲೋಲನಧ್ವರ ಚರಿತ್ರ'ವೆಂದಿದ್ದ ವಾಕ್ಯ 'ಶ್ರೀಲೋಲನಭ್ಯುದಯ ಚಾರಿತ್ರ'ವೆಂದು ತಿದ್ದಲ್ಪಟ್ಟಿತು,

ರಾಮ ಪಟ್ಟಾಭಿಷೇಕವನ್ನು ಹೆಬ್ಬಾರರು 'ಜೈಮಿನಿ ಭಾರತದ ಕುರುಡು ಶೈಲಿ' ಎಂದುದರಲ್ಲಿ ಸ್ವಲ್ಪ ಸತ್ಯಾಂಶವಿದೆ, 'ಶೈಲಿ' ಎನ್ನುವುದನ್ನು ಅನುಪ್ರಾಸ, ಯಮಕ, ಛೇಕಾನು ಪ್ರಾಸ, ವೃತ್ಯನು ಪ್ರಾಸ ಎಂಬ ಅರ್ಥದಲ್ಲಿ ನಾನಿಲ್ಲಿ ಬಳಸುತ್ತಿದ್ದೇನೆ. ಇಂಥ 'ಕುರುಡು ಶೈಲಿ'ಯನ್ನು ಅಳವಡಿಸಿಕೊಂಡರೂ ಮುದ್ದಣ ಕೌತುಕಪೂರ್ಣವಾದ ಸ್ವೋಪಜ್ಞ ತೆಗೆ ರಾಮ ಪಟ್ಟಾಭಿಷೇಕದಲ್ಲಿ ಅನುವು ಮಾಡಿಕೊಂಡಿದ್ದಾನೆ, ಈ ಬಗೆಯ ಸ್ವೋಪಜ್ಞತೆ 'ಮುದ್ದಣ ಲಕ್ಷ್ಮೀಶನಿಗೆ ಸರಿದೂರೆ' ಎಂಬ ಭಾವನೆಗೆ ಎಡೆಮಾಡಿಕೊಟ್ಟಿದೆ ಎಂದರೆ ಸಣ್ಣ ಮಾತಲ್ಲ. ಉದಾಹರಣೆಗೆ ಮೂರನೆಯ ಸಂಧಿಯ ಇಪ್ಪತ್ತೊಂಭತ್ತನೆಯ 'ಮಕರ ಕರ್ಕಟಕ ಹರಿ ಮಿಥುನ; ವಾರಾಶಿ ರಾಶಿರಾಶಿಯನಾಂತ ಗಗನದಂತೆ' ಎಂಬ ಪದ್ಯ, ದ್ವಾದಶರಾಶಿ ಗಳಿಗೆ ಆಶ್ರಯಸ್ಥಾನವಾದ ಆಕಾಶದ ಹೋಲಿಕೆ! ಲಕ್ಷ್ಮೀಶ ಇವೇ ದ್ವಾದಶ ರಾಶಿಗಳನ್ನು ಗಣಿಕೆಯರ ಅಂಗ ಸೌಂದರ್ಯಕ್ಕೆ ಹೋಲಿಸಿದ:

> ಸೊನಿಮೇಷ ಮೀನ ಚಾಪಲ ನೇತ್ರೆ. ಚಕ್ರಾನ್ಮಿಥುನ
> ಕುಂಭ ಕುಚೆ, ಮಕರಕೇತು ಮಾತುಲ ಸಮಾನನೆ
> ಸಿಂಹ ಮಧ್ಯೆ ವೃಷಭಧ್ವಜಾರಿಯ ಪಟ್ಟದಾನೆ ಕನ್ಯಾಕುಲಮಣಿ

ಮುದ್ದಣನ ಹೋಲಿಕೆ ಸುಸಂಬದ್ಧವಾಗಿದೆಯೆಂದು ಎಂಥ ಅರಸಿಕನಿಗೂ ಅನಿಸೀತು.

ನಾನಾ ಮೂಲಗಳಿಂದ ಮುದ್ದಣ ಸ್ಫೂರ್ತಿ ಪಡೆದು ಅವನ್ನು ಸ್ವೀಕರಿಸಿದ್ದಾನೆ; ಆ ಋಣವನ್ನು ಸೂಕ್ಷ್ಮವಾಗಿ ಹೇಳಿದ್ದಾನೆ. ತನ್ನ ಕಾವ್ಯದಲ್ಲೇ 'ಮೂಲವಳಿಸದೆ ವೃದ್ಧಿ ಯನೆ' ಮಾಡಿದ್ದಾನೆ. ಲಕ್ಷ್ಮೀಶನಿಗೆ ಸಜ್ಜನರು, ಸತ್ಕಾವ್ಯ ಸಮಾನವೆಂದು ಕಂಡಂತೆ, ಮುದ್ದಣನಿಗೆ ಒಳ್ಳೆಯ ವ್ಯಾಪಾರಿ, ಒಳ್ಳೆಯ ಕಾವ್ಯಸಮಾನವೆಂದು ಕಂಡಿದೆ. ಮುದ್ದಣ ಲಕ್ಷ್ಮೀಶನಿಗೆ ಹೇಗೆ ಋಣಿಯೋ. ಹಾಗೇ ನಾಗಚಂದ್ರನಿಗೆ. ರಾಘವಾಂಕನಿಗೆ, ಕುಮಾರ ವ್ಯಾಸನಿಗೆ, ವಿರೂಪಾಕ್ಷ ಪಂಡಿತನಿಗೆ ಕೂಡಾ ಋಣಿಯೇ, ಹಾಗೆ ನೋಡಿದರೆ ಪೂರ್ವ ಕವಿಗಳಿಗೆ ಅವರ ಅನಂತರದವರು ಋಣಿಗಳಾದಿರುವುದು ಸಹಜವೇ ಆಗಿದೆ.

X X X X

೨೫. ಕನ್ನಡ ಕಾವ್ಯದಲ್ಲಿ ನವೋದಯ : ಪಂಜೆ ಮತ್ತು ಪೈ

—ಶ್ರೀ ಸಂ.ಶಿ.ಜೋಯಿಸ್, ಮೈಸೂರು.

ಹೊಸತು ಹೊನಲಿಡುವುದು ಕಾಲದ ಗುಣವಾಗಿ ಚದರಿ ಬರುವಾಗ ಒಂದೊಂದು ವಿಭಾಗದಲ್ಲೂ ಬೇರೆ ಬೇರೆ ಮಟ್ಟದಲ್ಲಿ ದುಡಿಯುವವರನ್ನು ಕಾಣುತ್ತೇವೆ. 1900ರ ಹೊತ್ತಿಲಲ್ಲಿ ಇಂಥ ಸಂಕ್ರಾಂತಿ-ಜೀವನದ ಅಂಗವಾಗಿ ಸಾಹಿತ್ಯವೂ ಹೊಸತಕ್ಕೆ ತುಡಿಯುವ ಲಕ್ಷಣವನ್ನು ಕನ್ನಡ ಕಾವ್ಯ ಸಂದರ್ಭದಲ್ಲೂ ಗುರುತಿಸಬಹುದು. ಮುದ್ದಣನಂಥ ಕವಿ ಒಂದು ಹೇಳಿಕೆಯ ನೆಲೆಯಲ್ಲಿ ಪೂರ್ಣವಾಗಿ ಒಂದನ್ನು ಧಿಕ್ಕರಿಸಿ ಇನ್ನೊಂದನ್ನು ಸ್ವಯಂ ಆಯುವ ಸ್ವಾತಂತ್ರ್ಯವನ್ನು ('ಪದ್ಯಂ ವಧ್ಯಂ ಗದ್ಯಂ ಹೃದ್ಯಂ') ಘೋಷಿಸುವ ಧೈರ್ಯ ಮಾಡಿ ತನ್ನ ನಿಲುವಿಗೆ ಬದ್ಧನಾಗುತ್ತಾನೆ. ಪದ್ಯ ತನ್ನ ಜಾಡಿನಲ್ಲಿ ತೀರಾ ನಿಷ್ಕ್ರಿಯವಾಗಿದ್ದಾಗ ಅದಕ್ಕೆ ಕಾಯಕಲ್ಪ ಕೊಡುವ ಬೇರೆ ವಿಧಾನದ ಶೋಧನೆ ಮುದ್ದಣನಿಗೆ ಸಾಧ್ಯವಾಗಲಿಲ್ಲವಾಗಿ ಆತ ಗದ್ಯಕ್ಕೆ ಮಗ್ಗುಲಿಸುತ್ತಾನೆ. ಆವನದೆ ಆಯ್ಕೆಯಲ್ಲಿ ಆತ ಸಾಧಿಸಿದ್ದು ಕಡಿಮೆಯದಲ್ಲವೆನ್ನುವುದು ಒಂದಾದರೆ, ಜಡಗಟ್ಟಿದ್ದನ್ನು ಕೊಡಹಿ ಹೊಸತನ್ನು ಆಯ್ಕೆ ಮಾಡುವ ಸ್ವಾತಂತ್ರ್ಯ ಒಂದು ಮೌಲ್ಯವಾಗಿ ಮುಖ್ಯವಾಗುತ್ತದೆ. ಕಾವ್ಯ ಅಭಿವ್ಯಕ್ತಿಗೊಳ್ಳುತ್ತಿರುವ ರೀತಿಯಲ್ಲಿ ಮೂಲಭೂತ ಬದಲಾವಣೆಯಾಗಬೇಕು ಎಂದು ಸೋದಾಹರಣೆ ತಿಳಿಯ ಹೇಳಿದ ಮುದ್ದಣನನ್ನು ನವೋದಯದ ಮೊದಲಲ್ಲಿ ಈ ನಿಟ್ಟಿನಿಂದಾದರೂ ಗಮನಿಸಬೇಕು. ಆದರೆ ನವೋದಯ ಗರೆಯೊಡೆದು ಗರಿ ಬಿಡುವುದಕ್ಕೆ ಪಂಜೆ. ಪೈ. ಬಿ. ಎಂ. ಶ್ರೀಯವರನ್ನು ಪ್ರಮುಖವಾಗಿ ಆಶ್ರಯಿಸಬೇಕಾಗುತ್ತದೆ. [ಇದೇ ಸಮಯದಲ್ಲಿ ಧಾರವಾಡದ ಕಡೆ ಶಾಂತಕವಿಗಳು, ಬೇಂದ್ರೆಯವರು ನವೋದಯಕ್ಕೆ ಮೈಗೂಡಿಸಿಕೊಂಡ ಪರಿಯೂ ಒಟ್ಟಿನಲ್ಲಿ ಮಹತ್ವವಾದುದು.]

ಪಂಜೆ ಮಂಗೇಶರಾಯರು ಮತ್ತು ಗೋವಿಂದ ಪೈಯವರು ಗುರುಶಿಷ್ಯರಾದಿಯೂ, ಕನ್ನಡದ ಅಭಿವೃದ್ಧಿಗೆ ದುಡಿಯುವುದರಲ್ಲಿ ಸಮಾನ ಶ್ರದ್ಧೆ ಇದ್ದವರಾಗಿಯೂ, ಕನ್ನಡ ಕಾವ್ಯವನ್ನು ಹೊಸಮಜಲಿಗೆ ಅಣಿಗೊಳಿಸುವ ಕ್ರಿಯೆಯಲ್ಲಿ ಒಂದೆಡೆ ಸೇರದಿರುವುದು ಕುತೂಹಲವಾದರೂ ಅವರವರ ಧೋರಣೆಯನ್ನು ತಿಳಿಸುತ್ತದೆ. ಇವರಿಬ್ಬರೂ ಸುಮಾರಾಗಿ ಒಂದೇ ಕಾಲದಲ್ಲಿ ಕವನಿಸುವುದಕ್ಕೆ ತೊಡಗಿದವರು. ಪೈಯವರು 1900 ಆಗಸ್ಟ್‌ನಲ್ಲಿ "ಸುವಾಸಿನಿ" ಪತ್ರಿಕೆಗೆ ಸ್ಪರ್ಧೆಗಾಗಿ ರಚಿಸಿದ ಅದೇ ಹೆಸರಿನ ಮೂರು ಕಂದ ಪದ್ಯಗಳು (3 ರೂ. ಬಹುಮಾನ ಪಡೆದುವು) ಅವರ ಮೊದಲ ಪ್ರಕಟಿತ ಬರಹವೆನ್ನುವುದು ಸುವಿದಿತವಿದೆ. ಪಂಜೆಯವರ ಕೃತಿಗಳೂ ಕೆಲವು 1900—1903ರ ಅವಧಿಯಲ್ಲಿ 'ಸುವಾಸಿನಿ'ಯಲ್ಲಿ ಪ್ರಕಟವಾದವು. ಸುವಾಸಿನಿಯ II, IIIನೇ ಸಂಪುಟಗಳಲ್ಲಿ (1902–

1903) ಬಂದಿರುವ ಪಂಜೆಯವರ 'ಕಮಲ', 'ಭೀಷ್ಮ ನಿರ್ಯಾಣ', 'ಚಂದ್ರೋದಯ',
ಲಕ್ಷ್ಮೀಶ ಕವಿ', 'ಹರಿಶ್ಚಂದ್ರ ರಾಜ್ಯ ವಿಯೋಗ' ಎಂಬ ಐದು ಕವಿತೆಗಳು ವೃತ್ತಗಳಲ್ಲಿ
ರಚಿತವಾಗಿವೆಯಾದರೆ, 'ಕಬ್ಬಿಣದ ಬುದ್ಧಿವಾದ' ಎಂಬುದು ಚೌಪದಿಯಲ್ಲಿದೆ. ಅಲ್ಲದೆ
ವಿಷಯದಿಂದಲೂ ಹೊಸತನ್ನು ತಿಳಿಸುತ್ತದೆ. 'ಸಂಜೆಯ ಹಾಡು' ಎಂಬುದು 1902ರಲ್ಲಿ
ಬರೆದದ್ದೆಂದೂ ತಿಳಿಯುತ್ತದೆ. ಇಲ್ಲಿ ಗಮನಿಸಬೇಕಾದದ್ದು, ಹಳೆಯ ಛಂದಸ್ಸಿನಲ್ಲಿ ಹಳ
ಗನ್ನಡ ಭಾಷೆಯನ್ನು ಆಕರ್ಷಕವಾಗಿಯೇ ಕಟ್ಟಿಕೊಡಬಲ್ಲ ಪಂಜೆಯವರಿಗೆ, ಸದ್ಯದ
ಜೀವನಕ್ಕೆ ಅಭಿವ್ಯಕ್ತಿ ಕೊಡುವಲ್ಲಿ ಈ ಬಿಗುವಿನ ಭಾಷೆ, ಛಂದಸ್ಸು ಸರಿಯಿಲ್ಲ ಎಂದು
ಅನ್ನಿಸಿದ್ದು. ವೃತ್ತಗಳಿಗೂ ಉಳಿದೆರಡು ಪದ್ಯಗಳಿಗೂ ಭಾಷೆ, ಸ್ವರೂಪ, ವಸ್ತುವಿನಲ್ಲಿ
ರುವ ಅಂತರದಿಂದ ಇದನ್ನು ತಿಳಿಯಬಹುದು. ಶಿಶುಗೀತೆಯ ರಚನೆಯಲ್ಲಿ ಸರಳಭಾಷೆ
ಅವರಿಗೆ ಅನಿವಾರ್ಯವಾಯಿತಾದರೂ, ಮುಂದಿನ ಎಲ್ಲ ರಚನೆಗಳಲ್ಲಿ ಸರಳತೆಯ ಒಂದು
ಹಾದಿಯನ್ನೇ ಅವರು ತೆರೆಯುತ್ತಾರೆ. ಹೊಸ ಅನುಭವಗಳು ಹೊಸ ರೀತಿಯಲ್ಲಿ ವ್ಯಕ್ತ
ವಾಗುತ್ತಿದ್ದುದನ್ನು ಇಂಗ್ಲಿಷ್ ಸಾಹಿತ್ಯದ ಅಧ್ಯಯನದಿಂದಲೂ ಮನಗಂಡ ಪಂಜೆಯವರು
ಅದರಿಂದ ಪ್ರಭಾವಿತರಾಗಿದ್ದಾರೆ. ಆದರೆ ಅವರು ಕನ್ನಡದ ಸಂಪ್ರದಾಯವನ್ನು ಪೂರ್ಣ
ಮೀರುವ ಮನೋಧರ್ಮ ತಾಳುವುದಿಲ್ಲ. ವೃತ್ತಗಳನ್ನು ಕೈಬಿಟ್ಟರೂ ಚೌಪದಿ,
ಸಾಂಗತ್ಯ, ರಗಳೆಗಳಂಥ ಹಳೆ ದಾಟಿಯಲ್ಲಿ ಮಾತ್ರ ಛಂದಸ್ಸು ಚಲಿಸಿತು. ಪ್ರಾಸದಂಥ
ವಿಧಿಯನ್ನು ಕೈಬಿಡುವುದಕ್ಕೆ ಕೃತಿಯಲ್ಲಿ ಎಂದೂ ಸಾಕ್ಷಿ ತೋರಿಸದ ಪಂಜೆ, ಪ್ರಾಸರಹಿತ
ರಚನೆಯನ್ನು ಕಾವ್ಯಧರ್ಮವಾಗಿ ಒಪ್ಪಿಕೊಳ್ಳುವುದಕ್ಕೆ ಬಹಳಕಾಲ ತೆಗೆದುಕೊಂಡರು.
ಹೊಸತು ಕಾಲಿಡುವುದು ಹೀಗೆಯೇ ಎಂದು ಕಾಣುತ್ತದೆ. ಅದು ಸಮಗ್ರವಾಗುವುದಕ್ಕೆ
ಕಲವರು ಕೈಜೋಡಿಸುತ್ತಾರೆ.

ಪೈ ಈ ಮಧ್ಯೆ ಹೆಸರಾಗುತ್ತಾರೆ. ತನ್ನದೇ ದಾರಿ ಸಮೆಯುತ್ತಾರೆ, ಪ್ರಾಸ ತ್ಯಾಗದ
ನಿರ್ಧಾರ (1911 ರಲ್ಲಿ) ಇದರಲ್ಲಿ ಮುಖ್ಯವಾದುದು. ಕಾವ್ಯವನ್ನು ನವೀಕರಿಸುವ,
ಅಭಿವ್ಯಕ್ತಿಗೆ ಸ್ವಾತಂತ್ರ್ಯ ಕಲ್ಪಿಸುವ ತಾತ್ತ್ವಿಕ ನೆಲೆಯಲ್ಲಿ ಈ ನಿಲುವು. ಸಾಧನೆ ಆಗ
ಮಹತ್ವದ್ದೇ ಆಗುತ್ತದೆ. ಪ್ರಾಸವನ್ನು ಉಸಿರಾಗಿಸಿ ಬಿಗಿಹಿಡಿದ ಕವಿಗಳ ನಡುವೆ, ಪ್ರಾಸ
ವನ್ನು ಸ್ಥಾನಚ್ಯುತಗೊಳಿಸಿ ಕವಿಗೂ ಕಾವ್ಯಕ್ಕೂ ಬಿಡುಗಡೆಯ ಸುಖವನ್ನು ದಕ್ಕಿಸಿಕೊಡಲು
ಹೆಣಗಿದಾಗ. ಇವರ ಮೇಲೆ ಗುಂಪಾಗಿ ಆಕ್ರಮಣ ಮಾಡಿ ನಿಂದಿಸಿದ ಕವಿ–ವಿಮರ್ಶಕರ
ಕಟು ನುಡಿಗಳಾದರೂ, ಪೈಯವರ ಈ ಸಾಧನೆಯ ಮಹತ್ವವನ್ನು ಎತ್ತಿ ತೋರಿಸುತ್ತದೆ,
ಪ್ರಾಸ ಇಲ್ಲವಾದಷ್ಟಕ್ಕೇ ಕಾವ್ಯ ನವೀನವಾಗುತ್ತದೆಂಬ ಸರಳ ಸಿದ್ಧಾಂತಕ್ಕೆ ಇದು ದಾರಿ
ಕೊಡಬಾರದು. ಶಬ್ದ ಭಾವಾರ್ಥಕ್ಕಲ್ಲದೆ ನಿಯಮಕ್ಕಾಗಿ ಸಲ್ಲುವುದು. ವರ್ಣಗಳು ನಾದ
ತರಂಗದಿಂದ ಅಲಂಕಾರಗೊಳಿಸುವ ಗುಣವನ್ನೂ ಪಡೆಯದೆ. ನಿರಾಳ ಒಂದು ಲಂಬದಲ್ಲಿ
ನಿಲ್ಲುವುದು ಕಾವ್ಯಕ್ಕೆ ಯಾವ ಸತ್ವವನ್ನೂ ತುಂಬದಾಗ ಕೃತಕತೆಯ ಅವಗುಣದಿಂದ
ಕಾವ್ಯವನ್ನು ಉಳಿಸಲು ಈ ನಿಯಮೋಲ್ಲಂಘನೆ ಅನಿವಾರ್ಯವಾಗಿ ಪೈ ಇದನ್ನು ಸಾಧಿಸು

ತ್ತಾರೆ. ಪಂಜೆಯವರದು ಕಾವ್ಯದ ಆಂತರ್ಯದಲ್ಲಿ ಹೊಸತನವನ್ನು ಹೆಚ್ಚು ಬದಲಿಲ್ಲದ ಆಯದಲ್ಲಿ ಪುರಸ್ಕರಿಸುವ ದೃಷ್ಟಿಯಾದುದರಿಂದ, ನಿಯಮ ಉಲ್ಲಂಘಿಸಿ ಬದಲು ಕಾಣಿಸುವ ಪೈಯವರ ಕೃತಿಗೆ ಬಂದ ಪ್ರತಿಭಟನೆಯನ್ನು ಅದು ಸೆಳೆಯುವುದಿಲ್ಲ. ಪೈ ಮೊದಲು ತಾನು ಮಾಡಿದ ಸುದ್ದಿಯಿಂದ ಗುದ್ದಿಸಿಕೊಂಡರೂ, ಕಾಲಕ್ರಮದಲ್ಲಿ ತನ್ನ ಸಾಧನೆಯ ನೇರಕ್ಕೆ ಕನ್ನಡ ಕಾವ್ಯವನ್ನು ಮಿದ್ದಿಸಿಕೊಳ್ಳುವಲ್ಲಿ ಕೃತಾರ್ಥತೆ ಕಾಣುತ್ತಾರೆ.

ಪ್ರಾರಂಭಿಕ ರಚನೆಗಳಲ್ಲಿ ಪೈಯವರೂ ಸಂಪ್ರದಾಯಕ್ಕೆ ಬದ್ಧರೇ ಇದ್ದರು. 1900–1903 ಈ ಅವಧಿಯಲ್ಲಿ ಬರೆದ 'ಸುವಾಸಿನಿ', 'ಸುಭದ್ರಾವಿಲಾಪ', 'ಕಾಲಿಯ ಮರ್ದನ'ಗಳು ಕಂದಗಳಾಗಿವೆ. 1903 ರಲ್ಲಿ ಅನುವಾದಿಸಿದ 'ಚಿಟ್ಟೆಗೆ', 1906ರಲ್ಲಿ ಅನುವಾದಿಸಿದ 'ಬಾನಕ್ಕಿಗೆ' ಚೌಪದಿ ಮತ್ತು ಕುಸುಮ ಷಟ್ಪದಿಗಳಲ್ಲಿವೆ. 28 ಸಾಲುಗಳಿರುವ 'To the Stork' ಎಂಬ ಕವನವನ್ನು 'ಕೋರಿಲೆ'ಗೆ (1909) ಎಂಬ ಹೆಸರಲ್ಲಿ ನಾಲ್ಕು ವಿವಿಧ ವೃತ್ತ–ಮತ್ತೇಭ, ಶಾರ್ದೂಲ, ಮಂದಾಕ್ರಾಂತ, ವಂಶಸ್ಥ–ಗಳಲ್ಲಿ ಸಂಗ್ರಹಿಸಿದ್ದು, ವಿಲಕ್ಷಣವಾಗಿದೆ. ಇಲ್ಲೆಲ್ಲಾ ಪ್ರಾಸವಿದೆ. ಆದರೆ 1899–1900 ರ ಹೊತ್ತಿಗಲ್ಲ ಅವರಿಗೆ ಪ್ರಾಸಬಿಟ್ಟು ಬರೆಯಬೇಕೆಂಬ ಸ್ಫುರಣೆಯಾಗುತ್ತಿತ್ತಂತೆ. ತನ್ನ ಅಪೇಕ್ಷೆಯನ್ನು ಗುರು ಪಂಜೆಯವರಲ್ಲಿ ಪ್ರಸ್ತಾಪಿಸಿದಾಗ ಅವರ ಪ್ರತಿಕ್ರಿಯೆ ನಿಷೇಧರೂಪವಾಗಿ ಎಂಥ ಬಿಗಿವಡೆದಿತ್ತೋ, ಅದು 'ಶ್ರೀ'ಯವರ ಇಂಗ್ಲಿಷ್ ಗೀತಗಳನ್ನು ನೋಡುವವರೆಗೂ ಕರಗುವುದಿಲ್ಲವೆಂದಾಗ ಆಶ್ಚರ್ಯವಾಗುತ್ತದೆ. ಪೈಯವರಿಗೆ ತನ್ನೊಳಗೇ ನಿರ್ಧಾರಕ್ಕೆ ಹದಗೊಳ್ಳುತ್ತಿದ್ದುದನ್ನು ಕೃತಿಗೊಳಿಸುವವರೆಗೆ ಅರ್ಥಪೂರ್ಣವಾದುದನ್ನು ಕೊಡಲಾಗುವುದಿಲ್ಲ. 1911 ರಲ್ಲಿ ಪ್ರಾಸಪರಿತ್ಯಾಗಕ್ಕೆ ನಿರ್ಧರಿಸಿದಾಗಲೂ 'ಭಾರತಲಕ್ಷ್ಮಿ,' 'ಹಿಂದುಸ್ತಾನ್ ಹಮಾರಾ', 'ವಿದಾಯ' ಇತ್ಯಾದಿ ಅನುವಾದಗಳಲ್ಲಿ ಮೊದಲು ಸ್ಪಂದಿಸಬೇಕಾಗುತ್ತದೆ 'ಹೊಲೆಯನು ಯಾರು?' ಎಂಬ ಸ್ವತಂತ್ರ ಪ್ರಾಸರಹಿತ ಕವನ ಬರೆದಾಗ ಪೈ ಒಂದು ಮಹತ್ವದ ಸಂದರ್ಭ ಸೃಷ್ಟಿಸುತ್ತಾರೆ. ಮುಂದೆ ಪ್ರಾಸವನ್ನು ಒಂದು ಅಲಂಕಾರವಾಗಿ ಬಳಸುವ ಪರಿಪಾಟ ಮಾತ್ರ ಪೈಯವರಲ್ಲಿ ಉಳಿದುಕೊಳ್ಳುತ್ತದೆ.

ಪ್ರಾಸದ ಉಲ್ಲಂಘನೆ ಅಷ್ಟಕ್ಕೇ ಉಳಿಯದೆ, ಆಗ ಬಳಕೆಯಲ್ಲಿದ್ದ ಮಟ್ಟುಗಳಿಗೆ ಚಿಕಿತ್ಸೆ ನಡೆಯುತ್ತದೆ. ಇದು ಒಡ್ಡಿದ ಚುರುಕು ಇತರ ಮಟ್ಟುಗಳ ಆವಿಷ್ಕರಣಕ್ಕೆ ಅಥವಾ ಇದ್ದ ಸ್ವರೂಪಗಳನ್ನೇ ತಕ್ಕಂತೆ ಮಾರ್ಪಾಟು ಮಾಡುವುದಕ್ಕೆ ದಾರಿಮಾಡುತ್ತದೆ. ಅಥವಾ ಇದ್ದುದನ್ನು ಕಳಚಿ ಅದೇ ದ್ರವ್ಯಗಳನ್ನು ಹೊಸತರ ರಚನೆಗೆ ಬಳಸುವ ಅಭಿಪ್ರಾಯವನ್ನು ಮೂಡಿಸುತ್ತದೆ. ಇದು ಸ್ವಲ್ಪ ದೀರ್ಘಾವಧಿಯಲ್ಲಿ ಸಾಧ್ಯವಾಗುವುದನ್ನು ಕಾಣುತ್ತೇವಾದರೂ. ಹಂತ ಹಂತದಲ್ಲಿ ಇದರ ಫಲಶ್ರುತಿ ಗಮನಕ್ಕೆ ಬರುತ್ತದೆ. ಪಂಜೆಯವರು ಹಳೆಯ ಛಂದಸ್ಸುಗಳಲ್ಲಿ ಚೌಪದಿ, ಷಟ್ಪದಿ, ರಗಳೆಗಳಂಥವುಗಳನ್ನು ಭಾವಗೀತೆಗೆ– ಬಳಸಿದ ಭಾಷಾ ಮರ್ಯಾದೆಗೆ ಸಹಜ ಅನ್ನಿಸುವಂತೆ ಉಪಯೋಗಿಸಿದ್ದಾರೆ. 'ತೆಂಕಣ ಗಾಳಿ' ಯಲ್ಲಿ ಮಾತ್ರ ಮುಂದಾನಿಬರಗಳಲ್ಲಿ ನಿರ್ಧರಿತ ಗಣಗಳನ್ನು ಕವನದ ಭಾವದ ಲಾಗು

ತಾಕುಗಳಿಗೆ ಅನುಗುಣವಾಗಿ ಬೇರೆ ರೀತಿಯಲ್ಲಿ ಮುರಿದು, ನಿಷೇಧಿತ ಗಣವನ್ನು ಬಳಸುವ ಮೂಲಕವಾದರೂ ಪಂಜೆಯವರು ಇದ್ದುದರಲ್ಲೇ ನಾವೀನ್ಯಕ್ಕೆ ಸ್ಪಂದನಗೊಳ್ಳುತ್ತಿದ್ದುದನ್ನು ತಿಳಿಯಬಹುದು. ಆದರೆ ಅಷ್ಟೆ ಸತ್ಯವಾದ ವಿಚಾರ ಪಂಚೆಯವರಿಗೆ ಹೊಸ ಛಂದಸ್ಸನ್ನು ನಿರ್ಮಿಸಬೇಕೆಂದೆನ್ನಿಸಲಿಲ್ಲ ಮಾತ್ರವಲ್ಲ ಆ ಹಂತದಲ್ಲಿ ಅಂಥ ಪ್ರಯತ್ನವನ್ನು ಪುರಸ್ಕರಿಸುವ ದೃಷ್ಟಿಯೂ ಇರಲಿಲ್ಲ.

1916ರಲ್ಲಿ ಪೈಯವರು 'ಕವಿತಾವತಾರ'ಕ್ಕೆ ಸಾನೆಟ್ಟನ್ನು (ಚತುರ್ದಶಪದಿ) ಬಳಸಿದಾಗಲೇ ಹೊಸ ಛಂದೋ ರೀತಿಯೊಂದು ಪ್ರಚಲಿತವಾಗುತ್ತದೆ. ಪ್ರಾಸತ್ಯಾಗದ ಬಗ್ಗೆ ಮಾತನಾಡಿದಾಗ ಪೈಯವರನ್ನು ನಿರಾಶೆಗೊಳಿಸಿದ ಪಂಜೆಯವರು, ಸಾನೆಟ್ಟಿನಂಥ ಹೊಸ ಛಂದಸ್ಸನ್ನು ರೂಢಿಸುವ ಕುರಿತೂ ಅದೇ ಧೋರಣೆ ತಳೆದವರು. "ನನ್ನ ಕವಿತೆಯನ್ನು ಕುರಿತು ಯಾರೊಂದಿಗೂ ಕೇಳಬಾರದು, ಯಾರೂ ಏನೆಂದರೂ ಬಿಡಬಾರದು" ಎಂದು ಈ ಹಂತದಲ್ಲಿ ಪೈ ನಿರ್ಧರಿಸುವುದು ಕನ್ನಡಕ್ಕೆ ಪ್ರಯೋಜನವಾಗುತ್ತದೆ. ಮುಂದೆ ಪೈಯವರು ಸುಮಾರು 60ರಷ್ಟು ಎಂದರೆ ತಾವು ಬರೆದಿರುವ ಕವಿತೆಗಳಲ್ಲಿ $\frac{1}{3}$ಕ್ಕಿಂತಲೂ ಹೆಚ್ಚು ಚತುರ್ದಶಪದಿಗಳನ್ನು ಬರೆಯುತ್ತಾರೆ. ಮಾಸ್ತಿ, ಬೇಂದ್ರೆ, ಕುವೆಂಪು ಅಂಥವರೂ ಇದರಲ್ಲಿ ಹುಲುಸಿನ ಬೆಳೆ ತೆಗೆಯುತ್ತಾರೆ. ಪ್ರಾರಂಭದಿಂದಲೇ ಚತುರ್ದಶಪದಿಯಲ್ಲಿ ವಿವಿಧ ಸಾಧ್ಯತೆಗಳನ್ನು–ಪ್ರಾಸಯೋಜನೆಯಿಂದ–ಸೂರೆ ಮಾಡಿದ ಪೈಯವರು ಇದನ್ನೇ ಮುಂದುವರಿಸಿ ಅಷ್ಟಾದಶಪದಿಯನ್ನು ನಿರ್ಮಿಸುತ್ತಾರೆ.

ಕಾವ್ಯ ರಚನಾವಿಧಿಯಲ್ಲಿ ಇಷ್ಟು ಬದಲಾವಣೆ ಸಾಧ್ಯವಾದ ಆ ಕಾಲದಲ್ಲಿ ಕಾವ್ಯದ ಭಾಷೆಯಲ್ಲಿ, ಅನುಭವ ನಿರೂಪಣೆಯಲ್ಲಿ, ವಸ್ತುವಿನಲ್ಲಿ ಹೊಸತು ಹೇಗೆ ಮುಂದ್ರೆಯೊತ್ತಿದೆ ಎನ್ನುವುದು ವಿಚಾರಾರ್ಹವಾಗುತ್ತದೆ, ಜೀವನದಲ್ಲಿ, ಆಧುನಿಕತೆ ಬಂದಾಗ, ಅನುಭವ–ವಿಚಾರ ಬದಲಾಗುತ್ತದೆ. ಸ್ವಾಭಾವಿಕವಾಗಿಯೇ ಅಭಿವ್ಯಕ್ತಿ ಸಹಜ ಹೊಸದಾರಿಗಳನ್ನು ಅರಸಬೇಕು. ಎಂದರೆ ಭಾಷೆ–ನಿರೂಪಣೆ ಇದಕ್ಕೆ ಬೇರೆ ರೀತಿಯಲ್ಲಿ ಸಿದ್ಧವಾಗಬೇಕು. ಗೋವಿಂದ ಪೈಯವರು 'ಗಿಳಿವಿಂಡಿ'ನ ಮೊದಲಲ್ಲಿ ಈ ಅಭಿಪ್ರಾಯದ ಮಾತನ್ನು ಅಚ್ಚು ಹಾಕಿದ್ದಾರೆ: "ಕಾಲೇ ಕಾಲೇ ನವಾಚಾರಾ–ನವಾ ವಾಣೀ ಮುಖೇ ಮುಖೇ". ಕಾವ್ಯದಲ್ಲಿ ಪೈಯವರು ಇದನ್ನು ಆಗಗೊಡುವ ಶ್ರದ್ಧೆ ತೋರಿದ್ದಾರೆ. ಪಂಜೆಯವರು ಈ ನಿಟ್ಟಿನಲ್ಲಿ ಮುಖ್ಯವಾಗಿ ತೋರುತ್ತಾರೆ. 1902–1903ರ ಅವಧಿಯಲ್ಲಿ ರಚಿತವಾದ 'ಕಬ್ಬಿಣದ ಬುದ್ಧಿವಾದ' 'ಸಂಜೆಯ ಹಾಡು'ಗಳು ಹಳಗನ್ನಡದಿಂದ ಹೊಸಗನ್ನಡಕ್ಕೆ ಅವರು ದಾಟಿದ ಮಾರ್ಗವನ್ನು ರೇಖಿಸುತ್ತವೆ; ಭಾಷೆ ಬದಲಿಸಬೇಕೆನ್ನುವ ಆಶಯ ವ್ಯಕ್ತವಾಗುತ್ತದೆ, ಮುಂದಿನ ಅವರ ಕಥನಕವನಗಳಲ್ಲಿ ಮಾತುಗಳು ಹಳ್ಳಿಯ ಆವರಣದಲ್ಲಿ ವ್ಯವಹರಿಸುವ ವ್ಯಕ್ತಿಗಳಿಗೆ ತೀರ ಸಹಜವಾಗಿರುತ್ತವೆ. ಜನರ ಮಾತುಕತೆಗಳ ನಡುವೆ ಮಾತ್ರ ಕೇಳಿಬರುತ್ತಿದ್ದ ಹಲವು ವಿಶಿಷ್ಟ ಮಾತುಗಳು ಕಾವ್ಯದಲ್ಲಿ ಸ್ಥಾನ ಪಡೆಯುತ್ತವೆ. 'ಕಡೆಕಂಜಿ'ಯಲ್ಲಿ ಬಿರುಮು ಸೆಟ್ಟಿ ಬೇಡಲು ನಾಡು ಸೇರಿದಾಗ ಜನರು ಹಳಿಯುತ್ತಾರೆ;

ಕೆಲಸ ಮಾಡಲು ಮಾರಿ ಇವನಿಗೆ! ಬಲುಹು ಮೈಯಲಿ ತುಂಬಿದೆ!
ಹಲವು ಕಾಲ್ನಡೆ ಇವನಿಗುಂಟೆಲೋ! ಸುಲಿದು ತಿನ್ನಲು ಬಂದಿಹ!

ಬಿಲುಮನಿಂದ ಎಲ್ಲವೂ ಹೋದಾಗ "ಸೇರುವೆನೊ ಹುಲಿಗವಿಯ? ಚಟ್ಟವ ಏರುವೆನೋ? ಎನೆ ಬಗೆದನು." ಇಂಥ ಮಾತುಗಳು ಕವನಕ್ಕೆ ಸಹಜ ಆವರಣ ವನ್ನು ತರುತ್ತವೆ. ಪಂಜೆ ಯವರ 'ತೆಂಕಣ ಗಾಳಿಯಾಟ'ದಲ್ಲಿ ಭಾವಗೀತೆಯ ಗುಣಗಳನ್ನು ಸಮಗ್ರವಾಗಿ ದರ್ಶಿಸ ಬಹುದು, ಒಂದು ಸ್ಫೂರ್ತಿಯ ಹರಿವಿನಲ್ಲಿ – ಬುಸುಗುಟ್ಟುತ್ತಾ ಬರುವ ತೆಂಕಣ ಗಾಳಿ ಕಣ್ಣು ನಿಲುಕದ ದೂರದಿಂದ ತೊಡಗಿ ಬರ ಬರ ಭರದಲಿ ಹತ್ತಿರ ಹತ್ತಿರಕ್ಕೆ ನಮ್ಮ ಸುತ್ತಕ್ಕೆ ಆದರೆಲ್ಲ ಹಾಸು ಬೀಸು ಬಿರುಸುಗಳಿಂದ ಒಡ್ಡುವ ವಿವರದಲ್ಲಿ ನಾವು ಒಳಗಾಗಿ ಹೋಗು ತ್ತೇವೆ. ಶಬ್ದ ಅರ್ಥ ಪ್ರಾಸ ಅಲಂಕಾರ ಛಂದಸ್ಸು ನಾದ ಲಯ ಇವುಗಳೆಲ್ಲಾ ಕಾವ್ಯದ ಮೂಲೋದ್ದೇಶಕ್ಕೆ ತಮ್ಮನ್ನು ನಿವೇದಿಸಿಕೊಂಡು ಒಂದು ಶಿಲ್ಪದಲ್ಲಿ ಪರ್ಯಾಪ್ತವಾಗು ವುದಕ್ಕೆ ಈ ಕವನ ಉತ್ತಮ ಉದಾಹರಣೆ, ಇಂಥವುಗಳಿಂದ ಪಂಜೆಯವರು ಭಾವ ಗೀತೆಯ ಪ್ರಕಾರ ನಿರ್ಮಾಣದಲ್ಲಿ ಪ್ರವರ್ತಕರ ಸ್ಥಾನವನ್ನು ನಿರ್ವಿವಾದವಾಗಿ ಅಲಂಕ ರಿಸುತ್ತಾರೆ,

ಸಮಕಾಲೀನ ಜೀವನಕ್ಕೆ ಪಂಜೆಯವರು ಕವಿಯಾಗಿ ಸ್ಪಂದಿಸಿದ ರೀತಿಯೂ ಒಂದು ಮಾದರಿಯದಾಗಿದೆ, ರಾಷ್ಟ್ರೀಯತೆ. ನಾಡು ನುಡಿಗಳ ಅಭಿಮಾನ, ಸಾಂಸ್ಕೃತಿಕ ಪುನರುತ್ಥಾನ ಇತ್ಯಾದಿ ಆ ಕಾಲದ ಆಸಕ್ತಿಯ ವಿಷಯಗಳು. ರಣಗೀತೆಯಂತಿರುವ 'ತೂಕಡಿಕೆಯನು ಕಳೆ' ಎಂಬ ಪಂಜೆಯವರ ಪದ್ಯದಲ್ಲಿ 'ಕಳಚಿಬಿಡು ಅಧ್ಯಾತ್ಮ ನಿದ್ದೆಯನು ಬಂಧು!' 'ಹೊದ್ದಿರ್ದ ವೇದಕಂಬಳಿ ಮೂಲೆಗೆಳ್ದು ಒಂದು' ಎನ್ನುವ ಸಾಲುಗಳು ವೈಚಾರಿಕ ಆಳವನ್ನು ತರುತ್ತದೆ, "ಸತ್ಯಸೀಮೆಗೆ ತಾಯೆ ನಡೆಸೆನ್ನ" ಎಂದು ಕೇಳುವಾಗಲೂ 'ಎಲ್ಲಿ ಸಾಹಸ ಸತ್ವದಳತೆಗೆ ಬಳ್ಳವಾಗದೊ ಮೈಯ ಬಣ್ಣವು' ಎಂಬ ಸಾಮಾಜಿಕ ಕಳಕಳಿಯೂ ಉಕ್ತವಾಗುವುದನ್ನು ಕಾಣಬಹುದು. ಹೀಗೆ ಗಟ್ಟಿಯಾಗುವುದರಿಂದ ವಿಸ್ತಾರಕ್ಕೆ ಬಾಚಿ ಕೊಳ್ಳುವುದರಿಂದ ಪಂಜೆಯವರ ಕವನಗಳು ಕ್ಷೇತ್ರಪರಿಧಿಯನ್ನು ದಾಟಿ–ಮಹತ್ವ ಪಡೆಯುತ್ತವೆ. ಪಂಜೆಯವರು ಹೊಲೆಯನ ಕಾಯ ಪ್ರವೇಶ ಮಾಡಿ ಆ ವರ್ಗದವರ ನೋವಿಗೆ ಆಲೋಚನೆಗೆ ದನಿಕೊಟ್ಟ 'ಹೊಲೆಯನ ಹಾಡು' ಆಗಿನ ಕಾವ್ಯ ಚಾಚಿಕೊಳ್ಳ ಬೇಕಾದ ಹೊಸ ವಲಯವನ್ನು ನಿರ್ದೇಶಿಸಿದೆ, 'ಉಳ್ಳಯ್ಯಾ ದಯೆಗೊಳ್ಳಯ್ಯಾ' ಎಂದು ತಗ್ಗಿದ ದನಿಯಿಂದ ಬಗ್ಗಿ ನುಡಿದ ಹೊಲೆಯ. 'ಹಾರುವ! ಮಾಡಿದ್ದುಣ್ಣುವೆ, ಮಹು ರಾಯ!' ಎಂದು ಸೆಟೆದು ನಿಂತಾಡುವುದು, 'ಬೇಡಿದಾಗಲೆ ಬಿಟ್ಟು ಕೊಡುವುದೆ ಮೇಲು! ಬೇಡ ನಾಂ ಸೆಳೆದುಕೊಂಬೆವು ನಮ್ಮ ಪಾಲು', ಎಂದು ಎಚ್ಚರಿಕೆಯ ಕಹಳೆ ಊದುವುದು ಆಗಿನ ಸಾಮಾಜಿಕ ವಿಷಮತೆಯನ್ನೂ ಶೋಷಿತವರ್ಗ ನಿಧಾನಕ್ಕೆ ಎಚ್ಚರಗೊಳ್ಳುತ್ತಿದ್ದು ದನ್ನೂ ಅರಿವಿಗೆ ತರುತ್ತದೆ, ತನ್ನ ಸುತ್ತಣ ಬದುಕಿನೊಂದಿಗೆ ಕಾವ್ಯ ಇಟ್ಟುಕೊಳ್ಳಬೇಕಾದ ಸಂಬಂಧವನ್ನು ಕುರಿತು ಪಂಜೆಯವರು ಸೂಕ್ಷ್ಮದಲ್ಲಿ ಆಲೋಚಿಸಿರುವುದಕ್ಕೆ ಇಲ್ಲೆಲ್ಲಾ

ಉದಾಹರಣೆ ಸಿಗುತ್ತದೆ. ಪಂಜೆಯವರು ಕೊಟ್ಟಿರುವ ಪದ್ಯಗಳು ಅನುವಾದಗಳೂ ಸೇರಿ ದಂತೆ ನಲ್ವತ್ತರಷ್ಟು ಮಾತ್ರ ಇವೆ; ಆದರೆ ಹೆಚ್ಚಿನವು ಪ್ರತ್ಯೇಕ ಪ್ರತ್ಯೇಕವಾಗಿ ಬೇರೆ ಬೇರೆ ದೃಷ್ಟಿಯಿಂದ ಗಮನಾರ್ಹವಾಗುತ್ತವೆ. ಸಮಗ್ರವಾಗಿ ಇವು ಒಂದು ಪರಂಪರೆಯನ್ನು ನಿರ್ಮಿಸುವಲ್ಲಿ ಅಡಿಪಾಯವನ್ನು ಹಾಕಿಕೊಟ್ಟಿವೆ.

ಈ ಅಡಿಪಾಯವನ್ನು ಗಟ್ಟಿಗೊಳಿಸುವಲ್ಲಿ ಪೈ ತನ್ನ ಪಾಲಿನದನ್ನು ಸೇರಿಸಿದ್ದಾರೆ. ಪ್ರಾಸತ್ಯಾಗ, ಹೊಸ ಛಂದಸ್ಸಿನ ಬಳಕೆ–ಇವುಗಳಿಂದ ಕಾವ್ಯರೂಪಕ್ಕೆ ನಾವೀನ್ಯ ತಂದದ್ದನ್ನು ಪ್ರಮುಖವಾಗಿ ಉಲ್ಲೇಖಿಸಬೇಕಾದ್ದು. ಪ್ರಯೋಗಶೀಲರಾಗಿಯೂ ಕಾವ್ಯವನ್ನು ಇವರು ಒಂದು ಪಾವಿತ್ರ್ಯದಲ್ಲಿ ಕಾಣುವವರು. "ಕಾವ್ಯಂ ನ ಮಮಾರ ನ ಜೀರ್ಯತಿ" (ಕಾವ್ಯಕ್ಕೆ ಮರಣವಿಲ್ಲ, ಮುಪ್ಪಿಲ್ಲ) ಎಂಬ ನೆಚ್ಚಿಕೆ, ಈ ಒಂದು ಗಂಭೀರ ದೃಷ್ಟಿಯಿಂದ ಮತ್ತು ಅಗಾಧವಾದ ಪಾಂಡಿತ್ಯದಿಂದಾಗಿ ಇವರ ಕವನಗಳಲ್ಲಿ ಪಂಜೆ ಕವನಗಳಲ್ಲಿರುವ ಭಾವಗೀತೆಯ ಲಾಲಿತ್ಯ ಕಡಿಮೆ. ಪೈಯವರ ಕಾವ್ಯ ಸಿದ್ಧಿಯನ್ನು 'ಗೊಲ್ಗೊಥಾ' 'ವೈಶಾಖಿ'ಗಳಲ್ಲಿ ಗುರುತಿಸಬೇಕಾಗುತ್ತದೆಯಾದಿಯೂ, ನವೋದಯದ ಮೊದಲಲ್ಲಿ ಗಿಳಿವಿಂಡಿನಲ್ಲಿ ಬಂದಿರುವ ಕವನಗಳು ಕೊಟ್ಟ ಪ್ರೇರಣೆ ಐತಿಹಾಸಿಕವಾಗಿ ಮುಖ್ಯವಾಗುತ್ತದೆ. ಹಳಗನ್ನಡದ ಕಚ್ಚು ಬಿಗಿ ಇವರ ಭಾಷೆಯಲ್ಲಿ ಕಾಣುವ ಮುಖ್ಯಗುಣ. ಹೊಸ ಪದಪ್ರಯೋಗದಿಂದಲೂ ವಿರಳ ಪದಗಳ ಬಳಕೆಯಿಂದಲೂ ಸಂದರ್ಭಕ್ಕೆ ಅರ್ಥ ತುಂಬುವ ಇವರ ರೀತಿ ಇವರದೇ. ಆದ್ದರಿಂದಲೇ ಇವರ ಕವನಗಳನ್ನು ಓದುವವನಿಗೆ ರಸಿಕತೆಯೊಂದಿಗೆ ಪಾಂಡಿತ್ಯವೂ ಒಂದು ಅರ್ಹತೆಯಾಗಿರಬೇಕು.

ಪಂಜೆ-ಪೈಯವರ ಕವನಗಳ ಈ ನಿಟ್ಟಿನ ಅಧ್ಯಯನದಲ್ಲಿ ನಾವು ಮೇಲ್ನೋಟಕ್ಕೇ ಗುರುತಿಸಬಹುದಾದ್ದು ಇವರು ನವೋದಯಕ್ಕೆ ಗುರಿಹಿಡಿದು ನಡೆಯುವವರಾದರೂ ಒಂದೆಡೆ ಕಲೆಯುವುದಿಲ್ಲ, ಆದರೆ ನವೋದಯ ಕಾವ್ಯಪ್ರವಾಹದ ಹರಹನ್ನು ಬೇರೆ ಬೇರೆಯಾಗಿ ವಿಸ್ತರಿಸಿದ್ದಾರೆ, ಈ ಗುರು–ಶಿಷ್ಯರ ಕೊಡುಗೆಗಳು ಪರಸ್ಪರ ಪೂರಕವೇ ಆದುವು. ಕನ್ನಡಕ್ಕೆ ಪುನಶ್ಚೇತನ ಕೊಡುವಲ್ಲಿ ಇವರು ದೀಕ್ಷೆಯಿಂದ ದುಡಿದರು. ಬಿ. ಎಂ, ಶ್ರೀಯವರ 'ಇಂಗ್ಲಿಷ್ ಗೀತಗಳು' ಪ್ರಕಟವಾಗಿ ನವೋದಯ ಪಂಥವೊಂದು ಪೂರ್ಣ ತೆರೆಯಿತು ಎಂದಾಗುವಷ್ಟರಲ್ಲಿ, ಪಂಜೆ-ಪೈಯಂವರು ಅಷ್ಟರೊಳಗೇ ಸಾಧಿಸಿರುವುದು ಗಣ್ಯಭಾಗವೇ ಆದಿರುತ್ತದೆ,

X X X X X X X X

೨೬. ಕಡೆಂಗೋಡ್ಲು ಶಂಕರ ಭಟ್ಟರ ಒಂದು ಕವನ 'ಪಂಡಿತನ ಪಯಣ'

—ಶ್ರೀ ಕೆ. ದಾಮೋದರ ಐತಾಳ, ಉಡುಪಿ

ಕನ್ನಡ ನವೋದಯದ ಮೊಳಗನ್ನು ಮೊಳಗಿದವರು ಶ್ರೀ ಪಂಜೆ ಮಂಗೇಶ ರಾಯರು. ಶ್ರೀ ಹಟ್ಟಿಯಂಗಡಿ ನಾರಾಯಣ ರಾಯರು ಈ ಬಗೆಗೆ ಮುಂಬೆಳಗಿನ ಕನಸನ್ನು ಕಂಡವರು, ಅವರ ಗರಡಿಯಲ್ಲಿ ಪಳಗಿದವರಲ್ಲಿ ಶ್ರೀ ಕಡೆಂಗೋಡ್ಲು ಶಂಕರ ಭಟ್ಟರು ಒಬ್ಬರು.

ಪೂರ್ವ ಕವಿಗಳಿಂದ ಸ್ಫೂರ್ತಿ ಪಡೆದು, ಅವರು ನಡೆದ ದಾರಿಯಲ್ಲಿ ನಡೆಯದೆ, ಸ್ವಂತಿಕೆಯ ಮಾರ್ಗದಲ್ಲಿ ಹರಿದು ತಮ್ಮ ತನದ ಪೂರ್ಣ ಪರಿಚಯವನ್ನು ನಾಡಿನ ಜನಕ್ಕೆ ಮಾಡಿಕೊಟ್ಟವರು. ಕಡೆಂಗೋಡ್ಲು ಶಂಕರ ಭಟ್ಟರು. ಅವರ ಒಂದು ಕವನ 'ಪಂಡಿತನ ಪಯಣ'ವನ್ನು ಇಲ್ಲಿ ವಿಶ್ಲೇಷಿಸಿ ಬರೆಯಲೆಳಸಿದ್ದೇನೆ. ಈ ಕವನ 'ಹಣ್ಣುಕಾಯಿ' ಎಂಬ ಅವರ ಕವನಸಂಗ್ರಹದಲ್ಲಿದೆ. 'ಹಣ್ಣುಕಾಯಿ'ಯ 'ಮುನ್ನುಡಿ'ಯಲ್ಲಿ ಈ ಕವನದ ಬಗೆಗೆ ಕವಿ ಸಾಕಷ್ಟು ಹೇಳಿಕೊಂಡಿದ್ದಾರೆ, ಉಳಿದ ಕವನಗಳ ಬಗೆಗೆ ಅವರು ನೇರ ಪ್ರಸ್ತಾಪ ಮಾಡಿಲ್ಲ! ಈ ಕವನ ರಚಿಸಿದ ಕವಿ ಇದನ್ನು (ಕವಿತೆಯನ್ನು) ರಹಸ್ಯವಾಗಿ ಬಹ ಸಮಯದ ವರೆಗೆ ಬಚ್ಚಿಟ್ಟಿದ್ದರು. ಪಂಜೆಯವರು ಅಧ್ಯಕ್ಷರಾಗಿದ್ದ ಸಭೆಯೊಂದರಲ್ಲಿ ಈ ಕವನವನ್ನು ಓದುವ ಧೈರ್ಯ ತಾನು ಮಾಡಿದೆನೆಂದು ಕವಿ ಮೊದಲಲ್ಲೆ ಹೇಳಿಕೊಂಡಿದ್ದಾರೆ. ಇದೊಂದು ವಿಡಂಬನ ಕವನ, ಇಂಗ್ಲೆಂಡಿನಲ್ಲಿ ಇಂತಹ ಕವನಗಳನ್ನು '(Satire) ಸೆಟಾಯರ್' ಎನ್ನುತ್ತಾರೆ.

ಕನ್ನಡ ಪ್ರಾಚೀನ ಕಾವ್ಯಸಾಗರದಲ್ಲಿ ಇಂತಹ ವಿಡಂಬನ ಬಿಡಿಕವನಗಳು ಒಂದು ರೂಪದಲ್ಲಿ ದೊರೆಯಬಹುದು, ಆದರೆ. ಇವು ಕನ್ನಡ ಸಾಹಿತ್ಯದಲ್ಲಿ ಪ್ರತ್ಯೇಕ ಕಾವ್ಯ ಪ್ರಕಾರಗಳಾಗಿ ಆಸ್ತಿತ್ವಕ್ಕೆ ಎಂದೂ ಬಂದಿಲ್ಲ. ಡ್ರೈಡನ್, ಪೋಪ್ ಮೊದಲಾದ ಆಂಗ್ಲ ಕವಿಗಳು ಈ ಕಾವ್ಯ ಪ್ರಕಾರದಲ್ಲಿ ಸಾಕಷ್ಟು ವ್ಯವಸಾಯ ಮಾಡಿದ್ದಾರೆ. ಹೊಸಗನ್ನಡದಲ್ಲಿ ಶ್ರೀ ಜಿ. ಪಿ. ರಾಜರತ್ನಂ, ಅವರು ಇಂತಹ ವಿಡಂಬನ ಕವಿತೆಗಳನ್ನು ರಚಿಸಿದ್ದಾರೆ. ಆದರೂ ಈ ಕಾವ್ಯಪ್ರಕಾರಗಳು ನೇರ–ಅಸ್ತಿತ್ವಕ್ಕೆ- ಹೊಸಗನ್ನಡ ಸಾಹಿತ್ಯದಲ್ಲಿ–ಬಾರದೆಹೋದವು.

[1] ಶಿಕ್ಷೆ–ಬೋಧನೆಗಳೆರಡು ರೀತಿಗಳನ್ನು ಕೂಡಿಸಿಕೊಂಡು, ಎರಡನ್ನು ಮೀರುವ ನಗೆಯ ರೀತಿಯೊಂದಿದೆ. ತಪ್ಪನ್ನು ಎತ್ತಿ ತೋರಿಸಿ ಆ ತಪ್ಪು ಮಾಡಿದವರನ್ನು ನಗೆ ಪಾಟಲಿಗೆ ಗುರಿಮಾಡುವುದರ ಮೂಲಕ ತಪ್ಪು ತಿದ್ದಿಕೊಳ್ಳುವಂತೆ ಮಾಡುವುದೇ ಈ

ರೀತಿ—ಇದನ್ನು ವಿಡಂಬನ (Satire) ಎಂದು ಕರೆಯಬಹುದು. 'ಊರೊಳಗೆ ನಡೆಯುವ ಹಗರಣವ ಕಂಡು ನಗೆಯು ಬರುತಿದೆ' ಎಂದು ಹೇಳಿದ ಪುರಂದರದಾಸರು ನಮ್ಮನ್ನು ನಗುವಂತೆ ಮಾಡಿದರು. ಈ ವಿಡಂಬನ ಹಾಡುಗಳನ್ನು ಕೇಳಿದ ನಾವು ಆ ಕ್ಷಣಕ್ಕೆ ನಕ್ಕು ಮುಗಿಸಿದರೂ ಅದರ ಪ್ರಭಾವವನ್ನು ಉಳಿಸಿಕೊಂಡು ಮುಂದಕ್ಕೆ ನಗುವ ಸಂದರ್ಭ ಒದಗದಂತೆ ಎಚ್ಚರವಹಿಸಿಕೊಳ್ಳುತ್ತೇವೆ. ವಿಡಂಬನ ಕವನದ ಯಶಸ್ಸು ಓದುಗನನ್ನು ಎಚ್ಚರಿಸುವುದರಲ್ಲೆ ಅಡಗಿದೆ.

2 "ವಿಡಂಬನಕಾರ ತೀರ್ಪುಗೊಟ್ಟು ಶಿಕ್ಷೆ ವಿಧಿಸುತ್ತಾನೆ. ಆದರೆ ಅವನ ರೀತಿ ಮಾತ್ರ ಬರಡು ವೇದಾಂತವನ್ನು ಬೋಧಿಸುವುದೂ ಅಲ್ಲ, ನಿರ್ದಯ ನ್ಯಾಯದ ಶಿಕ್ಷೆಯೂ ಅಲ್ಲ. ವಿಡಂಬನಕಾರನಿಗೆ ವ್ಯಕ್ತಿಯಲ್ಲಿ ಪ್ರೀತಿ, ಆದರೆ ವ್ಯಕ್ತಿಯ ಕೊರೆಗಳು, ತಪ್ಪುಗಳು – ದೋಷಗಳ ಮೇಲೆ ದ್ವೇಷ. ಅವನಲ್ಲಿರುವ ಇನ್ನೊಂದು ಗುಣವಿಶೇಷವೆಂದರೆ ಸತ್ಯಪ್ರಿಯತೆ. 3 "He is not to give life, but rather to kill the causes of spiritual death".

4 "ಅಲಂಕಾರದ ಮೇಲೆ ಅಲಂಕಾರ, ಪ್ರಾಸಕ್ಕಾಗಿ ಅರ್ಥವನ್ನು ಹಾಳುಮಾಡುವ ಅಲಂಕಾರವೂ ಅವುಗಳಲ್ಲೊಂದು! ಅತಿಯಾದ ಈ ಮೋಹವನ್ನು ಈ ವಿಕಾರಗಳನ್ನು ಹಾಸ್ಯಮಾಡುವ ಈ ರೀತಿಯ ಕೃತಿಗಳಿಗೆ ಇಂಗ್ಲೀಷಿನಲ್ಲಿ 'Satire' ಎಂದು ಕರೆಯುತ್ತಾರೆ" "ಸ್ವರೂಪ ಸಂಸ್ಕೃತಿಯಂತಹ ವಿಡಂಬನಗಳು ಕನ್ನಡದಲ್ಲಿ ಹೆಚ್ಚಾಗಿಲ್ಲದಿದ್ದರೂ, ಅಲ್ಲೊಂದು ಇಲ್ಲೊಂದು ಕಾಣಿಸಿಕೊಂಡಿವೆ. ಕಡೆಂಗೋಡ್ಲು ಶಂಕರಭಟ್ಟರ 'ಹಣ್ಣುಕಾಯಿ'ಯಲ್ಲಿಯೂ ಈ ರೀತಿ ಉತ್ತಮ ವಿಡಂಬನ ಕವಿತೆಯೊಂದಿದೆಯೆಂಬುದನ್ನು ಇಲ್ಲಿ ನೆನೆಯಬಹುದು,

ಜೀವನದಿಂದ ವಿಮುಖನಾದ ಪಲಾಯನವಾದಿ ಪಂಡಿತನನ್ನು ಕುರಿತು ಕವಿ ಈ ಕವನದಲ್ಲಿ ಗೇಲಿಮಾಡುತ್ತಾರೆ,

"ಈ ಪರಿಯೋಡುವುದೆಲ್ಲಿಗೆ ಪಂಡಿತ?
ನಿನ್ನಯ ಗುರಿಯಾವುದು? ನುಡಿ ಖಂಡಿತ
ದೇಹವು ನೋಯದೆ? ಜೀವವು ಬೇಯದೆ?
ಆಸೆಯದಿನ್ನೂ ನಂದದೆ ಕುಂದದೆ? "

ಪಯಣದ ಗೊತ್ತುಗುರಿ ಗೊತ್ತಿಲ್ಲದೆ ಓಡುತ್ತಿರುವ ಈ ಪಂಡಿತನ ದೇಹಸ್ಥಿತಿ ಯಾವುದರೂ ಕೋಟುಬೋಟು ಹೇರಿದ ಜ್ಞಾನದ ಹೊರೆಯಿಂದ ಅವನ ಕೊರಳು ಕುಸಿದಿದೆ, ಮೀರಿದ ಜ್ಞಾನ ತಾಪದಿಂದ ಅವನ ದೇಹದಲ್ಲಿ ಬೆವರು ಬಸಿಯುತ್ತಿದೆ. ಅವನ ಬಯಕೆಗಳೆಲ್ಲ ಅರದ ಬಯಕೆಗಳಾಗಿವೆ. ಪೂರದ ಬಯಕಗಳೂ ಆಗಿವೆ. ಇಂತಹ ದುರವಸ್ಥೆಯಲ್ಲಿರುವ ಪಂಡಿತ ಯಾರಿಗೂ ಹೇಳದೆ, ಯಾರನ್ನೂ ಕೇಳದೆ ಪಲಾಯನಮಾಡುತ್ತಿದ್ದಾನೆ. ನಮ್ಮ ತುಳುನಾಡಿನಲ್ಲಿ 'ಪಣಂದೆ ಪದರಾಡಾಪ್ನಿ'ಯೆಂಬ ಮಾತು ಬಳಕೆಯಲ್ಲಿದೆ,

ಬಹುಹೆಚ್ಚು ಸಾಲವಮಾಡಿ, ಸಾಲದ ಹೊಳೆ ತಾಳಲಾರದೆ, ಸಾಲಕೊಟ್ಟವರಿಗೆ ಮುಖ ತೋರಿಸಲು ನಾಚಿಕೆಯಾಗಿ ಕೊನೆಗೊಂದು ದಿನ ಪಲಾಯನ ಮಾಡುವವನ ದುಃಸ್ಥಿತಿ ಪಂಡಿತನಿಗೊದಗಿದೆಯೆಂದು ಕವಿ ಇಲ್ಲಿ ಮೂದಲಿಸುತ್ತಾರೆ.

ತತ್ವಶಾಸ್ತ್ರಗಳನ್ನು ಪಂಡಿತ ತಲೆಯಲ್ಲಿ ಹೊತ್ತಿದ್ದಾನೆ. ಧರ್ಮ-ಕರ್ಮಗಳನ್ನು ಭುಜದಲ್ಲಿ ಹೊತ್ತಿದ್ದಾನೆ. ಅವನು ಓಡುತ್ತಿದ್ದಾನೆ. ಸಂಧಿ ಸಮಾಸದ ಭಾರವನ್ನು ಹೊತ್ತಿದ್ದರಿಂದಲೆ ಅವನಿಗೆ ಈ ವಿಪತ್ತು ಬಂದಿದೆಯೆಂದು ಶ್ರೀ ಭಟ್ಟರು ಹೇಳುತ್ತಾರೆ. 'ಸಂಪ್ರಾಪ್ತೇ ಸನ್ನಿಹಿತೇ ಕಾಲೇ ನಹಿ ನಹಿ ರಕ್ಷತಿ ಡುಕೃಞ್ ಕರಣೇ' ಎಂದು ಶ್ರೀ ಶಂಕರಾಚಾರ್ಯರು ವ್ಯಾಕರಣ ಪಂಡಿತರ ಕಿವಿ ಹಿಂಡಿದಂತೆ, ಇಲ್ಲಿ ಕವಿ ಸಾಹಿತ್ಯಪಂಡಿತರ ಕಿವಿ ಹಿಂಡುತ್ತಾರೆ.

ಬಡಮಂದಿಗೆ ತಿಳಿವಿನ ತುತ್ತೀಯುವ ಕರುಣೆಯು ಈ ಪಂಡಿತನಿಗಿರಬೇಕಾಗಿತ್ತು, ಅವನು ಹಾಗೆ ಮಾಡಿದ್ದರೆ ಅವನ ಬದುಕು ಸಾರ್ಥಕವಾಗುತಿತ್ತು. ಕರ್ಮಸಹಿತ ಬಾಳ್ವೆ ಅವನದಾಗುತಿತ್ತು. ಆದರೆ ಅವನು ಹಾಗೆ ಮಾಡದೆ ಎಲ್ಲವನ್ನು ಗೂಢವಾಗಿರಿಸಿ ತನ್ನ ಬಾಳ್ವೆಯನ್ನೆ ಬರಡುಮಾಡಿಕೊಂಡ. ಹಳೆಗಾಲದ ಕನಸುಗಳನ್ನು ಅವನು ಮೇಯುತ್ತಾ, ಮೆಲುಕುಹಾಕುತ್ತಾ ಇದ್ದಾನೆ. ಅವನು ತನ್ನ ಜೀವನದಲ್ಲಿ ಮಾಡಿದ ಕೆಲಸಕಾರ್ಯಗಳನ್ನು ಕವಿ ಬಹಳ ಸ್ವಾರಸ್ಯವಾಗಿ ಸಮೀಕ್ಷಿಸುತ್ತಾರೆ.

"ನರೆಯೂ ಜರೆಯೂ ಬರಲಿದೆ ವೇಳೆ;
ಜರೆಯುವ ಕೆಲಸವ ಮುಗಿಸೈ ಮೊದಲೆ!"

ಹಳೆಯದನ್ನು ಹೊಗಳುವುದು - ಹೊಸದನ್ನು ತೆಗಳುವುದು - ಅಬ್ರಾಹ್ಮಣ್ಯವೆಂದು ಸಾರುವುದು ಅವನ ಪಾಲಿನ ನಿತ್ಯ ಕರ್ತವ್ಯ,

ಜನಗಳ ಒಲವನ್ನು ಪಡೆಯುವ ಹಂಬಲ ಅವನಿಗಿಲ್ಲ. ಅವನದು ಮುಗಿಯದ ಸಾಧನೆ. ಸಾಧನೆ ಮುಗಿಯದೆ ಅವನಿಂದ ಯಾವುದೂ ಸಾಧ್ಯವಾಗುವುದಿಲ್ಲ, ಅವನ ತೀವ್ರ ವೈಚಾರಿಕತೆಯೆ ಅವನ ಸಾಧನೆಗಳ ಮುಕ್ತಾಯಕ್ಕೆ ಅಡ್ಡಿಯಾಗುತ್ತದೆಯೆಂದು ಶ್ರೀ ಭಟ್ಟರು ಹೇಳುತ್ತಾರೆ,

ಅವನಲ್ಲಿರುವ ಜ್ಞಾನ ಸಂಪತ್ತು ಎಷ್ಟು ನಿರರ್ಥಕವೆಂಬುದನ್ನು ಕವಿ ಇಲ್ಲಿ ಹಾಸ್ಯ ಮಾಡಿ ಹೇಳುತ್ತಾರೆ:

ಕಳ್ಳರೊ ಕಾಕರೊ ಆರೈ ಬರುವರು?
ಕದ್ದರೆ ಅರೀ ಹೊರೆಯನು ಹೊರುವರು?
ಶಾಪದ ಕೋಲನು ಜಳಪಿಸಲಾಗದೆ ?
ಆರೈ ಬದುಕುವರದರಾ ಹೊಡೆತದೆ?

ಕರ್ಮನಿರತ ಜನಸಾಮಾನ್ಯರ ಬಗೆಗೆ ಪಂಡಿತನ ದೃಷ್ಟಿಕೋನವೆಂತಹುದೆಂಬುದನ್ನು ನೋಡಿ:

ಮಡಿವರ ಗೈಮೆಯ ಹಳಿಯಲು ಬಹುದು
ಓದುವರೋದನು ತುಳಿಯಲು ಬಹುದು
ಕಲಿಯುಗವೆನ್ನುತ ನಿಂದಿಸ ಬಹುದು
ಕೃತಯುಗಕೇ ಕೈಮುಗಿಯಲು ಬಹುದು

ಇಂದಿನ ಜನಗಳ ಶಪಿಸಲು ಬಹುದು
ಹಿಂದಿನ ದಿನಗಳ ಜಪಿಸಲು ಬಹುದು
ಎಲ್ಲರ ಜರೆಯುತದೃಷ್ಟವ ಕರೆಯುತ
ಹೋಗಲು ಬಹುದೊಬ್ಬನೆ ಮುಂದೊತ್ತುತ

ಕರ್ಮರಹಿತ ಜ್ಞಾನ ನಿರರ್ಥಕವೆಂಬುದನ್ನು ಕವಿ ಈ ಸಾಲುಗಳಲ್ಲಿ ಸ್ಪಷ್ಟಪಡಿಸುತ್ತಾರೆ:

ಓದ್ಯೆ ಪಂಡಿತ! ಪರಿಕಿಸಿ ನೋಡದ
ಓದಿಗೆ ಲೋಕದ ಹಾದಿಯು ದೊರೆವುದೆ?

ಪಂಡಿತರನ್ನು ಅಣಕಿಸುವಲ್ಲಿ ಕವಿ ಹಿಂದಿನ ಶಿಕ್ಷಣ ಕ್ರಮವನ್ನು ಅಣಕಿಸಿದ್ದಾರೆ. ಇಂದಿನ ಶಿಕ್ಷಣ ಕೂಡಾ ಪರಿಕಿಸಿ ನೋಡದ ಶಿಕ್ಷಣವೆಂಬುದನ್ನು ಕವಿ ಸೂಚ್ಯವಾಗಿ ಸೂಚಿಸುತ್ತಾರೆ.

ಆಚಾರಕ್ಕೆ ಬಾರದ ವಿಚಾರ ಬೆನ್ನುಹಿಡಿದ ಬೇತಾಳನಂತೆ ಪಂಡಿತನನ್ನೆ ಕಾಡುತ್ತದೆಯೆಂಬುದನ್ನು ಕವಿ ಈ ಕೆಳಗಿನ ಸಾಲುಗಳಲ್ಲಿ ಸ್ಪಷ್ಟಪಡಿಸಿದ್ದಾರೆ;

"ಅಡರಲು ಎದೆಯೊಂದೇ ಇರಬೇಕು;
ನೋವಿನೊಡನೆ ಜಗಳಾಡಲು ಬೇಕು;
ಅಡಿತಪ್ಪಲು–ಆ ಬೆಟ್ಟದ ತಪ್ಪಲು
ಕೆಡಹುವುದೆಲ್ಲಿಗೊ? ಬಾರದ ಹೊಳಲು:"

ತನ್ನಲ್ಲಿರುವ ಜ್ಞಾನವನ್ನು ಕರ್ಮದೆಡೆಗೆ ಅನುಷ್ಠಾನಿಸಿದಾಗ ಪಂಡಿತ ಹೇಗೆ ಸೋಲುತ್ತಾನೆಂಬುದನ್ನು ಕವಿ ಇಲ್ಲಿ ಹೇಳುತ್ತಾರೆ:

"ಬುತ್ತಿಯೊ ಹೊರೆಯೋ ಕತ್ತಿಯೊ ಎಲ್ಲವು
ಏರುವ ಸಮಯದಿ ಹಿಂದೆಯೆ ಸೆಳೆವುವು
ಕೈಗೋಲ್ ಮುರಿವುದು, ಸೊಡರಾರುವುದು
ಪಂಡಿತರೋದನವಾರಿಗು ಕೇಳದು."

ಕರ್ಣ ಕುರುಕ್ಷೇತ್ರದಲ್ಲಿ ಕಲಿತ ವಿದ್ಯೆ ಮರೆತಂತೆ ಪಂಡಿತನ ಅವಸ್ಥೆ ಕೂಡಾ. ಅವನ ಜ್ಞಾನ ಅವನಿಗೆ ಪ್ರಯೋಜನಕ್ಕೆ ಬರುವುದಿಲ್ಲ. ಸಾಣೆ ಹಿಡಿದ ಕತ್ತಿ ಇದಿರಾಳಿ

ಯನ್ನು ಇದಿರಿಸುವಾಗ ಉಪಯೋಗಕ್ಕೆ ಬಾರದಿದ್ದರೆ ಹೇಗಾಗುವುದೊ ಹಾಗಾಗಿದೆ ಪಂಡಿತನ ಪರಿಸ್ಥಿತಿ.

ಪಂಡಿತನ ಓದುಗಳಾಗಲಿ, ತತ್ವಗಳಾಗಲಿ ಅವನ ಸಾವಿನ ಸಮಯದಲ್ಲಿ ಅವನನ್ನು ಕೈಹಿಡಿದೆತ್ತಲು ಬಾರವು, ನೆಲವಲ್ಲಿ ನಿಲುಕದ ತತ್ವದ ತುದಿಯಲ್ಲಿ ಸಾಯುವ ಪಂಡಿತನ ಬಾಯಿಗೆ ನೀರೆರೆಯುವವರು ಕೂಡಾ ಯಾರೂ ಇರಲಾರರು. ಪಂಡಿತ ಲೌಕಿಕ ಸುಖವನ್ನು ಬಯಸಿದವನಲ್ಲ. ಅವನಿಗೆ ಅಲೌಕಿಕ ಸುಖ ದೊರೆತುದೂಯಿಲ್ಲ, ಕವಿ ಇಲ್ಲಿ ಪಂಡಿತನನ್ನು ಡೊಂಬನಿಗೆ ಹೋಲಿಸಿದ್ದಾರೆ. ಪಂಡಿತನ ವಿದ್ಯೆಯನ್ನು ಡೊಂಬನ ವಿದ್ಯೆಯೆಂದು ಹೇಳಿ ಕವಿ ಇಲ್ಲಿ ಅಪಹಾಸ್ಯ ಮಾಡಿದ್ದಾರೆ.

ಉಸಿರಾಡದ ಅವನ ತನುವನ್ನು ಕಂಡು ಕೆಲವರು ಅಳುಕುತ್ತಾರೆ. ಮಿತಿಯಿಂದಲೇ ಕಂಬನಿಸುರಿಸುತ್ತಾರೆಂದು ಹೇಳಿ, ಕವಿ ಪಂಡಿತನನ್ನು ಸತ್ತನಂತರವೂ ಸ್ಮರಿಸುವವರಿಲ್ಲವೆಂದು ಹೇಳುತ್ತಾರೆ,

ಪಂಡಿತನು ಅಸುನೀಗಿದನಂತರ ಅವನ ಹೊರೆಗಳನ್ನು ಬಿಚ್ಚುತ್ತಾರೆ. ಅವೆಲ್ಲವನ್ನು ಆಗಲೆ ತೆಗೆದು ಪರೀಕ್ಷಿಸುತ್ತಾರೆ. ಆಗ ಕೆಲವರು ವಿಸದ್ಭುತವೆಂದು ಹೇಳಿ ಆಶ್ಚರ್ಯಪಡುವರಾದರೆ, ಹಲವರು ಅವನಿಗೆ ಹುಚ್ಚು ಹಿಡಿದಿತ್ತೆಂದು ಹೇಳುತ್ತಾರೆ. ಅವನನ್ನು, 'ದಾರಿತಪ್ಪಿದ ಪಂಡಿತ'ನೆಂದೆ ಕೆಲವರು ಕರೆಯುತ್ತಾರೆ. ಬದುಕಿದ್ದಾಗಲೂ ಅವನಿಗೆ ಬೆಲೆಯಿರಲಿಲ್ಲ. ಸತ್ತನಂತರ ಅವನನ್ನು ಮೂಸುವವರೂ ಇರಲಿಲ್ಲ.

ಬದುಕಿನುದ್ದಕ್ಕೂ ಆತ ತನ್ನ ತಿಳಿವನ್ನು ಹೆಚ್ಚಿಸಿಕೊಂಡನೆ ಹೊರತು. ಆತ ತನ್ನ ತಿಳಿವಿನ ಪ್ರಯೋಜನವನ್ನು ಜನಸಾಮಾನ್ಯರಿಗೆ ಮಾಡಿಸಿಕೊಡಲಿಲ್ಲ, ಗೌರವವುಳಿಸುವ ಭರದಲ್ಲಿ ಅವನ್ನೆ ಅಳಿಸಿಕೊಂಡವನು ನಮ್ಮ ಈ ಓದುತ್ತಿರುವ ಪಂಡಿತ.

ಸಾವಿನಲ್ಲಿ ಪಂಡಿತನಿಗೂ ಪಾಮರನಿಗೂ ವ್ಯತ್ಯಾಸವಿಲ್ಲವೆಂಬುದನ್ನು ಕವಿ ಈ ಕೆಳಗಿನ ಪದ್ಯದಲ್ಲಿ ಸ್ಪಷ್ಟಪಡಿಸುತ್ತಾರೆ:

"ಬದುಕಿನೊಳಿದುವೆ ಗತಿಯೆಲೆ ಪಂಡಿತ !
ಒದೆದೋಡುವರೈ ತಿಳಿವನು ಖಂಡಿತ
ಪಂಡಿತರಾದರು ಪಾಮರರಾದರು
ಸಾವಿನೊಳೊಂದಾಗಿಯೆ ಸೇರುವರು."

ಅಲಂಕಾರದ ದೃಷ್ಟಿಯಿಂದ ಇದು ನಿರಾಡಂಬರ ಕವನ. ಕೆಲವೆಡೆಗಳಲ್ಲಿ ಆದಿಪ್ರಾಸಗಳಿರಬಹುದಾದರೂ ಹೆಚ್ಚಿನೆಡೆಗಳಲ್ಲಿ ಅಂತ್ಯಪ್ರಾಸವೇ ರಾಗಬದ್ಧವಾಗಿ ಬಂದಿದೆ. ಈ ಕವನ ಓದಲಾರಂಭಿಸಿದೊಡನೆ ನಮ್ಮ ಓದು ಸರಾಗವಾಗಿಯೆ ಸಾಗುತ್ತದೆ. ಯಾವ ಅಡೆತಡೆಯೂ ಇಲ್ಲದೆ ಮುಂದುವರಿಯುತ್ತದೆ.

'ಪಂಡಿತ' ಎಂಬ ಪದವನ್ನು ಕವಿ ಇಲ್ಲಿ ಸಾಂಕೇತಿಕವಾಗಿ ಬಳಸಿದ್ದಾರೆ. ಇಲ್ಲಿನ ವಾಚ್ಯಾರ್ಥವು ಮುಖ್ಯವಲ್ಲವೆಂದು ಕಡೆಂಗೋಡ್ಲುರವರೇ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. ಪಂಡಿತನು ಇಲ್ಲಿ ಶಿಕ್ಷಿತ ಸಮಾಜದ ಸಂಕೇತ. ಶಿಕ್ಷಿತ ಸಮಾಜ ತಮ್ಮನ್ನು ತಾವೆ ಸರ್ವಮಾನ್ಯರೆಂದು ಬಗೆದು, ತಮ್ಮ ಪರಿಸರದಲ್ಲಿಯಿರುವ ಅಶಿಕ್ಷಿತ ಜನವನ್ನು ಕಡೆಗಣಿಸಿ ಕರ್ತವ್ಯಚ್ಯುತರಾಗುತ್ತಾರೆ. ಅವರ ಕರ್ಮರಹಿತ ಜ್ಞಾನವನ್ನು ಗೇಲಿಮಾಡುವುದು ಕವಿಯ ಉದ್ದೇಶ. ಅದು ಸಫಲವಾದಿದೆ,

'ಪಂಡಿತನ ಪಯಣ' ಈ ಕವನದಲ್ಲಿ ನಾವು ರೋಬರ್ಟ್ ಬ್ರೌನಿಂಗ್‌ನ 'ಎ ಗ್ರೇಮೇರಿಯನ್ಸ್ ಫ್ಯೂನರಲ್' ಎಂಬ ಕವನದ ಛಾಯೆಯನ್ನು ಕಾಣಬಹುದು. ಕಡೆಂಗೋಡ್ಲುರವರ ಕವಿತೆಯಲ್ಲಿ ಪಂಡಿತನು ಪಯಣಿಸಿದ್ದಾನೆ. ಬ್ರೌನಿಂಗ್‌ನ ಕವಿತೆಯಲ್ಲೂ ವ್ಯಾಕರಣ ಪಂಡಿತನು ಅಂತಿಮಯಾತ್ರೆ ಮಾಡುತ್ತಿದ್ದಾನೆ; ಬ್ರೌನಿಂಗ್‌ನ ಕವಿತೆಗಳು ನಾಟಕೀಯ ಸಂಭಾಷಣೆಗೆ ಖ್ಯಾತವಾಗಿವೆ. ಅವನ ಕವಿತೆಗಳು ವಿಡಂಬನೆಗೆ ಖ್ಯಾತವಾಗಿಲ್ಲ. ಆದರೂ ಅವನು ಈ ಕವಿತೆಯಲ್ಲಿ ವ್ಯಾಕರಣ ಪಂಡಿತನ ಕರ್ಮರಹಿತ ಜ್ಞಾನವನ್ನು ಅವಹೇಳನ ಮಾಡಿದ್ದಾನೆ.

ಪಂಡಿತನ ಜ್ಞಾನದಾಹ ಅವನ ಜೀವಬೆಂದರೂ, ಯೌವನ ಕುಂದಿದರೂ ಕಡಿಮೆಯಾಗಿಲ್ಲ. ದೇಹ ನಂದಿದರೂ ಜ್ಞಾನಪಿಪಾಸೆ ನಂದಿಲ್ಲ. ಇಬ್ಬರು ಕವಿಗಳ ಅಭಿಪ್ರಾಯವನ್ನು ನಾವಿಲ್ಲಿ ನೋಡೋಣ:

"ದೇಹವು ನೋಯದೆ? ಜೀವವು ಬೇಯದೆ?
ಆಸೆಯದಿನ್ನೂ ನಂದದೆ ಕುಂದದೆ?

Till to, the little touch, as youth was gone! Cramped and diminished.

ಮತಿವಂತ ಪಂಡಿತನು ಮನನಮಾಡಿದ್ದು ವ್ಯಾಕರಣ ಶಾಸ್ತ್ರವನ್ನು. ಪಂಡಿತನು ಸಂಧಿಸಮಾಸದ ಭಾರವನ್ನು ಹೊತ್ತು ಈ ವಿಪತ್ತನ್ನು ತನ್ನದ್ದನ್ನಾಗಿಸಿಕೊಂಡಿದ್ದಾನೆ. ಭಟ್ಟರ ಪಂಡಿತ ಜೀವಂತವಿದ್ದು, ಪಲಾಯನವಾದಿಯಾಗಿ ಜೀವನದಿಂದಲೆ ಪರಾಙ್ಮುಖಿಯಾಗಿದ್ದರೆ, ಬ್ರೌನಿಂಗನ ಪಂಡಿತ ನಿರ್ಜೀವಿಯಾಗಿ ಬದುಕಿನಿಂದಲೆ ಪರಾಙ್ಮುಖಿಯಾಗಿದ್ದಾನೆ. ಭಟ್ಟರ ಪಂಡಿತನಿಗೆ ಉಸಿರಿದೆ. ಬ್ರೌನಿಂಗ್‌ನ ಪಂಡಿತನಿಗೆ ಉಸಿರೇಯಿಲ್ಲ. ಬ್ರೌನಿಂಗನ ಪಂಡಿತ ಸಾಯುವವರೆಗೂ ವ್ಯಾಕರಣದ ಬಗ್ಗೆ ಚರ್ಚಿಸುತ್ತಿದ್ದ. ಭಟ್ಟರ ಪಂಡಿತನಿಗೆ ಪಲಾಯನದ ಈ ವಿಪತ್ತು ಬಂದುದು ಸಂಧಿಸಮಾಸದ ಭಾರವನ್ನು ಅವನು ಹೊತ್ತುದರಿಂದ,

"ಸಂಧಿ ಸಮಾಸದ ಭಾರವ ಹೊತ್ತು
ಬಂದುದೇ ನಿನಗೀ ತರದ ವಿಪತ್ತು"

Still thro' the rattle, pails of speech were rife:
While he could stammer

ಅಪಂಡಿತನು ತಾನು ಜ್ಞಾನರಹಿತನಾಗಿದ್ದರೂ, ಕರ್ಮನಿರತನಾಗಿರುತ್ತಾನೆ. ಒಂದಕ್ಕಿನ್ನೊಂದು ಸಾಧನೆಗಳನ್ನು ಸೇರಿಸುತ್ತಾ ನೂರು ಸಾಧನೆಗಳನ್ನು ಅವನು ಸಾಧ್ಯಮಾಡಿಸಿಕೊಳ್ಳುತ್ತಾನೆ, ಪಂಡಿತನಾದರೊ ಧರ್ಮದ ಮಡಿಯನ್ನೆ ಹೊದ್ದುಕೊಂಡು ಕರ್ಮನಿರತನಾಗದೆಯಿರುತ್ತಾನೆ. ಅವನಿಂದ ಯಾವ ಸಾಧನೆಗಳೂ ಸಾಧ್ಯವಾಗುವುದಿಲ್ಲ. ಒಂದು ಸಾಧನೆಯ ಬಗೆಗೆ ಸಾಕಷ್ಟು ಚಿಂತನೆ ಅವನಲ್ಲಿ ನಡೆದಿರುತ್ತದೆ. ಈ ಅಭಿಪ್ರಾಯಗಳನ್ನು ಇಬ್ಬರು ಕವಿಗಳ ಮಾತಿನಿಂದಲೆ ನಾವು ಕೇಳೋಣ:

"ಕರ್ಮದ ಕೆಸರಲಿ ಬಿದ್ದವ ನಾನು
ಧರ್ಮದ ಮಡಿಯನು ಹೊದ್ದವ ನೀನು,"

That Low man goes on adding one to one,
His hundred's soon hit:
This high man, aiming at a million,
Misses an unit.

ಎಲ್ಲಾ ಭಾಷೆಯ ಸಾಹಿತ್ಯಗಳಲ್ಲೂ ಒಂದೇ ತೆರನಾದ ವಿಚಾರಲಹರಿ ಹರಿದು ಬರುತ್ತದೆಯೆಂಬುದಕ್ಕೆ ಉದಾಹರಣೆಯಾಗಿ ಇಬ್ಬರು ಬೇರೆ ಬೇರೆ ಭಾಷಾಕವಿಗಳ ಕವಿತೆಗಳನ್ನು ಇಲ್ಲಿ ತುಲನೆ ಮಾಡಿದೆ, ಒಂದು ಇನ್ನೊಂದರ ಛಾಯೆಯೆಂಬ ಮಾತಿನಲ್ಲಿ ಎಷ್ಟು ವಾಸ್ತವಿಕತೆ ಅಡಗಿದೆ ಎಂಬುದನ್ನು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ.

ವೇದಾಂತ ಪಂಡಿತನನ್ನು 'ಗೊಡ್ಡು ವೇದಾಂತಿ'ಯೆಂದು ಹೇಳುವುದಿದೆ. ಕಡೆಂಗೋಡ್ಲು ಶಂಕರ ಭಟ್ಟರು ಈ ಕವಿತೆಯಲ್ಲಿ ಪಂಡಿತನನ್ನು ಶಿಕ್ಷಿತ ಸಮಾಜದ ಸಂಕೇತವಾಗಿಟ್ಟುಕೊಂಡು ಅವಹೇಳನ ಮಾಡಿದ್ದಾರೆ, ಶಿಕ್ಷಿತ ವ್ಯಕ್ತಿ–"ತಾನು ಜ್ಞಾನವಂತ. ತನ್ನ ತಿಳಿವನ್ನು ತಾನು ತನಗಾಗಿಯೆ ಹೆಚ್ಚಿಸಿಕೊಳ್ಳುತ್ತಿದ್ದೇನೆ, ತಾನು ಮೇಲ್ಮಟ್ಟದವನು, ತನ್ನ ಗೌರವವನ್ನು ತಾನು ಯಾವಾಗಲೂ ಉಳಿಸಿಕೊಂಡಿರಬೇಕು. ಅಪಂಡಿತರು ಅಸ್ಪೃಶ್ಯರು" ಎಂದು ತಿಳಿದುಕೊಳ್ಳುತ್ತಾನೆ. ಅವನೆಂದೂ ತಾನು "ಸಮಾಜಜೀವಿ" ಎಂದು ತನ್ನನ್ನು ಕರೆಸಿಕೊಳ್ಳುವುದಕ್ಕೂ ಇಷ್ಟಪಡುವುದಿಲ್ಲ. ಅವನ ತಿಳಿವು ಕರ್ಮದಲ್ಲಿ ಬಳಸಲಾಗದ ತಿಳಿವು. ಕರ್ಮದ ಬಗೆಗಿನ ಅವನ ಅಜ್ಞಾನ ಅವನತಿಗೆ ಹೇತು. ಅವನು ಕರ್ಮರಹಿತನಾಗದೆ ಕರ್ಮಸಹಿತನಾಗಿದ್ದರೆ ಅವನ ದೇಹ ನೊಂದು ಜೀವ ಬೆಂದುಹೋಗುತ್ತಿರಲಿಲ್ಲ. ದೇಹ ದಾಹವೂ ಬಳಲಿಕೆಯೂ ಕಡಿಮೆಯಾಗುತ್ತಿತ್ತು. ಜ್ಞಾನವೂ ಕರ್ಮವೂ ಸಮ

ತೋಲನದಲ್ಲಿದ್ದರೆ ಅವನ ಬದುಕು ನಿರರ್ಥಕವಾಗುತ್ತಿರಲಿಲ್ಲ ಸಾರ್ಥಕವಾಗುತ್ತಿತ್ತು. ಅವನ ಬದುಕು ಕೊನೆಗೊಂಡಿದ್ದರೂ ಅವನ ಕರ್ಮಗಳೆ ಅವನ ಇರಸ್ತಿಕೆಯನ್ನು ಸಾರಿ ಹೇಳುತ್ತಿದ್ದುವು. ಇವಿಷ್ಟು ವಿಷಯವನ್ನು ಕವಿ ಈ ಕವನದಲ್ಲಿ ಹೇಳಿದ್ದಾರೆ. ಪಂಡಿತನ ಕೊರೆಗಳು - ತಪ್ಪುಗಳನ್ನು ಅವನಿಗೆ ಮನಮುಟ್ಟುವಂತೆ ಕವಿ ಇಲ್ಲಿ ಬೊಟ್ಟಿಟ್ಟು ತೋರಿದ್ದಾರೆ.

ವಿಡಂಬನ ಕವನಗಳ ಸಾಲಿಗೆ ಸೇರಿದ ಈ ಕವನ ಕಡೆಂಗೋಡ್ಲುರವರ ಉತ್ತಮ ಕವನಗಳಲ್ಲಿ ಒಂದು. ಕನ್ನಡದಲ್ಲಿ ಬಂದಿರುವ ಕೆಲವೆ ವಿಡಂಬನ (Satire) ಕವನಗಳಲ್ಲಿ ಮುಖ್ಯವಾದುದು.

ಟಿಪ್ಪಣಿ

1. ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ 366
2. ಅದೇ ಪುಟ 367
3. H. Wolfe: Notes on English Verse Satire P. 8
4. ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ 375
5. ಅದೇ ಪುಟ 378

x x x x x x

೨೭. ದಕ್ಷಿಣ ಕನ್ನಡದ ಸಾಹಿತ್ಯ ಶಿಲ್ಪಿಗಳು

— ಶ್ರೀ ಅಮ್ಮೆಂಬಳ ಶಂಕರನಾರಾಯಣ ನಾವಡ, ಕೋಟೆಕಾರ್,

ಇಪ್ಪತ್ತನೆಯ ಶತಮಾನದಲ್ಲಿ ಕನ್ನಡದ ನವೋದಯ ಸಾಹಿತ್ಯಮಂದಿರವನ್ನು ರೂಪಿಸಿದ ಸಾಹಿತ್ಯ ಶಿಲ್ಪಿಗಳಲ್ಲಿ ಆರು ಹಿರಿಯ ಮಂದಿಯ ಸ್ಮರಣೆಯಿಲ್ಲಿ ಬರೆಯಲಾಗಿದೆ,

೧. ನಂದಳಿಕೆ ಲಕ್ಷ್ಮೀನಾರಾಯಣಪ್ಪಯ್ಯ: ಈ ಶತಕದ ಮೊದಲಿಗೆ ಸಾಹಿತ್ಯದ ಶ್ರೀಮಂತಿಕೆಯನ್ನು ಮೆರೆದ ಶ್ರೀಯುತರು 'ಮುದ್ದಣ'ನೆಂದೇ ಪ್ರಸಿದ್ಧಿಯನ್ನು ಪಡೆದರು. ಕುಂದಾಪುರ–ಉಡುಪಿ ಹೈಸ್ಕೂಲ್‌ಗಳಲ್ಲಿ ಅಂಗಸಾಧನೆಯ ಶಿಕ್ಷಕರಾಗಿ, ಜೀವನವನ್ನು ಸಾಗಿಸಿದರು. ಪದ್ಯ ಭೂಯಿಷ್ಠವಾದ ಹಳೆಗನ್ನಡ ಕಾವ್ಯಮಾರ್ಗವನ್ನು ಹೃದ್ಯವಾದ ಗದ್ಯಮಾರ್ಗಕ್ಕೆ ಇವರು ತಿರುಗಿಸಿದರು. ನವೋದಯ ಸಾಹಿತ್ಯ ವಸಂತನ ಶುಭಾಗಮನವನ್ನು ಸೂಚಿಸುವ ಗಂಡುಕೋಗಿಲೆಯೆಂದು ಇವರನ್ನು ಅನ್ನಬಹುದು. ಇವರ ಮೊದಲ ಗುರು ಮಳಲಿ ಸುಬ್ಬರಾಯರು, ಸಾಹಿತ್ಯದ ಸಲಹೆಗಾರರು ಬವಲಾಡಿ ವೆಂಕಟರಮಣ ಹೆಬ್ಬಾರರು.

ಆರಂಭದಲ್ಲಿ 'ರತ್ನಾವತೀ ಕಲ್ಯಾಣ' ಮತ್ತು 'ಕುಮಾರವಿಜಯ' ಎಂಬ 2 ಯಕ್ಷಗಾನ ಪ್ರಸಂಗಗಳನ್ನು ಇವರು ಬರೆದರು, 'ಕನ್ನಡ ಗಬ್ಬಿಗರ ಮನೆಯೊಳಗಿಡವ'ನೆಂದು ತನ್ನ ಹೆಸರನ್ನು ಇವರು ಮರೆಮಾಡಿ, 'ಅದ್ಭುತ ರಾಮಾಯಣ'ವೆಂಬ ಹಳೆಗನ್ನಡ ಗದ್ಯ ಕಾವ್ಯವನ್ನು ಬರೆದರು. ಇದು ಸಂಸ್ಕೃತ ಶಾಕ್ತಪುರಾಣದ ರೂಪಾಂತರ. 'ಮಹಾಲಕ್ಷ್ಮೀ'ಯೆಂದು (ತನ್ನ ತಾಯ ಹೆಸರಲ್ಲಿ) 'ಶ್ರೀರಾಮ ಪಟ್ಟಾಭಿಷೇಕ' ಎಂಬ ಖಂಡ ಕಾವ್ಯವನ್ನು ವಾರ್ಧಕ ಷಟ್ಪದಿಯಲ್ಲಿ ಬರೆದರು. ಇದರ ಶೈಲಿ ಲಕ್ಷ್ಮೀಶ ಕವಿಯ ಜೈಮಿನಿಭಾರತಕ್ಕೆ ಸರಿದೊರೆಯಾಗಿದೆ, ಇದು 'ಪದ್ಮಪುರಾಣ'ದಲ್ಲಿಯ 'ಶೇಷರಾಮಾಯಣ'ದ ಅನುಸಾರವಾಗಿದೆ. ಇದರ ಮುಂದಿನ ಭಾಗವೇ – ಇವರ ಮಹೋನ್ನತ ಕೃತಿ - 'ಶ್ರೀ ರಾಮಾಶ್ವಮೇಧ'ವೆಂಬ ಗದ್ಯಕಾವ್ಯ, 'ಮುದ್ದಣ - ಮನೋರಮೆ'ಯರ ಸರಸ ಸಂಭಾಷಣೆಯ ಹಸಿರು ಹಂದರದಲ್ಲಿ ಈ ಕಾವ್ಯಲತೆ ಹುಲುಸಾಗಿ ಹಬ್ಬಿ ಹರಡಿದೆ,

'ಜೋ ಜೋ' ಎಂಬ 'ಜೋಗುಳ' ಪದವ ನಿಷ್ಪತ್ತಿ ತುಳುವಿನ 'ಜೋಕುಳು (ಮಕ್ಕಳು)' ಎಂಬುದರಿಂದಾಗಿರಬಹುದೆಂದೂ ಇವರು ಬರೆದಿದ್ದಾರೆ. ಇವರ ಇತರ ಕೃತಿಗಳಾವವೂ ದೊರಕಿಲ್ಲ. ಅಸ್ವಾಸ್ಥ್ಯದಿಂದ ನಡು ಹರೆಯದಲ್ಲಿ ತೀರದಿರುತ್ತಿದ್ದರೆ, ಇವರಿಂದ ಹಲವು ಕೃತಿಗಳು ಪ್ರಕಟವಾಗುತ್ತಿದ್ದುವು! ಇವರ ಬಗೆಗೆ 'ಮುದ್ದಣ' ಪ್ರಶಸ್ತಿ ಗ್ರಂಥಗಳು ಪ್ರಕಟವಾಗಿವೆ,

೨. ಮುಳಿಯ ತಿಮ್ಮಪ್ಪಯ್ಯನವರು: 'ಮುದ್ದಣ'ನ ಹಾದಿಯಲ್ಲಿ 'ಚಂದ್ರಾವಲೀ ವಿಲಾಸ (ಹಳಗನ್ನಡ ಗದ್ಯ)', ಆಂಡಯ್ಯನಂತೆ 'ಸೊಬಗಿನ ಬಳ್ಳಿ (ಅಚ್ಚಗನ್ನಡ ಕಾವ್ಯ'). 'ಕವಿರಾಜ ಮಾರ್ಗವಿವೇಕ,' 'ಪಾರ್ತಿ ಸುಬ್ಬ' (ವಿಮರ್ಶಾತ್ಮಕಗಳು) ಎಂಬವು ಇವರ ಮೊದಲ ಕೃತಿಗಳು. ಪಂಪ ಮಹಾಕವಿಯ ಎರಡು ಮಹಾಗ್ರಂಥಗಳನ್ನು ಆಳವಾಗಿ ಅಧ್ಯಯನ ಮಾಡಿ 'ನಾಡೋಜ ಪಂಪ' ಎಂಬ ಬೃಹದ್ಗ್ರಂಥ–ವಿಮರ್ಶೆ–ಕನ್ನಡ ಸಾಹಿತ್ಯ ಶಾರದೆಗೆ ಕಾಣಿಕೆಯಾಗಿತ್ತವರು, ಆ ಎರಡು ಕಾವ್ಯಗಳ ಕಥಾಸಾರಗಳನ್ನು ಬರೆದರು. ಅದರ ಮೇರೆಗೆ, ಪಂಪನ ಸಹಸ್ರಮಾನೋತ್ಸವದಲ್ಲಿ (1941_ಲಕ್ಷ್ಮೇಶ್ವರ) ಅಧ್ಯಕ್ಷತೆ ಇವರಿಗೆ ಲಭಿಸಿತು. ಹಲವಾರು ಲೇಖನಗಳನ್ನೂ ಇವರು ಬರೆದಿದ್ದಾರೆ. ಕನ್ನಡ ಸಾಹಿತ್ಯಸಮ್ಮೇಳನದ ಅಧ್ಯಕ್ಷ ಪದವಿಯೂ (1931-ಕಾರವಾರ) ಇವರಿಗೆ ಒದಗಿತ್ತು. 'ಅಭಿನವ ಮುದ್ದಣ'ನೆಂಬ ಹೆಸರು ಇವರಿಗೆ ಒಪ್ಪುತ್ತದೆ, 'ಶ್ರದ್ಧಾಂಜಲಿ'ಯಲ್ಲಿ ಇವರ ಜೀವನ-ಕೃತಿಗಳ ಪರಿಚಯವಿದೆ.

೩. ಪಂಜೆ ಮಂಗೇಶರಾಯರು: ಕನ್ನಡ ನವೋದಯ ಸಾಹಿತ್ಯಕ್ಕೆ ಛಂದಸ್ಸಿನಲ್ಲಿ, ವಸ್ತುವಿನಲ್ಲಿ ಹೊಸತೊಂದು ರೂಪವನ್ನು – ಶೈಲಿಯನ್ನು ದೊರಕಿಸಿದವರಲ್ಲಿ ಇವರು ಮೊದಲಿಗರು. ಇಂಗ್ಲಿಷ್ ಕವನಗಳ ಅನುವಾದವನ್ನೂ. ಅದೇ ರೀತಿಯ ಸ್ವತಂತ್ರ ಕವನಗಳನ್ನೂ. ಕಥನ ಗೀತಗಳನ್ನೂ ಇವರು ಬರೆದರು. ಮಂಗಳೂರ ಬಾಸೆಲ್ ಮಿಶನಿನವರು ಪ್ರಕಟಿಸಿದ ಪುಸ್ತಕಗಳಲ್ಲಿ ಇವರ ಶಿಶುಗೀತೆಗಳು ಹೆಚ್ಚಾಗಿವೆ. 'ಮಕ್ಕಳ ಕವನ ಸಾಹಿತ್ಯದ ಜನಕ'ರೆಂದು ಸುಪ್ರಸಿದ್ಧರಾದರು. ಮಕ್ಕಳಿಗೆ ಸಣ್ಣ ಕತೆಗಳನ್ನೂ ಬರೆದರು: .ಇವರ ಮೊದಲ ಸಣ್ಣಕತೆ 'ನನ್ನ ಚಿಕ್ಕತಾಯಿ (1900).' 'ಮಕ್ಕಳ ಕಥಾ ಸಾಹಿತ್ಯದ ಆದ್ಯ ಪ್ರವರ್ತಕ'ರೆಂದೂ ಇವರಿಗೆ ಕೀರ್ತಿ ಒಂದಿದೆ. 'ತುಳು ಪಾಡ್ದನ'ಗಳ ಬೆಡಗಿನ ನುಡಿಯ ಮಡಿಲಿನಲ್ಲಿ ಬೆಳೆದ ಇವರ ಗದ್ಯ ಕತೆಗಳು ಹಲವಿವೆ. 'ಸ್ಥಳನಾಮ', 'ಪದಾರ್ಥವೇನು?' ಎಂಬೆರಡು ಇವರ ಲೇಖನಗಳು ಭಾಷಾಶಾಸ್ತ್ರದ ದೃಷ್ಟಿಯಲ್ಲಿ ಸ್ಮರಣೀಯಗಳು. ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಭಾಷಣದಲ್ಲಿ (1934-ರಾಯಚೂರ್) ಕನ್ನಡದ ಮುನ್ನಡೆಗೆ ಸಲಹೆಗಳನ್ನು ನೀಡಿದ್ದಾರೆ. 'ಪಂಜೆಯವರ ನೆನಪಿಗಾಗಿ' ಎಂಬುದರಲ್ಲಿ ಇವರ ಜೀವನ - ಕೃತಿಗಳ ಪರಿಚಯವಿದೆ, ಪಂಜೆಯವರ ಕೃತಿಗಳು ನಾಲ್ಕು ಸಂಪುಟಗಳಲ್ಲಿ ಪ್ರಕಟವಾಗಿವೆ.

೪. ಮಂಜೇಶ್ವರ ಗೋವಿಂದ ಪೈಗಳು: ಕನ್ನಡದಲ್ಲಿ ಆದಿಯ ದ್ವಿತೀಯಾಕ್ಷರ ಪ್ರಾಸವನ್ನು ತೊರೆದು ಕವನಗಳ ರಚನೆಗೆ ತೊಡಗಿದ ಮೊತ್ತಮೊದಲಿಗರಿವರು, ಕನ್ನಡ ಕಾವ್ಯ ಕಾಮಿನಿಯ ಕಾಲಿನ ಪ್ರಾಸದ ಸಂಕೋಲೆಯನ್ನು ಕಳಚಿದ ಇವರ ರೀತಿಯನ್ನು ಹಲವಾರು ಕವಿಗಳು ಅನುಸರಿಸಿದರು. ಗಿಳಿವಿಂಡು, ಹೃದಯರಂಗ. ನಂದಾದೀಪಗಳೆಂಬ ಸಂಕಲನಗಳಲ್ಲಿ ಇವರ ಕವನಗಳಿವೆ. ಏಸುಕ್ರಿಸ್ತನ ಕೊನೆಯ ದಿನದ ಕುರಿತು 'ಗೊಲ್ಗೊಥಾ', ಗೌತಮಬುದ್ಧನ ಕೊನೆಯ ದಿನದ ಕುರಿತು 'ವೈಶಾಖಿ'ಗಳನ್ನು ಸರಳ ರಗಳೆಯ ಖಂಡ

ಕಾವ್ಯಗಳನ್ನು ಬರೆದರು, ಏಕಲವ್ಯನ ಕತೆಯನ್ನು 'ಹೆಬ್ಬೆರಳು' ಎಂಬುದಾಗಿ ಖಂಡ ಕಾವ್ಯದಲ್ಲಿ ನಿರೂಪಿಸಿದರು, 'ಚಿತ್ರಭಾನು' ಎಂಬ ಗದ್ಯನಾಟಕದಲ್ಲಿ 1947ರ ಸ್ವಾತಂತ್ರ್ಯ ಸಂಗ್ರಾಮದ ಹೂರಣವಿದೆ, 'ಶ್ರೀಕೃಷ್ಣ ಚರಿತೆ'ಯು ಬಂಗಾಳಿ ಕಾವ್ಯದ ಗದ್ಯಾನುವಾದ, (ಹಲವಾರು ಕವಿತೆಗಳು ಇನ್ನೂ ಸಂಕಲನವಾಗಲಿವೆ) ದೀಪಿಗೆ 2ನೆ ಸಂ. ಕನ್ನಡದ ಪೊರೆ ಗಳಲ್ಲಿ ಇವರ ಕೆಲವು ಲೇಖನಗಳಿವೆ.

ಸಂಶೋಧನ - ವಿಮರ್ಶನ ರೂಪದ ಅನೇಕಾನೇಕ ಲೇಖನಗಳನ್ನು ಕನ್ನಡ ಹಾಗೂ ಆಂಗ್ಲ ಭಾಷೆಗಳಲ್ಲಿ ಬರೆದರು. ಮದ್ರಾಸು ಸರಕಾರ 'ಕನ್ನಡದ ರಾಷ್ಟ್ರಕವಿ' ಎಂಬ ಪ್ರಶಸ್ತಿಯನ್ನು ಇವರಿಗೆ ನೀಡಿದೆ (1949). ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿಯನ್ನೂ (1951–ಮುಂಬೈ) ಇವರು ಅಲಂಕರಿಸಿದರು. 'ದೀಪಿಗೆ'ಯೆಂಬ ಇವರ ಸ್ಮಾರಕ ಗ್ರಂಥದಲ್ಲಿ ಇವರ ವ್ಯಕ್ತಿತ್ವದ ಬಗೆಗೆ ಹಲವರ ಲೇಖನಗಳಿವೆ.

೫. ಕಡೆಂಗೋಡ್ಲು ಶಂಕರಭಟ್ಟರು: ಬಹುಮುಖ ಪ್ರತಿಭಾವಂತರು. 'ನಲ್ಮೆ' (ನೀಳ್ಗವಿತೆಗಳು), ಕಾಣಿಕೆ, ಹಣ್ಣುಕಾಯಿ, ಪತ್ರಪುಷ್ಪಗಳು (ಬಿಡಿ ಕವಿತೆಗಳು), ಹಿಂದಿನ ಕತೆಗಳು, ಗಾಜಿನ ಬಳೆ, ದುಡಿಯುವ ಮಕ್ಕಳು (ಕಥಾ ಸಂಗ್ರಹಗಳು), ಗುರುದಕ್ಷಿಣೆ (ನಾಟಕ), ಪ್ರತ್ಯೇಕಶಃ ಅಚ್ಚಾದಿ ಕನ್ನಡದ ಮೇಲ್ಮೆಯನ್ನು ಹೆಚ್ಚಿಸಿವೆ, 'ವಾಙ್ಮಯ ತಪಸ್ಸು' ಎಂಬುದರಲ್ಲಿ ಇವರ ಹಲವು ಗದ್ಯ ಲೇಖನಗಳಿವೆ.

ಇವರು ಉತ್ತಮ ಮಟ್ಟದ ಪತ್ರಿಕೋದ್ಯಮಿಗಳೆಂದು ರಾಷ್ಟ್ರಬಂಧು (25ವರ್ಷ), ರಾಷ್ಟ್ರಮತ (15 ವರ್ಷ) ಸಾಪ್ತಾಹಿಕಗಳ ಅಗ್ರಲೇಖಗಳಲ್ಲಿ-ಚುಟುಕು ಬರೆಹಗಳಲ್ಲಿ ಸುವ್ಯಕ್ತ! ಕನ್ನಡ ಸಾಹಿತ್ಯಸಮ್ಮೇಳನದ ಅಧ್ಯಕ್ಷತೆಯ ಗೌರವ (1965–ಕಾರವಾರ) ಇವರಿಗೆ ಲಭಿಸಿದೆ. 'ವಾಙ್ಮಯ ತಪಸ್ಸಿ', 'ಸಾಹಿತ್ಯ ಯೋಗಿ'ಗಳಲ್ಲಿ ಇವರ ಜೀವನ-ಕೃತಿ ಗಳ ಪರಿಚಯವಿದೆ'

೬. ಐರೋಡಿ ಶಿವರಾಮಯ್ಯನವರು: ಕುಂದಾಪುರದಲ್ಲಿ ಅಧ್ಯಾಪಕ ವೃತ್ತಿಯ ಲ್ಲಿದ್ದೂ, ಅನೇಕ ಪುಸ್ತಕಗಳನ್ನೂ ಲೇಖನಗಳನ್ನೂ ಪ್ರಕಟಿಸಿದ್ದಾರೆ. ಇವರು 'ಮುದ್ದಣ' ಕವಿಯ ಮಿತ್ರರು. ಶಿವರಾಮ ಕಾರಂತರ ಗುರುಗಳು, ಯಜ್ಞ ನಾರಾಯಣ ಉಡುಪರ ತಂದೆಯವರು, (ಈ ಯ. ನಾ. ಉಡುಪರೂ ಹಲವಾರು ರೀತಿಯ ಸಾಹಿತ್ಯರಚನೆ ಮಾಡಿದ್ದಾರೆ), ಇವರು ಸಂಸ್ಕೃತದಿಂದ ಆಧಾರಿತಗಳಾದ ಹಲವು ಪುಸ್ತಕಗಳನ್ನೂ, ಶಾಲಾ ಮಕ್ಕಳಿಗಾಗಿ ಪಾಠಮಾಲೆಗಳನ್ನೂ, ಭೌಗೋಳಿಕ-ಚಾರಿತ್ರಿಕಗಳಾದ ಪುಸ್ತಿಕೆಗಳನ್ನೂ, ಹಲವಾರು ವಿಚಾರಾತ್ಮಕ ಲೇಖನಗಳನ್ನೂ, ಪ್ರಕಟಿಸಿದ್ದಾರೆ. ಇವರ ಜೀವನ-ಕೃತಿಗಳ ಪರಿಚಯ ಗ್ರಂಥ ಇತ್ತೀಚೆ ಅಚ್ಚಾಗಿದೆ!

[ಕನ್ನಡ ಸಾಹಿತ್ಯರಂಗದಲ್ಲಿ ಸಾವಿರಾರು ಮಂದಿ ಕೃತಕೃತ್ಯರಾಗಿ ಹೆಸರುಗೊಂಡಿದ್ದಾರೆ, ಪ್ರಸ್ತುತ ಸ್ಥಳಾಭಾವದಿಂದ ಈ ಲೇಖನ ಇಲ್ಲಿಗೆ ಸಾಕುಮಾಡಿದೆ—ಸಂ.]

X X X X

೨೮. ಶೂರಪದ್ಮ ವಧೆ

—ಶ್ರೀ ಎಚ್. ವಾಸುದೇವ ರಾವ್, ಸುರತ್ಕಲ್

ಸುರತ್ಕಲ್ಲು ಕೇಂದ್ರದ ವೈರ್ಪುಡಿಯ 'ಮಯ್ಯವಟಿ ವೆಂಕಟರಮಣಯ್ಯ' ಯಕ್ಷಗಾನ ಕೃತಿಕಾರರಲ್ಲಿ ಪ್ರಸಿದ್ಧರು; 80 ವರುಷ ಬಾಳಿ, ಇ. 1940ರಲ್ಲಿ ನಿಧನರಾದರು. ಇವರ ಪ್ರಹ್ಲಾದ ಚರಿತ್ರೆ, ಮದಾಲಸಾ ಕಲ್ಯಾಣಗಳು ಅಚ್ಚಾಗಿವೆ. ಇವರು 1925ರಲ್ಲಿ ಬರೆದ 'ಶೂರಪದ್ಮ ವಧೆ'ಯ ಹಸ್ತಪ್ರತಿ ಶ್ರೀ ಪಿ. ವೆಂಕಟರಾಜ ಪುಣಿಂಚತ್ತಾಯರಿಂದ ಒದಗಿ, ಶ್ರೀ ಕೆ. ವೆಂಕಟರಾಯಾಚಾರ್ಯರಿಂದ 'ವಿಜಯ ಸಾಹಿತ್ಯಮಾಲೆ'ಯಲ್ಲಿ ಸಂಗ್ರಹವಾಗಿದೆ!

'ಮುದ್ದಣ'ನ 'ಕುಮಾರವಿಜಯ'ದಲ್ಲಿ ಹೇಗೋ ,ಹಾಗೆಯೇ ತಾರಕನ ಅಣ್ಣನಾದ 'ಶೂರ ಪದ್ಮನ ವಧೆ'ಯ ಕತೆ ಇಲ್ಲಿದೆ. ಇದರ ಪದ್ಯಗಳು ಬಲು ಸರಳ - ಸರಸಗಳಾಗಿವೆ, ಕೆಲವು ಘಟ್ಟಗಳನ್ನು ಇಲ್ಲಿ ಬರೆಯಲೆಳಸಿದ್ದೇವೆ.

೧. ಇಂದ್ರನು ಓಲಗದಲ್ಲಿ ದೇವತೆಗಳಿಗೆ ಹೇಳುವನು: (ಭೈರವಿ – ಝಂಪೆ): ಗಂಧವಾಹಾದಿ ಸುರ । ಸಂದಣಿಗಳಿರ ನಿಮ್ಮೊ । ಳಿಂದೊರೆವ ಮಾತನತಿ । ಚಂದದಿಂ ಕೇಳಿ ॥ ೧ ॥ ಶೂರ ಪದ್ಮಾದಿ ಖಳ । ವಾರದೊಳಗಿಂದೊಬ್ಬ । ತಾರಕನು ವಿಾಡಿದ ವಿಾವ । ನಾರಿಜನ ಕೆಣಕಿ ॥ ೨ ॥——ತಮ್ಮನಿಗೆ ಮರಣ ನ । ವ್ಮಿಂದ ದೊರಕಿತ್ತೆನುತ । ಹಮ್ಮಿನಲಿ ಕೆಣಕದಿರ । ನೆಮ್ಮನಾ ಖಳನು ॥ ೪ ॥ ಅರಿಗಳಿಲ್ಲೆಂಬ ಘನ । ಭರಿತ ಮುದದಿಂದ ಮೈ । ಮರೆತಿರದಿರೆನೆ ಮಿಕ್ಕ । ಸುರರೆಂದರಪಗೆ ॥ ೫ ॥

೨. ಶೂರ ಪದ್ಮನು ಇಂದ್ರನನ್ನು ಸೆರೆಗಿಕ್ಕಿ, ಶಚಿಯನ್ನು ತರಲು ಯೋಧರಿಗೆ ಹೇಳಿದನು, ಆದಾಗ, ಅವನ ಸತಿ ಬಂದು ಮೊರೆಯಿಡುವಳು. ಅವರಿಬ್ಬರ ಸಂವಾದವಿದು: (ಕೇದಾರಗೌಳ - ಅಷ್ಟತಾಳ): ಸುರರಾಜದಲ್ಲಣ ಕೇಳಿಂತು ಸುರಪನ । ಸೆರೆ ಮನೆಯೊಳಗಿರಿಸಿ । ತರುಣಿ ಶಚಿಯು ನೀನು ತರಿಪ ಯತ್ನವನಿಟ್ಟ । ಪರಿ ಕೇಳ್ದೆನೆಲೆ ಸಖಿ ॥ ೧ ॥ ಗಂಡನಿದಿರಾಗಿ ನಿಂತುಸುರುವಳೆತಿ । ದಿಂಡೆಯೆಂದೆಣಿಸದಿರು ॥ ಕಂಡುದ ನುಡಿವೆನು ಮನದಲ್ಲಿ ಕೋಪವ । ಗೊಂಡು ನೀ ಕುಣಿಯದಿರು ॥ ೨ ॥ ಅನ್ಯರಂಗನೆಯರ ನೆಳೆತರಿಸುವದಿಂದು । ಬಣ್ಣವೆ ನಿನಗೆ ಪ್ರೀತ ॥ ಎಣ್ಣದಿರೀ ಪರಿ ಕೃತ್ಯವ ಬಿಡು. ಮಾತ । ಮನ್ನಿಸು ಪ್ರಾಣಕಾಂತ ॥ ೩ ॥ ಒಲಿಸಿರ್ದ ಸತಿಯರಲ್ಲದೆ ಮಿಕ್ಕ ಸ್ತ್ರೀಯರ । ತಿಳಿಯಬೇಡವೆ, ತನ್ನನು ॥ ನಲವಿನಿಂದಲಿ ಪೆತ್ತ ಮಾತೆಗೆ ಸರಿಯೆಂದು । ಚೆಲುವನೆ ಮನದಿ

ನೀನು ॥ ೪ ॥ ಮಾತೆಗಳಿಬ್ಬರಾದರು ನಿನಗಾ ಪ್ರರು । ಪೂತೆಂಗಯ್ಯನೊಬ್ಬ ॥ ಪ್ರೀತ
ಕೇಳವರಿಂದ ಶಚಿಯೇನಾಯ್ತೆನ್ನುವ । ರೀತಿಯ ಗ್ರಹಿಸು ಸ್ವಲ್ಪ ॥ ೫ ॥

(ಭಾಮಿನಿ) ಅಂಗವಲ್ಲಿದು ರಮಣ ಪರ ವಧು । ವಿಂಗೆ ಸೊಗಸುವ ಬುದ್ಧಿ, ಪಾತಕ । ಸಂಗಡಿಸದಿಹುದೇ. ವಿಚಾರಿಸಿ ನೋಡು ಬಳಿಕಿನ್ನು ॥ ಹಿಂಗುವುದು ಸಿರಿ, ಧರೆಯ ಜನರುರೆ । ಭಂಗಿಸುವರಪಕೀರ್ತಿ ವಧುವಿಂ । ಗುಂಗುರವಿಟಿತ್ತೊಲಿಸ ಬೇಡೆಂದೊರೆದ । ಳಬುಜಾಕ್ಷಿ ॥ ೧ ॥

ಶೂರಪದ್ಮನ ಉತ್ತರ: (ಭೈರವಿ - ಅಷ್ಟತಾಳ) ಪದ್ಮ ಕೋಮಲೆಯೆಂದುದ । ಕೇಳುತ ಶೂರ । ಪದ್ಮ ಗಜರಿ ನುಡಿದ ॥ ಬುದ್ಧಿ ಪೇಳುವರೀಗ ಬಂದೆಯ ವೋಳಗೆ ನೀ । ನಿದ್ದು ಕೊಪ್ಪೋಗಿಸೀದ ॥ ೧ ॥ ಇಂದ್ರನ ರಾಣಿಯನು । ಸೆರೆಯ ಹಿಡಿ । ತಂದರೆ ನಿನಗೆ ಪನಂ ॥ ಕುಂದು ಬಾರದು ನಿನ್ನ ಸುಖಿಗಳಿಗೆಲೆ ನಿಜ । ಪಂಜರಿ ಮನದಿ ನೀನು ॥ ೨ ॥ ಪರರ ನಾರಿಯರುಗಳು । ಹೆತ್ತವ್ವಗೆ । ಸರಿಯೆಂಬ ಭಾವಗಳು ॥ ತರುಣಿ ನೀನಿರಬೇಕೆಂದೆಯ ಶಚಿ ಜೀರೆಂಬ । ಪರಿ, ಯಾರಿಗಿಹುದು ಪೇಳು ॥ ೩ ॥ ತಂಧೆಯ ನೆಂಟತನ । ನುಡಿದೆ ನಿನ್ನ । ದೇಹಂದಿದು ಹುಚ್ಚುತನ ॥ ತಂದೆಯುಂಯ್ಯನ ಪಿತನಿಂದಾಯ್ತು ಸೃಷ್ಟ್ಯದ । ರಿಂದಲಿ ಬಿಟ್ಟೆ ನಿನ್ನ ॥ ೪ ॥

೩. ಶಚಿಯನ್ನು ಕಾಪಾಡಲು ಇಂದ್ರನು ಶಾಸ್ತಾರನನ್ನು ಮರೆಹೋಗುವನು: **(ಭಾಮಿನಿ)** ಅಂಬುಜಾಂಬಕಿಯೆ ಬರಿದಂಜದಿರು ಶಾಸ್ತಾರ । ನೆಂಬವನ ನಿನ್ನ ಕಾವಲಿಗಿರಿಸಿ ಪ್ಪೋಪೆನಪ । ಶಂಭು ನಾರಾಯಣರ ಕುವರನತಿ ಬಲ್ಲಿದಂ. ಗಣ್ಯಕಾರನು ತಾರನು ॥ ಹಂಬಲಿಸದಿರು ನಾ ಬರುವತನಕ ನೀನೆನುತ । ಜಂಭ ಭೇದಿಯು ಬಳಿಕ ಶಾಸ್ತಾರನಂ ನೆನೆಯೆ । ಕುಂಭಿನಿಯು ನೆರೆ ಬಿರಿಯುವಂತೆ ಘೋಷದಿ ಬಂದು ಸುರಪನಿಂಗಿಂತೆಂದನು ॥ ೧ ॥

೪, **ಅಜಮುಖಿ** ಶಚಿಯನ್ನು ಕಂಡು ಬೆರಗಾದಳು: (ನವರೋಜ - **ಏಕತಾಳ**) ಕಣ್ಣಿಲಿ ಕಾಣಲಿಲ್ಲ । ಇಂಥ । ಹೆಣ್ಣನು ಸುಳ್ಳಲ್ಲ ॥ ಚಿಣ್ಣ ಮತ್ತಿವಳೆ । ನ್ನಣ್ಣಗೆ ತಕ್ಕವ ಳಿನ್ನುವರೇನಿ । ನ್ನಿಲ್ಲ ಸಂಶಯಗಳು ॥ ೧ ॥ ನುಡಿಗಳು ಯೇನ್ಚಂದ । ಈಕೆಯ । ನಡೆಗಳು ಬಹು ಮಂದ ॥ ನಡುವೊಪ್ಪಿಡಿಯೊಳ । ಗಡಗುವಂತತಿ ಬಹು । ಬಡತನದಿಂದಿಹ । ಬೆಡಗೇನೆಂಬೆನು ॥ ೨ ॥ ಭ್ರಮರದಂದದ ಕುರುಳು । ಕದಪುಗ । ಳಮುವ ಕನ್ನಡಿ ಹರಳು ॥ ಕಮಲಕೆರಕವರಪ । ವಿಮಲ ಮುಖಿಯನೀ ॥ ರಮಣೀಯ ಸೊಬಗಿನ । ಕ್ರಮವೆ ನೆಂಬೆನು ॥ ೩ ॥ ರತಿಗಿತಿ ಮೊದಲುಳ್ಳ । ಸ್ತ್ರೀಯರ । ಜತೆಪಿಂಗಿಪಳಿಲ್ಲ ॥ ನುತ ಭಂಗಾರದ । ಪ್ರತಿಮೆಗೆ ಸಮ ಚದು । ರತೆಯೊರೆವರೆ ಫಣಿ । ಪತಿಯಿಂದಾಗದು ॥ ೪ ॥

೫, ಗುಹನ 'ವಿಶ್ವರೂಪ'ದ ವರ್ಣನೆ: (ಸೌರಾಷ್ಟ್ರ - ತ್ರಿವುಡೆ) ಚರಣತಳ ಮಧ್ಯಪ್ರದೇಶದೊ । ಳುರುತರದ ಕುಲ ಪರ್ವತಗಳು । ಶರಧಿ ಪಾದಾಂತ್ಯದಲಿ ನಭವದು ಶಿರಸಿನಲ್ಲಿ ॥ ೧ ॥ ಬೆರಳಿನಲಿ ನಕ್ಷತ್ರ ಪಂಕ್ತಿಗ । ಳಿರಕವಾಗಿಹ ಗ್ರಹಗಳೆಲ್ಲವು । ಮೆರೆವ

ಣ ಬಿದಲಿ ಪಾರ್ಶ್ವದಲಿ ಯುಕ್ತ । ವರರು ಸುರರು ॥ ೨ ॥ ದೃಷ್ಟಿಯಲಿ ಹಿಮಕಿರಣ ಭಾಸ್ಕರ । ರಷ್ಟದಿಕ್ಕುಗಳಲ್ಲಿ ಕರ್ಣದಿ । ಶ್ರೇಷ್ಠ ಮಾರುತ ಶ್ವಾಸದಲಿ ಪರ । ಮೇಷ್ಠಿ ಭುಜದಿ ॥ ೩ ॥ ತಂಡ ತಂಡದ ಸಕಲ ಪರಬ್ರ । ಹ್ಮಾಂಡವೆಲ್ಲವು ಗುಹನ ರೋಮದ । ಕುಂಡದಲಿ ನಲಿದಾಡುತಿರ್ದುದ । ಕಂಡ ಖಳನು ॥ ೪ ॥

೬. ಶೂರಪದ್ಮನ ದೇಹದಿಂದ ನವಿಲು ಕುಕ್ಕುಟಗಳುಂಟಾದವು. "ಒರೆವುದಿನ್ನೇನೆಂದು ನವಿಲಿಗಾ ಕುಕ್ಕುಟಕೆ । ತರುವಾಯ ಸುಜ್ಞಾನ ಬರಲು, ಷಣ್ಮುಖನ ಸಿರಿ ! ಚರಣದಲಿ ಬಿದ್ದು ಹೊರಳುತ ನುತಿಸುತಿರೆ ಕಂಡು ನಗುತೆಂದ ಶರಜನ್ಮನು" (ಕುಕ್ಕುಟ ತನ್ನ ಧ್ವಜವಾಗಿ ರಥದ ಮೇಲಿರಲು. ನವಿಲು ವಾಹನವಾಗಿರಲು ಷಣ್ಮುಖನು ಒಪ್ಪಿಗೆಯಿತ್ತನು)

೭. ಷಣ್ಮುಖನಿಗೆ ದೇವಸೇನೆಯೊಡನೆ ಮದುವೆಯಾಯಿತು. ಮಂಗಳಮಹಿಮ ಶ್ರೀ ಸುಬ್ರಹ್ಮಣ್ಯನಿಗೆ । ಮಂಗಳ ದೇವಸೇನೆಗೆ ನಿರುಪಮೆಗೆ ॥ ಮಂಗಳ ಪಾರ್ವತೀ ಮೋಹದಾತ್ಮಜಗೆ । ಮಂಗಳವೆಂದುರೆ ಪಾಡುತ್ತ ಕಡೆಗೆ । ಮಂಗಳಾರತಿಯ ಬೆಳಗಿದರು । ಶೋಭನ ॥

೮. ಕವಿಕೃತಿಯಲ್ಲಿ ಮಂಗಳ ಪದ್ಯವಿದು: ಪ್ರೌಢವಿಯೊಳೀಗಲು ಕಷ್ಟಪಂಬ ಸ್ಥಳದಲಿ । ವ್ಯರ್ಥವಾಗಿ ನಿಂತು, ಸಂಸ್ತುತಿಪರಿಗೆ ॥ ಬಿಡದೆ ಕೇಳ್ದಿಷ್ಟವ ಪಾಲಿಸಿ ಸಲಹುವ । ಮೃಡನಾತ್ಮಭವ ಸುಬ್ರಹ್ಮಣ್ಯನಿಗೆ ॥

X X X X X X X X

೨೯. ಬ್ರಹ್ಮಕಪಾಲ (ಯಕ್ಷಗಾನ ಕೃತಿ)

— ಶ್ರೀ ಪಿ. ಕೃಷ್ಣಭಟ್ಟ, ಕಟೀಲು.

ಕನ್ನಡ ಸಾಹಿತ್ಯ ಪ್ರಪಂಚದಲ್ಲಿ, 'ಶಿವಲೀಲಾಮೃತ'ದ ಒಂದು ವಿಭಾಗ 'ಬ್ರಹ್ಮಕಪಾಲ'ದ ಕತೆ ಹಲವಾರು ಕೃತಿಗಳಲ್ಲಿ ಗೋಚರವಿದೆ. ಬ್ರಹ್ಮ ತನ್ನ ಮಗಳಾದ ಶಾರದೆಯನ್ನು ಮದುವೆಯಾದುದರಿಂದ ಶಿವನು ಬ್ರಹ್ಮನ ತಲೆಯನ್ನು ಚಿವುಟಿದಾಗ, 'ಬ್ರಹ್ಮಕಪಾಲ' ಶಿವನ ಕೈಗೆ ಅಂಟಿದ್ದುದು; ಅದರ ಮೋಕ್ಷದ ಕತೆಯಿದು. ಶ್ರೀ ಬಲಿಪ ನಾರಾಯಣ ಭಾಗವತರು (1889-1966) ಈ ಕೃತಿಯನ್ನು ಯಕ್ಷಗಾನ ಪ್ರಬಂಧವಾಗಿ ಬರೆದರು. ಪರಮಾದೇವನ 'ತುರಂಗ ಭಾರತ'ದ ಕತೆಗೂ ಈ ಯಕ್ಷಗಾನ ಕೃತಿಗೂ ತುಲನಾತ್ಮಕ ಪರಿಶೀಲನೆಯೇ ಈ ಲೇಖದ ಉದ್ದೇಶ.

ತುರಂಗ ಭಾರತದಲ್ಲಿ:

ಬ್ರಹ್ಮನು ಯಾಗಮುಖದಿಂದ ಪಡೆದ ಶಾರದೆಯನ್ನು ಮದುವೆಯಾದ. ಇದನ್ನು ಮುನಿಗಳಿಂದ ತಿಳಿದ ಶಿವನು 'ಶಬರವೇಷ'ದಿಂದ ಬಂದು ಬ್ರಹ್ಮನಲ್ಲಿ ವಿಚಾರಿಸುವಲ್ಲಿ ಸಿಟ್ಟಿಗೆದ್ದ ಶಿವನು ಬ್ರಹ್ಮನ ತಲೆಯನ್ನು ಕತ್ತರಿಸಿದನು. ಅದರಿಂದಾಗಿ 'ಬ್ರಹ್ಮಕಪಾಲ'ಧಾರಿಯಾದ ಶಿವನು ಸಂಚರಿಸುತ್ತಾ, ಯಕ್ಷಿಣಿಗೆ ಶಾಪವಿತ್ತನು. ಮುನಿಪತ್ನಿಯರು ಶಿವನನ್ನು ಮೋಹಿಸಿದರು. ಮುನಿಗಳು ಮೃಗಗಳನ್ನು ಸೃಷ್ಟಿಸಿ ಶಿವನನ್ನು ವಧಿಸಲು ಯತ್ನಿಸಿ, ಸೋತರು ಶಿವನಿಗೆ ಹರಿಯಿಂದ 'ಬ್ರಹ್ಮಕಪಾಲದ ಮೋಕ್ಷ'ವಾಯಿತು.

ಯಕ್ಷಗಾನ ಕೃತಿಯಲ್ಲಿ:

ಬ್ರಹ್ಮ ಶಾರದೆಯನ್ನು ನೋಡುತ್ತಾ ಸೃಷ್ಟಿ ಕಾರ್ಯ ಮರೆತ. ನಾರದನಿಂದ ಈ ಸುದ್ದಿ ತಿಳಿದ ಮನ್ಮಥ ಅವರಿಬ್ಬರ ಸಂಯೋಗಕ್ಕೆಳಸಿದ. ಅದನ್ನು ನಾರದನಿಂದ ತಿಳಿದ ಶಿವ ವಿಪ್ರಾಕಾರದಲ್ಲಿ ಬಂದು ವಿಚಾರಿಸಿದ. ಆಗ ಶಿವ ಕತ್ತರಿಸಿದ ಬ್ರಹ್ಮಕಪಾಲ ಶಿವನ ಕೈಗೆ ಅಂಟಿತು; ಭಿಕ್ಷಾಟನೆಗೆ ಶಿವ ತೆರಳಿದ. ಮನ್ಮಥ ಬ್ರಹ್ಮನನ್ನು ಮೂದಲಿಸಿ, ಹರನ ನಿಟಿಲಾಕ್ಷಿಯಿಂದ ಸುಟ್ಟುಹೋಗುವ ಶಾಪ ಪಡೆದ. ಶಿವನ, ವ್ಯಾಘ್ರಾಸುರ. ಗಜಾಸುರರನ್ನು ವಧಿಸಿದ. ಯಕ್ಷಿಣಿಗೆ ಶಾಪವಿತ್ತ. ಮಹೋಗ್ರ ಮುನಿಯ ಪತ್ನಿ ಕುಮುದೆ ಶಿವ ಸಾನ್ನಿಧ್ಯವನ್ನು ಬಯಸಿದಳು; ಆಗ ಮುನಿಯ ಗರ್ವಾಪಹಾರವಾಯಿತು, ಶಿವನಿಂದ ರುಧಿರಲೋಚನ ರಾಕ್ಷಸ ಹತನಾದ. ಹರಿಯಿಂದಾಗಿ ಶಿವನ 'ಬ್ರಹ್ಮಕಪಾಲದ ಮೋಕ್ಷ'ವಾಯಿತು

ಪುರಾಣದ ಈ ಕತೆ ಯಕ್ಷಗಾನದಲ್ಲಿ ನಾವೀನ್ಯಗೊಂಡಿದೆ, ಮನ್ಮಥನ ಪಾತ್ರ ವಿನೂತನವಾಗಿದೆ. ಬಯಲಾಟಕ್ಕೆ ತಕ್ಕಂತೆ ವಿವಿಧ ರಸಘಟ್ಟಗಳು ಅಧಿಕವಾಗಿವೆ! ಈ ಯಕ್ಷಗಾನದ ಕೆಲವು ರಸ ಖಂಡಗಳು ಹೀಗಿವೆ:

ಶಾರದೆಯು ವಿವಾಹಾಪೇಕ್ಷೆಯಾದಾಗ ಬ್ರಹ್ಮನೆಂದನು;

(ಬೇಹಾಗ್ – ರೂಪಕ:) ಅಂತರಂಗವರಿತ ಸುಗುಣವಂತೆ ಶಾರದೆ । ಕಾಂತಗೊಲಿವ ಪ್ರಾಯ ನಿನ್ನೊಳಾಂತು ಸೇರಿದೆ ॥ ಎಂತು ತಪಿಸಾ ನಿನಗೆ ಸಮತೆಯಾಂತ ಕಾಂತನ । ಕಂತುವಿನ ಸಮಾನ ದಯೂವಂತ ಕಾಂತನ । (ಆದಿ-ಅಂತ್ಯ ಪ್ರಾಸಗಳಿಂದ ಕೂಡಿದ ಈ ಪದ್ಯ ಹೃದ್ಯವದೆ.)

ಬ್ರಹ್ಮ ಮನ್ಮಥನಿಗೆ ಶಾಪವೀಯುವನು: (ವಾರ್ಧಿಕ ಷಟ್ಪದಿ) ದುಷ್ಟ ದುರ್ಮತಿ ಹೇಡಿ ಪಾಮರ ದುರಾಚಾರಿ । ನಿಷ್ಠೂರದಿಂದೆನ್ನ ಹಂಗಿಸಿದೆ, ನಿನ್ನಿಂದ । ಕೆಟ್ಟು ಹೋದುದು ಸಕಲ ಲೋಕಗಳು. ಪೂಶರದಿ ತಾರತಮ್ಯಗಳಮರೆಸಿ ॥ ಕಷ್ಟಪಡಿಸುವ ನೀನು ಹರನ ನಿಟಿಲಾಕ್ಷಿಯಿಂ । ಸುಟ್ಟು ಹೋಗೆಂದು ಶಾಪವನಿತ್ತು, ಮದನನಂ । ದಿಟ್ಟಿಸದೆ, ಶಿರಚ್ಛೇದ ಭಂಗದಿಂ ಪರಮೇಷ್ಠಿ ಸತ್ಯಲೋಕದೊಳಿರ್ದನು,

ಆಗಸ್ತ್ಯಮುನಿಯ ಶಾಪದಿಂದ ಜನಿಸಿದ ವ್ಯಾಘ್ರಾಸುರ, ಗಜಾಸುರರು ಶಿವನಿಂದ ಭಂಗಿತರಾಗಿ ಖಚರರಾದಾಗ, ಶಿವನನ್ನು ನುತಿಸುವಲ್ಲಿ ಭಕ್ತಿ ತುಂಬಿ ಹರಿದಿದೆ:

(ಕಾಂಬೋಧಿ - ತ್ರಿಪುಟ) ಶಂಭೋ ಶಂಕರ ಸರ್ವೇಶ । ದುರಿತ ವಿನಾಶ । ಶಂಭೋ ಶಂಕರ ಸರ್ವೇಶ ॥ ಅಂಬುಜಾಸನ ಮುಖ್ಯ ದೇವ ಕ । ದಂಬವಂದಿತ ಚರಣ ಭಕ್ತ ಕು । ಟುಂಬಿಕನೆ ಬಳಲಿದೆವು ಘೋರ ಭ । ವಾಂಬುಧಿಯ ಕಡೆದೋರಿಸಿಂದಿಗೆ ॥ ೧ ॥ ಇ,

ಈ ಯಕ್ಷಗಾನ ಕೃತಿ ೨೯೯ ಪದ್ಯಗಳಿಂದ ಕೂಡಿದೆ. ಇದುವರೆಗೂ ಅಚ್ಚಾಗಿಲ್ಲ. ಇದು ಅಚ್ಚಾಗಿ ಇದರ ಪೂರ್ಣ ಪರಿಚಯ – ಸರಸತೆ – ತಿಳಿಯುವಂತಾಗಲೆಂದು ಹಾರೈಕೆ.

ಅನುಬಂಧ

ಬ್ರಹ್ಮಕಪಾಲದ ಕತೆಯಿರುವ ಕನ್ನಡ ಕೃತಿಗಳು:

೧. ಭಿಕ್ಷಾಟನಾಚರಿತೆ — ಗುರುಲಿಂಗವಿಭು
೨. ಆದಿತ್ಯ ಪುರಾಣ — ಕವಿರಾಜ ಕಂಠೀರವ
೩. ಶಿವ ತತ್ತ್ವ ಚಿಂತಾಮಣಿ — ಲಕ್ಕಣ ದಂಡೇಶ
೪. ತುರಂಗ ಭಾರತ — ಪರಮ ದೇವ
೫. ಯಕ್ಷಗಾನ ಬ್ರಹ್ಮಕಪಾಲ — ಕನ್ಯಾನ ವೆಂಕಟರಮಣ ಭಟ್ಟ
೬. ಯಕ್ಷಗಾನ ಬ್ರಹ್ಮಕಪಾಲ — ಅಗರಿ ಶ್ರೀನಿವಾಸ ಭಾಗವತ,

X X X X X X

೩೦. 'ಇಂದ್ರಚಾಪ' ವರ್ಣಕ ಕಾವ್ಯ

— ಶ್ರೀ ವಿ. ಬಿ. ಹೊಸಮನೆ, ಕದಿರೆ

ಕಾವ್ಯವು ಜೀವನ ಪರಿಪಾಕದ ಪ್ರತೀಕ. ಸಹೃದಯರಲ್ಲಿ ಆತ್ಮೀಯತೆ ಬೆಳೆಯುವಂತೆ ಮಾಡುವ ಶಕ್ತಿ ಕಾವ್ಯಕ್ಕೆ ಇರುವುದು. ಪ್ರಾ. ಎಸ್. ವಿ. ಪರಮೇಶ್ವರ ಭಟ್ಟರ 'ಇಂದ್ರಚಾಪ' ಇಂತಹ ಮಾತಿಗೆ ಉತ್ತಮ ಉದಾಹರಣೆಗಳಲ್ಲೊಂದು. ಅದರ ಪರಿಚಯವಿದು.

"ಕವಿಯ ಮನಸ್ಸೇ ಆಕಾಶ, ದುಗುಡವೇ ಮಳೆಯ ಮೋಡ, ಕವಿಗಣಸೂಕ್ತಿಯೇ ಸೂರ್ಯಕಿರಣ; ಇವು ಮೂರರ ಮೇಳನ"ದಲ್ಲಿ 'ಇಂದ್ರಚಾಪ' ಮೂಡಿ, ವಿವಿಧ ವರ್ಣಗಳಿಂದ ರಂಜಿಸುತ್ತದೆ. ಈ ಕಾವ್ಯದ ಅಂತರಂಗವೇನೆಂದು, "ಬೆಳ್ಳಿಯ ದೇಗುಲ. ಚಿನ್ನದ ಬಾಗಿಲು, ಒಳಗಡೆ ಬಹು ಮುತ್ತು ರತ್ನ"ವೆಂದು ಕವಿಯ ಮಾತು! 1210 ಸಾಂಗತ್ಯಗಳ ಈ ಕಾವ್ಯವನ್ನು 'ಮುಕ್ತಕ'ಗಳಂತೆ ಆಯ್ದು ಒಂದೊಂದಾಗಿ ಹಾಡಬಹುದು. ಮೊದಲ ನೂರರಿಂದ ಮೂರನೆಯ ನೂರರವರೆಗೆ 'ಸ್ವಗತ'ವಿದ್ದು, ಕವಿಚರಿತ್ರೆಗೆ ಅನುಕೂಲವಾಗಿದೆ ಮುಂದಿನ ಒಂಬತ್ತು ನೂರುಗಳಲ್ಲಿ ವಿವಿಧ ವಿಚಾರಗಳು ಅಳವಡಿಸಿವೆ, ಕೊನೆಯ ಹತ್ತು ಪದ್ಯಗಳಲ್ಲಿ ಅರ್ಪಣೆಯಿದೆ. ಕವಿಜೀವನದ ೩೦ ಕಹಿಗಳು ನಕ್ಷತ್ರಮಾಲೆಗಳಂತೆ ಮಿನುಗಿವೆ. ನುಡಿಗಟ್ಟುಗಳು ಗುಡುಗಿನಂತೆ ಗುಡುಗಿವೆ. ವಿಚಾರಗಳು ಮಿಂಚಿನಂತೆ ಹೊಳೆದಿವೆ, ಆವೊಂದು ಪುಟದ ಆವ ಪದ್ಯ ನೋಡಿದರೂ; ವಿಚಾರಲಹರಿಗಳು. ಅನ್ಯೋಕ್ತಿ-ವ್ಯಂಗ್ಯೋಕ್ತಿಗಳು ತುಂಬಿವೆ.

'ಇಂದ್ರಚಾಪ'ವೆಂದರೆ ಕಾಮನಬಿಲ್ಲು, ಇದು ವಿವಿಧ ವರ್ಣಗಳಿಂದ ಮೆರೆದು ಆಹ್ಲಾದಕರವಾಗಿರುವಂತೆ. ಈ ಕಾವ್ಯದಲ್ಲೂ ವಿವಿಧ ವರ್ಣಿಕೆಗಳಿವೆ. 'ಇಂದ್ರಚಾಪ' ಪ್ರಕೃತಿಯ ಕೈವಾಡವಾದಂತೆ, ಇಲ್ಲಿ ಕವಿಕೃತಿಯ ಪವಾಡವಿದೆ: ಇವೆರಡರ ಹಿಂದೊಂದು ಶಿವಶಕ್ತಿಯಿದೆ. ಬಿಸಿಲು ಮಳೆಗಳಿಂದ 'ಇಂದ್ರಚಾಪ'ವಾದರೆ. ಇಲ್ಲಿ ನಲಿವುನೋವುಗಳ ಕೂಡಿಕೆಯಿದೆಯೆಂದು ಕವಿಯ ಉದ್ಗಾರ!

ಸಾಂಗತ್ಯದ ವೈಶಿಷ್ಟ್ಯ ಅದನ್ನು ಹಾಡುವ ಮಟ್ಟಿನಲ್ಲಿದೆ. "ಕನ್ನಡದ ಹಾಡುಗಬ್ಬಗಳಲ್ಲಿ ಮತ್ತು ಹಳ್ಳಿಹಾಡುಗಳಲ್ಲಿ ಪ್ರಯುಕ್ತವಾಗಿರುವ ಪ್ರಸಿದ್ಧವಾದ ಒಂದು ಛಂದಸ್ಸು 'ಸಾಂಗತ್ಯ' ಇದರಲ್ಲಿ ಬರುವ ಕವಿಭಾವ ಅತಿ ಸಹಜ' ಇದು ಅರ್ಥಸೌಲಭ್ಯ–ಭಾವಮಾಧುರ್ಯ-ಪದ ಸೌಷ್ಟವಗಳಿಂದ ಕೂಡಿರುತ್ತದೆ, ಆದುದರಿಂದ ಇದು ಜನಪ್ರಿಯ. ಇದರ ಛಂದೋರಚನೆ ಅಚ್ಚ ದೇಶೀಯ. ರಾಗ ಜ್ಞಾನವಿಲ್ಲದಿದ್ದರೂ ರಾಗವಳೆದು ಹಾಡಿದರೆಂದರೆ ಕಿವಿಗೆ ಇಂಪಾಗುವುದು."

ಸಾಂಗತ್ಯದ ಒಂದು ಮುಖ ಹೊನ್ನಮ್ಮನ 'ಹದಿಬದೆಯ ಧರ್ಮ'ದಲ್ಲಿದೆ. ಇನ್ನೊಂದು ಮುಖ ರತ್ನಾಕರವರ್ಣಿಯ 'ಭರತೇಶವೈಭವ'ದಲ್ಲಿದೆ. ಇವೆರಡರ ಮುಂದೆ 'ಇಂದ್ರಚಾಪ' ಮತ್ತೊಂದು ಮುಖವಾಗಿ ಕಾಣುತ್ತದೆ. "ಈ ಕೃತಿಯ ಉದ್ದಕ್ಕೂ ಬಿಡಿ ಬಿಡಿ ಪದ್ಯಗಳು. ಬೇರೆ ಬೇರೆ ಸಂದರ್ಭಗಳಲ್ಲಿ ನನ್ನಿಂದ ರೂಪುಗೊಂಡಿವೆ. ಅವನ್ನು ಕಲೆಹಾಕಿದಾಗ ಈ ಕೃತಿ ಜನಿಸಿತು" ಎನ್ನುವ ಕವಿಯೇ, "ನೂರಾರು ಬರೆದೆನು ಮೂರಾದರೂ ನಿಮಗೊಪ್ಪಿಗೆಯಾದರೆ ಸಾಕು । ಅರಿತವರೊಮ್ಮೆ ತಲೆದೂಗಿದರಿನ್ನೇನು । ಗದಕಿಂತ ಹೆಚ್ಚೇನು ಬೇಕು?" ಎಂದು ವಿನಯದಿಂದ ಬಿನ್ನವಿಸಿದ್ದುಂಟು. "ಹಲವು ಹಾಡಿನ ಹಕ್ಕಿ, ಹಲವು ಭಾವದ ಹಕ್ಕಿ" ಇಲ್ಲಿವೆ; ಕೆಲವು ಹಕ್ಕಿಗಳಿಗೆ ಧ್ವನಿ ಇಂಪು. ಕೆಲವಕ್ಕೆ ಗರಿ ಚಂದ. ಕೆಲವಕ್ಕೆ ಸೊಗಸಾದ ಹಾರಾಟವಿದೆ! "ನಲಿಯುವ ಕುಜನರು, ರಸಿಕರು ನಲಿವಂತೆ । ಕವಿಯ ಸುಭಾಷಿತ ಕೇಳಿ । ಚಂದ್ರನ ಉದಯಕೆ ಕಡಲುಕ್ಕಿ ಮೊರೆವಂತೆ । ಕೆರೆಯುಕ್ಕಿ ಮೊರೆವುದೆ ಹೇಳಿ" ಎಂಬಂತೆ ಕಾವ್ಯದ ಲೋಕನೀತಿಗಳು ಸಹೃದಯನನ್ನು ಎಚ್ಚರಿಸುತ್ತವೆ. ಸಂಸ್ಕೃತ ಸುಭಾಷಿತಗಳ ಪ್ರಭಾವ ಬಹುಮಟ್ಟಿಗೆ ಇಲ್ಲಿ ಕನ್ನಡಿಹಿಡಿದಂತೆ ತೋರುತ್ತದೆ. ರಸಾತ್ಮಕವಾದ-ಧ್ವನ್ಯಾತ್ಮಕವಾದ ಕಾವ್ಯ ಜನಮನವನ್ನು ರಂಜಿಸುತ್ತದೆ. 'ಇಂದ್ರಚಾಪ'ದಲ್ಲಿ ಕಾರಂಜಿಯಂತೆ ಅಲ್ಲಲ್ಲಿ ರಸಚಿಮ್ಮಿ ರಮಿಸಿದೆ.

"ಕೂಗುತ ಕರೆಯುತಲತ್ತಿತ್ತಲೋಡುತ । ದೊಣ್ಣೆಯ ತಿರುವುತ ಬಂದು । ಬೆಳೆಗಳ ತಿನ್ನುವ ದನಗಳನಟ್ಟುತ । ಲಿರುವನು ದೋವಳನಿಂದು" ಎಂಬೀ (೫೩೧) ಪದ್ಯವು, "ಆಕ್ರೋಶನ್ ಆಹ್ವಯನ್ ಅನ್ಯಾನ್ ಆಧಾವನ್ ಮಂಡಲೈರ್ನುದನ್, ಗಾ ವಾರಯತಿ ದಂಡೇನ ಬಾಲಃ ಸಸ್ಯಾವತಾರಿಣೀಃ" ಎಂಬ ಭಾಮಹನ 'ಕಾವ್ಯಾಲಂಕಾರ'ದ (೨-೫) ಶ್ಲೋಕದ ಅನುವಾದವೆಂದೇ ತಿಳಿಯುತ್ತದೆ. ಇಲ್ಲಿ ಅನುವಾದಿತವಾದ ಸರಳ ಶೈಲಿ ಎಷ್ಟು ರಮ್ಯ - ಸಹಜವಾಗಿದೆಯೆಂದು ತಿಳಿಯಬೇಕು.

"ಹೆದ್ದಾರಿಯೊಳು ಮರವಿದ್ದರೆ ಕಡಿವರು । ಸೊಪ್ಪಿಗೆ ಸೌದೆಗೆ ಜನರು । ಬೆಳ್ಳನೆ ಕಪ್ಪನೆ ಪಟ್ಟೆಯನೆಳೆವರು । ಬಣ್ಣದ ಚೀಟಿಯ ಹಚವರು" ಎಂಬಲ್ಲಿ (೫೬೩) ಇಂದಿನ ನವನಾಗರಿಕತೆಯ ಚಿತ್ರಣ ಸ್ವಭಾವೋಕ್ತಿಯಲ್ಲಿ ಮೂಡಿದೆ. "ದೊಣೆಗೇಕೆ ಚಿತ್ತಾರ, ಕಣೆಗೇಕೆ ಶೃಂಗಾರ । ಗುರಿಯನು ಕಂಡೆಚ್ಚದವಗ । ಒಳ್ಳೆಯ ಬಿಲುಗಾರಗಿಲ್ಲವೆ ಬಡಿವಾರ । ಅವನೇಕಲವ್ಯನ ಹಾಗೆ" ಎಂಬಲ್ಲಿ ಗುರಿಯನ್ನು ಸಾಧಿಸುವವನು. ಸ್ವಸಾಮರ್ಥ್ಯವಿರುವವನು ತನ್ನ ಕೃತ್ಯದಲ್ಲಿ ಆಡಂಬರ ತೋರುವುದಿಲ್ಲವೆಂದಿದೆ. ಇಲ್ಲಿ 'ಏಕಲವ್ಯನ' ಉಪಮೆಯಿಂದ ಸ್ವಸಾಮರ್ಥ್ಯ-ಸಾಧನೆ ವ್ಯಕ್ತವು! "ಜಗದೊಳಗೊಬ್ಬನು ಮೇಲೆದ್ದು ನಲಿವಂದು । ಒಬ್ಬನು ಕುಸಿದು ಬೀಳುವನು ॥ ಇತ್ತ ಚಂದ್ರನು ಮೂಡಿ ಮೇಲೆದ್ದು ಬರುವಂದು । ಅತ್ತ ಸೂರ್ಯನು ಮುಳುಗುವನು" ಎಂಬುದು ಪ್ರಾಕೃತಿಕ ವಿಚಾರದಿಂದ ನೀತಿಯು ದ್ಯೋತಕವಾಗಿದೆ. "ತರುಗಳು ಮೆರೆವವು ಪಣ್ಗಳ ಹೊರೆಯೊಳು । ಲತೆಗಳು ಪುಷ್ಪಭಾರದೊಳು । ಕವಿಗಳು ಮೆರೆವರು ಅರ್ಥದ ಹೊರೆಯೊಳು । ಪೆಣ್ಗಳು

ಶೀಲಭಾರದೊಳು" ಎಂಬಲ್ಲಿ ಪ್ರಕೃತಿಚಿತ್ರವೂ ನೈಜವಾಗಿ ಅಲಂಕಾರಯುಕ್ತವಾಗಿ ಸುಪ್ರಕಟಿತ! "ಕೊರಳೊಳು ವಿಷವುಂಟು, ತಲೆಯೊಳು ಹಾವುಂಟು । ನಡುಹಣೆಯೊಳು ಬೆಂಕಿಯುಂಟು । ಆದರು ಭಕ್ತರ ಭವದುರಿ ತಣಿಯದೆ । ಹರ ನಿನ್ನ ತನುಕಾಂತಿಯಿಂದೆ" ಎಂಬಲ್ಲಿ ಭಕ್ತಿಯು ಮೆರೆದಿದೆ, "ನಾರನು ಉಟ್ಟರೆ ನಾರದನಾದಾನೆ । ಬೂದಿಯು ಬಳಿದರೆ ಶಿವನೇ । ನೇಮವಿದ್ದವನಿಗೆ ಕಾಮವು ಕಡಿಮೆಯೆ । ನಾಮವಿದ್ದವರೆಲ್ಲ ಮಡಿಯೆ ।" ಎಂಬ ಪ್ರಶ್ನೆ ಸಾಮಾಜಿಕರನ್ನು ಎಚ್ಚರಿಸುತ್ತದೆ. "ಎಮ್ಮೆ ಬೇಲೂರಲ್ಲಿ. ಕರುವು ಆಲೂರಲ್ಲಿ । ಕಲಗಚ್ಚು ಕೋಲಾರದಲ್ಲಿ" ಯೆಂಬಂತೆ, ಕಾವ್ಯದಲ್ಲಿ ಅವ್ಯವಸ್ಥೆಯಿರಬಾರದೆಂದು ವ್ಯಂಗ್ಯವಾಗಿ ಹೇಳಿದೆ.

"ದಾನವು ಕೈಗಳಿಗೊಪ್ಪುವಾಭರಣವು । ಸತ್ಯವು ಕೊರಳಿಗಾಭರಣ ॥ ಶ್ರೋತ್ರಕೆ ಒಪ್ಪುವಾಭರಣವು ಶಾಸ್ತ್ರವು । ಏತಕೆ ಮಿಕ್ಕ ಆಭರಣ?" ಎಂಬಲ್ಲಿ ಹರಿದಾಸರ-ತಾತ್ವಿಕರ ವಿಚಾರಸರಣಿ ಒಪ್ಪುವಂತಿದೆ. "ದೊಡ್ಡವರಿವರೆಂದು ಆದರಿಸುವಿರೇಕೆ । ದೊಡ್ಡದಾದರು ಸಪ್ಪೆ ಗೆಣಸು ॥ ಸಣ್ಣವರಿವರೆಂದು ಕಡೆಗಣಿಸುವಿರೇಕೆ । ಸಣ್ಣದಾದರು ಖಾರ ಮೆಣಸು" ಎಂಬ ಪದ್ಯವು, ದೊಡ್ಡ-ಸಣ್ಣ ಆಕಾರಗಳಿಗಿಂತ ಅವುಗಳ ಸತ್ವಸಾರಗಳೇ ಪ್ರಾಮುಖ್ಯವೆಂದುದು ಚೆನ್ನು! ಮಹಾಕಾವ್ಯದಂತೆ ಅಷ್ಟಾದಶ ವರ್ಣನೆಗಳಿಲ್ಲಿಲ್ಲ, ಸಮಕಾಲೀನ ಪ್ರಪಂಚದ ಚಿತ್ರಣವಿಲ್ಲಿ ಸುಂದರವಾಗಿದೆ. ಈ ಕಾಲದ ಒಂದು ವರ್ಣಕ ಕಾವ್ಯವೆಂದು 'ಮುಕ್ತಕ'ವೆಂದು ಇದನ್ನು ಪ್ರತಿನಿಧಿಸಬಹುದು. ಗಾಥಾ ಸಪ್ತಶತಿ, ಕವಿ ಕೌಮುದಿ ಮುಂತಾದ ಕೃತಿಗಳಲ್ಲಿ ಮೂಡಿ ಬಂದಿರುವ ವಚನಗಳನ್ನು ಇಲ್ಲಿ ಕಾಣಬಹುದು.

"ಕೃತಿಯೊಳು ಕಾವ್ಯವು ಹೆಚ್ಚಾಗಿ ತೋರಲಿ । ಸವ್ಯವು ಕಡಿಮೆಯಾಗಿರಲಿ" ಎಂಬ ಎಚ್ಚರಿಕೆಯಿಲ್ಲಿದೆ ! ಜೀವನದ ಸಫಲತೆಯ ಬಗೆಗೊಂದ ಕವಿಮಾತು ಹೇಳಬೇಕು: "ಕರಣಂಗಳನಾಳು, ಕಾಮಂಗಳನು ಹೂಳು । ನಾಲಿಗೆಯನು ಹದಮಾಡು ॥ ಜಡವನ ತೊರೆದೇಳು, ಜಗ ನಿನಗಡಿಯಾಳು । ಬಾಳೊಂದು ವಿಜಯದ ಬೀಡ ".

ವಿ. ಸೂ: ಇಲ್ಲಿ ಬಳಸಿದ ಗ್ರಂಥಗಳ ಲೇಖಕರಿಗೆ ಲೇಖಕ ಋಣಿ.

XXXXXX

೨೧. 'ಕೀರ್ತನಮಾಲೆ'ಯ ಪರಿಚಯ

—ಡಾ. ಜಿ. ವರದರಾಜ ರಾವ್, ಮೈಸೂರು.

[ಶ್ರೀ ವಾದಿರಾಜ ಗುರುಗಳ 'ಕೃಪಾತರಂಗ'. ಲೇ: ಶ್ರೀಮತಿ 'ಗಿರಿಬಾಲೆ'; ಪ್ರಕಾಶಕರು: ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ. ಇದರ ಪರಿಚಯವಿದು].

ಶ್ರೀಮತಿ ಸರಸ್ವತಿಬಾಯಿ ರಾಜವಾಡೆ ಅವರು 'ಗಿರಿಬಾಲೆ' ಎಂಬ ಕಾವ್ಯನಾಮವನ್ನು ಈ ಮೊದಲೇ ಹಲವಾರು ಲೇಖಗಳಿಗೆ ಬಳಸಿದ್ದಾರೆ, ಈ ಪುಸ್ತಕದಲ್ಲಿ ಆ ಮುದ್ರಿಕೆಯನ್ನೆ ಹಾಡುಗಳಲ್ಲಿ ಹಚ್ಚಿದ್ದಾರೆ,

ಕಾರಣಾಂತರದಿಂದ ಅವರು ನಾಸ್ತಿಕರಾಗಿ ಪರಿಣಮಿಸಿ ತಲ್ಲಣಿಸುತ್ತಿರುವಾಗ ಶ್ರೀ ಪೇಜಾವರ ಮಠದ ಶ್ರೀಗಳವರ ಮತ್ತು ಶ್ರೀ ಸೋದೆಮಠದ ಶ್ರೀಗಳವರ ಸದುಪದೇಶದಿಂದ ಸಮಾಧಾನವನ್ನು ಪಡೆದು, ಆ ಬಳಿಕ, ಶ್ರೀ ವಾದಿರಾಜರ ವೃಂದಾವನದ ಸೇವೆಯನ್ನು ಕೈಕೊಂಡು ಅವರಿಂದ ಅನುಗ್ರಹಗಳಿಸಿ ಈ ಕೀರ್ತನೆಗಳನ್ನು ರಚಿಸಿರುವರು. ಇದರಿಂದ ನನಗೆ ಅವುಗಳ ಮೌಲ್ಯವೆಷ್ಟು ಹಿರಿದು ಎನ್ನಿಸಿತು. 'ಗುರು ಒಲಿಯೆ ಮಿಗೆ ಹರಿ ತಾನೊಲಿಯನೆ?' ಎಂಬ ಅಚಲ ಭಕ್ತಿಯಿಂದ ಶ್ರೀ ವಾದಿರಾಜರನ್ನು ಕೊಂಡಾಡತೊಡಗಿರುವ ತಮಗೆ ಚೊಕ್ಕವಾದ ವಾಣಿಯನ್ನು ಕರುಣಿಸಬೇಕೆಂದು ಶಾರದೆಯನ್ನು ಮರೆ ಹೊಗುವುದು ಸಂದರ್ಭೋಚಿತವಾಗಿದೆ. ಜಗದಂಬೆಯಾದ ದುರ್ಗೆಯನ್ನು ಸ್ತುತಿಸುವಲ್ಲಿ 'ಹಿಂದಾದ ಕುಂದುಗಳ ಮುಂದೆ ನೀ ಮನ್ನಿಸುತೆ ಚೆಂದದಿ ನೆಲಸೆ ನಿನ್ನ ಕಂದರ ರಕ್ಷಿಸುತೆ' ಎಂದು ಕೇಳಿಕೊಳ್ಳುವಲ್ಲಿ ಲೇಖಕಿಯರ ಪಶ್ಚಾತ್ತಾಪವು ತಾನೇತಾನಾಗಿ ವ್ಯಕ್ತವಾಗುತ್ತದೆ. 'ಆನಂದತೀರ್ಥರ ಸುಂದರಚರಿತೆಯ ಮಂದಮತಿ ನಾನೇನೆಂಬೆ' ಎಂದು ಶ್ರೀಮತಿಯವರು ತಮ್ಮ ಅಸಾಮರ್ಥ್ಯವನ್ನೆ ಸ್ಪಷ್ಟಪಡಿಸಿದರೂ. ಕೇವಲ ನಾಲ್ಕೇ ನಾಲ್ಕು ನುಡಿಗಳಲ್ಲಿ ಶ್ರೀ ಮಧ್ವಾಚಾರ್ಯರು ಉಡುಪಿಯಲ್ಲಿ ನೆರವೇರಿಸಿದ ಶ್ರೀಕೃಷ್ಣ ಮೂರ್ತಿಯ ಪ್ರತಿಷ್ಠೆ, ಅದರ ನಿರಂತರ ಪೂಜಾ ಕಾರ್ಯಗಳಿಗಾಗಿ ಅಷ್ಟಮಠಗಳ ವ್ಯವಸ್ಥೆ, 'ಹರಿಯು ವರ ಮತ ಅದು ಮಮ ಮತ'ಎಂಬ ಮಹತ್ಕಾರ್ಯ ಸಾಧನೆ, ಇವೇ ಮೊದಲಾದುವುಗಳನ್ನು ಸಂಗ್ರಹಿಸಿ ಹೇಳಿರುವುದು ಹಿತಮಿತವಾಗಿ ಒಪ್ಪವಂತಿದೆ!

ಶ್ರೀಕೃಷ್ಣನ ಬಗ್ಗೆ ಅನಾಸಕ್ತಿಯಿಂದಿದ್ದ ಚಿತ್ತಕ್ಕೆ ಆ ಪರಮಾತ್ಮನ ಅನುಗ್ರಹ ಅಪೇಕ್ಷಿತವಾಗಿ ಆಗಲು. ಆ ಆವೇಶದ ಭರದಲ್ಲಿ 'ಕರುಣಿಸಿದ ಕೃಷ್ಣ, ಕರುಣಿಸಿದ ಗುರುಪಾದ ಪಂಕಜ ಭ್ರಮರಿಯಾಗುವ ಭಾಗ್ಯ' ಎಂದು. ಮಾತುಗಳು ಧುಮ್ಮಿಕ್ಕಿ ಹೊಮ್ಮಿ ಬರುತ್ತವೆ. ಈ ಅನುಗ್ರಹವಾದರೂ ಎಷ್ಟು ಅಯಾಚಿತವೂ ಆಕಸ್ಮಿಕವೂ ಎಂದು

ಗ್ರಹಿಸಲು 'ಮೊರೆಯ ನಾನಿಡಲಿಲ್ಲ, ಕರೆಯ ನಾ ಕೊಡಲಿಲ್ಲ, ತೊಳೆಯೆ ನಾನಿನ್ನನೆಂದು ಕರುಣಿಸಿದ' ಎಂಬ ಮಾತುಗಳೇ ಸಾಕ್ಷಿ. ಶ್ರೀಕೃಷ್ಣ ಜಾಲಗಾರನಾಗಿಯೊ ಬಾಲನಾಗಿಯೊ ತೋರಿಬರುವುದು ಹಾಡಿರಲಿ! 'ಕನಸೋ ನನಸೋ ಮನಸಿನ ಭ್ರಾಂತಿಯೋ' ಎಂದು ಕೃತಿಕರ್ತರಿಗೇ ಕುತೂಹಲವಾಗಲು, 'ಘನ ತೇರಿನಲಿ ನಿಂದು ಕರುಣಿಸಿದ' ಎಂಬಲ್ಲಿ ಅವರಿಗೆ ದೂರದಿಂದ ಸ್ವಾಮಿ ಎಂತಹ ದರ್ಶನವನ್ನು ನೀಡಿರುವನೆಂಬುದು ವಿದಿತವಾಗುತ್ತದೆ. ಲೇಖಕಿಯರ ಗುರಿಯೆಲ್ಲವೂ ಎಷ್ಟು ಏಕಮುಖಾಭಿಮುಖವಾದುದು ಎನ್ನುವುದು ಈ ಕೀರ್ತನೆ ಕೊನೆಗೊಳ್ಳುವಲ್ಲಿ 'ವರೇಣ್ಯ ಯತಿಗಳಲ್ಲಿ ವರ ವಾದಿರಾಜರೆ ಗಿರಿಬಾಲೆವರವರೆಂದು ಕರುಣಿಸಿದ' ಎಂಬ ನುಡಿಗಳಲ್ಲಿ ಬಹು ಅರ್ಥವತ್ತಾಗಿ ಅಡಕವಾಗಿದೆ. 'ಸೋದಾಪುರದಲಿ ರಾಜಿಪ ಪೂಜ್ಯ ಶ್ರೀಪಾದರ್ಯರೆಂದು ಪೇಳಿರಯ್ಯ' ಎಂದು ಮೊದಲಾಗುವ ಕೀರ್ತನೆ ತೀರ ಸಾಂಪ್ರದಾಯಿಕವೆನ್ನಿಸಿದರೂ, ಮುಂದಿನ ಒಂದೊಂದು ನುಡಿಗಳಲ್ಲಿಯೂ ಶ್ರೀ ವಾದಿರಾಜರ ಜೀವನಸಾರವೇ ಹುದುಗಿ ಹೃದಯ ಮಿಡಿಯುವಂತಿದೆ! ಶ್ರೀ ವಾದಿರಾಜರ ವೃಂದಾವನ ಸೇವನೆಯ ಸಮಯದಲ್ಲಿ ಲೇಖಕಿಯರು ತಮ್ಮ ತುಮುಲವನ್ನೆಲ್ಲ ಮನವರಿಕೆಮಾಡಿ ಕೊಡುವ ಒಂದೊಂದು ಕೀರ್ತನೆಯೂ ಹರಿಭಕ್ತಳೊಬ್ಬಳ ಆರ್ತಭಕ್ತಿಯನ್ನು ಪ್ರಕಟಿಸುವಂತಿದೆ,

'ಮಾನವಾತೀತನೆ ಮಾನವೇಂದ್ರನಾಗುವನೆ, ದೀನಳನು ರಕ್ಷಿಪುದು ವರಧರ್ಮವಲ್ತೆ' ಎಂದು ಕೇಳುವಲ್ಲಿ ತುಸ ಧಾರ್ಷ್ಟ್ಯದ ಧ್ವನಿಯ ಅನುರಣನವಿದ್ದರೂ ಭಕ್ತಳಾದವಳ ಮೊರೆ ಎಷ್ಟು ತೀವ್ರವಾದುದೆನ್ನುವುದನ್ನು ಗಮನಿಸಬಹುದು.

ಕೆಲಕಾಲದ ವರೆಗೆ ಉಡುಪಿನ ಶ್ರೀಕೃಷ್ಣನ ದೇವಾಲಯಕ್ಕೆ ಹೋಗಲು ಹಿಂತೆಗಯುತ್ತಿದ್ದ ಮನಸ್ಸು, ಇದೀಗ ತನಗೆ ಕವಿದಿದ್ದ ಮಂಕು ಹರಿಯಲು ಆ ಪರಮಾತ್ಮನಲ್ಲಿ ಶರಣಾಗುವ ಪರಿಯನ್ನು ಬಗೆಬಗೆಯಾಗಿ ಬಣ್ಣಿಸಿದ್ದಾಗಿದೆ. 'ಬರಿದೆ ನಿಂತಿರುವಿ ಏಕೋ ಬಾರೆನ್ನ ಎದೆಯ ಗುಡಿಗೆ' ಎಂದು ಶ್ರೀಕೃಷ್ಣನಲ್ಲಿ ಮೊರೆಯಿಡುವುದಲ್ಲದೆ, 'ಕುರುಬನಿಗೊಲಿದ ಕೃಷ್ಣ' 'ಅಹಲ್ಯೋದ್ಧಾರಕ ಕೃಷ್ಣ' ಎಂದು ಆತನು ತನ್ನ ಭಕ್ತರನ್ನು ಉದ್ಧಾರ ಮಾಡಿದುದನ್ನೆಲ್ಲ ನೆನೆದು, ವೃದ್ಧಳಾದ ಶಬರಿ, ದಾಸಿಯಾದ ಕುಬ್ಜೆಯರ ಉದಾಹರಣೆಗಳನ್ನು ನೀಡಿ, ತನಗೂ ಆ ಕೃಪಾಪ್ರಸಾದವನ್ನು ನೀಡಬೇಕೆಂದು ಕೋರಿದ್ದಾರೆ, 'ಕಡೆಗೋಲು ನೇಣು ಸಹಿತ ಗುಡಿಗೆ ಬಂದು ಎದೆಯ ಕಡೆದು ನೋಡೊ ಸ್ವಾಮಿ' ಎಂಬ ಚರಣವಂತೂ ತುಂಬ ಭಾವಪೂರ್ಣವಾಗಿದೆ. ಅಷ್ಟೇ ಅಲ್ಲ. ಈ ಹೃದಯಮಂಥನದಲ್ಲಿ ಒಳಗೆ ಹುದುಗಿದ್ದ ಹಾಲಾಹಲವೆಲ್ಲ ಹಿಂಗಿ ಕಡೆಗೆ ಪರಿಶುದ್ಧವಾದ ಚಿತ್ತವು ನವನೀತಸದೃಶವಾಗಿ ಪರಿಣಮಿಸುವುದರಲ್ಲಿ ಯಾವ ಸಂದೇಹವೂ ಇಲ್ಲ. ಬೇರೊಂದು ಸಂದರ್ಭದಲ್ಲಿ 'ನೋಡಿ ಕೃಷ್ಣನೀತ ನೋಡೆ ಕಾಡುತಿಹನೆ ಬಂದು, ಬೇಡನಂತೆ ಎನ್ನ ಕೆಡವಿದನೆ ಬಲೆಯಲ್ಲಿ' ಎಂದು ಹೇಳುವಲ್ಲಿ ಒಡಮೂಡಿ ನಿಲ್ಲುವ ಚಿತ್ರವೂ ಇಷ್ಟೇ ರಮ್ಯವಾಗಿದೆ. ಶ್ರೀಕೃಷ್ಣನ ಮಾಟಕ್ಕೆ ಮರುಳಾದ ಹೆಣ್ಣಿನ ಚಿತ್ತದ ಪರಿಸ್ಥಿತಿ ಎಂತಹದೆನ್ನುವುದನ್ನು ಈ ಇಡೀ ಕೀರ್ತನೆ

ಯಲ್ಲಿ ಚಿತ್ರಿಸಲಾಗಿದೆ. ಆತನ ಹುಡುಗಾಟದಿಂದ ಬೇಸರಾಗುವ ಬಗೆಯನ್ನು ಕಾಣದೆ 'ಒಡೆಯ ಗುರುರಾಯರಲಿ ಒಡನೆ ದೂರನು ಪೇಳಿ ಅಡಿಗತನವನ ಅಡಗಿಸದಿರುವೆನೆ' ಎಂಬ ಪಂಕ್ತಿಯಲ್ಲಿ ವಿದಿತವಾಗುವ ಭಕ್ತಳ ಮುಗ್ಧ ಸ್ವಭಾವವಂತೂ ತುಂಬ ಮನೋಜ್ಞವಾಗಿದೆ. ಜನ್ಮತಃ ಹೆಣ್ಣುಮಗಳಾದ ಪ್ರಕೃತ ಕರ್ತೃಗಳು ಇದೇ ಸರಣಿಯಲ್ಲಿ ಮುಂದುವರಿದು ತಮ್ಮ ಗೆಳತಿಯರೊಂದಿಗೆ ಶ್ರೀಕೃಷ್ಣನ ಲೀಲೆಗಳನ್ನು ವರ್ಣಿಸಿರುವುದಲ್ಲ, ನಮ್ಮ ಹಿಂದಿನ ಹರಿದಾಸರ ಕೃತಿಗಳಲ್ಲಿ ಕಂಡುಬರುವ ಮಧುರಭಾವದ ಗುಣಗಳೆಲ್ಲ ವಿದಿತವಾಗುತ್ತವೆ.

ಈ ಸಣ್ಣ ಪುಸ್ತಕದ ಕಟ್ಟಕಡೆಯಲ್ಲಿ ಶ್ರೀ ವಾದಿರಾಜರನ್ನು ಕುರಿತು ಲಾವಣಿಯ ಮಟ್ಟಿನಲ್ಲಿ ಬರೆದಿರುವ ನಿಡಿದಾದ ಒಂದು ಕೃತಿಯಿದೆ. 'ನಂಬಿರಿ ಸೋದೆರಾಜರ ಚರಣವ ಸಂಭವಿಪ್ಪುಂಟು ಮುಕ್ತಿಪದ' ಎಂಬ ಪಲ್ಲವಿಯೊಂದಿಗೆ ಮೊದಲಾಗುವ ಈ ರಚನೆಯಲ್ಲಿ ೩೦ ನುಡಿಗಳಿವೆ. ಲೇಖಕಿಯರಿಗೆ ಶ್ರೀ ವಾದಿರಾಜರಲ್ಲಿರುವ ಅಪಾರವಾದ ಭಕ್ತಿ, ಈ ಮೊದಲು ಪ್ರಸ್ತಾಪಿಸಿರುವ ಚಿಕ್ಕ ಚಿಕ್ಕ ಕೀರ್ತನೆಗಳಲ್ಲಿ ಒಂದು ತೆರನಾಗಿ ಹೊಳೆದು ಬೆಳದಿದ್ದರೆ. ಈ ನಿಡಿದಾದ ರಚನೆಯಲ್ಲಿ ಅದು ತುಂಬುಪೂರವಾಗಿ ಪ್ರವಹಿಸಿದೆ.

ಶ್ರೀಮತಿ 'ಗಿರಿಬಾಲೆ' ಅವರ ಈ 'ಕೀರ್ತನಮಾಲೆ' ಅವರೇ ಕರೆದಿರುವಂತೆ ಶ್ರೀ ವಾದಿರಾಜ ಗುರುವರರ 'ಕೃಪಾತರಂಗ'ವೇ ಸರಿ, ಅವರು ತಿಳಿಸಿರುವ ಆತ್ಮಜೀವನದ ಹಿನ್ನೆಲೆಯಲ್ಲಿ ಈ ಕೃತಿಗಳನ್ನು ಪರಿಶೀಲಿಸಿದಾಗ, ಇವುಗಳಲ್ಲಿನ ಭಾವ ಸಂಪತ್ತು, ಸ್ವಾನುಭವ ಆತ್ಮೀಯತೆಗಳು ಆನಂದದಾಯಕವಾಗಿವೆ, 'ಗುರುವಿನ ಬೆನ್ನಲ್ಲೆ ಹರಿಯೋಡಿ ಬಾರದಿರನೆ, ಶರಣು ಶರಣು ಗುರುವೆ ನೆರೆ ನಂಬಿದೆನಯ್ಯ' ಎಂಬ ಅವರ ಅಚಲ ವಿಶ್ವಾಸ ಇಲ್ಲಿ ಅಕ್ಷರಶಃ ಸತ್ಯವಾಗಿದೆ.

(ಮೂಲ ಲೇಖನವನ್ನು ಸಂಗ್ರಹಿಸಿ ಕೊಡಲಾಗಿದೆ, —ಸಂ.)

x x x x

೩೨. ಸೋಮಯಾಜಿಯವರ ಕಾದಂಬರಿಗಳು

—ಶ್ರೀ ಬಾ. ಕೃ. ಸುರತ್ಕಲ್ಲು;

ಮೊದಲು ಕತೆಗಾರರಾಗಿ ಸಾಹಿತ್ಯರಂಗದಲ್ಲಿ ಬೆಳಕಿಗೆ ಬಂದವರು, ಶ್ರೀ ಬಂಟವಾಳ ಪದ್ಮನಾಭ ಸೋಮಯಾಜಿ. ಸುರತ್ಕಲ್ಲು ಇವರು ಮಕ್ಕಳ ಸಲುವಾಗಿ ಕತೆ-ನಾಟಕಗಳನ್ನು, ಪದ್ಯ-ಉಪಪದ್ಯಗಳನ್ನು ರಚಿಸಿದರು; ಕವಿಯಾಗಿ, ಭಾಷಣಕಾರರಾಗಿ ಕನ್ನಡಿಗರಿಗೆ ಪರಿಚಿತರಾದರು, ಹಾಗೆ. ಕವಿಗಳ ಜೀವನಚರಿತ್ರೆಯನ್ನು ಕಾದಂಬರಿ ರೂಪದಲ್ಲಿ ನೀಡುವ ಹೊಸ ಪ್ರಯೋಗಕ್ಕೆ ಶ್ರೀಯುತರು ಮುಂದಾದರು, ಪ್ರಕೃತ. ಇವರ ಐದು – ಮುದ್ರಿತ – ಕಾದಂಬರಿಗಳ 'ಅಣುಪರಿಚಯ'ಕ್ಕೆಳಸಿದ್ದೇನೆ. ವಿಮರ್ಶಕರ ಜಾಡು ಇಲ್ಲಿ ಕೈಗೊಂಡಿಲ್ಲ; ಇದೊಂದು ತಲೆಹರಟೆಯಷ್ಟೆ!

೧. 'ಸಂಸ್ಕೃತಿಯ ಸೆರೆಯಲ್ಲಿ' :

ಉಡುಪಿಯ "ಪ್ರಕಾಶಿನೀ" ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಒಮ್ಮೆ ಪ್ರಕಟಗೊಂಡ ಈ ಕಾದಂಬರಿಗೆ ಶ್ರೀ ಸೋಮಯಾಜಿಯವರು ಓರ್ವ ಸಂಸ್ಕೃತ ವಿದ್ವಾಂಸನ ಬವಣೆಯನ್ನು ಕಥಾವಸ್ತುವನ್ನಾಗಿ ಆರಿಸಿಕೊಂಡಿದ್ದಾರೆ. ಸಂಸ್ಕೃತದಲ್ಲಿ 'ಶಿರೋಮಣಿ' ವಿದ್ವತ್ತನ್ನು ಗಳಿಸಿದರೂ ನಾಯಕ ನಾರಾಯಣನಿಗೆ ಎಲ್ಲೂ ಕೆಲಸ ಸಿಗುವುದಿಲ್ಲ. ಕೊನೆಗೆ ಕೆಲಸ ದೊರಕಿದರೂ ತನ್ನ ಮಡಿವಂತಿಕೆಯಿಂದ, ಸಂಸ್ಕೃತಿಯ ಸೆರೆಯಿಂದ ತಪ್ಪಿಸಿಕೊಳ್ಳಲು ಇಚ್ಛೆಪಡದೆ, ಕ್ರಾಂತಿಗೆ ಹೆದರಿ, ತಾನೇ ಕೆಲಸ ಕಳೆದುಕೊಳ್ಳುತ್ತಾನೆ. ಆದರೂ ನಾರಾಯಣ ತನ್ನತನವನ್ನು ಬಿಡಲಿಲ್ಲ ಎಂಬುದು ಗಮನಾರ್ಹ, ನಾರಾಯಣ ಅಸಹಾಯಕ ಸ್ಥಿತಿಯಲ್ಲಿರುವಾಗ ದೇವಸ್ಥಾನದಲ್ಲಿ ಅರ್ಚಕ ಸ್ಥಾನಕ್ಕೆ ಕರೆಬರುತ್ತದೆ. ಪಾಲಿಗೆ ಬಂದುದು ಪಂಚಾಮೃತವೆನ್ನುತ್ತ ನಾರಾಯಣ ದೇವಸ್ಥಾನದ ಅರ್ಚಕನಾಗುತ್ತಾನೆ. ಶ್ರೀ ಸೋಮಯಾಜಿಯವರು ಈ ಕಾದಂಬರಿಯಲ್ಲಿ ನಾಯಕ ನಾರಾಯಣನ ಮೂಲಕ ಸಂಸ್ಕೃತ ಭಾಷೆ ಮತ್ತು ಅದನ್ನು ಕಲಿತ ವ್ಯಕ್ತಿಯನ್ನು ಸಮಾಜ ಪ್ರಾಮಾಣಿಕವಾಗಿ ಗೌರವಿಸುತ್ತದೆಯೇ ಎನ್ನುವ ಪ್ರಶ್ನೆಯನ್ನೊಡ್ಡಿದ್ದಾರೆ. ಜೊತೆಗೆ ನಾರಾಯಣನನ್ನು ಎದುರಿಟ್ಟುಕೊಂಡು ಅವನು ಪಟ್ಟ ಕಷ್ಟದ ಜೀವನವನ್ನು ಮನಹಿಂಡುವಂತೆ ಚಿತ್ರಿಸಿದ್ದಾರೆ; ಇಲ್ಲಿ ವಸ್ತುವನ್ನು ಪೋಣಿಸಿಕೊಂಡ ರೀತಿ, ಸರಳ ಭಾಷೆ ನೇರ ಓಟದಿಂದ ಕಾದಂಬರಿ ಓದುಗನನ್ನು ಕೊನೆಯ ಘಟ್ಟದ ವರೆಗೂ ಸ್ವಾರಸ್ಯಪೂರ್ಣವಾಗಿ ರಂಜಿಸುತ್ತದೆ. ಸ್ವತಃ ಸಂಸ್ಕೃತದ ವಿದ್ವಾಂಸರಾದ ಶ್ರೀ ಸೋಮಯಾಜಿಯವರು ನಾಯಕನ ಪಾತ್ರವನ್ನಿಲ್ಲಿ ಅನುಭವಿಸಿ ಹೃದ್ಯವಾಗಿ ನಿವೇದಿಸಿದ್ದಾರೆ ಎನ್ನಬಹುದು. ಸಂಸ್ಕೃತಿಯ ಸೆರೆಯಲ್ಲಿ ನಾರಾಯಣ ಬನ್ನಪಟ್ಟರೂ ಸುಸಂಸ್ಕೃತ

ನಾಗಿ ಬಾಳಿದ ವ್ಯಕ್ತಿ. ಕಾದಂಬರಿಕಾರರು ಇಲ್ಲಿ ಸಂಸ್ಕೃತ ಭಾಷೆಯ ಮತ್ತು ಅದರ ಶ್ರೇಷ್ಠತೆಯನ್ನು ನೇರವಾಗಿಯಲ್ಲವಾದರೂ ಅಲ್ಲಲ್ಲಿ ಒತ್ತಿ ಹೇಳುವ ಪ್ರಯತ್ನವನ್ನು ಮಾಡಿದ್ದಾರೆ. ಒಟ್ಟಿನಲ್ಲಿ ಶ್ರೀ ಸೋಮಯಾಜಿಯವರು ಬರೆದ ಈ ಕಾದಂಬರಿ ಮನಸ್ಸನ್ನು ಸೂರೆಗೊಳ್ಳುವುದರಲ್ಲಿ ಯಶಸ್ವಿಯಾಗಿದೆ.

೨. 'ಯಕ್ಷ ಕನ್ಯೆ':

'ಪಾಮರರ ಕಲೆಯಾದ ಯಕ್ಷಗಾನದಲ್ಲೇನಿದೆ?' ಎಂದು ಕೇಳುವ ಮಂದಿಗೆ ಈ ಕಾದಂಬರಿ ಒಂದು ಸವಾಲಿನಂತಿದೆ. ಯಕ್ಷಗಾನ ಬಯಲಾಟದಲ್ಲಿ ಕಾಣುವ ನೃತ್ಯ, ಮಾತುಗಾರಿಕೆ, ಚೆಂಡೆ-ಮದ್ದಳೆಗಳು ಜನರನ್ನು ಆಕರ್ಷಿಸುತ್ತವೆ. ಅದರೊಂದಿಗೆ ಪಾತ್ರಧಾರಿಗಳು ಬಣ್ಣದ ಗರದಿಯಲ್ಲಿ ಪಾತ್ರಕ್ಕೊಪ್ಪುವ ವೇಷಭೂಷಣ - ಕಿರೀಟಗಳನ್ನು ತೊಟ್ಟು ರಂಗ ಮಂಟಪಕ್ಕೆ ಬಂದರೆಂದರೆ, ಪ್ರೇಕ್ಷಕರು ಯಾವುದೋ ಲೋಕದಲ್ಲಿ ತೇಲ ತೊಡಗುತ್ತಾರೆ, ಅಂತಹ ಅದ್ಭುತ ಸಾಮರ್ಥ್ಯ ಯಕ್ಷಗಾನಕ್ಕಿರುವಾಗ ಆಯಾ ಪಾತ್ರಗಳನ್ನು ನಿರ್ವಹಿಸುವ ಪಾತ್ರಧಾರಿಗಳ ಮನೋಧರ್ಮವನ್ನು, ಬಾಳ್ವೆಯನ್ನು ಯಾರಾದರೂ ಗಮನಿಸುತ್ತಾರೆಯೇ? ಪ್ರೇಕ್ಷಕನಾದವನು ಕೇವಲ ಮನೋರಂಜನೆಯ ದೃಷ್ಟಿಯಿಂದ, ರಸಾನುಭವಕ್ಕಾಗಿ ಬಯಲಾಟಕ್ಕೆ ಹೋಗುತ್ತಾನೆ, ಹೆಚ್ಚೆಂದರೆ ಆಟದವರೊಡನೆ ನಾಲ್ಕು ಮಾತುಗಳನ್ನಾಡಿಯಾನು ಅಷ್ಟೆ. ಆದರೆ ಶ್ರೀ ಸೋಮಯಾಜಿಯವರು ಯಕ್ಷಗಾನದ ಅಭಿರುಚಿಯನ್ನು ಬೆಳೆಸಿಕೊಂಡವರು ಮಾತ್ರವಲ್ಲ ಪಾತ್ರಧಾರಿಗಳ ಜೀವನವನ್ನು ಕೆದಕುವ ಪ್ರಯತ್ನವನ್ನಿಲ್ಲಿ ಮಾಡಿದ್ದಾರೆ, ಅದಕ್ಕಾಗಿ ಗಣಪತಿ ಎಂಬ ಪಾತ್ರಧಾರಿಯನ್ನು ಈ ಕಾದಂಬರಿಯ ಮುಖ್ಯ ನಾಯಕನನ್ನಾಗಿ ಮಾಡಿಕೊಂಡು ಒಬ್ಬ ಯಕ್ಷಗಾನ ಕಲಾವಿದ ಪಡುವ ಕಷ್ಟ ಸುಖಗಳನ್ನು ಎಳೆಎಳೆಯಾಗಿ ಬಿಡಿಸಿ ನಮ್ಮ ಮುಂದಿಡುತ್ತಾರ. ಗಣಪತಿ ಹುಟ್ಟು ಕಲಾವಿದ. ಬಯಲಾಟದ ಪೂರ್ಣ ಅನುಭವಿ, ಯಕ್ಷಗಾನ ಕಲೆಯ ಆಳದಲ್ಲಿ ಮುಳುಗೆದ್ದು ಬರಬಲ್ಲ ಚತುರ. ಸ್ತ್ರೀ ಪಾತ್ರ ಅಥವಾ ಇನ್ನಾವುದೇ ಪಾತ್ರಕ್ಕೆ ರಸಪುಷ್ಟಿಯನ್ನು ಕೊಟ್ಟು ಮಾತಿನ ಮೋಡಿಯಿಂದ. ಹಾವ ಭಾವಗಳಿಂದ ಆಕರ್ಷಿಸಬಲ್ಲಂತಹ ರೂಪ - ಸೌಂದರ್ಯವಂತ 'ಯಕ್ಷಕನ್ಯೆ' ಎಂದು ಹೆಸರು ಪಡೆದ ಗಣಪತಿ – ತನ್ನ ಬಾಳಿನಲ್ಲಿ ಸುಖಿಯಾಗಿದ್ದನೇ? ಇದೊಂದು ಪ್ರಶ್ನೆಯನ್ನೂ, ಯಕ್ಷಗಾನ ರಂಗದೊಳಗಿರುವ ಕೆಲವು ಹುಳುಕುಗಳು ಕಲಾವಿದನ ಬಾಳನ್ನೇ ಹೇಗೆ ಚಿಗುಟುತ್ತವೆ? ರಾಗ, ದ್ವೇಷಗಳು ಹೇಗೆ ಬೆಳೆಯುತ್ತವೆ? ಎಂಬುದನ್ನೂ ಕಾದಂಬರಿಕಾರರು ಇಲ್ಲಿ ವಿವರಿಸುತ್ತಾರೆ. ಯಕ್ಷಗಾನ ಕಲಾಪ್ರಪಂಚವನ್ನು ಪರಿಚಯಗೊಳಿಸುವ ಒಂದು ಅಧ್ಯಯನ ಕೃತಿ ಎಂದು ಹೇಳಬಹುದಾದ "ಯಕ್ಷಕನ್ಯೆ" ತನ್ನ ಗಟ್ಟಿತನದ ರಸಪುಷ್ಟಿಯಿಂದಾಗಿ, ಪ್ರತಿಭಾಪೂರ್ಣ ಶೈಲಿ, ಮತ್ತು ಕಲಾವಿದರ, ಕಲಾರಸಿಕರ ಗುಂಗಿನಿಂದ ಆರಿಸಿದ ಸಜೀವ ಪಾತ್ರಗಳ ಚಿತ್ರಣದಿಂದಾಗಿ ಓದುಗನಿಗೆ ಒಳ್ಳೆಯ ರಸಾನುಭವವನ್ನು ಕೊಡುತ್ತದೆ. ಆ ವಸ್ತುವಿನ ಕೆಲ ಭಾಗವು ಕಾಲ್ಪನಿಕವಾಗಿ ಇಲ್ಲಿ ಚಿತ್ರಿಸಲಾಗಿದೆ, (ಈ

ಕಾದಂಬರಿಯನ್ನು ಬರೆಯುವಲ್ಲಿ ಶ್ರೀ ಸೋಮಯಾಜಿಗಳಿಗೆ ತಮ್ಮ ಸಂಬಂಧಿಗಳಾಗಿದ್ದ, ಯಕ್ಷಗಾನರಂಗದಲ್ಲಿ ಕೀರ್ತಿಗಳಿಸಿದ ಶ್ರೀ ಪುತ್ತಿಗೆ ರಾಮಕೃಷ್ಣ ಜೋಯಿಸರ ಜೀವನ ಒಂದು ಬಗೆಯಲ್ಲಿ ಸ್ಫೂರ್ತಿ ನೀಡಿತೆಂದು ಅವರೇ ಹೇಳಿದುದು ನೆನಪಿದೆ.)

೩. ಮಹಾ ಕವಿ ಕಾಳಿದಾಸ:

ಜಗನ್ಮಾನ್ಯ ಕವಿ ಕಾಳಿದಾಸನ ವ್ಯಕ್ತಿ ಚಿತ್ರಣವೇ ಈ ಕಾದಂಬರಿಯ ವಸ್ತು. ವಿಶ್ವದಲ್ಲೊಂದು ಸ್ಥಾನವನ್ನು ಪಡೆದ ಕಾಳಿದಾಸ ಮಹಾಕವಿಯ ಜೀವನ ವೃತ್ತಾಂತವನ್ನು ಅವನ ಸಮಕಾಲೀನರಾಗಲೀ, ಅಥವಾ ಈಚಿನ ಸಾಹಿತಿಗಳಾಗಲೀ ಪೂರ್ತಿ ದಾಖಲೆಗೊಳಿಸದಿರುವುದು ಬೇಸರದ ಸಂಗತಿ, ಶ್ರೀ ಸೋಮಯಾಜಿಯವರು ಕಾಳಿದಾಸನ ಕೃತಿಗಳ ಆಂತರಿಕ ಆಧಾರಗಳನ್ನಾಧರಿಸಿ. ತಮ್ಮ ಕಲ್ಪನಾ ವಿಲಾಸದಿಂದ ಕವಿ ಕಾಳಿದಾಸನ ಬಗೆಗೆ ಕಾದಂಬರಿಯನ್ನು ಬರೆದುದು ಸ್ತುತ್ಯ. ಶ್ರೀ ಸೋಮಯಾಜಿಯವರು ತಮ್ಮ ಮುನ್ನುಡಿಯಲ್ಲಿ ಹೇಳಿಕೊಳ್ಳುವ ಹಾಗೆ, ಕಾಳಿದಾಸನ ಕುರಿತು 'ಎಂಟೆರ್ದೆ'ಯಿಂದ ಬರೆದುದಲ್ಲವಾದರೂ, ಒಂದು ದಿಟ್ಟ ಪ್ರಯತ್ನವನ್ನು ಮಾಡಿ ಯಶಸ್ವಿಯಾಗಿದ್ದಾರೆನ್ನಬಹುದು. ತಮ್ಮ ಚುರುಕಾದ ಶೈಲಿಯಿಂದ ವಸ್ತುವನ್ನು ತನ್ನದಾಗಿಸಿಕೊಂಡು, ಕಾಳಿದಾಸನ ಸುತ್ತ ಕಾಲ್ಪನಿಕ ಪಾತ್ರಗಳನ್ನು ಸೃಷ್ಟಿಸಿ ಒಂದು ಶೃಂಗಾರತರಂಗಿತವಾದ ರಸಚಿತ್ರವನ್ನು ನೆಯ್ದು ಸಂಸ್ಕೃತ ಕವಿಯೊಬ್ಬನ ಅಜ್ಞಾತ ಜೀವನವನ್ನು ನಮ್ಮ ಮುಂದಿಟ್ಟಿದ್ದಾರೆ. ಸಾಮಾನ್ಯವಾಗಿ ಕವಿಗಳು ಏಕಾಂತ. ಪ್ರಕೃತಿಯ ಮಡಿಲು. ಪ್ರಶಾಂತ ವಾತಾವರಣ ಮತ್ತು ಸ್ವತಂತ್ರತೆಯನ್ನು ಬಯಸುತ್ತಾರೆ, ಅವರ ಭಾವನೆಗಳು ತುಂಬಿ ಬಂದಾಗ ಸ್ಫೂರ್ತಿ ಉಕ್ಕೇರಿ, ದೃಷ್ಟಿ ವಿಕಾಸಗೊಂಡು ಸಾಹಿತ್ಯ ಸೃಷ್ಟಿಯಾಗುತ್ತದೆ, ಕಾಳಿದಾಸ ಸಾಂಸಾರಿಕ ಜಂಜಾಟಕೆ ಒಳಗಾದಾಗ ಪಂಜರದೊಳಗಿನ ಗಿಳಿಯಂತೆ ಚಡಪಡಿಸುತ್ತಾನೆ, ವಾಸಂತಿಯಂತಹ ಸುಂದರ ರಾಜಕುಮಾರಿಯೊಡನೆ ವಿವಾಹವಾಗಿ ಅರಮನೆಯಲ್ಲಿ ವೈಭವದ ಜೀವನ ನಡೆಸುವಾಗ ಕಾಳಿದಾಸನ ಪರಿಸ್ಥಿತಿ ಇದೇ ಆಗಿತ್ತು, ಪ್ರಕೃತಿಯ ಮೋಹ. ನಿಸರ್ಗದ ಬೆಡಗು, ಮೇಲಾಗಿ ಅಚಲೆಯಂತಹ ಮುಗ್ಧ ತರುಣಿಯ ಉದಾತ್ತ ಸ್ಫೂರ್ತಿ ಕೊನೆಯವರೆಗೂ ಕಾಳಿದಾಸನಲ್ಲಿರುವುದರಿಂದ ಆ ಮಹಾಕವಿ ಇಷ್ಟು ಸಂಖ್ಯೆಯಲ್ಲಿ ಮೇರುಕೃತಿಗಳನ್ನು ರಚಿಸುವಂತಾಯಿತು. ಕಾದಂಬರಿಕಾರರು ತಮ್ಮ ಆಳವಾದ ಪಾಂಡಿತ್ಯ ಹಾಗೂ ಪ್ರತಿಭೆಯಿಂದ ಮಹಾಕವಿ ಕಾಳಿದಾಸನ ಬಾಳಿನ ಕಾಲ್ಪನಿಕ ಚಿತ್ರವನ್ನು – ಹೃದಯವನ್ನು ಸ್ಪರ್ಶಿಸಬಲ್ಲ ಭಾವಾಭಿ ವ್ಯಕ್ತಿಯಿಂದ – ಕಣ್ಮುಂದೆ ತೆರೆದು ತೋರಿಸಿದ್ದಾರೆ.

೪. ಪಂಡಿತ ರಾಜ ಜಗನ್ನಾಥ:

ಮೊಗಲ್ ಸಾಮ್ರಾಜ್ಯದ ಚಕ್ರವರ್ತಿ ಎಂದೆನಿಸಿಕೊಂಡ ಷಾಜಹಾನನ ಕಾಲದಲ್ಲಿ ನಡೆದ ಕಥೆಯಿದು. ಈ ಕಾದಂಬರಿ ಕ್ರಾಂತಿಕಾರೀ ಮನೋಭಾವನೆಯುಳ್ಳ ಜಗನ್ನಾಥ

ಜೀವನ ಕುರಿತಾದುದು. ತನ್ನ ಬುದ್ಧಿ ವೈಭವದಿಂದ ದಿಲ್ಲಿಯ ಆಸ್ಥಾನದಲ್ಲಿ ಒಂದು ಗಟ್ಟಿ ಸ್ಥಾನವನ್ನು ಜಗನ್ನಾಥ ಪಡೆದುಕೊಳ್ಳುತ್ತಾನೆ. ಸಾಕಷ್ಟು ಪ್ರತಿಭೆ, ಪಾಂಡಿತ್ಯವನ್ನು ಗಳಿಸಿದ್ದ ಜಗನ್ನಾಥ ಬಾಲ್ಯದಿಂದಲೂ ಸಾಹಸ ಪ್ರವೃತ್ತಿಯವನು. ತನ್ನ ಪ್ರಕಾಂಡ ಪಾಂಡಿತ್ಯದಿಂದ ತರ್ಕಬದ್ಧವಾಗಿ ವ್ಯಾಖ್ಯಾನಿಸಿ, ಹಿಂದೂ ಧರ್ಮದ ಮಹತ್ವವನ್ನು ಎತ್ತಿ ಹಿಡಿಯುತ್ತಾನೆ. ಮೊದಲಿನಿಂದಲೂ ಮುಸ್ಲಿಮರ ಸಹವಾಸವಿದ್ದ ಜಗನ್ನಾಥನಿಗೆ ಹಿಂದೊಮ್ಮೆ ಸಾಂಪ್ರದಾಯಿಕವಾಗಿ ವಿವಾಹವಾಗಿತ್ತು. ಪತ್ನಿ ಭಾಮಿನಿ ತೀರಿಕೊಂಡ ಬಳಿಕ ದೆಹಲಿ ಸೇರಿದ ಜಗನ್ನಾಥ ಯವನ ಸ್ತ್ರೀಯಾದ ಲವಂಗಿಯನ್ನು ಮದುವೆಯಾಗುತ್ತಾನೆ. ರಸಿಕ ಪ್ರವೃತ್ತಿಯವನಾದ ನಾಯಕ ಲವಂಗಿಯೊಡನಾಡುವ ಶೃಂಗಾರ ಚೇಷ್ಟೆ, ವರ್ಣನೆಗಳನ್ನು ಕಾದಂಬರಿಕಾರರು ರಮ್ಯವಾಗಿ ನಿರೂಪಿಸಿದ್ದಾರೆ. ಮುಸ್ಲಿಂ ಕನ್ಯೆಯನ್ನು ಮದುವೆಯಾದ ಕಾರಣಕ್ಕಾಗಿ ಇತರೆಡೆಗಳ ವಿದ್ವಾಂಸರುಗಳು ಬಹಿಷ್ಕರಿಸಿದರೂ, ಕೆಚ್ಚೆದೆಯಿಂದ ಜಗನ್ನಾಥ ತನ್ನ ಸ್ಥಾನವನ್ನು ಕಾಯ್ದುಕೊಳ್ಳುತ್ತಾನೆ. ಸಂಪ್ರದಾಯದ ಸಂಕೋಲೆಯನ್ನು ಮುರಿದು ಸಮಾಜದಲ್ಲಿ ಇಂದು ಒಂದು ಹೊಸ ಕ್ರಾಂತಿಯನ್ನು ಮಾಡುವ ಮೂಲಕ ಹಿಂದೂ-ಮುಸ್ಲಿಮರ ಐಕ್ಯತೆಗೆ ರಾಜಕೀಯ ದೃಷ್ಟಿಯಿಂದಲೂ, ನೈತಿಕ ದೃಷ್ಟಿಯಿಂದಲೂ ಜಗನ್ನಾಥ ಬುನಾದಿಯಾಗುತ್ತಾನೆ, 'ಪ್ರತಿಭಾವಂತರ ಜೀವನದಲ್ಲೂ ರಮಣೀಯವಾದ ಕಥಾವಸ್ತುವಿದೆ' ಎನ್ನುವುದಕ್ಕೆ ಈ ಕಾದಂಬರಿ ಒಂದು ಉದಾಹರಣೆ. ಕವಿಗಳ ಬದುಕಿನ ಹೋರಾಟದ ಚಿತ್ರಗಳು ಕನ್ನಡ ಸಾಹಿತ್ಯ ಲೋಕದಲ್ಲಿ ವಿರಳವಾಗಿವೆ. ಆ ಕೊರತೆಗಳನ್ನು ಶ್ರೀ ಸೋಮಯಾಜಿಯವರು ಕಾಳಿದಾಸ, ಜಗನ್ನಾಥದಂತಹ ಹೃದ್ಯ ಕಾದಂಬರಿಗಳ ಮೂಲಕ ಕೊಂಚಮಟ್ಟಿಗೆ ಕಡಿಮೆ ಮಾಡಿದ್ದಾರೆ, ರಾಜ್ಯ ಸಾಹಿತ್ಯ ಅಕಾಡೆಮಿಯ ಬಹುಮಾನ ಪಡೆದ ಈ ಕಾದಂಬರಿ ಭಾಷೆ. ಶೈಲಿ ಮತ್ತು ಸರಾಗವಾದ ಓಟದಿಂದ ವಸ್ತುವನ್ನು ರಂಜನೀಯವಾಗಿ ಬೆಳೆಸುವ ಮೂಲಕ ಪ್ರತಿ ನಿಮಿಷವೂ ಕುತೂಹಲಕ್ಕೆ ಎಳಸುತ್ತಿರುತ್ತದೆ.

೫. ಕನ್ನಡ ಕೋಗಿಲೆ ಮುದ್ದಣ:

'ಪದ್ಯಂ ವಧ್ಯಂ ಗದ್ಯಂ ಹೃದ್ಯಂ' ಎಂದು ನುಡಿದು ಕನ್ನಡದ ದೀಕ್ಷೆ ತೊಟ್ಟ ಕವಿ ಮುದ್ದಣನ ಬದುಕಿನ ಕತೆಯನ್ನು ತನ್ನ ಕಲ್ಪನಾ ಸಾಮರ್ಥ್ಯದಿಂದ ಮತ್ತು ಮುದ್ದಣನ ಕೃತಿಗಳ ಆಳವಾದ ಅಧ್ಯಯನದಿಂದ ಕಾದಂಬರಿಯಾಗಿ ಕನ್ನಡ ಸಾಹಿತ್ಯ ಲೋಕಕ್ಕೆ ನೀಡಿದ್ದಾರೆ. ನಮ್ಮ ಜಿಲ್ಲೆಯವನೇ ಆದ ನಂದಳಿಕೆ ಲಕ್ಷ್ಮೀನಾರಾಯಣನ ಬಾಳಿನ ಕಣ್ಣೀರನ್ನಿಳಿಸುವಂತಹ ದುರಂತ ಕಥೆಯಿದು. ಅವನು ಬದುಕಿನೊಡನೆ ನಡೆಸಿದ ಹೋರಾಟ, ಇಟ್ಟುಕೊಂಡ ಧ್ಯೇಯ-ಆಕಾಂಕ್ಷೆಗಳೆಲ್ಲಾ ಅಪೂರ್ಣವಾದಾಗ 'ಸಮಾಜ ಒಬ್ಬ ಕವಿಗೆ ನೀಡುವ ಮಹತ್ವ ಇಷ್ಟೇ ತಾನೆ?' ಎಂದೆನಿಸುತ್ತದೆ. ಕವಿ ತನ್ನ ಶಕ್ತಿಯನ್ನೆಲ್ಲ ವೆಚ್ಚಮಿಸಿ, ದುಡಿದು ಬರೆದ ಕೃತಿಗಳನ್ನೆಲ್ಲ ಸಮಾಜದ ಜನರು ಓದಿ ಸಂತೋಷಪಟ್ಟು

ತಮ್ಮ ಜ್ಞಾನಭಂಡಾರವನ್ನು ವೃದ್ಧಿಗೊಳಿಸುತ್ತಾರಾದರೂ. ಆ ಕೃತಿಕಾರನ ದೈನಂದಿನ ಕಷ್ಟವೇನಿದೆ ಎಂಬ ಕಾಳಜಿಯನ್ನು ಯಾರೂ ಗಮನಿಸುವುದಿಲ್ಲ. ಮುದ್ದಣನ ಪರಿಸ್ಥಿತಿಯೂ ಇದೇ ಆಗಿತ್ತು. [ರಾಮಾಶ್ವಮೇಧ, ಅದ್ಭುತ ರಾಮಾಯಣ, ಶ್ರೀ ರಾಮ ಪಟ್ಟಾಭಿಷೇಕ, ಕುಮಾರ ವಿಜಯ, ರತ್ನಾವತಿ ಕಲ್ಯಾಣ—ಮೊದಲಾದ ಶ್ರೀಮಂತ ಕೃತಿಗಳು ಜನರ ಮನಸ್ಸನ್ನೆಲ್ಲ ಸೂರೆಗೊಳ್ಳುತ್ತವೆ.] ಎಳೆಪ್ರಾಯದಲ್ಲಿ ತೀರಿಕೊಳ್ಳುವ ಮುದ್ದಣನ ಚಿತ್ರವನ್ನು ಸಹಾನುಭೂತಿಯಿಂದ. ಅಂತಃಕರಣದಿಂದ, ಬಹಳ ಗೌರವಯುತವಾಗಿ ಕಲ್ಪಿಸಿಕೊಂಡು ಶ್ರೀ ಸೋಮಯಾಜಿಯವರು ಬರೆದಿದ್ದಾರೆ. ಆದರೂ ಕಾದಂಬರಿಕಾರರು ಉಪಯೋಗಿಸಿಕೊಂಡ ಶೈಲಿ. ಘಟನೆಗಳು ಕೆಲವೊಮ್ಮೆ ಅಲ್ಲಲ್ಲಿ ಎಗರುವುದರಿಂದ ಜಗನ್ನಾಥ ಅಥವಾ ಕಳಿದಾಸ ಕಾದಂಬರಿಯಷ್ಟು ರಂಜನೆಯನ್ನು ಕೊಡುವಲ್ಲಿ ಇದು ವಿಫಲವಾಗಿದೆ ಎಂದು ನನ್ನ ಅನಿಸಿಕೆ. ಮುದ್ದಣನ ದಾರುಣ ಚಿತ್ರವನ್ನು ಶ್ರೀ ಸೋಮಯಾಜಿಯವರು ಇನ್ನಷ್ಟು ಮನಂಬುಗುವಂತೆ ಚಿತ್ರಿಸಬಹುದಿತ್ತು.

ಮಹಾಕವಿಗಳ ಜೀವನ ಚಿತ್ರವನ್ನು ನೀಡುವಲ್ಲಿ, ಶ್ರೀ ಸೋಮಯಾಜಿಗಳ ಸತತ ಕಾವ್ಯಾನುಶೀಲನವೇ ಅವರಿಗೆ ಪ್ರೇರಣೆ ನೀಡಿದೆ. ಕಾವ್ಯಗಳನ್ನು ಚೆನ್ನಾಗಿ ಮನನ ಮಾಡಿಕೊಳ್ಳದೆ, ಅವುಗಳ ಕರ್ತೃಗಳಾದ ಕವಿಗಳ ಜೀವನ ಚಿತ್ರಣವನ್ನು ನಿರೂಪಿಸುವುದು ಸುಲಭ ಸಾಧ್ಯವಲ್ಲ. ಕೆಲವೊಮ್ಮೆ ಕೃತಿಗಳಲ್ಲಿ ಮೂಡುವ 'ಕವಿ ಚಿತ್ರ'ಕ್ಕೂ – ಅವನ ನಿಜ ಜೀವನಕ್ಕೂ ಅಂತರ ಇರಬಹುದಾದ ಸ್ಥಿತಿ ಇರುತ್ತದೆ; ಶ್ರೀ ಸೋಮಯಾಜಿಗಳ ಪ್ರಯತ್ನ ಶ್ಲಾಘನೀಯ ಹಾಗೂ ಅನುಸರಣೀಯ !

X X X X X X X X

೨೨. ಡಾರ್ವಿನ್ ಕಂಡ ವಿಕಾಸತತ್ತ್ವದೊಳಗಿನ 'ನರ'ಸಂಪ್ರದಾಯ

"Missing Link"

—ಡಾ. ಶಂ ಬಾ. ಜೋಶಿ, ಧಾರವಾಡ.

1

ಡಾರ್ವಿನ್ನನ ಸಮಕಾಲೀನ ವ್ಯಾಲ್ಲಾಸನು 'ವಿಕಾಸ' ತತ್ತ್ವದ ನಿಷ್ಕರ್ಷವನ್ನು ಆಕ್ಷೇಪಿಸಿದ್ದಾನೆ: ವಾನರ ವರ್ಗದ ತರುವಾಯ ನೇರವಾಗಿ ಮಾನವನ ಪ್ರಾದುರ್ಭಾವ (emergence) ಆಯ್ತು, ಎಂಬ ಹಾಗಿನ ಡಾರ್ವಿನನ ನಿರ್ಣಯವು ಸದೋಷವಾಗಿದೆ ಯೆಂದು ವ್ಯಾಲ್ಲಾಸನು ಆಕ್ಷೇಪಿಸಿದ್ದಾಯ್ತು, ಆದರೆ ಈ ಆಕ್ಷೇಪವನ್ನು ಅಂದು ಯಾರೂ ಗಮನಿಸಲಿಲ್ಲ, ಆದರೆ, ಡಾರ್ವಿನ್ನನ ಶೋಧದ ನೂರು ವರ್ಷಗಳ ಈ ಸಂಧಿಗೆ ಅದರ ಪುನರ್ವಿಮರ್ಶೆಯ ಹಲವಾರು ಗ್ರಂಥಗಳು ಪ್ರಕಟವಾಗಿವೆ,

ಇವುಗಳಲ್ಲಿ 'Evolution of Man' (Editor: Dr. Luice young, oxford Press, N. Y. 1970) ಈ ಗ್ರಂಥದಲ್ಲಿ – ಡಾರ್ವಿನ್ನನ ಶೋಧದ ತರುವಾಯ ಈ ವರೆಗೆ ಆಗಿರುವ ಪ್ರಗತಿಯ ಸಮೀಕ್ಷೆಯು ಉಂಟು. ಡಾರ್ವಿನ್ನನು ಸ್ವೀಕರಿಸಿರುವ ಮಾನವ ಜೀವನ ಸಂಸ್ಕೃತಿಯ ಅರ್ಥಗ್ರಹಣ ಪದ್ಧತಿಯು ತೀರಾ ಅಸಮರ್ಪಕವಿದೆ.

ಕೇವಲ ಪ್ರಾಣಚೇತಸದ (Biosphere) ಈ ಒಂದೇ ಪಾತಳಿಯನ್ನು ಲೆಕ್ಕಿಸಿದರೆ ಮಾನವ ಜೀವನದಲ್ಲಿ ಭಾಷೆ, ಶಾಸ್ತ್ರಾದಿಗಳು ಹೇಗೆ ತಲೆದೋರಿದುವು, ಇದು ಗೊತ್ತಾಗು ವುದಿಲ್ಲ, ಆದ ಕಾರಣ ಪ್ರಾಣಚೇತಸದ ಆಚೆಗೆ ಇನ್ನೂ ಒಂದು ಪಾತಳಿಯು ಇರಲೇ ಬೇಕು, ಎಂಬ ನಿಷ್ಕರ್ಷ ಡಾ. ಜ್ಯುಲಿಯನ್ ಹಕ್ಸ್ಲೇ, ಡಾ. ಪಿಶ್ರಿ ಟೈಹಾರ್ಡ್ ಡಿ ಚಾರ್ಡಿನ್, ಇವರದು. ಈ ಪಾತಳಿಯನ್ನು 'Noosphere' ಎಂದು ಹೆಸರಿಸಿದ್ದಾರೆ. ಈ ಹೆಸರು, ಗ್ರೀಕ್ ಸಂಸ್ಕೃತಿಯೊಳಗಿನ 'Nous' ಸಂಕೇತದ ಮೂಲಕ ನಿರ್ಮಿತವಾಗಿದೆ,

ಡಾರ್ವಿನ್ನನ 'ವಿಕಾಸ' ತತ್ತ್ವದ ಸ್ಪಷ್ಟೀಕರಣವೂ ಅಸಮರ್ಪಕವಿದೆಯೆಂದು ವ್ಯಾಲ್ಲಾಸ್ ಆಕ್ಷೇಪಿಸಿದ್ದಾನೆ. Natural selection' ಅಥವಾ 'Survival of the fittest' ಎಂಬ ಈ ಸ್ಪಷ್ಟೀಕರಣವು ವಿಕಾಸದ ಅರ್ಥಕ್ಕೆ ಮಾರಕವಿದೆ, 'Survival of the fittest' ಎಂದರೆ ಹೋರಟೆ - ಸಂಗ್ರಾಮ, ಇದು ಸ್ಥಾಯಿ ಭಾವವು ಆಯ್ತು. ಪೋರಟೆ ಸ್ಥಾಯಿಯಿದ್ದರೆ ವಿಕಾಸ ಅಶಕ್ಯ. 'ವಿಕಾಸ' ಸ್ಥಾಯಿಯಿದ್ದು, ಈ ಜೀವನದಲ್ಲಿ

‘ಯುದ್ಧ’ಕ್ಕೂ ಇಂಬು ಇರಬಲ್ಲುದು. ಅಥವಾ ಆಗುವ ‘ವಿಕಾಸ’ ಸದೋಷವಿದ್ದರೆ ಅದು ಒರೆಗೆ ಹತ್ತಲು ವಿರೋಧ, ಸಂಗ್ರಾಮ ಬೇಕೇ ಬೇಕು. ಆದರೆ ಡಾರ್ವಿನ್ನನು ಹೇಳುವ ‘Natural selection’ ಇದು ಮಾನವನಲ್ಲಿ ‘ಮನಃಶಕ್ತಿ’ ಬಂದುದನ್ನು ಸ್ಪಷ್ಟೀಕರಿಸಲಾರದು ಎಂದು ವ್ಯಾಲ್ಲಾಸನ ಆಕ್ಷೇಪ. ಅರ್ವಾಚೀನ ಮಾನವ ಶಾಸ್ತ್ರಜ್ಞರಲ್ಲಿ ಡಾ. ಕ್ರೋಬರ್, ಈತನು ಸಂಸ್ಕೃತಿಯು ಪ್ರೇರಣಾ ಕೇಂದ್ರವು ಇಂದ್ರಿಯ ಜನ್ಯ - ಜ್ಞಾನದ ಪಾತಳಿಯ ಆಚೆಗಿದೆ ಎಂಬ ವಿಚಾರವನ್ನು ಪ್ರಾಜ್ಞರ ಮುಂದೆ ಇರಿಸಿದನು. (1917)

II

ಡಾ. ಹಕ್ಸ್ಲೀ ಪ್ರಭೃತಿಗಳ ಇತ್ತೀಚಿನ ‘Noosphere’ ಇದು ಭಾಷೆ, ಸಂಸ್ಕೃತಿ, ಶಾಸ್ತ್ರಗಳ ಪ್ರೇರಣಾಕೇಂದ್ರವೆಂದು ಈಗ ಮಾನ್ಯತೆಯನ್ನು ಪಡೆದಿರುತ್ತದೆ. ಈ ಹಿನ್ನೆಲೆಯಲ್ಲಿ ಮಾನವ ಜೀವನದಲ್ಲಿ ಕ್ರಿಯಾಪ್ರೇರಕ ಕೇಂದ್ರಗಳು ಎರಡು ಆಗುತ್ತವೆ: ಒಂದು. ಪ್ರಾಣ ಚೇತಸ ಅಥವಾ ಪ್ರಾಣಲಿಂಗ ಪಾತಳಿ. ಇನ್ನೊಂದು, ಆಧುನಿಕರು ಹೇಳುವ ‘Nous’ ಅಥವಾ ಪುರಾತನ ಭಾರತೀಯರ ಸ್ವರ್ (ಸ್ವಃ, ಸುವಃ) ಪಾತಳಿ - ಇದುವೇ ಪ್ರಜ್ಞಾ ಪ್ರಕಾರದ ಪಾತಳಿ; ಅಥವಾ ‘ಧೀ’ಪ್ರಚೋದಕ – ಸವಿತೃದೈವತದ ಪಾತಳಿ.

ಪುರಾತನ ಭಾರತೀಯರು ಪ್ರಜ್ಞಾಪ್ರಕಾಶದ ಪಾತಳಿಯ ಮೂಲಕ ಮಾನವ ಜೀವನದ ವಿಕಾಸಕ್ರಮವನ್ನು ಕಂಡು ಹೇಳಿದ್ದೂ ಉಂಟು.

ವಾನರ → ನರ. ಬಳಿಕ ಪ್ರಜ್ಞಾಪ್ರಾದುರ್ಭಾವದೊಡನೆ ‘ಮನು’ಜ, ಮಾನವ-‘ಮನು’ ಸಂತಾನ,

III

ಈ ಭೂಮಿಕೆಯಿಂದ ವ್ಯಾಲ್ಲಾಸನು ಎತ್ತಿರುವ ‘Missing link’ ‘ನರ’ವರ್ಗದ ಪಾತಳಿಯೆಂದು ದೃಢಪಡುತ್ತಿದೆ.

ಇದಕ್ಕೆ ಕಾರಣಗಳು:

1. ‘ವಾ’ನರ, ಈ ಪಾರಿಭಾಷಿಕ ಪದವನ್ನು ‘ನರ’ತನದಮೇಲಿಂದ ಸಿದ್ಧಪಡಿಸಿಕೊಳ್ಳಲಾಗಿದೆ. ಈ ‘ನರ’ನ ‘ಧರ್ಮ’ = ಸ್ವಭಾವ ‘ವಾನರ’ ವರ್ಗಕ್ಕೆ ಹತ್ತಿರದ್ದು. ಎಂಬ ಒಪ್ಪಿಗೆ ಇಲ್ಲಿ ಉಂಟು.

I. ವೇದದಲ್ಲಿ ‘ವಾ - ನರ’ ಇಲ್ಲ; ‘ಮರುತ’ (ಗಾಳಿ) ದೇವರು ಇದ್ದಾರೆ. ‘ಕಪಿ’ಯು ವೇದದಲ್ಲಿ ಇದೆ (X-86). ‘ಕಪಿ’ಯು ಸಾಂಕೇತಿಕ ಭಾಗವೇ ಇಂದ್ರಿಯ ಭೋಗದೊಳಗಿನ (ಪುರುಷ) ಲಿಂಗ ಸೂಚಕವಿದೆ. ‘ಇಂದ್ರಾಣಿ (ಸ್ತ್ರೀ ಇಂದ್ರಿಯ ಪ್ರತೀಕ). ಭೋಗದಲ್ಲಿ ಈ ಕಪಿ ಮಗ್ನವಿದೆ. ‘ಸ್ತ್ರೀ-ಪುಂ ಲಿಂಗ’ ಈ ಅರ್ಥದಲ್ಲಿ ಈ ಕಪಿ ಕೋಡಗ ಸಂಕೇತವು

ವೀರಶೈವರ 'ಮುಕ್ತಿ ಕಂಠಾಭರಣ'ದಲ್ಲಿ ಸಹ ಇದೆ. (ಪುಟ, 68). ಪ್ರಭುದೇವ ಹಾಗೂ ನಾಗಾಂಬಿಕೆ ವಚನ ನೋಡಿ. (ಕರ್ನಾಟಕ ವಿಶ್ವವಿದ್ಯಾನಿಲಯದ ಪ್ರಕಟಣೆ)

II. ಮರುತರನ್ನು 'ನರಾಃ', 'ಮರ್ತಾಸಃ'. 'ಮರ್ಯಾಃ' ಎಂದೂ ವರ್ಣಿಸಲಾಗಿದೆ, ಈ ಮರುತರನ್ನು 'ಕಬಂಧ' (ಕೊಳಾಯಿ, ನಳ)' ಎಂದೂ ಹೇಳಿರುವಲ್ಲಿ 'ನರ (ಳ)', ಮರುತರು ಕಬಂಧ ದೂತರು ಆಗುತ್ತಾರೆ. ವೇದದ ಕಬಂಧವೇ ಲಿಂಗ = ಲಾಂಗಲ = ಲಾಂಗೂಲ ಆಗುತ್ತದೆ. (ಋ I. ೫೪, ೮. ೯)

III. ಮನ್ ಆಖ್ಯಾತ ಸಾಧಿತ ಮನಃ ಆಗಿದೆ. ಮನನ, ಮತಿ ಮನೀಷಿ, ಈ ಹಂತದವನು ಮನು. ಪ್ರಜ್ಞಾಪ್ರಕಾರದೊಡನೆ ಸಂಬದ್ಧ ಮನಶ್ಶಕ್ತಿಯ ಪ್ರಾಣಿ ಮನು > ಮಾನವ.

IV. ಪ್ರಾಣ ತತ್ತ್ವದೊಡನೆ ಬದ್ಧಚಿತ್ತವುಳ್ಳವನು ನರ, ಮನಸ್ತತ್ತ್ವವು ವಿಕಾಸಗೊಳ್ಳುವುದಕ್ಕೂ, ಮುಂಚೆಗಿನ ಹಂತವು ಈ 'ನರ' ಧರ್ಮದ್ದು. ಪ್ರಜ್ಞೋದಯದ ಪ್ರಯೋಜನ ಪಡೆದು ಚಿತ್ತವೃತ್ತಿ ನಿರೋಧ ಯೋಗವನ್ನು ಈ 'ನರ' ಸಂಪ್ರದಾಯ ಹುಡುಕಿಕೊಂಡಿತು, ಮನು > ಮಾನವನಾಗುವ ಹಂಚಿಕೆ ಕಂಡುಕೊಂಡಿತ್ತು, ನರ ಪ್ರಾಣಿ.

IV

ಆದರೂ ಈ 'ನರ ಧರ್ಮ' ಮತ್ತು 'ಮನು - ಜ ಧರ್ಮ' ಇವೆರಡರಲ್ಲಿ ಅಂತರವಿದೆ:

I (I) 'ನರ' ಧರ್ಮದಲ್ಲಿ ಐಹಿಕ ಜೀವನದಲ್ಲಿ ಆಸ್ಥೆಯಿಲ್ಲ!

(II) ಈ 'ನರ' ಧರ್ಮದಲ್ಲಿ ಜ್ಯೋತಿರ್ಲಿಂಗದ ಉಪಾಸನೆಯಿದೆ. 'Candle light' ಈ ಸಾಂಕೇತಿಕತೆ ಕ್ರೈಸ್ತರಲ್ಲೂ ಇದೆ.

(III) 'ವೃಕ್ಷ' ಪೂಜೆ, ಲಿಂಗಪೂಜೆಯ ಪರ್ಯಾಯ. 'ಅಶ್ವತ್ಥ' ವೃಕ್ಷವು ಸಂಸಾರ ವೃಕ್ಷ ತಾನೆ?

II ನಾಗ = ಲಿಂಗ, ನಾಗ = ಚಂದ್ರ. ಚಂದ್ರೋಪಾಸನೆ. ವೃಕ್ಷ – ನಾಗ ಈ ಬಗೆಯ ಲೈಂಗಿಕ ಸಂಕೇತವಿಲ್ಲದ 'ನರ' ಸಂಪ್ರದಾಯಗಳು ದೊರೆಯಲಾರವು. ಈ ನರ ಧರ್ಮಗಳೆಲ್ಲವೂ ಚಂದ್ರೋಪಾಸನೆ = ರಾತ್ರಿ ಸಮಯಂ ಜಾರಗಳ ಧರ್ಮವೇ ಇರಬಲ್ಲದು.

III 'ಮನು' ವಿವಸ್ವಾನ್ ಎಂಬಲ್ಲಿ ಇವರೂ ಸೌರ ಪ್ರಕಾಶ ತತ್ತ್ವಪೂಜಕರು ಎಂಬ ಅರ್ಥ ಸ್ಪಷ್ಟವಿದೆ,

IV ವಿವಸ್ವಾನ್ ಮನು ಸಂಪ್ರದಾಯದ ಭಾಷೆ ಪ್ರಕಾಶ ತತ್ತ್ವದ ಪ್ರೇರಣೆಯದು,

V. ಆದರೆ 'ನರ' ಸಂಪ್ರದಾಯದ ಭಾಷೆಯನ್ನು 'ಮಹತಃ ಭೂತಸ್ಯ ನಿಶ್ವಸಿತಂ' ಎಂದು ಬೃಹದಾರಣ್ಯಕ ಹೇಳಿದೆ! (II. ೪–೧೦ ಮತ್ತು II. ೨-೩–೪)

‘ಪ್ರಾಣಾಃ ವಾ ಋಷಯಃ’ ಎಂಬಲ್ಲಿ ಸತ್-ಚಿತ್ ಆನಂದ ಎಂಬಲ್ಲಿ ಪ್ರಾಣ ಚೇತಸದ ಭೂಮಿಕೆಯು ಮೈಯಲ್ಲಿ ಆವೇಶವಾಗಿ (ಗಾಳಿಸೇರಿ) ಹೊರಡುವ ವಾಕ್ಕಿಗೆ ಈ ‘ನರ’ ಸಂಪ್ರದಾಯದಲ್ಲಿ ಹೆಚ್ಚಿನ ಮನ್ನಣೆ! ಸ್ವಪ್ನ, ಮಂತ್ರವಾಟ ಗಾರುಡಿಗಳಲ್ಲಿ ಈ ಪಂಥಕ್ಕೆ ವಿಶ್ವಾಸ.

V

VI ಗಾಳಿ = ಪ್ರಾಣಶಕ್ತಿ, ಉಸಿರು = ಪ್ರಾಣದೇವರು; ಮುಖ್ಯಪ್ರಾಣ, ಇದು ಪ್ರಾಣೋಪಾಸಕರ. ಪ್ರಾಣೋಪಾಸಕರ ಸಂಪ್ರದಾಯ.

ವೇದಕಾಲದಲ್ಲಿ ಪ್ರಾಣಕ್ಕೆ ‘ಅಸು’ ಎಂಬ ಪಾರಿಭಾಷಿಕ ಪದವಿತ್ತು, ಆದರೆ ಉಪನಿಷತ್ಕಾಲದಿಂದ ‘ಅಸು’ ಪರಿಭಾಷೆ ತ್ಯಾಜ್ಯವಾಗುತ್ತದೆ! ಇದು ನಿಷ್ಕಾರಣವಲ್ಲ! ಇಲ್ಲಿ ಹುದುಗಿರುವ ಐತಿಹಾಸಿಕಾಂಶವು ಮೌಲಿಕವಾಗಿದೆ. Dramatic uronyಪ್ರಾಣ ದೇವರು ‘ಅಸುರ’ ಶಕ್ತಿಯ ದೇವರು!

VII ‘ಧೀ’ ಉಳ್ಳವರು ‘ಧೀ-ರ’ರು. ಇದೇ ಮೇರೆಗೆ. ‘ಅಸು’ ಉಳ್ಳವರು ಅಸುರ’ರು! ‘ಮರುತ’ರನ್ನು ‘ಅಸು-ರ’, ರುದ್ರಪುತ್ರರು = ‘ರುದ್ರಾಃ’, ‘ರುದ್ರಿಯಾಃ’ ಎಂದು ವೇದ ಹೇಳುತ್ತದೆ.

VIII ಆದಕಾರಣ. ಪ್ರಪಂಚದೊಳಗಿನ ‘ಮೋಕ್ಷ ಕಾಮಿ ನರ’ ಸಂಪ್ರದಾಯಗಳು ಎಲ್ಲವೂ ‘ಅಸು’ ಉಪಾಸಕರ. ಪ್ರಾಣೋಪಾಸಕರ = ‘ಅಸು-ರ’ರ ಸಂಪ್ರದಾಯಗಳೇ ಆಗಿದ್ದುದು ಹೊರವಡುತ್ತದೆ!

IX ವಿವಸ್ವಾನ್ (ಸೌರ = ಪ್ರಕಾಶ ಪೂಜಕ), ಮನು > ಮಾನವ ಧರ್ಮ ಪರಂಪರೆಯ ವಿರೋಧಿ, ಈ ‘ನರ’ ಸಂಪ್ರದಾಯಗಳಲ್ಲಿ ವ್ಯಕ್ತಾವ್ಯಕ್ತವಾಗಿ ಚಂದ್ರೋಪಾಸನೆಯುಂಟು!

ಮುಸಲ್ಮಾನೀ ಧರ್ಮದಲ್ಲಿ ಚಂದ್ರ - ಬಾಲಚಂದ್ರ ನೋಡದೆ ರಮಜಾನ ಉಪವಾಸದ ಮುಕ್ತಾಯವಿಲ್ಲ!

ಚರ್ಚ್ ಇದು (She) ‘Moon’ ಎಂದು ಪ್ರಾಚೀನ ಕ್ರಿಸ್ತ ಭಕ್ತ origene (ಅಲೆಕ್ಸಾಂಡ್ರಿಯನ್ ಹೇಳಿದ್ದಾನೆ, ‘Ciηy of God’ ಚರ್ಚ್ ಅಂದರೆ **She Moon!** ‘ಹಿರಣ್ಯಗರ್ಭ’ ದೇವನು ಕ್ರಿಸ್ತನು ಚಂದ್ರನು ದೇಹದ ಪರ್ಯಾಯ, ದೇಹ = ಪುರಿ, ಗುಡಿ ಪ್ರತೀಕ, ಗೋವು = ಚಂದ್ರಾದೇವಿ, ‘ಗೋಪುರ’ ಇಲ್ಲದ ಗುಡಿ ಅಪೂರ್ಣ!

‘ಏಕಂ ಸುಪರ್ಣಂ ವಿಪ್ರಾಃ ಕವಯಃ ಬಹುಧಾ ಕಲ್ಪಯಂತಿ (ಋ. X ೧೧೪-೫), ಈ ವೇದದಂತೆ ನಾನಾ ರೂಪ ಆಕೃತಿಯಾಗುವ ಈ ಶಕ್ತಿಯೇ ಚಂದ್ರನು. ಈತನೇ ‘ಅಸು-ರ’ನು, ಅಸ್ಸೀರಿಯಾ = ಅಸುರರ ದೇಶ. ಛಾಂದೋಗ್ಯದಲ್ಲಿ ಬರುವ (VIII·

(೧-೮-೩) 'ಅಸುರಾಣಾಂ ವಿರೋಚನಃ' 'ಅಸು-ರ' ನಾಗಿದ್ದಾನೆ. ಭಿಕ್ಷೆ ಬೇಡಿಯಾದರೂ ಅಲಂಕಾರ ವಸನ ಸಹಿತ ಹೆಣ ಶೃಂಗರಿಸುವ ವಾಡಿಕೆ 'ಅಸು-ರ' ನದು, ಇದನ್ನು ಡಾ. ದಾಸಗುಪ್ತ 'History of Indian Philosophy ಗ್ರಂಥದಲ್ಲಿ ಸ್ಪಷ್ಟ ಹೇಳಿದ್ದಾರೆ. Land of Criscent Moon' ಎಂದು ಈಗಲೂ ಖ್ಯಾತಿಯಿರುವ ಈ 'ಅಸುರ' ದೇಶವು 'ಸುಮೇರ ಸಂಸ್ಕೃತಿ' ಮಾನವ ಇತಿಹಾಸ ಸಂಸ್ಕೃತಿಯ ಉಗಮಸ್ಥಾನದಲ್ಲಿದೆಯೆಂದು ಡಾ. ಫ್ರೇಂಕ್‌ಫೋರ್ಟ್ ಹಾಗೂ ಡಾ. ಕ್ರೇಮರ್ ಗ್ರಂಥ ಬರೆದಿದ್ದಾರೆ, ಇವು ಶಿಷ್ಟ ಮಾನ್ಯವಾಗಿವೆ.

ಸಾರಾಂಶ ಇಷ್ಟು:

ಡಾರ್ವಿನ್ನ ಹೇಳುವ 'ವಿಕಾಸ' ತತ್ತ್ವದಂತೆ 'ವಾನರನಿಂದ ಮನುಜ' ಈ ಸ್ಪಷ್ಟೀಕರಣವು ಅಸಮರ್ಪಕವಿದೆಯೆಂಬ ವ್ಯಾಲ್ಲಾಸನ ಆಕ್ಷೇಪವು ಸಮಂಜಸವಾಗಿದೆಯೆಂದು ಈಗ ಒಂದಕ್ಕಿಂತ ಹೆಚ್ಚು ಬಗೆಗಳಿಂದ ಸಿದ್ಧವಾಗಿವೆ.

ಇದರಲ್ಲಿ ಒಂದು ಕಾರಣ, ವಾನರರ – ನರರ ವರ್ಗದ ತರುವಾಯ ಆದ ಪ್ರಜ್ಞಾ (Wisdom) ಉದಯವು 'Logical Continuum' ಸ್ವರೂಪದ್ದಲ್ಲ. ಇದು 'ಸ್ವರ್–Nous' ಥಕ್ಕನೆ 'Flash' ಹೊಳೆದು 'ಅರಿಕೆ'ಗೆ ಬರುವ ಸಾಂಸ್ಕೃತಿಕ - ಪ್ರೇರಣಾ ಕೇಂದ್ರ. ಈ ಪಾತಳಿಯ ಪ್ರೇರಣೆಯಿಂದ ಪ್ರಾದುರ್ಭವಿಸುವ ಮಾನಃ ತತ್ತ್ವದ ಪ್ರೇರಣೆಯವರು ಮನುಜರು.

'ಭುವಃ ಅಂತರಿಕ್ಷಂ' ಈ ಮಧ್ಯಗೇಹ'ದ ಚಾಂದ್ರ ಪಾತಳಿಯ (ಉಸಿರಿನ) ಪ್ರೇರಣೆಯಿಂದ ಜ್ಞಾನ ಪಡೆಯುವ ಪ್ರಾಣ (ಉಸಿರು) ಉಪಾಸಕರು 'ಅಸು' ಶಕ್ತಿಯ ಆರಾಧಕರು. 'ಅಸು - ರ' 'ನರ ವರ್ಗ ಎಂದು ಪ್ರಾಚೀನ ಅವಶಿಷ್ಟ ಪ್ರಮಾಣಗಳಿಂದ ಸಿದ್ಧವಾಗುತ್ತದೆ.

'ಕಪಿಧ್ವಜ' - ನರನಿಗೆ ಬೋಧಿಸಿರುವ ಶ್ರೀ ಭಗವದ್ಗೀತೆಯಲ್ಲಿ ಇದಕ್ಕೆ ಪ್ರಮಾಣವಿದೆ: ವಿವಸ್ವಾನ್ ದೈವತಕ್ಕೆ ಭಗವಂತನು ಯೋಗದೀಕ್ಷೆಯನ್ನು ಕೊಟ್ಟ ಉಲ್ಲೇಖವಿದೆ. (ಸೌರ) ವಿವಸ್ವಾನ್ ಯೋಗ ಮಾರ್ಗಿಯಾಗಿ. 'ಸಮಾಧಿ' ಸಿದ್ಧಿಯ ಸೂಚಕವಾಗಿ ಕಣ್ಣು ಮುಚ್ಚಿ ಆಸನಸ್ಥನಾಗುವಾಗ ಪ್ರಪಂಚವೆಲ್ಲ ಕತ್ತಲಲ್ಲಿ ಮುಳುಗಬೇಕಷ್ಟೆ? ಇಂದು ಪ್ರಪಂಚವೆಲ್ಲ ಮಲೇಚ್ಛ ಕಾಮಿ ಪಂಥಗಳ ಪ್ರಭಾವದಲ್ಲಿ ಸಿಲುಕಿದೆ – 'ರಾತ್ರೀ' ಉಪಾಸನೆಯಲ್ಲಿ ಆಸಕ್ತವಾಗಿದೆ. 'ರಾತ್ರ್ಯಾಗಮೇ ಪ್ರಲೀಯಂತೇ' ಈ ದೃಶ್ಯವು ಎಲ್ಲೆಲ್ಲೂ ಕಾಣುತ್ತಿದೆ! "ಸ್ವ (ನರ) ಧರ್ಮೇ ನಿಧನಂ ಶ್ರೇಯಃ" - ಪರಧರ್ಮ (= ಮನುಧರ್ಮ) ಭಯಾವಹವಿದೆಯೆಂಬ ಗೀತಾವಾಕ್ಯ ಅಭ್ಯಸನೀಯವಿದೆ. ಗೀತೆಗೆ ಭಯಾವಹವೆನಿಸಿರುವ ಈ 'ಪರಧರ್ಮ'ವು ಯಾವುದು ಇರಬಲ್ಲುದು? ಅಂದು ಕ್ರೈಸ್ತ ಕಣ್ಣು ತೆರೆದಿದ್ದಿಲ್ಲ; ಮುಹಮ್ಮದ ಹುಟ್ಟಿರಲಿಲ್ಲ,

ಜೈನ ಪಂಥವಿರಬಹುದು - ಆದರೆ 'ನಿರ್ವೇದಿ'ಯಾಗಲು, ಪ್ರಜ್ಞೆ ಸ್ಥಗಿತಗೊಳಿಸಿ 'ಸ್ಥಿತ ಪ್ರಜ್ಞ' ನಾಗಲು ಬೋಧಿಸುವ ಗೀತೆಗೆ ನಿರ್ವೇದಿ ಜೈನರು ಹೊರಗಿನವರಲ್ಲ. ಶ್ರೀ ಮಧ್ವಾಚಾರ್ಯರನ್ನು 'ಪ್ರಚ್ಛನ್ನ ಜೈನ' ಎಂದು ಆಕ್ಷೇಪಿಸಲಾಗುತ್ತದೆ; ಗೀತೆ ಮೈದಾಳುವಾಗ ಬೌದ್ಧ ಧರ್ಮ ಇರಬಹುದು, 'ನಿರ್ವಾಣ' ಈ ಬೌದ್ಧರ ಕೊನೆಯ ಸ್ಥಿತಿಯ ಪಾರಿಭಾಷಿಕಪದವು ಗೀತೆಯಲ್ಲಿದೆ! ಶ್ರೀ ಶಂಕರಾಚಾರ್ಯರು 'ಪ್ರಚ್ಛನ್ನ ಬೌದ್ಧ'ರು ಎಂಬ ಟೀಕೆಗೆ ಗುರಿಯಾಗಿದ್ದಾರೆ! ಆದಕಾರಣ ಈ ಗೀತೆಗೆ ಜೈನ ಬೌದ್ಧಮತಗಳು ಪಂಥಧರ್ಮಗಳು ಅಲ್ಲ.

ಈ ಹಿನ್ನೆಲೆಯಲ್ಲಿ 'ನರ ಧರ್ಮ' ಪ್ರತಿಪಾದಕ 'ನಾರ - ಆಯನ' (ನಾರಾಯಣ) ಪಂಥ ಪ್ರಸ್ತಾಪಕ ಗೀತೆಗೆ, ಭಯಾವಹ ಪರಧರ್ಮವು ವಿವಸ್ವತಮನು ಸಂಪ್ರದಾಯವೇ ಆಗುತ್ತದೆ, ಈ ಗೀತೆಯ ಭಗವಂತನು. 'ನರಧರ್ಮ'ದ ಶತ್ರುವಾದ ವಿವಸ್ವತನಿಗೆ 'ಯೋಗ ಬೋಧಿಸಿ' ಸಮಾಧೀಕರಣಿಸಿದ್ದಾನೆ. ವೇದದಲ್ಲಿ ವಿವಸ್ವತನು 'ಆದಿತ್ಯ'ನಾಗಿದ್ದಾನೆ! ಈ ಭಗವಂತನು 'ಆದಿತ್ಯಾನಾಮಹಂ' ಎಂದು ಹೇಳುವಲ್ಲಿ, ಈ ವಿವಸ್ವತಮನು ಸಂಪ್ರದಾಯದ ವಿರೋಧವೇ ಬಯಲಿಗೆ ಬರುತ್ತದೆ!

ವಿ. ಸೂ: ಇದೇ ಲೇಖಕರ, 1 'ಹಿಂದೂ' ಎಂಬ ಧರ್ಮಪ್ರವಾಹ ಪತಿತರ ಮರ್ಮ (ಬೆಂಗಳೂರು ವಿಶ್ವವಿದ್ಯಾಲಯ), 2. ಗೀತೆಯಗೂಢಾರ್ಥ (ಹುಬ್ಬಳ್ಳಿ ಪ್ರಕಟಿತ) ಗ್ರಂಥ ನೋಡಿರಿ.

X X X X X X

೩೪. ಲೋಕ ಗುರು

—ಶ್ರೀ ತ. ಸು. ಶಾಮರಾಯ. ಮೈಸೂರು.

೧

ಮೃಗತ್ವದಿಂದ ದೇವತ್ವದ ಕಡೆಗೆ ಪಯಣ ಹೊರಟಿರುವ ಮಾನವಜೀವಿ ನಾಗರಿಕತೆಯ ಮೆಟ್ಟಲುಗಳನ್ನು ಏರುತ್ತಾ ಹೋದಂತೆಲ್ಲ ಪ್ರಕೃತಿಯ ಮೇಲ್ಪೊರೆಗಳನ್ನು ಒಂದೊಂದನ್ನಾಗಿ ಭೇದಿಸ ಹೊರಟಿದ್ದಾನೆ, ಅಗಾಧವಾದ ಭೌತಿಕ ಶಕ್ತಿಗಳು ಒಂದೊಂದಾಗಿ ಅವನ ವಶವರ್ತಿಯಾಗುತ್ತಿವೆ. ಅವನು ಈಗಾಗಲೆ ಹಕ್ಕಿಯಂತೆ ಆಕಾಶದಲ್ಲಿ ಹಾರಬಲ್ಲ, ಮೀನಿನಂತೆ ನೀರಿನಲ್ಲಿ ಸಂಚರಿಸಬಲ್ಲ; ತನ್ನ ವೈಜ್ಞಾನಿಕ ಶಕ್ತಿಯನ್ನು ಬಳಸಿ ಚಂದ್ರಗ್ರಹವನ್ನು ಮುಟ್ಟಿ ಬಂದಿದ್ದಾನೆ; ಗ್ರಹ, ತಾರೆ, ನೀಹಾರಗಳತ್ತ ತನ್ನ ಬಾಹುಗಳನ್ನು ಚಾಚಿದ್ದಾನೆ; ಮರ್ತ್ಯನಿಗೆ ಅಮರತ್ವವನ್ನು ತರುವ ಹವಣಿಕೆಯಲ್ಲಿದ್ದಾನೆ; ಸೃಷ್ಟಿಗೆ ಪ್ರತಿ ಸೃಷ್ಟಿಯನ್ನು ರಚಿಸಿ 'ಅನಮಿಂದ್ರಂ ಕರಿಷ್ಯಾಮಿ' ಎಂದು ಹೇಳುವಂತಹ ಹವಣಿಕೆಯಲ್ಲಿದ್ದಾನೆ; ಭೂ ಸ್ವರ್ಗವನ್ನು ಸೃಷ್ಟಿಸುವೆನೆಂದು ಹಾರಾಡುತ್ತಿದ್ದಾನೆ. ಈ ಆಧುನಿಕ ನಾಗರಿಕತೆಯ ಮತ್ತೊಂದು ಮುಖ ಮಾನವ ಲೋಕವನ್ನು ತತ್ತರಗೊಳಿಸುವಂತಹ ಮಾರಕಾಸ್ತ್ರಗಳ ನಿರ್ಮಾಣ. ಭಸ್ಮಾಸುರನ ಅಪರಾವತಾರದಂತಿರುವ ಈ ನವನಾಗರಿಕ ಮಾನವ ತನ್ನ ಶಕ್ತಿಸಂಚಯನದ ಬತ್ತಳಿಕೆಯಿಂದ ಮಾರಕಾಸ್ತ್ರಗಳನ್ನು ತೆಗೆದು ಕ್ಷಣ ಮಾತ್ರದಲ್ಲಿ ಮಾನವ ಜನಾಂಗವನ್ನೆ ನಿರ್ಮೂಲ ಮಾಡಬಲ್ಲ. ಕವಿ ಕುವೆಂಪು ಹಾಡಿರುವಂತೆ 'ನಾಗರಿಕತೆಯ ನಾಗಿನಿಯು ಪ್ರಗತಿನಾಮಕ ಫಣೆಯ ಮೇಲೆತ್ತಿ ಚುಂಬಿಸಿಯೆ ಕೊಲ್ಲಲೆಳಸುತಿದೆ'. ಈ ಸಂದಿಗ್ಧ ಸಮಯದಲ್ಲಿ 'ಮುಂದೆ ಏನು? ಎತ್ತ? ಹೇಗೆ?' ಎಂಬ ಪ್ರಶ್ನಾರ್ಥಕ ಚಿಹ್ನೆ ವಿಕಟಾಟ್ಟಹಾಸ ಮಾಡುತ್ತಾ ನಮ್ಮ ಇದಿರಿಗೆ ನಿಂತಿದೆ. ಇಂತಹ ಸಂದರ್ಭದಲ್ಲಿ ಲೋಕ ಕಲ್ಯಾಣವನ್ನು ರೂಪಿಸಬಲ್ಲ ರೂವಾರಿಯೊಬ್ಬನು ಅತ್ಯಗತ್ಯ. ಅಂತಹ ರೂವಾರಿಯೆ 'ಲೋಕ ಗುರು'.

೨

ಜಗತ್ತಿನ ಜೀವರಾಶಿಯೆಲ್ಲ ಸುಖಾಭಿಲಾಷಿ. ಆ ಸುಖವನ್ನು ಅರಸುತ್ತಾ ಪ್ರತಿಯೊಂದು ಪ್ರಾಣಿಯೂ ತನ್ನ ಯೋಗ್ಯತೆಗೆ ತಕ್ಕಂತೆ ಸಾಹಸವನ್ನು ಕೈಕೊಳ್ಳುತ್ತದೆ, ಜಗತ್ ಸೃಷ್ಟಿಯ ಶಿಖರದಂತಿರುವ ಮಾನವ ಅನಾದಿ ಕಾಲದಿಂದಲೂ ಈ ಅನ್ವೇಷಣೆಯಲ್ಲಿ ಆಸಕ್ತನಾಗಿದ್ದಾನೆ. ನಾಗರಿಕತೆಯ ಬೆನ್ನೇರಿ ಈ ನಿಟ್ಟಿನಲ್ಲಿ ಬಹುದೂರ ಕ್ರಮಿಸಿದ್ದಾನೆ, ತನ್ನ ಕಣ್ಣೆದುರಿಗಿರುವ ಬಾಹ್ಯ ಪ್ರಪಂಚ ಅಥವಾ ಪ್ರಕೃತಿಯನ್ನು ಭೇದಿಸಿ. ಆದರ ಗರ್ಭ

ದಲ್ಲಿ ಅಡಗಿದ್ದ ಅಗಾಧವಾದ ಶಕ್ತಿಯನ್ನು ಸ್ವಾಧೀನಪಡಿಸಿಕೊಳ್ಳುತ್ತಿದ್ದಾನೆ. ಆದರೂ ಅವನು ಅನ್ವೇಷಿಸುತ್ತಿರುವ ಸುಖ ಕಾಂಚನಮೃಗದಂತೆ ಅವನ ಕಣ್ಣು ತಪ್ಪಿಸಿ ಓಡಿ ಹೋಗುತ್ತಿದೆ. ಪ್ರಪಂಚವೇ ನಮ್ಮ ಕೈವಶವಾದರೆ ತಾನೆ ಏನು? ಪ್ರಪಂಚದಲ್ಲಿರುವ ಸಕಲ ವಸ್ತುಗಳನ್ನೂ ಪಡೆದರೆ ತಾನೆ ಏನು? ನಮ್ಮಲ್ಲಿ ಸುಖಾನುಭವಶಕ್ತಿ ಇಲ್ಲವಾದರೆ ಸುಖವುಂಟೆ? ಆ ಸುಖದ ಮೂಲವಾವುದೆಂದು ಹುಡುಕಹೊರಟ ನಮ್ಮ ಆರ್ಷೇಯ ಋಷಿಗಳು ಮನುಷ್ಯನ ಅಂತರಾಂಗದಲ್ಲಿಯೆ ಹುದುಗಿಕೊಂಡಿರುವ ಅಂತರಾತ್ಮನೆ ಆ ಸುಖದ ಮೂಲವೆಂದು ಗುರುತಿಸಿದ್ದಾರೆ. ಈ ಅಂತರಾತ್ಮವೆಂಬುದು ಭೂಮಿ, ಸೂರ್ಯ, ಚಂದ್ರ. ನಕ್ಷತ್ರ–ಇತ್ಯಾದಿಗಳನ್ನು ಒಳಗೊಂಡ ಬ್ರಹ್ಮಾಂಡಕ್ಕಿಂತಲೂ ಅದ್ಭುತವಾದುದು. ಶ್ರೇಷ್ಠವಾದುದು, ಗಂಭೀರವಾದುದು ಎಂದು ಹೇಳುತ್ತಾರೆ.

ಲೌಕಿಕಸುಖದ ಮಾಯಾಮೃಗ ಕೈ ನುಣುಚಿಕೊಂಡು ಹೋದಾಗ ಮಾನವ ತನ್ನ ಸುಖಾನ್ವೇಷಣದ ಹಾದಿಯನ್ನು ಬದಲಾಯಿಸಿ. ತನ್ನ ಅಂತರಂಗದತ್ತ ದೃಷ್ಟಿಯನ್ನು ಹಾಯಿಸುತ್ತಾನೆ. ಅಂತರಾತ್ಮನ ದರ್ಶನಕ್ಕಾಗಿ ತಹತಹಪಡುವ ಅವನ ಸ್ಥಿತಿಯನ್ನು 'ಮೋಘಾಚ್ಛನ್ನಸ್ಥಿತಿ' ಎಂದು ಕರೆಯುತ್ತಾರೆ. ಅಖಂಡಾನಂದ ರೂಪನಾದ ಅಂತರಾತ್ಮನಿಗೂ ಜೀವಿಗೂ ಮಧ್ಯದಲ್ಲಿ ಅಜ್ಞಾನ ರೂಪದ ಮೋಡ ಮುಸುಕಿರುತ್ತದೆ. ಈ ತೆರೆಯನ್ನು ಓರೆಮಾಡಿದರೆ ಆನಂದರೂಪಿಯಾದ ಅಂತರಾತ್ಮನ ದರ್ಶನವಾಗುತ್ತದೆ, ಆ ದರ್ಶನವಾಗುವ ಮುನ್ನ ಮನಸ್ಸಿನಲ್ಲಿ ಅತ್ಯಂತ ತೀವ್ರವಾದ ತಳಮಳ ಕಾಣಿಸಿಕೊಳ್ಳುತ್ತದೆ. ಅದನ್ನು ಭಗವದ್‌ಗೀತೆಯಲ್ಲಿ 'ವಿಷಾದಯೋಗ' ಎಂದು ಕರೆದಿದ್ದಾರೆ. ವಿಷಾದವೂ ಒಂದು ಯೋಗ! ಆ ಯೋಗದ ಫಲವಾಗಿ ಅಮರ್ತ್ಯಪ್ರಜ್ಞೆ ಮರ್ತ್ಯಪ್ರಜ್ಞೆಗೆ ಇಳಿದುಬರುತ್ತದೆ. ಹಾಗೆ ಇಳಿದು ನರರೂಪಿನಲ್ಲಿ ಪ್ರವೇಶಿಸಿದಾಗ–ಅಥವಾ ನರರೂಪಿನಿಂದ ಆವಿರ್ಭವಿಸಿದಾಗ–ಅದನ್ನು ಭಗವದವತಾರವೆಂದು, ಲೋಕ ಗುರುವೆಂದು ಕರೆಯುತ್ತಾರೆ. ಇದನ್ನೆ ಭಗವದ್ಗೀತೆಯಲ್ಲಿ

ಅಜೋऽಪಿ ಸನ್ನವ್ಯಯಾತ್ಮಾ ಭೂತಾನಾಮೀಶ್ವರೋऽಪಿ ಸನ್
ಪ್ರಕೃತಿಂ ಸ್ವಾಮಧಿಷ್ಠಾಯ ಸಂಭವಾಮ್ಯಾತ್ಮ ಮಾಯಯಾ

ಸರ್ವವ್ಯಾಪಿಯಾದವನು ದೇಹವೊಂದನ್ನು ಆಶ್ರಯಿಸುತ್ತಾನೆ. ಅನಾದಿಯಾದ ಜನ್ಮರಹಿತನಾದವನು ಜನ್ಮಿಸುತ್ತಾನೆ. ಜಗಜ್ಜೀವಿಗಳ ಈಶ್ವರನಾದವನು ಮಾನವಜೀವಿಯಾಗುತ್ತಾನೆ, Infinite ಆದವನು Finite ಆಗುತ್ತಾನೆ, ತನ್ನ ಪ್ರಕೃತಿಯನ್ನು ಆಧಾರಮಾಡಿಕೊಂಡು ತನ್ನ ಮಾಯೆಯಿಂದ ತಾನು ಹುಟ್ಟುತ್ತಾನೆ–ಎಂದು ಹೇಳಿದೆ.

ಗುರುವು ಭಗವಂತನ ಅವತಾರವೆಂದು ನಾವು ಅನಾದಿಕಾಲದಿಂದ ನಂಬಿಕೊಂಡು ಬಂದಿದ್ದೇವೆ.

ಗುರುರ್ಬ್ರಹ್ಮಾ ಗುರುರ್ವಿಷ್ಣುः ಗುರುರ್ದೇವೋ ಮಹೇಶ್ವರಃ
ಗುರುಸ್ಸಾಕ್ಷಾತ್ ಪರಬ್ರಹ್ಮ ತಸ್ಮೈಶ್ರೀ ಗುರವೇ ನಮಃ

ಎಂಬ ಶ್ಲೋಕ ನಮಗೆಲ್ಲ ಚಿರಪರಿಚಿತವಾದುದು, ಗುರುವು ಅಮೂರ್ತ ಸ್ವರೂಪ. ಅಷ್ಟೇ ಅಲ್ಲ, ಪರಬ್ರಹ್ಮಸ್ವರೂಪ. ಭಗವಂತ ಸರ್ವವ್ಯಾಪಿ ಎಂಬುದು ಕೇವಲ ಒಂದು ಸಿದ್ಧಾಂತ. ಅವನು ಸ್ವಸ್ವರೂಪದಲ್ಲಿ ನಮಗೆ ಗೋಚರಿಸುವುದು ಅಸಾಧ್ಯ. ನಾವು ಈಗ ಇರುವ ರೀತಿಯಲ್ಲಿ ಅವನನ್ನು ಮಾನವರೂಪಿಯಾಗಿ ಮಾತ್ರ ಕಾಣಲು ಸಾಧ್ಯ. ಜನರು ಕ್ರಿಸ್ತನನ್ನು ಕುರಿತು "ದೇವರೇ, ನಮಗೆ ತಂದೆಯನ್ನು ತೋರಿಸು" ಎಂದು ಕೇಳಿದಾಗ, ಆತ 'ಯಾರು ನನ್ನನ್ನು ನೋಡಿರುವನೋ ಅವನು ತಂದೆಯನ್ನು ನೋಡಿರುವನು' ಎಂದ ನಂತೆ! ಸ್ವಾಮಿ ವಿವೇಕಾನಂದರು 'ದೇವರು ಮನುಷ್ಯ ಎಂದಲ್ಲದೆ ನಮ್ಮಲ್ಲಿ ಬೇರೆ ರೀತಿ ಯಾರೂ ಊಹಿಸಿಕೊಳ್ಳಲು ಸಾಧ್ಯವಿಲ್ಲ. ನಾವು ಅವನನ್ನು ಮಾನವನಲ್ಲಿ ಮತ್ತು ಮಾನ ವನ ಮೂಲಕ ಮಾತ್ರ ತಿಳಿದುಕೊಳ್ಳಬಲ್ಲೆವು' ಎಂದು ಹೇಳುತ್ತಾರೆ. ಈ ಮಹಾ ಗುರು ಗಳು ಬಂದಾಗ ಮಾನವ ದೇವನನ್ನು ಕಾಣುತ್ತಾನೆ.

ಶ್ರೀ ಶಂಕರ ಭಗವತ್ಪಾದರನ್ನು ಸ್ತುತಿಸುವ ಸುಂದರ ಶ್ಲೋಕವೊಂದಿದೆ. ಅದು—

"ಗುರವೋ ಬಹವಃ ಸಂತಿ ಶಿಷ್ಯವಿತ್ತಾಪಹಾರಿಣಃ
ತಮೇಕಂ ಶಂಕರಂ ವಂದೇ ಶಿಷ್ಯಸಂತಾಪಹಾರಿಣಂ

ಶಿಷ್ಯರ ಹಣವನ್ನು ಅಪಹರಿಸುವ ಗುರುಗಳೆಷ್ಟೋ ಮಂದಿ ಇದ್ದಾರೆ; ಅಂತಹ ಗುರುಗಳಿಂದ ಬೇರೆಯವರಾಗಿ, ಶಿಷ್ಯರ ಸಂತಾಪವನ್ನು ಹೋಗಲಾಡಿಸುವ ಶಂಕರನನ್ನು ನಾನು ವಂದಿಸುತ್ತೇನೆ"—ಎನ್ನುತ್ತದೆ. ನಮ್ಮ ದೇಶದಲ್ಲಿ ಶಿಷ್ಯರ ಸಂಖ್ಯೆಗಿಂತ ಗುರುಗಳ ಸಂಖ್ಯೆಯೇ ಹೆಚ್ಚೋ ಏನೋ! ಆದ್ದರಿಂದ ನಾವು ಗುರುವನ್ನು ಸ್ವೀಕರಿಸುವಾಗ ಎಲ್ಲ ದೃಷ್ಟಿಯಿಂದಲೂ ಪರೀಕ್ಷಿಸಿ ಅವರನ್ನು ಸ್ವೀಕರಿಸಬೇಕಾಗುತ್ತದೆ, ಶ್ರೀ ರಾಮಕೃಷ್ಣ ಪರಮಹಂಸರು ಸುಂದರವಾದ ಒಂದು ದೃಷ್ಟಾಂತ ಕಥೆಯ ಮೂಲಕ ಈ ವಿಚಾರವನ್ನು ಸ್ಪಷ್ಟಪಡಿಸುತ್ತಾರೆ: ಒಮ್ಮೆ ಒಂದು ನೀರೊಳ್ಳೆ ದೊಡ್ಡ ಕಪ್ಪೆಯೊಂದನ್ನು ಹಿಡಿಯಿತು, ಆದರೆ ಅದನ್ನು ನುಂಗುವುದಕ್ಕಾಗಲಿಲ್ಲ, ಆ ಹಾವು ಕಪ್ಪೆಯನ್ನು ನುಂಗಲೂ ಒಲ್ಲದು, ಬಿಡಲೂ ಒಲ್ಲದು. ಆ ಕಪ್ಪೆ ನೋವಿನಿಂದ ಒಂದೇ ಸಮನೆ ಅರಚುತ್ತಿದೆ. ಹಾವಿಗೂ ತುಂಬ ಕಷ್ಟವೇ ಆಗಿದೆ. ಒಂದು ನಾಗರಹಾವಿಗೇನಾದರೂ ಆ ಕಪ್ಪೆ ಸಿಕ್ಕಿದ್ದರೆ, ಒಂದೆರಡು ಸಲ ಅರಚಿಕೊಳ್ಳುವುದರೊಳಗಾಗಿ ಅದರ ಕೂಗು ನಿಂತುಹೋಗುತ್ತಿತ್ತು. ಗುರುವು ಜ್ಞಾನಿಯಲ್ಲದಿದ್ದರೆ ಗುರು-ಶಿಷ್ಯರಿಬ್ಬರೂ ಸಂಕಟಕ್ಕೆ ಗುರಿಯಾಗುತ್ತಾರೆ.

ಗುರುವಾಗುವವನಲ್ಲಿ ಶಿಷ್ಯನಿಗೆ ನೀಡುವಷ್ಟು ಜ್ಞಾನಸಂಪತ್ತು ತುಂಬಿರಬೇಕು. ಆತನ ವಯಸ್ಸು ಮುಖ್ಯವಲ್ಲ; ಆತನು ಬಾಯ್ಬಿಟ್ಟು ಉಪದೇಶಮಾಡಬೇಕಾಗಿಯೂ ಇಲ್ಲ, ಒಂದು ಸಂಸ್ಕೃತ ಶ್ಲೋಕ ಹೀಗೆ ಹೇಳುತ್ತದೆ—

ಅಹೋ ಬತ ವಟಸ್ಯಾಧೋ ಶಿಷ್ಯಾ ವೃದ್ಧಾ ಗುರುರ್ಯುವಾ
ಗುರೋಸ್ತು ಮೌನಂ ವ್ಯಾಖ್ಯಾನಂ ಶಿಷ್ಯಾಸ್ತು ಛಿನ್ನ ಸಂಶಯಾಃ

ಮರದ ಕೆಳಗೆ ಗುರು ಕುಳಿತಿದ್ದಾನೆ. ಗುರು ಯುವಕ, ಶಿಷ್ಯರು ವೃದ್ಧರು. ಗುರುವಿನ ವ್ಯಾಖ್ಯಾನ ಮೌನ. ಆದರೆ ಶಿಷ್ಯರ ಸಂಶಯಗಳೆಲ್ಲ ನಿವಾರಣೆಯಾಗುತ್ತವೆ. ಅಂತಹ ಗುರುವೇ ಜೀವಂತ ದೇವರು, ಪ್ರಪಂಚದಲ್ಲಿ.

೩

ಭಗವದ್ಗೀತೆಯ ಪ್ರಥಮಾಧ್ಯಾಯದಲ್ಲಿ ಶ್ರೀ ಕೃಷ್ಣನು ಅರ್ಜುನನಿಗೆ ಗೀತೋಪದೇಶ ಮಾಡುವ ಸನ್ನಿವೇಶ ಬರುತ್ತದೆ. ಅದು ಇಡೀ ಗ್ರಂಥಕ್ಕೆ ಅತ್ಯಂತ ಸುಂದರವಾದ ಮತ್ತು ನಾಟಕೀಯವಾದ ಒಂದು ಹಿನ್ನೆಲೆಯನ್ನು ಒದಗಿಸಿದೆ. ಕೌರವ ಪಾಂಡವರ ಅಪಾರವಾದ ಸೇನೆ ಕುರುಕ್ಷೇತ್ರದ ರಣರಂಗದಲ್ಲಿ ಮುಖಾಮುಖಿಯಾಗಿ ಕಾದಾಡಲೆಂದು ನಿಂತಿದೆ. ಯೋಧಾಗ್ರಣಿಯಾದ ಅರ್ಜುನ ಆ ಎರಡು ಸೇನೆಗಳ ಮಧ್ಯದಲ್ಲಿ ನಿಂತು ಎರಡೂ ಕಡೆಯ ಯೋಧರತ್ತ ತನ್ನ ದೃಷ್ಟಿಯನ್ನು ಹರಿಸುತ್ತಾನೆ. ಅಲ್ಲಿ ತಾನು ಇದಿರಿಸಬೇಕಾದವರೆಲ್ಲ ತನ್ನ ಬಂಧು ಬಾಂಧವರೇ ಆಗಿರುವುದನ್ನು ಕಂಡು ಅವನು ವಿಷಾದದಲ್ಲಿ ಮುಳುಗುತ್ತಾನೆ. ಅವನ ನಾಡಿಗಳ ಮಿಡಿತ ಕುಗ್ಗುತ್ತದೆ. ಕಣ್ಣು ಒದ್ದೆಯಾಗುತ್ತದೆ. ಗಾಂಡೀವ ಕೈ ಜಾರಿ ಕೆಳಗೆ ಬೀಳುತ್ತದೆ. ಅವನ ಮನಸ್ಸು ಉದ್ವಿಗ್ನಗೊಂಡು ಜುಗುಪ್ಸೆ ಹುಟ್ಟುತ್ತದೆ. ತಾನು ಯುದ್ಧ ಮಾಡಬಾರದೆಂದು ಅವನು ನಿಶ್ಚಯಿಸುತ್ತಾನೆ. ಯುದ್ಧಕ್ಕೆ ಮುನ್ನುಗ್ಗುವುದಕ್ಕಿಂತಲೂ. ಶತ್ರುವಿಗೆ ಸೋತು ಶರಣಾಗುವುದು ಮೇಲೆನಿಸುತ್ತದೆ. ಅದೇ ಹೆಚ್ಚು ಧರ್ಮಯುಕ್ತವಾದುದೆಂದು ಅವನು ಭಾವಿಸುತ್ತಾನೆ. ಇದೊಂದು ಅತ್ಯಂತ ಮಾರ್ಮಿಕ ಸನ್ನಿವೇಶ. ಆವೇಶ. ಮೋಹ. ಆದರ್ಶ, ಕರ್ತವ್ಯ—ಇವುಗಳ ಆಂತರಿಕ ಹೋರಾಟ ಹುಟ್ಟಿಕೊಳ್ಳುತ್ತದೆ. ಹೊರಗೂ ಯುದ್ಧ. ಒಳಗೂ ಯುದ್ಧ.

ಇಂತಹ ಸನ್ನಿವೇಶ ಕಾಣಿಸಿಕೊಂಡಾಗಲೆಲ್ಲ ಆ ಸನ್ನಿವೇಶದಲ್ಲಿ ಅತ್ಯಂತ ಪರಿಣಾಮಕಾರಿಯಾದ ಸಾಧ್ಯತೆಗಳು ತುಂಬಿಕೊಂಡಿರುತ್ತವೆ. ಉತ್ಕಟಸ್ಥಿತಿ ನೂತನ ಸೃಷ್ಟಿಯ ಮುನ್ಸೂಚಕ. ವಿಷಮತೆ ಉಗ್ರವಾದಷ್ಟೂ ಸೃಷ್ಟಿ ಹೆಚ್ಚು ಶ್ರೇಷ್ಠವಾಗುತ್ತದೆ. ಸಾಮಾನ್ಯ ಜನರಲ್ಲಿ ಇಂತಹ ಒಳತೋಟಿ ಅಪರೂಪ. ಇದನ್ನು ಮಾಡಬೇಕೆ, ಬೇಡವೆ—ಎನ್ನುವಂತಹ ವಿರೋಧ ಭಾವನೆಗಳ ಭಯಂಕರ ಸೆಳೆತಕ್ಕೆ ಸಿಕ್ಕುವಂತಹ ಸನ್ನಿವೇಶಗಳು ಸಾಮಾನ್ಯರಿಗೆ ಒದಗುವುದಿಲ್ಲ. ನಿಜವಾದ ಮಹತ್ತನ್ನು ಗಳಿಸುವುದಕ್ಕಾಗಿಯೇ ಜನಿಸಿರುವವರಿಗೆ ಮಾತ್ರ ಅಂತಹ ಸಂದರ್ಭಗಳು ಸೃಷ್ಟಿಯಾಗುತ್ತವ. ಈ ವಿಷಮ ಸಮಯದಲ್ಲಿ ಯಾವುದಾದರೊಂದು ಮಾರ್ಗದರ್ಶನ ಅತ್ಯಗತ್ಯವೆನಿಸುತ್ತದೆ. ಅವನು ಶ್ರೀ ಕೃಷ್ಣನ ಮಾರ್ಗದರ್ಶನವನ್ನು ಬೇಡುತ್ತಾನೆ. ಈ ಸತ್ಯಾನ್ವೇಷಿಯ ಸಮಸ್ಯೆಯ ಫಲವಾಗಿ ಆಶಾವಾದದ ನಾದತರಂಗಗಳೇಳುತ್ತವೆ, ಶ್ರೀ ಕೃಷ್ಣನ ಬಾಯಿಂದ—

'ಕುತಸ್ತ್ವಾ ಕಶ್ಮಲಮಿದಂ ವಿಷಮೇ ಸಮುಪಸ್ಥಿತಂ
ಅನಾರ್ಯಜುಷ್ಟಂ ಅಸ್ವರ್ಗ್ಯಂ ಅಕೀರ್ತಿಕರಮರ್ಜುನ

ಹೇ ಅರ್ಜುನ! ಇಂತಹ ವಿಷಮಸನ್ನಿವೇಶದಲ್ಲಿ ನಿನಗೆ ಇಂತಹ ಅನಾರ್ಯಾಚರಣೀಯವೂ, ಸ್ವರ್ಗಕ್ಕೆ ಪ್ರತಿಬಂಧಕವೂ, ಅಕೀರ್ತಿಕರವಾದುದೂ ಆದ ಈ ಖಿನ್ನತೆ ಎಲ್ಲಿಂದ ಬಂತು?

ಕ್ಲೈಬ್ಯಂ ಮಾಸ್ಮ ಗಮಃ ಪಾರ್ಥ ನೈತತ್ತ್ವಯ್ಯುಪಪದ್ಯತೇ
ಕ್ಷುದ್ರಂ ಹೃದಯ ದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ

ಹೇ ಕ್ಷತ್ರಿಯ ಪುತ್ರ! ಹೇಡಿತನವನ್ನು ಹೊಂದಬೇಡ. ಇದು ನಿನಗೆ ಯೋಗ್ಯವಲ್ಲ; ತುಚ್ಛವಾದ ಈ ಹೃದಯ ದೌರ್ಬಲ್ಯವನ್ನು ಬಿಟ್ಟು ಮೇಲಕ್ಕೇಳು"

ಈ ಎರಡು ಶ್ಲೋಕಗಳು ಶ್ರೀಕೃಷ್ಣನು ಅರ್ಜುನನಿಗೆ ನೀಡಿದ ಶಕ್ತಿವರ್ಧಕ ಟಾನಿಕ್. ಉಪದೇಶದ ಔಷಧ ಹಿಡಿಯಬೇಕಾದರೆ ಅದಕ್ಕೆ ಪೂರ್ವಭಾವಿಯಾಗಿ ಈ ಶಕ್ತಿ ವರ್ಧಕ ಅತ್ಯಗತ್ಯ. ಕೇವಲ ಅರ್ಜುನನಿಗೆ ಮಾತ್ರವೇ ಅಲ್ಲ. ಮುಂಗಾಣದೆ ಕುಳಿತ ಯಾವನಿಗೇ ಆಗಲಿ, ಇಂತಹ ಉಪದೇಶ ಚೈತನ್ಯದಾಯಕವಾಗುತ್ತದೆ. ಸ್ವಾಮಿ ವಿವೇಕಾ ನಂದರು ಇಲ್ಲಿನ ಎರಡನೆ ಶ್ಲೋಕವನ್ನು ಓದುವುದರಿಂದ ಇಡೀ ಗೀತೆಯನ್ನು ಓದಿದ ಫಲ ಬರುತ್ತದೆಯೆಂದು ಹೇಳುತ್ತಾರೆ. ಏಕೆಂದರೆ ಈ ಒಂದು ಶ್ಲೋಕದಲ್ಲಿ ಇಡೀ ಗೀತೆಯ ಸಂದೇಶ ಹೆಪ್ಪುಗಟ್ಟಿ ಕುಳಿತಿದೆ, ಇಂತಹ ಉಪದೇಶವನ್ನು ನೀಡಬಲ್ಲವನು ನಿಜವಾದ ಗುರು, ಮಹಾಗುರು, ಲೋಕ ಗುರು.

ಕಠೋಪನಿಷತ್ತು ಗುರುವನ್ನು ಆಯ್ದುಕೊಳ್ಳುವವರಿಗೆ ಈ ಎಚ್ಚರಿಕೆಯನ್ನು ನೀಡುತ್ತದೆ—

'ಅವಿದ್ಯಾಯಾಂ ಅಂತರೇ ವರ್ತಮಾನಾಃ
ಸ್ವಯಂ ಧೀರಾಃ ಪಂಡಿತಂ ಮನ್ಯಮಾನಾಃ
ದಂದ್ರಮ್ಯ ಮಾಣಾಃ ಪರಿಯಂತಿ ಮೂಢಾಃ
ಅಂಧೇನೈವ ನೀಯಮಾನಾ ಯಥಾಂಧಾಃ

ಮೂಢರು ಅವಿದ್ಯೆಯ ಮಧ್ಯದಲ್ಲಿ ಇರುವವರಾಗಿ, ತಾವೇ ಧೀರರು, ಪಂಡಿತರು–ಎಂದು ತಿಳಿದುಕೊಂಡು ವಕ್ರಗತಿಯಲ್ಲಿ ನಡೆಯುತ್ತಾರೆ, ಅವರನ್ನು ಅನುಸರಿಸುತ್ತಿರುವವರು, ಕುರುಡನು ಕರೆದುಕೊಂಡು ಹೋಗುತ್ತಿರುವ ಕುರುಡರಂತೆ ಗುರಿಯಿಲ್ಲದೆ ತೊಳಲುವ ಮೂಢರಾಗುತ್ತಾರೆ, ಆದರೆ ಶ್ರೀಕೃಷ್ಣನು ಪರಮಜ್ಞಾನಿ. ಆದ್ದರಿಂದಲೇ ಅರ್ಜುನನು ಆತನ ಮಾರ್ಗದರ್ಶನವನ್ನು ಕೋರುತ್ತಾ 'ಸ್ವಾಮಿ, ಮೋಹಯುಕ್ತವಾದ ನನ್ನ ಮನಸ್ಸು ಯಾವುದು ಶ್ರೇಯಸ್ಕರವೆಂಬುದನ್ನು ತಿಳಿಯುವ ಸ್ಥಿತಿಯಲ್ಲಿಲ್ಲ. ನಾನು ನಿನಗೆ ಶರಣಾಗಿದ್ದೇನೆ. ಯಾವುದು ಸರಿ ಎಂಬುದನ್ನು ನನಗೆ ಬೋಧಿಸು'. ಎಂದು ಕೇಳಿಕೊಂಡ. ಆಗ ಶ್ರೀ ಕೃಷ್ಣನು 'ನೈತತ್ತ್ವಯ್ಯುಪಪದ್ಯತೇ'–ಇದು ನಿನಗೆ ಯೋಗ್ಯವಲ್ಲ– ಎಂದು ಹೇಳಿ, ಕ್ಷತ್ರಿಯನಿಗೆ ಯೋಗ್ಯವಾದ ಯುದ್ಧವನ್ನು ಕೈಕೊಳ್ಳುವಂತೆ ತಿಳಿಸಿ. ಸತ್ಯ

ಜ್ಞಾನವನ್ನು ಉಪದೇಶಿಸಿದ, ಅದು ಮುಗಿದ ಮೇಲೆ ಅರ್ಜುನನನ್ನು ಕುರಿತು ಆತ 'ನಿನ್ನ ಮನಸ್ಸು ಶಾಂತವಾಯಿತೆ? ನಿನ್ನ ಸಂದೇಹ ನಿವಾರಣೆಯಾಯಿತೆ?

ಕಚ್ಚಿದೇತತ್ ಶ್ರುತಂ ಪಾರ್ಥ ತ್ವಯ್ಯೈಕಾಗ್ರೇಣ ಚೇತಸಾ
ಕಚ್ಚಿದಜ್ಞಾನ ಸಂಮೋಹಃ ಪ್ರಣಷ್ಟಸ್ತೇ ಧನಂಜಯ

ಅಯ್ಯಾ, ನಾನು ಹೇಳಿದುದನ್ನು ಏಕಾಗ್ರಚಿತ್ತದಿಂದ ಕೇಳಿದೆಯಲ್ಲವೆ? ನಿನ್ನ ಅಜ್ಞಾನಮೂಲವಾದ ಭ್ರಾಂತಿ ತೊಲಗಿತೆ?' ಎಂದು ಕೇಳಿದ. ಆಗ ಅರ್ಜುನ ಸಂತೋಷದಿಂದ—

'ನಷ್ಟೋ ಮೋಹಃ ಸ್ಮೃತಿರ್ಲಬ್ಧಾ ತ್ವತ್ಪ್ರಸಾದಾತ್ ಮಯಾಚ್ಯುತ
ಸ್ಥಿತೋಽಸ್ಮಿ ಗತ ಸಂದೇಹಃ ಕರಿಷ್ಯೇ ವಚನಂ ತವ

ಹೇ ಅಚ್ಯುತ, ನಿನ್ನ ಅನುಗ್ರಹದಿಂದ ನನ್ನ ಮೋಹ ನಾಶವಾಯಿತು. ನನ್ನ ನೆನಪನ್ನು ನಾನು ಪಡೆದಿದ್ದೇನೆ, ನನ್ನ ಸಂದೇಹಗಳು ನಿವಾರಣೆಯಾಗಿ ನಾನು ಸ್ಥಿರವಾಗಿದ್ದೇನೆ, ನಿನ್ನ ಮಾತನ್ನು ನಾನು ಪಾಲನೆ ಮಾಡುತ್ತೇನೆ' ಎನ್ನುತ್ತಾನೆ.

ಕಠೋಪನಿಷತ್ತಿನಲ್ಲಿ ಹೇಳುವಂತೆ—
'ಆಶ್ಚರ್ಯೋ ವಕ್ತಾ ಕುಶಲೋಽಸ್ಯ ಲಬ್ಧಾ
ಆಶ್ಚರ್ಯೋ ಜ್ಞಾತಾ ಕುಶಲಾನು ಶಿಷ್ಟಃ

ಆಶ್ಚರ್ಯಕರನಾದ ಶಿಷ್ಯನೂ ಆಶ್ಚರ್ಯಕರನಾದ ಗುರುವೂ ಪರಸ್ಪರ ಸೇರಿದಾಗ ಮಹಾ ವಿವೇಕಜ್ಞಾನ ಉದಿಸುತ್ತದೆ', ಇಲ್ಲಿ ಶಿಷ್ಯನೂ ಮಹಾತ್ಮ, ಗುರುವೂ ಮಹಾತ್ಮ.

[ಮೈಸೂರು ಆಕಾಶವಾಣಿಯ ಕೃಪೆಯಿಂದ]

X X X X X X

೩೫. ಭಗವಾನ್ ಮಹಾವೀರರು

—ಶ್ರೀ ಪಂಡಿತ ಕೆ. ಭುಜಬಲಿ ಶಾಸ್ತ್ರಿ, ಮೂಡಬಿದಿರೆ

ಆರ್ಯರು ಭಾರತಕ್ಕೆ ಬಂದ ಕಾಲದಲ್ಲಿ ಅವರ ಸಂಖ್ಯೆ ಹೆಚ್ಚಿರಲಿಲ್ಲ, ಆದರೆ ಅವರೆಲ್ಲರೂ ಒಂದೇ ಸ್ಥಳದಲ್ಲಿ ನಿಲ್ಲದೆ, ಕ್ರಮವಾಗಿ ಬೇರೆ ಬೇರೆ ಸ್ಥಳಗಳಲ್ಲಿ ಹರಡಿದರು. ಹೀಗೆ ಹರಡಿ ಅವರ ಬೇರೆ ಬೇರೆ ಶಾಖೆಗಳಾದುವು ಹಾಗೂ ಕಾಲ ಮತ್ತು ಸ್ಥಳಗಳ ಪ್ರಭಾವ ದಿಂದ ಅವರ ಧಾರ್ಮಿಕ ಆಚಾರಗಳಲ್ಲಿಯೂ ಭೇದವುಂಟಾಯಿತು, ಆರ್ಯರು ಒಬ್ಬ ಈಶ್ವರನ ಉಪಾಸಕರಾಗಿದ್ದೂ, ಪ್ರಕೃತಿಯ ವಿವಿಧ ಅದ್ಭುತ ಶಕ್ತಿಗಳಲ್ಲಿ ಈಶ್ವರನ ನಾನಾ ರೂಪಗಳನ್ನು ಕಲ್ಪಿಸಿ, ಅವುಗಳಲ್ಲಿ ದೇವಿ ದೇವತೆಗಳ ರೂಪವನ್ನು ಕಂಡು ದೇವಿ ದೇವತೆಗಳ ರೂಪದಲ್ಲಿ ಅವರ ಆರಾಧನೆಯನ್ನು ಮಾಡುತ್ತಿದ್ದರು. ಆದುದರಿಂದಲೇ ಆರ್ಯರಿಗೆ ವೃಕ್ಷ. ಪಶು, ನದಿ. ಸಮುದ್ರ ಮತ್ತು ನಾಗ ಮೊದಲಾದುವುಗಳೆಲ್ಲಾ ಪೂಜನೀಯ ವಾದುವು,

ಈ ಕಾಲ್ಪನಿಕ ದೇವಿದೇವತೆಗಳನ್ನು ಸಂತೋಷಪಡಿಸುವುದಕ್ಕೋಸ್ಕರ ಅವರು ಯಜ್ಞಕ್ಕೆ ವಿಶೇಷ ಪ್ರೋತ್ಸಾಹವನ್ನು ನೀಡಿದರು. ಆದರೆ ಕಾಲಾಂತರದಲ್ಲಿ ಈ ಧಾರ್ಮಿಕ ಮೂಲ-ಭಾವನೆಯಲ್ಲಿಯೂ ಪರಿವರ್ತನೆಯಾಯಿತು. ಯಜ್ಞವು ಆರ್ಯರಿಗೆ ಸ್ವರ್ಗಾದಿ ಸುಖವನ್ನು ನೀಡುವ ಸಾಧನವಾಯಿತು. ಅವರು ತಮ್ಮ ಯಜ್ಞಗಳಲ್ಲಿ ಸಾವಿ ರಾರು ಮೂಕ, ನಿರಪರಾಧಿ, ಅನಾಥ ಪಶುಗಳನ್ನು ಬಲಿಕೊಡಲಾರಂಭಿಸಿದರು. ಆ ಬಲಿ ಗಳಲ್ಲಿ ಅವರು ದೇವಿದೇವತೆಗಳು ಪ್ರಸನ್ನರಾಗುವರೆಂದು ನಂಬಿದರು. ಅಷ್ಟೇ ಅಲ್ಲ; ಆ ಯಜ್ಞಗಳಿಂದ ಸ್ವರ್ಗಾದಿ ಸುಖಗಳ ಬಾಗಿಲು ತಾನಾಗಿ ತೆರೆಯಲ್ಪಡುವುದೆಂದು ನಂಬಿದರು. ಹೀಗೆ ಭಾರತದಲ್ಲಿ ಘೋರ ಹಿಂಸೆಯು ಮಿತಿಮೀರಿ ಬಳೆಯಿತು. ಆ ಕಾಲದಲ್ಲಿ ಕೇವಲ ಪೂಜಾದಿ ಕಾರ್ಯಗಳಲ್ಲಿ ಮಾತ್ರ ಹಿಂಸೆಯು ನಡೆಯದೆ, ಲೌಕಿಕ-ವ್ಯವಹಾರಗಳಲ್ಲಿಯೂ ಹಿಂಸೆಯ ಪ್ರಚಾರವು ವಿಪರೀತವಾಯಿತು; ಹೀಗೆ ಇಲ್ಲಿ ಪೂಜೆ, ಆರಾಧನೆ, ಸಂಸ್ಕಾರ, ಉತ್ಸವ ಮೊದಲಾದುವುಗಳಲ್ಲಿಯೂ ಹಿಂಸೆಯು ತಾಂಡವವಾಡತೊಡಗಿತು,

ಆರ್ಯರು ತಮ್ಮ ಸೌಕರ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಕಾರ್ಯಗಳನ್ನು ವಿಭಾಗಿಸಿಕೊಂಡು. ಒಂದೊಂದು ಕಾರ್ಯವನ್ನು ಅವರವರ ಯೋಗ್ಯತೆಗನುಗುಣವಾಗಿ ಒಂದೊಂದು ವರ್ಗಕ್ಕೆ ವಹಿಸಿಕೊಟ್ಟರು, ಮುಂದೆ ಆ ವರ್ಗಗಳೇ ಬ್ರಾಹ್ಮಣ. ಕ್ಷತ್ರಿಯ, ವೈಶ್ಯ ಮತ್ತು ಶೂದ್ರವೆಂಬ ಹೆಸರುಗಳಿಂದ ಬೇರೆ ಬೇರೆ ನಾಲ್ಕು ವರ್ಣಗಳಾದುವು. ಕಾಲ ಕ್ರಮವಾಗಿ ಆ ವರ್ಣಗಳಲ್ಲಿ ಮೇಲು ಕೀಳು ಭಾವನೆಗಳು ಹುಟ್ಟಿಕೊಂಡುವು. ಬ್ರಾಹ್ಮಣ

ಮತ್ತು ಕ್ಷತ್ರಿಯರು ತಾವು ಮೇಲಿನವರೆಂದು ತಿಳಿದು ವೈಶ್ಯ ಮತ್ತು ಶೂದ್ರರನ್ನು ಕೀಳು ದೃಷ್ಟಿಯಿಂದ ನೋಡಲಾರಂಭಿಸಿದರು ತದನುಸಾರ ಅವರೊಡನೆಯ ವ್ಯವಹಾರವೂ ಕಲ್ಪಿತವಾಯಿತು. ಅವರು ಶೂದ್ರರು, ದಾಸರು ಹಾಗೂ ಸ್ತ್ರೀಯರನ್ನು ಕೇವಲ ಕೀಳು ದೃಷ್ಟಿಯಿಂದ ನೋಡುತ್ತಿದ್ದುದು ಮಾತ್ರವಲ್ಲ, ಅವರನ್ನು ಸಾಮಾನ್ಯ ಮಾನವೀಯ ಅಧಿಕಾರದಿಂದಲೂ ವಂಚಿತರನ್ನಾಗಿ ಮಾಡಿದರು. ಅವರಿಗೆ ಯಾವ ಧಾರ್ಮಿಕ ಅಧಿಕಾರವೂ ಸಿಗುತ್ತಿರಲಿಲ್ಲ. ಪರಿಣಾಮವಾಗಿ ಕಾಲಕ್ರಮದಿಂದ ಪರಸ್ಪರ ದ್ವೇಷವು ಬೆಳೆದು ಪರಸ್ಪರ ಜಗಳವು ಪ್ರಾರಂಭವಾಯಿತು, ಇದರ ಪ್ರಭಾವ ರಾಜನೀತಿಕ್ಷೇತ್ರದಲ್ಲಿಯೂ ಹರಡಿತು: ಅದರಲ್ಲಿಯೂ ವಿಷಮ ಪರಿಸ್ಥಿತಿಯು ಉಂಟಾಯಿತು. ಸುತ್ತಲೂ ಹಿಂಸೆ, ಅಸತ್ಯ, ಶೋಷಣೆ ಮತ್ತು ಅತ್ಯಾಚಾರ-ಅನಾಚಾರಗಳ ಸಾಮ್ರಾಜ್ಯವೇ ಉದಯವಾಯಿತು. ಧರ್ಮದ ಹೆಸರಲ್ಲಿ ಮನುಷ್ಯನು ಅದರ ವಿಚಾರಗಳ ಗುಲಾಮನಾದ. ಮಾನವಾಧಿಕಾರ ಭ್ರಷ್ಟನಷ್ಟವಾಗಿ ವ್ಯಕ್ತಿಯ ಸ್ವತಂತ್ರತೆಯ ಪ್ರಶ್ನೆಯೇ ಉಳಿಯಲಿಲ್ಲ. ಎಲ್ಲಾ ಕಡೆಗಳಲ್ಲಿ ಅರಾಜಕತೆಯು ಹರಡಿತು. ಮನುಷ್ಯನಲ್ಲಿ ನಂಬಿಕೆ ಮತ್ತು ಶ್ರದ್ಧೆಗಳು ನಷ್ಟವಾದುವು.

ಧರ್ಮಗುರುಗಳು ಸ್ವಾರ್ಥಿಗಳಾದರು! ದೇಶದ ಪರಿಸ್ಥಿತಿ ಕರುಣಾಜನಕವಾಯಿತು. ಅನಾಥ, ಮೂಕ ಪಶುಗಳು ಒಬ್ಬ ದಯಾಳು ಮಹಾಪುರುಷನ ಅವತಾರವನ್ನು ನಿರೀಕ್ಷಿಸತೊಡಗಿದುವು, ಅಹಿಂಸೆ, ಸತ್ಯ, ಅಪರಿಗ್ರಹ ಮೊದಲಾದ ಮಾನವೋಚಿತ ಗುಣಗಳು ಮೃತಪ್ರಾಯವಾದುವು. ಸರ್ವೋದಯದ ಭಾವನೆಯು ನಾಶವಾಯಿತು, ಜೀವನದ ಉಜ್ವಲತೆಯು ನಷ್ಟವಾಗತೊಡಗಿತ್ತು. ಜನತೆಯು ಅಶಾಂತಿಗೆ ಬಲಿಯಾಗಿ ಒಬ್ಬ ಯುಗಪುರುಷನ ಪ್ರತೀಕ್ಷೆಯಲ್ಲಿತ್ತು. ಅಂತಹ ಭಯಂಕರ ಪರಿಸ್ಥಿತಿಯಲ್ಲಿ ವೈಶಾಲಿಯ ಕುಂಡಲಗ್ರಾಮ ಅಥವಾ ಕುಂಡಪುರದ ಜ್ಞಾತೃವಂಶೀಯ ರಾಜಮನೆತನದಲ್ಲಿ ಕ್ರಿ. ಪೂ. ೫೯೯ ವರ್ಷ ಪೂರ್ವದಲ್ಲಿ ವರ್ಧಮಾನನೆಂಬ ಒಬ್ಬ ತೇಜಸ್ವಿ ಬಾಲಕನು ಜನ್ಮತಾಳಿದನು, ಅದು ಚೈತ್ರ ಮಾಸ ಶುಕ್ಲಪಕ್ಷದ ತ್ರಯೋದಶಿಯ ದಿನ. ಮಧ್ಯರಾತ್ರಿಯ ಸಮಯವಾಗಿತ್ತು.

ಬಾಲಕನ ಜನನದಿಂದ ತಂದೆ ರಾಜ ಸಿದ್ಧಾರ್ಥ ಮತ್ತು ತಾಯಿ ತ್ರಿಶಲಾದೇವಿಯು ಪುಲಕಿತರಾದುದು ಮಾತ್ರವಲ್ಲ; ಈ ಬಾಲಕನ ಜನನದಿಂದ ಸಂಪೂರ್ಣ ರಾಜ್ಯವೇ ಆನಂದ ಸಾಗರದಲ್ಲಿ ಮುಳುಗಿತು, ತಾಯಿಯ ಹೊಟ್ಟೆಯಲ್ಲಿ ಬಂದ ಕಾಲದಿಂದಲೇ ವಂಶದ ಸುಖ ಸಮೃದ್ಧಿ ಹಾಗೂ ಮಾನಮರ್ಯಾದೆಗಳಲ್ಲಿ ಆಶ್ಚರ್ಯಜನಕವಾದ ವೃದ್ಧಿಯಾದುದರಿಂದ ಬಾಲಕನ ಹೆಸರು ಅವನ ಗುಣಾನುರೂಪ ವರ್ಧಮಾನನೆಂದು ಇಡಲಾಯಿತು. ಯದ್ಯಪಿ ಮುಂದೆ ಈ ವರ್ಧಮಾನನು ಮಹಾವೀರನೆಂಬ ಹೆಸರಿಂದಲೇ ಪ್ರಸಿದ್ಧನಾದನು, ಇಷ್ಟೇ ಅಲ್ಲ; ವರ್ಧಮಾನ ಬೇರೆ ಬೇರೆ ಸಾರ್ಥಕ ಗುಣಗಳಿಂದಾಗಿ ಮಹಾವೀರನ ಹೊರತು

ಅವನು ಸನ್ಮತಿ, ವೀರ ಮತ್ತು ಅತಿವೀರ ಎಂಬ ಹೆಸರುಗಳಿಂದಲೂ ಸಂಬೋಧಿಸಲ್ಪಡುತ್ತಿದ್ದನು. ಜೀವನದ ಅಂತಿಮ ವಿಕಾಸದ ತನಕ ಬೆಳೆಯುತ್ತಲೇ ಹೋದುದರಿಂದ ಅವರು ವರ್ಧಮಾನರೆಂದೂ, ಅವರ ಜ್ಞಾನ ಸುನಿರ್ಮಲವಾದುದರಿಂದ ಸನ್ಮತಿಯೆಂದೂ ಅವರು ಕರೆಯಲ್ಪಟ್ಟರು. ಮಹಾವೀರರು ವಾಸ್ತವವಾಗಿ ವೀರರಿಂದ ಅತಿವೀರರು ಹಾಗೂ ಅತಿವೀರರಿಂದ ಮಹಾವೀರರಾದರು. ಪಿತೃಕುಲದ ಅಪೇಕ್ಷೆಯಿಂದ ವರ್ಧಮಾನರು ಜ್ಞಾತೃಪುತ್ರ ಅಥವಾ ಣಾತಪುತ್ತ ಮತ್ತು ಕಾಶ್ಯಪರೆಂದೂ ಸಂಬೋಧಿಸಲ್ಪಡುತ್ತಿದ್ದರು. ಇದೇ ಪ್ರಕಾರ ಮಾತೃಕುಲದ ಅಪೇಕ್ಷೆಯಿಂದ ಅವರು ಲಿಚ್ಛವೀಯ ಮತ್ತು ವೈಶಾಲೀಯ ಎಂದೂ ಕರೆಯಲ್ಪಟ್ಟಿರುವುದುಂಟು.

ಮಹಾವೀರರು ರಾಜಕುಮಾರೋಚಿತವಾದ ಬಾಲ್ಯ ಜೀವನವನ್ನು ಕಳೆದು ಯೌವನದಲ್ಲಿ ಕಾಲಿಟ್ಟಾಗ ಕಳಿಂಗ ದೇಶದ ಜಿತಶತ್ರು ಎಂಬ ರಾಜನ ರೂಪವತಿ ಸುಪುತ್ರಿ ಯಶೋದೆಯೊಡನೆ ಮಹಾವೀರರ ವಿವಾಹವು ಗೊತ್ತುಮಾಡಲ್ಪಟ್ಟಿತ್ತು. ಆದರೆ ಅವರ ಮನಸ್ಸು ಪ್ರಾರಂಭದಿಂದಲೇ ಸಂಸಾರ, ಶರೀರ ಮತ್ತು ಭೋಗಗಳಿಂದ ಸಂಪೂರ್ಣ ವಿರಕ್ತಿ ಹೊಂದಿದ್ದುದರಿಂದ ಮಹಾವೀರರು ಆ ವಿವಾಹಕ್ಕೆ ಸಮ್ಮತಿಸಲಿಲ್ಲ. ಲೋಕಕಲ್ಯಾಣದ ಕಡೆಗೆ ಅವರ ವಿಶೇಷ ಆಕರ್ಷಣವಿದ್ದುದರಿಂದ ಅವರು ಗೃಹಸ್ಥ ಜೀವನದಿಂದ ಮುನಿ ಜೀವನವನ್ನೇ ವಿಶೇಷವಾಗಿ ಮೆಚ್ಚಿಕೊಂಡಿದ್ದರು. ಸುಮಾರು ಮೂವತ್ತು ವರ್ಷ ಅಂದರೆ ೨೮ ವರ್ಷ, ೭ ತಿಂಗಳು ೧೨ ದಿವಸಗಳ ಅವಸ್ಥೆಯಲ್ಲಿ ಅವರು ಸಂತೋಷದಿಂದ ಕಠೋರವಾದ ಸಾಧನಮಾರ್ಗವನ್ನು ಸ್ವೀಕರಿಸಿದರು.

ಸುಮಾರು ಹನ್ನೆರಡು ವರ್ಷಗಳ ಕಠೋರವಾದ ತಪಸ್ಸಿನ ತರುವಾಯ ಅಂದರೆ ೧೨ ವರ್ಷ, ೫ ತಿಂಗಳು, ೧೫ ದಿನಗಳಲ್ಲಿ ಸುಮಾರು ೪೨ನೆ ವರ್ಷ ವೈಶಾಖ ಶುಕ್ಲ ದಶಮಿ ಅಂದರೆ ೨೬-೪-೫೫೭ ಕ್ರಿ. ಪೂರ್ವದಲ್ಲಿ ಇಂದಿನ ಬಿಹಾರ್ ಪ್ರಾಂತಕ್ಕೆ ಸೇರಿದ ಜೃಂಭಕ ಎಂಬ ಗ್ರಾಮದ ಹೊರಗೆ, ಋಜುಕೂಲಾ ನದಿಯ ತೀರದಲ್ಲಿ ಶಾಲವೃಕ್ಷದ ಕೆಳಗೆ ಮಹಾವೀರರಿಗೆ ಸಂಪೂರ್ಣ ಜ್ಞಾನ ಅಂದರೆ ಸರ್ವಜ್ಞತ್ವವು ಪ್ರಾಪ್ತವಾಯಿತು. ಅವರು ಅಂದಿನಿಂದ ಸರ್ವಜ್ಞ, ತೀರ್ಥಂಕರ, ಗಣನಾಯಕ, ಅರ್ಹಂತ, ಪರಮಾತ್ಮ, ಜಿನೇಂದ್ರ ಮೊದಲಾದ ವಿಶಿಷ್ಟ ವಿಶೇಷಣಗಳಿಗೆ ಅಧಿಕಾರಿಗಳಾದರು.

ಕಠೋರ ತಪಸ್ಸಿನ ಕಾಲದಲ್ಲಿ ಮಹಾವೀರರು ಮನುಷ್ಯರಿಂದ ದೇವತೆಗಳಿಂದ ಹಾಗೂ ಪಶುಗಳಿಂದ ಎಸಗಲ್ಪಟ್ಟ ಅನೇಕ ದುರ್ಧರ ಉಪಸರ್ಗಗಳನ್ನು ಅಂದರೆ ಕಷ್ಟಗಳನ್ನು ಸಹಿಸಬೇಕಾಯಿತು. ಆದರೂ ಆ ಉಪಸರ್ಗಗಳಿಂದ ಅವರು ತಿಲಮಾತ್ರವೂ ವಿಚಲಿತರಾಗಲಿಲ್ಲ. ಏಕೆಂದರೆ ಅವರು ವಸ್ತುತಃ ಮಹಾವೀರರಾಗಿದ್ದರು. ಜೃಂಭಕದಿಂದ ಹೊರಟು ಭಗವಾನ್ ಮಹಾವೀರರು ರಾಜಗೃಹದ ಸಮೀಪದಲ್ಲಿದ್ದ ವಿಪುಲಾಚಲಕ್ಕೆ ತಲುಪಿದರು. ಸುಯೋಗ್ಯ ಗಣಧರರ ಅಥವಾ ಗಣನಾಯಕರ ಅಭಾವದಿಂದ ೬೬ ದಿನಗಳ ವರೆಗೆ ಅವರು

ಮೌನವನ್ನು ಧಾರಣೆಮಾಡಬೇಕಾಯಿತು. ಕೊನೆಗೆ ಸರ್ವ ಶಾಸ್ತ್ರಗಳನ್ನು ತಿಳಿದು ಗೌತಮಗೋತ್ರಿಯ ಇಂದ್ರಭೂತಿಯ ಪ್ರಾಪ್ತಿಯಿಂದ ಭಗವಂತರ ಕಲ್ಯಾಣಕಾರಿ ದಿವ್ಯ ಉಪದೇಶವು ಪ್ರಾರಂಭವಾಯಿತು.

ಮಹಾವೀರರು ಸರ್ವಜ್ಞರಾಗುವ ಮೊದಲು ತಮ್ಮನ್ನು ಉಪದೇಶಕ್ಕೆ ಅನಧಿಕಾರಿಯನ್ನಾಗಿಯೇ ತಿಳಿದಿದ್ದರು. ಭಗವಂತರು ತಮ್ಮ ಉಪದೇಶವನ್ನು ಅರ್ಧಮಾಗಧಿ ಎಂಬ ಹೆಸರಿನ ಲೋಕ ಭಾಷೆಯಲ್ಲಿಯೇ ನೀಡಿದರು, ಪಂಡಿತಮಾನ್ಯ ಸಂಸ್ಕೃತ ಭಾಷೆಯಲ್ಲಿ ನೀಡಲಿಲ್ಲ. ತನ್ನ ಉಪದೇಶವನ್ನು ಶಿಕ್ಷಿತರು, ಅಶಿಕ್ಷಿತರು, ಬಾಲಕರು. ಮುದುಕರು, ನಿರ್ಧನರು, ಧನಿಕರು, ಸ್ತ್ರೀಯರು ಮತ್ತು ಪುರುಷರು ಮೊದಲಾಗಿ ಎಲ್ಲರೂ ಸುಲಭವಾಗಿ ಕೇಳಬೇಕೆಂಬುದೇ ಅವರ ಉದ್ದೇಶವಾಗಿತ್ತು. ಇದರಿಂದ ಮಹಾವೀರರ ಉಪದೇಶ ಬಹುಬೇಗ ಸರ್ವತ್ರ ಪ್ರಸಾರವಾಯಿತು, ಮಹಾವೀರರ ಉಪದೇಶ ಸಭೆಯು "ಸಮವಸರಣ" ಎಂಬ ಹೆಸರಿನಿಂದ ಪ್ರಸಿದ್ಧವಾದಿತ್ತು. ಏಕೆಂದರೆ ಅದರಲ್ಲಿ ಮನುಷ್ಯರಿಗೆ ಮಾತ್ರವಲ್ಲ; ಪಶುಪಕ್ಷಿಗಳಿಗೂ ಆಶ್ರಯವು ದೊರಕಿತ್ತು, ಆ ಸಭೆಯಲ್ಲಿ ಇಂದ್ರಭೂತಿ, ಗೌತಮ ಮೊದಲಾದ ಹನ್ನೊಂದು ಮಂದಿ ಪ್ರಧಾನ ಶಿಷ್ಯರ ನೇತೃತ್ವದಲ್ಲಿ ಮುನಿಗಳ ಸಮೂಹವು ಸಂಘಟಿತವಾಗಿತ್ತು,

ಭಗವಾನ್ ಮಹಾವೀರರ ಚಿಕ್ಕತಾಯಿ, ತ್ರಿಶಲೆಯ ತಂದಿ ಹಾಗೂ ರಾಜ ಚೇಟಕನ ಸುಯೋಗ್ಯ ಪುತ್ರಿ, ಮಹಾಸತಿ ಚಂದನೆಯೇ ಮಹಾವೀರರ ಸಾಧ್ವೀ ಸಂಘದ ಅಧ್ಯಕ್ಷೆಯಾಗಿ ನಿಯುಕ್ತರಾಗಿದ್ದರು, ಮಹಾವೀರರ ಸಂಘದಲ್ಲಿ ವರ್ಣ, ಜಾತಿ, ಲಿಂಗ ಮೊದಲಾದುವುಗಳ ಯಾವ ಭೇದವೂ ಇರಲಿಲ್ಲ. ಮಹಾವೀರರ ಅಮೂಲ್ಯ ವಿಚಾರ ೨೫೦೦ ವರ್ಷಗಳ ದೀರ್ಘ ಕಾಲದಿಂದ ಅಕ್ಷುಣ್ಣವಾಗಿ ಹರಿದುಕೊಂಡು ಬಂದಿದೆ. ವಾಸ್ತವವಾಗಿ ಮಹಾವೀರರ ವ್ಯಕ್ತಿತ್ವ ಮತ್ತು ಕೃತಿತ್ವ ಕಾಲದ ಪರಿಧಿಯೂ ಬಂಧಿಸಲ್ಪಡಲಾರದು. ಅವರ ಬಹುಮೂಲ್ಯ ಚಿಂತನ ದೇಶ ಮತ್ತು ಕಾಲ ಇವೆರಡರ ಪರಿಧಿಗಳಿಂದ ಪರಿಪೂರ್ಣರಿಕ್ತವಾಗಿದೆ. ಮಹಾವೀರರ ಸಿದ್ಧಾಂತ ದೇಶ-ವಿಶೇಷ. ವರ್ಗವಿಶೇಷ ಮತ್ತು ಯುಗವಿಶೇಷಕ್ಕೆ ಒಳಪಡಲಾರದು. ೨೫೦೦ ವರ್ಷಗಳ ಮೊದಲು ಅದು ಎಷ್ಟು ಆವಶ್ಯವಾಗಿತ್ತೋ ಅದು ಇಂದೂ ಅಷ್ಟೇ ಆವಶ್ಯಕವಾಗಿದೆ.

ಮಹಾವೀರರ ತತ್ತ್ವ ಸಂಪೂರ್ಣವಾಗಿ ನಿರ್ವಿರೋಧವಾದಿದೆ. ಅವರ ಧರ್ಮ ವರ್ಣವಿಹೀನ ಮಾನವ ಧರ್ಮ. ಪ್ರಾಣಿ ಮಾತ್ರಕ್ಕೆ ಬೇಕಾದ ಈ ಧರ್ಮ ವಿಶ್ವಧರ್ಮವಾಗಿದೆ. ಮಹಾವೀರರ ಧರ್ಮ ವರ್ಗವಿಶೇಷ, ರಾಷ್ಟ್ರವಿಶೇಷ ಹಾಗೂ ಕಾಲವಿಶೇಷಕ್ಕೆ ಸಂಬಂಧಪಟ್ಟ ಧರ್ಮವಲ್ಲ. ಮಹಾವೀರರ ಆಚಾರಶಾಸ್ತ್ರ ಎಲ್ಲಾ ದೇಶ ಹಾಗೂ ಎಲ್ಲಾ ಕಾಲಗಳಿಗೆ ಮಾನ್ಯವಾಗಿದೆ. ಇಂದಿನ ಉತ್ಪೀಡಿತ ಪ್ರಪಂಚಕ್ಕೆ ಮಹಾವೀರರಿಂದ ಬೋಧಿಸಲ್ಪಟ್ಟ ಮಾರ್ಗ ಸರ್ವಥಾ ಅನುಕರಣೀಯವಾದಿದೆ. ಇದರಿಂದಲೇ ಪ್ರಪಂಚದಲ್ಲಿ ಶಾಂತಿಯು ಸಿಗಬಲ್ಲುದು, ವಾಸ್ತವವಾಗಿ ಮಹಾವೀರರು ಸಾಮಾನ್ಯ ಮಾನವರಾಗಿರದೆ ಮಹಾಮಾನವ

ರಾಗಿದ್ದರು, ಸಾಮಾನ್ಯ ಮಾನವನಿಂದ ಮಹಾಮಾನವ ಸ್ಥಾನವನ್ನು ಏರುವುದು ಆಟದ ಮಾತಲ್ಲ. ಮಹಾವೀರರ ಜೀವನದಿಂದ ಪ್ರತಿಯೊಬ್ಬನು ಮಹಾಮಾನವನಾಗಲು ಅಮೂಲ್ಯ ಶಿಕ್ಷಣವನ್ನು ಅವಶ್ಯ ಪಡೆಯಬಲ್ಲನು. ಭಗವಾನ್ ಮಹಾವೀರರು ಗೃಹಸ್ಥ ಮತ್ತು ಮುನಿ ಇವರಿಬ್ಬರ ಮಾರ್ಗದರ್ಶಕರಾಗಿದ್ದರು. ಮಹಾವೀರರ ಜೀವನ ಶುದ್ಧ ಸ್ಫಟಿಕ ಮಣಿಯಂತೆ ನಿರ್ಮಲವಾಗಿತ್ತು. ಭಗವಾನ್ ಮಹಾವೀರರು ೭೨ ವರ್ಷ ೩ ತಿಂಗಳು ೧೪ ದಿನಗಳ ವರೆಗೆ ಅಂಗ. ವಂಗ, ಕಳಿಂಗ ಮೊದಲಾದ ದೇಶಗಳಲ್ಲಿ ತಿರುಗುತ್ತಾ ತಿರುಗುತ್ತಾ ಮಾನವ ಜಾತಿಗೆ ಮೋಕ್ಷದ ಮಾರ್ಗವನ್ನು ಬೋಧಿಸಿದರು, ಕಟ್ಟಕಡೆಗೆ ಕಾರ್ತಿಕ ಬಹುಳ ಅಮಾವಾಸ್ಯೆ ಮಂಗಳವಾರ ೧೫-೧೦-೫೨೭ ಕ್ರಿ. ಪೂರ್ವ. ಬ್ರಹ್ಮ ಮುಹೂರ್ತದಲ್ಲಿ ಪಾವಾನಗರದಲ್ಲಿ ಅವರು ಪವಿತ್ರವಾದ ನಿರ್ವಾಣವನ್ನು ಪಡೆದರು. ಆ ಕಾಲದಲ್ಲಿ ಅಪಾರ ಜನಸಮೂಹದೊಡನೆ ಲಿಚ್ಛವಿ. ಮಲ್ಲ, ಕಾಶಿ, ಕೋಶಲ ಮೊದಲಾದ ನರೇಶರು ಮಹಾ ವೈಭವದಿಂದ ಅವರ ನಿರ್ವಾಣೋತ್ಸವವನ್ನೂ ನೆರವೇರಿಸಿದರು, ಅದರ ಸವಿನೆನಪಿಗಾಗಿ ಅಂದು ರಾತ್ರಿ ದೀಪೋತ್ಸವವನ್ನೂ ಆಚರಿಸಲಾಯಿತು. ಆದರಿಂದಲೇ ಭಾರತದಲ್ಲಿ ಅಂದಿನಿಂದ ದೀಪಾವಳಿ ಹಬ್ಬವು ಪ್ರಾರಂಭವಾಯಿತು. ಮಹಾವೀರಸಂವತ್ ಭಾರತದ ಸರ್ವಪ್ರಾಚೀನ ಸಂವತ್.

ಭಗವಾನ್ ಮಹಾವೀಗರು ಒಂದು ನವೀನ ಧರ್ಮವನ್ನು ಪ್ರಚಾರಮಾಡಲಿಲ್ಲ. ಹಿಂದಿನ ೨೩ ಮಂದಿ ತೀರ್ಥಂಕರರಿಂದ ಬೋಧಿಸಲಾದ ಧರ್ಮವನ್ನೇ ಅವರು ಬೋಧಿಸಿದರು. ಆ ಹಿಂದಿನ ಧರ್ಮವನ್ನು ಮಹಾವೀರರು ಸಶಕ್ತ ಮತ್ತು ಯುಗಾನುಕೂಲವಾಗಿ ಮಾಡಿದರು. ಮಹಾವೀರರ ವಿಚಾರ ಅಥವಾ ಸಿದ್ಧಾಂತದಲ್ಲಿ ಅಹಿಂಸೆ, ಅಪರಿಗ್ರಹ ಮತ್ತು ಅನೇಕಾಂತ ಅಥವಾ ಸ್ಯಾದ್ವಾದ ಪ್ರಮುಖವಾಗಿವೆ. ಎಲ್ಲಾ ವಿಧವಾದ ವಿಕಾರಗಳನ್ನು ಜಯಿಸಿರುವುದರಿಂದ ಮಹಾವೀರರು ಜಿನರೆಂದು ಕರೆಯಲ್ಪಟ್ಟರು. ಅವರಿಂದ ಬೋಧಿಸಲ್ಪಟ್ಟ ಧರ್ಮ ಜೈನ ಧರ್ಮವೆಂದು ಪ್ರಸಿದ್ಧವಾಯಿತು. ಮಹಾವೀರರು ಪ್ರತಿಯೊಬ್ಬ ಜೀವಾತ್ಮನು ತನ್ನ ಪುರುಷಾರ್ಥದಿಂದ ಪರಮಾತ್ಮನಾಗಬಲ್ಲನೆಂದು ಹೇಳಿ, ಇದಕ್ಕೋಸ್ಕರ ಇನ್ನೊಬ್ಬರ ಆಶ್ರಯವು ಅಗತ್ಯವಿಲ್ಲವೆಂದು ಬೋಧಿಸಿದರು. ಈ ಸಂಬಂಧದಲ್ಲಿ ಪ್ರತಿಯೊಬ್ಬ ಆತ್ಮನು ಸ್ವತಂತ್ರನಾಗಿರುವನೆಂದೂ ಮಹಾವೀರರ ಮತವಾಗಿತ್ತು ಜೀವಾತ್ಮನು ಅನಾದಿಯಿಂದ ಕರ್ಮಬದ್ಧನಾಗಿರುವುದರಿಂದ ಅಶುದ್ಧನಾಗಿರುತ್ತಾನೆ. ಕಾಮ. ಕ್ರೋಧ ಮೊದಲಾದ ವಿಕಾರಗಳಿಂದ ಅವನ ಸ್ವಾಭಾವಿಕ ಗುಣಗಳು ಬೆಳಕಿಗೆ. ಬರುವುದಿಲ್ಲ. ಪರಮಾತ್ಮನು ಈ ವಿಕಾರಗಳನ್ನು ನಾಶಮಾಡಿ ತನ್ನ ಸ್ವಾಭಾವಿಕ ಗುಣಗಳನ್ನು ಪಡೆದಿರುವುದರಿಂದ ಪರಿಶುದ್ಧನಾಗಿರುತ್ತಾನೆ, ಅವನು ವೀತರಾಗಿ, ನಿರ್ವಿಕಾರಿ ಆಗಿರುವುದರಿಂದ ಪರಮಾತ್ಮನ ಉಪದೇಶವು ಅತ್ಯಂತ ಪ್ರಾಮಾಣಿಕವಾಗಿರುವುದು, ರಾಗದ್ವೇಷವೇ ಮೊದಲಾದ ವಿಕಾರಗಳುಳ್ಳ ವ್ಯಕ್ತಿಯ ಉಪದೇಶವು ಪ್ರಾಮಾಣಿಕವಾಗ

ಲಾರದು. ಏಕೆಂದರೆ ಅಂತಹವನು ಕಾಲ, ದೇಶ ಮತ್ತು ಶ್ರೋತೃಗಳನ್ನು ಲಕ್ಷ್ಯದಲ್ಲಿಟ್ಟು ಮನಸ್ಸು ಬಂದಂತೆ, ಬೇರೆ ಬೇರೆ ರೀತಿಯಲ್ಲಿಯೂ ಉಪದೇಶಮಾಡಬಹುದು. ಆದುದ ರಿಂದ ಯಾವನು ನಿರ್ದೋಷಿಯೂ ಪ್ರಾಮಾಣಿಕನೂ ಪೂರ್ಣಜ್ಞಾನಿಯೂ ಆಗಿರುವನೋ ಅವನೇ ಪರಮಾತ್ಮ, ಪರಮೇಶ್ವರ ಹಾಗೂ ಪರಮೇಷ್ಠಿ, ಮೊದಲಾದ ಹೆಸರುಗಳಿಂದ ಸಂಬೋಧಿಸಲು ಅರ್ಹನು. ಜೀವಾತ್ಮನು ಒಂದೇ ಜನ್ಮ ಅಥವಾ ಭವದಲ್ಲಿ ಪರಮಾತ್ಮ ನಾಗುವುದಿಲ್ಲ, ಉತ್ತರೋತ್ತರ ಆತ್ಮ ವಿಕಾಸವನ್ನು ಹೊಂದಿಯೇ ಶುದ್ಧ ಪರಮಾತ್ಮ ನಾಗುತ್ತಾನೆ. ಉತ್ತರೋತ್ತರ ಆತ್ಮವಿಕಾಸವನ್ನು ಹೊಂದಿಯೇ ಎಲ್ಲಾ ಮುಕ್ತಾತ್ಮರೂ ಅನೇಕ ಜನ್ಮಗಳಲ್ಲಿ ತಮ್ಮ ಆತ್ಮನನ್ನು ವಿಕಾಸಗೊಳಿಸುತ್ತಾ ಕೊನೆಯ ಭವದಲ್ಲಿ ಮುಕ್ತರಾ ಗಿರುವರು. ತನ್ನನ್ನು ಸುಧಾರಿಸುವುದು ತನ್ನ ಕೈಯಲ್ಲಿದೆ, ತನ್ನ ಸುಖ ಅಥವಾ ದುಃಖಗಳ ಜನ್ಮದಾತನು ತಾನೇ ಆಗಿರುವನು,

"ನಿಜಾರ್ಜಿತಂ ಕರ್ಮ ವಿಹಾಯ ದೇಹಿನಃ .
ನ ಕೋಽಪಿ ಕಸ್ಯಾಪಿ ದದಾತಿ ಕಿಂಚನ ।
ವಿಚಾರಯನ್ನೇವಮನನ್ಯ ಮಾನಸಃ ।
ಪರೋ ದದಾತೀತಿ ವಿಮುಂಚ ಶೇಮುಷೀಂ ॥
ಸ್ವಯಂ ಕೃತಂ ಕರ್ಮ ಯದಾತ್ಮನಾ ಪುರಾ,
ಫಲಂ ತದೀಯಂ ಲಭತೇ ಶುಭಾಶುಭಂ ।
ಪರೇಣ ದತ್ತಂ ಯದಿ ಲಭ್ಯತೇ ಸ್ಫುಟಂ ।
ಸ್ವಯಂ ಕೃತಂ ಕರ್ಮ ನಿರರ್ಥಕಂ ತದಾ ॥"

ಇನ್ನು ಭಗವಾನ್ ಮಹಾವೀರರ ಅಹಿಂಸೆಯೆ ಮೊದಲಾದ ಮುಖ್ಯ ತತ್ವಗಳನು ತೆಗೆದುಕೊಳ್ಳೋಣ. ಯಾವುದಾದರೊಂದು ಪ್ರಾಣಿಯ ಪ್ರಾಣಗಳನ್ನು ಅಪಹರಿಸುವುದೇ ಹಿಂಸೆಯಲ್ಲ. ಅಸತ್ಯ, ಕಳವು, ವ್ಯಭಿಚಾರ ಮೊದಲಾದುವುಗಳೂ ಹಿಂಸೆಯೇ ಆಗಿವೆ. ಹಿಂಸೆ ಅಹಿಂಸೆಗಳ ನಿರ್ಣಯಕ್ಕೋಸ್ಕರ ಬಾಹ್ಯ ಕ್ರಿಯೆಗಳು ಗೌಣವಾದಿದ್ದು, ಮಾನಸಿಕ ಕ್ರಿಯೆಗಳು ಅಥವಾ ಪರಿಣಾಮಗಳು ಪ್ರಧಾನವಾಗಿವೆ. ಒಬ್ಬ ವ್ಯಕ್ತಿ ಬಾಹ್ಯ ಹಿಂಸೆಯನ್ನು ಮಾಡದೇನೇ ಹಿಂಸಕನಾಗುತ್ತಾನೆ. ಹೇಗೆಂದರೆ – ಒಬ್ಬ ಕಟುಕನು ಹಿಂಸೆಯನ್ನು ಮಾಡ ದಿದ್ದರೂ ಅವನ ಮನಸ್ಸು ಸದಾ ಹಿಂಸೆಯ ಭಾವದಿಂದ ಕಲುಷಿತವಾಗಿರುತ್ತದೆ, ಬೇರೊ ಬ್ಬನು ಹಿಂಸೆಯನ್ನು ಮಾಡಿಯೂ ಹಿಂಸಕನಾಗುವುದಿಲ್ಲ, ಹೇಗೆಂದರೆ ಒಬ್ಬ ಡಾಕ್ಟರನು ಶಸ್ತ್ರ ಚಿಕಿತ್ಸೆಯನ್ನು ಮಾಡುವಾಗ ಅವನ ಕೈಯಿಂದ ಆಕಸ್ಮಾತ್ ಒಬ್ಬನ ಪ್ರಾಣಗಳು ಹರಣವಾದರೂ ಆದನು ಹಿಂಸಕನಾಗುವುದಿಲ್ಲ. ಏಕೆಂದರೆ ಅವನ ಮನಸ್ಸಿನಲ್ಲಿ ಹಿಂಸೆ ಯನ್ನು ಮಾಡುವ ಭಾವ ಇರುವುದಿಲ್ಲ. ಇದೇಪ್ರಕಾರ ಒಬ್ಬನ ಅಲ್ಪ ಹಿಂಸೆಯೂ ಅಧಿಕ ಫಲವನ್ನೀಯುವುದು ಹಾಗೂ ಒಬ್ಬನ ದೊಡ್ಡ ಹಿಂಸೆಯೂ ಸ್ವಲ್ಪ ಫಲವನ್ನು ಕೊಡುವುದು.

ಆದುದರಿಂದ ಹಿಂಸೆ–ಅಹಿಂಸೆಗಳ ಘನಿಷ್ಠ ಸಂಬಂಧ ಬಾಹ್ಯದ ಅಪೇಕ್ಷೆಯಿಂದ ಮನಸ್ಸು ಮತ್ತು ಆತ್ಮನಿಗೆ ಸಮೀಪವಾಗಿರುವುದು' ವಾಸ್ತವವಾಗಿ ಅಹಿಂಸೆಯ ಸಂಬಂಧದಲ್ಲಿ ಮಹಾವೀರರ ವಿಚಾರ ತುಂಬಾ ಸೂಕ್ಷ್ಮವೂ ಆಳವೂ ಆಗಿರುವುದು. ಆತ್ಮನ ಪರಿಣಾಮ ಗಳು ಹನನವಾಗುವುದರಿಂದ ಮಹಾವೀರರ ವಚನಾನುಸಾರ ಅಸತ್ಯ ಮೊದಲಾದ ಪಾಪ ಗಳೂ ಹಿಂಸೆಯೇ ಆಗಿವೆ. ಕೇವಲ ಶಿಷ್ಯರಿಗೆ ಸುಲಭವಾಗಿ ತಿಳಿಸುವುದಕ್ಕೋಸ್ಕರ ಅವು ಬೇರೆ ಬೇರೆಯಾಗಿ ಹೇಳಲಾಗಿವೆ.

"ಆತ್ಮಪರಿಣಾಮ ಹಿಂಸನಹೇತುತ್ವಾತ್ ಸರ್ವಮೇವ ಹಿಂಸೈತತ್ ।
ಅನೃತವಚನಾದಿ ಕೇವಲಶಿಷ್ಯ ಬೋಧಾಯ । "

ವಸ್ತುತಃ ಕಷಾಯಗಳ ಆವೇಶದಿಂದ ದ್ರವ್ಯ ಮತ್ತು ಭಾವ ಪ್ರಾಣಗಳ ಅಪಹರ ಣವೇ ಹಿಂಸೆ. ಕಷಾಯಗಳ ಆವೇಶದ ಅಭಾವದಲ್ಲಿ ಯಾವುದಾದರೊಂದು ಪ್ರಾಣಿಯ ಪ್ರಾಣಗಳು ಅಪಹರಿಸಲ್ಪಟ್ಟರೂ ಅವನು ಅಹಿಂಸಕನೇ.

ಅಪರಿಗ್ರಹದ ಸಿದ್ಧಾಂತವೂ ಮೊದಲಿನಂತೆ ಮಾನಸಿಕ ಆಸಕ್ತಿ ಮತ್ತು ವಿರಕ್ತಿ ಗಳನ್ನೇ ಹೊಂದಿಕೊಂಡಿರುತ್ತದೆ, ಒಬ್ಬ ಬೆತ್ತಲೆ ಭಿಕ್ಷುಕನೂ ದೊಡ್ಡ ಪರಿಗ್ರಹಿ ಆಗ ಬಲ್ಲನು, ಒಬ್ಬ ಚಕ್ರವರ್ತಿಯೂ ಅಲ್ಪ ಪರಿಗ್ರಹಿ ಆಗಲು ಸಾಧ್ಯವಿದೆ. ಸ್ತ್ರೀ, ಪುತ್ರ, ಧನ. ಧಾನ್ಯ, ಆಳುಕಾಳು ಮೊದಲಾದುವುಗಳಲ್ಲಿ ನನ್ನದೆಂಬ ಮಮತ್ವ ಬುದ್ಧಿಯೇ ಪರಿಗ್ರಹ. ಆದುದರಿಂದ ಮನಸ್ಸಿನಲ್ಲಿ ಯಾವ ವಿಧವಾದ ಆಸೆಯನ್ನಿಟ್ಟುಕೊಳ್ಳದೆ ಹೊರಗಿನ ಪರಿಗ್ರಹಗಳನ್ನು ಬಿಡುವುದು ವಾಸ್ತವಿಕವಾದ ಅಪರಿಗ್ರಹ, ಏಕೆಂದರೆ ಕೇವಲ ಆಶೆಯೇ ಪರಿಗ್ರಹಣಗಳನ್ನು ಸಂಗ್ರಹಿಸುವುದು, ಸಂಗ್ರಹಿಸುವ ಆಶೆಯು ಮಿತಿಮೀರಲು ಮನುಷ್ಯನು ನ್ಯಾಯ–ಅನ್ಯಾಯ ಉಚಿತ–ಅನುಚಿತಗಳ ಮಾತನ್ನೇ ಮರೆತುಬಿಡುತ್ತಾನೆ, ಆಗ ಅವನು ಧನಪಿಶಾಚಿಯಾಗಿ ಧನದ ದಾಸನಾಗುತ್ತಾನೆ, ಪರಿಗ್ರಹದ ಮಿತಿಯಿಂದ ಮನುಷ್ಯನ ಹತ್ತಿರ ಅನವಶ್ಯಕ ಧನದ ಸಂಗ್ರಹವು ಆಗುವುದಿಲ್ಲ, ತನ್ನ ಹತ್ತಿರ ಆವಶ್ಯಕ ಧನ ಇರುವುದರಿಂದ ಜೀವನನಿರ್ವಾಹಕ್ಕೆ ಅವನಿಗೆ ಕಷ್ಟವೂ ಆಗುವುದಿಲ್ಲ. ಇಷ್ಟೇ ಅಲ್ಲ; ಆ ಮನುಷ್ಯನು ಅನವಶ್ಯಕ ಚಿಂತೆಗಳಿಂದ ಮುಕ್ತನಾಗಿ, ಶಾಂತಿಯಿಂದ ತನ್ನ ಜೀವನವನ್ನು ಸಾಗಿಸುತ್ತಾನೆ. ಪರಿಗ್ರಹ ಎಷ್ಟು ಬಳೆಯುವುದೋ ಅಷ್ಟೇ ಅಶಾಂತಿಯೂ ಬಳೆಯುವುದು. ಇಂದು ವಿಶ್ವದಲ್ಲಿ ಕಂಡುಬರುವ ಆರ್ಥಿಕ ವಿಷಮತೆಗೆ ಮನುಷ್ಯನ ಅನವಶ್ಯಕ ಸಂಚಯ ಪ್ರವೃತ್ತಿ ಹಾಗೂ ಲೋಭವೇ ಮುಖ್ಯ ಕಾರಣ. ಒಂದು ವೇಳೆ ಮನುಷ್ಯನು ತನ್ನ ಉಪಯೋಗಕ್ಕೆ ಬೇಕಾದಷ್ಟೇ ವಸ್ತುಗಳನ್ನು ಸಂಗ್ರಹಿಸಿಕೊಂಡು ಉಳಿದ ವಸ್ತುಗಳನ್ನು ಬೇರೆಯವರ ಉಪಯೋಗಕ್ಕೆ ಬಿಟ್ಟುಕೊಟ್ಟರೆ ಪ್ರಪಂಚದ ಅಭಾವ ಹಾಗೂ ಅಶಾಂತಿ ಅವಶ್ಯ ದೂರವಾಗಬಲ್ಲುದು. ಅಂತಹ ಪರಿಸ್ಥಿತಿಯಲ್ಲಿ ಸಮತಾವಾದದ ಪ್ರಶ್ನೆಯೇ ನಮ್ಮ ಮುಂದೆ ಬರುವುದಿಲ್ಲ, ಸರಕಾರಕ್ಕೆ ಹೊಸ ಹೊಸ ಕಾನೂನುಗಳನ್ನು ನಿರ್ಮಿಸಲು ಆವಶ್ಯ ಕತೆಯೂ ಇರುವುದಿಲ್ಲ, ಅಪರಿಗ್ರಹದ ಸಿದ್ಧಾಂತವೂ ಹಿಂದಿನಂತೆ ಮಾನಸಿಕ ಆಸಕ್ತಿ

ಮತ್ತು ವಿರಕ್ತಿಗಳ ಮೇಲೆಯೇ ಆಧರಿಸಿಕೊಂಡಿದೆ. ಈ ಮೋಹವನ್ನು ಕಡಿಮೆಮಾಡಿ ಪರಿಗ್ರಹದಲ್ಲಿ ಒಂದು ಮಿತಿಯನ್ನಿಟ್ಟುಕೊಳ್ಳುವುದೇ ಪರಿಮಿತ ಪರಿಗ್ರಹ,

ಭಗವಾನ್ ಮಹಾವೀರರ ಸ್ಯಾದ್ವಾದ ಅಥವಾ ಅನೇಕಾಂತ ಈ ಪ್ರಕಾರವಾಗಿದೆ. ವಸ್ತುವಿನಲ್ಲಿ ಅನೇಕ ಅಂತ ಅಂದರೆ ಧರ್ಮಗಳಿರುತ್ತವೆ, ಇಲ್ಲಿ ಅನೇಕ ಎಂಬುದರ ಅರ್ಥ ವಿವಕ್ಷಿತ ಮತ್ತು ಅವಿವಕ್ಷಿತ ಪರಸ್ಪರ ವಿರೋಧಿ ಧರ್ಮಗಳನ್ನು ತೆಗೆದುಕೊಳ್ಳಬೇಕು. ಹೇಗೆಂದರೆ ನಿತ್ಯದ ವಿರೋಧಿ ಅನಿತ್ಯ; ಏಕದ ವಿರೋಧಿ ಅನೇಕ; ಭೇದದ ವಿರೋಧಿ ಅಭೇದ; ಭಾವದ ವಿರೋಧಿ ಅಭಾವ ಮೊದಲಾದುವುಗಳು. ಈ ವಿರೋಧಿ ಧರ್ಮಗಳನ್ನು ಯಾವುದು ಗ್ರಹಣ ಮಾಡುತ್ತದೋ ಅದು ಅನೇಕಾಂತ, ಅನೇಕಾಂತ ವಾಚ್ಯ ಮತ್ತು ಸ್ಯಾದ್ವಾದ ವಾಚಕವಾಗಿದೆ. 'ಸ್ಯಾತ್' ಈ ನಿಪಾತದ ಅರ್ಥ ಕಥಂಚಿತ್ ಅಂದರೆ ಒಂದು ವಿಧದಿಂದ ಅಥವಾ ಒಂದು ಅಪೇಕ್ಷೆಯಿಂದ ಎಂದಿಟ್ಟುಕೊಳ್ಳಬೇಕು, ಒಂದು ವಸ್ತುವಿನಲ್ಲಿ ಎರಡು ವಿರೋಧಿ ಧರ್ಮಗಳು ಒಂದು ಮುಖ್ಯ ವಿವಕ್ಷೆಯಿಂದಲೇ ಇರಬಲ್ಲವು. ಹೇಗೆಂದರೆ – ಇಂದ್ರದತ್ತನು ಮಗ. ಇಲ್ಲಿ ತನ್ನ ತಂದೆಯ ಅಪೇಕ್ಷೆಯಿಂದ ಹೇಳಿದ್ದು, ಇಂದ್ರದತ್ತನು ತಂದೆ. ಇಲ್ಲಿ ತನ್ನ ಮಗನ ಅಪೇಕ್ಷೆಯಿಂದ ಹೇಳಿದ್ದು. ವಸ್ತು ನಿತ್ಯವಾಗಿದೆ. ಇಲ್ಲಿ ದ್ರವ್ಯದ ದೃಷ್ಟಿಯಿಂದ. ಒಂದೇ ಅಪೇಕ್ಷೆ ಅಥವಾ ದೃಷ್ಟಿಯಿಂದ ವಸ್ತು ನಿತ್ಯ ಹಾಗೂ ಅನಿತ್ಯ ಆಗಲು ಸಾಧ್ಯವಿಲ್ಲ. ಹೇಳುವವನು ಯಾವ ಕಾಲದಲ್ಲಿ ದ್ರವ್ಯದ ದೃಷ್ಟಿಯಿಂದ ಹೇಳುತ್ತಾನೋ ಆಗ ಪರ್ಯಾಯದ ದೃಷ್ಟಿ ಅವಿವಕ್ಷಿತವಾಗಿರುವುದರಿಂದ ಅದು ಗೌಣವಾಗಿರುವುದು. ವಸ್ತುವನ್ನು ನಿರೂಪಿಸುವಾಗ ಮೇಲೆ ಹೇಳಿದ ಎರಡು ದೃಷ್ಟಿಗಳಲ್ಲಿ ಒಂದನ್ನು ಮುಖ್ಯವಾಗಿಯೂ ಇನ್ನೊಂದನ್ನು ಗೌಣವಾಗಿಯೂ ಇಟ್ಟುಕೊಳ್ಳಬೇಕು, ಸರ್ವಥಾ ತೊರೆಯಲು ಸಾಧ್ಯವಿಲ್ಲ. ಸಮಸ್ತ ಪ್ರಪಂಚ ವಿರೋಧಿ ಮಾತುಗಳಿಂದ ತುಂಬಿರುವುದು. ಅಂತಹ ಅವಸ್ಥೆಯಲ್ಲಿ ಆ ವಿರೋಧಗಳ ನಿವಾರಣೆ ಸ್ಯಾದ್ವಾದದ ಮೂಲಕವೇ ಸಾಧ್ಯ.

ಯಾವುದಾದರೂ ಒಂದೇ ಪಕ್ಷವನ್ನು ಹಿಡಿಯುವುದರಿಂದ ಕೆಲಸವಾಗಲಾರದು, ಆಚಾರ್ಯ ಅಮೃತಚಂದ್ರಸೂರಿಗಳು ತಮ್ಮ 'ಪುರುಷಾರ್ಥ ಸಿದ್ಧ್ಯುಪಾಯ' ಎಂಬ ಗ್ರಂಥದಲ್ಲಿ ಅನೇಕಾಂತದ ಮಹಿಮೆಯನ್ನು

"ಪರಮಾಗಮಸ್ಯ ಬೀಜಂ ನಿಷಿದ್ಧಜಾತ್ಯಂಧಸಿಂಧುರ ವಿಧಾನಮ್
ಸಕಲನಯವಿಲಸಿತಾನಾಂ ವಿರೋಧಮಥನಂ ನಮಾಮ್ಯನೇಕಾಂತಮ್ ॥

ಎಂದು ಕೊಂಡಾಡಿರುವರು, ತಟಸ್ಥ ಹಾಗೂ ಮಧ್ಯಸ್ಥ ಬುದ್ಧಿಯಿಂದ ನೋಡುವುದಕ್ಕೋಸ್ಕರ ಮತ್ತು ಯೋಚಿಸುವುದಕ್ಕೋಸ್ಕರವೇ ನಮಗೆ ಮಹಾವೀರರು ಅನೇಕಾಂತ ಅಥವಾ ಸ್ಯಾದ್ವಾದವನ್ನು ದಯಪಾಲಿಸಿರುವರು. ಇದು ಅವರ ವಿಶಿಷ್ಟ ಕೊಡುಗೆಯಾಗಿದೆ. ಈ ಮಧ್ಯಸ್ಥ ದೃಷ್ಟಿಯನ್ನು ನಾವು ಸತ್ಯಗ್ರಾಹಿ ದೃಷ್ಟಿಯೆಂದೂ ಕರೆಯಬಹುದು, ಇದರ

ಅಭಿಪ್ರಾಯ ಹೇಗೆ—ನಿನ್ನ ದೃಷ್ಟಿಯಲ್ಲಿ ಸತ್ಯಾಂಶ ಇದೆಯೋ ಹಾಗೆಯೇ ನಿನ್ನ ಮುಂದಿರುವ ವ್ಯಕ್ತಿಯ ದೃಷ್ಟಿಯಲ್ಲಿಯೂ ಸತ್ಯಾಂಶವಿದೆಯೆಂದು ತಿಳಿಯಬೇಕು. ನೀನು ನಿನ್ನ ದೃಷ್ಟಿಕೋನವನ್ನು ಸತ್ಯವೆಂದೂ ಮುಂದಿರುವವನ ದೃಷ್ಟಿಕೋನವನ್ನು ಅಸತ್ಯವೆಂದೂ ತಿಳಿಯಬಾರದು. ಏಕೆಂದರೆ - ಅವನ ದೃಷ್ಟಿ ಕೋನದಲ್ಲಿರುವ ಸತ್ಯಾಂಶವನ್ನೂ ಕಂಡು ಹಿಡಿಯುವುದಕ್ಕೋಸ್ಕರ ನೀನು ಪ್ರಯತ್ನಿಸು. ಒಂದು ಮಾತು – ಅನೇಕಾಂತದ ಹೊರತು ಲೋಕ ವ್ಯವಹಾರ ನಡೆಯಲಾರದು. ಯಾರು ಅನೇಕಾಂತ ಅಥವಾ ಸ್ಯಾದ್ವಾದವನ್ನು ವಿರೋಧಿಸುವರೋ ಅವರೂ ಇದರ ಮೂಲಕವೇ ತಮ್ಮ ಪ್ರತಿ ನಿತ್ಯದ ವ್ಯವಹಾರವನ್ನು ಸಾಗಿಸುವರು. ಸಂಸಾರದಲ್ಲಿ ಕಾಣುವ ವಿರೋಧಗಳೆಲ್ಲಾ ಅನೇಕಾಂತ ಅಥವಾ ಸ್ಯಾದ್ವಾದವನ್ನು ಅಂಗೀಕರಿಸುವುದರಿಂದಲೇ ದೂರವಾಗುವುವು, ಆ ವಿರೋಧಿಗಳು ಸಾಮಾಜಿಕವಾಗಿರಲಿ, ಧಾರ್ಮಿಕವಾಗಿರಲಿ, ಅಥವಾ ರಾಜಕೀಯವಾಗಿರಲಿ. ಅವೆಲ್ಲವೂ ಸ್ಯಾದ್ವಾದವನ್ನು ಸ್ವೀಕರಿಸುವುದರಿಂದಲೇ ದೂರವಾಗುವುವು, ಸ್ಯಾದ್ವಾದದ ದೃಷ್ಟಿಯಿಂದ ಒಂದೇ ವಸ್ತುವಿನಲ್ಲಿ ವಿರೋಧಿ ಧರ್ಮಗಳ ಇರುವಿಕೆಯು ಜನರಿಗೆ ಸ್ವಲ್ಪ ಅಸಂಭವವೆಂದು ಮೊದಮೊದಲು ಕಂಡುಬರುವುದು ಸ್ವಾಭಾವಿಕ.

ಈ ಸಂದರ್ಭದಲ್ಲಿ ಯಾವುದು ನಿತ್ಯವೋ ಅದು ಅನಿತ್ಯವೂ ಆಗಿದೆಯೇ? ಯಾವುದು ವಾಚ್ಯವೋ ಅದು ಅವಾಚ್ಯವೂ ಆಗಿದೆಯೇ? ಎಂಬಿತ್ಯಾದಿ ಪ್ರಶ್ನೆಗಳು ಹುಟ್ಟುವುದು ಸ್ವಾಭಾವಿಕ. ಜೈನ ತತ್ತ್ವಜ್ಞಾನವು ಈ ವಿರೋಧಿಧರ್ಮಗಳನ್ನು ನಿರಾಕರಿಸದೆ ಸಮರ್ಥಿಸುವುದು. ಇದೇ ಸ್ಯಾದ್ವಾದದ ವೈಶಿಷ್ಟ್ಯ.

ಭಗವಾನ್ ಮಹಾವೀರರು ಮದ್ಯ, ಗಾಂಜಾ ಮೊದಲಾದ ಮಾದಕ ಪದಾರ್ಥಗಳ ಸೇವನೆಯನ್ನು ನಿಷೇಧಿಸಿರುವರು. ಈ ಪದಾರ್ಥಗಳ ಸೇವನೆಯಿಂದ ಲೋಕನಿಂದೆಯೇ ಮಾತ್ರವಲ್ಲ. ಸ್ವಾಸ್ಥ್ಯಕ್ಕೂ ಇವು ಹಾನಿಕಾರಕವು. ಇದೇ ಪ್ರಕಾರ ಜೂಜು. ಬೇಟೆ ಮೊದಲಾದ ಏಳು ವ್ಯಸನಗಳೂ ಮಹಾವೀರರ ಧರ್ಮದಲ್ಲಿ ನಿಷೇಧಿಸಲಾಗಿದೆ. ಏಕೆಂದರೆ ಈ ವ್ಯಸನಗಳಿಂದಲೂ ಮನುಷ್ಯನು ತನ್ನ ಗೌರವ ಪ್ರತಿಷ್ಠೆಯೇ ಮೊದಲಾದುವುಗಳನ್ನು ಕಳೆದುಕೊಂಡು ಕೊನೆಯಲ್ಲಿ ದುಃಖಪಡುವನು.

ಮಹಾವೀರರ ಸಿದ್ಧಾಂತದಲ್ಲಿ ಮಾಂಸಭಕ್ಷಣವೂ ಸಂಪೂರ್ಣವಾಗಿ ನಿಷೇಧಿಸಲಾಗಿದೆ, ಏಕೆಂದರೆ — 'ಬದುಕು ಹಾಗೂ ಬದುಕಗೊಡು' ಎಂಬುದೇ ಮಹಾವೀರರ ಪ್ರಧಾನ ಸಿದ್ಧಾಂತ. ಮಾಂಸಭಕ್ಷಣ ಇದಕ್ಕೆ ತೀರ ವಿರೋಧಿ, ಮಾಂಸಸೇವನೆ ಒಂದು ತಾಮಸ ಆಹಾರ. ಇದರಿಂದ ಭಕ್ಷಕನ ಮನೋವೃತ್ತಿ ತಾಮಸವಾಗುವುದು. ಜೊತೆಯಲ್ಲಿ ಆರೋಗ್ಯದ ದೃಷ್ಟಿಯಲ್ಲಿಯೂ ಇದು ಹೇಯವಾದುದು. ಇದರಿಂದ ಅನೇಕ ಅಸಾಧ್ಯ ರೋಗಗಳು ತಾವಾಗಿ ತಲೆದೋರುವುವು. ವಾಸ್ತವವಾಗಿ ಮನುಷ್ಯನು ಮಾಂಸಾಹಾರಿಯಲ್ಲ, ಅವನು ಶುದ್ಧ ಸಸ್ಯಾಹಾರಿ. ಇದಕ್ಕೆ ಅವನ ದಂತರಚನೆಯೇ ಮೊದಲಾದುವು

ಬಲಿಷ್ಠವಾದ ಸಾಕ್ಷಿಗಳು, ಮನುಷ್ಯನೇ ಮಾತ್ರವಲ್ಲ, ಆನೆ, ಎತ್ತು, ಕೋಣ, ಜಿಂಕೆ, ಗಿಳಿ ಮೊದಲಾದ ಅನೇಕ ಜಾತಿಯ ಪಶುಪಕ್ಷಿಗಳೂ ಶುದ್ಧ ಸಸ್ಯಾಹಾರಿಗಳು. ಮಾಂಸ ದಿಂದ ಶರೀರದ ಶಕ್ತಿ ಹೆಚ್ಚುತ್ತದೆಂಬ ಮಾತೂ ಯುಕ್ತಿಯುಕ್ತವಾದುದಲ್ಲ, ಆಯುರ್ವೇದ ಶಾಸ್ತ್ರದ ಪ್ರಕಾರ ತುಪ್ಪದಲ್ಲಿ ಅತ್ಯಧಿಕ ಶಕ್ತಿವರ್ಧಕ ಸತ್ವವಿರುವುದು.

"ಅನ್ನಾದಷ್ಟಗುಣಂ ಪಿಷ್ಟಂ ಪಿಷ್ಟಾದಷ್ಟ ಗುಣಂ ಪಯಃ ।
ಕ್ಷೀರಾದಷ್ಟ ಗುಣಂ ಮಾಂಸಂ ಮಾಂಸಾದಷ್ಟಗುಣಂ ಘೃತಂ ॥"

ಅನೇಕ ದೇಶವಿದೇಶಗಳ ಸುಪ್ರಸಿದ್ಧ ವೈದ್ಯರ ಮತದಂತೆ ಸ್ವಾಸ್ಥ್ಯಕ್ಕೋಸ್ಕರ ಮಾಂಸಾಹಾರ ಕ್ಕಿಂತ ಸಸ್ಯಾಹಾರವೇ ಸರ್ವಶ್ರೇಷ್ಠವಾದುದು. ವಸ್ತುತಃ ಮಹಾವೀರರ ಧರ್ಮ 'ಸರ್ವೋ ದಯತೀರ್ಥ'. ಆದುದರಿಂದಲೇ ಸುಪ್ರಾಚೀನ ಆಚಾರ್ಯರಾದ ಸಮಂತಭದ್ರರು ತಮ್ಮ "ಯುಕ್ತ್ಯನುಶಾಸನ" ಎಂಬ ಗ್ರಂಥದಲ್ಲಿ 'ಸರ್ವೋದಯಂ ತೀರ್ಥಮಿದಂ ತವೈವ' ಎಂದು ಸ್ಪಷ್ಟವಾಗಿ ಹೇಳಿರುವರು, ಪ್ರಾಯಃ ಎಲ್ಲಾ ಆಸ್ತಿಕ ಧರ್ಮಗಳು ಯಾವುದರಲ್ಲಿ ಜೀವ ಗಳಿಗೆ ಶಾಶ್ವತವಾದ ಸುಖವನ್ನು ನೀಡುವ ನೈಜ ಶಕ್ತಿಯಿದೆಯೋ! ಅದೇ ಧರ್ಮವೆಂದು ಹೇಳುವುವು. ಧರ್ಮದ ಈ ಲಕ್ಷಣ ಜೈನಧರ್ಮದಲ್ಲಿ ಪರಿಪೂರ್ಣವಾಗಿದೆ. ಜೈನಧರ್ಮದ ಪ್ರಕಾರ ಆತ್ಮನ ನಿಜ ಸ್ವಭಾವವನ್ನು ಪಡೆಯುವುದೇ ಪ್ರತಿಯೊಬ್ಬ ಆತ್ಮನ ಶಾಶ್ವತವಾದ ಸುಖವಾಗಿದೆ, ಇದರಿಂದ ಭಿನ್ನವಾದ ಸುಖ ಬೇರೊಂದಿಲ್ಲ. ಎಲ್ಲರೂ ಸಾಂಸಾರಿಕ ಸುಖವನ್ನು ಅಶಾಶ್ವತವನ್ನಾಗಿಯೂ ಹೇಯವನ್ನಾಗಿಯೂ ತಿಳಿಯುವರು.

ಹೀಗೆ ಸಮಸ್ತ ಪ್ರಾಣಿಗಳ ಸರ್ವಾಂಗೀಣ ಅಭ್ಯುದಯವನ್ನು ಸಾಧಿಸುವ ಮಹಾ ವೀರರ ಈ ಧರ್ಮವನ್ನು 'ಸರ್ವೋದಯತೀರ್ಥ' ಎಂದು ಹೇಳಿರುವುದು ನ್ಯಾಯಸಂಗತ ವಾಗಿದೆ. ಮನುಷ್ಯನು ಸುಲಭವಾಗಿ ಇಳಿದು ನದಿಯನ್ನು ದಾಟುವ ಸ್ಥಳಕ್ಕೆ ಘಾಟಿ ಅಥವಾ ತೀರ್ಥವೆಂದು ಹೆಸರು. ಅದೇ ಪ್ರಕಾರ ಜೀವನು ಇಹಲೋಕ ಹಾಗೂ ಪರಲೋಕ ಸಂಬಂಧಿ ಸಂಪೂರ್ಣ ಅಭ್ಯುದಯವನ್ನು ಸಾಧಿಸಿ ಯಾವುದರ ಮೂಲಕ ಸಂಸಾರ–ರೂಪಿ ಸಮುದ್ರವನ್ನು ದಾಟುವನೋ ಅದಕ್ಕೆ ತೀರ್ಥವೆಂದು ಹೆಸರು. ಮಹಾವೀರರ ಧರ್ಮ ಸಮಸ್ತಜೀವಗಳ ಕಲ್ಯಾಣದ ಹೊಣೆಯನ್ನು ಹೊತ್ತ ಒಂದು ಪವಿತ್ರವಾದ ತೀರ್ಥ. ಸಂಸಾರದಲ್ಲಿರುವ ಎಲ್ಲಾ ಜೀವಗಳು ಈ ತೀರ್ಥದಲ್ಲಿ ಮಿಂದು ಆತ್ಮಸಿದ್ಧಿಯನ್ನು ಪಡೆಯ ಬಲ್ಲುವು. ಈ ಧರ್ಮದಲ್ಲಿ ಯಾವ ವಿಧವಾದ ಭೇದಭಾವವೂ ಇಲ್ಲ, ಸ್ವಾರ್ಥಿ ಮನುಷ್ಯರೇ ಇದರಲ್ಲಿ ಬೇಡದ ಗೋಡೆಗಳನ್ನು ಎಬ್ಬಿಸಿರುವುದು. ಯಾವ ಧರ್ಮವು ತೀರ ಅನುದಾರ ವಾಗಿದೆಯೋ ಅದು ತನ್ನನ್ನು ವಿಶ್ವಧರ್ಮವೆಂದು ಹೇಳಿಕೊಳ್ಳಲು ಸರ್ವಥಾ ಅನಧಿಕಾರಿ. ಭಗವಾನ್ ಮಹಾವೀರರು ಮನುಷ್ಯರಿಗೆ ಮಾತ್ರವಲ್ಲ, ಪಶುಪಕ್ಷಿಗಳಿಗೂ ತಮ್ಮ ಕಲ್ಯಾಣ ಕಾರಿ ಪವಿತ್ರ ಉಪದೇಶವನ್ನು ನೀಡಿರುವುದುಂಟು. ಅವರ ಉಪದೇಶ–ಸಭೆಯಲ್ಲಿ ಯಾವ ಪ್ರಾಣಿಗೂ ತಡೆಯಿರಲಿಲ್ಲ. ಇಷ್ಟೇ ಅಲ್ಲ; ಅವರು ಎಲ್ಲರಿಗೂ ತಿಳಿಯಬೇಕೆಂಬ ಘನ ಉದ್ದೇಶದಿಂದ ಲೋಕಭಾಷೆಯಲ್ಲಿಯೇ ತಮ್ಮ ಉದ್ದೇಶವನ್ನು ನೀಡಿದರು. ಇದು ಅವರ ಉಪದೇಶದ ವೈಶಿಷ್ಟ್ಯ!

X X X X

೩೬. ಶ್ರೀ ಮಧ್ವಾಚಾರ್ಯರು

—ಡಾ. ಪಿ. ಗುರುರಾಜ ಭಟ್ಟ, ಉಡುಪಿ

ದ್ವೈತ ಮತ ಪ್ರತಿಷ್ಠಾಪನಾಚಾರ್ಯರೆಂದು ಖ್ಯಾತನಾಮರಾದ ಶ್ರೀ ಮಧ್ವಾಚಾರ್ಯರ ಚರಿತ್ರವನ್ನು ಸಾಧಾರವಾಗಿ ನಿರೂಪಿಸುವ ಸರಳ ಪ್ರಯತ್ನವಿದು. ಶ್ರೀ ಮಧ್ವಾಚಾರ್ಯರ ಮತ್ತು ಉಡುಪಿಯ ಇತಿಹಾಸದ ಮೇಲೆ ಈ ಲೇಖನ ಬೆಳಕು ಚೆಲ್ಲುತ್ತದೆ.

ಉಡುಪಿ ಎಂದೊಡನೆ ಶ್ರೀ ಕೃಷ್ಣ ಮತ್ತು ಶ್ರೀ ಮಧ್ವಾಚಾರ್ಯರ ನೆನಪು ತನ್ನಿಂದ ತಾನೇ ಬರುವ ಅನುಭವ ನಮ್ಮೆಲ್ಲರದ್ದಾಗಿದೆ. ಶ್ರೀ ಮಧ್ವಾಚಾರ್ಯರು ತನ್ನ ವೈಷ್ಣವ ಸಿದ್ಧಾಂತವನ್ನು ಉಡುಪಿ ಎಂದರೆ ರಜತಪೀಠ ಪುರದಲ್ಲಿ ಪ್ರತಿಷ್ಠಾಪಿಸಿ ಶ್ರೀ ಕೃಷ್ಣನ ಪ್ರತಿಮೆಯನ್ನು ಪ್ರತಿಷ್ಠಿಸಿ, ಎಂಟು ಮಂದಿ ಬಾಲ ಸನ್ಯಾಸಿಗಳನ್ನು ತನ್ನ ಸಿದ್ಧಾಂತದ ಪ್ರಚಾರಕ್ಕೂ ಶ್ರೀ ಕೃಷ್ಣನ ಪೂಜೆಗೂ ನಿಯಮಿಸಿದ್ದರು. ಅಂದಿನಿಂದ ಉಡುಪಿ ಭಾರತದಲ್ಲಿ ಹೆಚ್ಚಿನ ಖ್ಯಾತಿಯನ್ನು ಪಡೆಯಲುಪಕ್ರಮಿಸಿತು.

ಶ್ರೀ ಮಧ್ವಾಚಾರ್ಯರು ವಾಯುವಿನ ಅವತಾರವೆಂದು ನಂಬಿಕೆ. ಹನುಮ, ಭೀಮ, ಮತ್ತು ಪೂರ್ಣಪ್ರಜ್ಞ ಎಂಬೀ ಮೂರು ರೂಪಗಳು ವಾಯುವಿನ ಅವತಾರವೆಂದೇ ನಂಬಿಕೆ. ಅದೇನೇ ಇರಲಿ, ಶ್ರೀಮಧ್ವಾಚಾರ್ಯರು ಒಬ್ಬ ಚಾರಿತ್ರಿಕ ವ್ಯಕ್ತಿ ಎಂಬುದು ನಿರ್ವಿವಾದ. ಇವರ ಧಾರ್ಮಿಕ ಕೊಡುಗೆ ಅಪಾರವಾದುದು. ಆದುದರಿಂದ ಇವರು ಸದಾ ಮಾನ್ಯರು.

ಶ್ರೀ ಮಧ್ವಾಚಾರ್ಯರಿಗೆ ಪೂರ್ಣಪ್ರಜ್ಞ, ಆನಂದತೀರ್ಥ, ಸರ್ವಜ್ಞಾಚಾರ್ಯ, ಸುಖತೀರ್ಥ, ಅನುಮಾನತೀರ್ಥ, ನಂದತೀರ್ಥ, ದಶಪ್ರಮತಿ, ಮಹಾಭಾಷ್ಯಕಾರ ಎಂಬೀ ಹೆಸರುಗಳಿರುವುದು ಗಮನೀಯ. ಪೂರ್ಣಪ್ರಜ್ಞವೆಂಬುದು ಇವರ ಆಶ್ರಮನಾಮವೆಂದು ತಿಳಿದುಬರುತ್ತದೆ. ಧಾರ್ಮಿಕ ವಿಚಾರದಲ್ಲಿ ಶ್ರೀಮಧ್ವಾಚಾರ್ಯರು ಒಂದು ಯುಗ ಪ್ರವರ್ತಕರೆಂದು ತಿಳಿಯಬಹುದು.

ಶ್ರೀ ಮಧ್ವಾಚಾರ್ಯರ ಜನನದ ಬಗೆಗೆ ಕ್ರಿ. ಶ. 1199 ಮತ್ತು ಕ್ರಿ, ಶ. 1238 ಈ ಎರಡು ತೇದಿಗಳನ್ನು ಸ್ವೀಕರಿಸುವುದಿದೆ. ಇವುಗಳಲ್ಲಿ ಯಾವುದು ಸಮರ್ಪಕ ಎಂಬುದು ಇಂದಿಗೂ ಅನಿಶ್ಚಯವಾಗಿಯೇ ಉಳಿದರೂ ಕ್ರಿ. ಶ. 1238 ಇವರ ಜನನ ವರ್ಷವೆಂದು ಸ್ಥೂಲವಾಗಿ ಸ್ವೀಕರಿಸಲ್ಪಟ್ಟಿದೆ [ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಶ್ರೀ ಮಧ್ವಾಚಾರ್ಯರೇ ಹೇಳಿದ ಕಾಲಮಾನ ಇ. 1199. ಇದಕ್ಕೆ ಉಡುಪಿ ಮಠಗಳ 'ಕೈಫಿಯತ್' ಮೊದಲಾದವು ಅನುಮೋದಕಗಳಾಗಿವೆಯೆಂದೂ ಹೇಳುತ್ತಾರೆ. —ಸಂ]

ಶ್ರೀಮಧ್ವಾಚಾರ್ಯರು ಮಧ್ಯಗೇಹ ಭಟ್ಟರ ಪುತ್ರ, ಮಧ್ಯಗೇಹ ಎಂಬ ಹೆಸರು ಅನ್ವರ್ಥನಾಮ. 'ನಡುಮಂತಿಲ' ಎಂಬುದರ ಸಂಸ್ಕೃತ ರೂಪ 'ಮಧ್ಯಗೇಹ', ಈ 'ನಡುಮಂತಿಲ' ಕುಟುಂಬವು ಶಿವಳ್ಳಿಯ ಹಲವಾರು ಕುಟುಂಬಗಳಲ್ಲಿ ಒಂದು (ಈ ಕೌಟುಂಬಿಕ ಹೆಸರು ಇಂದಿಗೂ ಬಳಕೆಯಲ್ಲಿದೆ.) ಈ 'ನಡುಮಂತಿಲ' ಭಟ್ಟರು ಶಿವಳ್ಳಿಯ ಭಾಗವಾದ ಸಗರಿ ಎಂಬಲ್ಲಿ ಮೊದಲು ವಾಸಿಸಿದ್ದರು. ಕಾರಣಾಂತರಗಳಿಂದ 'ನಡುಮಂತಿಲ' ಭಟ್ಟರು ಕುಂಜಾರಿನ ಪಾಜಕ ಕ್ಷೇತ್ರಕ್ಕೆ ವಲಸೆ ಹೋಗಿ ಅಲ್ಲಿ ನೆಲೆಸಿದರು. ಇವರಿಗೆ ಎರಡು ಗಂಡು ಜನಿಸಿ ಅಲ್ಪಾಯುಗಳಾದುವು. ಮೂರನೆಯ ಮಗುವು ಹೆಣ್ಣು, ಪುನಃ ಪುತ್ರ ಸಂತತಿಗೋಸ್ಕರ ಶ್ರೀ ನಡುಮನೆ ಭಟ್ಟರು ಹನ್ನೆರಡು ವರ್ಷಗಳ ಕಾಲ ರಜತಪೀಠ ಪುರದ ಅಧಿವಾಸಿಯನ್ನು ಆರಾಧಿಸಿದರು, [ಇಷ್ಟರತನಕ, ಈ ಅಧಿದೇವತೆ ಈಗ ಅನಂತೇಶ್ವರವೆಂದು ಕರೆಯಲ್ಪಡುವ ಮಹಾದೇವ ಎಂದು ತಿಳಿಯಲ್ಪಟ್ಟಿದೆ. ಆದರೆ, ಇದು ಸರಿಯಲ್ಲವೆಂದು ನನ್ನ ಅಭಿಪ್ರಾಯ. ರಜತಪೀಠ ಪುರದ ಭುಜಂಗಶಯನ, ನಾರಾಯಣನೆಂದು ಸ್ಪಷ್ಟ ಉಲ್ಲೇಖ ಶ್ರೀ ಸುಮಧ್ವ ವಿಜಯದಲ್ಲಿ ಇರುವುದರಿಂದ ಅದು ಶ್ರೀ ವಾಸುದೇವ ಹಾಗೂ ಶ್ರೀ ಕೃಷ್ಣನಿರಬೇಕು. ರಜತಪೀಠ ಪುರದಲ್ಲಿ ಶ್ರೀ ಶಂಕರರ ಶಿಷ್ಯರಾದ ಶ್ರೀ ಹಸ್ತಾಮಲಕರು ಶ್ರೀ ಕೃಷ್ಣ ಪ್ರತಿಮೆಯನ್ನು ಸ್ಥಾಪಿಸಿದ ವಿಚಾರ ಶ್ರೀ ಶಂಕರ ವಿಜಯದಿಂದ ತಿಳಿದು ಬರುತ್ತದೆ.] ರಜತಪೀಠ ಪುರದ ಅಧಿವಾಸಿಯು ಸಂತುಷ್ಟನಾಗಿ ಶ್ರೀ ಭಟ್ಟರಿಗೆ ಪುತ್ರರನ್ನು ಕರುಣಿಸಿದನು. ಇವನು ವಾಸುದೇವನೆಂದು ನಾಮಕರಣ ಹೊಂದಿದನು. [ಕ್ರಿ, ಶ, 10. 11ನೇ ಶತಕದಿಂದ ಭಾಗವತ ಸಂಪ್ರದಾಯ ದಕ್ಷಿಣ ಕನ್ನಡದಲ್ಲಿ ಪ್ರಚಲಿತವಿದ್ದ ಚಾರಿತ್ರಿಕ ವಿಷಯ ಗಮನೀಯವಾದುದು. ಬಾಳೆಕುದುರು ಮತ್ತು ಎಡನೀರು ಮಠಗಳು ಅದಕ್ಕೆ ಸಾಕ್ಷಿ. ಅದ್ವೈತ ಸಂಪ್ರದಾಯದಲ್ಲಿ ವಿಷ್ಣು ಸರ್ವೋತ್ತಮತೆಯನ್ನು ಪ್ರತಿಪಾದಿಸುವ ಪಂಥವಿದು. ಶ್ರೀ ಕೃಷ್ಣನು ವಿಷ್ಣುವಿನ ಅವತಾರವಾಗಿ, ವೇಣುಗೋಪಾಲನಾಗಿ ಹಾಗೂ ನವನೀತಧಾರಿಯಾಗಿ ನಿರ್ದೇಶಿಸಲ್ಪಡುವುದಾದರೂ, ಪರಮಾತ್ಮನಾಗಿ. ವಾಸುದೇವನಾಗಿ ಚಕ್ರ, ಶಂಖ, ಗದಾ ಮತ್ತು ಪದ್ಮ ಧಾರಿ ಮೂರ್ತಿಯಾಗಿ ಆರಾಧಿಸಲ್ಪಡುವುದು ಶಾಸ್ತ್ರೀಯವಾಗಿದೆ. ಇಂತಹ ವಾಸುದೇವ ಮೂರ್ತಿಗಳು ಉಡುಪಿಯಲ್ಲಿವೆ, ಶ್ರೀ ಮಧ್ವಾಚಾರ್ಯರ ತಂದೆ ಮಧ್ಯಗೇಹ ಭಟ್ಟರು ಆರಾಧನೆ ಮಾಡುತ್ತಿದ್ದುದು ಶ್ರೀ ವಾಸುದೇವನನ್ನು. ಪಂಚಲೋಹದ ಈ ಬಿಂಬವು ಪಾಜಕ ಕ್ಷೇತ್ರದ ಮಠದಲ್ಲಿದೆ, ಈ ಬಿಂಬವು ಶ್ರೀಕೃಷ್ಣನ ಬಲಿಮೂರ್ತಿ ಇದ್ದಿರಬೇಕು, ನಮ್ಮ ಜಿಲ್ಲೆಯಲ್ಲಿ ಈ ತೆರನಾದ ಮೂರ್ತಿಗಳಲ್ಲಿ ಇದು ಪ್ರಾಚೀನವೆನ್ನಬಹುದು. ಅದಮಾರು ಮಠದಲ್ಲಿ ಪಂಚಲೋಹದ ಒಂದು ಭವ್ಯವಾದ ಬಿಂಬವಿದೆ. [ಸು, 12ನೇ ಶತಕ] ಉಡುಪಿಯ ಸಮೀಪದ ಪರ್ಕಳ ಎಂಬಲ್ಲಿ ವೇಣುಗೋಪಾಲನೆಂಬ ಹೆಸರಿನ ದೇವಳದಲ್ಲಿಯೂ ಕೊಳಲಗಿರಿಯ ಸಮೀಪವಿರುವ ಒಂದು ದೇವಾಲಯದಲ್ಲಿಯೂ ಉಡುಪಿ ಸಮೀಪ ಪಣಿಯಾಡಿಯಲ್ಲಿಯೂ ವಾಸುದೇವ ಬಿಂಬಗಳಿವೆ. ಇವೆಲ್ಲವೂ ಶೇಷನ ಮೇಲೆ ಚಕ್ರ. ಶಂಖ, ಗದಾ, ಪದ್ಮ ಧಾರಿಯಾಗಿ

ಭೋಗಾಸನದಲ್ಲಿ ಕುಳಿತ ವಿಷ್ಣುವಿನ ನಿರ್ದೇಶವಿದ್ದು, ಈ ಎಲ್ಲಾ ಬಿಂಬಗಳು ಕ್ರಿ. ಶ. 13ನೇ ಶತಕಕ್ಕಿಂತ ಹಳೆಗಾಲದ್ದಾಗಿವೆ, ಕುಂಬಳೆಯ ಸಮೀಪವಿರುವ ಅನಂತಪುರದಲ್ಲಿ ಕ್ರಿ, ಶ. 10ನೇ ಶತಕದ ಒಂದು ವಾಸುದೇವ ದೇವಾಲಯವಿದೆ, ಇದನ್ನು ಅನಂತಪದ್ಮನಾಭ ದೇವಾಲಯವೆನ್ನುತ್ತಾರೆ. ಶ್ರೀ ಮಧ್ಯಗೇಹ ಭಟ್ಟರು [ನಡುಮಂತಿಲ ಭಟ್ಟರು] ಅನನ್ಯ ಭಕ್ತಿಯಿಂದ 12 ವರ್ಷಗಳ ಕಾಲ ಶ್ರೀ ವಾಸುದೇವನನ್ನು ಆರಾಧಿಸಿ ಶ್ರೀ ಮಧ್ವಾಚಾರ್ಯರು ಜನಿಸಿದ್ದರಿಂದ ಅವರಿಗೆ ವಾಸುದೇವನೆಂಬ ಹೆಸರನ್ನಿಟ್ಟುದು ಔಚಿತ್ಯಪೂರ್ಣವಾಗಿದೆ,]

ಶ್ರೀ ಮಧ್ವಾಚಾರ್ಯರು ಪವಾಡಪುರುಷರೆಂದೂ ಸಾಂಪ್ರದಾಯಿಕವಾಗಿ ತಿಳಿದು ಬಂದಿದೆ, ಶ್ರೀ ಸುಮಧ್ವವಿಜಯದಲ್ಲಿ ಇವರ ಹಲವಾರು ಪವಾಡಗಳು ನಿರೂಪಿಸಲ್ಪಟ್ಟಿವೆ, ಐತಿಹಾಸಿಕ ಪ್ರಾಮುಖ್ಯವುಳ್ಳ ಒಂದನ್ನು ಇಲ್ಲಿ ನಮೂದಿಸಲಾಗಿದೆ; ತಾಯಿಯು ಮಗುವನ್ನು ಎತ್ತಿಕೊಂಡು ವಿವಾಹಕ್ಕೆ ಹೋದ ಸಂದರ್ಭ. ಅಲ್ಲಿಂದ ವಾಸುದೇವನು ತಪ್ಪಿಸಿಕೊಂಡು. ಕಾನನದೇವತಾ ಸದನ [ಕೊಡವೂರು], ಲಘು ನಾರಿಕೇಲ ದೇವಾಲಯ (ಬನ್ನಂಜೆ), ಇಂದ್ರ ದಿಗಾಲಯ ಮತ್ತು ಅನಂತೇಶ್ವರನನ್ನು ವಂದಿಸಿದನು. ಉಡುಪಿಯ ಇತಿಹಾಸದಲ್ಲಿ ಈ ನಾಲ್ಕು ದೇವಾಲಯಗಳು ಬಹು ವೈಶಿಷ್ಟ್ಯವುಳ್ಳವುಗಳು, ಶ್ರೀ ಮಧ್ವಾಚಾರ್ಯರ ಕಾಲಕ್ಕಿಂತ ಎಷ್ಟೋ ಹಳೆಕಾಲದ ದೇವ ಮಂದಿರಗಳಿವು. ಕುಂಜಾರಿನ ದುರ್ಗಾದೇವಿ ದೇವಾಲಯವೂ ಪ್ರಾಚೀನ.

ಶ್ರೀ ಮಧ್ಯಗೇಹ ಭಟ್ಟರು ಬಾಲಕನ ಪ್ರೌಢಿಮೆಯನ್ನು ಮೆಚ್ಚಿ ಇವನು ಅವತಾರಿ ಎಂದೇ ಬಗೆದು ಸಕಾಲದಲ್ಲಿ ಉಪನಯನವನ್ನು ಮಾಡಿದರು. ಬಾಲಕನಲ್ಲಿ ವಿಶೇಷ ತೆರನಾದ ನಿಷ್ಠೆ ಇತ್ತು.

ಒಂದು ದಿನ ಯಾರ ಗಮನಕ್ಕೂ ಬಾರದೆ ವಾಸುದೇವನು ಗುರುವನ್ನು ಹುಡುಕುತ್ತಾ ಉಡುಪಿಯ ಅನಂತೇಶ್ವರಕ್ಕೆ ಬಂದನು. ಅಲ್ಲಿ ಅಚ್ಯುತಪ್ರೇಕ್ಷಾಚಾರ್ಯರು ತನ್ನ ಶಿಷ್ಯರಿಗೆ ಪಾಠಪ್ರವಚನವನ್ನು ಮಾಡುತ್ತಿದ್ದರು, ಇವರನ್ನು ವಾಸುದೇವನು ಗುರುವಾಗಿ ವಂದಿಸಿದನು. ಕಾಲಕ್ರಮೇಣ ವಾಸುದೇವಾಚಾರ್ಯರು ಅಚ್ಯುತಪ್ರಜ್ಞರಲ್ಲಿ ವಿಧ್ಯುಕ್ತವಾಗಿ ಸನ್ಯಾಸವನ್ನು ಬೇಡಿ ಪಡೆದರು. ವಿಳಂಬಿ ಸಂ।ದ ಆಷಾಢ ಕೃಷ್ಣ ಚತುರ್ಥಿಯಂದು ಪರಮಹಂಸ ಪರಿವ್ರಾಜಕರಾಗಿ "ಪೂರ್ಣಪ್ರಜ್ಞ"ರೆಂಬ ಆಶ್ರಮನಾಮದಿಂದ ಯತಿಗಳಾದರು. ಆಶ್ರಮ ಕಾಲದಲ್ಲಿ ಇವರಿಗೆ 16 ವರ್ಷಗಳೆನ್ನಬಹುದು, ಇವರು 79 ವರ್ಷ, 6 ತಿಂಗಳು, 20 ದಿವಸ ಬಾಳಿದರು; ಯತಿ ಸಾಮ್ರಾಜ್ಯವನ್ನು ಆಳಿದರೆನ್ನಬಹುದು.

ಇವರ ದಾಕ್ಷಿಣಾತ್ಯ ಮತ್ತು ಔತ್ತರೇಯ ಪರ್ಯಟನದಿಂದ ಇವರ ಸಿದ್ಧಾಂತವು ಜನಾದರಣೀಯವಾಗಲು ಪ್ರಕ್ರಮಿಸಿತು. ತನ್ನ ಔತ್ತರೇಯ ಪರ್ಯಟನ ಕಾಲದಲ್ಲಿ ದ್ವಾರಕೆಯಲ್ಲಿ ಇವರಿಗೆ ಶ್ರೀ ಕೃಷ್ಣ ಬಿಂಬ ದೊರಕಿತು. ಅದನ್ನು ಸು, 1275-80ಕ್ಕ

ಉಡುಪಿಯಲ್ಲಿ ಪ್ರತಿಷ್ಠಿಸಿದರೆನ್ನಬಹುದು. ಈ ಮೂರ್ತಿಯು 1,500 ವರ್ಷಗಳಷ್ಟು ಪ್ರಾಚೀನವೆನ್ನಬಹುದು.

ಶ್ರೀ ಮಧ್ವಾಚಾರ್ಯರು ತನಗಿಂತ ಹಿಂದೆ ಬರೆಯಲ್ಪಟ್ಟ 21 ಭಾಷ್ಯಗಳಲ್ಲಿರುವ ದೋಷಗಳನ್ನು ಎತ್ತಿತೋರಿಸಿ, ಹೊಸ ಭಾಷ್ಯವನ್ನು ಬರೆದರು. ಶ್ರೀ ಮಧ್ವಾಚಾರ್ಯರ ಗ್ರಂಥಗಳು–ಸಾಂಪ್ರದಾಯಿಕವಾಗಿ ವಿಶೇಷ ಮಹತ್ತ್ವವನ್ನು ಪಡೆದುವು–37.

ಶ್ರೀ ಮಧ್ವಾಚಾರ್ಯರ ತತ್ತ್ವಸಾರ ಹೀಗಿದೆ: "ಅನಂತ ಗುಣವುಳ್ಳವನು ನಾರಾಯಣನೊಬ್ಬನೇ. ಅವನು ಸರ್ವೋತ್ತಮನೂ ಸರ್ವಸ್ವತಂತ್ರನೂ ಆಗಿರುವನು. ಜೀವ, ಜಡಪ್ರಪಂಚ ಅವನಧೀನ. ಪರಮಾತ್ಮನನ್ನು ತಿಳಿಯಲು ವೈರಾಗ್ಯ. ಭಕ್ತಿ, ಉಪಾಸನೆ ಮತ್ತು ಅಪರೋಕ್ಷ ಜ್ಞಾನ – ಸಾಧನೆಗಳು, ಮೋಕ್ಷದಲ್ಲಿ ಅನಂತ ತಾರತಮ್ಯ ವಿದೆ. ಆದರೆ ದುಃಖವಿಲ್ಲ, ಮುಕ್ತರು ಪರಮಾತ್ಮನಿಂದ ಭಿನ್ನರು. ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯವೆಂಬ ವಿವಿಧ ಮೋಕ್ಷಭೋಗವನ್ನು ಅನುಭವಿಸುವವರು ಮುಕ್ತರು, ದೇವನು ಬಿಂಬ, ಜೀವನು ಪ್ರತಿಬಿಂಬ, ಜೀವಿಗೆ ಕರ್ತೃತ್ವವಿಲ್ಲ, ಸ್ವಾತಂತ್ರ್ಯವಿಲ್ಲ. ಪರಮಾತ್ಮನಿಗೆ ಎರಡೂ ಇವೆ. ಜೀವರಲ್ಲೂ ಉಚ್ಚ ನೀಚ ತಾರತಮ್ಯವಿದೆ. ಜೀವ-ಜೀವ ಭೇದ, ಜೀವ-ಜಡ ಭೇದ. ಜಡ–ಜಡ ಭೇದ, ಜಡ–ಈಶ ಭೇದ. ಜೀವ-ಈಶ ಭೇದ. ಗಳಿವೆ;

ನಾರಾಯಣನ ಗುಣ ಪೂರ್ಣತ್ವವನ್ನು ಎತ್ತಿಹಿಡಿದ ಇವರ ಸಿದ್ಧಾಂತಕ್ಕೆ 'ಪೂರ್ಣ ಬ್ರಹ್ಮ ಸಿದ್ಧಾಂತ'ವೆನ್ನುತ್ತಾರೆ. ವೇದ ಪ್ರತಿಪಾದ್ಯವಾದ ಶುದ್ಧ ಭಾಗವತ ಪಂಥವನ್ನು ಶ್ರೀ ಮಧ್ವಾಚಾರ್ಯರು ಎತ್ತಿ ಹಿಡಿದರು. ವೈಷ್ಣವ ಸಿದ್ಧಾಂತವನ್ನು ಪ್ರತಿಷ್ಠಾಪಿಸಿದರು, ಜೀವಿಗಳೆಲ್ಲರೂ ಹರಿಯ ಅನುಚರರು. ಬ್ರಹ್ಮಾದಿದೇವತೆಗಳೂ ಭಗವಂತನ ದಾಸರು ಎಂದಾಗ ಹರಿದಾಸ ಪಂಥಕ್ಕೆ ಶ್ರೀ ಮಧ್ವಾಚಾರ್ಯರು ಕರ್ನಾಟಕದಲ್ಲಿ 'ಮೊದಲಿಗ'ರಾದರೆನ್ನಬಹುದು.

ಶ್ರೀ ಮಧ್ವಾಚಾರ್ಯರು ಪ್ರತಿಪಾದಿಸಿದ ಈ ತತ್ತ್ವವು ಮುಂದೆ ಮಾಧ್ವಪೀಠದಲ್ಲಿ ಶ್ರೀಪಾದರಾಜರು, ಶ್ರೀ ವ್ಯಾಸರಾಯರು, ಶ್ರೀ ವಾದಿರಾಜರು, ಶ್ರೀ ವಿಜಯೀಂದ್ರರು, ಶ್ರೀ ರಾಘವೇಂದ್ರರು–ಇವರುಗಳ ಮೂಲಕ ದಿವ್ಯ ಸಂದೇಶವಾಗಿ ಜನರ ಮನ ಮುಟ್ಟಿತ್ತು.

ಶ್ರೀ ಮಧ್ವಾಚಾರ್ಯರು ಪವಾಡ ಪುರುಷರೋ ಅಲ್ಲವೋ. ಅವತಾರ ಪುರುಷರೋ ಅಲ್ಲವೋ, ಹೊಸ ಪಂಥವನ್ನು ನಿರ್ಮಿಸಿದರೋ ಅಲ್ಲವೋ – ಇದು ಪ್ರಮುಖವಲ್ಲ. ಆದರೆ ತನ್ನ ದೈವದತ್ತವಾದ ಬುದ್ಧಿಯನ್ನು ತಾನಿದ್ದ ವಾತಾವರಣದಲ್ಲಿ ಪ್ರಯೋಗಿಸಿ ನಿರ್ವೀರ್ಯವಾದ ಸಮಾಜದಲ್ಲಿ ಒಂದು ಹೊಸ ಚೈತನ್ಯವನ್ನು, ಒಂದು ಹೊಸ ಬೆಳಕನ್ನು ತೋರಿಸಿದರು, ತನ್ನ ತತ್ತ್ವವನ್ನು ರಾಗದ್ವೇಷವಿಲ್ಲದೆ ಪ್ರತಿಪಾದಿಸಿದರು, ಇವರ ತತ್ತ್ವದ ಪ್ರತಿಪಾದನೆಯು ಅನಂತರ ಇನ್ನೊಂದು ತತ್ತ್ವ

ಮಾಡಿ ಬಂದಿಲ್ಲ. ಪ್ರಪಂಚ ಸತ್ಯ, ಮಿಥ್ಯಾವಾದದಿಂದ ಜೀವದಲ್ಲಿ ಚೈತನ್ಯ ಮೂಡಲಾರದು. ನಮ್ಮ ಜೀವನವು ವೈವಿಧ್ಯಮಯವಾದುದು, ಈ ತರನಾದ ಜೀವಕ್ಕೆ ಉತ್ಕರ್ಷ ಯಾವುದೋ ಒಂದು ಸರ್ವಶ್ರೇಷ್ಠ ಶಕ್ತಿಯಿಂದ ದೊರಕುತ್ತದೆ. ಜೀವನು ಭಕ್ತಿ, ಯೋಗ, ಕರ್ಮದ ಮೂಲಕ ತನ್ನ ಕರ್ತವ್ಯವನ್ನು ಪರಮಾತ್ಮನಿಗೆ ಧಾರೆ ಎರೆಯುವ ಧರ್ಮ ಅವನದಾಗಬೇಕೆನ್ನುವ ವಾದ ಎಷ್ಟು ಶ್ರೇಷ್ಠವಾದುದೋ ಅಷ್ಟೇ ವಾಸ್ತವ್ಯವೂ ಆಗಿದೆ. ಇವರೆಡೆಗೆ ನಮ್ಮ ಗಮನ ಅತ್ಯಗತ್ಯ,

ಶ್ರೀ ಕೃಷ್ಣನ ಉಪಾಸನೆ ಅನುಗಾಲವೂ ನಿರಂತರವೂ ನಡೆಯಬೇಕೆಂದೂ, ಈ ಚಿಂತನೆ ಜನರಲ್ಲಿ ಮೂಡುವಂತೆ ಪ್ರಚಾರ ಕಾರ್ಯ ಕ್ರಮಬದ್ಧವಾಗಿ ನಡೆಯಬೇಕೆಂದೂ ಶ್ರೀ ಮಧ್ವಾಚಾರ್ಯರು ಅಷ್ಟಮಠಗಳ ಸಂಸ್ಥೆಯನ್ನು ಸ್ಥಾಪಿಸಿದುದು ಸ್ತುತ್ಯ.

X X X X

೩೭. ಕನ್ನಡ ಸಾಹಿತ್ಯಕ್ಕೆ ಜಗನ್ನಾಥದಾಸರ ಕೊಡುಗೆ

—ಡಾ। ಸರ್ಜಾ ಚಂದ್ರಶೇಖರಯ್ಯ, ಶಿವಮೊಗ್ಗ.

ದಾಸವಾಙ್ಮಯವು ಕನ್ನಡ ಸಾಹಿತ್ಯದ ತವನಿಧಿಗಳಲ್ಲೊಂದು. ಒಂದು ಕಾಲದಲ್ಲಿ ಆತ್ಮಜ್ಞಾನಕ್ಕಾಗಿಯೂ, ವೇದಾಂತ ಬೋಧನೆಗಾಗಿಯೂ, ಸಂಸ್ಕೃತವಲ್ಲದೆ ಇನ್ನೊಂದು ಭಾಷೆ ಇಲ್ಲವೆಂಬ ಭಾವನೆ ಬಲಿತಿದ್ದಾಗ, ಕನ್ನಡವನ್ನು ಅನಾದರಣೆ ಮಾಡದೆ, ಕನ್ನಡವು ಮೈಲಿಗೆಯ ಮಾತೆಂದು ತೆಗಳದೆ ಹರಿದಾಸರು ಕನ್ನಡ ನುಡಿಯಲ್ಲಿಯೇ ಪರಮಾತ್ಮನನ್ನು ಕೀರ್ತಿಸಿದರು, ಲೋಕಕ್ಕೆ ಉಪದೇಶವನ್ನಿತ್ತರು. ಇದು ದಾಸ ಸಾಹಿತ್ಯದಿಂದ ಕನ್ನಡಕ್ಕೆ, ಕನ್ನಡ ಜನಕ್ಕೆ ಉಪಕಾರಿಯಾಗಿ ಬಂದ ಸಂಗತಿ ಎಂದು ಒಂದೆಡೆ ಪ್ರೊ. ಡಿ. ಕೆ. ಭೀಮಸೇನ ರಾವ್ ಹೇಳಿರುವುದು ಗಮನಾರ್ಹ.

ದಾಸ ಸಾಹಿತ್ಯಕ್ಕೆ ಶ್ರೀಕಾರ ಹಾಕಿದವರು ಶ್ರೀಪಾದರಾಯರು. ಅದನ್ನು ಸಮೃದ್ಧಿಯಾಗಿ ಬೆಳೆಸಿದವರು, ದಾಸ ಶ್ರೇಷ್ಠ ಪುರಂದರದಾಸರು, ಅದು ಕೆಲವು ಕಾಲದ ಅನಂತರ ಶಿಥಿಲವಾಗುವ ಸಮಯದಲ್ಲಿ ಅದಕ್ಕೆ ಸಂಜೀವನಿಯನ್ನಿತ್ತು, ಪುನಶ್ಚೇತನಗೊಳಿಸಿದವರು ಶ್ರೀ ಜಗನ್ನಾಥದಾಸರು.

ಶಾಸ್ತ್ರದೃಷ್ಟಿ, ತತ್ವವಿವೇಚನೆ, ಉದಾರತೆ, ಅನಭಿಜ್ಞರಿಗೂ ತಿಳಿಯುವಂತೆ ಹೇಳುವ ಕಳಕಳಿ, ಅಲ್ಲಲ್ಲಿ ಮಿಂಚುವ ಸಾಹಿತ್ಯಕ ಪ್ರತಿಭೆ, ಈ ದೃಷ್ಟಿಯಿಂದ ದಾಸ ಪರಂಪರೆಯಲ್ಲಿ ಜಗನ್ನಾಥದಾಸರ ಸ್ಥಾನವು ಅನುಪಮವಾದುದು, ಜಗನ್ನಾಥದಾಸರು ಸಂಸ್ಕೃತದಲ್ಲಿ ಉದ್ದಾಮ ಪಂಡಿತರು, ಚಿಕ್ಕ ವಯಸ್ಸಿನಲ್ಲಿಯೇ ಅರಮನೆ ಗುರುಮನೆಗಳಿಂದ ಸನ್ಮಾನಿತರಾದರು, ಅಂಥವರು ಕನ್ನಡಕ್ಕೆ ಒಲಿದು ಬಂದರು ಎನ್ನುವುದು ಒಂದು ಪವಾಡದ ಕಥೆ.

ಜಗನ್ನಾಥದಾಸರು:

ರಾಯಚೂರು ಜಿಲ್ಲೆಯ ಮಾನ್ವಿಯ ಬಳಿ ಇರುವ ಬ್ಯಾಗವಟ್ಟವೆಂಬ ಗ್ರಾಮದಲ್ಲಿ ಅವರು 1650ನೇ ಶಾ. ಶ, ಕೀಲಕ ಸಂವತ್ಸರದ ಶ್ರಾವಣ ಶುದ್ಧ ಬಿದಿಗೆಯಲ್ಲಿ (ತಾ. 27-7-1728) ಜನ್ಮಿಸಿದರು, ತಂದೆಯ ಹೆಸರು ನರಸಪ್ಪ. ಊರಿನ ಶ್ಯಾನುಭೋಗರಾಗಿದ್ದ ತಂದೆಯವರು, ಲೌಕಿಕ ಜೀವನದಲ್ಲಿ ಜುಗುಪ್ಸೆ ಹೊಂದಿ, 'ನರಸಿಂಹವಿಟ್ಠಲ'ನೆಂಬ ಅಂಕಿತ ಪಡೆದು ಹರಿದಾಸರಾದವರು,

ಪೂರ್ವಾಶ್ರಮದಲ್ಲಿ ಶ್ರೀನಿವಾಸನೆಂಬ ಹೆಸರುಳ್ಳ ಜಗನ್ನಾಥದಾಸರು, ಶ್ರೀ ರಾಘವೇಂದ್ರ ಮಠದ ಶ್ರೀ ವರದೇಂದ್ರ ಸ್ವಾಮಿಗಳಲ್ಲಿ ವಿದ್ಯಾಭ್ಯಾಸ ಮಾಡಿದರು. ಚಿಕ್ಕ ವಯಸ್ಸಿನಲ್ಲಿಯೇ ಸಂಸ್ಕೃತದಲ್ಲಿ ವರದೇಂದ್ರರನ್ನು ಕುರಿತು "ಶ್ರೀ ವರದೇಂದ್ರ ಪಂಚರತ್ನ"

ವೆಂಬ ಐದು ಶ್ಲೋಕಗಳನ್ನು ರಚಿಸಿ, ಗುರುಗಳಿಂದ ಭೇಷ್ ಎನ್ನಿಸಿಕೊಂಡರು. ಶ್ರೀನಿವಾಸರು ಅಗಾಧವಾದ ಶಾಸ್ತ್ರಜ್ಞಾನ, ಸಂಸ್ಕೃತ ಪಾಂಡಿತ್ಯದಿಂದ "ಶ್ರೀನಿವಾಸಾಚಾರ್ಯ"ರೆಂದು ಪ್ರಖ್ಯಾತರಾದರು. ವಿದ್ಯಾಸಂಪನ್ನರಾದರೂ, ಅದಕ್ಕೆ ತಕ್ಕ ವಿನಯವಿರಲಿಲ್ಲ, ಕನ್ನಡ ಭಾಷೆ ಎಂದರೆ ಮೈಲಿಗೆ, ಹರಿದಾಸರೆಂದರೆ ಅನಾದರಣೆ. ಈ ಅನಾದರವು ದ್ವೇಷಕ್ಕೆ ತಿರುಗಿತು. ಅಂದಿನ ಶ್ರೇಷ್ಠ ದಾಸರಾದ ವಿಜಯದಾಸರನ್ನು, ಅಹಂಕಾರದಿಂದ ಅಪಮಾನ ಮಾಡಿದರು, ಇದರಿಂದ ಅವರಿಗೆ ಅಸಾಧ್ಯವಾದ ಉದರಬೇನೆ ಬಂದಿತು. ಬೇನೆಯಿಂದ ಮರಣವು ಸಮೀಪಿಸಿತು, ದಾರಿ ಕಾಣದೆ ವಿಜಯದಾಸರನ್ನು ಮರೆಹೊಕ್ಕರು. ಪಶ್ಚಾತ್ತಾಪದಿಂದ ಅವರ ಮನಸ್ಸಿನ ಅಹಂಕಾರಗಳೆಲ್ಲವೂ ತೊಳೆದು ಹೋಯಿತು. ಮನಸ್ಸು ನಿರ್ಮಲವಾಯಿತು. ಈ ಸಂದರ್ಭದಲ್ಲಿ ವಿಜಯದಾಸರ ಶಿಷ್ಯರಾದ ಗೋಪಾಲದಾಸರು, ಗುರುವಿನ ಆಣತಿಯಂತೆ ಅವರ ಉದರಬೇನೆ ಕಳೆದಿದ್ದಲ್ಲದೆ ತಮ್ಮ ಆಯುಸ್ಸಿನಲ್ಲಿ ನಲವತ್ತು ವರ್ಷದ ಆಯುರ್ದಾನ ಮಾಡಿದರೆಂದು ಐತಿಹ್ಯವಿದೆ. ಒಂದೆಡೆ ತಮ್ಮ ಪದದಲ್ಲಿಯೇ ಜಗನ್ನಾಥದಾಸರು ಇದನ್ನು ಸ್ಪಷ್ಟಪಡಿಸುತ್ತಾರೆ. "ಗೋಪಾಲದಾಸರಾಯ, ನಿನ್ನಯ ಪಾದಾನ ಪೊಂದಿದೆನು ನಿಶ್ಚಯ, ಘೋರ ವ್ಯಾಧಿಗಳ ನೋಡಿ .... ಅಪಮೃತ್ಯುವನು ಪರಿದೆ, ಎನ್ನೊಳಗಿದ್ದ ಅಪರಾಧಗಳ ಮರೆದ" ಎಂದು ಮುಂತಾಗಿ ಹೇಳುವರು. ಶ್ರೀನಿವಾಸಾಚಾರ್ಯರೇ ಗುರುಗಳ ಅನುಗ್ರಹದಿಂದ ಜಗನ್ನಾಥದಾಸರೆಂದು ಮುಂದೆ ಪ್ರಸಿದ್ಧಿ ಪಡೆದರು: 'ಜಗನ್ನಾಥವಿಟ್ಠಲ'ನೆಂಬ ಅಂಕಿತದಲ್ಲಿ ಕೀರ್ತನೆ ಸುಳಾದಿಗಳನ್ನು ರಚಿಸಿದರು. ಭಕ್ತಿಯ ಉನ್ಮಾದದಿಂದ ಪಂಢರಾಪುರದ ವಿಟ್ಠಲನನ್ನು "ತಟಿತ್‌ಕೋಟಿ ನಿಭಕಾಯ ಜಗನ್ನಾಥ ವಿಟ್ಠಲಯ್ಯ ವಿಟ್ಠಲಯ್ಯ, ನೀ ಕರುಣಿಸದೆ ನಿರಾಕರಿಸಿದರೆನ್ನ ಸಾಕುವರಾರೊ ದಯಾಕರ ಮಾರುತಿ ......" ಎಂದು ಸ್ತುತಿಸಿದರು, ಇದು ಅವರು ರಚಿಸಿದ ಪ್ರಥಮ ಕೃತಿ ಎಂದು ಹೇಳಲಾಗಿದೆ. ಅವರ ಜೀವನವು 'ಪಂಡಿತೋಽಹಂ' ಸ್ಥಿತಿಯಿಂದ 'ಹರಿದಾಸೋಽಹಂ' ಸ್ಥಿತಿಗೆ, ಅವಿದ್ಯೆಯಿಂದ ವಿದ್ಯೆಗೆ, ತಮಸ್ಸಿನಿಂದ ಬೆಳಕಿಗೆ ಪರಿವರ್ತನವಾದ ಉಜ್ಜ್ವಲ ಕಥೆಯಾಗಿದೆ,

ಕೃತಿಗಳು :

ಜಗನ್ನಾಥದಾಸರು ಹರಿದಾಸರಾಗಿ, ಧರ್ಮಪ್ರಸಾರ ಮಾಡಿದರು. ಅದಕ್ಕಾಗಿ ಕೀರ್ತನೆ ಸುಳಾದಿ ಪದಗಳನ್ನು ರಚಿಸಿದರು. ಇದರಿಂದ ಕನ್ನಡ ಭಾಷೆಗೆ ಮಹೋಪಕಾರವಾಯಿತು. ಅವರ ಕೃತಿಗಳಲ್ಲಿ ಸುಮಾರು 150 ಕೀರ್ತನೆಗಳು, 3 ಸುಳಾದಿಗಳು, ತತ್ವಸುವಾಲಿ ಮತ್ತು ಹರಿಕಥಾಮೃತಸಾರವೆಂಬ ಗ್ರಂಥವು ಉಪಲಬ್ಧವಾಗಿದೆ. ಇದಲ್ಲದೆ ಗೀತಾ, ಬ್ರಹ್ಮಸೂತ್ರ, ಉಪನಿಷತ್ತುಗಳನ್ನು ಕನ್ನಡಿಸಿದ್ದರೆಂದು ಪ್ರತೀತಿ ಇದೆ. ಅವರದ್ದೆಂದು ಹೇಳಲಾಗಿರುವ 'ತಂತ್ರಸಾರ' ಅವರ ಗುರುಗಳಾದ ಶ್ರೀ ವರದೇಂದ್ರರಿಂದ ರಚಿತವಾಗಿದೆ ಎಂದು ಕವಿಚರಿತೆಕಾರರ ಅಭಿಪ್ರಾಯವಿದೆ.

ಓರ್ವ ನಿರ್ಗತಿಕನನ್ನು, ಧನಿಕನನ್ನಾಗಿ ಮಾಡಲು ದಾಸರು ರಚಿಸಿಕೊಟ್ಟ ನೃಸಿಂಹ ಸುಳಾದಿಯನ್ನು ಇಲ್ಲಿ ಕೊಡಲಾಗಿದೆ.

"ದುರಿತವನ ಕುಠಾರಿ, ದುರ್ಜನಕುಲವೈರಿ, ಶರಣಾಗತ ವಜ್ರ ಪಂಜರ, ಕುಂಜರ ವರ ಸಂರಕ್ಷಕ, ಜನ್ಮ ಮರಣರಹಿತ, ಮಹಿತ, ಪರಮ ಕರುಣಾಸಿಂಧು, ಭಕುತರ ಬಂಧು. ಸ್ವರತ, ಸ್ವತಂತ್ರ, ಜಗದ್ಭರಿತ, ಚಿತ್ಸುಖ ಪರಿಪೂರ್ಣ". ಈ ಸುಳಾದಿಯ ಸುಯೋಜನೆ ಎಷ್ಟು ರಮ್ಯವಾಗಿದೆ.

ಕೀರ್ತನೆಗಳು:

ಪುರಂದರ ದಾಸರಂತೆ, ಜಗನ್ನಾಥದಾಸರೂ ಒಬ್ಬ ವಾಗ್ಗೇಯಕಾರರು. ಅವರ ಕೃತಿಗಳಲ್ಲಿ ಸಾಹಿತ್ಯ ಸಂಗೀತಗಳ ಮಧುರ ಮಿಲನವಾಗಿದೆ. ಬಹುಶಃ ತತ್ವನಿಷ್ಠವಾಗಿರುವು ದರಿಂದ ಅವರ ಕೃತಿಗಳು ಪುರಂದರದಾಸರ ಪದಗಳಂತೆ ಅಷ್ಟು ಜನಪ್ರಿಯವಾಗಿಲ್ಲ. ಅವರ ಕೀರ್ತನ ಶಾರದೆಯು ಯಾವಾಗಲೂ ನೂಪುರ ತಾಳಗತಿಯೊಂದಿಗೆ ನರ್ತಿಸುವಂತೆ ತೋರು ವುದು. ಕೃತಿಯು ದೀರ್ಘವಾಗಿರಲಿ, ಲಘುವಾಗಿರಲಿ, ಎಲ್ಲ ಕಡೆಗೂ ಛಂದೋಲಯದ ಕೌಶಲ ಕಂಡುಬರುವುದು. ಪ್ರಾಸಾನು ಪ್ರಾಸಗಳ ಸಂಯೋಜನೆಯಂತೂ ಕಿವಿ, ಮನ ಗಳನ್ನು ಸೆಳೆದುಕೊಂಡು ಶ್ರೋತೃಗಳ ತಲೆಗಳನ್ನೇ ತೂಗಾಡಿಸುವುವು. ಕೀರ್ತನೆಗಳಲ್ಲಿ ಅವರು ಶ್ರೀ ವಾದಿರಾಜ, ಶ್ರೀ ವಿಜಯದಾಸ, ಶ್ರೀ ವರದೇಂದ್ರರನ್ನು ಸ್ತುತಿಸಿರುವ ಪದ ಗಳಿವೆ. ಹೆಚ್ಚಾಗಿ ಶ್ರೀ ರಾಘವೇಂದ್ರ ಸ್ವಾಮಿಗಳನ್ನು ಕುರಿತು ರಚಿಸಿದ್ದಾರೆ. "ರಾಯ ಬಾರೋ, ತಂದೆ ತಾಯಿ ಬಾರೋ" ಎಂದು ಅವರನ್ನು ಕುರಿತು ಜೋಕುಮಾರ ಪದಗಳ ದಾಟಿಯಲ್ಲಿ ಬರೆದಿರುವ ಪದ ಚೇತೋಹಾರಿಯಾಗಿದ್ದು, ಈಗಲೂ ಕನ್ನಡ ನಾಡಿನಲ್ಲೆಲ್ಲ ಜನಪ್ರಿಯವಾಗಿದೆ.

ಅವರ ಕೀರ್ತನೆಗಳನ್ನು ಹಂತ ಹಂತವಾಗಿ ಪರಿಶೀಲಿಸಿದಾಗ, ಪಾರಮಾರ್ಥ ಪಥ ದಲ್ಲಿ ಅವರು ಕ್ರಮೇಣ ಏರಿದ ಮೆಟ್ಟಲುಗಳನ್ನು ಗುರುತಿಸಬಹುದು. "ಸಿರಿರಮಣ ತವ ಚರಣ ದೊರಕುವುದು ಹೇಗಿನ್ನು, ಪರಮ ಪಾಪಿಷ್ಠ ನಾನು" ಎಂದು ಪಶ್ಚಾತ್ತಾಪದಿಂದ ತಮ್ಮನ್ನು ತಾವು ಹಳಿದುಕೊಳ್ಳುತ್ತಾರೆ. ಪರಮಾತ್ಮನನ್ನು ಸ್ಮರಿಸದೆ, ಶರಣಾಗತಿ ಹೊಂದದೆ ಅನ್ಯಗತಿ ಇಲ್ಲವೆಂದುಕೊಂಡ ದಾಸರು "ಸ್ಮರಿಸು ಸಂತತ ಹರಿಯನು, ಸ್ಮರಿಸು ಸಂತತ ಹರಿಯ ಕರುಣಾಳುಗಳ ದೊರೆಯ" ಎಂದು ಹೇಳಿಕೊಳ್ಳುತ್ತಾರೆ. ಹರಿಸ್ವರೂಪ ಭಾನವಾದ ಅನಂತರ "ಎಲ್ಲೆಲ್ಲಿ ನೋಡಿ ಮತ್ತಲ್ಲಲ್ಲೆ ನೆಲೆಸಿಹನು, ನೋಡಿ ನೋಡಿಸುತಿಹನು, ಮಾಡಿ ಮಾಡಿಸುತಿಹನು" ಎಂದು ಸರ್ವತ್ರ ಹರಿಯನ್ನು ಕಾಣುತ್ತಾರೆ.

ಅನನ್ಯಗತಿಕ ಭಾವದಿಂದ 'ಶ್ರೀನಿಕೇತನ ಪಾಲಯ ಮಾಂ ಶ್ರೀನಿಕೇತನ' ಎಂದು ಹಾಡುತ್ತಾರೆ. 'ಪಿಡಿ ಎನ್ನ ಕೈಯ ರಂಗಯ್ಯ, ಪಿಡಿಯೆನ್ನ ಕೈಯ' ಎಂದು ಮೊರೆ ಯಿಡುತ್ತಾ, 'ನಿನ್ನ ಭಕ್ತರ ಸಂಗ ಕೊಡು' ಎಂದು ಬೇಡಿಕೊಳ್ಳುತ್ತಾರೆ. ಜಗನ್ನಾಥದಾಸರು ಪಾಪ–ಪುಣ್ಯಗಳ ಬಗ್ಗೆ ವ್ಯಾಖ್ಯೆ ಮಾಡುತ್ತಾ 'ಪಾಪ-ಪುಣ್ಯಗಳು ಬರಲಾಪವೇ ನಿನ್ನನ್ನುಳಿದು ವ್ಯಾಪಕನು ನೀನು ಇರಲಾಗಿ, ತಿಳಿಯದುದೆ ಪಾಪ, ತಿಳಿಯುವುದೇ ಮಹಾಪುಣ್ಯ' ಎಂದು

ಹೇಳಿರುವುದನ್ನು ನೋಡಿದಾಗ, ಸುಪ್ರಸಿದ್ಧ ಗ್ರೀಕ್ ದಾರ್ಶನಿಕ ಸಾಕ್ರೆಟಿಸನು 'Knowledge is virtue, Ignorance is vice' ಎಂದು ಹೇಳಿರುವುದು ಜ್ಞಾಪಕಕ್ಕೆ ಬರುತ್ತದೆ. ಪಾರಮಾರ್ಥ ಮಾರ್ಗದಲ್ಲಿ ಮುನ್ನಡೆದಂತೆ, ದಾಸರು ಮಡಿ, ಮೈಲಿಗೆ, ವಿಧಿ, ನಿಷೇಧಗಳ ಬೇಲಿಯನ್ನು ದಾಟಿ ಹೋಗುತ್ತಾರೆ. 'ವಿಧಿ-ನಿಷೇಧಗಳೆಂಬುದು ಅಧಮಾಧಿಕಾರಿಗಲ್ಲದೆ ನಿನ್ನ ನಾಮ ಸರ್ವತ್ರದಿ ಸರ್ವತ್ರ ಚಿಂತಿಸುವ ಬುಧರಿಗಿನ್ನುಂಟೇ ಜಗದೊಳು' ಎಂದು ಹೇಳುತ್ತಾ 'ಹರಿ ಹೋಗುವ ಮಡಿಯು ಮಾಡಿ ದಣಿಯಲು ಬೇಡ! ನೋಡು ಸರ್ವತ್ರ ಹರಿರೂಪ! ಹರಿರೂಪ ನೋಡಿ ಕೊಂಡಾಡು ಮನವುಬ್ಬಿ ಸುಖಿಸುತ್ತಾ' ಎನ್ನುವರು.

"ಹರಿಕಥಾಮೃತಸಾರ" ಇದು ಜಗನ್ನಾಥದಾಸರ ಮೇರುಕೃತಿ. ಹರಿಕಥಾಮೃತ ಸಾರವೆಂದರೆ ಹರಿಗೆ ಸಂಬಂಧಿಸಿದ ಕಥೆಗಳ ಸಂಗ್ರಹವಲ್ಲ. 32 ಸಂಧಿಗಳುಳ್ಳ ಈ ಕೃತಿಯು ಹಲವಾರು ವರ್ಷಗಳ ದಿವ್ಯಜ್ಞಾನ, ದಿವ್ಯಾನುಭವಗಳನ್ನು ಪ್ರತಿಬಿಂಬಿಸುವ ದಿವ್ಯಕೃತಿ. ವೇದ, ಉಪನಿಷತ್ತು, ಗೀತೆ ಮುಂತಾದ ದಾರ್ಶನಿಕ ಸಾರವನ್ನೂ, ಮಾಧ್ವಮತತತ್ವಗಳನ್ನೂ ಪಂಡಿತರಲ್ಲದೆ, ಪಾಮರರಿಗೂ ತಿಳಿಯ ಹೇಳುವಂತೆ ದಾಸರು ಬರೆದಿದ್ದಾರೆ. ತತ್ವವನ್ನು ತಿಳಿಸಿ ಹೇಳುವಲ್ಲಿ ಸಾಹಿತ್ಯದೃಷ್ಟಿ ಮಾತ್ರವಲ್ಲ, ಅನಭಿಜ್ಞನಿಗೂ ತಿಳಿಸಿಕೊಡಬೇಕೆಂಬ ಉದ್ದೇಶ ಈ ಗ್ರಂಥದಲ್ಲಿದೆ. ಬಹುಭಾಗವು ಶಾಸ್ತ್ರ ಜಡವಾಗಿದ್ದರೂ ಇದರ ವಿವೇಚನೆಯ ಸೊಗಸು, ಸಾದೃಶ್ಯ, ಔಚಿತ್ಯಗಳು ಚಿತ್ತವನ್ನು ಎಳೆದುಕೊಂಡು ಹೋಗುತ್ತದೆ ಎಂದು ಡಾ|| ರಂ. ಶ್ರೀ. ಮುಗಳಿಯವರು ದಾಸರ ಕೃತಿಯನ್ನು ವಿಮರ್ಶಿಸುತ್ತಾ ಹೇಳುತ್ತಾರೆ, ಕೆಲವು ಭಾಗಗಳು ಉಜ್ಜ್ವಲ ಕಾವ್ಯ ಪ್ರತಿಭೆಯಿಂದ ದೀಪ್ತವಾಗಿದೆ. ಹಲವಾರು ಘನತತ್ವಗಳು ಚಿರಕಾಲ ಮನದಲ್ಲಿ ನೆಲೆಸುವಂತೆ ವರ್ಣಿತವಾಗಿದೆ. ಹರಿಯನ್ನು ಸರ್ವತ್ರ ಕಂಡ ದಾಸರಿಗೆ ಸಮತ್ವದೃಷ್ಟಿ ಲಭಿಸಿತ್ತು; ಎನ್ನುವುದಕ್ಕೆ ಈ ಕೆಳಗೆ ಅವರ ಖಂಡ ಪದ್ಯವನ್ನು ಉದಾಹರಿಸಬಹುದು. "ಸರ್ವದೇಶವು ಪುಣ್ಯದೇಶವು, ಸರ್ವಕಾಲವು ಪುಣ್ಯಕಾಲವು, ಸರ್ವಜೀವರು ದಾನಪಾತ್ರರು ಮೂರು ಲೋಕದೊಳು, ಸರ್ವ ಮಾತುಗಳೆಲ್ಲ ಮಂತ್ರವು, ಸರ್ವ ಕೆಲಸಗಳೆಲ್ಲ ಪೂಜೆಯು'', ''ನಡೆವುದೇ ಹರಿಯಾತ್ರೆ, ನುಡಿವುದೇ ಹರಿನಾಮ" ಎಂದು ದಾಸರು ಪಾರಮಾರ್ಥದ ಶಿಖರವನ್ನು ಮುಟ್ಟುವರು. ಅವರ ದೇವಪೂಜೆಯ ವೈಖರಿಯನ್ನು ನೋಡಿ, "ಮಳೆಯೆ ಮಜ್ಜನವು, ದಿಗ್ವಲಯಗಳು ವಸನಗಳು, ಬೆಳೆದ ಬೆಳಸುಗಳೇ ನೈವೇದ್ಯ, ಜನಗಳ ಕಂಗಳ ಕಾಂತಿ ನಿನಗೆ ಆರಾರ್ತಿ (ಆರತಿ)".

ಅವರ ಹರಿಕಥಾಮೃತಸಾರವನ್ನೋದಿದಾಗ ಅವರ ಮಹಾನ್ ವ್ಯಕ್ತಿತ್ವ ಮತ್ತು ಸರ್ವ ಸಮರ್ಪಣೆಯ ಕಲ್ಪನೆ ನಮಗಾಗುತ್ತದೆ.

× × × ×

೩೮. ತಿರು ವೇಂಗಡಾಚಾರ್ಯ ಶತಕದ ಪರಿಚಯ

—ಶ್ರೀ ಶ್ರೀ ಕೃಷ್ಣ ಭಟ್, ಅರ್ತಿಕಜೆ, ಮದ್ರಾಸ್,

ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಶತಕಸಾಹಿತ್ಯವೂ ಒಂದಾಗಿದೆ. ಇದು ತೆಲುಗಿನಂತೆ ಕನ್ನಡದಲ್ಲಿ ಹೆಚ್ಚು ಜನಪ್ರಿಯವಾಗಿಲ್ಲವಾದರೂ, ತಮಿಳು ಹಾಗೂ ಮಲೆಯಾಳಗಳಿಗಿಂತ ಹೆಚ್ಚು ಶತಕಗಳು ಕನ್ನಡದಲ್ಲಿ ರಚಿತಗಳಾಗಿವೆ. ಕನ್ನಡದಲ್ಲಿ ರಚಿತಗಳಾದ ಕೆಲವು ಇನ್ನೂ ಪ್ರಕಟವಾಗಿಲ್ಲ. ಅಂತಹವುಗಳಲ್ಲಿ ಕೇಶವನೆಂಬ ಕವಿಯಿಂದ ವಿರಚಿತವಾದ ತಿರುವೇಂಗಡಾಚಾರ್ಯ ಶತಕವೂ ಒಂದು. (ಈ ಶತಕವನ್ನು ಒದಗಿಸಿಕೊಟ್ಟ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಮುಖ್ಯಸ್ಥರಿಗೆ ನಾನು ಋಣಿ,)

ಶತಕಗಳು ಹೆಚ್ಚಾಗಿ ಭಕ್ತಿ, ಜ್ಞಾನ. ವೈರಾಗ್ಯ, ನೀತಿ, ಧರ್ಮ ಹಾಗೂ ತತ್ತ್ವ ಬೋಧಕವಾದವುಗಳು, ತಿರುವೇಂಗಡಾಚಾರ್ಯ ಶತಕದಲ್ಲಿ ವಿಶಿಷ್ಟಾದ್ವೈತ ಸಿದ್ಧಾಂತಕ್ಕೆ ಸಂಬಂಧಿಸಿದ ಅನೇಕ ವಿಷಯಗಳು ನಿರೂಪಿಸಲ್ಪಟ್ಟಿವೆ. ಇದರಲ್ಲಿ ಐದು ಶತಕಗಳಿವೆ, ವಾರ್ಧಿಕ ಷಟ್ಪದಿಯಲ್ಲಿ ರಚಿತವಾಗಿವೆ. ಕವಿಯ ಕಾಲವನ್ನು ನಿರ್ಧರಿಸಲು ಈ ಕೃತಿಯಲ್ಲಿ ಯಾವುದೇ ಆಧಾರಗಳಿಲ್ಲ. "ಈ ಗ್ರಂಥದ ಕೆಲವು ಉಕ್ತಿಗಳನ್ನು ನೋಡಿದರೆ. ಇವನು ಜೈಮಿನಿ ಭಾರತವನ್ನು ಬರೆದ ಲಕ್ಷ್ಮೀಶನಿಗಿಂತ ಈಚೆಯವನೆಂದು ತೋರುತ್ತದೆ. ಸು. 1750 ರಲ್ಲಿದ್ದಿರಬಹುದು"ಎಂದು ಶ್ರೀ ಆರ್. ನರಸಿಂಹಾಚಾರ್ಯರು ಕವಿಚರಿತೆಯಲ್ಲಿ ಹೇಳಿದ್ದಾರೆ (3-72). ಇದರ ಕೆಲವು ಪದ್ಯಗಳು ವೀರಶೈವರ ವಚನಗಳನ್ನು, ರಾಘವಾಂಕನ ಹರಿಶ್ಚಂದ್ರ ಕಾವ್ಯ, ಕುಮಾರವ್ಯಾಸನ ಭಾರತ, ಲಕ್ಷ್ಮೀಶನ ಜೈಮಿನಿಭಾರತಗಳ ಕೆಲವು ಪದ್ಯಗಳನ್ನು. ಹರಿದಾಸರ ಕೀರ್ತನೆಗಳನ್ನು ವಿಶೇಷತಃ ಹೋಲುತ್ತವೆ. ಕೆಲವು ಇಲ್ಲಿ ಬರೆಯಲಾಗಿವೆ!

(೧) ಹರಿಶ್ಚಂದ್ರ ಕಾವ್ಯದಲ್ಲಿ, ವಿಶ್ವಾಮಿತ್ರನು ತನ್ನ ಮಕ್ಕಳಾದ ಹೊಲತಿಯರನ್ನು ಮದುವೆಯಾಗೆಂದು ಹೇಳುವಾಗಣ ಮಾತುಗಳನ್ನು—"ಹೆತ್ತ ತಾಯಂ ಮಾರಿ ತೊತ್ತ ಕೊಂಬರೆ, ಮೂಗನಿತ್ತು ಕನ್ನಡಿಯ ನೋಡುವರೆ. ಮಾಣಿಕದೊಡವನೊತ್ತೆಯಿಟ್ಟೊಡೆದ ಗಾಜಂ ಹಿಡಿವರೆ, ಕೋಪದಿಂ ಸತ್ತು ಮದುವೆಯಹರೇ" – ಈ ಶತಕದ ಈ ಮಾತು ಹೋಲುತ್ತದೆ: "ಪೆತ್ತವ್ವೆಯಂ ಮಾರಿ ತೊತ್ತ ತರುವವನಾತ । ನುತ್ತಮ ಮಗನೆ, ಪರುಷಮನೊಯ್ದು ಅನ್ಯರಿಗೆ । ಪೊತ್ತೆಯಿಟ್ಟೊಡೆದ ಗಾಜಂ ತಂದವಂ ವ್ಯವಹಾರಿಯು",

(೨) ಈ ಶತಕದ ಕವಿ ತನ್ನ ಕೃತಿಯ ಬಗೆಗೆ ಹೇಳಿಕೊಂಡಿರುವುದು —"ದೂಷಕರಿಗೆ

ಎನೆ ಶೂಲೆ, ಶ್ರೀ ವೈಷ್ಣವರ ಲೀಲೆ । ಪಾಷಂಡರಿಗೆ ಕಿಚ್ಚು, ಸೂರಿಜನ ಮೆಚ್ಚು. ದು । ರ್ದೋಷ ಗಣ ಸೂರ್‍ಯ, ಕಾವ್ಯಮಾರ್ಗ ಮಹೀಜ, ಸುಜ್ಞಾನ ಬೋಧ ಚಿಂತಾಮಣಿ".-ಕುಮಾರ ವ್ಯಾಸಭಾರತದ "ಅರಸುಗಳಿಗಿದು ವೀರ ದ್ವಿಜರಿಗೆ । ಪರಮ ವೇದದ ಸಾರ, ಯೋಗೀಶ್ವರರ ತತ್ವವಿಚಾರ, ಮಂತ್ರಿ ಜನಕ್ಕೆ ಬುದ್ಧಿಗುಣ ॥ ವಿರಹಿಗಳ ಶೃಂಗಾರ, ವಿದ್ಯಾ । ಪರಿಣತ ರಲಂಕಾರ" ಇತ್ಯಾದಿಗೆ ಸಮನಾಗಿದೆ!

(೨) ಕುಮಾರವ್ಯಾಸನು "ವೀರನಾರಾಯಣನೆ ಕವಿ ಲಿಪಿ । ಕಾರ ಕುಮಾರವ್ಯಾಸ" ಎಂದರೆ, ಕೇಶವನು "ಪ್ರ ವಿಮಲಚರಿತ್ರನಹ ತಿರುವೇಂಗಡಾಚಾರ್‍ಯನ 'ಸೂತ್ರದ ಬೊಂಬೆ ಮಾತಾಡಿದೊಡಂತೆ ಭೂವಿ ಯೊಳಾಡಿ ನುಡಿದೆ" ಎಂದು ಹೇಳಿಕೊಂಡಿರುವನು,

(೩) ಕುಮಾರವ್ಯಾಸನ "ಪದದ ಪ್ರೌಢಿಮೆ ನವರಸಂಗಳ । ವುದಿತವೆನುವಭಿಧಾನ ಭಾವವ ಬೆದಕಲಾಗದು ಬಲ್ಲಪ್ರೌಢರುವಿೂ ಕಥಾಂತರಕೆ ॥ ಇದು ವಿಚಾರಿಸೆ ಬರಿಯ ತೊಳಸಿಯು । ವುದಕದಂತಿರೆ ಯಿಲ್ಲಿ ನೋಳ್ಪುದು । ಪದುಮನಾಭನ ಮಹಿಮೆ ಧರ್ಮ ವಿಚಾರಮಾತ್ರವನು",. ಜೈಮಿನಿಭಾರತದ "ಛಂದಸ್ಸು ಲಕ್ಷಣಮಲಂಕಾರ ಭಾವರಸ । ವೊಂದಿ ಕಲೆವೆತ್ತ ಸತ್ಕೃತಿ ಚಮತ್ಕೃತಿಯುಕ್ತಿ । ಯೊಂದುಮಿಲ್ಲದ ಕಾವ್ಯಮುಶ್ರಾವ್ಯಮಕ್ಕೆಂದು ಜರೆದು ಕವಿತೆಯನು ಬರಿದೆ ॥ ದಂದುಗಕೆ ಕ್ಕಾಳಗಾಗಿ ಪೇಳ್ದನೆಂದೆನ್ನ ನಗು । ವಂದವಂ ಮಾಡದೆನಗೊಲಿದಿತ್ತನಮಲ ಮತಿ । ಯಂ ದೇವಪುರದ ಲಕ್ಷ್ಮೀರಮಣನೆಂದರಿದು ಕೇಳ್ವುದೆಲ್ಲಾ ಸುಜನರು" ಎಂಬ ಪದ್ಯಗಳಿಗೆ, ಈ ಶತಕದ ಈ ಮಾತುಗಳಿಗೆ ತುಂಬ ಸಾಮ್ಯವಿದೆ:

"ನವರಸಮಲಂಕಾರ ಛಂದಸ್ಸು ಪ್ರಾಸಗಣ । ವಿವರಗಳ ತಿಳಿದಾತನಲ್ಲ, ಗ್ರಹಗಣ ಮೈತ್ರಿ । ಯುವನರಿಯೆ, ನೇಮಮುಚಿತಾರ್ಥ ಶಬ್ದಂ ತರ್ಕಪಾಠಗಳ ಕಂಡುದಿಲ್ಲ॥"

"ಸ್ವಮತಾಬ್ಜಸೂರ್‍ಯನಹ ತಿರುವೇಂಗಡಾರ್‍ಯನ ಮ । ಹಿಮೆಗಳೆಂಬೆಂಟು ಗಣವಿರಲೆಮಗೆ. ಛಂದಸ್ಸು । ಕ್ರಮದ ಗಣದಿಂದೇನು ಫಲಮಕ್ಕು, ಜಗತಿಯೊಳ್ ಪಾಲುಂಡು ಮೇಲುಂಬರೇ ॥" "ತಿರುವೇಂಗಡಾರ್ಯ ಮಹಿಮಾಷ್ಟಾದಶ ವಿವರಣಮಿರಲನ್ಯ ವರ್ಣನವೇಕೆ?" "ಬೇರೆ ನವರಸವೇಕೆ ಮತ್ಕೃತಿಯೊಳು",

(೪) ಕುಮಾರವ್ಯಾಸನು ಹೇಳಿದ-"ವೇದ ಪಾರಾಯಣದ ಫಲ. ಗಂ । ಗಾದಿ ತೀರ್ಥಸ್ನಾನ ಫಲ, ಕೃ । ಛ್ರಾದಿ ತಪಸಿನ ಫಲವು ಜ್ಯೋತಿಷ್ಟೋಮ ಯಾಗಫಲ ॥ ಮೇದಿನಿಯನೊಲಿದಿತ್ತ ಫಲ, ವ । ಸ್ತ್ರಾದಿ ಕನ್ಯಾದಾನ ಫಲ, ಅಹು । ದಾದರಿಸಿ ಭಾರತದೊಳೊಂದಕ್ಷರವ ಕೇಳ್ದರಿಗೆ" ಎಂಬುದಕ್ಕೆ ಸಮಾನವಾದುದನ್ನು ಈ ಶತಕದಲ್ಲಿ ನೋಡಬಹುದು: "ಧರಣಿಯುಮರ್ಗೆ ಷೋಡಶ ಮಹದ್ದಾನಮಂ । ಕರೆದಿತ್ತ ಫಲ, ದಿವ್ಯ ಕ್ಷೇತ್ರ ಯಾತ್ರಾದಿಗಳ । ಚರಿಸಿದತಿ ಫಲ, ತುರಗ ಮೇಧಮಂ ಗೈದಫಲ, ವಿಷ್ಣು ಗುರುಪೂಜೆಯ ಫಲಂ ॥ ತಿರುವೇಂಗಡಾಚಾರ್ಯ ಶತಕದೊಳಗೊಂದು ಅ । ಕ್ಷರವ ಬರೆದೋದಿ ಕೇಳ್ದವರಿಗೀವನು

ಸದಾ । ಗುರು ಷುತ್ರೋದ್ಧರ ಆದಿ ಕೇಶವನವೋಘವಿದು ಸತ್ಯವಿದು ಶಾಶ್ವತವಿದು॥"
ಕೇಶವನು ಕುಮಾರವ್ಯಾಸನಿಂದ ಹೆಚ್ಚು ಪ್ರಭಾವಿತನಾದಂತೆ ಇಲ್ಲಿ ಕಾಣುತ್ತದೆ.

(೬) ಕನಕದಾಸರ "ತಲ್ಲಣಿಸದಿರು ಕಂಡ್ಯ ತಾಳು ಮನವೆ" ಎಂಬ ಕೀರ್ತನೆಯ ವಿಚಾರವನ್ನು ಈ ಶತಕದ ಪದ್ಯವಿದು ಹೇಳುತ್ತದೆ: "ತುಂಬಿಗಾರರುಹುವರು ಪುಷ್ಪವಿಪ್ಪಲ್ಲಿ ಪೋಗೆಂಬುದಂ, ನಡೆಗಲಿಪರಾರು ಹಂಸೆಗೆ, ಗಾನ । ವಂ ಬಂದು ಪಿಕಗೆ ಪೇಳ್ದವರಾರು, ಸವಿಯುಸಿಕ್ಕು ವಿಗಿತ್ತರಾರು, ಶಶಿಯಾ ॥ ಬಿಂಬಕಂ ಶಾಂತಿಗೊಟ್ಟವರಾರು. ಬಳಿಕ ಭೂ । ತಂ ಭವಿಷ್ಯದ್ವರ್ತಮಾನ ಪರಿನಿಮಗೆ ಕರೆ । ದುಂ ಬೋಧಿಸುವರಾರು, ಸಹಜಗುಣ ತಿರುವೇಂಗಡಾಚಾರ್ಯ ಮೌನಿವರ್ಯಾ ॥"

(೭) ಬಸವಣ್ಣನವರ ವಚನಗಳಲ್ಲಿರುವ - "ಈಶ ನಿಮ್ಮ ದಾಸರ ದಾಸಿಯ ದಾಸ ನಾನಯ್ಯಾ, ನಿಮ್ಮ ವೇಷಧಾರಿಯ ಮನೆಯ ಪಂಗುಳ ನಾನಯ್ಯಾ. ನಿಮ್ಮ ನಂಬಿದ ಶರಣನ ಡಿಂಗರಿಗ ನಾನು, ನಿಮ್ಮ ಶರಣರ ಮುಂದೆ ನಾನೇತರ ಯುಕ್ತನಯ್ಯಾ" ಎಂಬ ವಿಚಾರಗಳು ಇಲ್ಲಿ ಪ್ರತಿಬಿಂಬಿತವಾಗಿವೆ: "ತಿರುಮಂತ್ರವನು ಜಪಿಸುವರ ಮನೆಯ ಭೃತ್ಯಭೃ । ತ್ಯರ ಭೃತ್ಯ ಭೃತ್ಯರಿಗೆ ಭೃತ್ಯ ನಾಂ, ಅಷ್ಟ ಅ । ಕ್ಷರ ಅನುಷ್ಠಾನಪರರಾದವರಡಿಯ ದಾಸದಾಸರಿಗೆ ದಾಸ ನಾನು ॥ ಮರೆದೊಮ್ಮೆ ಓಂ ನಮೋ ನರಯಣಾಯೆಂದು ನುಡಿ । ದರ ಬಂಟ ಬಂಟರಿಗೆ ಬಂಟನಾಂ, ತನ್ಮಂತ್ರ । ಸ್ಮರಣೆಯುಳ್ಳರ ಸೇವಕನು ನಾನು, ತಿರುವೇಂಗಡಾಚಾರ್ಯ ಮೌನಿವರ್ಯ".

(೮) ಜೈಮಿನಿಭಾರತದ - "ಕೆನೆವಾಲ ಕಡೆದು ನವನೀತಮಂ ತೆಗೆದು ಬಾ । ಯ್ಗಿನಿದಾಗಿ ಸವಿಯದದರೊಳಗೆ ಪುಳಿವಿಡಿದು ರಸ । ವನೆ ಕೆಡಿಸಿದೊಡೆ ಕರೆದ ಸುರಭಿಗಪ್ಪುದೆ ಕೊರತೆ, ಕಾವ್ಯಮಂ ಕೇಳ್ದು ಮಥಿಸಿ ॥ ಜನಿಸಿದ ಪದಾರ್ಥಮಂ ತಿಳಿದು ನೋಡದೆ. ವಿನೂತನ ಕವಿತೆಯೆಂದು ಕುಂದಿಟ್ಟು ಜರೆದೊಡೆ ಪೇಳ್ದ । ವನೊಳಾಗದೂಹೆಯುಂ, ಜಾಣರಿದನರಿದು ಮತ್ಸರವನುಳಿದಾಲಿಸುವುದು ॥" ಎಂಬುದನ್ನು, ಈ ಶತಕದ ಪದ್ಯ ಹೇಳುತ್ತದೆ.

"ಕರೆಯಬಲ್ಲುದು ಪಶುವು ಕರೆದುದನು ಕಾಸಿ ಹೆ । ಪ್ಪೆರೆದು ಕಡೆದಾ ಬೆಣ್ಣೆ ತೆಗೆದು, ತುಪ್ಪವನು ಜ । ಪ್ಪರಿದು ಸವಿಯಂ ನೋಡುವರ ಕೆಲಸವೈಸೆ, ಕವಿ ಪೇಳ್ದನಲ್ಲದಲೆಯುವರಾ ॥ ಪರಿಯ ಗುರುಮುಖದಿಂದ ತಿಳಿದು ತತ್ತ್ವಸುಬೋಧ । ವರಿತು ಬಾಳುವದು ಜಾಣರ ಮತವು, ಪುಳಿಗಳಿಂ । ಬೆರಸಿ ಕ್ಷೀರವನರಿಯದಲೆ ಸಾರಮಂ ಜರಿಯೆ ಕವಿ ಸುರಭಿಗೇನು ಕೊರತೆ", ಇ,

ಒಟ್ಟನಲ್ಲಿ, ಜೈಮಿನಿಭಾರತದ ಬಳಿಕ ಇದು ರಚಿತವಾಗಿರಬೇಕೆಂಬ ಮಾತು ಒಪ್ಪತಕ್ಕದ್ದಾಗಿದೆ!

ಕವಿ ತನ್ನ ವಿಚಾರವಾಗಿ, ಈ ಶತಕಗಳ ಅಂತ್ಯದ ಗದ್ಯದಲ್ಲಿ ಹೇಳಿದ್ದಾನೆ. "ಇತಿ ಸಮಸ್ತ ಕಮಲಭವಾಂಡ ಮಂಡಲ ಪೂರೀಕೃತಗರ್ಭ ಪ್ರತಿರಹಿತ ಶ್ರಿಯಃ ಪತಿಪರಮಪದ ವಾಸ ಆದಿಕೇಶವ ಪಾದಪದ್ಮ ಮಕರಂದ ಮತ್ತ ಮಧುಕರೋಪಮ ಮಾನಸ ವಾಲ್ಮೀಕಿ ವಂಶೋದ್ಭವ ಗುರುಸುತ ಕೇಶವ ವಿರಚಿತ ತಿರುವೇಂಗಡಾಚಾರ್ಯ ಶತಕೇ". ಐದನೆಯ ಶತಕದ ಕೊನೆಯ ಪದ್ಯದಲ್ಲೂ ಹೀಗೆಯೇ ಹೇಳಿದ್ದಾನೆ! ಮೈಸೂರು ವಿಶ್ವವಿದ್ಯಾಲಯದ ಹಸ್ತಪ್ರತಿಯಲ್ಲಿ ಕೊನೆಗೊಂದು ಪದ್ಯದಲ್ಲಿ ಈತನ ತಾಯಿಯ ಹೆಸರು ಹೇಳಿದೆ: "ಜಯತು ಲಿಂಗಮ್ಮೋದರಾಂಭೋಧಿವರಚಂದ್ರಸಾತ್ವನಿಜಸತ್ಯಸಾಂದ್ರ". ಈ ಶತಕದಲ್ಲಿ ಒಟ್ಟು 598 ಪದ್ಯಗಳಿವೆ. ಮೊದಲ ಶತಕದಲ್ಲಿ 134 ಪದ್ಯಗಳು, ಎರಡನೆಯದರಲ್ಲಿ 132 ಪದ್ಯಗಳು, ಮೂರನೆಯದರಲ್ಲಿ 123 ಪದ್ಯಗಳು, ನಾಲ್ಕನೆಯದರಲ್ಲಿ 101 ಪದ್ಯಗಳು, ಐದನೆಯದರಲ್ಲಿ 108 ಪದ್ಯಗಳಿವೆ. ಮೊದಲ ಶತಕದಲ್ಲಿ ಸದಾಚಾರ ಮಹಿಮೆ, ಎರಡನೆಯದರಲ್ಲಿ ಗುರು ಪರಂಪರಾ ಮಹಿಮೆ, ಮೂರನೆಯದರಲ್ಲಿ ತತ್ವತ್ರಯ ರಹಸ್ಯತ್ರಯ ಪಂಚ ಸಂಸ್ಕಾರ ನಿರ್ಣಯಗಳು. ನಾಲ್ಕನೆಯದರಲ್ಲಿ ಅರ್ಥಕ ಪಂಚಕಾಕಾರತ್ರಯ ರಹಸ್ಯ ನಿರ್ಣಯ, ಐದನೆಯ ದರಲ್ಲಿ ಪಂಚಮೋಪಾಯ ಅರ್ಚಿರಾದಿ ಮಾರ್ಗನಿರ್ಣಯಗಳು ವಿವರಿಸಲ್ಪಟ್ಟಿವೆ. ಹೆಚ್ಚಿನ ಪದ್ಯಗಳಲ್ಲಿ 'ತಿರುವೇಗಡಚಾರ್ಯರ್ ವರ್ಮೌನಿವರ್ಯರ್', ಎಂಬ ಮಕುಟ (ಅಂಕಿತ) ಇದೆ, ಕೆಲವೆಡೆ ಈ ಅಂಕಿತವಿಲ್ಲ, ವಿಶಿಷ್ಟಾದ್ವೈತವೇದಾಂತಕ್ಕೆ ಸಂಬಂಧಪಟ್ಟ ವಿಷಯಗಳು ಈ ಶತಕ ಪಂಚಕ ದಲ್ಲಿ ನಿರೂಪಿತಗಳಾಗಿವೆ.

ಆದಿಕೇಶವನ ಸ್ತುತಿಯಿಂದ ಈ ಶತಕ ಪ್ರಾರಂಭವಾಗುತ್ತದೆ; "ಶ್ರೀಮದ್ರಮಾ ಭೂಮಿ ನೀಳಾಮುಖಾಂಗನಾ । ಪ್ರೇಮಯುತ ವಿಲಸದ್ವಿಭವ ಭವದ್ರುಹಿಣ ಸು । ತ್ರಾಮಾದ್ಯಖಿಲ ದೇವತಾ ಜನ್ಮ ಕಾರಣಮಹಿಮ್ನ ಮಾಂಗಲ್ಯರೂಪ ॥ ಸಾಮಾದಿ ವೇದಸಂಸ್ತವ ಮಗೋಚರ ಪುಣ್ಯ । ನಾಮ ಪರವಸ್ತು ಪರಬೊಮ್ಮ ವರಸೂರಿಗಣ । ರಾಮಣೀಯಕ ಪರಮಪದವಾಸ ಆದಿ ಕೇಶವರಾಯ ಮಾಂ ಪಾಲಯ".

ನೇಮಿಚಂದ್ರನು 'ಲೀಲಾವತೀ' ಪ್ರಬಂಧದಲ್ಲಿ, 'ಸ್ತ್ರೀರೂಪಮೆ ರೂಪಂ, ಶೃಂಗಾ ರಮೆ ರಸಂ' ಎಂದನು, ಆದರೆ ಈ ಕವಿ ಕೇಶವನು ಅದನ್ನೆ ತೊಡವಿ, ವಿಶೇಷವನ್ನೂ ಹೇಳಿದ್ದಾನೆ:

"ಶೃಂಗಾರವೇ ಸರ್ವರಸಕಾದಿ, ಸಂಭಾರ । ಸಂಘಕ್ಕೆ ಮುಖ್ಯಮೇ ಲವಣ, ಬಲ್ ಚಿತ್ರಾಂಬ । ರಂಗಳೊಳ್ ಬಿಳ್ಪು ಮೊದಲ್, ಅಖಿಳ ಪ್ರಸ್ತಕ್ಕೆ ನೋಡಲ್ ಮೂಲವೇ ತಂಡುಲಂ ॥ ಅಂಗಳೇ ಸರ್ವತೇಜಕೆ ಗೊತ್ತು, ಅನ್ನಪಾನಂಗಳೇ ಶಕ್ತಿಗಾಧಾರ, ಆತ್ಮಂಗೆ ದಾ । ಸ್ಯಂ ಗೈವುದೇ ಪ್ರಾಪ್ತಿ, ಸತ್ಯಮಿದು, ತಿರುವೇಂಗಡಾಚಾರ್ಯರ್ ವರ್ಮೌನಿವರ್ಯರ್" ॥

ಕವಿ ಅಲ್ಲಲ್ಲಿ ಅನೇಕ ದಾದೆಗಳನ್ನೂ ಬಳಸಿದ್ದಾನೆ. "ಜಗತಿಯೊಳ್ ಪಾಲುಂಡು

ಮೋಲುಂಬರೇ", "ಮುಂಗೈಯ ಕಂಕಣಕೆ ಕನ್ನಡಿಯೆ", "ಮರಣಭಯಕಿಂ ಬೇರೆ ಭಯವಿಲ್ಲ", ಇ. ಈ ಶತಕದ ಶೈಲಿ ಸರಳವಾಗಿದೆ, ಶಬ್ದಾಲಂಕಾರ, ಅರ್ಥಾಲಂಕಾರಗಳನ್ನು ಕವಿ ಹದವರಿತು ಬಳಸಿದ್ದಾನೆ. ವಿಶಿಷ್ಟಾದ್ವೈತತತ್ವವನ್ನು ಪ್ರತಿಪಾದಿಸುವ ಶತಕವಾದರೂ, ಕಾವ್ಯ ಸೌಂದರ್ಯದಿಂದ ಶೋಭಿಸುವ ಅನೇಕ ಪದ್ಯಗಳು ಇದರಲ್ಲಿವೆ!

"ಧರೆಯೊಳಾರಾದೊಡೇನೀ ಶತಕಮೈದುವನು । ಬರೆದೋದಿಕೇಳಿ ಗುರುಮುಖದಿಂದ ತತ್ಸಾರ । ವರಿತು ನಡೆವರಿಗಾಯುರಾರೋಗ್ಯ ಮೈಶ್ವರ್ಯ ಸತಿಸುತರ್ ಧನಧಾನ್ಯವು॥ ಪಿರಿದು ವೃದ್ಧಿಗಳಾಗಿ ಯಿಹದಿ ಶಶಿಧರೆ ತರಣಿ । ಯಿರುವನ್ನೆಬರ ಪರದಿ ಹರಿಯ ಸಾಮೀಪ್ಯ ಕೈಂ । ಕರಿಯ ಸುಖತೃಪ್ತಿಯೊಳಗಿಹರೈಯ, ತಿರುವೇಂಗಡಾಚಾರ್ಯ ಮೌನಿವರ್ಯ" "ಈ ಶತಕ ಮಹಿಯೊಳಿಪ್ಪನ್ನಗಂ ನಿರ್ಮಲಂ ಬರಲೆಲ್ಲವುಂ" ಎಂದು ಕವಿ ಹೇಳಿದ್ದಾನೆ. ತಥಾಸ್ತು!

X X X X X X X X

೨೯. ರಾಧಾಕೃಷ್ಣರ ಉಲ್ಲೇಖಗಳು

— ಶ್ರೀ ಕೆ. ಎಸ್. ಎನ್. ಮತ್ತು ಆಚಾರ್ಯ ಪುತ್ರ, ಸುರತ್ಕಲ್.

ವಿ. ಎಸ್. ಆಪ್ಟೆ, ಸಿ. ವಿ. ವೈದ್ಯರು ವ್ಯಾಸಭಾಗವತಕ್ಕೆ ಕಾರಣಾಂತರಗಳಿಂದ ಕ್ರಿಸ್ತಾಬ್ದ 9-10ನೆ ಶತಕದ ಕಾಲಮಾನವನ್ನು ಉಲ್ಲೇಖಿಸಿ, ರಾಧೆಯ ಹೆಸರು ಅಲ್ಲಿಲ್ಲದಿರುವುದರಿಂದ, 12ನೆ ಶತಕದ ಜಯದೇವ ಕವಿಯ ಗೀತಗೋವಿಂದದಲ್ಲಿ ರಾಧೆಯ ಹೆಸರು ಮೊದಲಿಗೆ ಕಾಣುತ್ತದೆಯೆಂದರು. ಆದರೆ, ಗೀತಗೋವಿಂದದ ಪೂರ್ವದ ಹದಿನಾರು ಕೃತಿಗಳಲ್ಲಿ (26 ಪದ್ಯಗಳಲ್ಲಿ) ರಾಧಾಕೃಷ್ಣರ ಪ್ರೇಮದ ಉಲ್ಲೇಖಗಳಿವೆಯೆಂದು ಇಲ್ಲಿ ಬರೆಯಲಿದೆ; ಕೆಲವು 9ನೆ ಶತಕಕ್ಕಿಂತ ಹಳೆಯವು, ಹಾಲನ ಗಾಥಾ ಸಪ್ತಶತಿಯಲ್ಲಿ (ಕ್ರಿ. ಶ. ೧ ನೆ. ಶ.) ಕೂಡಾ ಇದರ ಉಲ್ಲೇಖವಿದೆ. ಕೃಷ್ಣರಾಧೆಯರ ಪ್ರೇಮಸಂಬಂಧ ಅತ್ಯುನ್ನತ ರೀತಿಯಲ್ಲಿ ಅಲ್ಲಲ್ಲಿ ಡೆಯಿದೆ.

ಹರಿವಂಶ, ವಿಷ್ಣುಪುರಾಣ, ವ್ಯಾಸಭಾಗವತಗಳಲ್ಲಿ ರಾಧೆಯ ಹೆಸರಿಲ್ಲದುದಂ ಅಸಮಾಧಾನಕರ; ಆದರೂ ಇತರತ್ರ ಪ್ರಾಚೀನ ಕೃತಿಗಳಲ್ಲಿ ಈ ಸಂಗತಿ ಬಂದುದು ಸ್ಮರಣೀಯ. ಇನ್ನೊಂದು ಬಗೆಯಲ್ಲಿ ಹೇಳುವುದಾದರೆ, ಕೃಷ್ಣ ಕಥೆಯಲ್ಲಿ ರಾಧೆಯ ಸಂಪರ್ಕ ಬಹುಶಃ ಉತ್ತರ ಭಾರತದಲ್ಲಿದೆ. ವ್ಯಾಸ ಭಾಗವತದ ಮೊತ್ತಮೊದಲ ರಚನೆ ವಿನ್ಯಾಸಗಳು ದಕ್ಷಿಣ ಭಾರತದಲ್ಲಾಗಿರಬೇಕು, ಆದುದರಿಂದಲೇ, ಈ ಭಾಗವತದ ರಚಕರ ಗಮನಕ್ಕೆ ರಾಧೆ ಬಂದಿಲ್ಲ. ಆದರೆ, ಶಾಕ್ತೇಯರದಾದ 'ದೇವೀ ಭಾಗವತ'ದಲ್ಲಿ ರಾಧೆಯ ಪ್ರಸ್ತಾವವಿರುವುದು ಈ ಊಹೆಗೆ ಆಧಾರವದೆ, ನರ್ಮದೆಯ ಉತ್ತರ ಪ್ರದೇಶದಲ್ಲಿ ಇದ್ದಷ್ಟು ರಾಧೆಯ ವಿಚಾರ ಮಹಾರಾಷ್ಟ್ರದಲ್ಲಿಲ್ಲ; ದಕ್ಷಿಣ ಭಾರತದಲ್ಲೂ ಇಲ್ಲ.

ಮಹಾಭಾರತದ ರಚಕನಿಗೆ ಕೃಷ್ಣನ ಹಾಗೂ ಗೋಪಗೋಪಿಯರ ಸಂಬಂಧ ಚೆನ್ನಾಗಿ ಗೊತ್ತಿತ್ತು. ಭಾಗವತದಲ್ಲಿ ರಾಧೆಯ ಸಂಗತಿಯಿಲ್ಲಾದರೂ, ಕ್ರಿ. ಶ, 1ನೆ ಶತಕದಿಂದೀಚೆ ನಮಗೆ ದೊರೆತ ಸಾಹಿತ್ಯಕಗಳಾದ ಇತರ ಕೃತಿಗಳಲ್ಲಿ ಆಗಾಗ ರಾಧಾಕೃಷ್ಣರ ವಿಚಾರ ಮಿಂಚುತ್ತಿದೆ. ಭಾಗವತದಲ್ಲಿ ರಾಧೆಯ ವಿಚಾರವಿಲ್ಲೆಂದರೆ, ಉತ್ತರ ಭಾರತದ ಸಾಹಿತ್ಯಕ ಪ್ರಭಾವ ದಕ್ಷಿಣ ಭಾರತದ ಪ್ರಾಚೀನ ಕೃತಿಗಳಿಗೆ ಆದಿಲ್ಲೆನ್ನಬೇಕು, ಭಾಗವತದ ಹೆಚ್ಚಿನ ಭಾಗ – ಕೃಷ್ಣನ ಗಾಥೆಯಿರುವಂತಹದು – 9-10ನೆ ಶತಕಕ್ಕೆ ಹಿಂದಿನದೇ. 9-10ನೆ ಶತಕದ ಕಾಲಮಾನದ ಪ್ರಕರಣದ ವಿಚಾರವೂ ಅಲ್ಲಿ ಆ ಮೇಲೆ ಸೇರಿದುದೆನ್ನಲೂ ಸಾಕು.

ಜಯದೇವನ ಗೀತಗೋವಿಂದಕ್ಕಿಂತ ಹಿಂದಿನ ಹದಿನಾರು ಕೃತಿಗಳಲ್ಲಿರುವ ರಾಧಾಕೃಷ್ಣರ ವಿಚಾರಗಳು ಇಲ್ಲಿ ಪರಿಶೀಲನಾರ್ಹಗಳು:

೧, ಗೋವರ್ಧನನ 'ಆರ್ಯಾಸಪ್ತಶತಿ'ಯಲ್ಲಿ (1180 ಇ),

೨, ರಾಮಚಂದ್ರ--ಗುಣಚಂದ್ರರ 'ನಾಟ್ಯದರ್ಪಣ'ದಲ್ಲಿ (1175 ಇ), ೩. ಶ್ರೀಹರ್ಷನ 'ನೈಷಧೀಯ ಚರಿತ'ದಲ್ಲಿ (1170 ಇ). ೪ ಹೇಮಚಂದ್ರನ 'ಕಾವ್ಯಾನುಶಾಸನ'ದಲ್ಲಿ (1088–1172 ಇ), ೫. ಕ್ಷೇಮೇಂದ್ರನ 'ದಶಾವತಾರ ಚರಿತ'ದಲ್ಲಿ (1066 ಇ), ೬. ಭೋಜರಾಜನ 'ಸರಸ್ವತೀ ಕಂಠಾಭರಣ'ದಲ್ಲಿ (1005–54 ಇ), ೭. ಧನಿಕನ 'ದಶರೂಪಕಾವಲೋಕ'ದಲ್ಲಿ (1000 ಇ), ೮. ಕುಂತಲನ 'ವಕ್ರೋಕ್ತಿ ಜೀವಿತ'ದಲ್ಲಿ (950-1000 ಇ), ೯. ಅಭಿನವಗುಪ್ತನ 'ಧ್ವನ್ಯಾಲೋಕಲೋಚನ'ದಲ್ಲಿ (980-1020 ಇ), ೧೦, ಸೋಮದೇವನ 'ಯಶಸ್ತಿಲಕ ಚಂಪು'ವಿನಲ್ಲಿ (959 ಇ), ೧೧. ತ್ರಿವಿಕ್ರಮನ 'ನಲಚಂಪು'ವಿನಲ್ಲಿ (915 ಇ), ೧೨. ರಾಜಶೇಖರನ 'ಕಾವ್ಯಮೀಮಾಂಸೆ'ಯಲ್ಲಿ (880–920 ಇ), ೧೩. ಆನಂದವರ್ಧನನ 'ಧ್ವನ್ಯಾಲೋಕ'ದಲ್ಲಿ (860-90 ಇ), ೧೪. ಭಟ್ಟನಾರಾಯಣನ 'ವೇಣೀ ಸಂಹಾರ'ದಲ್ಲಿ (800 ಇ). ೧೫. ವಿಷ್ಣುಶರ್ಮನ 'ಪಂಚತಂತ್ರ'ದಲ್ಲಿ (500 ಇ), ೧೬. ಹಾಲನ 'ಗಾಥಾ ಸಪ್ತಶತಿ'ಯಲ್ಲಿ (1ನೆ ಶ), ಒಟ್ಟಾರೆ, 26 ಕಡೆಗಳಲ್ಲಿ ರಾಧಾಕೃಷ್ಣರ ಉಲ್ಲೇಖಗಳಿವೆ.

ಆಧಾರ; ಡಾ। ಸದಾಶಿವ ಎಲ್, ಕತ್ರೆ, ನಾಗಪುರ ವಿಶ್ವವಿದ್ಯಾಲಯ, ಇವರ ಲೇಖ: ಡಾ। ಪಿ. ಕೆ. ಗೋಡೆ (ಪುಣೆ, 1960 ಇ), ಅವರ ಸಂಭಾವನ ಗ್ರಂಥ.

× × × ×

ಪ್ರದೀಪಿಕೆ

ಶ್ರೀ ಕೆ. ವೆಂಕಟರಾಯಾಚಾರ್ಯರ ಸಂಭಾವನ ಗ್ರಂಥ

೨ನೆ ವಿಭಾಗ

೧. ಶುಭಾಶಂಸನೆಗಳು

೨. ಸಂದೇಶಗಳು

೩. ಕೃತಿ ಪರಿಚಯಗಳು

೪. ವ್ಯಕ್ತಿ ಪರಿಚಯಗಳು

೧. ಶುಭಾಶಂಸನೆಗಳು:

ಆಶಾಸನಮ್

....ಶ್ರೀ ದ್ವಿವೇದಿ ಸೀತಾರಾಮ ಶಾಸ್ತ್ರೀ, ಪಾಪಂಜೆ

ಜಯತಿ ಜಯತಿ ವಿದ್ಯಾ ವೈಭವೋ ವೇಂಕಟ ಶ್ರೀಃ ।
ಜಯತಿ ಜಯತಿ ದೇವೀ ಸುಂದರೀ ಕನ್ನಡ ಶ್ರೀಃ ॥
ಜಯತಿ ಜಯತಿ ಕಾವ್ಯಂ ಸರ್ವಧರ್ಮೋಪ ದಾನಂ ।
ಜಯತಿ ಜಯತಿ ವೃಂದಂ ಕೋವಿದಾನಾಂ ಸುಶಾಂತಂ ॥ ೧ ॥

ವೇಂಕಟ್ರಾಯಾಚಾರ್ಯನಾಮಾ ಸುರತ್ಕಲ್ ಗ್ರಾಮ ಭೂಷಣಂ ।
ಸಾಹಿತ್ಯ ರಸಿಕಃ ಶ್ರೀಮಾನ್ ಸಜ್ಜನೋ ಜಯತಿ ಸ್ವಯಂ ॥ ೨ ॥

ನಾನಾ ಕಾವ್ಯ ಕದಂಬಂ ಶೋಧನ ಬುದ್ಧ್ಯಾ ವಿಚಾರ್ಯ ಸಂತುಷ್ಟಃ
ವಿದ್ವಾನ್ ವೇಂಕಟರಾಯಾಚಾರ್ಯಃ ಪ್ರಾಚಾರ್ಯಕುಲ ಶ್ಲಾಘಿತೋ ಭಾತಿ ॥ ೩ ॥

ಶುಭಂ ಭಗವತೀ ದುರ್ಗಾ, ಮಂಗಲಂ ಮಂಗಲಾಂಬಿಕಾ ।
ಭದ್ರಂ ಭಾರ್ಗವ ಪುತ್ರೀ ಚ, ಕಲ್ಯಾಣಂ ಕುಲದೇವತಾ ॥ ೪ ॥

x x x x x

ಶುಭಾಶಯ:

—ಶ್ರೀ ಕುರಾಡಿ ಸೀತಾರಾಮ ಅಡಿಗ, ಕ್ರೋಡಾಶ್ರಮ

ಓ! ಸಂಶೋಧಕ! ಬೋಧಕ!
ನಾ ನಿಮ್ಮ ಕಂಡಿದ್ದೆ; ಕೇಳಿದ್ದೆ ಹಲಬಾರಿ;
ನಿಮ್ಮ ಕಣ್ಣಿನ ದೃಷ್ಟಿ ಹಿಂಗಿತ್ತೆ? ಅಥವಾ,
ಹೊರಹೊರಟು ಸಾಹಿತ್ಯ ಪುಟಗಳಲಿ ನೆಟ್ಟಿತ್ತೆ?
ಆದರೆ, ಇಷ್ಟೊಂದು ಗೊತ್ತು,
ನಿಮ್ಮ ದೃಷ್ಟಿ ನರ ಸತ್ತಿತ್ತು ಕೊಂಚ
ಕಣ್ಣು ಕುರುಡಿತ್ತು; ಒಳಗೊಳಗೆ ಹುರುಡಿತ್ತು;
ನಿಮ್ಮ ಕೈ ಮೈಯ ಇಂದ್ರಿಯವೆಲ್ಲ
ಚೈತನ್ಯವಾರಿ ಚಿಮ್ಮಿತ್ತು;

ಬೆಳಕಾಗಿ ಹೊಮ್ಮಿತ್ತು,
ಕಣ್ಣಿದ್ದೂ ಎಡವಿದವರಿಗೆ ದೃಷ್ಟಿ ಕೊಟ್ಟಿತ್ತು.
ಮೇಲೆ ಮೇಲೀಜಾಡಿ ಮುತ್ತು ಹೆಕ್ಕುವ ಆಸೆ,
ಅಂಗಶೃಂಗಾರದಿಂ ಮಹಾನುಭಾವ!
ಗೊಗ್ಗರು ದನಿ ಮೊರೆಯ ಸಂಗೀತ ಸಾಮ್ರಾಟ !
ಬೇಂಡು ಬಜಂತ್ರಿ ಹಾರ ಹಾರಾಟ !
ನನಗಾದರೆ ನೀನು, ನಾನು ನಿನಗಪ್ಪೆ
ಎಂಬುಭಯ ಸಂಬಂಧ ಸಾಹಿತ್ಯ ಸತ್ವಕ್ಕೆ
ಕಿಲುಬನಂಟಿಸಿದಾಗ
ನಿಮ್ಮ ಅಂತರ್ದೃಷ್ಟಿ-ಎದೆಯೂಟೆ
ಹುರುಳ ತಿರುಳನು ಹೆಕ್ಕಿ. ಹೊರಗಿಕ್ಕಿ,
ಸತ್ಯದನಾವರಣ ನಡೆಸಿತ್ತು.
ಕನ್ನಡ ಸಾಹಿತ್ಯಕ್ಕೆ ಸಂಶೋಧನೆ, ವಿಮರ್ಶೆಯ ಚಿಕಿತ್ಸೆ ನಡೆಯಿತು.

ಸತ್ಯವಾದಿಗಳುಂಟು, ಸುಳ್ಳಿಗರು ಹಲರುಂಟು.
ಸತ್ಯ ಕಾಲ್ ತೊಡಕಾದಾಗ
ಸುಳ್ಳು ಲೇಪನದಿಂದ ಮೆರೆದವರು ಉಂಟು.
ಕಟು ಸತ್ಯವ್ರತದಿಂದ ಮುಳ್ಳುಮಣೆಯಲಿ ಕುಳಿತು
ರತ್ನ ಸಿಧಿಯನು ಮೆರೆಸಿದವರಿಲ್ಲ-ಹೆಚ್ಚು
ಜಗಕೆ ಒರಟು,

ಸಾಹಿತ್ಯ ಸೇವೆಯಲಿ ದುರ್ಗಮ ಯಾನ
ವಿಮರ್ಶೆ, ಸಂಶೋಧನ, ಪ್ರಕಾಶನ
ಮುಪ್ಪುರಿಯ ಸಾಧನೆಯ ಮನನ
ಸಾರ್ಥಕ ಜೀವನ, ನಿಮ್ಮ ಗೈಮೆಯ ಬೀಜ
ಮೊಳೆತು ಚಿಗುರಾಗಿ, ಕನ್ನಡದ
ಸಾಹಿತ್ಯವರವಾಗಿ, ಕುಸುಮಿಸಿ ಕಂಪಾಗಿ
ನಿಮ್ಮ ಷಷ್ಟ್ಯಬ್ದಿಯ ಸಾಧನದ ಕೆನೆಯಾಗಿ
ಜೀವ ತಂಪಾಗಲಿ. ನೂರ್ವರುಷ ನಿಮ್ಮ
ಬಾಳ್ ಗಾನ ಕನ್ನಡದ ಎದೆ ಮಿಂಚಿಸಲಿ,
ಸಾಧನೆಯು ಸತ್ಯವಾಗಲಿ, ಬಾಳ್ ಶಿವವಾಗಲಿ, ನಾಡು ಸುಂದರವಾಗಲಿ!

x x x x x

ಹಾರಯ್ಕೆ

—ಶ್ರೀ. ಕ. ಪು. ಸೀತಾರಾಮ ಕೆದಿಲಾಯ, ಶಿಶಿಲ

|| ಕಂದ ||

ವೆಂಕಟರಾಯಾಚಾರ್ಯರೆ ।
ತೆಂಕಣ ಕನ್ನಡದೊಳೆಸೆವ ಪರಿಣತ ವಿದ್ವ ।
ತ್ಸಂಕುಲದೊಳೆಣಿಸೆ ನೀಂ ನಿ ।
ಶ್ಶಂಕೆಯಿನುತ್ತುಂಗ ಪಙ್ಕ್ತಿಯೊಳ್ ರಂಜಿಸುವಿರ್ || ೧ ||

ಸಕಲರ್ ತಿಳಿವಂದದೆ ನೀಂ ।
ಸುಕವೀಶ್ವರರಚಿತ ವಿವಿಧ ಪೂರ್ವ ಸುಕಾವ್ಯ ।
ಪ್ರಕರವ ಮುದ್ರಿಸಿ ಚೆಲ್ವಿಂ ।
ಪ್ರಕಟಿಸಿ ಸುಕೃತಿ ಪ್ರಚಾರ ಕಾರ್ಯವ ಗೆಯ್ವಿರ್ || ೨ ||

ವಿವಿಧ ವಿಚಿತ್ರ ವಿಚಾರವ ।
ವಿವೇಚನೆಯುನೆಸಗಿ ವಿಸ್ತರದ ತರ್ಕದೆ ನೀಂ ।
ವಿವರಿಸಿ ವಿಮಲ ವಿಮರ್ಶೆಯು
ವಿವೇಕಿಗಳ್ ಮೆಚ್ಚುವಂತೆ ಬರೆವಿರ್ ಹಿತದಿಂ || ೩ ||

ಕನ್ನಡ ನಲ್ನುಡಿಯೋಜರೆ ।
ಕನ್ನಡ ಕುವರರೆ ವಿದಗ್ಧ ಬುಧಜನ ಸಭೆಯೊಳ್ ।
ಸನ್ನುತ ಧಾರ್ಮಿಕ ಗುರುವರ ।
ಸನ್ನಿಧಿಯೊಳ್ ಮಾನ್ಯತಾ ಪ್ರಶಸ್ತಿಯ ಪಡೆದಿರ್ || ೪ ||

ಶುಭಮಂ ದೀರ್ಘಾಯುವ ಸ ।
ತ್ಪ್ರಭಾವ ಬುದ್ಧಿಯ ಯಶೋವಿಶೇಷವ ಬಲಮಂ ||
ವಿಭವೋನ್ನತಿಯಾಂ ಸುಖಮಂ
ತ್ರಿಭುವನ ವಿಭುದೇವನೊಲ್ದು ನಿಮಗೀಗೆಂದುಂ || ೫ ||

X X X X X X

೨. ಸಂದೇಶಗಳು:

ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನಮ್ ಶಾರದಾ ಪೀಠಮ್, ಶೃಂಗೇರಿ (ಖಾಸಗಿ ಕಾರ್ಯದರ್ಶಿಯವರು);

ಕಳೆದ ಮೂವತ್ತಾರು ವರ್ಷಗಳಿಂದ ಕನ್ನಡ ವಾಙ್ಮಯಕ್ಕೆ ಸತತ ಸೇವೆ ಸಲ್ಲಿಸುತ್ತಿರುವ ಶ್ರೀ ಕೆ. ವೆಂಕಟರಾಯಾಚಾರ್ಯರಿಗೆ ತಾವುಗಳೆಲ್ಲ ಮಾಡುತ್ತಿರುವ ಗೌರವವು ಯೋಗ್ಯವಾದುದು—ಶ್ರೀಯುತರು ಇತೋಽಪ್ಯತಿಶಯವಾಗಿ ತಮ್ಮ ಸಾಹಿತ್ಯ ಸೇವೆಯನ್ನು ಮುಂದುವರಿಸುವಂತಾಗಲೆಂದು ಶ್ರೀಗಳು ಆಶೀರ್ವದಿಸುತ್ತಾರೆ.

x x x x x x x

ಶ್ರೀ ಸೋದೆ ವಾದಿರಾಜ ಮಠ, ಉಡುಪಿ

ಶ್ರೀ ಗುರುರಾಜರ ಸಂಸ್ಥಾನದ ಮೇಲೆ ಮುಖ್ಯಾಭಿಮಾನಿಗಳಾದ ವೆಂಕಟರಾಯಾಚಾರ್ಯರಿಗ ಮಾಡುವ ಶ್ರೀಮನ್ನಾರಾಯಣ ಸ್ಮರಣೆಗಳು. ನೀವು ವಿದ್ವಾಂಸರೂ ವಿಮರ್ಶಕರೂ, ಸಂಶೋಧಕರೂ ಆಗಿ ಗಹನಗಳಾದ ವಿಷಯಗಳ ಮೇಲೆ ಅನೇಕ ಲೇಖನಗಳನ್ನು ಬರೆದು ವಿದ್ವಾಂಸರ ಮೆಚ್ಚುಗೆ ಪಡೆದಿದ್ದೀರಿ. ನಿಮಗೆ ಆಯುರಾರೋಗ್ಯಾದಿ ಸಕಲ ಸಂಪತ್ತನ್ನು ಕರುಣಿಸಲೆಂದು ಶ್ರೀ ದೇವರಲ್ಲಿ ಹಾಗೂ ಶ್ರೀ ಗುರುರಾಜರಲ್ಲಿ ಪ್ರಾರ್ಥಿಸುತ್ತೇವೆ,

x x x x x x x

ಶ್ರೀ ಪೇಜಾವರ ಮಠಾಧೀಶರು, ಉಡುಪಿ

ನಮ್ಮ ಅಭಿಮಾನಪಾತ್ರರಾದ ಶ್ರೀ ವೆಂಕಟರಾಯಾಚಾರ್ಯರನ್ನು ಅಭಿನಂದಿಸುವ ಗ್ರಂಥ ಪ್ರಕಟವಾಗಲಿರುವುದೆಂದು ತಿಳಿದು ನಮಗೆ ಸಂತೋಷವಾಗಿದೆ. ಸಾಹಿತಿಯಾಗಿ, ವಿಮರ್ಶಕರಾಗಿ ಇವರು ಕನ್ನಡ ಸಾಹಿತ್ಯಕ್ಕೆ ಇನ್ನೂ ಹೆಚ್ಚಿನ ಸೇವೆಯನ್ನು ಕಾಣಿಕೆಯಾಗಿ ಸಲ್ಲಿಸುವಂತಾಗಲಿ ಎಂದು ಹಾರೈಸುವುದರ ಜೊತೆಗೆ ನಮ್ಮ ತುಂಬು ಹೃದಯದ ನಾರಾಯಣ ಸ್ಮರಣೆಗಳು

x x x x x x x

ಶ್ರೀ ಉರವಕೊಂಡದ ಜಗದ್ಗುರುಗಳು, ಬೆಂಗಳೂರು

ಸಾಹಿತ್ಯಭೀಷ್ಮರೆನಿಸಿದ ರಾಷ್ಟ್ರಕವಿ ಶ್ರೀ ಎಂ. ಗೋವಿಂದ ಪೈಗಳ ಆದರ್ಶದಲ್ಲೆ ಮುನ್ನಡೆಯುತ್ತಿರುವ ಶ್ರೀ ವೆಂಕಟರಾಯಾಚಾರ್ಯರ ಬಗ್ಗೆ ನಮಗೆ ಅಪಾರ ಅಭಿಮಾನವಿದೆ. ಅವರನ್ನು ಸತ್ಕರಿಸುತ್ತಿರುವುದೆಂದರೆ ದ. ಕ. ಜಿಲ್ಲೆಯನ್ನೆ ಗೌರವಿಸಿದಂತೆ ಎಂದು ನಾವು

ನಂಬಿದ್ದೇವೆ. ಅವರು ನೂರು ವರ್ಷಗಳ ಕಾಲ ಆರೋಗ್ಯವಾಗಿ ಬಾಳಿ, ಇನ್ನೂ ಹೆಚ್ಚಿನ ಸೇವೆ ನಾಡಿಗೆ ಸಲ್ಲಿಸಲಿ ಎಂದು ಅಂತಃಕರಣಪೂರ್ವಕವಾಗಿ ಶ್ರೀ ದೇವರಲ್ಲಿ ಪ್ರಾರ್ಥಿಸುತ್ತೇವೆ.

x x x x x x x

ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ, ಕಟೀಲು
ಧರ್ಮದರ್ಶಿ, ಪ್ರಧಾನಾರ್ಚಕ-ಗೋಪಾಲಕೃಷ್ಣ ಆಸ್ರಣ್ಣ

ಶ್ರೀ ವೆಂಕಟರಾಯಾಚಾರ್ಯರು ಬಾಹ್ಯದೃಷ್ಟಿಗೆ ಸರಳರಾಗಿದ್ದರೂ 'ತುಂಬಿದ ಕೊಡ' ಎಂಬುದು ಸರ್ವವಿದಿತವೇ–ಇನ್ನು ಮುಂದೆಯೂ ಶ್ರೀಯುತರಿಂದ ಸಾಹಿತ್ಯಸೇವೆ ಅವ್ಯಾಹತವಾಗಿ ನಡೆಯುತ್ತಿರಲೆಂದು ಆಶಿಸುವೆನು.

x x x x x x x

ಶ್ರೀ ಧರ್ಮಸ್ಥಳ ವೀರೇಂದ್ರ ಹೆಗ್ಗಡೆಯವರು, ಧರ್ಮಸ್ಥಳ

ಶ್ರೀ ವೆಂಕಟರಾಯಾಚಾರ್ಯರು ಸಾಹಿತ್ಯ, ಕಲೆ, ಸಂಶೋಧನೆ, ಕೃತಿರಚನೆಗಾಗಿ ಬದುಕಿನ ಬಹುಭಾಗವನ್ನು ತೇದವರು, ಅವರ ಶ್ರಮ, ಅಭಿರುಚಿ, ಅನುಭವಗಳು ಇಂದಿನ-ಮುಂದಿನ ಕನ್ನಡಿಗರ ಅಮೂಲ್ಯ ನಿಧಿ, ಅಂಥ ಸಾರ್ಥಕ ಜೀವದ ಮಹೋನ್ನತಿಕೆಗೆ ಸಮುನ್ನತವಾದ ಗ್ರಂಥವು ಸಂಭಾವನೆಯಾಗಿ, ಕನ್ನಡಿಗರ ಸಹೃದಯತೆಯು ದ್ಯೋತಕವಾಗಿ ಪ್ರಕಟವಾಗಲಿ, ಅವರಿಗೆ ಆರೋಗ್ಯ ಸುಖಶಾಂತಿಗಳು ಲಭಿಸಲಿ, ಹಾಗೆ ಶ್ರೀ ಸ್ವಾಮಿ ಅನುಗ್ರಹಿಸಲಿ.

x x x x x x x

ಡಾ. ಕುವೆಂಪು, ಮೈಸೂರು

ವಿದ್ವಾನ್ ಸುರತ್ಕಲ್ಲು ವೆಂಕಟರಾಯಾಚಾರ್ಯರು ಕನ್ನಡದ ದೊಡ್ಡ ವಿದ್ವಾಂಸರಲ್ಲಿ ಒಬ್ಬರು. ಇಂಥ ವಿದ್ವಾಂಸರನ್ನು ಕನ್ನಡನಾಡು ಉಚಿತವಾದ ರೀತಿಯಲ್ಲಿ ಸನ್ಮಾನಿಸುತ್ತದೆ ಎಂದು ತಿಳಿದು ತುಂಬ ಸಂತೋಷವಾಗಿದೆ. ಈ ಸಂದರ್ಭದಲ್ಲಿ ನನ್ನ ಹೃತ್ಪೂರ್ವಕವಾದ ಶುಭಾಶಯಗಳನ್ನು ಈ ವಿದ್ವಾಂಸರಿಗೆ ತಿಳಿಸಬೇಕೆಂದು ಕೋರುತ್ತೇನೆ.

x x x x x x x

ಡಾ. ವಿ. ಸೀತಾರಾಮಯ್ಯ, ಬೆಂಗಳೂರು

ಶ್ರೀ ವೆಂಕಟರಾಯಾಚಾರ್ಯರಿಗೆ – ನಿಮ್ಮ ವಿದ್ವತ್ತೆ, ಸಾಹಿತ್ಯ ವ್ಯವಸಾಯ ಕನ್ನಡ ನಾಡಿಗೆಲ್ಲ ಗೊತ್ತಿದೆ. ಅದಕ್ಕೆ ಇನ್ನಾರ ಹರಕೆ, ಪ್ರಶಂಸೆ ಬೇಕು? ನಿಮ್ಮ ಕೆಲಸ, ಸಾಧನೆ ಇವೇ ಇವಕ್ಕೆ ಹರಕೆಗಳು. ಪ್ರೀತಿ ವಿಶ್ವಾಸಗಳಿಂದ ಕಾರ್ಯ ಮಾಡಿ, ಖಂಡಿತ ಅವೇ ನಿಮ್ಮಿಂದ ಸಾಹಿತ್ಯ ಸೇವೆ ಮಾಡಿಸುವುವೆಂದು ನಂಬಿದ್ದೇನೆ. ನಿರಂತರ ನಿಮ್ಮ ಶ್ರಮದಿಂದ ಸಾರಸ್ವತ ಸಂಪದ ಬೆಳೆಯಲಿ.

x x x x x x x

ಶ್ರೀ ಹಂಪನಾ, ಅಧ್ಯಕ್ಷ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು

36 ವರ್ಷಗಳಿಂದ ವಿದ್ವಾನ್. ಶ್ರೀ. ಕೆ. ವೆಂಕಟರಾಯಾಚಾರ್ಯರು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಪ್ರಾಮಾಣಿಕವಾಗಿಯೂ, ಪ್ರಾಂಜಲವಾಗಿಯೂ ಆದ ಪರಿಮಿತಿ ಬರೆವಣಿಗೆಯ ಮೂಲಕ ತಮ್ಮ ಕೈಲಾದ ಸೇವೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ, ಈ ಗೌರವ ಗ್ರಂಥ ಬಹುಕಾಲ ನಿಲ್ಲುವ ಉಪಯುಕ್ತ ಲೇಖನಗಳೊಡನೆ ವ್ಯುತ್ಪಂಚಿಕೊಂಡು ಪ್ರಕಟವಾಗಲೆಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

x x x x x x x

ಶ್ರೀ ಹೆಚ್, ಎ. ನಾರಾಯಣ, 'ಯಾತ್ರಿಕ ಪತ್ರಿಕೆ' ಬೆಂಗಳೂರು

ಪ್ರಸ್ತುತ ಸನ್ಮಾನದ ಶುಭವಾರ್ತೆಯನ್ನು ನಾವು ಎಷ್ಟೋ ವರ್ಷಗಳ ಹಿಂದೆ ಕೇಳಬೇಕಾಗಿತ್ತು, ಕನ್ನಡಿಗರು ಸ್ವಲ್ಪ ನಿಧಾನಿಗಳು. ಈಗಲಾದರೂ ನಡೆಯಲಿ, ಬಹು ಸಂತೋಷ.

x x x x x x x

ಡಾ. ಎ. ಎಸ್. ಕೆದಿಲಾಯ, ಮದ್ರಾಸ್

36 ವರ್ಷಗಳ ಹಿಂದಿನಲ್ಲೆ ಶ್ರೀ ವೆಂಕಟರಾಯಾಚಾರ್ಯರನ್ನು ನಾನು ಬಲ್ಲೆ. ಗ್ರಂಥ ಭಾಂಡಾರ, ವಿಶ್ವವಿದ್ಯಾಲಯಗಳ ಆಶ್ರಯ, ಪರಿಣತರ ಮಾರ್ಗದರ್ಶನ ಮೊದಲಾದವುಗಳಿಲ್ಲದ ಒಳ ಗ್ರಾಮದಲ್ಲಿದ್ದುಕೊಂಡು ಆಚಾರ್ಯರು ಅನೇಕ ಕೃತಿ-ಶಾಸನಗಳ, ಅಮೂಲ್ಯ ಸಂಶೋಧನೆ-ಪ್ರಕಟಣೆಗಳ ಮೂಲಕ ಸಾಹಿತ್ಯಸೇವೆ ಮಾಡಿರುವುದು ಒಂದು ಪವಾಡ ಕಾರ್ಯವೇ. - ಅವರ ಜೀವನದಲ್ಲಿ ಸರ್ವತೋಮುಖವಾದ ಅಭಿವೃದ್ಧಿಯಾಗಲೆಂದು ಹಾರೈಸುತ್ತೇನೆ.

x x x x x x x

ಶ್ರೀ ಕೆ. ಎನ್. ಶಾಸ್ತ್ರಿ, ಚೆಯರ್‌ಮೇನ್, ಕರ್ಣಾಟಕ ಬೇಂಕ್, ಮಂಗಳೂರು

ಸಾಹಿತ್ಯ ಸಂಶೋಧಕರೂ, ವಿಮರ್ಶಕರೂ. ಗ್ರಂಥಕರ್ತರೂ ಆಗಿರುವ ಶ್ರೀ ಆಚಾರ್ಯರ ತುಂಬುಬಾಳಿನ ಸಾರ್ಥಕ್ಯದಿನಗಳ ಪ್ರಸಾರಕ್ಕಾಗಿ ಏರ್ಪಡಿಸಲಾಗಿರುವ ಈ ಕಾರ್ಯಕ್ರಮ ನಿಜಕ್ಕೂ ಸ್ತುತ್ಯ—ಅಭಿನಂದನೀಯ,

x x x x x x x

ಶ್ರೀ ಯು. ಎಸ್. ಕೃಷ್ಣ ರಾವ್, ಕದ್ರಿ

ಶ್ರೀ ವೆಂಕಟರಾಯಾಚಾರ್ಯರು ಕನ್ನಡ ಸಾಹಿತ್ಯದಲ್ಲಿ ಅನೇಕ ಸಂಶೋಧನೆ ಕಾರ್ಯಗಳನ್ನು ನಡೆಸಿದ್ದಾರೆ. ಕನ್ನಡ ನಾಡಿಗೆ ಇಂಥವರು ಭೂಷಣಪ್ರಾಯರು, ಕನ್ನಡದ

ಎಲ್ಲೆಡೆಯು ಜನರೂ ಈ ಮಾತನ್ನು ಹೇಳುತ್ತಿದ್ದಾರೆ, ಇವರು ನಡೆಸಿದ 60 ವರ್ಷಗಳ ಬಾಳ್ವೆ ನಮಗೆಲ್ಲ ಕೀರ್ತಿದಾಯಕ. ಇವರಿಗೆ ದೇವರು ಆಯುರಾರೋಗ್ಯ ಭಾಗ್ಯಗಳನ್ನು ಕರುಣಿಸಲಿ ಎಂದು ನನ್ನ ಹಾರ್ದಿಕ ಭಾವನೆ.

x x x x x x x

ಶ್ರೀ ಎಚ್, ಕೃಷ್ಣ ಶೇಟ್, 'ಸನ್ಮಾರ್ಗ', ಮಂಗಳೂರು

ಮಾನ್ಯ ವೆಂಕಟರಾಯಾಚಾರ್ಯರು ಷಷ್ಟ್ಯಬ್ಧಿ ಪೂರ್ತಿಯಾಗಲಿರುವಾಗ ಸ್ವಾಧ್ಯಾಯ ವ್ರತದಿಂದ ಮಾನವನಿಂದ ಮಾಧವನ ವರೆಗೆ ಮಾನ್ಯರಾದರು. ಇವರ ಸಾಹಿತ್ಯವನ್ನು ನಾವೆಲ್ಲರೂ ಆಸ್ವಾದಿಸುವಾಗ, ಇವರನ್ನು ಗೌರವಿಸುವುದು ಸೂಕ್ತ, ಈ ಪುಣ್ಯಾತ್ಮರ ಸಾಹಿತ್ಯ ಕ್ಷಿತಿಯು ಮೇಲೆ ಇನ್ನಷ್ಟು ಹೆಚ್ಚು ವ್ಯವಸಾಯುವಾಗಲಿ, ದೀಪದಂತೆ ಎಲ್ಲೆಡೆ ಪ್ರಕಾಶಮಾನವಾಗಲಿ,

x x x x x x x

ಶ್ರೀ ಕೆ. ಎಚ್. ಶ್ರೀನಿವಾಸ ,ರಾಜ್ಯಮಂತ್ರಿ, ಬೆಂಗಳೂರು

ತಮ್ಮ ಸಾಹಿತ್ಯ ಸೇವೆ ಸುಸೂತ್ರವಾಗಿ ಸರಾಗವಾಗಿ ಮುಂದುವರಿಯಲಿ ಎಂದು ಹಾರೈಸಿ, ತಮಗೆ ಶುಭವನ್ನು ಕೋರುತ್ತೇನೆ.

x x x x x x x

Smt. Manorama Madhvaraj, Minister of State, Bangalore

Thank you very much for the invitation to the dedicate of a felicitation anthology to Literature Sri Venkatarayacharya. I send my best wishes for the success of the function.

x x x x x x x

Sri U. U. N. Variyar, P. B. No. 8. Suratkal

The volume called 'Pradipike' brought out by the several eminent writers to honour the 60th birth day of Sri Venkataraya Acharya, Vidwan, Surathkal, is really a monumental work-worthy of this great Scholar-May our Lord Shower upon Sri. K. Venkataraya Acharya, his purest, noblest and choicest of blessings throughout his life.

× × × ×

೩. ಕೃತಿ ಪರಿಚಯಗಳು :

೧. ‘ಸಾಹಿತ್ಯದ ಹಿನ್ನೆಲೆ’ಯಲ್ಲಿ

—ಶ್ರೀ ಕೆ. ಎಸ್. ನಿಡಂಬೂರ್, ಮುಂಬಯಿ

“ಸಂಶೋಧಕ ಒಂದು ವಿಚಿತ್ರ ಪ್ರಾಣಿಯೆಂದೂ, ಮುಳ್ಳುತಿನ್ನುವ ಒಂಟೆಯೆಂದೂ, ಅವನ ಕೆಲಸ ಕತ್ತೆಕೆಲಸವೆಂದೂ ಮೂಗುಮುರಿಯುವ ಕೆಲವು ರಸಿಕ ಮಹನೀಯರಿದ್ದಾರೆ. ಇವರೆಲ್ಲ ಸಂಶೋಧಕನನ್ನು ತಿರಸ್ಕಾರ ದೃಷ್ಟಿಯಿಂದ ಕಾಣುವರು. ಲೇಖಕರ ವೃಂದದಲ್ಲಿ ಅವನಿಗೆ ಎಡೆ ಇಲ್ಲ, ಅವನು ಮಾಡುವ ಕೆಲಸ ಸಾಹಿತ್ಯ ಸೇವೆಯೇ ಅಲ್ಲ. ಈಗಿನ ಇಂಥ ಅನುತ್ತೇಜಕ ಪರಿಸ್ಥಿತಿಯಲ್ಲೂ ಸಂಶೋಧನೆಯನ್ನು ಮುಂದುವರಿಸುತ್ತಾ, ತಮ್ಮದೇ ಆದ ರೀತಿಯಲ್ಲಿ ಕನ್ನಡದ ಕೆಲಸವನ್ನು ಮಾಡುತ್ತಿರುವ ಶ್ರೀ ಕೆ. ವೆಂಕಟರಾಯಾಚಾರ್ಯರ ಪ್ರಯತ್ನ ಸ್ತುತ್ಯರ್ಹವಾದದ್ದು-” ಪ್ರಾಧ್ಯಾಪಕ ಡಿ. ಎಲ್. ಎನ್. ಅವರು, ‘ಸಾಹಿತ್ಯದ ಹಿನ್ನೆಲೆ’ಯ ‘ಮುನ್ನುಡಿ’.

ಆವುದೇ ಭಾಷೆಯ ಸಾಹಿತ್ಯಕ್ಕೆ ಪೂರಕವಾಗಿಯೂ ಪ್ರೇರಕವಾಗಿಯೂ ಒದಗಬಲ್ಲಂಥ ಸಂಶೋಧನಾಕಾರ್ಯ ಅತ್ಯಂತ ಕಡಿದಾದ ದಾರಿಯಿಂದ ಮುಂದೆ ಸಾಗಬೇಕಾಗುತ್ತದೆ. ಕೆಲವೊಮ್ಮೆ ಅದು ಸಾಹಿತ್ಯಕ್ಕೆ ಸಮುಚಿತವಾದ ವಸ್ತುವನ್ನು ಒದಗಿಸುತ್ತದೆ. ಮುಖ್ಯತಃ ಸಾಹಿತ್ಯದ ವಸ್ತು, ರೀತಿ ನೀತಿ, ಶೈಲಿ, ವೈಖರಿ-ಇವನ್ನು ನಿರ್ವ್ಯಾಜದಿಂದ ವಿಶ್ಲೇಷಿಸುತ್ತದೆ. ಆದರೆ ಸಂಶೋಧನೆಯ ಕೆಲಸದಲ್ಲಿ ಥಳಕು ಇಲ್ಲ, ರಮ್ಯತೆ ಇಲ್ಲ, ಎಂತಲೇ ಸಾಹಿತ್ಯಪ್ರಿಯರಿಗೆ ಇವರತ್ತ ಜುಗುಪ್ಸೆ, ಕನ್ನಡದಲ್ಲಿ ಸಂಶೋಧನೆಯ ಕಠಿಣ ಕಾರ್ಯವನ್ನು ತೊಡಗಿದದಿಟ್ಟರು ತೀರಾ ವಿರಳ. ಇಂಥವರಲ್ಲಿ ಶ್ರೀ ಕೆ. ವೆಂಕಟರಾಯಾಚಾರ್ಯರಿಗೆ ಒಂದು ಗಣನೀಯ ಸ್ಥಾನವಿದೆ. ಈ ಸಣ್ಣ ಬರೆಹದಲ್ಲಿ ಆವರ ‘ಸಾಹಿತ್ಯದ ಹಿನ್ನೆಲೆ’ಯ 16 ಬರೆಹಗಳ ಒಂದು ಸಂಕ್ಷೇಪ ಪರಿಚಯ ಮಾಡಿಕೊಡುವ ಯತ್ನ ಮಾಡಲಾಗಿದೆ. 1957ನೆ ಇಸವಿಯಲ್ಲಿ ಪ್ರಕಟವಾದ ಈ ಸಂಕಲನ ಆಗಿನ ಮದ್ರಾಸ್ ಸರಕಾರದಿಂದ ಬಹುಮಾನಿತವಾಗಿದೆ.

ಲೇಖನಗಳು :

೧. “ಪಂಪಭಾರತದ ಚಾಲುಕ್ಯರು ಯಾರು?” ಎಂಬ ಬಗೆಗೆ ಇಲ್ಲಿನ ಪ್ರಬಂಧ ವಿಚಾರ ಪ್ರಚೋದಕವಾಗಿದೆ. ೨ ನೆಯ ಪುಲಿಕೇಶಿಯ ಮಗ ರಾಜಾದಿತ್ಯ (=ಆದಿತ್ಯವರ್ಮ)ನ ಕುಲದವರೇ ಇಲ್ಲಿ ಸ್ಫುಟವಾಗಿ ಪ್ರಕೀರ್ತಿತರಾಗಿದ್ದಾರೆ. ಆದಿತ್ಯವರ್ಮನ ಮಗನಿಗೆ ಸಂಬಂಧಿಸಿದ ಶಾಸನವೊಂದು - ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸರಿಗೆ ದೊರೆತುದು (ನಲ್ಲೂರ ಶಾಸನ), ಈ ಅಭಿಪ್ರಾಯಕ್ಕೆ ಸಮರ್ಥನೆಯನ್ನು ಕೊಡುತ್ತದೆ. ಇದುವರೆಗೆ ಈ ವಿಚಾರವನ್ನು ಯಾರೂ ಮಂಡಿಸಿಲ್ಲ.

೨. ಪಂಪಭಾರತದ ವಿಕ್ರಮಾರ್ಜುನನಿಗೆ ಚಾರಿತ್ರಿಕವಾಗಿ ಇಬ್ಬರು ರಾಣಿಯರಿದ್ದರೆ. ಅವರೇ ದ್ರೌಪದಿ – ಸುಭದ್ರೆಯರಾಗಿ ಪಂಪನಿಂದ ನಿರೂಪಿತರೆಂದು–ಇತರರ ಲೇಖನಗಳನ್ನು ಮಂಥನಮಾಡಿ, ಪ್ರತಿಪಾದಿಸಲಾಗಿದೆ. (ಲೋಕಾಂಬಿಕೆ ರೇವಕನಿಮ್ಮಡಿಯೆಂಬ ಹೆಸರುಗಳು ಏಕವ್ಯಕ್ತಿಯದಲ್ಲ; ಆ ಹೆಸರಿನ ವ್ಯಕ್ತಿಗಳಿಬ್ಬರೆಂದು ಶಾಸನವಿವೇಚನೆಯಿಂದ ಇಲ್ಲಿ ತಿಳಿಸಿದೆ.)

೩. ಪಂಪಭಾರತದ ಕರ್ಣನೆಂದರೆ, ಚಾರಿತ್ರಿಕವಾಗಿ ಪರಿಶೀಲಿಸಿದಾಗ 'ಲಕ್ಷ್ಮಯ'ನಿರಬೇಕೆಂದು ಸಾಧಾರವಾಗಿ ನಿರೂಪಿಸಲಾಗಿದೆ.

೪. ರನ್ನನ 'ಗದಾಯುದ್ಧ'ದಲ್ಲಿ, ಶಾಸನಗಳಲ್ಲಿ ಕಾಣುವ 'ರಾಜ' ಬಳಗದವರ ಬಗೆಗೆ ಸಾಕೂತವಾದ ವಿವರವಿಲ್ಲಿದೆ, ರನ್ನಕೃತಿಯ ಅಭ್ಯಾಸಿಗಳಿಗೆ ಇದು ಉಪಯುಕ್ತವಾಗಿದೆ.

೫ ಕವಿರನ್ನನು ಶಾಸನವನ್ನು ಬರೆದನೆಂದು ವಿದ್ವಾಂಸರೊಬ್ಬರ ವಾದವಿದೆ (ತೀ. ನಂ, ಶ್ರೀ). ಆದರೆ ಆ ಶಾಸನ ಹಾಗೂ ರನ್ನಕೃತಿಗಳ ಪರಿಶೀಲನೆಯಿಂದ ಆ ವಾದಕ್ಕೆ ಅವಕಾಶವಿಲ್ಲೆಂದು ಇಲ್ಲಿ ಹೇಳಲಾಗಿದೆ,

೬. 'ಕವಿರಾಜಮಾರ್ಗ'ದ 'ಚಕ್ರಬಂಧ' ಮತ್ತು ಇತರ ಆಧಾರಗಳ ಮೇರೆಗೆ ಅದರ ಕರ್ತೃ ಶ್ರೀ ವಿಜಯನೆಂದು ಶ್ರೀ ಮುಳಿಯ ತಿಮ್ಮಪ್ಪಯ್ಯನವರ ಅಭಿಪ್ರಾಯ. ಅದನ್ನು ಇತರ ಕಾವ್ಯಗಳ 'ಚಕ್ರಬಂಧ'ಗಳ ಪರಿಶೀಲನೆಯಿಂದ ಸಮರ್ಥಿಸಲಾಗಿದೆ. (ಚಕ್ರಬಂಧದಲ್ಲಿ ಕವಿ–ಕಾವ್ಯನಾಮವಿರಬೇಕು ಎಂಬ ನಿಯಮವಿದೆ) 'ಶ್ರೀ–ವಿಜಯ'ರೆಂದರೆ ಇಬ್ಬರು ವ್ಯಕ್ತಿಗಳಿರಬಹುದೆಂಬ ಸಂಭಾವ್ಯವಾದ ಊಹೆಯೂ ಇಲ್ಲಿದೆ (ನೃಪತುಂಗ ರಾಜನಿಗೆ ಓರ್ವ ಮಗಳಿದ್ದುದು ಶಾಸನ ವಿದಿತ. ಇನ್ನೊಬ್ಬಳ ಪರ್ಯಾಯ ನಾಮವೇ 'ಶ್ರೀ' ಇರಬೇಕೆಂದುದು ನಿರಾಧಾರವಾಗಿಲ್ಲ).

೭. ದೇವರದಾಸಿಮಯ್ಯನು ಚಾಳುಕ್ಯ ಜಯಸಿಂಹ ರಾಜನ ಕಾಲದಲ್ಲಿದ್ದನೆಂದು–ಶಾಸನ ಇಲಾಖೆಯ ಸಹಕಾರದಿಂದ - ಶಾಸನಾಧಾರದಿಂದ ಹಾಗೂ ಕಾವ್ಯಾಧಾರದಿಂದ ಸ್ಪಷ್ಟೀಕರಿಸಲಾಗಿದೆ.

೮. ಕುಮಾರವ್ಯಾಸನ ಕಾಲ ಯಾವುದೆಂದು ಪ್ರಸಿದ್ಧ ವಿದ್ವಾಂಸರಿಬ್ಬರಲ್ಲಿ ವಾದವಿದೆ (ಶ್ರೀ ಎಂ. ಗೋವಿಂದ ಪೈ: 13ನೆ ಶತಕದ ಪೂರ್ವಾರ್ಧ-ಡಾ. ರಂ, ಶ್ರೀ. ಮುಗಳಿ; 14 ನೆ ಶತಕದ ಪೂರ್ವಾರ್ಧ). ಆದರೆ, ಈ ಎರಡು ಅವಧಿಯ ಮಧ್ಯವರ್ತಿ ಕಾಲವೇ ಸ್ವೀಕಾರಾರ್ಹವೆಂದು (13 ಶ. ಉತ್ತ,) ಸಯುಕ್ತಿಕವಾಗಿ ಇಲ್ಲಿ ನಿರೂಪಿಸಲಾಗಿದೆ. (ಕುಮಾರ ವಾಲ್ಮೀಕಿ 'ಮೈರಾವಣ ಕಾಳಗ'ದಲ್ಲಿ ಶೃಂಗೇರಿಯ ವಿದ್ಯಾಶಂಕರರನ್ನು ಸ್ತುತಿಸಿದ್ದು; ಆತ ಕುಮಾರವ್ಯಾಸನನ್ನು ಸ್ತುತಿಸಿದ್ದು ಕೂಡಾ ಇಲ್ಲಿ ಎತ್ತಿ ಹೇಳಲಾಗಿವೆ).

೯. **ಶ್ರೀ ಮಧ್ವಾಚಾರ್ಯರ ಕಾಲಮಾನದ ಬಗೆಗೆ** ಹಲವಾರು ವಿದ್ವಾಂಸರು ಆಧರಿಸಿದ ಗ್ರಂಥಗಳಲ್ಲಿ, ಮಹಾಭಾರತ ತಾತ್ಪರ್ಯ ನಿರ್ಣಯೋಕ್ತ ಕಾಲವೇ (ಇ 1199-1278) ಆದರಣೀಯವೆಂದು, ಅದಕ್ಕೆ ಶ್ರೀ ಮಠಗಳ 'ಕೈಫಿಯತ್'ಗಳು ಮೊದಲಾದ ಆಧಾರಗಳಿವೆಯೆಂದು ಇಲ್ಲಿ ಹೇಳಿದೆ. ಇತರ ಲೇಖಗಳ ತಪ್ಪುಗಳೇನೆಂದೂ ವಿಮರ್ಶಿಸಲಾಗಿದೆ. ಪುಣೆಯ ಭಾಂಡಾರ್ಕರ್ ಸಂಶೋಧನ ಸಂಸ್ಥೆಯ ಕ್ಯುರೇಟರ್ ಪ್ರಾ. ಪಿ. ಕೆ. ಗೋಡೆಯವರ ಸಂಭಾವನ ಗ್ರಂಥದಲ್ಲಿ ಕೂಡಾ ಈ ಲೇಖ ಸಂಸ್ಕೃತದಲ್ಲಿ ಪ್ರಕಟವಾಗಿದೆ!

೧೦. **ವಿಜಯನಗರ ಕಾಲದ**-ನೆರೆಯ ಚಿತ್ರಾಪುರದ – 3 ಶಿಲಾಶಾಸನಗಳ ಹಾಗೂ ಪೇಜಾವರದ ಒಂದು ತಾಮ್ರ ಶಾಸನದ ಪರಿಚಯ ಇಲ್ಲಿ ಬರೆದಿದೆ. ಈ ಮಠಗಳ ಸಂಬಂಧ ಸೂಚಿಸಲಾಗಿದೆ.

೧೧. **ಅಶೋಕ ಮಹಾರಾಜನ ಶಾಸನದಲ್ಲಿ** 'ಸತಿಯ ಪುತ್ರ'ವೆಂದುದು ವ್ಯಾಸ ಭಾರತದಲ್ಲಿ ಹೇಳಿದ 'ಸತಿಯಾಃ' 'ಸತೀನರಾಃ ಎಂಬಂತಿದ್ದು, ಅದು ತೌಳವ ಪ್ರದೇಶದ-ತೌಳವ ಜನಾಂಗದ –ಹೆಸರೆಂದು ಬಿತ್ತರಿಸಲಾಗಿದೆ (ಸತಿಯರೇ ಪುತ್ರರಾಗಿರುವಂಥ ಕೌಟುಂಬಿಕ ಕ್ರಮ ತೌಳವರಲ್ಲಿ ಆ ಕಾಲಕ್ಕೆ ಪ್ರಚುರವಿದ್ದಿರಬೇಕು.)

೧೨. ರತ್ನಾಕರ ವರ್ಣಿಯ 'ಭರತೇಶ ವೈಭವ'ದಲ್ಲಿ, 'ಮುದ್ದಣ'ನ 'ಶ್ರೀ ರಾಮಾಶ್ವಮೇಧ'ದಲ್ಲಿ ಪ್ರಯೋಗಿಸಲಾದ ಕೆಲವು ತುಳು ನುಡಿಗಳ ವಿವೇಚನೆಯಿಲ್ಲಿದೆ,

೧೩, 'ಕಪೋತ'ವೆಂದರೆ ಪಾರಿವಾಳ, ಮಂಗಲಕಾರಕವಾದ ಹಕ್ಕಿಯೆಂದು ಸಾಮಾನ್ಯಾರ್ಥವಿದೆ. ಆದರೆ, ದುಷ್ಟರ ಬಗೆಗೆ 'ಕಪೋತ'ವೆಂದು ಬಳಸುವಾಗ (ರನ್ನನ ಗದಾಯುದ್ಧ. ಇ), ಅಮಂಗಲಕಾರಕವೆಂದು, ದುಷ್ಟ ಪಕ್ಷಿಯೆಂದು ತಿಳಿಯುವಂತಿದೆ. ಇದಕ್ಕೆ ವಿಷ್ಣುಶರ್ಮನ ಪಂಚತಂತ್ರಾದಿಗಳ ಆಧಾರಗಳು ಇಲ್ಲಿ ಹೇಳಲಾಗಿವೆ, ಶ್ರೀ ಡಿ. ಎಲ್. ಎನ್. ಈ ಅಭಿಪ್ರಾಯವನ್ನು ಒಪ್ಪಿ ಬರೆದ ಪತ್ರವೂ ಇಲ್ಲಿದೆ.

೧೪. 'ನೀನ್ + ಆರ್ + ಗೆ' ಎಂಬ ಪ್ರಶ್ನಾರ್ಥಕ ವಾಕ್ಯವು ಪ್ರಾಚೀನದ ವಡ್ಡಾರಾಧನೆ, ಪಂಪಭಾರತ ಮೊದಲಾದವುಗಳಲ್ಲಿದೆ. ಇಲ್ಲಿನ 'ಗೆ' ಕಾರ ಇತರ ಭಾಷಾ ರೂಪ ಪ್ರತ್ಯಯವಾಗಿರದೆ, ಷಷ್ಠೀ ವಿಭಕ್ತಿಯ ಬದಲಿಗೆ ಕನ್ನಡದಲ್ಲಿ ಬಳಸುವಂತೆ- ವ್ಯಾಕರಣ ಗ್ರಂಥದಲ್ಲಿರುವಂತೆ–ಚತುರ್ಥಿ, ವಿಭಕ್ತಿಯ ಪ್ರತ್ಯಯವಾಗಿದೆಯೆಂದು ವಿವರಿಸಲಾಗಿದೆ. (ಇತ್ತೀಚೆಗೆ ಈ ನುಡಿಯ ಬಗೆಗೆ ಸದ್ಯಃ ಪ್ರಕಟವಾಗಲಿರುವ ಬೇರೊಂದು ಲೇಖನದಲ್ಲಿ ಚರ್ಚಿಸಲಾಗಿದೆ.)

೧೫. **ಡಂಗ ಜೀ-ಜೀಯ. ಕನ್ನಡ,** ಈ ಮೂರು ನುಡಿಗಳ ಮೌಲಿಕಾರ್ಥವೇನೆಂದು ಸಾಧಾರವಾಗಿ ಮಂಡಿಸಲಾಗಿದೆ (ಉದ್ರಂಗ. ಜೀವ, ಕರ್ಣಾಟಕಗಳೇ ಈ ನುಡಿಗಳ ಮೂಲಗಳೆನ್ನಲಾಗಿದೆ.

೧೬. ‘ಅಭಂಗ ವಿಠಲ’ನೆಂದರೆ ‘ಭಂಗಿಯಿಲ್ಲದೆ ನಿಂತವ’ನೆಂದು ಹೇಳುವುದು (ಶ್ರೀ ಪಂಚಮುಖಿ, ಶ್ರೀ ಗೋವಿಂದ ಪೈ) ಸಲ್ಲದುದು. ಪಂಢರಪುರದ ವಿಠಲ ‘ಸಮಭಂಗಿ’ಯಲ್ಲಿ ನಿಂತಿಪ್ಪಾನೆ, ಇತರರ ದಾಳಿಯಿಂದ ಆತ ‘ಭಂಗಪಡೆಯದ’ವನೆಂದು ಲೇಸಾದ ಅರ್ಥವೆಂದಿದೆ,

ಈ ಸಂಕಲನದಲ್ಲಿ ಮೊದಲ ಹತ್ತು ಬರೆಹಗಳು ಗ್ರಾಂಥಿಕ ವಿಚಾರದವು; ಮತ್ತೆ ಆರು ಶಾಬ್ದಿಕ ವಿಚಾರಕ್ಕೆ ಮೀಸಲು. ಇವುಗಳ ಬಗೆಗೆ ವಿದ್ವಾಂಸರು ಇನ್ನಷ್ಟು ಹೆಚ್ಚು ಗಮನ ಹರಿಸಬೇಕು. ಸಂಶೋಧನ-ವಿಮರ್ಶನ ದಾರಿಯಲ್ಲಿ ಸಾಗಲೆಳಸುವವರಿಗೆ ಈ ಲೇಖನಗಳು ಹೊಸ ಬೆಳಕನ್ನು ನೀಡ ವಲ್ಲಿ ಸಂದೇಹವಿಲ್ಲ. ಈ ಪುಸ್ತಕದ ಬಗೆಗೆ ಪ್ರೊ. ಡಿ. ಎಲ್. ಎನ್, ‘ಮುನ್ನುಡಿ’ ಬರೆದು ಹರಸಿದ್ದೇ ಅಲ್ಲದೆ, ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದಲ್ಲಿ ಇದನ್ನು ಪ್ರಸ್ತಾವಿಸಿದ್ದಾರೆ! ಪ್ರಾಚೀನ ಕಾವ್ಯ-ಶಿಲಾಶಾಸನಗಳ ಅಧ್ಯಯನದಲ್ಲಿ ನಿರತರಾದರೆ, ಹಲವಾರು ಸಮಸ್ಯೆಗಳು ಇದಿರಾಗುತ್ತವೆ, ಅವನ್ನು ತಾಳ್ಮೆಯಿಂದಲೂ ನಿಷ್ಠೆಯಿಂದಲೂ ಮನನಮಾಡಿ. ಸತ್ಯಾರ್ಥದ ಕಡೆಗೆ ನಿರೀಕ್ಷಿಸಬೇಕಾಗುತ್ತದೆ, ಪ್ರಚಾರದ ಬೊಂಬಾಳ ದೀವಿಗೆಯ ಒತ್ತಾಸೆಯಿಲ್ಲದೆ, ಕೇವಲ ಸಾಧಕರಂತೆ ಕಾರ್ಯೋನ್ಮುಖರಾಗುವ ಸಂಶೋಧಕರಿಗೆ ಸಾಮಾಜಿಕರಿಂದಲೂ ಸರಕಾರದಿಂದಲೂ ಯಥಾಯೋಗ್ಯವಾದ ಗೌರವ-ಪುರಸ್ಕಾರಗಳು ದೊರಕುವಂತಾಗಲಿ!

× × × ×

೨. 'ಸಾಹಿತ್ಯ ಹಾಗೂ ಸಂಶೋಧನೆ'ಯಲ್ಲಿ

— ಡಾ. ಕೆ. ಜಿ. ವಸಂತ ಮಾಧವ, ಮೂಲ್ಕಿ,

ಕನ್ನಡ ನಾಡಿನ ಸಂಶೋಧನಾತ್ಮಕ ಸಾಹಿತಿಗಳಲ್ಲಿ ಹಾಗೂ ಪ್ರಸಿದ್ಧರಾದ ವಿದ್ವಾಂಸರಲ್ಲಿ ಶ್ರೀ ಕೆ. ವೆಂಕಟರಾಯಾಚಾರ್ಯರೂ ಒಬ್ಬರು. ಸಂಶೋಧನಾತ್ಮಕ ಸಾಹಿತ್ಯಕ್ಕೆ ಶ್ರೀಯುತರ ಸೇವೆ ಸದ್ದಿಲ್ಲದುದು ಮತ್ತು ರಚನಾತ್ಮಕವಾದುದು. ಕರ್ನಾಟಕದ ಪ್ರಮುಖ ಪತ್ರಿಕೆಗಳಲ್ಲಿ ಆಗಾಗ ಬೆಳಕು ಕಂಡ ಸಾಹಿತ್ಯಕ, ವಿಮರ್ಶನಾತ್ಮಕಗಳಾದ ಲೇಖನಗಳನ್ನು ಒಂದೆಡೆಯಲ್ಲಿ ಸಂಗ್ರಹಿಸಿ, ಅಚ್ಚು ಹಾಕಿಸಿ ಓದುಗರ ಕೈಗಿತ್ತು ಸ್ತುತ್ಯ ಕಾರ್ಯ ವೆಸಗಿದ್ದಾರೆ.

ಶ್ರೀಯುತರ 'ಸಾಹಿತ್ಯ ಹಾಗೂ ಸಂಶೋಧನೆ' ಹನ್ನೆರಡು ಪ್ರಬಂಧಗಳ ಸಂಕಲನ. ಇವುಗಳಲ್ಲಿ ಹೆಚ್ಚಿನವು ಕವಿ-ಕಾವ್ಯ-ಕೃತಿಗಳ ವಿವೇಚನೆಗೆ ಮೀಸಲಾಗಿದ್ದರೆ ಕೆಲವು ಇನ್ನಿತರ ಹಲವು ವಿಷಯಗಳಿಗೆ ಮೀಸಲಾಗಿವೆ. ಒಟ್ಟಿನಲ್ಲಿ, ಈ ಪುಸ್ತಕದಲ್ಲಿ ಸಾಹಿತ್ಯ, ಭಾಷಾ ಶಾಸ್ತ್ರ, ಸಮಾಜ ಶಾಸ್ತ್ರ ಮತ್ತು ಇತಿಹಾಸಗಳಿಗೆ ಸಂಬಂಧಪಟ್ಟ ಪ್ರಬಂಧಗಳಿವೆ. ಈ ಎಲ್ಲಾ ವಿಷಯಗಳಲ್ಲೂ ಲೇಖಕರು ತನ್ನದೇ ಆದ ಅಭಿಪ್ರಾಯ ಮಂಡಿಸಿದ್ದಾರೆ. ಈ ಪ್ರಬಂಧಗಳು ಚಿಕ್ಕವಾಗಿದ್ದರೂ ವಿಚಾರ ಪ್ರಚೋದಕವಾಗಿವೆ,

ಮೊದಲನೆ ಪ್ರಬಂಧ 'ಮಲ್ಲಿಕಾರ್ಜುನನ ಕೃತಿ'. ಇದರಲ್ಲಿ ಮಲ್ಲಿಕಾರ್ಜುನನ ಕಾಲ, ಮತ, ಅವನ ಕೃತಿ, ಅದರ ಲಕ್ಷಣ. ಅವನ ಆಶ್ರಯದಾತನ ಮತ್ತು ಆಗಿನ ಕಾಲದ ಚಾರಿತ್ರಿಕ ವಿಷಯಗಳ ಮೇಲೆ ತಮ್ಮ ಆಶಯವನ್ನು ಲೇಖಕರು ಪ್ರತಿಪಾದಿಸಿದ್ದಾರೆ. ಈ ಕವಿ ಬ್ರಾಹ್ಮಣನೆಂದೂ, ಮತ್ತು ಇವನ ಕಾವ್ಯ 1265ರಲ್ಲಿ ರಚಿತವಾಗಿದೆ ಎಂಬ ಐತಿಹಾಸಿಕ ಸತ್ಯವನ್ನು ಶಾಸನಗಳ ಪ್ರಮಾಣದಿಂದ ಬೆಳಕಿಗೆ ತಂದಿದ್ದಾರೆ. ಹೊಯ್ಸಳ ಸೋಮೇಶ್ವರನ ಕಾಲವಲ್ಲಿ ನಡೆಯುತ್ತಿದ್ದ ರಾಜಕೀಯ ವಿದ್ಯಮಾನವನ್ನು ಕವಿಯ ಕೃತಿಯ ಆಧಾರದಿಂದ ತಿಳಿಸಿದ್ದನ್ನು ಇತಿಹಾಸ ವಿದ್ಯಾರ್ಥಿಗಳು ಮೆಚ್ಚುವಂತಹುದು.

ಲಕ್ಷ್ಮೀಶನ ಬಿರುದು 'ಕರ್ನಾಟ ಕವಿ ಚೂತವನ ಚೈತ್ರನೋ' ಇಲ್ಲವೇ "ಕರ್ನಾಟ ಕವಿ ಚೈತ್ರವನ ಚೂತನೋ" ಎಂಬ ವಿಷಯವನ್ನು ಲೇಖಕರು ಕೂಲಂಕಶವಾಗಿ ಚರ್ಚಿಸಿ, ಸಾಹಿತ್ಯ-ಶಾಸನಗಳ ಪ್ರಮಾಣದಿಂದ ಮೊದಲನೆ ವಾಚಿಕ ಸರಿಯೆಂದು ನಿಷ್ಕರ್ಷೆ ಮಾಡಿದ್ದಾರೆ. ಈ ರೀತಿ ಚರ್ಚಿಸುವಲ್ಲಿ ಲೇಖಕರು ಒಂದು ಅಪ್ರಕಟಿತ 'ಜೈಮಿನಿ ಭಾರತ'ದ ಹಸ್ತಪ್ರತಿ ಶ್ರೀ ಕೋಣಿ ಶ್ರೀನಿವಾಸ ಮಧ್ಯಸ್ಥರಲ್ಲಿದ್ದುದು, ಕುಂದಾಪುರದ ಉಪ್ಪಿನಕುದ್ರು ವಾಸ್ತೇವ ಮೋಬಾಡಿ 1748ರಲ್ಲಿ ಪ್ರತಿ ತೆಗೆದರೆಂಬ ವಿಷಯವನ್ನು ಬೆಳಕಿಗೆ ತಂದಿದ್ದಾರೆ,

ಕನ್ನಡ ಸಾಹಿತ್ಯದಲ್ಲಿ ಅಪ್ರಕಟಿತ ಕಾವ್ಯಗಳು ಹಲವಾರು ಇವೆ. ಅವುಗಳನ್ನು ವಿಮರ್ಶಿಸಿ, ಪ್ರಕಟಿಸುವ ವಿದ್ವಾಂಸರು ಬಹಳ ವಿರಳ. ಆದರೆ ಈ ಸಾಹಸವನ್ನು ಶ್ರೀಯುತ ಆಚಾರ್ಯರು ಕೈಗೊಂಡಿದ್ದಾರೆ! ಅವರು ಪ್ರಕಟಿಸಿದ 'ಶುಕ ಸಪ್ತತಿ ಎಂಬ ಕಾವ್ಯದ ಸಂಕ್ಷಿಪ್ತ ವಿವರವನ್ನು 3ನೇ ಪ್ರಬಂಧದಲ್ಲಿ ತಿಳಿಸಿದ್ದಾರೆ, ಈ ಕವಿಯ ವಿಚಾರ, ಕಥಾಭಾಗ ಮತ್ತು ಧಾರ್ಮಿಕ ನೀತಿ ಹಾಗೂ ಕವಿತೆಯ ಲಕ್ಷಣಗಳ ವಿಚಾರ ಈ ಲೇಖನವನ್ನು ಓದುವುದರಿಂದ ತಿಳಿಯುತ್ತದೆ. "ಈ ಕೃತಿ ಕವಿ ಚರಿತ್ರೆಯ ಗ್ರಂಥದಲ್ಲಿ ಹೆಸರಿಸಲ್ಪಟ್ಟಿದೆ, ಆದರೆ ಕವಿಯ ಹೆಸರಿಲ್ಲ." ವಿದ್ವಾನ್ ಆಚಾರ್ಯರು ಈ ಸಮಸ್ಯೆಯನ್ನು ಬಿಡಿಸುವುದರಲ್ಲಿ ಯಶಸ್ವಿಯಾಗಿದ್ದಾರೆಂದು ತಿಳಿಸಲು ಸಂತೋಷವಾಗುತ್ತದೆ. ಈ ಕವಿತೆಯನ್ನು ಬರೆದವನು 'ಶಂಜಾನಾಗ', ಅವನು ಕೆಳದಿ ಒಂದನೆ ಬಸವಪ್ಪನ ಆಸ್ಥಾನದಲ್ಲಿ ಇದ್ದನೆಂದೂ ತಿಳಿಸಿದ್ದಾರೆ.

ಪುರಂದರದಾಸರ ಒಂದು ಸುಳಾದಿ (ಅಪ್ರಕಟಿತ) 'ಸಂಗೀತಸಾರಾಮೃತದಲ್ಲಿದೆ ಯೆಂದೂ ಒಂದು ಬರೆಹವಿಲ್ಲಿದೆ. ಯಕ್ಷಗಾನದ ವಿಚಾರ ಲೇಖಕರು ತನ್ನದೇ ವಾದವನ್ನು ಪ್ರತಿಪಾದಿಸಿದ್ದಾರೆ. ಬೇರೆ ನಾಡಿನ ಕಲೆಗಳಿಂದ ಕನ್ನಡದ ಯಕ್ಷಗಾನ ಹುಟ್ಟಿಬಂದು ದೆಂಬುದು ಸರಿಯಲ್ಲ; 'ಕನ್ನಡ ನಾಡಿನ ಜಾನಪದಗಳಿಂದ 'ಯಕ್ಷಗಾನ ಬಯಲಾಟ' ಹುಟ್ಟಿಬಂದವು ಎನ್ನುವುದೇ ಸಾಧುವಾಗಿದೆ ಎಂದು ಲೇಖಕರ ಅಭಿಮತ. ಈ ವಿಚಾರ ಗಳನ್ನು ಬೆಳಕಿಗೆ ತರುವಲ್ಲಿ ಲೇಖಕರು ಯಕ್ಷಗಾನದ ಮೂಲ ಮತ್ತು ಅರ್ಥಗಳನ್ನು ಕೂಲಂಕಷವಾಗಿ ಚರ್ಚಿಸಿದ್ದಾರೆ,

ಆರನೇ ಪ್ರಬಂಧ 'ಉತ್ತರ ರಾಮ ಚರಿತ್ರೆ', ಇದರಲ್ಲಿ ಈ ಕಾವ್ಯ ಬರೆದ ಕವಿ, ಅವನ ಕಾಲ, ಮತಗಳ ವಿಚಾರಗಳನ್ನು ಲೇಖಕರು ತಿಳಿಸಿದ್ದಾರೆ. ಈ ಕಾವ್ಯದ ಲಕ್ಷಣ, ಇದರ ಕತೆ, ಈ ಕಾವ್ಯಕ್ಕೂ ಮತ್ತು ಮೂಲ ರಾಮಾಯಣಕ್ಕೂ ಇರುವ ವ್ಯತ್ಯಾಸ ಮತ್ತು ಬೇರೆಡೆಯ ಕತೆಯನ್ನು ಹೊಂದಿಸಿ ಬರೆಯುವ ಕವಿ ಚಮತ್ಕಾರವನ್ನು ಯಾವ ರೀತಿಯ ಗೊಂದಲವಿಲ್ಲದೆ ಶ್ರೀಯುತರು ತಿಳಿಸಿದ್ದು ಶ್ಲಾಘನೀಯವಾಗಿದೆ.

ತೌಳವ ಭಾಷೆಯ ಉಗಮ, ಅದರ ಬೆಳವಣಿಗೆ, ಆ ಭಾಷೆಯ ವ್ಯಾಕರಣ ಹಾಗೂ ನುಡಿಗಟ್ಟುಗಳ ವಿಚಾರವಾಗಿ ದೀರ್ಘವಾಗಿ ಚರ್ಚಿಸಿ, ತನ್ನ ಅಭಿಪ್ರಾಯವನ್ನು ವಿಶದಿಸಿ ದ್ದಾರೆ. ತುಳು ನುಡಿಗಟ್ಟನ್ನು ಉದ್ಧರಿಸಿ ಆ ಜನರ ಜೀವನ, ಸಂಸ್ಕೃತಿಯನ್ನು ಬೆಳಕಿಗೆ ತಂದಿದ್ದಾರೆ. ಇದು ಶ್ರೀಯುತ ಆಚಾರ್ಯರು ಆ ಭಾಷೆಗೆ ಇತ್ತ ಒಂದು ಕೊಡುಗೆಯಾಗಿದೆ,

ಭಾಷಾ ಚರಿತ್ರೆಯಲ್ಲಿ ಹೊಸ ವಿಚಾರವನ್ನೊಳಗೊಂಡ ವಿಷಯ 'ವೃಷಲ ಶಬ್ದಾರ್ಥ ವಿಚಾರ' ಲೇಖನದಲ್ಲಿದೆ. "ಈ ಎರಡು ಲೇಖನಗಳು ಭಾಷಿಕ ಸಂಶೋಧಕರಿಗೆ ತುಂಬಾ ಉಪಯುಕ್ತವಾಗಿವೆ" ಎಂಬ ಡಾ॥ ಪಾಂಡುರಂಗ ಭೀಮ ದೇಸಾಯಿಯವರ ಅಭಿಪ್ರಾಯವು ನಿಜವೆಂದು ಈ ಲೇಖನಗಳನ್ನು ಓದಿದರೆ ತಿಳಿಯುವುದು,

ಈ ಎಡೆಯಲ್ಲಿ 'ಪರಿಯಾಳ ಸಮಾಜ'ದ ಕುರಿತಾಗಿ ಬರೆದ ಪ್ರಬಂಧ ಸಮಾಜ ಶಾಸ್ತ್ರ ವಿದ್ಯಾರ್ಥಿಗಳಿಗೆ ದಿಕ್ಸೂಚಿಯಂತಿದೆ.

ಜೂಜಾಟದ ಉಗಮ, ಅದನ್ನು ಆಡುವ ಕ್ರಮ ಮತ್ತು ಅದರ ದುಷ್ಪರಿಣಾಮಗಳ ಕುರಿತಾಗಿ ಲೇಖಕರು ಐತಿಹಾಸಿಕ ಪ್ರಮಾಣದೊಂದಿಗೆ ವಿವರಿಸಿದ್ದಾರೆ. ಈ ವಿಚಾರವನ್ನು ಸಂಶೋಧನೆ ನಡೆಸುವವರಿಗೆ ಕೆಲವು ಪ್ರಮುಖ ಆಧಾರ ಗ್ರಂಥಗಳನ್ನು ಲೇಖಕರು ಸೂಚಿಸಿದ್ದಾರೆ.

ಶ್ರೀಯುತ ಆಚಾರ್ಯರು ಕಂಡು ಹಿಡಿದ ಬಂಗರಾಜರ ಎರಡು ತಾಮ್ರ ಶಾಸನಗಳು ದ. ಕ. ಜಿಲ್ಲೆಯ ಇತಿಹಾಸ ಅಧ್ಯಯನದ ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾಗಿವೆ. ಈ ಲೇಖನದಲ್ಲಿ ಬಂಗರ ಮೂಲ, ಮತ್ತು ಶಾಸನಗಳ ವಿಚಾರ ತಮ್ಮದೇ ಆದ ರೀತಿಯಲ್ಲಿ ವಿವರಿಸಿದ್ದಾರೆ. ಈ ಶಾಸನವನ್ನು ಬೆಳಕಿಗೆ ತಂದುದರಿಂದಾಗಿ ವೀರನರಸಿಂಹ ಶಂಕರ ದೇವಿ ಎಂಬ ರಾಣಿಯರ ಕುರಿತಾಗಿಯೂ ನಾವು ತಿಳಿಯಬಹುದು, ಕೊನೆಯ ಪ್ರಬಂಧವಲ್ಲಿ ಶ್ರೀ ವಾದಿರಾಜರ ನಾಲ್ಕು ಕೀರ್ತನೆಗಳಿವೆ, ಒಂದು ಕೀರ್ತನೆಯಲ್ಲಿ ಉಡುಪಿ ಶ್ರೀ ಕೃಷ್ಣನ ಮಹಿಮೆ. ಹನುಮಂತನ ಸ್ತುತಿ, ಮತ್ತು ಮಾಧ್ವ ಪಂಥವನ್ನು ಪ್ರಚಾರಗೊಳಿಸಿದ ಸಂತರ ಸೇವೆಗಳ ಕುರಿಕಾಗಿ ಹೇಳಿವೆ. ಈ ಕೀರ್ತನೆ ಮಾಧ್ವಮತದ ಇತಿಹಾಸವನ್ನು ತಿಳಿಯಲು ಒಂದು ಮೂಲ ಸಾಮಗ್ರಿಯಾಗಿದೆ,

ಶ್ರೀಯುತ ಆಚಾರ್ಯರು ಸಾಹಿತ್ಯ-ಸಂಶೋಧನೆಯ ಸಂಗಮವನ್ನು ಈ ಪುಸ್ತಕದಲ್ಲಿ ಸಾಧಿಸಿದ್ದಾರೆ. ಕೆಲವು ಕ್ಲಿಷ್ಟ ವಿಷಯಗಳ ಕುರಿತಾಗಿ ಸ್ವತಂತ್ರ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇವರು ಮಂಡಿಸಿದ ನಿರ್ಣಯಗಳನ್ನು ಎಲ್ಲರೂ ಒಪ್ಪದಿದ್ದರೂ, ಅವರು ಹೇಳಿದ ವಿಚಾರಗಳಿಗೆ ವಿದ್ವಾಂಸರು ಗಮನ ನೀಡದೇ ಇರುವಂತಿಲ್ಲ. ಲೇಖನಗಳು ಸ್ವಾವಲಂಬಿಗಳಾಗಿವೆ. ಅಂತೂ ಕನ್ನಡ ಸಾಹಿತ್ಯ ಹಾಗೂ ಸಂಶೋಧನೆಗಳ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಈ ಹೊತ್ತಗೆಯು ಉಪಯುಕ್ತವಾಗಿದೆ. ಶ್ರೀಯುತರ ಸಾಹಿತ್ಯ ಸಂಶೋಧನ ಸೇವೆಯು ಇನ್ನೂ ಮುಂದುವರಿಯಲಿ ಎಂದು ಹಾರೈಸುತ್ತೇನೆ.

X X X X X X

೩. 'ಸಾಹಿತ್ಯ-ಸಂಶೋಧನೆ'ಯಲ್ಲಿ ವಿಚಾರಧಾರೆ

—ಶ್ರೀ ಪಾಲೆಪ್ಪಾಡಿ ಗೋಪಾಲಕೃಷ್ಣ, ಮಂಗಳೂರು.

ಶ್ರೀ ಕೆ. ವೆಂಕಟರಾಯಾಚಾರ್ಯ, ಇವರ 'ಸಾಹಿತ್ಯ-ಸಂಶೋಧನೆ' ಎಂಬ ಕೃತಿಯು ನೋಡಲು ಸಣ್ಣದಾಗಿರುವುದಾದರೂ, ಬಹಳ ಗಹನವಿಚಾರಗಳ ಲೇಖನಗಳನ್ನು ಒಳಗೊಂಡಿರುತ್ತದೆ. ಇದರಲ್ಲಿ 9 ಲೇಖನಗಳಿವೆ, ಶ್ರೀ ಆಚಾರ್ಯರು ವಾಗ್ದೇವಿಗೆ ತೊಡಿಸಿದ 'ನವರತ್ನಮಾಲಿಕೆ'ಯೇ ಈ 9 ಲೇಖನಗಳು ಎಂದು ಎನಿಸಿದರೆ ತಪ್ಪಲ್ಲ. ಮೊದಲಿಗೆ ಲಕ್ಷ್ಮೀಶಮಹಾಕವಿಯು ಜೈಮಿನಿಭಾರತದಲ್ಲಿ ಅಂತರ್ಗತವಾದ 'ಶ್ರೀರಾಮಾಶ್ವಮೇಧ'ದ ಕತೆಯನ್ನು ಲಕ್ಷ್ಮೀಶನು ಆವ ರೀತಿ ಕನ್ನಡಿಸಿದ್ದಾನೆ; ಮೂಲ ಕಾವ್ಯಕ್ಕೂ ಲಕ್ಷ್ಮೀಶನ ಕನ್ನಡ ಕೃತಿಗೂ ಇರುವ ಹೋಲಿಕೆಯೇನು-ಅಂತರವೇನು; ಮೂಲಕ್ಕಿಂತ ಎಲ್ಲೆಲ್ಲಿ ಭಾಷಾಂತರ ಹೆಚ್ಚು ಸೊಗಸಾಗಿದೆ ಎನ್ನುವ ಅಂಶಗಳನ್ನು ಶ್ರೀ ಆಚಾರ್ಯರು 'ಮನಂಬುಗು'ವಂತೆ ನಿರೂಪಿಸಿದ್ದಾರೆ. ಲಕ್ಷ್ಮೀಶಮಹಾಕವಿಯ ಕೃತಿಯು ಜೈಮಿನಿ ಮಹರ್ಷಿಯು ಸಂಸ್ಕೃತದಲ್ಲಿ ವಿರಚಿಸಿದ ಅಶ್ವಮೇಧಿಕಪರ್ವದ ಕನ್ನಡ ಭಾಷಾಂತರ ಎಂದು ಹೇಳಲಾಗುವುದಿಲ್ಲ; ಅದನ್ನು ಆಧಾರವಾಗಿಟ್ಟುಕೊಂಡು ಕನ್ನಡದಲ್ಲಿ ಕವಿ ರಚಿಸಿದ ಒಂದು ಸ್ವತಂತ್ರ ಕೃತಿ. ಆದುದರಿಂದ ಮೂಲಕೃತಿಗೂ ಇದಕ್ಕೂ ಹೋಲಿಕೆ ಮತ್ತು ಅಂತರಂಗಗಳಿರುವುದು ಸಾಜ. ಶ್ರೀ ಆಚಾರ್ಯರು ಬಹಳ ಪರಿಶ್ರಮ ವಹಿಸಿ, ಇಂತಹ ಹೋಲಿಕೆ – ಅಂತರಂಗಗಳನ್ನು ಓದುಗರಿಗೆ ತಿಳಿಯಪಡಿಸಿದ್ದಾರೆ. "ಅಲ್ಲೇನಿದೆ ಅದೆಲ್ಲಾ ಇಲ್ಲಿದೆ; ಇಲ್ಲೇನಿಲ್ಲ ಅದು ಅಲ್ಲಿಯೂ ಇಲ್ಲ" ಎನ್ನುವುದು ವಿಮರ್ಶೆಯಲ್ಲ. "ಅಲ್ಲಿಲ್ಲದುದು ಇಲ್ಲಿದೆ; ಅಲ್ಲಿದ್ದುದೂ ಇಲ್ಲಿಲ್ಲ" ಎನ್ನುವುದನ್ನು ಉದಾಹರಣೆಗಳೊಂದಿಗೆ ಸ್ಪಷ್ಟವಾಗುವಂತೆ ವಿವರಿಸಿದ್ದಾರೆ.

'ಶ್ರೀ ರಾಮಾಶ್ವಮೇಧ'ದ 'ತಂದೆ ಮಕ್ಕಳ ಕಾಳಗ' ಲಕ್ಷ್ಮೀಶನ ಜೈಮಿನಿ ಭಾರತದಲ್ಲಿ ಬಹಳ ಸ್ವಾರಸ್ಯವಾಗಿ-ಚೆಲುವಾಗಿ ಹೇಗೆ ಬಂದಿದೆಯೆನ್ನುವುದನ್ನು ಎತ್ತಿ ತೋರಿಸಿದ್ದಾರೆ, ಆಚಾರ್ಯರು ವಾಲ್ಮೀಕಿರಾಮಾಯಣದಲ್ಲಿ, ಈ 'ತಂದೆ ಮಕ್ಕಳ ಕಾಳಗ' ಇಲ್ಲವೇ ಇಲ್ಲ; ಇದು ಕವಿ ಕಪೋಲ ಕಲ್ಪಿತವೆಂದೊಮ್ಮೆ ತೋರಬಹುದು. ಆದರೂ, ಕಥಾಸರಣಿಗೆ ಧಕ್ಕೆಯಾಗದಂತೆ-ಮಾತ್ರವಲ್ಲ, ಪೋಷಕವಾಗುವಂತೆ-ಇಲ್ಲಿ ಅಳವಡಿಸಲ್ಪಟ್ಟಿದೆ ಎನ್ನುವ ಸಂಗತಿ ಈ ಲೇಖನದಿಂದ ಸ್ಪಷ್ಟವಾಗುತ್ತದೆ. ಶ್ರೀ ಆಚಾರ್ಯರ ವಿಮರ್ಶೆಯನ್ನು ಓದಿದ ಯಾರಿಗಾದರೂ ಮೂಲ ಕೃತಿಯನ್ನೂ, ಲಕ್ಷ್ಮೀಶನ ಕನ್ನಡ ಕೃತಿಯನ್ನೂ ಆದ್ಯಂತವಾಗಿ ಓದಿ ರಸಾಸ್ವಾದನ ಮಾಡಬೇಕೆನ್ನುವ ಆಸೆ ಉಂಟಾಗದಿರದು: ನನ್ನ ಅಭಿಪ್ರಾಯದಲ್ಲಿ ವಿಮರ್ಶೆಯ ಮುಖ್ಯ ಉದ್ದೇಶ-ಕೃತಿಯ ಗುಣದೋಷಗಳನ್ನು

ತೋರಿಸಿ ಅವುಗಳ ಅಧ್ಯಯನದ ಕುರಿತು ಆಸಕ್ತಿಯನ್ನುಂಟುಮಾಡುವುದು. ಈ ದೃಷ್ಟಿಯಿಂದ ಈ ಲೇಖನ ಸಂಪೂರ್ಣ ಯಶಸ್ವಿಯಾಗಿದೆ.

ನಮ್ಮ ಪ್ರಾಚೀನ ಕಾವ್ಯಗಳಲ್ಲಿ ಕಂಡುಬರುವ ಘೇಕಾಸ ಪ್ರಾಸ, ಶಬ್ದಾಲಂಕಾರ, ವರ್ಣವೃತ್ತಿ, ಯಮಕ ಮೊದಲಾದವನ್ನೆಲ್ಲ ಕಣ್ಮುಚ್ಚಿ ಹಳಿಯುವುದು ಆಧುನಿಕ ವಿಮರ್ಶೆಯ ಒಂದು ರೂಢಿಯಾಗಿ ಹೋಗಿದೆ. ಆದರೆ ಶ್ರೀ ಆಚಾರ್ಯರು ಹೀಗೇನೂ ಮಾಡಲಿಲ್ಲ, ಇವು ನೀರಸವಾಗಿದ್ದಲ್ಲಿ ಯಾರೂ ಆಕ್ಷೇಪಿಸದಿರುವುದಿಲ್ಲ. ಆದರೆ, ಅರ್ಥಗರ್ಭಿತವಾಗಿಯೂ, ಹೃದಯಂಗಮವಾಗಿಯೂ, ರಸಭರಿತವಾಗಿಯೂ, ಮಿತವಾಗಿಯೂ, ಸಂದರ್ಭೋಚಿತವಾಗಿಯೂ ಇವು ಇದ್ದಲ್ಲಿ ಮೆಚ್ಚಬೇಕೇ ವಿನಾ ಆಕ್ಷೇಪಿಸಬಾರದು. ಲಕ್ಷ್ಮೀಶ ಮಹಾಕವಿಯ ಕೃತಿಯು ಅರ್ಥವೈಚಿತ್ರ್ಯಯುಕ್ತವೂ, ರಸಸ್ಯಂದಿಯೂ ಆಗಿರುವುದು ಮಾತ್ರವಲ್ಲದೆ, ಸಂದರ್ಭೋಚಿತವೂ ಆಗಿ, ನಾನಾ ಶಬ್ದಾಲಂಕಾರಗಳಿಂದ ತುಂಬಿ ತುಳುಕುತ್ತಿದೆ. ಇಂತಹವುಗಳನ್ನು ಶ್ರೀ ಆಚಾರ್ಯರು ಎತ್ತಿ ತೋರಿಸಿದ್ದಾರೆ. ಇವುಗಳನ್ನು ಅವಹೇಳನ ಮಾಡಿದವರ ಅಭಿಪ್ರಾಯವನ್ನು ಉದ್ಧರಿಸಿ, ತನ್ನ ಅಭಿಪ್ರಾಯವನ್ನು ಮೌನದಿಂದ ಸ್ಪಷ್ಟಪಡಿಸಿದ್ದಾರೆ. ಇಂತು ಮೌನದಿಂದಲೇ ಅಭಿಪ್ರಾಯವನ್ನು ಸ್ಪಷ್ಟಪಡಿಸುವುದು ಶ್ರೀ ಆಚಾರ್ಯರ ಅಪೂರ್ವವಾದ ಒಂದು ಜಾಣ್ಮೆ!

ಸಂಸ್ಕೃತದಲ್ಲಿ ಪ್ರಾಸವಿಲ್ಲ. ಪ್ರಾಸವು ತ್ರಾಸದಾಯಕ. ಮತ್ತು ಕನ್ನಡಕ್ಕೇಕೆ ಈ ಆಡಂಬರ? ಎನ್ನುವ ವಾದ ಈಗಿನದು. ಸಂಸ್ಕೃತ ಕವಿಗಳು ಕನ್ನಡ ಕವಿಗಳಂತೆ ದ್ವಿತೀಯಾಕ್ಷರ ಪ್ರಾಸ ನಿಯಮವನ್ನು ಇಟ್ಟುಕೊಳ್ಳುವುದಿಲ್ಲವೆಂಬುದು ನಿಜವಾದರೂ ಇತರ ಪ್ರಾಸಗಳನ್ನು ಸಾಧ್ಯವಾದಲ್ಲೆಲ್ಲ ಅವರು ಇಟ್ಟುಕೊಂಡಿದ್ದಾರೆ ಎಂದು ನಿಸ್ಸಂದೇಹವಾಗಿ ಹೇಳಬಹುದು. ಅವರ ಪ್ರಾಸವೈಭವ, ಭಾಷಾಪ್ರಭುತ್ವ, ವೃತ್ತರಚನಾ ಕೌಶಲ್ಯಗಳ ಕುರಿತು ಬೆರಿಟೇಟ್ ಕೀಟ್ ಮಹಾಶಯನು ಹೀಗೆಂದಿದ್ದಾನೆ: ‘Moreover the Sanskrit poet had a Command of a language capable of fair sound effects than even Greek at its best, they could successfully manage metres of great complexity, but remarkable beauty, and they were conscious experts in the task of matching sound to sense, an art practised indeed by Greek and Roman poets alike, but with far less adequate means and with much less sublety" ಈ ಕಾವ್ಯ ಗುಣಗಳನ್ನು ಕನ್ನಡ ಕವಿಗಳು ಅಳವಡಿಸಿಕೊಂಡುದು ವಿಹಿತವಲ್ಲವೇ? ಲಕ್ಷ್ಮೀಶನಲ್ಲಿಯೂ ಇವು ಮಿತ-ಹಿತವಾಗಿ ಬಂದಿವೆ!

ಎರಡನೆಯ ಲೇಖದಲ್ಲಿ ಶ್ರೀ ಆಚಾರ್ಯರು ಕಾಳಿದಾಸ ಮಹಾಕವಿಗೆ ಅಂಕಿತವಾಗಿರುವ ಮೇಘದೂತ, ಕುಮಾರಸಂಭವ, ರಘುವಂಶಗಳೆಂಬ ಮೂರು ಕಾವ್ಯಗಳಲ್ಲಿ ಹಾಗೂ ಮಾಲವಿಕಾಗ್ನಿಮಿತ್ರ, ವಿಕ್ರಮೋರ್ವಶೀಯ, ಅಭಿಜ್ಞಾನ ಶಾಕುಂತಲಗಳೆಂಬ

ಮೂರು ನಾಟಕಗಳಲ್ಲಿ ಶಾಪದ ಪ್ರಸಕ್ತಿ. ಅವುಗಳ ಪ್ರಭಾವ ಮತ್ತು ಪರಿಹಾರಗಳು ಕೃತಿಯು ಹೇಗೆ ಪರೋತ್ಕರ್ಷವನ್ನು ಹೊಂದುವುದಕ್ಕೆ ಸಾಧನವಾಗಿವೆ ಎನ್ನುವುದನ್ನು ಪ್ರತಿಪಾದಿಸಿದ್ದಾರೆ. ಇಲ್ಲಿ ಶ್ರೀ ಆಚಾರ್ಯರ ಲೇಖನಿಯು ಸಮರ್ಥವಾದಷ್ಟು ಇತರ ವಿಮರ್ಶಕರ ಲೇಖನಗಳು ಸಮರ್ಥವಾಗಿಲ್ಲವೆಂದು ನನ್ನ ಮತ,

ಅಭಿಜ್ಞಾನ ಶಾಕುಂತಲ ನಾಟಕದಲ್ಲಿ ಶಕುಂತಲೆಗೆ ದೂರ್ವಾಸ ಮುನಿಯ ಶಾಪವು ಬಂದುದು ಯಾವಾಗ ಎನ್ನುವ ವಿಚಾರದಲ್ಲಿ ವಿದ್ವಾಂಸರಲ್ಲಿ ಏಕಾಭಿಪ್ರಾಯವಿಲ್ಲ. ದುಷ್ಯಂತನು ಕಣ್ವಾಶ್ರಮದಿಂದ ತನ್ನ ರಾಜಧಾನಿಗೆ ಹೊರಟುಹೋದ ಬಳಿಕ ೩೦-೪೦ ದಿನಗಳಲ್ಲಿ ಶಾಪ ಬಂದಿರಬೇಕು ಎನ್ನುವುದು ಒಂದು ಮತ. ರಾಜನು ಹೊರಟುಹೋದ ದಿನವೇ ಪ್ರಾಪ್ತವಾಗಿರಬೇಕು ಎನ್ನುವುದು ಇನ್ನೊಂದು ಮತ. ಶ್ರೀ ಆಚಾರ್ಯರು ಮೊದಲನೆಯ ಮತವನ್ನು ಒಪ್ಪುತ್ತಾರೆ. ಅಭಿಜ್ಞಾನ ಶಾಕುಂತಲದ ಮೂರನೆಯ ಅಂಕದ ಅಂತ್ಯದ ಕಾಲಕ್ಕೂ, ಚತುರ್ಥಾಂಕದ ಆರಂಭದ ಕಾಲಕ್ಕೂ ಮಧ್ಯದಲ್ಲಿ ಸುಮಾರು ೪೦ ದಿನಗಳಾದರೂ ಕಳೆದಿರಬೇಕೆಂದು ನನ್ನ ಅಭಿಪ್ರಾಯ. ಯಾಗರಕ್ಷಣೆಗಾಗಿ ರಾಜನು ಆಶ್ರಮಪದದಲ್ಲಿ ಹಲವುದಿನ (ಸು. ೩೦-೪೦ ದಿನ) ನಿಂತಿರಬೇಕೆಂದೂ, ಈ ಮಧ್ಯದಲ್ಲಿ ಅವರು ಗಾಂಧರ್ವವಿಧಿಯಿಂದ ಮದುವೆಯಾಗಿ ಶಕುಂತಲೆ ಗರ್ಭಧರಿಸಿರಬೇಕೆಂದೂ ಊಹಿಸಿದರೆ ಆಗದೇ? ಅವರು ಗಾಂಧರ್ವವಿಧಿಯಿಂದ ಕೂಡಿದ ದಿನವೇ ಆಕೆ ಗರ್ಭಧರಿಸಿರಬೇಕು. ಬಳಿಕ ಕೆಲವು ದಿನಗಳ ವರೆಗೆ ರಾಜನು ಅಲ್ಲಿದ್ದು ರಾಕ್ಷಸರ ಉಪಟಳವನ್ನು ನಿಲ್ಲಿಸಿದ ಬಳಿಕ ತನ್ನ ರಾಜಧಾನಿಗೆ ಹೊರಟನು ಎನ್ನುವ ಅಭಿಪ್ರಾಯವನ್ನು ಅಲ್ಲಗಳೆಯುವುದಕ್ಕೆ ನನಗೆ ಆಧಾರ ಕಾಣಲಿಲ್ಲ! ಹೀಗಿಟ್ಟುಕೊಂಡರೆ, ದುಷ್ಯಂತ ನರ್ಮವಾಕ್ಯವಾಗಿ ಸುಳ್ಳಾಡಿದ ಅಥವಾ ವಂಚಿಸಿದನೆಂಬ ದೋಷ ಆತನಲ್ಲಿ ಆರೋಪಗೊಳ್ಳುವುದೂ ಇಲ್ಲ, ರಾಜ ಹೊರಟ ಮೇಲೆ ಒಂದುವರೆ ಅಥವಾ ಮೂರುವರೆ ದಿನದಲ್ಲಿ ದೂರ್ವಾಸ ಶಾಪವಾದಿರಬೇಕೆಂದು ಊಹಿಸುವುದು ಯುಕ್ತವೆಂದು ತೋರುತ್ತದೆ.

ಮೂರನೆಯ ಲೇಖದಲ್ಲಿ, ಮುದ್ದಣ ಕವಿಯ ಮತ್ತು ಆತನ ಕೃತಿಗಳ ವಿಚಾರ ಬರೆಯುತ್ತಾ, ವಿಮರ್ಶಕರು ಕೇವಲ ಊಹಾಪೋಹಗಳಿಂದ ಎಂತೆಂತಹ ಪ್ರಮಾದಗಳನ್ನು ಮಾಡುತ್ತಾರೆ ಎನ್ನುವ ಸಂಗತಿಯನ್ನು ಮಾರ್ಮಿಕವಾಗಿ ಶ್ರೀ ಆಚಾರ್ಯರು ನಿರೂಪಿಸಿದ್ದಾರೆ, ಒಬ್ಬ ವಿಮರ್ಶಕರು ಮುದ್ದಣ ಕವಿಗೆ ಪುತ್ರ ಜನನವಾದುದು ಕ್ರಿ. ಶ. ೧೮೯೯ ರಲ್ಲಿ ಎಂದು ಉಲ್ಲೇಖಿಸಿದ್ದಾರೆ, ಇನ್ನೊಬ್ಬರು ೧೮೯೯ ರಲ್ಲಿ ಎಂದೂ ಅಭಿಪ್ರಾಯ ಪಡುತ್ತಾರೆ. ಆದರೆ ಕವಿಯ ಸುಪುತ್ರರಾದ ಶ್ರೀ ರಾಧಾಕೃಷ್ಣಯ್ಯನವರೇ ಸ್ವತಃ ತಾನು ೪ ೧-೧೯೦೦ ರಲ್ಲಿ ಜನಿಸಿದುದು ಎಂದು ನಿಖರವಾಗಿ ನಿರೂಪಿಸಿದ್ದಾರೆನ್ನುವಾಗ, ಕುರುಡರು ಆನೆಯನ್ನು ಮುಟ್ಟಿ ಅದರ ಆಕಾರವನ್ನು ವರ್ಣಿಸಿದಂತೆ, ಹಲವು ಸಂದರ್ಭದಲ್ಲಿ ವಿಮರ್ಶಕರು ಪ್ರಮಾದಗೈಯುತ್ತಾರೆ ಎಂದು ಮನವರಿಕೆಯಾಗುವಂತೆ ಸ್ಪಷ್ಟಪಡಿಸಿದ್ದಾರೆ. ಕವಿ ಕೃತಿಗಳ

ವೈವಿಧ್ಯವೇನೆಂದು ತಿಳಿಸಿ. ಕೆಲವು ಶಬ್ದಗಳ ಯಥಾರ್ಥ ರೂಪಗಳೇನೆಂದು ಶ್ರೀ ಆಚಾರ್ಯರು ಸೂಚಿಸಿದ್ದಾರೆ. (ಹನುಮಂತ < ಅಣುವವೆಂದು ರೂಪಾಂತರವಿದೆ; ಕ. ರಾ. ವಾ. ಗುಮ್ಮ > ಗುಮ್ಮೆ, ಕೊಡನ ಮರಿ = ಘಟಸರ್ಪ)

ನಾಲ್ಕನೆಯ ಲೇಖನ, ವಾಲ್ಮೀಕಿ ರಾಮಾಯಣದ ರಚನೆಯನ್ನು ಕುರಿತ ಶ್ರೀ ಆಚಾರ್ಯರ ಲೇಖನವು, ಚಿಂತನಮಂಥನಗಳನ್ನು ಪ್ರಚೋದಿಸುವಂತಿದೆ. ಶ್ರೀ ರಾಮಚಂದ್ರನ ಕತೆಯನ್ನು ಯುದ್ಧಕಾಂಡಾಂತ್ಯದ ವರೆಗೆ ಮಾತ್ರ ವಾಲ್ಮೀಕಿ ವಿರಚಿಸಿರಬೇಕೆಂದೂ, ಉತ್ತರ ಕಾಂಡವನ್ನು ಬೇರೆ ಯಾರೋ ಬರೆದಿರಬೇಕೆಂದೂ ಹಲವು ವಿಮರ್ಶಕರ ಅಭಿಪ್ರಾಯವಿದೆ. ವಾಲ್ಮೀಕ್ಯಾಶ್ರಮದಲ್ಲಿ ಲವಕುಶರ ಜನನದ ವರೆಗಿನ ಕತೆಯನ್ನು ವಾಲ್ಮೀಕಿಯೇ ಬರೆದಿರಬೇಕು ಎನ್ನುವುದು ಶ್ರೀ ಆಚಾರ್ಯರ ಅಭಿಪ್ರಾಯ. ಆದರೆ, ವಾ. ರಾ. ದಲ್ಲಿ "ಚತುರ್ವಿಂಶತ್ಸಹಸ್ರಾಣಿ ಶ್ಲೋಕಾನಾಮುಕ್ತವಾನ್ ಋಷಿಃ ತಥಾ ಸರ್ಗಶತಾನ್ ಪಂಚ ಷಟ್ಕಾಂಡಾನಿ ತಥೋತ್ತರಂ ಕೃತ್ವಾ ತು ತನ್ಮಹಾಪ್ರಾಜ್ಞಃ ಸಭವಿಷ್ಯಂ ಸಹೋತ್ತರಂ ಚಿಂತಯಾಮಾಸ ಕೋ ನ್ವೇತತ್ ಪ್ರಯುಂಜೀಯಾದಿತಿ ಪ್ರಭುಃ" ಎಂದು ಸ್ಪಷ್ಟವಾಗಿ ಉಲ್ಲೇಖಿಸಿರುವುದರಿಂದ, ಶ್ರೀ ರಾಮನ ಭವಿಷ್ಯತ್ಕಥನವನ್ನೊಳಗೊಂಡ ಉತ್ತರಕಾಂಡವನ್ನೂ ವಾಲ್ಮೀಕಿಯೇ ವಿರಚಿಸಿದನು ಎಂದು ತಿಳಿಯಬೇಕಲ್ಲವೇ?

ಶ್ರೀ ರಾಮನ ಕತೆಯನ್ನು ವಾಲ್ಮೀಕಿ ಮಹರ್ಷಿಯು ಹಲವರಿಂದ ಹಲವು ಬಗೆಯಿಂದ ಹಲವೆಡೆ ತಿಳಿದು, ಆ ಬಳಿಕ ರಾಮಾಯಣವನ್ನು ವಿರಚಿಸಿದನು (ಎಂದು ಶ್ರೀ ಆಚಾರ್ಯರ ಆಶಯ). ಹೀಗೆನ್ನುವುದಕ್ಕಿಂತ, ವಾಲ್ಮೀಕಿಯು ದೇವರ್ಷಿ ನಾರದರಿಂದ ರಾಮೇತಿಹಾಸವನ್ನು ಸಂಗ್ರಹವಾಗಿ ಕೇಳಿ ತಿಳಿದ ಬಳಿಕ ಧ್ಯಾನಸ್ಥನಾಗಿದ್ದಾಗ ತನ್ನ ಜ್ಞಾನ ದೃಷ್ಟಿಯಿಂದ ಸಕಲ ಸಂಗತಿಗಳನ್ನೂ ಅಂಗೈ ನೆಲ್ಲಿಯಂತೆ ಸ್ಪಷ್ಟವಾಗಿ ಕಂಡುಕೊಂಡನು ಎನ್ನುವುದು ಯುಕ್ತವಾಗಿದೆ.

ವಾ. ರಾ. ದಲ್ಲಿ ವಾಲ್ಮೀಕಿಯು ನಾರದನನ್ನು ಪ್ರಶ್ನಿಸಿದನು, ನಾರದನು ವಾಲ್ಮೀಕಿಗೆ ಹೇಳಿದನು, ವಾಲ್ಮೀಕಿಯು ನಿಷಾದನಿಗೆ ಶಾಪವಿತ್ತನು, ಇತ್ಯಾದಿ ಹಲವು ವಾಕ್ಯಗಳು ಪ್ರಥಮ ಪುರುಷದಲ್ಲಿರುವುದರಿಂದ ಈ ಭಾಗವನ್ನು ಯಾರೋ ರಾಮಾಯಣದಲ್ಲಿ ಸೇರಿಸಿರಬೇಕು ಎನ್ನುವ ಅಭಿಪ್ರಾಯವು ಕೆಲವರಲ್ಲಿದೆ. ಪ್ರಕೃತ ಉಪಲಬ್ಧವಾಗಿರುವ ರಾಮಾಯಣವು ಲವಕುಶರ ಮುಖದಿಂದ ಉದ್ಗತವಾದುದು ಎಂಬ ವಿಚಾರವು ಬಾಲಕಾಂಡದ ನಾಲ್ಕನೆಯ ಸರ್ಗದಲ್ಲಿಯೇ ತಿಳಿಯುತ್ತದೆ; ಇದರಿಂದ ಮೇಲೆಕಾಣುವ ಆಕ್ಷೇಪವು ಪರಿಹಾರವಾಗುತ್ತದೆ ನಾರದರು ವಾಲ್ಮೀಕಿಗೆ ಶ್ರೀ ರಾಮನ ಕಥೆಯನ್ನು ಹೇಳಿದುದು ರಾಮನಿಗೆ ರಾಜ್ಯಪ್ರಾಪ್ತಿಯಾದ ಬಳಿಕ ಎನ್ನುವುದು ನಿರ್ವಿವಾದ. ಆದರೆ ನಾರದನು ಹೇಳಿದುದು ಸಂಕ್ಷಿಪ್ತ ಚರಿತ್ರೆ; ಎಲ್ಲ ಘಟನೆಗಳನ್ನೂ, ಪಾತ್ರಗಳ ಮಾತುಗಳನ್ನೂ, ಎಲ್ಲ

ವಿವರಗಳನ್ನೂ ವಾಲ್ಮೀಕಿ ತನ್ನ ಯೋಗದಿಂದ ಹಾಗೂ ಬ್ರಹ್ಮನ ವರದಿಂದ ತಾನಾಗಿ ಕಂಡುಕೊಂಡನು ಎಂದು ನನ್ನ ಎಣಿಕೆ.

ಒಂಬತ್ತನೆಯ – ಕೊನೆಯ 'ಕುಮಾರವ್ಯಾಸನ ದ್ರೌಪದೀ ವಾಕ್ಯ'ವೆನ್ನುವ ಪ್ರಬಂಧದಲ್ಲಿ, ದ್ರೌಪದಿಯ ಮಾತುಗಳಿಂದ ವ್ಯಕ್ತವಾಗುವ ಉದಾತ್ತ ಅಭಿಪ್ರಾಯವನ್ನು ಶ್ರೀ ಆಚಾರ್ಯರು ತೋರಿಸಿ, ವಿವರಿಸಿ ವ್ಯಕ್ತಪಡಿಸಿದ್ದಾರೆ; (ಪಂಚ ಮೇ ಪತಯಃ ಸಂತಿ, ಷಷ್ಠಸ್ತು ಮಮ ರೋಚತೇ' ಎಂಬಲ್ಲಿ ಆರನೆಯವನೆಂದರೆ ಶ್ರೀ ಕೃಷ್ಣನೆಂದು ಜೈಮಿನಿ ಭಾರತದ ಮಾತುಗಳಿಂದ ಅರ್ಥವಿಸಲಾಗಿದೆ). ಪ್ರತಿಯೊಂದು ವ್ಯಕ್ತಿಯೂ ತನ್ನ ಸಂಸ್ಕಾರಕ್ಕೆ ತಕ್ಕಂತೆ ಅರ್ಥಮಾಡಿ ಅಭಿಪ್ರಾಯವನ್ನು ರೂಪಿಸುವುದು ಸಹಜವಾಗಿದೆ. ಸತ್ಪಾತ್ರದ ಮುಖದಿಂದ ಸಾಮಾನ್ಯ ವ್ಯಕ್ತಿಯ ಕುಚೋದ್ಯದಂತಿರುವ ಮಾತು ಹೊರಡಲಾರದು, ಈ ಮಾತಿನಲ್ಲಿ ಉದಾತ್ತ ಅಭಿಪ್ರಾಯವಿದೆಯೆಂದು ಯೋಚಿಸಿ, ಅದನ್ನು ನಿರೂಪಿಸಿರುವುದಕ್ಕೆ ಉತ್ತಮ ಸಂಸ್ಕಾರವೂ ನೈತಿಕ ಸಂಪತ್ತೂ ಅತ್ಯಗತ್ಯ. ಈ ಲೇಖನವನ್ನು ಓದಿದಾಗ ಶ್ರೀ ಆಚಾರ್ಯರ ಅಸಾಧಾರಣ ಸಂಸ್ಕೃತಿಯ ಹಾಗೂ ಪ್ರತಿಭೆಯ ಅರಿವಾಗುತ್ತದೆ.

ಈಯೆಡೆಯಲ್ಲಿರುವ ೪ ಲೇಖಗಳನ್ನು–ವಿಶ್ವಕವಿ ಕಾಳಿದಾಸ (ಕಾಲ, ದೇಶ. ಮತಗಳ ವಿಚಾರ), ಋಷ್ಯಶೃಂಗನ ಕತೆ (ಸಿರಸಂಗಿಯ ಶಾಸನ ಮತ್ತು ತೊರವೆಯವರ ಕೃತಿಗಳ ವಿಚಾರ). 'ಸಂಗೀತ ರತ್ನಾಕರ'ದಲ್ಲಿ ಕೆಲವು ಮಾತುಗಳು, ಪಂಜೆಯವರ ಸಂಶೋಧನ ಪ್ರವೃತ್ತಿ (ಬಿಳಿಗಿಯ ಶಾಸನದ ಸಾಹಿತ್ಯಕ ವಿಚಾರ)–ನಾನು ಮೆಚ್ಚಿಕೊಂಡಿದ್ದೇನೆ, ಇಲ್ಲಿ ವಿಸ್ತರಿಸಿಲ್ಲವಷ್ಟೆ!

ಶ್ರೀ ಆಚಾರ್ಯರು ವಾಙ್ಮಯ ತಪಸ್ವಿಗಳು. ಮಾನಸಿಕ ತಪಸ್ಸಿನಿಂದ ಆತ್ಮೋದ್ಧಾರವು ಸಾಧ್ಯ. ಅದು ಆತ್ಮ ಪ್ರಯೋಜನವನ್ನು ಒದಗಿಸುವುದಾದರೆ, ಶ್ರೀ ಆಚಾರ್ಯರ ಈ ಬಗೆಯ ವಾಙ್ಮಯ ತಪಸ್ಸು ಸಾರಸ್ವತ ಪ್ರಪಂಚಕ್ಕೆ ಪ್ರಯೋಜನವನ್ನುಂಟುಮಾಡಿದೆ. ಅವರ ತಪಸ್ಸು ನಿರಂತರವಾಗಿ ನಡೆಯುವಂತೆ ಪರಮಾತ್ಮನು ಅನುಗ್ರಹಿಸಲಿ!

x x x x x x

೬. 'ಸಾಹಿತ್ಯದ ನೋಟಗಳು'-ಪರಿಚಯ

—ಶ್ರೀ ಕೆ. ಎಲ್. ಉಪಾಧ್ಯಾಯ, ಶಿವಮೊಗ್ಗ.

ಸಾಹಿತ್ಯ ಜನ ಜೀವನದ ರನ್ನಗನ್ನಡಿ, ಅದರ ವಿಶ್ಲೇಷಣೆಯಿಂದ ಭಾವುಕರಿಗೆ ಆಸ್ವಾದನೆಯಾಗುವಂತೆಸಗುವುದು ವಿಮರ್ಶಕನ ಕೆಲಸ. ಇತರರು ಹೇಳಿದ್ದನ್ನು ಪರಾಮರ್ಶಿಸಿದರೆ ಅದರ ಯಥಾರ್ಥತೆ ತಿಳಿಯುತ್ತದೆ. ಕೃತಿಯಲ್ಲಿ ಧಾರ್ಮಿಕಾದಿ ವಿಚಾರಗಳಿದ್ದರೆ, ಅತ್ತ 'ಕ್ಷ' ಕಿರಣವೆಂಬಂತೆ ಬೆಳಕು ಹರಿಯಿಸಿದರೆ, ಮತ್ತಷ್ಟು ಆಸ್ವಾದನೆಯಿದೆ. ಈ ದಿಸೆಯಲ್ಲಿ ಶ್ರೀ ವೆಂಕಟರಾಯಾಚಾರ್ಯರ 'ಸಾಹಿತ್ಯದ ನೋಟಗಳು' ಇಲ್ಲಿ ಪರಿಚಯಿಸಲಿದೆ.

೧. 'ಕವಿರಾಜಮಾರ್ಗ'ದಲ್ಲಿ ಕನ್ನಡದ ವಿಸ್ತಾರ. ಕನ್ನಡಿಗರ ಜಾಣ್ಮೆ. ಸಮಾಸದಲ್ಲಿ ಕನ್ನಡದ ಬಳಕೆ, 'ಯತಿ'ಯ ಸ್ಥಾನ, ರಸವಿಚಾರ, ಅಲಂಕಾರಗಳ ಬಗೆ. ಉದ್ಧೃತ ಪದ್ಯಗಳ ಆಕಾರಾದಿ ವಿಚಾರಗಳೇನೆಂದು ಈ ಲೇಖನದಲ್ಲಿದೆ. 'ಕಿರಿದರೊಳ್ ಪಿರಿದು ಮರ್ಥಮಂ' ತೋರಿದ ಚಾಣಾಕ್ಷತೆಯಿಲ್ಲಿದೆ.

೨. 'ಪಂಪಭಾರತ'ದಲ್ಲಿ ಹೇಳಿದ ಇತರ ಕತೆಗಳು, ಅದರ ಸಂಪಾದಕರ 26 ಆಶಂಕೆಗಳು ಏಕೆ – ಹೇಗೆ –ಸರಿಯೋ, ಅಲ್ಲವೋ ಎಂದಿಲ್ಲಿ ಹೇಳಿದೆ: (ಅರ್ಜುನ ಪಾರ್ವರ ಪಿಳ್ಳೆಯ ಪೋದ ಜೀವಮಂ ತಂದುದು. ಅರ್ಜುನ ಪಾಶುಪತಾಸ್ತ್ರ ಮುಷ್ಟಿಗಾಗಿ ಶಿವನಲ್ಲಿ ಗೈದುದು. ಅರ್ಜುನನಿಗೇಕೆ ಪಟ್ಟಾಭಿಷೇಕ ಇತ್ಯಾದಿ ಚರ್ಚಿತಗಳಾಗಿವೆ).

೩. ರನ್ನನ 'ಗದಾಯುದ್ಧ'ದಲ್ಲಿ, 'ಧರ್ಮಯುದ್ಧ'ವೆಂದು ಹೇಗೆ ಕಾಣುವುದೆಂದು ಇಲ್ಲಿ ಸೂಚಿಸಲಾಗಿದೆ: ಕೌರವನ ಊರು – ಮಕುಟ ಭಂಗಮಾಡಿದ್ದು ಅಧರ್ಮವಲ್ಲೆಂದು ರನ್ನನ-ವ್ಯಾಸನ ಮಾತುಗಳಿಂದ ಸ್ಪಷ್ಟಿಸಿದೆ, ಭೀಮ ದುಶ್ಶಾಸನನ ರಕ್ತ ಕುಡಿದಿಲ್ಲೆಂದು ವ್ಯಾಸನ ಮಾತನ್ನು ಎತ್ತಿಕೊಂಡು ಸೂಚಿಸಲಾಗಿದೆ. ಭೀಮ 'ಸತ್ಯಪ್ರತಿಜ್ಞ'ನಾಗುವಂತೆ, ಈ ತೆರದ ಘಟನೆಗಳು ಹೇಳಿದ್ದು. ಅದೇ 'ಧರ್ಮಯುದ್ಧ'ವೆಂದು ರನ್ನನ ಅಂತರಾರ್ಥವಾಗಿದೆ.

೪. 'ವರ್ಣಕ - ವಸ್ತುಕ'ಗಳೆಂಬ 2 ತರದ ಕೃತಿಗಳು ಸಾಹಿತ್ಯದಲ್ಲಿ ಹೇಳಲಾಗಿವೆ. (ಪಂಪನಿಂದ ತೊಡಗಿ ಕುಮಾರ ವಾಲ್ಮೀಕಿಯನಕ ಈ ಮಾತು ಬಳಸಿದೆ). 'ವರೋ ವಸ್ತು ಕವಿ:, ವರ್ಣ ಕವಿ: ಮಧ್ಯಮ ಉಚ್ಯತೇ' ಎಂಬ (ಶಾರ್ಙ್ಗದೇವನ ಸಂಗೀತರತ್ನಾಕರದ) ಮಾತು ಕೇಳುತ್ತದೆ. ಪ್ರಸ್ತುತ, ಕುಮಾರ ವಾಲ್ಮೀಕಿಯೂ, ಕುಮಾರ ವ್ಯಾಸನೂ,

ತಾನೂ – ಇಬ್ಬರೂ – ವರ್ಣಕ. ವಸ್ತುಕ ಕವಿಗಳೆಂದಿದ್ದಾನೆ, ಹಾಗಾದರೆ, ಕುಮಾರ ವ್ಯಾಸನ ಭಾರತ, ಮತ್ತು ಐರಾವತಗಳೆಂಬ 2 ಕೃತಿಗಳಿವೆ; ಕುಮಾರ ವಾಲ್ಮೀಕಿಯ ರಾಮಾಯಣ ಮತ್ತು ಮೈರಾವಣ ಕಾಳಗಗಳಿವೆಯೆಂದೇ ಇಲ್ಲಿ ತಿಳಿಯಬೇಕಾದವು!

೫. 'ಗದುಗಿನ ಭಾರತ'ದಲ್ಲಿ, ಕವಿ ಚಿತ್ರಿಸಿದ ಕೃಷ್ಣನ ಮೇಲ್ಮೆಗಳು ಇಲ್ಲಿ ವಿವರಿಸಲಾದಿವೆ. ಕೃಷ್ಣನನ್ನು ಮಾತಾಡಿಸಲು ಕೌರವ – ಅರ್ಜುನರು ಹೋದಾಗ ಕುಳಿತ ರೀತಿ ವಿಲಕ್ಷಣವದೆಳ ಕೃಷ್ಣ ಸಂಧಾನಕ್ಕೆ ಬರುವಾಗ ಕೌರವ ಇದಿರ ಗೊಂಡನೆಂದು ವ್ಯಾಸನಲ್ಲಿದೆ; ಕೌರವನೇಳದಾಗ ಕೃಷ್ಣನುಂಗುಟದ ಒತ್ತಿನಿಂದ ಸಿಂಹಾಸನದೊಂದಿಗೆ ಕೌರವನ ಪತನ ವಿಲ್ಲಿದೆ, (ಭಾಸ ಮಹಾಕವಿಯ ಕೃತಿಯಿಂದ ಇದು ಉದ್ಧೃತವೆಂದಿದೆ), ಕೌರವ ತೊಡೆ ಮುರಿದು ಬಿದ್ದಾಗಲೂ ಮೂರು ಬೆರಳನ್ನು ಮಡಚಿ, ತನ್ನ ಅಪೂರ್ಣ ಕಾರ್ಯಗಳನ್ನು ನೆನೆವಾಗ; ಕೃಷ್ಣ ಬಂದು ಅದಕ್ಕೆ ಪ್ರತಿಯಾಗಿಸಿ ಪಾಂಡವರನ್ನು ಗೆಲ್ಲಿಸುತ್ತಿದ್ದೆನೆಂದುದು ಕನ್ನಡದಲ್ಲಿ ಹೆಚ್ಚಳಗಳಾಗಿವೆ,

೬. ಉತ್ತರಕಾಂಡ ರಾಮಾಯಣವನ್ನು ನಾರಾಯಣ ಕವಿ ಬರೆದಿದ್ದಾನೆ. ಇದುವರೆಗೆ ಅಚ್ಚಾಗದಿರುವ ಈ ಗ್ರಂಥ ಶ್ರೀ ಆಚಾರ್ಯರಿಂದ ಪ್ರಕಟವಾಗಿದೆ. ಅದರಲ್ಲಿ ಹೇಳಿದ ನಾಯಿಯ ನಡತೆ ಅಥವಾ ನ್ಯಾಯದ ನಡತೆಯೆಂಬ ಒಂದು ಕತೆಯಿಲ್ಲಿ ಪರಿಚಯಿಸಲಾಗಿದೆ, ಮಹಾತ್ಮಾ ಗಾಂಧೀಜಿ 'ರಾಮರಾಜ್ಯ'ವನ್ನು ಆದರ್ಶವಾಗಿಟ್ಟುಕೊಂಡವರು, ಉತ್ತರ ಕಾಂಡದಲ್ಲಿ ಅಂತಹ ಉತ್ತಮ ವಿಚಾರಕಥನಗಳಿವೆಯೆಂದು ಈ ಕೃತಿಯನ್ನೋದಿಯೆ ವಿದಿತ!

೭, 'ಆದಿತ್ಯ ಪುರಾಣ', ಶೃಂಗೇರಿಯ ಶ್ರೀ ರಾಮಚಂದ್ರ ಗುರುಗಳ (1508-60 ಇಸ್ವಿ) ಶಿಷ್ಯನಾದ 'ಕವಿರಾಜ ಕಂಠೀರವ'ನು ಸಂಸ್ಕೃತದಿಂದ ಅನುವಾದಿಸಿದ ಕೃತಿ, ಇದೂ ಶ್ರೀ ಆಚಾರ್ಯರಿಂದ ಪ್ರಕಟಿತ, ದಕ್ಷಯಾಗದಲ್ಲಿ ವೀರಭದ್ರನು ಬಂದುದು, ದಕ್ಷನ ತಲೆಯನ್ನು ಕಡಿದು ಕುರಿಯ ತಲೆಯನ್ನು ಜೋಡಿಸಿದ್ದು. ಅಲ್ಲಿಗೆ ಬಂದ ದೇವತೆಗಳಿಗೆ ಉಂಟಾದ ಕಿರುಕುಳಗಳ ಪರಿಚಯವಿಲ್ಲಿದೆ,

೮, 'ಶುಕಸಪ್ತತಿ'ಯಲ್ಲಿ ಗಿಳಿ ಹೇಳಿದ 70 ಕತೆಗಳಲ್ಲಿ 'ಶಕುಂತಲೆ'ಯದೊಂದು. ವ್ಯಾಸಭಾರತ. ಪದ್ಮಪುರಾಣ ಮತ್ತು ಕಾಲಿದಾಸ ಕೃತಿಗಳಿಗಿಂತ ಭಿನ್ನ. ಇಲ್ಲಿ ಪತಿವ್ರತೆಯ ಮಹಿಮೆ ಹೆಚ್ಚಾಗಿದೆ, ಸಪ್ತರ್ಷಿಗಳ ಶಾಪದಿಂದ ದುಷ್ಯಂತ ತನ್ನನ್ನು ಮರೆಯಲು ಆವರಿಗೆ ಆಕೆ ಶಾಪವೀಯಲು ಸಿದ್ಧಳಾದಾಗ, ನಾರದ ಪ್ರೇರಿತರಾಗಿ ಆವರು ಬಂದು ಆಕೆಯನ್ನು ಸಂತೈಸಿ, ದುಷ್ಯಂತನೊಂದಿಗೆ ಸಂಧಿಸಿದಂತೆ ಚಿತ್ರಿಸಲಾಗಿದೆ,

೯: ಪಾಂಡವರ 'ಅಶ್ವಮೇಧ'ದ ಕತೆ ವ್ಯಾಸನಿಗಿಂತ ಚೆನ್ನಾಗಿ ಜೈಮಿನಿಯಿಂದ ವರ್ಣಿತ; ಅದು ಕನ್ನಡದಲ್ಲಿ ಲಕ್ಷ್ಮೀಶ ಕವಿಯಿಂದ ಅನುವಾದಿತವಿದೆ. ಸುಧನ್ವ ಅರ್ಜುನನೊಂದಿಗೆ ಯುದ್ಧಕ್ಕೆ ಹೊರಟಾಗ. ಆತನ ಪತ್ನಿ ತಡೆದ ಪದ್ಯವೊಂದರ 2 ಅರ್ಥ ವಿಶೇಷ

ಗಳು ಇಲ್ಲಿವೆ. ತಂದೆಯ ವಚನಪಾಲನ, ಕೃಷ್ಣನ ಸಂದರ್ಶನ, ಪತ್ನಿಯ ಸಂಧಾನಗಳು ಒಂದೇ ದಿನ ಒದಗಿದರೆ, ಯಾವುದು ಹೇಗೆ ನಡಯಿಸತಕ್ಕದೆಂದು ಆತನ ಸಮಸ್ಯೆ. ಏಕಾದಶೀ ಪಿತೃಗಳ ಶ್ರಾದ್ಧ, ಪತ್ನೀ ಸಂಯೋಗಗಳು ಏಕದಾ ಒದಗಿದರೆ ಹೇಗೆ ಸಾಧ್ಯವೆಂದು ಆಕೆ ಪ್ರಶ್ನಿಸಿದಳು. 'ಶ್ರಾದ್ಧಾನ್ನ ಮಾಘ್ರಾಣಿಸೆ ಕೃತಭೋಜ್ಯವಾದದಪುದು. ನಡುವಿರುಳ್ ಕಳೆದಾ ವನಿತೆಯನೊಡಗೂಡಬಹುದು' ಎಂದು ಆತ ಉತ್ತರಿಸುವುದರಿಂದ, ಆಕೆಗೆ ಸಂತಸವಾಗಿ ಆತನನ್ನು ಕೈಹಿಡಿದಳೆಂದಿದೆ. 2ನೆಯದಾಗಿ ಏಕಾದಶಿಗೆ ಪಿತೃಗಳ ಶ್ರಾದ್ಧವನ್ನು ಸ್ಮಾರ್ತರು ಇಂದಿಗೂ ಆಚರಿಸುವಲ್ಲಿ. ಈ ಸಂದರ್ಭ – ಉದಾಹರಣೆಯ ಆಧಾರವೆಂದಿದೆ.

೧೦. 'ತುರಂಗಭಾರತ'ದಲ್ಲಿ. ಕೌರವನಿಗೆ ಜೂಜಾಡಲು ಪೂರ್ವವೈರದಿಂದ. ಶಕುನಿ ಪ್ರೇರೇಪಿಸಿದಂತೆ, ಪಾಂಡವರಲ್ಲಿ ಜೂಜಾಡಿದುದು ಹಾಗೂ ಪಾಂಡವರಿಂದ ಕೌರವರ ನಾಶವಾದುದೆಂದು ಹೇಳಿದೆ. [ಈ ಕೃತಿ ಸಾಗರದ ಬಳಿಯ ಕೇದಿಗೆಸರು ಎಂಬಲ್ಲಿದ್ದ ಪರಮದೇವನ (ಇಸ್ವಿ 1778) ರಚನೆಯಾಗಿದೆ; 'ಭೀಮನ ಕೋಣೆ'ಯ ದೇವರನ್ನು ಪ್ರತಿಸಂಧಿಯ ಕೊನೆ ಸ್ಮರಿಸಿದ್ದಾನೆ. 'ಶಿವನ ಭಿಕ್ಷಾಟನ (7ನೆ ಸಂಧಿ) ಅರ್ಜುನನಿಗೆ ಹನುಮನ ಸಂಧಿ (15 ನೆ ಸಂ), ರಾಜಸೂಯಕ್ಕೆ ಪುರುಷಮೃಗವನ್ನು ತಂದುದು (20 ನೆ ಸಂ), ಸಪ್ತಸಮುದ್ರಾದಿಗಳ ವರ್ಣನೆ (28–29 ಸಂ), ಕೃಷ್ಣನ ಅಶ್ವಮೇಧ (85 ನೆ ಸಂ), ಗಳು ವ್ಯಾಸಭಾರತಕ್ಕಿಂತಲೂ ಇವರಲ್ಲಿ ಹೆಚ್ಚಿನದಾಗಿವೆ] 'ಮುನ್ನಿನ ವೈರದಿ, ಕಡು ಕ್ಷೇಪವಮಾಡಿ, ಉನ್ನಂತಲೆತ್ತಪಗಡೆ ಆಡಿಸಿ, ತನ್ನ ಕುಹಕದಿಂದ ಕುರುಬಲವನೆ ಕೊಂದ. ಗನ್ನಗಾತಕಿ ಶಕುನಿಯೊ? ಪಾಂಡವರೊ?" ಎಂದು ಕನಕದಾಸರ ಪದ್ಯದಲ್ಲಿ ಈ ಕತೆ ಹೇಳಿಸುವುದಂತೆ!

೧೧. ಸಂಸ್ಕೃತದಲ್ಲಿ ಭಕ್ತಿಗೀತೆಗಳನ್ನು ಬರೆದವರು 'ವ್ಯಾಸಕೂಟ'ದವರು, ಶ್ರೀ ಶಂಕರಾಚಾರ್ಯ. ಶ್ರೀ ಮಧ್ವಾಚಾರ್ಯರ ಹಲವು ದೇವತಾಸ್ತುತಿಗಳು ರಾಗ– ತಾಳಯುಕ್ತವಾಗಿ ಹಾಡತಕ್ಕವು. 'ಹರಿದಾಸ ಕೂಟ'ದವರಿಗೆ ಇವು ಹಿನ್ನೆಲೆಗಳಾಗಿವೆಯೆಂದು ಇಲ್ಲಿ ವಿವರಿಸಲಾಗಿದೆ,

೧೨. ಹರಿದಾಸರಲ್ಲಿ ಮೊದಲಿಗೆ ಶ್ರೀ ನರಹರಿ ತೀರ್ಥರು, 'ಆದ್ಯ'ರು ಇದ್ದರೂ ಶ್ರೀಪಾದರಾಯರು, ಶ್ರೀ ವ್ಯಾಸರಾಯರು, ಶ್ರೀ ಪುರಂದರದಾಸರು, ಶ್ರೀ ವಿಜಯದಾಸರು ಪ್ರಸಿದ್ಧರಾಗಿದ್ದಾರೆ, 'ಪುರಂದರದಾಸರ ಸಮಕಾಲಿಕರು' ಯಾರೆಂದು, ಅವರ ಕೃತಿಗಳೇನೆಂದು ಇಲ್ಲಿ ಸಂಕಲಿಸಿ ಬರೆಯಲಾಗಿದೆ.

೧೩. ಕನಕದಾಸರ ಕೃತಿಗಳಲ್ಲಿ ಅಳವಡಿಸಿದ ಕೆಲವು ವೈಶಿಷ್ಟ್ಯಗಳು ಏನೆಂದು, ವೈಷ್ಣವ ಭಕ್ತಿಯೇನೆಂದು ಈ ಲೇಖದಲ್ಲಿ ಹೇಳಿದೆ,

೧೪. 'ಚಂದ್ರಹಾಸ ಚರಿತೆ'ಯೆಂಬ ಯಕ್ಷಗಾನ ಪ್ರಸಂಗವು ಶ್ರೀ ಆಚಾರ್ಯರಿಂದಲೇ ಮೊದಲಿಗೆ ಪ್ರಕಟಿತ. ಶ್ರೀ ಮಟ್ಟಿ ವಾಸುದೇವ ಪ್ರಭು, ಅದರಂತೆ ರಾಘಾವಿಲಾಸಿ

ಬರೆದರು (ಅಮುದ್ರಿತ), ಅವರ ಬಾಲಲೀಲೆ. ಸಮುದ್ರಮಥನಗಳು ಪ್ರಸಿದ್ಧಗಳು. ಚಂದ್ರ ಹಾಸನ ಬಾಲ್ಯದ ವೈಷ್ಣವ ಭಕ್ತಿಯೇ ಅವನಿಗೆ ರಕ್ಷೆಯಾಯಿತು. ಜೈಮಿನಿಭಾರತದಂತೆ ಇಲ್ಲಿ ಚಂದ್ರಹಾಸನ ರಾಜ್ಯಭಾರದ ವರೆಗೆ ಬರೆದಿದೆ; ಅರ್ಜುನನಲ್ಲಿ ಯುದ್ಧ ಘಟನೆ ಇಲ್ಲಿಲ್ಲ!

೧೫. ಹರಿದಾಸರಲ್ಲಿ ದ. ಕ. ಜಿಲ್ಲೆಯವರು ಕೆಲವರು ಸುಪ್ರಸಿದ್ಧರಿದ್ದಾರೆ; ಶ್ರೀ ವಾದಿರಾಜ ಸ್ವಾಮಿಗಳ ರಚನೆ ಅಪಾರ! ಹಾಗೇ ಕಳೆದ ಶತಕದಲ್ಲಿ ಹುಟ್ಟಿದ ಪಾವಂಜೆ ಯವರು ಬರೆದ ನಾಲ್ಕುನೂರು ಪುಟಗಳ ಕೃತಿಗಳು 'ಸತ್ಸಂಗ ಸೇವಾಸಮಿತಿ, ಹಳೆಯಂಗಡಿ, ಯವರಲ್ಲಿ ಪ್ರಕಟವಾಗಿವೆ, ಆ ಕೀರ್ತನೆಗಳಲ್ಲಿ ಕೆಲವು ಸ್ವಾರಸ್ಯಗಳು ಎತ್ತಿ ಬರೆದಿವೆ. ಈ ಶತಕದ ಕೆಲವರ ಹೆಸರುಗಳು ಸೂಚಿಸಲಾಗಿವೆ.

[೧೬–೨೦, ಆಧುನಿಕ ಯುಗದ ಸಾಹಿತಿಗಳು ಹಲವರು, ಪ್ರಸ್ತುತ ಐವರ ಒಂದೊಂದು ಕೃತಿ ಪರಿಚಯಿಸಿದೆ.]

೧೬. ಶ್ರೀ ಪಂಜೆ ಮಂಗೇಶ ರಾಯರು 'ಸಣ್ಣ ಕತೆಗಳ ಪಿತಾಮಹ'ರು, ಹಲ ವಾರು ಪದ್ಯ - ಗದ್ಯಗಳನ್ನು ಬರೆದರು; ಶ್ರೀಯುತರು ಕಡೆಕಂಜಿ'ಯೆಂಬ ಜಾನಪದ ಕತೆ ಯನ್ನು ಕವಿತೆಯಾಗಿಸಿದ್ದು, ಅದರ ವಸ್ತು–ವರ್ಣನೆಗಳು ಇಲ್ಲಿವೆ.

೧೭. ಶ್ರೀ ಗೋವಿಂದ ಪೈಯವರು ಕನ್ನಡದಲ್ಲಿ ಪ್ರಾಸವಿಲ್ಲದೆ ಬರೆಯುವವರಲ್ಲಿ ಮೊದಲಿಗರು, ಸ್ವತಃ ಸಂಶೋಧಕಾಗ್ರೇಸರರೆನಿಸಿದರೂ, ಹಲವಾರು ಗದ್ಯ-ಪದ್ಯಗಳನ್ನೂ ಬರೆದರು; 'ದಾರ್ಶನಿಕ' ಕವಿತೆಯಾದ 'ಪರಮಾತ್ಮನೆಲ್ಲಿರುವನು' ಎಂಬುದರ ಸ್ಥೂಲ ವಿಚಾರ ಇಲ್ಲಿದೆ.

೧೮, ಶ್ರೀ ಕಡೆಂಗೋಡ್ಲು ಶಂಕರ ಭಟ್ಟರು 'ಪ್ರಬಂಧ'ದ ಬಗ್ಗೆ ವಿಚಾರಮಥನ ಮಾಡಿದವರು, ಅವರ ಪ್ರಬಂಧಗಳೇ ಅದಕ್ಕೆ ಉದಾಹರಣಾರ್ಹಗಳಾಗಿವೆ. ಕವಿ, ಕತೆಗಾರ, ಪತ್ರಿಕೋದ್ಯಮಿಯಾಗಿಯೂ ಅವರು ಪ್ರಸಿದ್ಧರು,

೧೯, ಡಾ. ರಂ, ಶ್ರೀ ಮುಗಳಿಯವರು ವಿಮರ್ಶಕರಲ್ಲಿ ಸುಪ್ರಸಿದ್ಧರೊಬ್ಬರು. 'ಸರಸ್ವತಿಯ ದರ್ಶನ' ವೆಂಬ ಶ್ರೀಯುತರ ಸಂಕಲನದ ಪರಾಮರ್ಶೆಯಿಲ್ಲಿದೆ, ವೈದಿಕ, ಪಾಶ್ಚಾತ್ಯ ಹಾಗೂ ಕನ್ನಡ ಸಾಹಿತ್ಯದಲ್ಲಿ ಕೆಲವೆಡೆ ಬಂದಿರುವ 'ಸರಸ್ವತಿ'ಯ ಸ್ತುತಿಗಳನ್ನು ವಿಶ್ಲೇಷಿಸಿದ್ದಾರೆ,

೨೦. ಪಂಡಿತ ಸಿ. ವಿ, ಕವಲಿಯವರು ನೂರಾರು ಪುಸ್ತಕಗಳನ್ನು. ಕೆಲವು ನಾಟಕಗಳನ್ನು. 'ಕಸ್ತೂರಿಕೋಶ'ವನ್ನು ಬರೆದವರು. ಇತ್ತೀಚೆ ಹರ್ಷರಾಜನ 3 ನಾಟಕ ಗಳನ್ನು ಕನ್ನಡಿಸಿದ್ದಾರೆ. 'ರತ್ನಾವಳಿ'ಯ ಉಪೋದ್ಘಾತದಲ್ಲಿ ಕೈಗೊಂಡ ನಿಷ್ಕರ್ಷೆಗಳೇ ನೆಂದು ಇಲ್ಲಿ ಸೂಚಿಸಲಾಗಿವೆ.

ಗೊನೆ: ಸುರತ್ಕಲ್ಲಿನ ಶ್ರೀ ವೆಂಕಟರಾಯಾಚಾರ್ಯರು ಹಲವಾರು ವರ್ಷಗಳಲ್ಲಿ ಹಲವಾರು ಗ್ರಂಥಗಳನ್ನು ಪ್ರಕಟಿಸಿದ್ದಾರೆ; ವಿಮರ್ಶೆಗಳನ್ನು ಬರೆದಿದ್ದಾರೆ; ಸಂಶೋಧನಗಳನ್ನು ಕೈಗೊಂಡಿದ್ದಾರೆ. ಶಿವಮೊಗ್ಗದ 'ತಮಸೋಮಾ' ಪ್ರಕಟನಾಲಯದ ಈ ಸಂಕಲನದ 'ಪಕ್ಷಿನೋಟ'ದ ಪರಿಚಯವಿದು. ಕನ್ನಡಿಗರು ಶ್ರೀಯುತರ ಇತರ ಕೃತಿಗಳಂತೆ ಇವನ್ನೂ ಕೈಗೊಂಡು ಆಸ್ವಾದಿಸಲಿ! ಇನ್ನೂ ಹಲವಾರು ಸಂಕಲನಗಳು ಶ್ರೀಯುತರಿಂದ ಪ್ರಕಟವಾಗಿ ಸಾಹಿತ್ಯಕ್ಕೆ ಕೊಡುಗೆಗಳಾಗಲಿ!

x x x x x x

೫. ‘ಉತ್ತರ ರಾಮ ಕಥೆ’

—ಶ್ರೀ ಕೆ. ಸುಬ್ರಹ್ಮಣ್ಯ ಭಟ್ಟ, ಕೊಣಾಜೆ.

ಶ್ರೀಮದಮಿತ ಗುಣಾಭಿರಾಮರ । ಮಾಮನೋಹರ ಮೂರ್ತಿ ಕಮಲಜ ।
ಕಾಮಹರ ಮುಖದೇವ ಹೃದಯಾಂಭೋಜ ದಿನರಾಜ ॥
ಸಾಮಗಾನಪ್ರೇಮ ತಾರಕ । ರಾಮ ಮಂತ್ರಾತ್ಮಕನು ರಘುಕುಲ ।
ರಾಮ ಸಲಹುಗೆ ಸಕಲ ಲೋಕವನೊಲಿದು ಕರುಣದಲಿ ॥

ಇದ್ದಕ್ಕಿದ್ದಂತೆಯೇ ಒಂದು ದಿನ ಶ್ರೀ ಸುರತ್ಕಲ್ ವೆಂಕಟರಾಯಾಚಾರ್ಯರಿಂದ ಒಂದು ಪತ್ರ ಬಂತು. ಅವರು ನನ್ನಿಂದ ಒಂದು ಲೇಖನವನ್ನು ಅಪೇಕ್ಷಿಸಿದ್ದರು. ಆದರೆ ಆ ಪತ್ರದಲ್ಲಿ ನನಗಾವ ಸ್ವಾತಂತ್ರ್ಯವನ್ನೂ ಕೊಡದೆ, “ಉತ್ತರ ರಾಮಕಥೆ ಬಗ್ಗೆ ಎಂಟು ಹತ್ತು ಪುಟಗಳೊಳಗೆ ವಾಲ್ಮೀಕಿರಾಮಾಯಣದ ಉತ್ತರಕಾಂಡದ ಸಂವಾದಿಕಥೆಯೊಡನೆ ತುಲನಾತ್ಮಕ ಲೇಖನ ಬರೆಯಬೇಕು.” ಎಂದು ಕಟ್ಟಪ್ಪಣೆ ಮಾಡಿದ್ದರು. ರಾಮಾಯಣ ಮಹಾನದಿಯ ಆ ಸ್ರೋತಸ್ಸು ಎಲ್ಲೆ ಮೀರಿ ಪ್ರವಹಿಸುವ ಸ್ವಭಾವದ್ದು. ಈ ಕಟ್ಟುನಿಟ್ಟಿನಲ್ಲಿ ಲೇಖನ ಬರೆಯುವುದು ಸಾಧ್ಯವೇ ಎಂದು ಯೋಚಿಸುತ್ತಿದ್ದೆ. ಅಷ್ಟರಲ್ಲಿ ಅವರು ‘ಉತ್ತರ ರಾಮಕಥೆ’ಯ ಪೂರ್ವ ವಿಭಾಗ ಮತ್ತು ಉತ್ತರ ವಿಭಾಗಗಳನ್ನು ಕಳುಹಿಸಿ ನಾನು ಲೇಖನ ಬರೆಯದೆ ತಪ್ಪಿಸಿಕೊಳ್ಳಲಾರದಂತೆ ಜಾಗ್ರತೆ ವಹಿಸಿ, ಒತ್ತಾಯಿಸಿದರು. ಹಾಗಾದರೂ ನನ್ನ ಬರವಣಿಗೆ ಮುಂದುವರಿಸುವುದೆಂತು ಎಂದು ಯೋಚಿಸುತಿದ್ದಂತೆಯೇ ತಟಕ್ಕನೆ ಒಂದು ಹೊಳಹು ಮನಸ್ಸಿನಲ್ಲಾಯಿತು. ಅದು:- ಪುಟ ನಿಯಮವಿರಲಿ, ಕಾಲನಿಯಮ ವಿರಲಿ, ಯಕ್ಷಗಾನದವರು ಸೀಮಿತ ರಂಗಸ್ಥಳದಲ್ಲಿ ಒಂದು ಬಿಡ್ತಿಗೆ ಮುಗಿದಾಕ್ಷಣ ಸಂದರ್ಭಾನುಸಾರ ‘ಹತ್ತುಯೋಜನ. ಸಾವಿರಯೋಜನ ಗಮಿಸಲಾಯಿತು’ ಎಂದೋ, ‘ರಾಮೇಶ್ವರದಿಂದ ಲಂಕಾನಗರಿಗೆ ಬಂದುದಾಯಿತು’ ಎಂದೋ ಕಥೆಯನ್ನು ಮುಂದುವರಿಸುವರಲ್ಲ! ಪತ್ತಾರು ಹಜ್ಜೆಗಳ ಆ ಅಬ್ಬರದ ಸುತ್ತು ಅಂತಹ ಕಾರ್ಯಮಾಗುತ್ತದೆ! ಒಂದೇ ರಾತ್ರಿಯಲ್ಲಿ ನಾಲ್ಕಾರು ಅವತಾರಗಳ ಚತುರ್ಯುಗಗಳ ಕಥೆಗಳನ್ನು ದಶಾವತಾರ ಮೇಳ ಅಭಿನಯಿಸುತ್ತದೆ. ಹದಿನೆಂಟು ದಿನಗಳ ಮಹಾಭಾರತ ಕಥೆಯನ್ನು ಒಂದೆರಡು ಘಂಟೆಗಳೊಳಗೆ ಅಭಿನಯಿಸಿ ಮೂಲ ಘಟನೆಯನ್ನು ಮಂದಟ್ಟುಮಾಡುವುದಿಲ್ಲವೇ? ಇಲ್ಲೆಲ್ಲಾ ಕಾಲ, ದೂರ, ಸ್ಥಳ. ಸಮಯಗಳು ಅಡ್ಡಿಯಾದುವೇ? ಒಂದಂಗುಲ ವಿಸ್ತೀರ್ಣದಲ್ಲಿ ಬಿಂಬಿತವಾದ ಆನೆಯ ಚಿತ್ರ ಬೃಹದಾಕಾರದ ಆನೆಯನ್ನು ಕಂಡಾಗ ಪರಿಚಯ ಮಾಡಿಕೊಳ್ಳಲು ಸಹಕಾರಿಯಾಗು

ಪ್ರವಿಷ್ಟವೇ? ಹಾಗಿರುವಾಗ ಆಚಾರ್ಯರು ಪ್ರಕಟಿಸಿಯೂ ತಿಳಿಸಿದರೆ ತೊಡಕೇನು? ಹಿತಮಿತವಾಗಿರಲು ಅದೊಂದು ಎಚ್ಚರಿಕೆ ಎಂದು ಭಾವಿಸಿದರಾಗದೇ? ಸರಿ, ಲೇಖನ ಬರೆಯಲು ಒಪ್ಪಿದೆ.

ರಾಮಕಥೆಯ ವೈಶಿಷ್ಟ್ಯ:—

“ನಾಸ್ತಿ ರಾಮಾಯಣಾತ್ಪರಂ” ಎಂಬುದು ರಾಮಾಯಣ ಕಥೆಯ ಬಗ್ಗೆ ಕಂಡು ಬರುವ ಪ್ರಮಾಣೋಕ್ತಿ. ಆದಿಕಾವ್ಯವೆನ್ನಿಸಿಕೊಂಡ ರಾಮಾಯಣ ಭಾರತೀಯ ಸಂಸ್ಕೃತಿಯ ಹಾಸುಹೊಕ್ಕನ್ನು ಕೂಲಂಕಷವಾಗಿ ಚಿತ್ರಿಸುತ್ತದೆ ಅಂತೆಯೇ “ಯದಿಹಾಸ್ತಿ ತದನ್ಯತ್ರ, ಯನ್ನೇಹಾಸ್ತಿ ನ ತತ್ ಕ್ವಚಿತ್” ಎನ್ನುವ ಹಿರಿಮೆಗೆ ಪಾತ್ರವಾದ ‘ಪಂಚಮವೇದ’ ಮಹಾಭಾರತ, ಭಾರತೀಯರ ಇನ್ನೊಂದು ಅಮೂಲ್ಯ ಉದ್ಘ ಸಾಹಿತ್ಯ ಕೃತಿ. ಅಂತೆಯೇ ಲೌಕಿಕ ಸಾಹಿತ್ಯದತ್ತ ಗಮನಿಸಿದರೆ, ಗುಣಾಢ್ಯನ ‘ಬೃಹತ್ಕಥೆ’ ಇನ್ನೊಂದು ಬೃಹತ್ಕಥಾ ಸ್ರೋತಸ್ಸು. ಈ ಮೂರು ಗ್ರಂಥಗಳಿಂದ ವಸ್ತುವನ್ನಾಯ್ಕೆ ಮಾಡಿ ಕವಿಗಳು ತಮ್ಮ ಪ್ರತಿಭೆಯಿಂದ ಸೃಜಿಸಿದ ಸಾಹಿತ್ಯ ಪರಂಪರೆ ಪ್ರಕಾರಗಳು ಭಾರತೀಯ ಭಾಷೆಗಳಲ್ಲಿ ಕಂಡು ಬರುತ್ತವೆ. ಭಾರತೀಯರಿಗೆ ರಾಮಾಯಣ, ಭಾರತ, ಬೃಹತ್ಕಥೆಗಳು ಪ್ರಧಾನ ಆಕರ ಗ್ರಂಥಗಳು. ಕಾವ್ಯ ವಸ್ತುವನ್ನು ಆರಿಸುವವರಿಗೆ ಇವು ತವನಿಧಿಗಳು. ತ್ರಿಪಥಗೆಯಾದ ಗಂಗೆಯಂತೆ ಈ ಸರಸಸಾಹಿತ್ಯ ತ್ರಿಸ್ರೋತಸ್ಸು ಭಾರತೀಯ ಸಾಹಿತ್ಯ ಭೂಮಿಯನ್ನು ಸಫಲವಾಗಿಸಿದೆ. ಗೋವರ್ಧನಾಚಾರ್ಯನು ಆರ್ಯಾ ಸಪ್ತಶತಿಯಲ್ಲಿ ಪೂರ್ವ ಕವಿಸ್ಮರಣಾವಸರದಲ್ಲಿ—

“ಶ್ರೀ. ರಾಮಾಯಣ ಭಾರತ ಬೃಹತ್ಕಥಾನಾಂ ಕವೀನ್ನಮಸ್ಕುರ್ಮಃ !
ತ್ರಿಸ್ರೋತಾ ಇವ ಸರಸಾ ಸರಸ್ವತೀ ಸ್ಫುರತಿ ಯೈರ್ಭಿನ್ನಾ ॥ ”

[ಆರ್ಯಾ ಸಪ್ತಶತೀ–1965. ಗ್ರಂಥಾರಂಭವ್ರಜ್ಯಾ, ಪದ್ಯ 34]

ಎಂದು ಹೊಗಳಿದುದು ಅದೆಷ್ಟು ಔಚಿತ್ಯಪೂರ್ಣವಾಗಿದೆ ಎಂದು ಪರಿಭಾವಿಸಬಹುದು.

ಭಾರತೀಯ ಭಾಷೆಗಳಲ್ಲೆಲ್ಲಾ ರಾಮಾಯಣ, ಮಹಾಭಾರತ ಹಾಗೂ ಬೃಹತ್ಕಥೆಗೆ ಸಂಬಂಧಿಸಿದಂತೆ, ಪದ್ಯ, ಗದ್ಯ, ಚಂಪೂ, ನಾಟಕ, ಮುಂತಾದ ವಿವಿಧ ಪ್ರಕಾರಗಳಲ್ಲಿ ಸಾಹಿತ್ಯ ಕೃತಿಗಳು ವಿಪುಲವಾಗಿ ದೊರೆಯುತ್ತವೆ. ವಿವಿಧ ಭಾಷಾ ಕೃತಿಗಳಲ್ಲಿ ಶ್ರೇಷ್ಠ ಕೃತಿಗಳೆಂದರೆ ರಾಮಾಯಣ ಭಾರತ ಕೃತಿಗಳೇ. ಬಹು ಭಾಷೆಗಳಲ್ಲಿದ್ದರೂ ಭಾರತೀಯ ಸಾಹಿತ್ಯ ಒಂದೇ ಎನ್ನುವ (Indian literature is one though written in many languages) ಪಿವ ರ್ಶಕಪಾಣ ಸತ್ಯವಾದುದು,

ಅದರಲ್ಲೂ “ಶತಕೋಟಿ ರಾಮಾಯಣಂಗಳೊಳವು”, “ತಿಣುಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ ತಿಂತಿಣಿಯ ರಘುವರ ಚರಿತೆಯಲಿ ಕಾಲಿಡಲು ತೆರಪಿಲ್ಲ.” ಮುಂತಾದ ಮಾತುಗಳಲ್ಲಿ ರಾಮಾಯಣ ಕಥೆಯ ಹರಹನ್ನು ಗುರುತಿಸಬಹುದು,

ಶ್ಲೋಕರೂಪವಾಗಿ ವಾಲ್ಮೀಕಿಯ ಮುಖದಿಂದ ಹೃದ್ಯತಮಗಳಾಗಿ ರಾಮಾಯಣ ಹೊರ ಹೊಮ್ಮಿತಂತೆ, ಗದ್ಯ ಪದ್ಯ ಮಿಶ್ರಣದಿಂದ ವಾದ್ಯ ಕಲೆಯೊಡನೆ ಗೀತೆ ಸೇರಿದಂತಾಯಿ ತಂತೆ ಭೋಜರಾಜನಿಗೆ. (ಗದ್ಯಾನುಬಂಧ ರಸಮಿಶ್ರಿತ ಪದ್ಯ ಸೂಕ್ತಿಃ । ಹೃದ್ಯಾಹಿ ವಾದ್ಯ ಕಲಯಾ ಕಲಿತೇವ ಗೀತಿಃ ॥) ರಾಮಾಶ್ವಮೇಧದ ಕಥೆ ಗದ್ಯದಲ್ಲಿ ಹೇಳಿದ್ದು ಹೃದ್ಯವಾಯಿ ತಂತೆ. ಮುದ್ದಣ ಮನೋರಮೆಯರಿಗೆ ಹಾಗೂ ಕನ್ನಡ ರಸಿಕಕುಲ ಕೋಟಿಗೆ. ನಾಟಕವಾಗಿ ಬರೆದ ಉತ್ತರ ರಾಮಕಥೆ ಭವಭೂತಿಗೆ ವಿಶೇಷತೆಯನ್ನು ತಂದಿತಂತೆ. (ಉತ್ತರೇ ರಾಮ ಚರಿತೇ ಭವಭೂತಿರ್ವಿಶಿಷ್ಯತೇ), ಹೀಗೆ ರಾಮಕಥೆ ಯಾರು ಯಾವ ರೂಪದಿಂದ ಹೇಳಿದರೂ ನವೋನವವಾಗಿ ಹೃದಯಂಗಮವಾಗುತ್ತದೆ. ಹೀಗೆ ಹೃದಯಂಗಮ ರೀತಿ ಯನ್ನು ಕನ್ನಡದಲ್ಲಿ ತೊರವೆಯ ನರಹರಿ ಭಾಮಿನೀ ಷಟ್ಪದಿರೂಪದಲ್ಲಿ ಅನುಸರಿಸಿದನು. ಆದರೆ, ಅದೇನು ಕಾರಣವೋ ಆತ ಯುದ್ಧಕಾಂಡಾಂತ್ಯದ ವರೆಗೆ ಕಥೆ ಬರೆದು, ರಾಮ ರಾಜ್ಯಭಾರ ಪ್ರಾರಂಭಕ್ಕೆ ಕಥೆ ಮುಗಿಸಿದನು, ಸಾಮಾನ್ಯವಾಗಿ ಭಾರತ, ರಾಮಾಯಣ ಕಥೆ ಬರೆದವರೆಲ್ಲ - ವ್ಯಾಸ, ವಾಲ್ಮೀಕಿಗಳು ಬರೆದಿದ್ದರೂ – "ಉತ್ತರ" ಕಥೆಗಳಿಗೆ ಗಮನಹರಿಸಿ ದಂತಿಲ್ಲ, ಕನ್ನಡ ಭಾರತಗಳಲ್ಲಿ ಪಂಪ, ಕುಮಾರವ್ಯಾಸರ ಭಾರತಗಳು ಪ್ರಸಿದ್ಧವಾದುವು. ಅವರು ಗದಾಪರ್ವದ ಅನಂತರ ಕಥೆಯನ್ನು ತಿಳಿಸಿಲ್ಲ. ತಿಮ್ಮಣ್ಣನ ಭಾರತ ಆ ಕಥೆಯನ್ನು ಕನ್ನಡದಲ್ಲಿ ಪೂರೈಸುತ್ತದೆ, ಕನ್ನಡ ರಾಮಾಯಣಗಳಲ್ಲೂ ಪಂಪರಾಮಾಯಣ, ತೊರವೆ ರಾಮಾಯಣಗಳು ಪ್ರಧಾನವಾದುವು. ಇವುಗಳೂ ಉತ್ತರಕಾಂಡದ ಕಥೆಗೆ ಗಮನ ವಿತ್ತಂತಿಲ್ಲ. ಭೋಜರಾಜನ ಚಂಪೂ ರಾಮಾಯಣದಲ್ಲೂ ಹೀಗೆಯೇ ಇದೆ. ಕನ್ನಡದಲ್ಲಿ ರಾಮಾಯಣದ ಉತ್ತರಕಾಂಡವನ್ನು ಆಧರಿಸಿ ಹಲವರು ಕಥೆ ಬರೆದಿದ್ದಾರೆ. ಅವರಲ್ಲಿ ಹದಿನೇಳನೇ ಶತಮಾನದಲ್ಲಿದ್ದ ತಿರುಮಲೆ ವೈದ್ಯನು ಭಾಮಿನೀ ಷಟ್ಪದಿಯಲ್ಲಿ ಕೃತಿ ರಚಿಸಿದ್ದರೂ ಸಂಗ್ರಹವಾಗಿ, ಸೀತಾವಿಲಾಪಾದಿ ಪ್ರಮುಖ ಘಟ್ಟಗಳನ್ನು ಹೇಳದೆ, ಸಾಧಾ ರಣ ಸಾವಿರ ಪದ್ಯಗಳಲ್ಲಿ ಕಥೆ ಮುಗಿಸಿದನು. ಪ್ರಕೃತ ನಾರಾಯಣ ಕವಿ (ಸು, ೧೬೦೦) ನಲುವತ್ತನಾಲ್ಕು ಸಂಧಿಗಳಲ್ಲಿ ಎರಡು ಸಾವಿರಕ್ಕೂ ಮಿಕ್ಕಿದ ಷಟ್ಪದಿಗಳಲ್ಲಿ, ಕಥನಶೈಲಿ, ಪಾತ್ರರಚನೆ, ವರ್ಣನಾ ವೈಖರಿ, ರಸನಿರೂಪಣೆ, ಮುಂತಾದುವುಗಳಲ್ಲಿ ತೊರವೆ ರಾಮಾ ಯಣಕ್ಕೆ ಸರಿದೊರೆಯೆನಿಸುವಂತೆ, ಹಾಗೂ ಪೂರಕವೆನಿಸುವಂತೆ ಕೃತಿರಚನೆ ಮಾಡಿರುವನು. ಅಪೂರ್ಣಗೊಂಡ ರಾಮಾಯಣ ಕೃತಿ ಹೀಗೆ ಸುಲಲಿತವಾಗಿ ಕನ್ನಡದಲ್ಲಿ ಮೂಡಿಬಂದುದು ಕನ್ನಡಿಗರ ಸುದೈವ, ಈ ಕೃತಿ ಅಪ್ರಕಟಿತವಾಗಿತ್ತು. ಅದನ್ನು ಪ್ರಕಟಿಸಿದ ಶ್ರೀ ವೆಂಕಟ ರಾಯಾಚಾರ್ಯರೂ ಸುಕೃತಿಗಳು; ಕನ್ನಡಿಗರ ಪ್ರಶಂಸೆಗೆ ಪಾತ್ರರು.

ಶ್ರೀ ಮದ್ವಾಲ್ಮೀಕಿ ರಾಮಾಯಣದ ಉತ್ತರಕಾಂಡದೊಡನೆ ಉತ್ತರ ರಾಮಕಥೆ ಯನ್ನು ಹೋಲಿಸಿದಾಗ:—

ರಾಕ್ಷಸ ವಧಾನಂತರ ಶ್ರೀ ರಾಮನು ಅಭಿಷಿಕ್ತನಾಗಿ ರಾಜ್ಯಭಾರಕ್ಕೆ ತೊಡಗು

ತ್ರಿದ್ವ ಸಂದರ್ಭದಲ್ಲಿ ರಾಮನನ್ನು ಅಭಿನಂದಿಸುವುದಕ್ಕಾಗಿ ಋಷಿಗಳ ತಂಡವೇ ಬಂದು ಸೇರುತ್ತದೆ. ಈ ಮೂಲವನ್ನು ತದ್ವತ್ತಾಗಿ ಅನುಸರಿಸಿದುದನ್ನು ನಾವಿಲ್ಲಿ ಕಾಣಬಹುದು.

ಪ್ರಾಪ್ತ ರಾಜ್ಯಸ್ಯ ರಾಮಸ್ಯ ರಾಕ್ಷಸಾನಾಂ ವಧೇ ಕೃತೇ ।
ಆ ಜಗ್ಮುರ್ಮುನಯಃ ಸರ್ವೇ ರಾಘವಂ ಪ್ರತಿನಂದಿತುಮ್ ॥

ಇದು ಉತ್ತರಕಾಂಡದ ಪ್ರಥಮ ಸರ್ಗದ ಮೊದಲನೆಯ ಪದ್ಯ. "ಸುಜನನ್ನೆ ರಘುನಾಥ ನಾತನ ಕಾಣಬೇಕೆಂದು-ಸನ್ಮುನಿನಿವಹ ಬಂದುದು ಸಕಲ ದೆಸೆಗಳಲಿ" (ಸಂಧಿ ೧—೨೦) ಎಂದು ಕಥಾರಂಭ ಮಾಡಿ ಮುಂದೆ ಮೂಲದಲ್ಲಿನ—

ಕೌಶಿಕೋऽಥ ಯವಕ್ರೀತೋ ಗಾರ್ಗ್ಯೋ ಗಾಲವ ಏವ ಚ ।
ಕಣ್ವೋ ಮೇಧಾತಿಥೇಃ ಪುತ್ರಃ ಪೂರ್ವಸ್ಯಾಂ ದಿಶಿ ಯೇ ಶ್ರಿತಾಃ ॥
ಸ್ವಸ್ತ್ಯಾತ್ರೇಯಶ್ಚ ಭಗವಾನ್ ನಮುಚಿಃ ಪ್ರಮುಚಿಃ ತಥಾ ।
ಅಗಸ್ತ್ಯೋऽತ್ರಿಶ್ಚ ಭಗವಾನ್ ಸುಮುಖೋ ವಿಮುಖಸ್ತಥಾ ॥
ಆಜಗ್ಮುಸ್ತೇ ಸಹಾಗಸ್ತ್ಯಾ ಯೇ ಶ್ರಿತಾ ದಕ್ಷಿಣಾಂ ದಿಶಮ್ ।
ನೃಷಂಗುಃ ಕವಷೋ ಧೌಮ್ಯಃ ಕೌಶೇಯಶ್ಚ ಮಹಾನೃಷಿಃ ॥
ತೇऽಪ್ಯಾಜಗ್ಮುಃ ಸಶಿಷ್ಯಾ ವೈ ಯೇ ಶ್ರಿತಾಃ ಪಶ್ಚಿಮಾಂ ದಿಶಮ್ ।
ವಸಿಷ್ಠಃ ಕಶ್ಯಪೋऽಥಾತ್ರಿರ್ವಿಶ್ವಾಮಿತ್ರಃ ಸಗೌತಮಃ ॥
ಜಮದಗ್ನಿರ್ಭರದ್ವಾಜಸ್ತೇऽಪಿ ಸಪ್ತರ್ಷಯಸ್ತಥಾ ।
ಉದೀಚ್ಯಾಂ ದಿಶಿ ಸಪ್ತೈತೇ ನಿತ್ಯಮೇವ ನಿವಾಸಿನಃ ॥

(ವಾ. ರಾ. ಉ. ಕಾ. ಪ್ರ. ಸ. ಶ್ಲೋ 2—6)

ಈ ಶ್ಲೋಕಗಳನ್ನು ನಾರಾಯಣ ಕವಿ ಅನುವಾದಿಸಿದ ರೀತಿ ಹೀಗಿದೆ:-

ಸುರಪತಿಯ ದೆಸೆಯಿಂದ ಕೌಶಿಕ । ವರಯವಕ್ರಿತ ಕಣ್ವ ಮುನಿ ಗಾ ।
ರ್ಗ್ಯರು, ಯಮನ ದೆಸೆಯಿಂದಗಸ್ತ್ಯನು ವಿಮುಖನಾ ಸುಮುಖ ॥
ವರುಣ ದೆಸೆಯಲಿ ರೌದ್ರ ಧೌಮ್ಯಾ । ದ್ಯರು, ಬಡಗ ದೆಸೆಯಿಂದ ಕಶ್ಯಪ ।
ಗುರು ವಸಿಷ್ಠ ಪ್ರಮುಖ ಋಷಿಗಳು ಬಂದರೊಗ್ಗಿನಲಿ ॥ - I - ೨೧.

ಮೂಲದಲ್ಲಿ ಸ್ವಲ್ಪ ಉದ್ದವಾಗಿರುವ ಪಟ್ಟಿ ಇಲ್ಲಿ ಉಚಿತಕ್ಕೆ ತಕ್ಕಷ್ಟು ಹೇಳಿದಂತಿದೆ. ಮೂಲದಲ್ಲಿ ಸಂಗ್ರಹವಾಗಿರುವುದು ಇಲ್ಲಿ ಲಂಬಿಸಿದ್ದೂ ಇದೆ. "ವೇದ ವೇದಾಂಗವಿದುಷೋ ನಾನಾ ಶಾಸ್ತ್ರ ವಿಶಾರದಾಃ" ಎನ್ನುವ ಭಾಗವನ್ನು,

ವೇದ ಶಾಸ್ತ್ರ ಪುರಾಣ ವಿಣಮಾಂ । ಸಾದಿ ವಿದ್ಯಾ ಕುಶಲ ರಾಗಮ ।
ಭೇದ ನಿಪುಣರು ಶಾಂತಿಶಮದಮಗುಣ ವಿಭೂಷಣರು ॥

ಎಂದು ಬರೆದಿದ್ದಾನೆ. "ಕರದ ಕೃಷ್ಣಾಜಿನದ ದರ್ಭಾಂ । ಕುರದ" ಜತೆಗೆ "ಸಾಲಿಗ್ರಾಮ

ಪೂಜಾ ಪರಿಕರ ಶ್ರೀ ತುಳಸಿಗಳ ಜಪಮಾಲೆ ಕರಡಿಗೆ"ಗಳು ನಾರಾಯಣ ಕವಿಯ ವರ್ಣನೆಯಲ್ಲಿ ಅಧಿಕವಾಗಿವೆ, (ಕವಿ ಮಾಧ್ವನಾದುದರಿಂದ ಹೀಗಿರಬಹುದೇ?)

ರಾಮನ ಔಚಿತ್ಯಪೂರ್ಣ ಆತಿಥಿಸತ್ಕಾರ, ಆಸನಾದಿ ಷೋಡಶೋಪಚಾರ, ಕುಶಲ ಪ್ರಶ್ನೆ, ಋಷಿಗಳ ಆಶೀರ್ವಚನ, ಶುಭಾಕಾಂಕ್ಷೆ ಮುಂತಾದ ವರ್ಣನೆಗಳು ಹೃದ್ಯಗಳಾಗಿವೆ. ಬಹಳಷ್ಟು ಮೂಲವನ್ನೇ ಅನುಸರಿಸಿದರೂ "ಮಕ್ಕೀ ಕಾ ಮಕ್ಕಿ" ಅನುವಾದವಲ್ಲ. ಭಾಮಿನಿಯ ಒನಪು ಒಯ್ಯಾರಕ್ಕೆ ತಕ್ಕಂತೆ ನಾರಾಯಣನ ಕವಿತಾ ಕಾಮಿನಿ ಲಾಸ್ಯವಾಡಿದ್ದಾಳೆ, "ಸುಧಾಮ ಧುರ ಕರ್ಣಾಟ ಭಾಷಾ ಭಾಮಿನೀಪತಿ ಭಾಮಿನಿಷಟ್ಪದಿಯಲಿಳವಡಿಸಿ" ಕುಮಾರ ವ್ಯಾಸ ಹೇಳಿದ ಭಾರತ ಕಥೆ ಕವಿಗೆ ಮೆಚ್ಚುಗೆಯನ್ನಿತ್ತಿದೆ. ತಾನೂ ಭಾಮಿನಿಯನ್ನೊಲಿಸಿ ಕೊಳ್ಳಲು ಯತ್ನಿಸಿ ಬಹಳಷ್ಟು ಸಿದ್ಧಿಯನ್ನು ಸಾಧಿಸಿದ್ದಾನೆ. ಸೊಗಸಾದ ರೀತಿಯಿಂದ ಕಾವ್ಯಾರಂಭಮಾಡಿ ಉತ್ತರ ರಾಮಕಥೆಯನ್ನು ಕವಿ ಬರೆದಿದ್ದರೂ, ವಾಲ್ಮೀಕಿ ರಾಮಾಯಣದ ಉತ್ತರಕಾಂಡದ ಕಥೆ ನೂರಹನ್ನೊಂದು ಸರ್ಗಗಳಷ್ಟು ಉದ್ದವಾಗಿದ್ದರೂ (ಇವುಗಳಲ್ಲಿ ಕೆಲವು ಪ್ರಕ್ಷಿಪ್ತ ಸರ್ಗಗಳೆಂಬ ವಾದವೂ ಇದೆ.) ಅಷ್ಟು ವಿಸ್ತಾರವಾಗಿ ನಾರಾಯಣ ಕವಿ ಲಂಬಿಸಿಲ್ಲ ಎಂಬ ಅಂಶವನ್ನು ಗಮನಿಸಬೇಕು. ತನ್ನ ಕಾವ್ಯವನ್ನು ನಲುವತ್ತನಾಲ್ಕು ಸಂಧಿಗಳಲ್ಲಿ ಮುಗಿಸಿದ್ದಾನೆ. ಶ್ರೀ ರಾಮನ ಅಶ್ವಮೇಧಯಾಗ, ತದನಂತರ ಸೀತಾ ಪರಿಗ್ರಹಣ, ತಮ್ಮಂದಿರೊಡನೆ ರಾಮ ರಾಜ್ಯಭಾರವನ್ನು –

ಮತ್ತೆ ಕುಶಗೆ ಕುಶಾವತಿಯ ತಾ । ನಿತ್ತು ಲವನಿಗವಂತಿಯೆಂಬುದ ।
ನುತ್ತರೋತ್ತರವಾಗಿ ನಡೆವಂದದಲಿ ತಾ ಮಾಡಿ ॥
ಉತ್ತಮೋತ್ತಮರಹ ನಿಜಾನುಜ । ರತ್ತಲವದಿರ ತನುಜರೊಡನಾ ।
ಮತ್ತಕಾಶಿನಿ ಸೀತೆ ಸಹ ರಘುರಾಮ ರಂಜಿಸಿದ ॥
ಇಂತೆಸೆವ ರಾಮಾಯಣವನತಿ । ಸಂತಸದಿ ವಾಲ್ಮೀಕಿ ಪೇಳಿದ ।
ನಂತದನು ಕುಶಲವರು ರಘುವರ ರಾಮಚಂದ್ರಮನ
ಮುಂತೆ ಸರ್ವರು ಕೇಳ್ವವೊಲು ತಾ । ನಿಂತು ಪಾಡಿದರೀ ಕೃತಿಯನೆನ ।
ಲಂತರಾತ್ಮನ ಚರಿತವಿದನಾಲಿಪುದು ಜನವೆಲ್ಲ ॥

ಎಂದು ಆಶಿಸಿದ್ದಾನೆ. "ರಘು- ಪುಂಗವನ ಸತ್ಕಾವ್ಯ" ಎಂಬುದು ಕವಿಗೆ ಅರಿತಿದೆ. "ಭಕ್ತವತ್ಸಲನೆನಿಪ ರಾಮನ ಉತ್ತಮ ಶ್ಲೋಕನ ಚರಿತ್ರ" ಕವಿಯಿಂದ ಕನ್ನಡಿಗರಿಗೆ ಸುಲಲಿತವಾದ ಮೃದುಮಧುರವಾಣಿಗಳಿಂದ ಲಭಿಸಿದೆ. ವಾಲ್ಮೀಕಿಯ ವರ್ಣನೆಗಳಂತೆಯೇ ನುಣುಪಾದ ಮಾತು, ಪ್ರಕೃತಿ ವರ್ಣನೆಗಳು - ಸಂದರ್ಭೋಚಿತವಾಗಿ - ಹೊಸ ಭಾವನೆಗಳು, ನವ ವಾಗ್ಘೋರಣೆ, ಅವ್ಯಾಹತ ವಾಗ್ಗುಂಫನ, ಬತ್ತದ ರಸಧಾರೆ, "ನಾತಿಸಂಕ್ಷೇಪ ವಿಸ್ತಾರ"ವಾದ ಉಚಿತ ವಚನವಿರಚನೆ, ವರ್ಣನೆಗಳು ಕವಿಯನ್ನು–ಕವಿಯ ಕಾವ್ಯವನ್ನು ಸಹೃದಯ ರಸಿಕರು ಮೆಚ್ಚುವಂತೆ ಮಾಡಿವೆ.

ಸಂಕ್ಷೇಪ ರಾಮಾಯಣವು

"ಪೂರ್ವಂ ರಾಮತಪೋವನಾಧಿಗಮನಂ ಹತ್ವಾ ಮೃಗಂ ಕಾಂಚನಂ ।
ವೈದೇಹೀ ಹರಣಂ ಜಟಾಯು ಮಥನಂ ಸುಗ್ರೀವ ಸಂಭಾಷಣಂ ।
ವಾಲೀ ನಿಗ್ರಹಣಂ ಸಮುದ್ರತರಣಂ ಲಂಕಾಪುರೀದಾಹನಂ
ಪಶ್ಚಾದ್ರಾವಣ ಕುಂಭಕರ್ಣಮಥನಂ ಹ್ಯೇತದ್ಧಿ ರಾಮಾಯಣಂ ॥"

ಎಂಬುದಾಗಿ ರಾಮಾಯಣದ ಪ್ರಮುಖ ಘಟ್ಟಗಳನ್ನು ಉಲ್ಲೇಖಿಸಿ "ಇದು ರಾಮಾಯಣ" ಎಂದು ರಾವಣ ವಧೆಗೆ ಮುಗಿಸಿಬಿಡುತ್ತದೆ. ಉತ್ತರ ಕಥೆಯೇನು? ಇದನ್ನು ಸವಿಾಕ್ಷಿಸಲು ವಾಲ್ಮೀಕಿಯ ಉತ್ತರ ಕಾಂಡವನ್ನು ನೋಡಬೇಕು. ಇದು ಅಸಾಧ್ಯವೇದಾದರೆ ನಾರಾಯಣ ಕವಿಯ 'ಉತ್ತರ ರಾಮ ಕಥೆ' ಸಾಕಷ್ಟು ವಿಷಯಗಳನ್ನೊಳಗೊಂಡಿದೆ.

ಪೂರ್ವ ಕಥೆಯುಸೊೖರೆದಂತೆ ರಾವಣ ವಧಾನಂತರ ಆವನ ಉತ್ಪತ್ತಿ, ತಪಃ ಪ್ರಭಾವ. ರಾಜ್ಯಭಾರ, ಕಾರ್ಯಕಲಾಪಾದಿಗಳ ವಿವರಣೆ ರಾಮಾಯಣದಲ್ಲಿದೆ. ರಾಮಾಯಣದಲ್ಲಿರುವ ಬಹು ದೀರ್ಘ ಭಾಗಗಳು ಇಲ್ಲಿ ಸಂಕ್ಷೇಪಗೊಂಡುದರಿಂದ, ಓದುಗ ಬೇಸರ ತಾಳುವುದಿಲ್ಲ. ರಾಜಧರ್ಮಾದಿಗಳು. ಋಷಿಗಳ ಉಪದೇಶಾದಿಗಳು ಸುದೀರ್ಘವಾಗಿ ನಿರೂಪಿತವಾಗಿವೆ. ನಾರಾಯಣ ಕವಿ ಒಂದೆರಡು ಪದ್ಯಗಳಲ್ಲಿ ಸಾರಸರ್ವಸ್ವವನ್ನು ಹಿತ ಮಿತವಾಗಿ 'ಕಿರಿದರೊಳ್ ಪಿರಿದರ್ಥ'ವನ್ನು ಹೇಳಿ ಮುಂಬರಿದಿದ್ದಾನೆ. ಇದರಿಂದ ಈ ರಸವತ್ತಾದ ಕಾವ್ಯ ನೀತಿಸಂಹಿತೆಯೋ, ಉಪದೇಶಗ್ರಂಥವೋ ಆಗದೆ – 'ಕಾವ್ಯಂ ಆನಂದಾಯ' ಎಂದಂತೆ ಆನಂದಜನಕವಾಗಿದೆ, ಅಲ್ಲಲ್ಲಿನ ಉದಾಹರಣೆಗಳನ್ನು ಸ್ಥಳಾಭಾವದಿಂದ ಕೈಬಿಟ್ಟಿದೆ. ಗ್ರಂಥ ಸಂಪಾದಕರು ಉತ್ತರ ರಾಮ ಕಥೆಗೆ ಸಂವಾದಿಯಾದ ವಾಲ್ಮೀಕಿ ರಾಮಾಯಣದ ಸರ್ಗಗಳ ಕ್ರಮಸಂಖ್ಯೆಯನ್ನು ಅನುಕ್ರಮಣಿಕೆಯಲ್ಲಿ ಸೂಚಿಸಿ ಮಹೋಪಕಾರ ಮಾಡಿದ್ದಾರೆ. ಕುತೂಹಲಿಗಳು ಅವುಗಳನ್ನು ಗಮನಿಸಬಹುದು. ಶ್ರೀ ಉಗ್ರಾಣ ಮಂಗೇಶ ರಾಯರು ಬರೆದ 'ಪರಿಚಯ' ಇದರೊಂದಿಗೆ ಇದೆ. (ಶ್ರೀ ಎಂ. ಎಸ್. ಅನಂತಪದ್ಮನಾಭ ರಾಯರು ಇದರ ಪರಿಚಯ ಬರೆದಿದ್ದಾರೆ. ಕ. ಸಾ. ಪ. ಪತ್ರಿಕೆ.)

'ಕನ್ನಡದಲ್ಲೇನಿದೆ' ಎನ್ನುವವರು ಇಂತಹ ಕಾವ್ಯಗಳನ್ನು ಗಮನಿಸಬೇಕು. ರಾಮರಾಜ್ಯದ ಆದರ್ಶವಾದಿಗಳು, "ರಾಮೋ ದ್ವಿರ್ನಾಭಿಭಾಷತೇ" ಎನ್ನುವ ವಚನ ಪರಿಪಾಲನೆಯನ್ನು ಮನಸಾ ಸ್ವೀಕರಿಸಬೇಕು. 'ಜನಬದುಕಬೇಕೆಂದು' ಕಾವ್ಯಗಳನ್ನು ಬರೆದ ಕವಿಗಳಿಗೆ, ಅವುಗಳನ್ನೋದಿ ಅವುಗಳ ಸಂದೇಶಗಳನ್ನು ನಿತ್ಯ ಜೀವನದಲ್ಲಿ ಅಳವಡಿಸಿ ಸುಸಂಸ್ಕೃತ ಬಾಳ್ವೆಯನ್ನು ಸಾಗಿಸುವುದರ ಹೊರತು, ನಾವು ಸಲ್ಲಿಸುವ ಕೃತಜ್ಞತೆಗಳು ಬೇರಿಲ್ಲ. 'ಕನ್ನಡ ನಾಡಿನ ಮಧುಕರ'ನಾದ ಈ ಕವಿಯ ಕಾವ್ಯವಾಹಿನಿ, ವಾಹಿನೀಪತಿಯಂತೆ ("ಇದು ಪಿಚ್ಚಂ ಪೊಳೆವರ್ಣವಂಬೊಲ್") ನಿತ್ಯನೂತನ. ರಾಮ ಕಥೆಯೋ ಎಂದೂ

ಹಳಸದ ರಸಪಾಕ, "ಆ ಚಂದ್ರ ತಾರಂಬರಂ" ರಾಮಾಯಣ ಕಥೆ ಲೋಕದಲ್ಲುಳಿಯುತ್ತದೆ. ಕನ್ನಡದ ತೊರವೆ ನರಹರಿಯ ರಾಮಾಯಣಕ್ಕೆ ಪೂರಕವೆನ್ನಿಸುವ ಕನ್ನಡದ ನಾರಾಯಣನ ಉತ್ತರ ರಾಮ ಕಥೆ ರಮಣೀಯವಾಗಿ ಜನರ ಮನಸ್ಸನ್ನು ಆಕರ್ಷಿಸುವುದರಲ್ಲಿ ಸಂಶಯವಿಲ್ಲ, ಮೂಲದಲ್ಲಿ ಸಂಸ್ಕೃತ ಭಾಷಾನಿಬದ್ಧ ವಾಲ್ಮೀಕಿ ರಾಮಾಯಣವನ್ನೋದಲಾರದವರಿಗೆ, 'ಲಲಿತವಹ ಕನ್ನಡದ ನುಡಿಯಲಿ' ಸುಲಲಿತವಾದ ಭಾಮಿನೀ ಷಟ್ಪದಿ ರೂಪದಲ್ಲಿ ಸಿಗುವ ಈ ಕಾವ್ಯಗಳು - ರಾಮಕಥೆ, ವಿಶೇಷವಾಗಿ ಬಹುಮಂದಿ ಗಮನ ಹರಿಸದ, ಆದರೆ ಗಮನಿಸಬೇಕಾದ "ಉತ್ತರ ರಾಮ ಕಥೆ". 'ಸೋಯಂ ಕಲ್ಪತರೋಪಮಾನ ಮಹಿಮಾ ಭೋಗ್ಯೋಽಸ್ತು ಭವ್ಯಾತ್ಮನಾಮ್" .

"ಯಾವತ್ ಸ್ಥಾಸ್ಯಂತಿ ಗಿರಯಃ ಸರಿತಶ್ಚ ಮಹೀತಲೇ ॥
ತಾವದ್ರಾಮಾಯಣ ಕಥಾ ಲೋಕೇಷು ಪ್ರಚಲಿಷ್ಯತಿ ॥ "

॥ ಭೋ! ರಾಮ ಮಾಮುದ್ಧರ ॥

× × × ×

೬. ಆದಿತ್ಯ ಪುರಾಣದಲ್ಲಿ ವೈಶಿಷ್ಟ್ಯಗಳು

— ಶ್ರೀ ಪು. ಶ್ರೀನಿವಾಸ ಭಟ್ಟ, ಕಟೀಲು.

"ಕಾವ್ಯ-ಶಾಸ್ತ್ರ ವಿನೋದೇನ ಕಾಲೋ ಗಚ್ಛತಿ ಧೀಮತಾಂ" ಎಂಬ ಮಾತಿನಲ್ಲಿ ಕಾವ್ಯ-ಶಾಸ್ತ್ರಗಳು ಬೇರೆ ಬೇರೆಯೆಂದು ತಿಳಿಯಲಾಗುತ್ತದೆ. ಕಾವ್ಯ 'ಕಾಂತಾ ಸಮ್ಮಿತವಾದ ಉಪದೇಶಕ್ಕೆ'ಂದು ಹೇಳಿದೆ; ಶಾಸ್ತ್ರವು ಆಯಾ ವಿಚಾರಗಳ ವಿಧಿನಿಷೇಧಗಳನ್ನು ಶಾಸಿಸುತ್ತದೆ. ಆದರೆ, ಕಾವ್ಯವನ್ನು ಶಾಸ್ತ್ರದೊಂದಿಗೆ ಹೇಳಿರುವುದನ್ನು ಗಮನಿಸಿದಾಗ, ಕಾವ್ಯ ಕವಿ ಕಲ್ಪಿತವಾದರೂ ಅಶಾಸ್ತ್ರೀಯವಾಗಬಾರದೆಂದು ಧ್ವನಿಸುತ್ತದೆ. ಕವಿ ಸ್ವಪ್ರತಿಭೆಯಿಂದ, ಇತರ ಗ್ರಂಥಗಳ ಅಧ್ಯಯನದಿಂದ ಲೌಕಿಕರಿಗೆ 'ಹಿತ'ವಾಗುವಂತೆ ಕೆಲವು ಘಟ್ಟಗಳಲ್ಲಿ – ವರ್ಣನೆಗಳಲ್ಲಿ ಮೂಲಕ್ಕಿಂತ ಹೆಚ್ಚಿನದಾಗಿ ಸ್ವಂತಿಕೆಯನ್ನು ಬಳಸುತ್ತಾನೆ: ವಾಲ್ಮೀಕಿ ರಾಮಾಯಣದಲ್ಲಿ ಹೇಳದ ಕೆಲವು ಘಟನೆಗಳು-ವರ್ಣನೆಗಳು ಕನ್ನಡ ಕೃತಿಗಳಲ್ಲಿ ಗೋಚರಿಸುತ್ತಿವೆ. ತೊರವೆಯ ನರಹರಿಯ ಕೃತಿಯಲ್ಲಿ, ಮಾರೀಚನು ಜಿಂಕೆಯಾಗಿ ನಾನಾ ದೇಶಗಳಲ್ಲಿ ರಾಮನನ್ನು ಸುತ್ತಿಸುತ್ತಾನೆ; ರಾವಣನ ಹೃದಯದಲ್ಲಿ ಅಮೃತ ಕಲಶನಿರುವುದು ಇತ್ಯಾದಿ. ಪ್ರಸ್ತುತ, ಕನ್ನಡ ಆದಿತ್ಯಪುರಾಣದಲ್ಲಿ ಶ್ರೀರಾಮನ ಕತೆ ನಾಲ್ಕು ಸಂಧಿಗಳಲ್ಲಿ (24-27) ಒಳಗೊಂಡಿದೆ. ಅಲ್ಲಿಯ ಕವಿ ಚಮತ್ಕೃತಿಯ ಎರಡು ಘಟ್ಟಗಳು ಒರೆಯಲಿವೆ.

ಶೃಂಗೇರಿಯ ಶ್ರೀ ಶಾರದಾ ಪೀಠದ ಶ್ರೀ ರಾಮಚಂದ್ರ ಗುರುಗಳು (ಇಸ್ವಿ 1508-60) ಈ ಜಿಲ್ಲೆಗೆ ಬಂದಿದ್ದರು. ಕಾರ್ಕಳದಲ್ಲಿ ಶ್ರೀ ಅನಂತಪದ್ಮನಾಭ ದೇವರನ್ನು ಪ್ರತಿಷ್ಠಾಪಿಸಿದರು. ಅವರ ಶಿಷ್ಯ 'ಕವಿರಾಜ ಕಂಠೀರವ'ನೆಂಬ ಕವಿ ಕನ್ನಡದಲ್ಲಿ ಆದಿತ್ಯ ಪುರಾಣವನ್ನು (48 ಸಂಧಿಗಳಲ್ಲಿ) ಬರೆದಿರುವನು. ಸಂಸ್ಕೃತದ ಸೌರಪುರಾಣ ಮತ್ತು ಇತರ ಪುರಾಣಗಳ ಶೈವಕತೆಗಳನ್ನು ಆಯ್ದು ಸಂಕಲಿಸಿದ ಈ ಕಾವ್ಯ ಸರಸ-ಸರಳ ಶೈಲಿಯಲ್ಲಿದೆ. ನಡುಗನ್ನಡದ ಕೃತಿಗಳಲ್ಲಿ ಇದು ಉತ್ತಮವಾಗಿದೆ. ಸುರತ್ಕಲ್ಲಿನ 'ವಿಜಯ ಸಾಹಿತ್ಯ ಮಾಲೆ'ಯಲ್ಲಿ ಶ್ರೀ ಕೆ. ವೆಂಕಟರಾಯಾಚಾರ್ಯರು ಇದನ್ನು ಪ್ರಕಟಿಸಿದ್ದಾರೆ, ಈ ಮೊರೆಗೆ, ಇದುವರೆಗೆ ಅಚ್ಚಾಗದ ಈ ಕೃತಿ ಕನ್ನಡ ರಸಿಕರಿಗೆ ಲಭ್ಯವಾಗಿದೆ!

೧. ಇಂದ್ರಜಿತು ವಧೆಯ ವಿಚಾರ: ರಾಮನು ರಾವಣನನ್ನು ವಧಿಸಿದುದಕ್ಕಿಂತ ಹೆಚ್ಚಿನದೆಂದು - ಲಕ್ಷ್ಮಣ ಇಂದ್ರಜಿತುವನ್ನು ವಧಿಸಿದುದು ವರ್ಣಿತವಾಗಿದೆ. (ವಾಲ್ಮೀಕಿಯ ಉತ್ತರಕಾಂಡ, ನಾರಾಯಣ ಕವಿಯ ಉತ್ತರ ರಾಮ ಕತೆ – ವಿಜಯ ಸಾಹಿತ್ಯ ಮಾಲೆಯ ಪ್ರಕಟನೆ ನೋಡಿ). ಇಂದ್ರಜಿತುವನ್ನು ಕೊಲ್ಲಲು ಲಕ್ಷ್ಮಣನಲ್ಲಿದ್ದ ಸತ್ತ್ವವೇನೆಂಬುದು ಚಿಂತನೀಯ! ತೊರವೆ ಕವಿಯ ಕೃತಿಯಲ್ಲಿ, ಆ ಬಗೆಗೆ ಮೂರು ವಿಚಾರಗಳು

ಹೇಳಿವೆ; "ನಿನ್ನ ಸೇನೆಯೊಳುಂಟೆ? ವತ್ಸರ । ಹನ್ನೆರಡರುಪವಾಸದವರು, ವಿ । ಭಿನ್ನ ನಿದ್ರಾವಶರು, ವನಿತಾ ಸಂಗವರ್ಜಿತರು". ವಿಭೀಷಣನ ಈ ಮಾತು ಕೇಳಿ ಲಕ್ಷ್ಮಣನು ಮುಂದಾಗಿ ಬರುವನು. ಇಂದ್ರಜಿತುವಿನ ವಧೆಯಾದ ಬಳಿಕ ಈ ಬಗೆಯ ವಿವರಣವಿದೆ (ಯುದ್ಧ ಕಾಂ. ೪೨-೯೪) ಆದರೆ 'ಆದಿತ್ಯಪುರಾಣ'ದಲ್ಲಿ 'ನಿರಾಹಾರ'ವೊಂದೇ ಹೇಳಿದೆ. ಇಂದ್ರಜಿತುವನ್ನು ಲಕ್ಷ್ಮಣ ಕೊಂದು ಬಂದಾಗ ಈ ಬಗೆ ತಿಳಿಯಿತು.

"ವರುಷ ಹದಿನಾಲ್ಕರೊಳುಪಾಸವ । ಧರಿಸಿದಾತನ ಕೈಯೊಳಲ್ಲದೆ । ಮರಣ ವಿಲ್ಲೆಂಬಿಂದ್ರಜಿತುವಿನ ಕೊಲಲು ಸೌಮಿತ್ರಿ ॥ ಅರಿಕೆಯಾಯ್ತುಪವಾಸವೆಂಬುದು । ಧರಣಿ ಪಗೆ, ರಘುರಾಮನಂತಃ । ಕರಣದಲಿ ಮರುಗಿದನು ತಮ್ಮನನಪ್ಪಿ ಬೋಳೈಸಿ" (೨--೩).

ಹಿರಿಯರಾದ ಜಾಂಬವರೊಡನೆ ರಾಮನು. 'ಸವತಿದಾಯಿಗ'ನಾದರೂ ಲಕ್ಷ್ಮಣನು ಭರತನಿಗಿಂತ ಕಿರಿಯನಾಗಿದ್ದಾನೆ; "ನಮ್ಮೊಳು ಭಕ್ತಿಮಾತಿ ಶಂಭವಿಸಿತು, ಇವನಾವ ಮಹಾತ್ಮನೋ? ತಮ್ಮಗೆ ಮಾಳ್ಪುದೇನು?" ಎಂದನು. ಆಗ ಜಾಂಬವರ ಮಾತು ಬಲು ಮಾರ್ಮಿಕವಿದೆ.

"ಪಿತೃಸಮೋ ಜ್ಯೇಷ್ಠೋಹಿ – ಎಂಬುದು । ಶ್ರುತಿವಚನವಣ್ಣಂದಿರೇ ನಿಜ । ಪಿತೃ ಗಳಲ್ಲದೆ. ತಂದೆ ಗುರು ನೀನೈಸೆ ಲಕ್ಷ್ಮಣಗೆ ॥ ಪಿತಗೆ ಸರಿಯೆಂದಗ್ರಜರ ಸ । ಮ್ಮತದೊಳೋ ಲೈಸದ ದುರಾತ್ಮಗೆ । ಪತನವಲ್ಲದೆ ಬೇರೆ ಗತಿಯೋ ರಾಮ ಹೇಳೆಂದ" ॥

"ಆರು ತಾಯ್ತಂದೆಯೊಳು ಗುರುವಿನೊ । ಳಾರು ತಮ್ಮ ಪಿತೃವ್ಯರೊಳು ನಿ । ಸ್ಸಾರ ದಿಂದಣ್ಣಂದಿರೊಳು ಭಕ್ತಿಯೊಳು ನಡೆವವರು ॥ ಸಾರವಿದು ತಾಯ್ತಂದೆಗೊಗೆದ ಕು । ಮಾರವರ್, ಉಳಿದವರು ಜಾರಗೆ । ಜಾರೆಯಲಿ ಜನಿಸಿರ್ದವರು ಕೇಳಿದುವೆ ಶ್ರುತಿಸಿದ್ಧ ॥"

"ಕಾರಣಕರೈ ನೀವು ಮುಂದಣ । ಕಾರಣಕೆ ತಕ್ಕಂತೆ ಶಿವನೇ । ಪ್ರೇರಿಸಿದನಲ್ಲಲ್ಲಿ ತಕ್ಕುದನಾರಿಗಭಿಮಾನ ॥ ವೈರಿಯನು ಗೆಲ್ವೆಡೆಗೆ ಶಂಭು । ಪ್ರೇರಕನು ಹದಿನಾಲ್ಕು ವರುಷಾ । ಹಾರವಿಲ್ಲದ ಮಾಳ್ಕೆಗಿವಗೀ ಚಿಂತೆಯೇಕೆಂದ ॥"

"ಹರಿಯು ನಿಜವೇ ನೀನು ಭಾವಿಸೆ । ಭರತನೇ ಬ್ರಹ್ಮಾಂಶ, ಲಕ್ಷ್ಮಣ । ನುರಗ ರಾಜನು, ಶಕ್ರನೇ ಶತ್ರುಘ್ನ ನೀವೆಲ್ಲ ॥ ಹರನ ಕಳೆ, ಭೂಭಾರಗಳನು । ತ್ತರಿಸಬಂದಿರಿ, ಮರ್ತ್ಯವೇಷದ । ಮರೆಯ ನಾಟಕವೆಂದು ಸಂತೈಸಿದನು ರಘುಪತಿಯು ॥"

ಇಲ್ಲಿ ರಾಮಾದಿಯರ ಅವತಾರದ ಬಗೆ ಹೊಸದಾಗಿ ಹೇಳಿದೆ. ಜಾಂಬವಂತರ ಉಪದೇಶದಿಂದ ರಾಮನ 'ಕದಡು ತಿಳಿದುದು'; ತಮ್ಮನನ್ನು ಅಪ್ಪಿ, ಜಾಂಬವರಿಗೆರಗಿ, 'ಮುಂದಣ ಕದನಕುದ್ಯೋಗವನು ಕೈಗೊಂಡೆದ್ದನಾ ರಾಮ'! ಈ ಸಂವಾದ ಈ ಕೃತಿಯ ವೈಶಿಷ್ಟ್ಯವಾಗಿದೆ.

೨. **ಗುಬ್ಬಿಗಳು ಸಾಕ್ಷಿಯಾದುದು:** ಶ್ರೀ ರಾಮನು ರಾವಣ ವಧೆಯಾದ

ಬಳಿಕ ಅಯೋಧ್ಯೆಗೆ ಬಂದಾಗ ಪಟ್ಟಾಭಿಷೇಕವಾಯಿತು. ಆ ಹದಿನಾಲ್ಕು ವರುಷದ ಅವಧಿಯಲ್ಲಿ ಭರತನ ರಾಜ್ಯಭಾರ ಕ್ರಮ ಹೇಳಿದೆ:

"ಕರವನೆತ್ತದೆ ಊರ ಹೊರಗಾ। ಭರತನಿದ್ದನು. ಕಾಸುವೀಸದ। ಕರದೊಳಿದ್ದುದ ಕೇಳಿ, ರಘುಪತಿ ಪ್ರಜೆಗಳನು ಕರೆದು ॥ ಕರವನೀವುದನಲ್ಕೆ, ಪ್ರಜೆಗಳು। ಕರವನಿತ್ತವು ಭರತಗೆಂದ। ಬ್ಬರಿಸಿ, ಗುಬ್ಬಿಯು ಸಾಕ್ಷಿಗಳ ನುಡಿಸಿದರು ಭೂಪತಿಗೆ।" ಗುಬ್ಬಿಗಳು 'ಹುಸಿಯನಾಡಿದವು' ಎಂದು ತಿಳಿದ ಶ್ರೀರಾಮನು ಅವುಗಳ ಕಾಲಿಗೆ 'ಸಂಕಲೆ' ಹಾಕಿಸಿದನು; "ಅಸತ್ಯವಾರಿಗೆ ಲೇಸು ಧರಣಿಯಲಿ?". ಸಾಕ್ಷಿಯು ಫಲವಾಗಿ, "ಹುಸಿಕರಿಗೆ ಬಹು ದೋಷವಲ್ಲದೆ. ಕರ್ತಗಿಲ್ಲೆಂದ". ಪ್ರಜೆಗಳು "ಮುಂದೆ ತೆರುವಾ ಕರಂಗಳನು ತರಿಸೆಂದು" ಶ್ರೀರಾಮನು ಭರತನಿಗೆಂದನು!

"ಗುಬ್ಬಿಗಳಿಗಾ ಪ್ರಜೆಗಳಿತ್ತರು। ಉರ್ಬಿಯೊಳು ಒಣಗಿರ್ದ ಹರಹಿದ। ಸರ್ಬವನು ನೀವ್ ತಿನಲು, ಹೊಡೆಯಲು ಸಲ್ಲ ನಿಮಗೆಂದು ॥ ಗುಬ್ಬಿಗಳು ಸುಖಿವಡೆದವವರಾ। ರೆಬ್ಬಿಸಲು ಘನದೋಷವಿಳೆಯೊಳು। ಸರ್ಬನಾಡವರಿತ್ತ ವೃತ್ತಿಗೆ ಹಾನಿಯಿಲ್ಲೆಂದ ॥" ಗುಬ್ಬಿಗಳು ಇತರ ಪಕ್ಷಿಗಳಂತೆ ಒಂದೊಂದೆ ಕಾಲಿಂದ ನಡೆಯುವುದಿಲ್ಲ; ಕಾಲುಗಳಿಗೆ ಸಂಕಲೆ ಹಾಕಿದವರಂತೆ, ಜೊತೆಕಾಲುಗಳಿಂದ ಒಮ್ಮೆಲೆ ಕುಪ್ಪಳಿಸುತ್ತವೆ. ಇದು ಶ್ರೀರಾಮನಿಂದಾದುದೆಂದು, ಆದಕ್ಕಾಗಿ ಪ್ರಜೆಗಳು ನೆಲದಲ್ಲಿ ಹರಡಿದ ಧಾನ್ಯವನ್ನು ತಿನ್ನುವ ಗುಬ್ಬಿಗಳನ್ನೋಡಿಸಲಾಗದೆಂದು ಕಟ್ಟಳೆ ಮಾಡಿದರೆಂದು ವಿಚಿತ್ರವಾಗಿದೆ! (ಇಂದ್ರ ಪುತ್ರನಾದ ಜಯಂತ ಕಾಗೆಯಾಗಿ ಸೀತೆಯನ್ನು ಕೆಣಕಿದನು. ರಾಮನ ಒಂದು ಬಾಣಕ್ಕೆ ಅವನೊಂದು ಕಣ್ಣು ತುತ್ತಾಯಿತು; ಅನಂತರ ಕಾಗೆಗಳಿಗೆ ಒಕ್ಕಣ್ಣಾಯಿತೆಂದು ರಾಮಾಯಣದಲ್ಲಿರುವುದು ಸ್ಮರಣೀಯ! 'ಕಾಕ ಬಲಿ'ಯೆಂಬುದೂ ಇಲ್ಲಿ ಗಮ್ಯವಿದೆ!)

ಕನ್ನಡ ಆದಿತ್ಯ ಪುರಾಣದಲ್ಲಿ ಉದಾತ್ತ ಕಲ್ಪನೆಯಿಂದ ಕತೆಗಳು ಹೊಸೆದಿವೆ, ಇದು ಕೇವಲ ಸಂಸ್ಕೃತ ಕೃತಿಯ ಅನುವಾದವಲ್ಲ, ಸಹೃದಯರು ಈ ಕಾವ್ಯವನ್ನು ಆಸ್ವಾದಿಸುವಂತಾಗಲಿ! ಆ ಮೇರೆಗೆ, ಕವಿಯೂ ಪ್ರಕಾಶಕರರೂ ಧನ್ಯರಾಗಲಿ!

× × × ×

೭. ಕನ್ನಡ ಶುಕಸಪ್ತತಿ ಕಾವ್ಯದಲ್ಲಿ ಪುರಾಣ ಕತೆಗಳು

ಶ್ರೀ ಯಂ. ರಾಜಗೋಪಾಲಾಚಾರ್ಯ, ಉಡುಪಿ,

ಕತೆ ಕೇಳುವ ಪ್ರವೃತ್ತಿ ಎಳೆಯಿಂದಲೂ ಮನುಷ್ಯನಲ್ಲಿ ಬೆಳೆದು ಬಂದಿರುತ್ತದೆ. ಇದನ್ನು ಹೆಚ್ಚಾಗಿ ಮಕ್ಕಳಲ್ಲಿ ಕಾಣಬಹುದು. ತನ್ನ ಕಣ್ಣ ಮುಂದಿಲ್ಲದ ಪ್ರಪಂಚವೊಂದನ್ನು ಊಹೆಯಿಂದ ಕಲ್ಪಿಸಿಕೊಂಡು ಅದರಲ್ಲಿ ತಾನೂ ಒಬ್ಬನಾಗಿ ವಿಹರಿಸುವ ಅವಕಾಶ ಇದರಲ್ಲಿ ಇರುತ್ತದೆ, ಕತೆಯು ನಮ್ಮ ಸಾಹಿತ್ಯದ ಹಳೆಯ ಪ್ರಕಾರಗಳಲ್ಲಿ ಒಂದು. ಸಾಹಿತ್ಯ ಮೊದಲು ಹುಟ್ಟಿಕೊಂಡುದು ಕತೆಯ ರೂಪದಲ್ಲಿ ಎಂದು ಕಾಣುತ್ತದೆ. ಹಳೆಯ ಕಥೆಗಳಲ್ಲಿ ಒಂದು ತತ್ವ ಮುಖ್ಯವಾಗಿದ್ದು ಅದರ ಪ್ರತಿಪಾದನೆಗಾಗಿಯೇ ಎಂಬ ಹಾಗೆ ಕಥೆ ಇರುತ್ತದೆ, ಅಥವಾ ಒಂದು ತತ್ವದ ಸುತ್ತಲೂ ಕಥೆಯು ಹಂದರ ಬೆಳೆದು ಕಥೆಯ ಸ್ವಾರಸ್ಯದಲ್ಲಿ ತತ್ವ ಮುಚ್ಚಿಕೊಂಡು ಇರುತ್ತದೆ, ಇಂತಹ ಕಥೆಗಳಲ್ಲಿ ತತ್ವವೇ ಮುಖ್ಯ ಎನ್ನಲಾಗದಿದ್ದರೂ ತತ್ವವನ್ನು ಬಿಟ್ಟು ಕಥೆ ಇಲ್ಲ ಎಂಬ ಹಾಗೆ ಅದರ ಬೆಳವಣಿಗೆ ಇರುವುದುಂಟು. ಒಂದು ತತ್ವವನ್ನು ನಿರೂಪಿಸುವುದಕ್ಕಾಗಿಯೇ ಕಥೆಯು ಬೆಳೆದದ್ದುಂಟು. ಪಂಚತಂತ್ರ. ಹಿತೋಪದೇಶ ಮುಂತಾದವು ಈ ಜಾತಿಗೆ ಸೇರುತ್ತವೆ, ಕೆಲವೊಮ್ಮೆ ತತ್ವವು ಮುಖ್ಯವಾಗಿದ್ದು ಕಥೆಯ ಬೆಳವಣಿಗೆ ಯಾಂತ್ರಿಕವಾಗಿ ಸಾಗುತ್ತಾ, ಸಾಹಿತ್ಯದ ದೃಷ್ಟಿಯಲ್ಲಿ ಕಳಪೆಯಾಗಿರುವುದೂ ಇದೆ. ವ್ರತಕತೆಗಳು ಈ ಜಾತಿಗೆ ಸೇರುತ್ತವೆ. ಒಗಟಿನಂತಹ ಬೇತಾಳ ಪಂಚವಿಂಶತಿಗಳೂ ಒಂದು ಜಾತಿಯ ಕಥಾಸಾಹಿತ್ಯ. ಹೀಗೆ ಕಥಾ ಸಾಹಿತ್ಯದಲ್ಲೇ ಹಲವಾರು ಪ್ರಭೇದಗಳು ಸಿಗುತ್ತವೆ. ಸಾಹಿತ್ಯದ ಸಾಮಾನ್ಯ ನಿಯಮಗಳು ಕಾಲಕಾಲಕ್ಕೆ ಬದಲಾಗುತ್ತಾ ಹೋದಂತೆ ಅದರ ತಂತ್ರಗಳು ಮತ್ತು ಉದ್ದೇಶಗಳು ಬದಲಾಗುತ್ತಾ ಬಂದಿವೆ, ಈ ಹೊತ್ತಿನ ಕಥಾ ಸಾಹಿತ್ಯವನ್ನು ತೆಗೆದುಕೊಂಡರೆ ಒಂದು ಸಾಮಾನ್ಯ ಘಟನೆ, ಒಂದು ಸಂಭಾಷಣೆ ಅಥವಾ ಪತ್ರವ್ಯವಹಾರಗಳು ಮುಂತಾದವೂ ಕತೆಯ ವಸ್ತುವಾಗಬಹುದು. ಹಾಗೆ ಕಥೆಯನ್ನು ಬೆಳೆಸುವ ತಂತ್ರದಲ್ಲಿ ಹಲವಾರು ವಿಧವನ್ನು ಕಾಣಬಹುದು. ಕಥೆಯ ಹಿನ್ನೆಲೆಯಲ್ಲಿ ಒಂದು ತತ್ವ ಇದ್ದೇ ತೀರಬೇಕು. ಅಥವಾ ತತ್ವವನ್ನು ಕಥೆಯು ರಮ್ಯವಾಗಿ ಪ್ರತಿಪಾದಿಸಬೇಕು ಎಂಬ ಅಂಶವನ್ನು ಈಗ ಒಪ್ಪುವುದಕ್ಕಾಗುವುದಿಲ್ಲ. ಒಂದು ತತ್ವ ಅಥವಾ ಒಂದು ನೀತಿ ಅತೀ ಸೂಕ್ಷ್ಮವಾಗಿ ಒಂದು ಕಥೆಯಲ್ಲಿ ಸ್ಪಂದಿಸಬಹುದು. ಆದರೆ ಅದಕ್ಕೆ ಅಲ್ಲಿ ಮಹತ್ವವೇನೂ ಇಲ್ಲ. ತತ್ವವನ್ನು ಮೀರಿ ಅಥವಾ ಮರೆಸಿ ಸುಂದರವಾಗಿ ಬೆಳೆದ ಘಟನೆಯೇ ಕಥೆಯ ಹಂದರವಾಗುತ್ತದೆ.

ಹಳೆಯ ಕಥಾ ಸಾಹಿತ್ಯದಲ್ಲಿ ಒಂದು ತತ್ವದ ಪ್ರತಿಪಾದನೆಗಾಗಿ ಘಟನೆಗಳು ಬೆಳೆದು ಕಥಾ ಭಿತ್ತಿಯನ್ನು ರಚಿಸುವುದು ಕಂಡುಬರುತ್ತದೆ. "ಶುಕಸಪ್ತತಿ" ಅಂತಹ ಒಂದು ಕಥನ

ಕಾವ್ಯ. ಇದರ ಮೂಲ ಸಂಸ್ಕೃತ. ಇದನ್ನು ಭಾಮಿನಿ ಷಟ್ಪದಿಯಲ್ಲಿ ಕನ್ನಡ ಕಾವ್ಯವಾಗಿ ಹೊಸೆದ ಕರಿಯ ನಾಗಪ್ಪಯ್ಯನಲ್ಲಿ ಒಂದು ಸ್ವಂತಿಕೆಯನ್ನು ಗುರುತಿಸಬಹುದು. ಅದು ಕನ್ನಡ ಭಾಷೆ ಮತ್ತು ಕವಿತಾ ರಚನೆಗೆ ಸಂಬಂಧಿಸಿದ್ದು, ಇಲ್ಲಿ ತತ್ವ ಪ್ರತಿಪಾದನೆಗಾಗಿ ಪ್ರಾಚೀನ ಪುರಾಣ ಕಥೆಗಳು ಎಷ್ಟರ ಮಟ್ಟಿಗೆ ಬದಲಾವಣೆಗಳನ್ನು ಪಡೆದಿವೆ ಎಂಬುದೂ ಒಂದು ಅಧ್ಯಯನ ವಿಷಯವಾಗುತ್ತದೆ. ಮುಖ್ಯವಾಗಿ ಇಲ್ಲಿನ ಕತೆಗಳು ವ್ಯಭಿಚಾರವನ್ನು ನಿಂದಿಸುವುದರಲ್ಲ, ಬಳಿಕ ಪಾತಿವ್ರತ್ಯದ ಮಹಿಮೆಯನ್ನು ಎತ್ತಿ ಹಿಡಿಯುವುದರಲ್ಲಿ ಸಾರ್ಥಕ ವಾಗಿವೆ: ಯಾವ ಕಾಲದಲ್ಲೂ ವ್ಯಭಿಚಾರವು ನಿರ್ನಾಮವಾಗಲಿಲ್ಲ. ಒಂದು ಕಾಲದಲ್ಲಿ ಜನಜೀವನದಲ್ಲಿ ಪಾತಿವ್ರತ್ಯದ ಬೆಲೆಯೇನು? ನೈತಿಕ ಜೀವನವನ್ನು ಯಾವ ಮೌಲ್ಯದಿಂದ ಅಳೆಯುತ್ತಿದ್ದರು? ಮುಂತಾದವುಗಳ ಒಂದು ಆದರ್ಶ ಚಿತ್ರವೇನೋ ಇದರಲ್ಲಿ ದೊರೆಯುತ್ತದೆ. ಇಲ್ಲಿನ ಪ್ರತಿಯೊಂದು ಕಥೆಯಲ್ಲೂ ಹೆಂಗಸು ಶೀಲವತಿಯಾಗಿರಬೇಕು, ಅಂತಹ ಹೆಂಗಸಿನ ಪ್ರಭಾವ ಯಾವ ಋಷಿಯ ಪ್ರಭಾವಕ್ಕೂ ಕಡಿಮೆಯಾದುದಲ್ಲ. ಅದೇ ಸ್ತ್ರೀಯರ ನೈತಿಕ ಬಲ ಎಂಬ ಸಾಮಾನ್ಯ ತತ್ವವು "ಗುಪ್ತಗಾಮಿನಿ" ಬರುತ್ತದೆ, ಇದಕ್ಕೆ ಒಂದು ಕಥೆ ಸಾಕಿದ್ದರೂ ಇದೇ ತತ್ವವನ್ನು ಪ್ರತಿಪಾದಿಸಲು ಎಪ್ಪತ್ತು ಕಥೆಗಳನ್ನು ಹೆಣೆದು ಅವನ್ನು ಗಿಳಿಯ ಬಾಯಿಯಿಂದ ಹೇಳಿಸುವುದು ಒಂದು ಚಮತ್ಕಾರವಾದ ತಂತ್ರವಾಗಿ ಕಾಣಿಸುತ್ತದೆ, ಹೆಂಗಸಿನ ಶೀಲದ ಮಹತ್ವವು ಕಾವ್ಯದಲ್ಲಿ ತಾನಾಗಿ ಅರಳಿಕೊಳ್ಳದೇ ನೀತಿಪಾಠವಾಗಿ ಕಾಣಿಸುತ್ತವೆ, ಕೆಲವು ಕಥೆಗಳಲ್ಲಿ ಶಾಸ್ತ್ರಪಾಠಗಳೂ ಇವೆ. ಕಾಮ ಶಾಸ್ತ್ರದ ವಿವಿಧ ವಿವರಣೆಗಳನ್ನು ಇದರಲ್ಲಿ ಕಾಣಬಹುದು. ಇದು ಒಂದು ತತ್ವವನ್ನು ಧ್ವನಿಪೂರ್ಣವಾಗಿ, ಕಾವ್ಯಾತ್ಮಕವಾಗಿ ಸೃಷ್ಟಿಸುತ್ತದೆ, ಎನ್ನುವುದಕ್ಕಿಂತ ಹೆಚ್ಚಾಗಿ ಕಾವ್ಯಕ್ಕೆ ನೈತಿಕ ಮೌಲ್ಯವನ್ನು ಕಟ್ಟುತ್ತದೆ ಎನ್ನಬಹುದು. ಯಾವುದೇ ಒಂದು ತತ್ವವು ಕುರುಡು ನಂಬಿಕೆಗೆ ಒಳಗಾಗದೆ ವಿಚಾರದ ಒರೆಗಲ್ಲಿನಲ್ಲಿ ಅದರ ಬೆಲೆಯನ್ನು ಕಂಡುಹಿಡಿದಾಗ ಮಾತ್ರ ಅದು ಮನಸ್ಸಿನ ಆಳಕ್ಕೆ ಇಳಿಯಬಹುದು. ಇಲ್ಲದಿದ್ದರೆ ಅದೊಂದು ಗಿಳಿಪಾಠ, ಈ ಶುಕಸಪ್ತತಿಯು ಕಾಮಾಂಧನಾದ ಒಬ್ಬ ರಾಜನನ್ನು ದಾರಿಗೆ ತರಲು ಗಿಳಿ ಉಪದೇಶಿಸಿದ ನೀತಿಕಥೆಗಳ ಕಾವ್ಯ, ಇದರಲ್ಲಿನ ಹಲವಾರು ಕತೆಗಳು ರಾಮಾಯಣ-ಭಾರತ-ಪುರಾಣಗಳಿಂದ ಆಯ್ದವುಗಳಾಗಿದ್ದರೂ ಅವು ಇಲ್ಲಿನ ಮೌಲ್ಯವನ್ನು ಎತ್ತಿ ಹಿಡಿಯಲು ಹೊಸ ತಿರುವನ್ನು ಪಡೆದಿವೆ, ಹಾಗೆ ಕತೆಗಳನ್ನು ಬದಲಾಯಿಸುವಾಗ ಕವಿ ಯಾವ ಅಸಹಜತೆಯನ್ನೂ ತೋರಿಸದೆ ಇಲ್ಲಿನ ಸನ್ನಿವೇಶಕ್ಕೆ ಒಗ್ಗುವ ಹಾಗೆ ಪಾತ್ರಗಳನ್ನು ಬಳಸಿ ಸಂವಿಧಾನಕವನ್ನು ರಚಿಸಿದ್ದಾನೆ. ಹಾಗೆ ನೋಡುವಾಗ ಇಡೀ ಕತೆಯೇ ಬೇರೆಯಾಗಿ ಕಾಣಬಹುದು, ಅಲ್ಲಲ್ಲಿ ಅಸಾಂಗತ್ಯವೂ ತಲೆಹಾಕಬಹುದು. ಆದರೂ ಸಮಷ್ಟಿ ದೃಷ್ಟಿಯಿಂದ ನೋಡುವಾಗ ಕತೆಯ ಘಟನೆಗಳ ಜೋಡಣೆಯಲ್ಲೇ ಒಂದು ಸಾಂಗತ್ಯವನ್ನು ಕಾಣಬಹುದು, ಇಲ್ಲಿ ಒಂದೆರಡು ಕಥೆಗಳನ್ನು ಮಾತ್ರ ವಿಶ್ಲೇಷಿಸುವ ಪ್ರಯತ್ನ ಮಾಡಿದೆ. ಅವರಿಂದ ಕವಿಯ ದೃಷ್ಟಿ ಎಂತಹುದೆಂಬುದನ್ನು ತಿಳಿಯಬಹುದು,

ಅಹಲ್ಯೆಯ ಕತೆ: ದೇವೇಂದ್ರನಿಗೆ ಗೌತಮನ ಪತ್ನಿಯಾದ ಅಹಲ್ಯೆಯಲ್ಲಿ ಮನಸ್ಸಾಯಿತು, ಒಂದು ದಿನ ಮಧ್ಯಾಹ್ನದ ಸಮಯ ಬ್ರಾಹ್ಮಣ ವೇಷವನ್ನು ಧರಿಸಿ

ಅಹಲ್ಯೆಯ ಬಳಿಗೆ ಬಂದು "ತರುಣಿ! ಇದು ಋತುಕಾಲ, ನಾನು ಬ್ರಾಹ್ಮಣ, ನನಗೆ ರತಿ ಭಿಕ್ಷವಿತ್ತರೆ ಸಾಕು" ಎಂದು ಬೇಡಿಕೊಂಡ, ಅಹಲ್ಯೆಯು ಪರಪತಿಯನ್ನು ಕಾಮಿಸುವುದು ಮೂರ್ಖತನವೆಂದಳು. ಇಂದ್ರನು ಕೇಳಲಿಲ್ಲ. ಮಧ್ಯಾಹ್ನ ಬಂದವರಿಗೆ ಇಲ್ಲವೆನ್ನದೆ, ಅವರು ಕೇಳಿದ್ದನ್ನು ಕೊಡಬೇಕೆಂದು ತನ್ನ ಪತಿ ಆಡಿದ ಮಾತನ್ನು ನೆನೆದು, ಅತಿಥಿಗಳನ್ನು ಪೂಜಿಸುವುದೇ ಶ್ರೇಯಸ್ಕರ ಎಂದು ಭಾವಿಸಿ, ಅಹಲ್ಯೆ ಇಂದ್ರನ ಇಚ್ಛೆಯಂತೆ ನಡೆದು ಕೊಂಡಳು, ಗೌತಮನು ಮನೆಗೆ ಬಂದು ತನ್ನ ಮಡದಿಯಲ್ಲಾದ ಬದಲಾವಣೆಯನ್ನು ಗುರುತಿಸಿ "ನೀನು ಕಲ್ಲಾಗಿ ಹೋಗು" ಎಂದು ಶಾಪಕೊಟ್ಟು, ರಾಮನ ಪಾದವು ಸೋಂಕಿ ದಾಗ ನಿನಗೆ ಪುನಃ ಸ್ತ್ರೀರೂಪ ಬರುವುದು ಎಂದು ಅನುಗ್ರಹವನ್ನೂ ಮಾಡಿದ. ಹಾಗೆ ಇಂದ್ರನ ಮೈಯಲ್ಲಿ ಸಾವಿರ ಯೋನಿಗಳು ಉಂಟಾಗಲಿ ಎಂದು ಶಾಪವನ್ನು ಕೊಟ್ಟ. ಈ ವಿಷಯವನ್ನು ತಿಳಿದ ನಾರದ, ಶಚಿಯ ಬಳಿಗೆ ಹೋಗಿ ಆಕೆಯ ಪತಿಯಾದ ಇಂದ್ರನಿಗೆ ಬಂದ ಗೌತಮನ ಶಾಪವನ್ನು ತಿಳಿಸಿದ, ಕೂಡಲೇ ಶಚಿಯು ಗೌತಮನ ಬಳಿಗೆ ಬಂದು,

ಏನಂ ಹೇಳಲಿ ತನ್ನ ಗಂಡನ।
ಹೀನ ಗುಣವನು ಮರೆತು ಸುಖದಲಿ।
ತಾನಿರಲು ರಕ್ಷಿಸಲು ಬೇಕೆಂದೆರಗಿದಳು ಪದಕೆ॥

ಆಗ ಧ್ಯಾನದಲ್ಲಿದ್ದ ಗೌತಮ ಕಣ್ತೆರೆದು ಪತಿವ್ರತೆಯಾದ ಶಚಿಯನ್ನು ನೋಡಿದ. ಮನಸ್ಸು ಕರಗಿತು. ಇಂದ್ರನ ದೇಹದಲ್ಲಿ ಇರುವ ಸಾವಿರ ಯೋನಿಗಳು ಕಾಣುವವರಿಗೆ ಕಣ್ಣಾಗಿ ಕಾಣುವುದು ಎಂದು ವಿಶಾಪವನ್ನು ಕೊಟ್ಟು ಶಚಿಯನ್ನು ಸಂತೈಸಿ ಕಳುಹಿಸಿದ.

ಅಹಲ್ಯೆ ಮತ್ತು ಇಂದ್ರ ಇವರ ಕಥೆ ಹಳೆಯದಾದರೂ ಇಲ್ಲಿ ಶಚಿಯ ಸಜ್ಜನಿಕೆ ಯಿಂದ ಇಂದ್ರ ಅನುಗ್ರಹವನ್ನು ಪಡೆದ ಅಂಶ ಚಮತ್ಕಾರವಾಗಿ, ಅಹಲ್ಯೆಯ ವ್ಯಭಿಚಾರ ಕ್ಕಿಂತಲೂ ಹೆಚ್ಚಾಗಿ ಶಚಿಯ ಪಾತಿವ್ರತ್ಯದ ಮೇಲೆ ಹೊಸ ಬೆಳಕು ಕಾಣುತ್ತದೆ. ನಾರದ ಮಾತ್ರ ಒಬ್ಬ 'ಏಕಾಂಗ್ನ'ದಂತೆ ಕಾಣಿಸುತ್ತಾನೆ.

ಶಕುಂತಲೆಯ ಕಥೆ: ಮಹಾಭಾರತದಲ್ಲಿರುವ ಶಕುಂತಲೆಯ ಕಥೆಗೂ, ಕಾಳಿ ದಾಸನ ನಾಟಕದ ಕಥೆಗೂ ಇರುವ ವ್ಯತ್ಯಾಸ ಎಲ್ಲರಿಗೆ ತಿಳಿದಿದೆ. ಈ ಎರಡೂ ಕಥಾನಕ ಗಳಲ್ಲಿ ಪಾತಿವ್ರತ್ಯದ ಮಹಿಮೆಯ ಸೂಚನೆ ಏನೋ ಬರುತ್ತದೆ. ಆದರೆ ಶುಕಸಪ್ತತಿಯಲ್ಲಿ ಬರುವ ಶಕುಂತಲೆಯ ಕತೆ ಬೇರೊಂದೇ ರೀತಿಯದು. ಆಕೆ ತಂದೆಯ ಮೂಲಕ ದುಷ್ಯಂತ ನನ್ನು ವರಿಸುವುದು, ಗರ್ಭಿಣಿಯಾದ ಆಕೆಯನ್ನು ಬಯಸಿ ಇಂದ್ರನು ಬಂದು ಆಕೆಯ ಶಾಪದ ಬೆದರಿಕೆಯಿಂದ ಮರಳುವುದು: ಇದಕ್ಕಿಂತಲೂ ವಿಶಿಷ್ಟವೆಂದರೆ ಇಲ್ಲಿ ದುಷ್ಯಂತನಿಗೆ ದೂರ್ವಾಸನ ಶಾಪವಿಲ್ಲ. ಸಪ್ತರ್ಷಿಗಳು ಆತಗೆ ಶಾಪವಿತ್ತರು! ಆದರೆ, ಶಕುಂತಲೆಯ ಶಾಪದ ಭಯದಿಂದ ಅವರೇ ಆಕೆಯಲ್ಲಿಗೆ ಬಂದು; ಆಕೆಯನ್ನೊಯ್ದು ರಾಜನಿಗೆ ಒಪ್ಪಿಸು ವರು! ಈ ಘಟನೆ ಹೀಗಿದೆ:

ಒಮ್ಮೆ ಸಪ್ತಋಷಿಗಳು ಗಂಗಾತೀರಕ್ಕೆ ಸ್ನಾನಕ್ಕೆ ಬಂದರು. ಅದೇ ಸಮಯದಲ್ಲಿ ದುಷ್ಯಂತನು ಗಂಗಾತೀರಕ್ಕೆ ಬಂದು ಸ್ನಾನಮಾಡಿ ಸಮೀಪದಲ್ಲಿದ್ದ ಬ್ರಾಹ್ಮಣರಿಗೆ ಅವಸರದಲ್ಲಿ ದಾನಧರ್ಮಗಳನ್ನು ಕೊಟ್ಟು ಹೊರಟು ಹೋದ, ಇದನ್ನು ಕಾಣುತ್ತಿದ್ದ ಸಪ್ತರ್ಷಿಗಳು ತಮ್ಮನ್ನು ಲಕ್ಷಿಸದೇ ಹೋದ ಕಾರಣ ರಾಜನಿಗೆ ಹೆಂಡತಿ ಮಕ್ಕಳ ನೆನಪಾಗದಿರಲೆಂದು ಶಾಪಕೊಟ್ಟರು,

ರಾಜನು ಹೆಂಡತಿಯನ್ನು ಮರೆತ. ಶಕುಂತಳೆಯು ತಂದೆಯ ಮನೆಯಲ್ಲಿ ಗಂಡು ಮಗುವನ್ನು ಹೆತ್ತಳು. ಕಣ್ವನು ಮಗುವಿಗೆ ಭರತನೆಂದು ಹೆಸರಿಟ್ಟ. ನಾಲ್ಕು ವರ್ಷ ಕಳೆದರೂ ರಾಜನಿಗೆ ಇವಳ ನೆನಪಾಗಲಿಲ್ಲ. ಒಮ್ಮೆ ಶಕುಂತಳೆ ತಾನು ಪತಿಯಿದ್ದಲ್ಲಿಗೆ ಹೋಗುವೆನೆಂಬ ಅಭಿಲಾಷೆಯನ್ನು ತಂದೆಗೆ ತಿಳಿಸಿದಳು, ಆಗ ಕಣ್ವ ಒಬ್ಬ ಶಿಷ್ಯನನ್ನು ಕರೆದು ದುಷ್ಯಂತನ ಬಳಿಗೆ ಹೋಗಿ ಅವನಿಗೆ ಶಕುಂತಳೆಯ ನೆನಪನ್ನು ಕೊಡಲು ಹೇಳಿದ, ಅವನು ಹೋಗಿ ಆಸ್ಥಾನದಲ್ಲಿದ್ದ ದುಷ್ಯಂತನನ್ನು ನೋಡಿ. "ರಾಜನೆ! ನಿನ್ನ ಮೇಲಿನ ಹಂಬಲದಿಂದ ಶಕುಂತಳೆಯು ಅನ್ನ ನೀರನ್ನು ತೊರೆದು, ಮಾಸಿದ ಬಟ್ಟೆಯುಟ್ಟು, ಮುಡಿಯನ್ನು ಕಟ್ಟಿಕೊಳ್ಳದೆ, ಕಣ್ಣನೀರಲ್ಲೇ ಕೈತೊಳೆಯುತಿದ್ದಾಳೆ. ಹೆಣ್ಣನ್ನು ಹೀಗೆ ಗೋಳಾಡಿಸುವುದು ನಿನಗೆ ಚೆಂದವೆ? ಕಣ್ವನು ಮಗಳ ದುಃಖವನ್ನು ನೋಡಿ ಖಿನ್ನನಾಗಿದ್ದಾನೆ"ಂದು ವಿವರಿಸಿದ. ರಾಜನಿಗೆ ಈ ಮಾತನ್ನು ಕೇಳಿ ಅಚ್ಚರಿ. "ಯಾವಳೋ ಹೆಂಗಸನ್ನು ನನ್ನ ಹೆಂಡತಿಯೆಂದು ಹೇಳುವೆಯಲ್ಲ, ಅವಳ ಮಗ ನನ್ನ ಮಗ ಹೇಗಾದಾನು? ಇದು ವಿಪರೀತವೇ ಸರಿ" ಎಂದು ನೊಂದು ನುಡಿಯಲು, ಬಳಿಯಲ್ಲಿರುವ ಮಂತ್ರಿಗಳು, ಋಷಿಗಳ ಶಾಪವನ್ನು ತಿಳಿಸಿದರು, ಶಿಷ್ಯನು ಅದನ್ನು ಕೇಳಿ ಕಣ್ವನ ಬಳಿಗೆ ಬಂದು, ಅಲ್ಲಿ ನಡೆದುದನ್ನು ವಿವರಿಸಿದ. ಕಣ್ವ ಮಗಳನ್ನು ಕರೆದು "ಋಷಿಗಳ ಶಾಪದಿಂದ ನಿನ್ನ ಪತಿಗೆ ನೆನಪೇ ಇಲ್ಲದಂತಾಗಿದೆ, ಆದುದರಿಂದ ಅವನು ನಿನ್ನನ್ನು ಕರೆಸಿಕೊಳ್ಳಲಿಲ್ಲ" ಎಂದು ಹೇಳಿದ, ಆಗ ಶಕುಂತಳೆ: –

"ಉಗುರು ಸುತ್ತಿನ ಮೇಲೆ ಶೂಲಕೆ । ತಗುಲಿದಶ್ಮವು ಬಿದ್ದವೊಲು ನೋ ।
ವಿಗೆ ಮರಳಿ ನೋವ್ ಕೂಡಿದಂದದಲಾ ಶಕುಂತಲೆಯು ॥
ಬಗೆಯುಳಿದು ಕೋಪದಲಿ ಸಪ್ತ । ರ್ಷಿಗಳ ಶಪಿಸಿದಳಿನಿಬರನು ವ ।
ಹ್ನಿಗೆ ಸಮರ್ಪಣೆ ಗೈವೆನೆಂದಳು ಪತಿಯ ವಿರಹದಲಿ" ॥

ಶಕುಂತಳೆಯು ಕೋಪಗೊಂಡು ಸಪ್ತಋಷಿಗಳನ್ನು ಸುಟ್ಟು ಬೂದಿ ಮಾಡುವ ಭರದಲ್ಲಿದ್ದಾಗ, ನಾರದ ಸಪ್ತಋಷಿಗಳಿಗೆ ಈ ವಿಚಾರವನ್ನು ತಿಳಿಸಿದ. ಅವರು ಕೂಡಲೇ ಹೆದರಿ ಶಕುಂತಳೆಯ ಬಳಿಗೆ ಬಂದು ತಮ್ಮ ತಪ್ಪನ್ನು ಕ್ಷಮಿಸಬೇಕೆಂದು ಬೇಡಿಕೊಂಡರು. "ರಾಜನ ರಕ್ಷಣೆಯ ಆಧಾರದಿಂದ ನಮ್ಮ ತಪಸ್ಸು ತೊಂದರೆಯಿಲ್ಲದೆ ಸಾಗುತ್ತದೆ. ಅವನ ಉಪಕಾರವು ದೊಡ್ಡದು. ಆದರೆ ರಾಜನು ಗಂಗೆಯ ಬಳಿಯಲ್ಲಿ ನಮ್ಮನ್ನು ಕಂಡೂ ಕಾಣದ ಹಾಗೆ ಅಲಕ್ಷ್ಯಮಾಡಿ ಹೋದುದರಿಂದ "ನೀನು ಹೆಂಡತಿಯನ್ನು ಮರೆಯುವಂತಾಗಲಿ"

ಎಂದು ಶಪಿಸಿದೆವು. ಈಗ ಶಾಪ ವಿಮೋಚನ ಕಾಲ ಬಂದಿದೆ. ನೀನು ಅವನ ಬಳಿಗೆ ಹೋಗಬಹುದು." ಎಂದು ತಿಳಿಸಲು ಈ ಮಾತನ್ನು ಕೇಳಿ ಶಕುಂತಳೆಯು ಹಿಗ್ಗಿ, ಸಗ್ಗದ ಮುನಿಗಳೊಡನೆ ತಂದೆಯನ್ನು ಕರೆದುಕೊಂಡು ದುಷ್ಯಂತನಿದ್ದಲ್ಲಿಗೆ ಬಂದಳು. ರಾಜನಿಗೆ ಕೂಡಲೆ ಶಕುಂತಳೆಯ ಗುರುತು ಹತ್ತಿತು. ಅವಳ ರೂಪವನ್ನು ನೋಡಿ, ಅವನು ಸಂತೋಷದಲ್ಲಿ ಮುಳುಗಿದ. ಬಂದ ಋಷಿಗಳನ್ನು ವಂದಿಸಿ, ಮಗನನ್ನು ಹೆಗಲ ಮೇಲೆ ಇಟ್ಟುಕೊಂಡು, ಮಡದಿಯ ಕಣ್ಣೀರನ್ನು ಒರೆಸಿ ತಾನು ಹೊಸದಾಗಿ ಮದುವೆಯಾದಷ್ಟು ಸಂತೋಷದಲ್ಲಿದ್ದನು.

ಈ ಕತೆಯಲ್ಲಿ ಪತಿವ್ರತೆಯ ಶಾಪಕ್ಕೆ ಇಂದ್ರನು ಬೆದರಿದ, ಋಷಿಗಳು ಬೆದರುವರು ಎಂಬುದು ಮುಖ್ಯ ತತ್ವ, ಅದಕ್ಕಾಗಿ ಕವಿ ಕಥೆಯನ್ನು ಹೀಗೆ ಪಲ್ಲಟಗೊಳಿಸಿದ್ದಾನೆ ಎಂದು ತಿಳಿಯಬಹುದು. ಪುರಾಣ ಕಥೆಯನ್ನು ಇಲ್ಲಿ ತರುವಾಗ ಅನೇಕ ಮಾರ್ಪಾಟು ನಡೆದಿದೆ. ಕಲಹಪ್ರಿಯನಾದ ನಾರದ ಈ ಕತೆಗಳಲ್ಲಿ ಆಪದ್ಬಾಂಧವನಂತೆ ವರ್ತಿಸುತ್ತಾನೆ. ಈ ಹೊತ್ತಿನ ಕಥಾ ತಂತ್ರದಲ್ಲಿ ದೂರವಾಣಿಯ ಕೆಲಸವನ್ನು ಇವನು ಮಾಡುತ್ತಾನೆ ಎನ್ನಬಹುದು. ಹೀಗೆ ಹಳೆಯ ಕಥೆಗಳನ್ನು ಇಲ್ಲಿ ಅನುವಾದ ಮಾಡುವಾಗ ಮೂಲಕಾರನೇ ಸಾಕಷ್ಟು ಮಾರ್ಪಾಟನ್ನು ಮಾಡಿಕೊಂಡಿರ ಬಹುದು. ಶುಕಸಪ್ತತಿಯನ್ನು ಕನ್ನಡಿಸಿದ ಶರಜಾನಾಗ ಮಂತ್ರೀಶನು ಮೂಲದ ಹಂದರವನ್ನು ಹೆಚ್ಚಿಗೆ ಬದಲಾಯಿಸದೆ ಒಪ್ಪುವ ರೀತಿಯಲ್ಲಿ ಕಾವ್ಯವನ್ನು ಹೊಸೆದಿದ್ದಾನೆ. ಒಟ್ಟಿನಲ್ಲಿ ಈ ಕಥೆಗಳಲ್ಲಿ ತತ್ವದ ಹಿನ್ನೆಲೆಯಲ್ಲೇ ಕಥಾ-ತಂತ್ರವು ಸಾಗುತ್ತದೆ.

ಕತೆ ಹೇಳುವ ಜೊತೆಯಲ್ಲಿ ಈ ಕಾವ್ಯದಲ್ಲಿ ಶಾಸ್ತ್ರದ ಕೆಲವು ವಿವರಗಳೂ ಅಲ್ಲಲ್ಲಿ ಬರುತ್ತವೆ. ಉದಾ - ಅಷ್ಟವಿಧ ವಿವಾಹ, ಕಾಮಶಾಸ್ತ್ರದಲ್ಲಿರುವ ಹದಿನೈದು ದಿನಗಳ ಕಾಮಕಲೆಗಳು, ಮತ್ತು ಅವುಗಳನ್ನು ಉದ್ಬೋಧಗೊಳಿಸುವ ಕ್ರಮ; ಕಳ್ಳತನದಿಂದಾಗಿ ಮುಂದೆ ಬರುವ ಜನ್ಮಗಳು - ಶಿಕ್ಷೆಗಳು; ಮುಂತಾದ ಅನೇಕ ವಿಷಯಗಳನ್ನೂ ನಿರೂಪಿಸಿದೆ, ಅಂತಹ ಕಡೆ ಕತೆ ಕುಂಟುವುದೂ ಇದೆ,

ಕನ್ನಡ ನಾಡಿನಲ್ಲಿ ರೂಢಿಯಲ್ಲಿದ್ದ ನಂಬಿಗೆಗಳು, ಲೋಕನೀತಿ ಮುಂತಾದುವು ಅಲ್ಲಲ್ಲಿ ಬರುತ್ತವೆ. ಇವು ಬಹುಮಟ್ಟಿಗೆ ಕಾವ್ಯದ ಅಂಗವಾಗಿಯೇ ಬರುತ್ತವೆ. ಉದಾ- ಎಣ್ಣೆ ಹಚ್ಚಿಕೊಂಡು ಹೊರಗೆ ಹೋಗಬಾರದು, ಹೋದರೆ ಬ್ರಹ್ಮರಾಕ್ಷಸನ ಪೀಡೆಯಿದೆ! ದೀಪವನ್ನು ಬಾಯಿಯ ಗಾಳಿಯಿಂದ ಊದಿ ನೊಂದಿಸಬಾರದು,

"ಮೂರು ಮಂಚವು, ಮೂರು ಕಂಬವು । ಮೂರು ಮಂದಿರ, ಮೂರು ಹೆಂಡಿರು,
ಮೂರು ವಟುಗಳು, ಮೂರು ವಿಧವೆಯರಿರಲಮಂಗಲವು ॥
ಯಾರ ಮನೆಯಲ್ಲಿರ್ದಡಾ ಮನೆ । ಧಾರಿಣಿಗೆ ಸಮನಾಗಿ ತೋರ್ಪುದು ।
ಬೇರೆ ಮಾತಿನ್ನೇಕೆ ಕೆಟ್ಟೆನೆನುತ್ತ ಹಲುಬಿದಳು ॥"

ಇಂತಹ ಹಲವಾರು ನಂಬಿಕೆಗಳ ವಿಚಾರವನ್ನು ಕಾಣಬಹುದು. ಹಾಗೆ ಉತ್ಪಾತ ಲಕ್ಷಣ, ನೀತಿ, ವ್ಯವಹಾರ, ಧರ್ಮ ಎಲ್ಲವೂ ಅಲ್ಲಲ್ಲಿ ಹಾಸುಹೊಕ್ಕಾಗಿ ಬರುತ್ತವೆ. ಇದು ಪತಿವ್ರತೆಯ ಮಹತ್ವವನ್ನು ಎತ್ತಿ ಹಿಡಿಯುವ ಕಥಾಸಂಕಲನ ಕಾವ್ಯವಾದರೂ, ಒಂದು ಪುಟ್ಟ ವಿಶ್ವಕೋಶದಂತೆ ಇದೆ. ಶ್ರೀ ಕೆ. ವೆಂಕಟರಂಗಾಚಾರ್ಯರು ಈ ಗ್ರಂಥವನ್ನು ಪ್ರಕಟಿಸಿ ಕನ್ನಡ ಸರಸ್ವತಿಯ ಉಡಿಯನ್ನು ತುಂಬಿದ್ದಾರೆ. ಅವರ ಪರಿಶ್ರಮ ಸಾರ್ಥಕವೆನ್ನಬೇಕು.

× × × ×

೮. ಕೆಲವು ಪುಸ್ತಿಕೆಗಳು

ಡಾ। ಎಚ್. ಸೀತಾರಾಮಾಚಾರ್ಯ, ಸುರತ್ಕಲ್ಲು.

ಶ್ರೀ ಕೆ. ವೆಂಕಟರಾಯಾಚಾರ್ಯರ – ಗಾತ್ರದಲ್ಲಿ ಚಿಕ್ಕದಾದರೂ ವೈಶಿಷ್ಟ್ಯವುಳ್ಳ-ಕೆಲವು ಪುಸ್ತಿಕೆಗಳನ್ನು ಸ್ಥೂಲವಾಗಿ, ೧ ಸ್ವ ರಚಿತ, ೨ ಸಂಪಾದಿತ ಎಂದು ವರ್ಗೀಕರಿಸಬಹುದು. ಇವುಗಳ 'ಹಕ್ಕಿನೋಟ' ಮಾತ್ರ ಪ್ರಕೃತ ಲೇಖನದ ಉದ್ದೇಶ.

೧. **ಸ್ವ ರಚಿತ:** (i) ಶ್ರೀ ಕುಡ್ಪಿ ವಾಸುದೇವ ಶೆಣೈಯವರ 'ಒಂದಾಣೆ ಮಾಲೆ'ಯಲ್ಲಿ, 'ಚಾಳುಕ್ಯ ವಿಕ್ರಮಾದಿತ್ಯ ಮತ್ತು ಶ್ರೀಕೃಷ್ಣ ದೇವರಾಯ' ಈ ಇಬ್ಬರು ಮಹಾಪುರುಷರ ಕಥೆಗಳನ್ನು ಸಂಗ್ರಹಿಸಿ ಕೊಡಲಾಗಿದೆ. ಶಾಸನಾಧಾರಗಳನ್ನೂ, ವಿದೇಶಿ ಪ್ರವಾಸಿಗಳ ಹೇಳಿಕೆಗಳ ಉಲ್ಲೇಖಗಳನ್ನೂ ಒಳಗೊಂಡ ಈ ವ್ಯಕ್ತಿಚಿತ್ರಗಳು ಓದುಗರಲ್ಲಿ ಆ ಕುರಿತು ಕುತೂಹಲ ಕೆರಳಿಸುವಲ್ಲಿ ಸಾರ್ಥಕವಾಗಿವೆ (ಇಸ್ವಿ 1958)

(ii) 1962ರಲ್ಲಿ ಪ್ರಕಟಗೊಂಡ 'ಶ್ರೀ ಚಿತ್ರಾಪುರ ಮಠಾಧೀಶರಾದ ಶ್ರೀ ವಿದ್ಯಾಪೂರ್ಣ ತೀರ್ಥ ಸ್ವಾಮಿಜಿಯವರು (1862–1962 ಇ)' ಎಂಬ ಪುಸ್ತಿಕೆ ಭಕ್ತಿಜ್ಞಾನ ವೈರಾಗ್ಯಗಳ ಸಾಕಾರ ಮೂರ್ತಿಯೆನಿಸಿದ ಆ ಯೋಗಿವರ್ಯರ ಸಂಕ್ಷಿಪ್ತ ಪರಿಚಯ ಮಾಡಿಸಿಕೊಡುತ್ತದೆ,

(iii) ವ್ಯಾಸಭಾಗವತದ ವ್ಯಾಖ್ಯಾನಕಾರ, ಶ್ರೀ ಪೇಜಾವರ ಮಠದ 'ಶ್ರೀ ವಿಜಯಧ್ವಜಾಚಾರ್ಯರ ಜೀವನ ಚರಿತ್ರೆ' ಗಾತ್ರದಲ್ಲಿ ಕಿರಿದಾದರೂ, ಶ್ರೀ ಮಧ್ವಾಚಾರ್ಯರ–ಶ್ರೀವಿಜಯಧ್ವಜರ ಕಾಲ, ವಿಜಯಧ್ವಜರ ಗ್ರಂಥಗಳು, ವಿಜಯಧ್ವಜರಿಗೂ ಚಿತ್ರಾಪುರ ಮಠಕ್ಕೂ ಇರುವ ಸಂಬಂಧ, ಚಿತ್ರಾಪುರದ ಶಿಲಾಶಾಸನಗಳು. ಪೇಜಾವರದ ತಾಮ್ರ ಶಾಸನ ಮೊದಲಾದ ಮೌಲಿಕ ವಿಚಾರಗಳನ್ನೊಳಗೊಂಡಿದೆ (1963 ಇ,)

(iv) 'ಶ್ರೀ ಕೃಷ್ಣನೂ ಕನಕದಾಸರೂ' ಎಂಬುದು 'ಯುಗಪುರುಷ'ದ ಪರ್ಯಾಯಾಂಕ'ದಿಂದ ಪುನರ್ಮುದ್ರಿತವಾಗಿ (1972), 'ವಿಜಯ ಸಾಹಿತ್ಯ ಮಾಲೆ'ಯಲ್ಲಿ ಪ್ರಕಟವಾಗಿದೆ. ಉಡುಪಿ ಶಬ್ದದ ವ್ಯುತ್ಪತ್ತಿ, ಕೃಷ್ಣನ ಮೂಲ ವಿಗ್ರಹದ ವಿವರಣ, ಕನಕದಾಸನಿಗೆ ಕೃಷ್ಣ ಸಮ್ಮುಖನಾದ ವಿಚಾರ, ಇತ್ಯಾದಿ ಐತಿಹಾಸಿಕ ಮಹತ್ವದ ಸಂಗತಿಗಳ ಕುರಿತು ಶ್ರೀ ಆಚಾರ್ಯರು ನಡೆಸಿದ ವಿವೇಚನೆಯಿಲ್ಲಿದೆ,

೨, **ಸಂಪಾದಿತ:** ಮಂಗಳೂರ 'ಒಂದಾಣೆ ಮಾಲೆ'ಯ 'ಸೂಕ್ತಿಗಳು', 'ಜಾನಪದ ಕತೆಗಳು', 'ಪಂಚತಂತ್ರದ ಕತೆಗಳು', ವೈ. ವೆಂಕಟರಮಣಯ್ಯನ 'ಜಯಸಿಂಹ ವಿಜಯ' ಮತ್ತು 'ಜಯಸಿಂಹ ಚರಿತೆ', ಅಪ್ಪಯ್ಯ ದೀಕ್ಷಿತರ 'ವೈರಾಗ್ಯ ಶತಕ',

ಹೊ. ವೆಂಕಟರಮಣಯ್ಯನ 'ಅಭಿನಯ ದೀತಾವಳಿ', ಪಾವಂಜೆ ಲಕ್ಷ್ಮೀನಾರಾಯಣಪ್ಪಯ್ಯನ ಮತ್ತು ಇತರರ 'ಹರಿದಾಸರ ಕೀರ್ತನೆ'ಗಳು (1–2 ಭಾಗ), ಇವುಗಳಲ್ಲಿ–ಗಹನ ವಿಚಾರಗಳನ್ನು ಸರಲವಾಗಿ ಸಂಗ್ರಹಿಸಿ ಶ್ರೀ ಆಚಾರ್ಯರು ಹೇಳಲು ಬಲ್ಲರೆಂದು ತೋರಿಸಿದ್ದಾರೆ. 'ವೈರಾಗ್ಯ ಶತಕ' ಅನುವಾದ ಓದುವಲ್ಲಿ ಸಂಸ್ಕೃತ ಭಾಷಾ ಪಾಂಡಿತ್ಯದಲ್ಲಿ ಶ್ರೀ ಆಚಾರ್ಯರ ಪರಿಚಯುವಾಗುತ್ತದೆ.

1966ರಿಂದ ಪ್ರತಿವರ್ಷ ವೆಂಬಂತೆ, ಶ್ರೀ ರಾಘವೇಂದ್ರರ ಪುಣ್ಯ ದಿನಾಚರಣೆಯುಂದು ಸುರತ್ಕಲ್ಲು 'ಗೆಳೆಯರ ಬಳಗ'ದ ಮುಂದಾಳುವಾಗಿ, ಹೊಸಬೆಟ್ಟು ಗ್ರಾಮ ಸಂಘದಲ್ಲಿ ಉಚಿತ ವಿತರಣೆ ಮಾಡಿದ 'ಶ್ರೀ ಹರಿಗುರು ಭಜನಾಮೃತ'ಗಳು ಮನೆಮನೆಗಳಲ್ಲಿ ಸ್ಮರಣೀಯುಗಳಾಗಿವೆ.

ಆಸುಪಾಸಿನ ಬರೆಹಗಾರರ ಕೃತಿಗಳನ್ನು ಪ್ರಕಾಶ ಪಡಿಸಿ ಪ್ರೋತ್ಸಾಹಿಸುವಲ್ಲಿ. ಎಲ್ಲೋ ಮೂಲೆಪಾಲಾದ ಹಿರಿಯರ ಕೃತಿಗಳನ್ನು ಸಂಪಾದಿಸಿ ಬೆಳಕಿಗೆ ತರುವಲ್ಲಿ 'ವಿಜಯ ಸಾಹಿತ್ಯ ಮಾಲೆ'ಯ ಶ್ರೀ ಆಚಾರ್ಯರ ಕಾರ್ಯ ಗಮನಾರ್ಹ! ಒಬ್ಬ ವ್ಯಕ್ತಿಯ ನಿರಂತರ ಶ್ರಮ–ಸಾಧನೆಗಳ ಕತೆಯನ್ನು ಅವು ಹೇಳಬಲ್ಲವು, ಇವರ ಸಂಪಾದಕತ್ವದ ಈ 'ವಿಜಯ ಸಾಹಿತ್ಯ ಮಾಲೆ' ಈಗ 18ರ ಹರೆಯಲ್ಲಿದೆ, ಇಲ್ಲಿ ಆ ಪುಸ್ತಿಕೆಗಳನ್ನು ಹೆಸರಿಸಬಹುದು.

ಲೇಖಕರು	ಪುಸ್ತಿಕೆ	ಪ್ರಕಟಿತ ವರ್ಷ
ಸುರೇಶ	ಕಂದರ ಕಣಜ	1960
ವಿವಿಧ ಲೇಖಕರು	ಉದ್ಯಾನ	1960
ಯು. ಎಲ್. ಆಚಾರ್ಯ	ಬದುಕು ಶಕ್ತಿ	1961
ಸಂಜೀವ ಸೋಮೇಶ್ವರ	ಸ್ವಾತಂತ್ರ್ಯ ಸಂಗ್ರಾಮ	1963
,, ,,	ವಿವೇಕಾನಂದ	1963
ಎಂ. ಎಸ್. ಆಚಾರ್	ಕಹಳೆ	1963
ಸುರತ್ಕಲ್ಲು ಸುಬ್ಬರಾವ್	ನೀತಿವಲ್ಲರಿ ಮತ್ತು ಕವಿತಾಮಂಜರಿ	1963
ವೈದ್ಯನಾಥ ಬ್ರಹ್ಮಚಾರಿ	ಸ್ತೋತ್ರ ಮಣಿಮಾಲಾ	1963
ಎಂ. ಎಸ್. ಆಚಾರ್	ಪುಟ್ಟ ಕತೆಗಳು	1964
,, ,,	ಶಕ್ತಿಸಂಜೀವನಿ	1964
ಮಯ್ಯಪಟ ವೆಂಕಟ್ರಮಣಯ್ಯ	ಅನಂತವ್ರತ ಕತೆ	1965
ವಿವಿಧ ಲೇಖಕರು	ಸಾಹಿತ್ಯಯೋಗಿ	1965
ಎಂ. ಎಸ್. ಆಚಾರ್	ಸೇವಾಭಾವ	1965
ಕೆ. ಪಿ ಆಚಾರ್	ಬ್ರಹ್ಮಶ್ರೀ ನಾರಾಯಣ ಗುರು	1968
ಪುಟ್ಟಿ ವಾಸುದೇವ ಪ್ರಭು	ಚಂದ್ರಹಾಸ ಚರಿತೆ	1969

ಎಂ. ಎಸ್. ಆಚಾರ್	ಧ್ರುವ ಭಕ್ತಿ	1973
ಗುರು ಸದಾನಂದ	ಕೀರ್ತನಾಮೃತ (೧ ಭಾಗ)	1974
ಸುರತ್ಕಲ್ಲು ಸುಬ್ಬ ರಾವ್	ಸುಮನಾಂಜಲಿ (ಯುಗಪುರುಷದಲ್ಲಿ)	1976
ರಾಮ ಐಗಳು	ಕೀರ್ತನ ತರಂಗಿಣಿ	1978
ಗುರು ಸದಾನಂದ	ಕೀರ್ತನಾಮೃತ (೨ ಭಾಗ)	1979
—	ದೇವೀ ಮಾಹಾತ್ಮ್ಯ (ಸಾರ)	1979

(ಶ್ರೀ ಆಚಾರ್ಯರ ಸಾಹಿತ್ಯಕೃಷಿಯ ಸತ್ಕೃತಿಗಳಾದ ಲೇಖನ ಸಂಕಲನಗಳು ನಾಲ್ಕು, ಸಂಪಾದಿತ ಕಾವ್ಯಗಳು ಮೂರು ಪ್ರತ್ಯೇಕ ಇವೆ.)

ಈ ಪುಸ್ತಿಕೆಗಳೆಲ್ಲವು 'ಹನಿಕೂಡಿ ಹಳ್ಳ'ವೆಂಬಂತೆ ಸಾಹಿತ್ಯವಾಹಿನಿಯನ್ನು ಸಮೃದ್ಧಿಗೊಳಿಸಿವೆ; 'ಕಣ ಕೂಡಿ ಕಣಜ'ವೆಂಬಂತೆ ನುಡಿಯ ಕಣಜವನ್ನು ಶ್ರೀಮಂತಗೊಳಿಸಿವೆ; ವಾಚಕರ ಮನವನ್ನು ಹರ್ಷಗೊಳಿಸಿವೆ.

ಹೀಗೆ ಹಲವು ಪುಸ್ತಕ-ಪುಸ್ತಿಕೆಗಳ ಮೂಲಕ ಸಾಹಿತ್ಯ ವಿಮರ್ಶನ-ಸಂಶೋಧನೆಗಳನ್ನು ನಡೆಯಿಸುತ್ತಾ ಬಂದಿರುವ ಶ್ರೀ ಆಚಾರ್ಯರ ಸಾಹಿತ್ಯ ಸಾಹಸ ಪ್ರಶಂಸನೀಯ!

× × ×

೯. ದಿಟ್ಟ ಬದುಕು

— ಶ್ರೀ ಎಂ. ವಾಸುದೇವ ರಾವ್, ಕುಳಾಯಿ (ಸುರತ್ಕಲ್ಲು)

ಬಾಲ್ಯ - ವಿದ್ಯಾಭ್ಯಾಸಗಳು : ಸುಮಾರು ಅಯ್ದು ದಶಕಗಳಿಗೂ ಹಿಂದಿನ ಮಾತು. ಕುಳಾಯಿ ಪ್ರಾಥಮಿಕ ಶಾಲೆಯ ವರ್ಷಾವಧಿ ಪರಿಶೀಲನೆಗೆ ಬಂದ ಶಿಕ್ಷಣ ಖಾತೆಯ ಅಧಿಕಾರಿಗಳು ಪೂರ್ವಾಹ್ನದ ಕೆಲಸ ಮುಗಿಸಿದ್ದರು. ಅಧ್ಯಾಪಕರೂ ಮಕ್ಕಳೂ ಊಟಕ್ಕಾಗಿ ಮನೆಗೆ ಮರಳುವುದರಲ್ಲಿದ್ದರು. ಆಗ 8-9 ವರ್ಷ ಹರೆಯದ ಎಳೆಯನೊಬ್ಬ ನೇರವಾಗಿ ಪರೀಕ್ಷಾಧಿಕಾರಿಗಳ ಬಳಿಸಾರಿ ಹೇಳಿದನು: "ನನಗೇಕೆ ಪ್ರಶ್ನೆ ಹಾಕಿಲ್ಲ ಸಾರ್? ನಾನೆಲ್ಲವನ್ನು ಓದಿ ಬಂದಿದ್ದೆ." ಈ ಬಾಲಕನ ಎದೆಗಾರಿಕೆ–ಹುಮ್ಮಸ್ಸುಗಳನ್ನು ಕಂಡು, ಅವರಿಗೆ - ಜತೆಗಿದ್ದ ಮೆನೇಜರರಿಗೆ - ಅಚ್ಚರಿಯೊಂದಿಗೆ ಮೆಚ್ಚುಗೆ ಒಡಮೂಡಿತು, ಮೆನೇಜರರು "ಮಗೂ, ಅಪರಾಹ್ಣ ಬಂದಾಗ ನಿನಗೆ ಅವರು ಪ್ರಶ್ನೆ ಕೇಳುತ್ತಾರೆ" ಎಂದು ಅವನನ್ನು ಸಮಾಧಾನಪಡಿಸಿದರು. ಚಿಕ್ಕಂದಿನಲ್ಲೆ ಚಿಗುರಿಕೊಂಡ ಈ ದಿಟ್ಟತನ, ಕಲಿಯುವ ಉತ್ಸಾಹ, ಸವಾಲು ಹಾಕುವ ನಿಲವು, ಇವನ್ನು ಕಾಲಕ್ರಮೇಣ ಪೋಷಿಸಿ ಅರಳಿಸುತ್ತಾ ಬಂದು, – ಜೀವನಕ್ಕೆ ಕೇವಲ ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದರೂ - ಇಂದು ನಾಡಿನ ಉದ್ದಗಲಗಳಲ್ಲಿ ಸಾಹಿತ್ಯ ವಿಮರ್ಶಕ, ಸಂಶೋಧಕರೆಂದು ಹೆಸರು ಗಳಿಸಿದ ಶ್ರೀ ಕೆ. ವೆಂಕಟರಾಯಾಚಾರ್ಯರೇ ಅಂದಿನ ಈ ಸವಾಲುಗಾರನಾದ ಕಿರಿಯ ಬಾಲಕ ನೆಂದರೆ, 'ಬೆಳೆಯು ಗುಣ ಮೊಳೆಯಲ್ಲೆ ಕಂಡಂತೆ' ಎನ್ನಬರುತ್ತದೆ.

ಶ್ರೀಯುತರ ಜೀವನ ಪರಿಸರದ ಸನಿಹದಲ್ಲೆ ಸುದೀರ್ಘ ಕಾಲವಿದ್ದ ಕಾರಣದಿಂದ, ಇವರ ಬದುಕು ರೂಪುಗೊಂಡ ಬಗೆಯನ್ನು ನಿಚ್ಚಳವಾಗಿ ಕಂಡವರಲ್ಲಿ ನಾನೊಬ್ಬ; ಅಷ್ಟೆ ಅಲ್ಲ, ಇವರ ಉದ್ಯೋಗ ಮತ್ತು ಸಾಹಿತ್ಯಾಸಕ್ತಿಗಳ ಮುನ್ನಡೆಯ ಕೆಲವು ಸಂದರ್ಭಗಳಲ್ಲಿ, ನಾನು ಪ್ರಚೋದಕನೆಂದು ಆದರಾಭಿಮಾನಗಳ ಹೊರೆಯನ್ನು ನನ್ನ ಮೇಲೆ ಇವರು ಹೇರಿದ್ದುಂಟು. ಈ ನೆಲೆಯಲ್ಲಿ 60ರ ಹರೆಯವನ್ನೇರಿದ ಇವರ ಬದುಕಿನ ಕೆಲವು ಬಗೆ ಗಳನ್ನು ನಾನು ಪ್ರಸ್ತಾಪಿಸುವುದು ಸಮಯೋಚಿತವದೆ.

ವೆಂಕಟರಾಯಾಚಾರ್ಯರು ಕುಳಾಯಿ ಗ್ರಾಮದಲ್ಲಿದ್ದ, ಕಾವಿನಕಲ್ಲು ಮಠದ ಮನೆ ತನಕ್ಕೆ ಸೇರಿದ್ದ ಶ್ರೀ ಲಕ್ಷ್ಮೀನಾರಾಯಣಾಚಾರ್ಯರ ಮತ್ತು ಸೌ। ಭಾಗೀರಥಿ ಅಮ್ಮನವರ ಚೊಚ್ಚಲ ಮಗನಾಗಿ ದಿನಾಂಕ 12-4-1919ರಲ್ಲಿ ಜನಿಸಿದರು. ಶಿಶು ಜನನವಾದ ಒಂದು ಪಕ್ಷದೊಳಗೆ ಅಸೌಖ್ಯದಿಂದಾಗಿ ತಾಯಿ ನಿಧನರಾದರು, ಹಸುಳೆಯಾಗಿರುವಾಗಲೆ

ಮಾತೃ ವಾತ್ಸಲ್ಯದಿಂದ ವಂಚಿತರಾದುದು ಇವರ ಮುಂದಿನ ಜೀವನದ ಮೊತ್ತಮೊದಲಿನ ದೊಡ್ಡ ಸವಾಲು. ಆದರೆ ಮಾತಾಮಹಿ ಸೌ। ಲಕ್ಷ್ಮಿಯಮ್ಮನವರ ಮುದ್ದಿನ ಆರೈಕೆ, ತಂದೆಯ ಮಮತೆಯ ಪೋಷಣೆಗಳು ಈ ಬಾಲಕನ ರಕ್ಷಾಕವಚಗಳಾದವು. ತಂದೆಯ ಎರಡನೆಯ ಹೆಂಡತಿ ಸೌ। ಜಲಜಾಕ್ಷಿ ಈ ಬಾಲಕನನ್ನು ಅಕ್ಕರೆಯಿಂದ ಕಂಡರು. ಮಗುವಿಗೆ ಕಷ್ಟತರ ಕಾಯಿಲೆಯೊಂದು ಬಲು ತೊಂದರೆಗೊಟ್ಟಿತು. ಪಣಂಬೂರ ತೇರು ಬೀದಿಯ ಶ್ರೀ ಕೃಷ್ಣ ಐತಾಳರ ಮಾಂತ್ರಿಕ ವಿಧಾನ, ಕಾರ್ಕಳದ ವೈದ್ಯರೊಬ್ಬರ ಔಷಧದಿಂದ ಆ ರೋಗ ಗುಣಮುಖವಾಗಿ, ಬಾಲಕನು ಇತರರಂತೆ ಚುರುಕಿನಿಂದ ಓಡಾಡಲು ಶಕ್ತನಾದನು.

ಈ ಬಾಲಕನ ಪ್ರಾಥಮಿಕ ವಿದ್ಯಾಭ್ಯಾಸ - ಆರಂಭದಲ್ಲಿ ಹೇಳಿದಂತೆ - ಕುಳಾಯಿ ಶಾಲೆಯಲ್ಲಿ ಒಂದೆರಡು ವರ್ಷ ಸಾಗಿತು. ಮತ್ತೆ, ಈತ ಇಡ್ಯ ವಿದ್ಯಾದಾಯಿನೀ ಶಾಲೆಯ ವಿದ್ಯಾರ್ಥಿಯಾದನು. ಶಾಲೆಗೆ ಮನೆಯಿಂದ ಒಂದು ಮೈಲು ದೂರ. ಒಮ್ಮೆ ಜಡಿಮಳೆ ಸುರಿಯುವಾಗ, ಮಧ್ಯಾಹ್ನದ ಊಟ ಮಾಡಿ ಶಾಲೆಗೆ ಮರಳುತ್ತಿರುವಾಗ, ಮಾರ್ಗದ ಬದಿಯ ನೀರು ತುಂಬಿದ ತೋಡಿಗೆ ಈ ಹುಡುಗ ಕಾಲು ಜಾರಿ ಬಿದ್ದನು. ನೀರಿನ ಹೊಯ್ಲಿಗೆ ಸಿಲುಕಿದಾಗ, ಈಜಲು ಬಾರದ ಬಾಲಕ ದಂಡೆಯ ಒಂದು ಗಿಡವನ್ನು ಆಧಾರವಾಗಿ ಹಿಡಿದನು. ಅಲ್ಲೆ ಇದಿರಲ್ಲಿದ್ದ ಅಂಗಡಿಯ ಸಾಹುಕಾರರು ಓಡಿ ಬಂದು ಕೈಹಿಡಿದೆತ್ತಿದಾಗ, ಬಾಲಕನು "ನಾನು ಈ ಗಿಡವನ್ನು ಹಿಡಿದಿರುವೆನು. ನೀರಲ್ಲಿ ಚಲಿಸುವ ನನ್ನ ಕೊಡೆಯನ್ನು ಮೊದಲು ಹಿಡಿಯಿರಿ" ಎಂದನಂತೆ. (ಅವರು ಮೊದಲು ಇವನನ್ನು ಮೇಲೆತ್ತಿದ್ದರು) ಆ ಮನೋಧೈರ್ಯ ಬಾಲಕನ ಪ್ರಾಯಕ್ಕೆ ಮೀರಿದುದು !

ಈ ಘಟನೆಯ ಪರಿಣಾಮವೆಂದರೆ, 'ಹುಡುಗ ದೂರದ ಶಾಲೆಗೆ ಹೋಗುವುದೆ ಬೇಡ'ವೆಂದು ಮನೆಯವರ ನಿರ್ಧಾರವಾಯಿತು. ಅದೇ ಇವನ ಮುಂದಿನ ವ್ಯಾಸಂಗ ಕಾರ್ಯಕ್ಕೆ 'ನಾಂದಿ'ಯಾದುದು ಒಂದು ಯೋಗಾಯೋಗ! ನೆರೆಯ ಚಿತ್ರಾಪುರ ಮಠದ (ಈಗ ವೃಂದಾವನಸ್ಥರಾದ) ಶ್ರೀ ವಿದ್ಯಾಪೂರ್ಣತೀರ್ಥರಲ್ಲಿ ಸಂಸ್ಕೃತಾಭ್ಯಾಸಕ್ಕೆ ಈತನನ್ನು ಹಿರಿಯರು ಹಚ್ಚಿದರು.

ಅಧ್ಯಯನಶೀಲರೂ, ಜ್ಞಾನಿಗಳೂ, ತಪೋನಿಷ್ಠರೂ ಆದ ಶ್ರೀ ಪಾದಂಗಳವರಲ್ಲಿ ಜ್ಞಾನಾರ್ಥಿಯಾಗಿ ಈತ ಬಂದುದು ಅಯಸ್ಕಾಂತದ ಬಳಿಗೆ ಕಿರುಸೂಜಿ ಬಂದಂತಾಯಿತು. ಅಲ್ಲಿ ಶ್ರೀ ಗುರುಗಳ ಹಾಗೂ ಶ್ರೀ ದುರ್ಗಾಂಬಿಕೆಯ ಕೈಂಕರ್ಯಗಳಲ್ಲಿ ಈತ ಅನೇಕಶಃ ಭಾಗವಹಿಸಿದ್ದನು, ಅಲ್ಲಿಯ ಶಿಲಾಶಾಸನಗಳು ಮುಂದೆ ಈತನ ಅಭ್ಯಾಸಕ್ಕೆ ಮೊದಲಾಗಿ ಸಿಕ್ಕುವು. ಅಲ್ಲಿಯ ಗ್ರಂಥಭಂಡಾರದ ಪುಸ್ತಕಗಳನ್ನು, ರಾಶಿಯಾಗಿದ್ದ ತಾಳೆಗರಿಯ ಹೊತ್ತಗೆಗಳನ್ನು ಈತ ಮಗುಚಿದನು. ಶ್ರೀ ಗುರುಗಳು ತಮ್ಮ ಸೋದರರೊಡನೆ ಆಗಾಗ ನಡೆಯಿಸುತ್ತಿದ್ದ ವೇದಾಂತ ಚರ್ಚೆಗಳನ್ನು ಏಕಾಗ್ರತೆಯಿಂದ ಈತ ಆಲಿಸುತ್ತಿದ್ದನು,

ನಾಲ್ಕಾರು ವರ್ಷ 'ಗುರುಕುಲ'ದ ಅನುಭವ, ತೀಕ್ಷ್ಣಮತಿಯುಳ್ಳ ಈತನನ್ನು ಕುರಿತು ಶ್ರೀಗಳ ಅನುಗ್ರಹ ದೃಷ್ಟಿ, ಶ್ರೀ ದುರ್ಗಾಂಬೆಯು ಕೃಪೆಗಳು ಈತನ ಭಾವೀ ಜೀವನದ 'ಶ್ರೀರಕ್ಷೆ'ಗಳಾದವು! ಅಲ್ಲಿದ್ದಾಗ, ಈತ ಮೈಸೂರಿನ 'ಪೂರ್ಣಬೋಧ' ಪತ್ರಿಕೆಗೆ ಕೆಲವು ಸ್ತುತಿಗಳ ಅನುವಾದಗಳನ್ನು ಕಳುಹಿಸಿ, ತನ್ನ ಲೇಖನಾಭ್ಯಾಸದ 'ಓ ನಾಮ'ವನ್ನು ಹಾಕಿದನು. ಈತ ಅಲ್ಲಿದ್ದಾಗ ಕಾಲು ಜಾರಿ ಬಿದ್ದುದರಿಂದಾಗಿ ಬಲಕಾಲಿಗೆ ತುಸು ಘಾಸಿಯಾದ ಕುರುಹು ಈಗಲೂ ಉಳಿದಿದೆ.

ಶಿಕ್ಷಣ ವೃತ್ತಿ: 1943ರ ಹೊತ್ತಿಗೆ ವೆಂಕಟರಾಯಾಚಾರ್ಯರು 24ರ ಹರೆಯದ ಯುವಕ. ನನ್ನಲ್ಲಿಗೊಮ್ಮೆ ಬಂದಾಗ, "ಇದಾಗಲೆ ಕಲಿತ ಸಂಸ್ಕೃತದ ಆಧಾರದಿಂದ ಸರಕಾರದ 'ಎಂಟ್ರ್ಯಾನ್ಸ್' ಪರೀಕ್ಷೆಗೆ ಅಭ್ಯಾಸ ಮಾಡಿದರೆ, ಉದ್ಯೋಗದ ದೃಷ್ಟಿಯಲ್ಲಿ ಲೇಸಾದೀತು" ಎಂದು ಸೂಚಿಸಿದೆನು. ಅಂತೆ, ಆ ಪರೀಕ್ಷೆಗೆ ಇವರು ಖಾಸಗಿಯಾಗಿ ಸೇರಿ ಉತ್ತೀರ್ಣರಾದರು. ಆದರಿಂದ 'ಪ್ರಾಥಮಿಕ ಶಾಲಾ ಶಿಕ್ಷಕ ತರಬೇತಿ ಶಾಲೆ'ಗೆ ಸೇರಿದರು (1944-46). "ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಕೂಡ ಪೂರೈಸದ ಈತ 'ಶಿಕ್ಷಕ ತರಬೇತಿ'ಯಲ್ಲಿ ಉತ್ತೀರ್ಣನಾಗುವುದಾದರೂ ಉಂಟೇ?" ಎಂದೊಬ್ಬರು - ಉಪಾಧ್ಯಾಯರು - ಉದ್ಗರಿಸಿದ್ದರಂತೆ! ಈ ಸವಾಲಿಗೆ ಉತ್ತರವೊ ಎಂಬಂತೆ, ಒಂದನೆಯ ದರ್ಜೆಯಿಂದ ತೊಡಗಿ ಐದ್ದನೆಯ ದರ್ಜೆಯ ತನಕ ಎಲ್ಲಾ ಪುಸ್ತಕಗಳನ್ನು ಓದಿ ಅರಗಿಸಿ, ಆ ಪರೀಕ್ಷೆಯಲ್ಲಿ ಮೊದಲ ಸಾರಿಯೆ ತೇರ್ಗಡೆಯಾದರು. ಮುಕ್ಕ ಅಗ್ಗಿದಕಟ್ಟೆಯ ಶಾಲೆ, ಕುಳಾಯಿ ಶಾಲೆಗಳಲ್ಲಿ 1946-52ರಲ್ಲಿ ಅಧ್ಯಾಪಕರಾಗಿದ್ದರು.

ಈಯೆಡೆಯಲ್ಲಿ ಕನ್ನಡ ವಿದ್ವಾನ್ ಪರೀಕ್ಷೆಯ 'ಪ್ರವೇಶಿಕೆ'ಗೆ ಖಾಸಗಿ ಅಭ್ಯಾಸ ಮಾಡಿದರು, ಅದಕ್ಕೆ ಬೇಕಾದ ಗ್ರಂಥಗಳ ಸಂಗ್ರಹ-ಅಭ್ಯಾಸಗಳ ವೇಳೆಯಲ್ಲಿ 5-6 ಮೈಲು ದೂರದ ಕೊಲ್ಯ ಕುಡೆ ಶಾಲೆಯಲ್ಲಿ ಸೇರಿದ್ದರು. ಅಲ್ಲಿ 'ಖಾಯಂ' ಆಗುವಂತಿದ್ದರೂ ಆ ದೂರ ಪ್ರಯಾಣಾದಿಗಳು ಈ ಪರೀಕ್ಷೆಗೆ ಧಕ್ಕೆಯಾಗಿವೆಯೆಂದು ಬಗೆದರು. ಅದಾಗ ವಿದ್ಯಾದಾಯಿನೀ ಶಾಲೆಯಲ್ಲಿ ತೆರವಿದ್ದ ಶಿಕ್ಷಕ ಸ್ಥಾನಕ್ಕೆ-ಅಲ್ಲಿಗೆ ರಾಜೀನಾಮೆ ಸಲ್ಲಿಸಿ-ಸೇರಿದರು; 1952ರಿಂದ 1976ರಲ್ಲಿ ನಿವೃತ್ತರಾಗುವ ತನಕ ಈ ಒಂದೆಡೆಯಲ್ಲೆ ಅಧ್ಯಾಪಕರಾದರು. ಜೀವನೋಪಾಯಕ್ಕಾಗಿ ಆರಿಸಿದ ಈ ಶಿಕ್ಷಕ ವೃತ್ತಿಯಲ್ಲಿ - ಅದೂ ಕಿರಿಯ ಪ್ರಾಥಮಿಕ ತರಗತಿಗಳ ತನಕ ಅಧ್ಯಾಪಕನಿರುವಂತೆ ಸೀಮಿತವಾಗಿಸಿಕೊಂಡು - ಸಾಗಿದರು. ಆಗಲೂ, ಈಗಲೂ ಇವರ ಪ್ರವೃತ್ತಿಯೆಲ್ಲ ಕನ್ನಡ ಸಾಹಿತ್ಯಕ ಲೇಖಕ, ವಿಮರ್ಶಕ, ಸಂಶೋಧಕನದು! ಪರೀಕ್ಷೆಗಳಿಗಾಗಿ ಅಧ್ಯಯನ ಮಾಡುವಾಗಲೂ ಅಷ್ಟೆ, ಅನಂತರವೂ ಅಷ್ಟೆ, ಸತತವಾದ ಬಹುಮುಖದ ಸಾಹಿತ್ಯಕ ವ್ಯಾಸಂಗದ ರೀತಿ - ಇವರ ವ್ಯಕ್ತಿತ್ವದಂತೆ - ಕೆಲವುಬಟ್ಟೆಗೆ ವಿಚಿತ್ರತರ! ಪರೀಕ್ಷೆಗೆ ಬೇಕಾದ ಪುಸ್ತಕಗಳು ಬೆಲೆಗೆ ಸಿಗುತ್ತಿಲ್ಲ; ಗ್ರಂಥಾಲಯಗಳಿಂದಲೊ, ಸಂಗ್ರಹಕಾರರಿಂದಲೊ ಎರವಲಾಗಿ ತಂದು, ಸ್ವಯಂ ಪ್ರತಿ ಮಾಡಿಕೊಳ್ಳುವುದರಲ್ಲಿ

ಇವರು ಹಿಂದುಳಿಯಲಿಲ್ಲ. ಪರೀಕ್ಷೆಗೆಂದು ಕಲಿಸುವವರೂ ಪ್ರತ್ಯೇಕ ಇರಲಿಲ್ಲವಾದರೂ, ಹಲವಾರು ಸಾಹಿತ್ಯಜ್ಞರ ಲೇಖನಗಳನ್ನು ಓದಿ, ಮುಖ್ಯಾಂಶ ಗುರುತಿಸಿ, ಆಯಾ ಪಾಠದ ವಿಚಾರವನ್ನು ಮುಂದಟ್ಟು ಮಾಡುವ ಕ್ರಮವೂ ಇವರಲ್ಲಿ ರೂಢಿಗೊಂಡಿತು. ಈ ಅಭ್ಯಾಸಗಳು ಇವರ ಇದುವರೆಗಿನ ವೈವಿಧ್ಯಪೂರ್ಣ ಲೇಖನ ರಚನೆಗೆ ತಳಪಾಯಗಳಾಗಿವೆ!

ಸಾಂಸಾರಿಕ ಜೀವನದಲ್ಲಿ: ಇವರದೊಂದು ವಿಲಕ್ಷಣ ರೀತಿ - ಸವಾಲಾಗಿ ಪರಿಣಮಿಸಿದ್ದೊಂದು ಉತ್ಕಟ ಪ್ರಸಂಗ! 1944–49ರ ಅವಧಿಯ ಇವರ ಗಾರ್ಹಸ್ಥ್ಯ ಜೀವನ ಬಹುತೇಕ ಸರ್ವಸಾಮಾನ್ಯವಿದ್ದರೂ, ಆಗಾಗ ಏರುಪೇರುಗಳು–ದುಡುಕು ಸಿಡುಕುಗಳು ಇಲ್ಲದಿರಲಿಲ್ಲ. ಇವರಿಗೆ ಧರ್ಮಪತ್ನಿಯಲ್ಲಿ (ಸೌ। ನಾರೀಮಣಿಯಲ್ಲಿ) ಮೂವರು ಗಂಡುಮಕ್ಕಳು ಜನಿಸಿದರು. ದುರದೃಷ್ಟವಶಾತ್ ಕೌಟುಂಬಿಕ ವೈಷಮ್ಯ ವ್ಯಾಜ್ಯಗಳ ಸರಣಿಗೆಡೆಯಾಯಿತು. 7-8 ವರ್ಷಗಳಲ್ಲಿ ಕೋರ್ಟುಗಳ ಮೆಟ್ಟಲೇರಿ ಇಳಿಯುವ ಆ ಶ್ರಮವಾದರೂ ಶ್ರೀಸಾಮಾನ್ಯನನ್ನು ಕಂಗೆಡಿಸುವಂತಹದು. ಆದರೆ, ಎಲ್ಲ ಬಗೆಯಿಂದಲೂ ತನಗೆ ಪರಿಸ್ಥಿತಿ ಪ್ರತಿಕೂಲವಾದಾಗಲೂ, ಇವರು ಧೃತಿಗೆಡಲಿಲ್ಲ; ಆಸ್ತಿ ಮನೆಗಳಿಂದ ಇವರು ವಿರಹಿತರಾದರು! (1958). ಈ ಅವಧಿಯಲ್ಲೂ - ಗಡಿಬಿಡಿಯಲ್ಲೂ - ಸಾಹಿತ್ಯಾಸಕ್ತಿ ಕಾರ್ಯವನ್ನು ಇವರು ಮುನ್ನಡೆಯಿಸುತ್ತಲಿದ್ದರು. ಒಂದೆರಡು ವರ್ಷ ಬಂಧುಮಿತ್ರರಲ್ಲಿ ಊಟಕ್ಕೆಡೆಮಾಡಿದರೂ, ಆದರಿಂದ ಸ್ವಧರ್ಮೋನ್ನತಿಗೆ ತೊಂದರೆಯಾದೀತೆಂದು, 1960ರಿಂದ ಇದುವರೆಗೆ ವಿದ್ಯಾದಾಯಿನೀ ಶಾಲೆಯ ವಿದ್ಯಾರ್ಥಿ ವಸತಿಯಲ್ಲಿ ಇವರ ಏಕಾಕಿ ಜೀವನ ಸಾಗುತ್ತಿದೆ. ಅದೇ ಇವರ ಅಧ್ಯಯನ ಮಂದಿರ, ಸಂಶೋಧನ ಪೀಠ, ವಿವಿಧ ಪುಸ್ತಕ-ಹಸ್ತಪ್ರತಿಗಳ ಸಂಗ್ರಹಾಲಯ, ಅದೇ ಇವರು ಪ್ರಕಟಿಸಿದ ಪುಸ್ತಕಗಳ ಉಗ್ರಾಣ! 'ವಿಜಯ ಸಾಹಿತ್ಯಮಾಲೆ', 'ಪ್ರಾಚೀನ ವಸ್ತು ಸಂಗ್ರಹಾಲಯ'ವೆಂಬ ತೂಗು ಫಲಕಗಳು ಅಲ್ಲಿ ಇವರ ಕಾರ್ಯ-ನಿವಾಸಗಳ ಸೂಚಿಯಾಗಿವೆ!

ಪತ್ನೀ–ಪುತ್ರರನ್ನು ಪಡೆದರೂ, ವಿಧಿಯಿಂದಾಗಿ ಬಲುಬೇಗನೆ ವಿರಾಗವನ್ನು ತಾಳಿ, ಸಂಸಾರ ಬಂಧನದಿಂದ ಬಹುತೇಕ ದೂರವಿರುವಂತಾದುದೂ; ಅದೇ ಮೇರೆಗೆ ವಾಙ್ಮಯಚಕ್ರ ಬಂಧಕ್ಕೊಳಪಡುವಂತಾದುದೂ ಇವರ ದಿಟ್ಟ ಬದುಕಿನ ವೈಚಿತ್ರ್ಯವೊಂದು! ವಿದ್ಯಾಭ್ಯಾಸ, ಲೇಖನ ವ್ಯವಸಾಯಗಳಿಗಾಗಿ ಖರೀದಿಸಿದ ಗ್ರಂಥಗಳೇ ಇವರ ಸಂಸಾರವಾಗಿದೆ. ಜ್ಞಾನಾನಂದ, ವಿಮರ್ಶಾನಂದ, ಸಂಶೋಧನಾನಂದಗಳನ್ನು ಪಡೆಯುವುದೇ ಇವರ ಹವ್ಯಾಸಗಳಾಗಿವೆ. "ತನ್ನಲ್ಲಿರುವ ಕೆಲವು ಪುಸ್ತಕಗಳು ಇತರ ಸಾಹಿತ್ಯಕರಲ್ಲಿ ವ್ಯಕ್ತಿಶಃ ಇರದು" ಎಂದು ಇವರಿಗೊಂದು ಹೆಮ್ಮೆ! "ಆಗಾಗ ಕೆಲವರು ಅಭ್ಯಾಸಿಗಳು ಅವನ್ನು ಕಾಣಲು ಬರುತ್ತಾರೆ" ಎಂಬುದು ಇವರಿಗೊಂದು ಆನಂದ!

ಲೇಖನ ಪ್ರವೃತ್ತಿ: 1942ರಲ್ಲಿ, ಧಾರವಾಡದ 'ಜಯ ಕರ್ನಾಟಕ' ಮಾಸಪತ್ರಿಕೆಯಲ್ಲಿ ಪ್ರಕಟವಾದ 'ವಾಲ್ಮೀಕಿ ರಾಮಾಯಣದ ಒಂದು ಜಿಜ್ಞಾಸೆ' ಯೆಂಬುದು

ಇವರ ಮೊದಲ ಲೇಖನ. ಅಂದಿನಿಂದ ಮೊದಲ್ಗೊಂಡು ಶ್ರೀ ಆಚಾರ್ಯರ ಲೇಖನಯಜ್ಞ ಸಾಗುತ್ತಾ ಬಂದಿದೆ. ಸಾಹಿತ್ಯಕ ವಿಮರ್ಶೆ, ಕಾವ್ಯಗಳ ಮೌಲಿಕ ವಿಚಾರ, ಕಾವ್ಯ-ಶಾಸನಗಳಲ್ಲಿನ ರಾಜರ ಮತ್ತು ಕವಿಗಳ ಕಾಲಾದಿವಿಷಯಗಳ ಚರ್ಚೆ, ವಾದಾತ್ಮಕ ಶಬ್ದಾರ್ಥಗಳ ವಿವರಣೆ, ಮೊದಲಾದವುಗಳಿಗೆ ಸಂಬಂಧಿಸಿ, ಸಾಧಾರಣ 5 ನೂರಕ್ಕೂ ಮಿಕ್ಕಿ ಶ್ರೀಯುತರ ಲೇಖನಗಳು ನಾಡಿನ ಬೇರೆ ಬೇರೆ ದಿನ-ವಾರ-ಮಾಸಪತ್ರಿಕೆಗಳಲ್ಲಿ, ನಿಯತಕಾಲಿಕಗಳಲ್ಲಿ ಪ್ರಕಟವಾಗಿವೆ. ನಾಡಿನ ಹತ್ತಾರು ವಿದ್ವಾಂಸರ ಸಂಭಾವನ ಗ್ರಂಥ-ಸ್ಮಾರಕ ಗ್ರಂಥಗಳಲ್ಲಿ ಪ್ರಕಾಶಗೊಂಡ ಇವರ ಲೇಖನಗಳು ಸುಪ್ರೌಢಿಮೆಯಿಂದ ಕೂಡಿವೆ.

ಸಾಹಿತ್ಯರಂಗದ ಆಸಕ್ತಿಯನ್ನು ವಿಸ್ತರಿಸಲು ಗ್ರಂಥಾಭ್ಯಾಸದ ಜತೆಗೆ ನಾಡಿನ ಪ್ರಗಲ್ಭ ವಿದ್ವಾಂಸರಲ್ಲಿ ಮುಖತಃ ಹಾಗೂ ಪತ್ರವ್ಯವಹಾರ ಮೂಲಕ ಸಂಪರ್ಕವಿರಿಸಿ, ವಿಚಾರವಿನಿಮಯ ಮಾಡುವುದನ್ನು ಹಲಗಾಲದಲ್ಲಿ ಇವರು ಕೈಗೊಂಡಿದ್ದಾರೆ: ಶ್ರೀಗಳಾದ ಎ. ಆರ್. ಕೃ; ಡಿ. ವಿ. ಜಿ; ಗೋವಿಂದ ಪೈ; ಡಿ. ಎಲ್. ಎನ್; ಕಡೆಂಗೋಡ್ಲು; ಮಾಸ್ತಿ; ಶಿವಮೂರ್ತಿ ಶಾಸ್ತ್ರಿ; ಶಂ. ಬಾ. ಜೋಶಿ; ಜಿ. ಎಸ್. ಗಾಯಿ; ಪಿ. ಕೆ. ಗೋಡೆ; ಆರ್. ಎಸ್. ಪಂಚಮುಖಿ; ಪಿ. ಬಿ. ದೇಸಾಯಿ ಮೊದಲಾದವರಲ್ಲಿ ಇವರು ಸಂಪರ್ಕವಿರಿಸಿದ್ದರು. 1936 ರ ಸಮಯ, ನೆರೆಯ ಚಿತ್ರಾಪುರ ದೇವಾಲಯದ 3 ಶಾಸನಗಳ ಕಾಗದ ಪ್ರತಿ ದೊರಕಿದಾಗ, ಆ ವಿಚಾರಕ್ಕೆ ಮಂಜೇಶ್ವರದಲ್ಲಿದ್ದ ಶ್ರೀ ಗೋವಿಂದ ಪೈಯವರಲ್ಲಿಗೆ ಹೋಗಿ. ಸಾಕಷ್ಟು ಮಾರ್ಗದರ್ಶನ ಪಡೆದರು. ಧೀಮಂತ ಸಂಶೋಧಕರಾದ ಶ್ರೀ ಪೈಗಳವರ ಮೊದಲ ಭೇಟಿಯಲ್ಲಿ, ಸಂಶೋಧನೆಯ ಪಥದಲ್ಲಿ ತನ್ನದೇ ಒಂದು ಕ್ರಮದಲ್ಲಿ ಸಾಗಲು ಇವರಿಗೆ ಸ್ಫೂರ್ತಿಯೊದಗಿತು. ಅವರಿಬ್ಬರ ಸಾಹಿತ್ಯಕ ಬಾಂಧವ್ಯ ದೃಢವಾಯಿತು. ಶ್ರೀ ಪೈಯವರಲ್ಲಿದ್ದ ಹಲವು ಆಧಾರ ಗ್ರಂಥಗಳು, ಸಂಶೋಧನ ವಿಮರ್ಶನ ಲೇಖನಗಳು ಓದಲಿಕ್ಕಾಗಿ ಇವರಿಗೆ ದೊರೆತವು; ಇವರಲ್ಲಿದ್ದ ಕೆಲವು ಶಾಸನ-ಲೇಖನಗಳ ಸಂಕಲನಗಳು ಶ್ರೀ ಪೈಯವರಿಗೆ ಅನುವಾದುವು, ಶ್ರೀ ಪೈಯವರ ಕೆಲವು ಲೇಖನಗಳ ಬಗೆಗೆ ಆಚಾರ್ಯರು ಪರಾಮರ್ಶಿಸಿ ಬರೆದರೂ, ಅವರೊಳಗಿನ ಆತ್ಮೀಯತೆಗೆ-ಗೌರವಕ್ಕೆ ಏನೂ ಕುಂದಾಗಿಲ್ಲ!

ಶ್ರೀ ಆಚಾರ್ಯರ ಲೇಖನಗಳಲ್ಲಿ ಕೆಲವು ಇತರ ಭಾಷೆಗಳಲ್ಲಿ ಅನುವಾದಿತಗಳಾಗಿವೆ: ಡಾ. ಪಿ. ಕೆ. ಗೋಡೆ (ಪುಣೆ) ಅವರ ಸಂಭಾವನ ಗ್ರಂಥ; ಡಾ. ರಘುವೀರ (ಡಿಲ್ಲಿ), ಅವರ ಸ್ಮಾರಕ ಗ್ರಂಥ ಮತ್ತು 'ಪೂನಾ ಓರಿಯಂಟಲಿಸ್ಟ್ (ಪತ್ರಿಕೆ)ಗಳಲ್ಲಿ ಸಂಸ್ಕೃತ ಭಾಷಾ ಲೇಖಗಳು ಪ್ರಕಟವಾಗಿವೆ. ಡಾ. ಎಸ್. ಶ್ರೀಕಂಠ ಶಾಸ್ತ್ರಿಗಳ ಸಂಭಾವನ ಗ್ರಂಥ; ಡಾ. ಪಿ. ಬಿ. ದೇಸಾಯಿಯವರ ಸಂಭಾವನ ಗ್ರಂಥ; ಇತ್ತೀಚೆಗೆ ಉಡುಪಿಯಲ್ಲಿ ಡಾ. ಪಿ. ಗುರುರಾಜ ಭಟ್ಟರಿಂದ ಸ್ಥಾಪಿತವಾದ 'ಭಾರತೀಯ ಅಧ್ಯಯ ಸಂಸ್ಥೆ'ಯ ಪ್ರಥಮ ಸಂಚಿಕೆ (1978) ಗಳಲ್ಲಿ ಇವರ ಆಂಗ್ಲ ಭಾಷಾ ಲೇಖಗಳು ಇವೆ. 'ದ್ವೈತಸಿದ್ಧಾಂತ ಕೇಸರಿ, (ಪೂನಾ)

ಯೆಂಬ ಪತ್ರಿಕೆಯಲ್ಲಿ ಇವರೊಂದು ಲೇಖ ಮರಾಠಿಗೆ ಅನುವಾದಿಸಲ್ಪಟ್ಟಿದೆ. ಕುರುಕ್ಷೇತ್ರದ ವಿಶ್ವವಿದ್ಯಾಲಯದ 'ಪ್ರಾಚೀ' ಪತ್ರಿಕೆಯಲ್ಲಿ ಆಚಾರ್ಯರ - ಲೇಖಗಳ ಸಾರಸೂಚಿಯೂ ಬಂದಿದೆ.

ಶ್ರೀಯುತರ ಆರಂಭದ ಲೇಖಗಳಲ್ಲಿ ಗಡುಚಾದ ವ್ಯಾಕರಣವಿದ್ದರೂ, ಕ್ರಮೇಣ ನೇರ್ಪುಗೊಂಡು, ವಿಶುದ್ಧ ಶೈಲಿಯಾದುದು ಗಮನಾರ್ಹ. ಆರಂಭದಿಂದಲೂ ಇವರೊಂದು ನಿಷ್ಠೆಯಿಂದ ಲೇಖನಕ್ಕೆ ತೊಡಗಿದರೆಂಬುದು ಗೋಚರವಾಗುತ್ತಿದೆ. ಯಾವುದೇ-ಯಾರದೇ-ಒಂದು ವಿಶೇಷ ಲೇಖನ ಇವರ ಗಮನವನ್ನು ಸೆಳೆದರೆ ಸಾಕು; ಆ ಬಗೆಗೆ ಮತ್ತೆ ವಿವೇಚಿಸಿ ಆಧಾರ ಗ್ರಂಥಗಳನ್ನು ಅಭ್ಯಸಿಸುವ ಕ್ರಮ ಇವರದು.

ಬರೆಹವನ್ನು ತನ್ನದೊಂದು ಕ್ರಮದಲ್ಲಿ ಒರೆ ಹಚ್ಚಿ, ಒಳ ಹೊರ ಬಗೆಗಳನ್ನು ಆಳವಾಗಿ ನೋಡಿ, ಖಂಡಿಸಲಿಕ್ಕೆ ಅಥವಾ ತನ್ನ ಅಭಿಮತ ಮಂಡಿಸಲಿಕ್ಕೆ ಹಿಂದುಮುಂದು ನೋಡುವವರಲ್ಲ, ತನ್ನ ಹೆಸರಿಂದ, 'ಜಯಂತಿ', 'ತಿರುಮಣಿದೀಪ', 'ಆಚಾರ್ಯ ಪುತ್ರ', ಎಂಬ ಕಾವ್ಯನಾಮದಿಂದ ಒಮ್ಮೊಮ್ಮೆ ಇವರು ಬರೆದುದು ಪ್ರಕಟವಾದರೆ; ಅದನ್ನು ಹಲವಾರು ಬಗೆಯಿಂದ ಪುನಃ ವಿಮರ್ಶಿಸಿ ಪುನಃ ಪ್ರಕಟಿಸುವುದೂ ಇವರ ಇನ್ನೊಂದು ಪರಿಪಾಠ, ಇವರ ಬರಹಗಳಲ್ಲಿ ಕಾಲ ಪಾಲಂ ಈ ರೀತಿಯವು, ಇವರ ತರ್ಕಶುದ್ಧಿ, ತೀಕ್ಷ್ಣ ವಿಶ್ಲೇಷಣ ಕ್ರಮ, ವ್ಯಾಪಕವಾದ ಗ್ರಂಥಾವಲೋಕನಗಳನ್ನು ವಿದ್ವಾಂಸರನೇಕರು ಮೆಚ್ಚಿದ್ದಾರೆ. ಇವರ ಸಿದ್ಧಾಂತಗಳಲ್ಲಿ ಕೆಲವನ್ನು ಒಪ್ಪಿದವರು ಕೆಲವರುಂಟು, (ಉದಾ: ಸತಿಯ ಪುತ್ರ, ಯಕ್ಷಗಾನ, ಶ್ರೀ ಮಧ್ವಾಚಾರ್ಯರ ಕಾಲ, 'ಕಪ್ರೋತ' ಶಬ್ದ ವಿಚಾರ, 'ಗೆ' ಪ್ರತ್ಯಯ ವಿಚಾರ, ವೃಷಲ ಶಬ್ದಾರ್ಥ, ಉಡುಪಿಯ ಶ್ರೀ ಕೃಷ್ಣ ಮೊದಲಾದುವು). "ಕೆಲವರು ಹಿರಿಯರಾದರೂ ತನ್ನ ಅಭಿಮತಗಳಿಗೆ ಸಮ್ಮತಿಸಿರುವರೆಂಬುದೇ ತನಗೊಂದು ಸಂತೋಷವನ್ನುಂಟುಮಾಡಿದೆ"ಯೆನ್ನುತ್ತಾರೆ, ಆಚಾರ್ಯರು. ಹೊಸ ವಿಚಾರದ ಸಂಶೋಧನೆಯಲ್ಲಿ ಆಚಾರ್ಯರ ದೃಷ್ಟಿ ಈಗಲೂ ಹರಿಯುತ್ತಿದೆ. 'ಗಾಥಾಸಪ್ತಶತಿ'ಯಲ್ಲಿ ಕನ್ನಡ ನುಡಿಗಳು ಇವೆಯೆಂದು ಶ್ರೀ ಗೋವಿಂದ ಪೈ ಬರೆದರು (1928 ಉದಯಭಾರತ). ಅದನ್ನು ಖಂಡಿಸಿದ ಲೇಖ ಡಾ. ಸಾ. ಶಿ. ಮರುಳಯ್ಯನವರದು ಬಂದಿದೆ. (1978 ನಂದನವನ), ಆದರೆ ಪ್ರಾಕೃತ ಭಾಷೆಯಲ್ಲಿರುವ ನುಡಿತಗಳು ಕನ್ನಡವವೆಂದು ಆಚಾರ್ಯರು ಸಾಧಿಸಿದ್ದಾರೆ, (1979-ಬೆಂಗಳೂರ 'ಸಾಧನೆ' ತ್ರೈಮಾಸಿಕ), 'ಸೀನಾರ್ಗೆ'ಯೆಂಬಲ್ಲಿ'ಗೆ' ಪ್ರತ್ಯಯ ಕನ್ನಡದ್ದೆಂದು ವಿಸ್ತಾರವಾದ ಆಚಾರ್ಯರ ಲೇಖ ಸದ್ಯ: ಪ್ರಕಟವಾಗಲಿದೆ (ಡಾ. ಶಂ. ಬಾ. ಜೋಶಿ ಸಂ. ಗ್ರಂಥ). 'ಮಂಜುನಾಥ'ನೆಂಬ ಹೆಸರು ಹೇಗೆ ಬಂತೆಂದು ಬರೆಯಲು ಆಚಾರ್ಯರು ಆಧಾರಗಳನ್ನು ಸಂಕಲಿಸುತ್ತಿದ್ದಾರೆ. ಒಟ್ಟಿನಲ್ಲಿ ಆಚಾರ್ಯರು ಕನ್ನಡ ಸಾಹಿತ್ಯ ರಂಗದಲ್ಲಿ ಸುರತ್ಕಲ್ಲಿಗೆ ಚಿರಂತನವಾದ ಹೆಸರನ್ನು-ಸ್ಥಾನವನ್ನು-ಕೀರ್ತಿಯನ್ನು ಒದವಿಸಿದ್ದಾರೆ, ತನ್ನ 36 ವರ್ಷಗಳ ಸಾಧನೆಯಿಂದಾಗಿ.

ಪ್ರಕಟಿತ ಪುಸ್ತಕಗಳು। 1955ರಲ್ಲಿ ಇವರ 'ಸಂಶೋಧನಾತ್ಮಕ ಲೇಖನಗಳು' ಎಂಬ ಸಂಗ್ರಹಕ್ಕೆ (ಸಾಹಿತ್ಯದ ಹಿನ್ನೆಲೆಯೆಂಬ ಹೆಸರಲ್ಲಿ ಹುಬ್ಬಳ್ಳಿಯ ಸಾಹಿತ್ಯ ಭಂಡಾರದಿಂದ ಪ್ರಕಟಿತ ಕೃತಿಗೆ) ಮದ್ರಾಸ್ ಸರಕಾರದಿಂದ ಸಂಭಾವನೆ ದೊರಕಿತು. ಇದೇ ಇವರಿಗೆ ದೊರೆತ ಮೊದಲ ಬಹುಮಾನ. ಅನಂತರ, "ಜನರ ವಿವಿಧ ಸಾಹಿತ್ಯಾಭಿರುಚಿಯನ್ನು ವಿಕಾಸಗೊಳಿಸುವಂತಹ ಸಣ್ಣ ದೊಡ್ಡ-ಹಳೆಯ ಹೊಸ-ಪುಸ್ತಕಗಳ ಪ್ರಕಟನೆ"ಗೆ ಸುರತ್ಕಲ್ಲಿನಲ್ಲಿ 'ವಿಜಯ ಸಾಹಿತ್ಯಮಾಲೆ'ಯನ್ನು ಇವರು ಪ್ರಾರಂಭಿಸಿದರು. ಇದುತನಕ ಅಚ್ಚಾಗದೆ, ತಾಳೆಗರಿಯಲ್ಲಿ ಬರೆದು ಮೂಲೆಗುಂಪಾದ ಕೆಲವು ಪ್ರಾಚೀನ ಕೃತಿಗಳನ್ನು ಈ ಮೂಲಕ ಪ್ರಕಟಿಸುವ ಸಾಹಸಕಾರ್ಯಕ್ಕೆಳಸಿದರು.

ಈ ಸಾಹಸದಲ್ಲಿ ಇವರು ತೋರಿದ ಕಾರ್ಯದಕ್ಷತೆ, ವಿಶ್ವಾಸಿ-ಅಭಿಮಾನಿಗಳ ಮನವೊಲಿಸಿ ನೆರವು ಪಡೆದ ವಿಧಾನ. ಇದಿರಿಸಿದ ಕಷ್ಟಗಳನ್ನು ಹರಿಸಿದ ರೀತಿಗಳು ಇವರ ಕಾರ್ಯನಿಷ್ಠೆಗೆ ಸಾಕ್ಷಿ! ನಾರಾಯಣ ಕವಿಯ 'ಉತ್ತರ ರಾಮಕಥೆ', ಶೃಂಗೇರಿಯ ಶ್ರೀರಾಮಚಂದ್ರ ಗುರು ಶಿಷ್ಯನ (ಕವಿರಾಜ ಕಂಠೀರವನ) 'ಆದಿತ್ಯಪುರಾಣ', ಕೆಳದಿಯ ೧ನೆ ಬಸಪ್ಪನ ಮಂತ್ರೀಶ 'ಶರಜಾನಾಗಪ್ಪಯ್ಯ'ನ 'ಶುಕಸಪ್ತತಿ' (ಅರೆವಾಸಿ) ಇವು 'ವಿಜಯ ಸಾಹಿತ್ಯಮಾಲೆ'ಯಲ್ಲಿ ಅಚ್ಚಾಗಿ, ಕನ್ನಡ ವಾಚಕರ ಕೈಸೇರಿವೆ. ಇದರ ಕೀರ್ತಿ ಶ್ರೀ ಆಚಾರ್ಯರಿಗೆ ಸೇರುತ್ತದೆ. [ಆದಿತ್ಯ ಪುರಾಣದ ೧ನೆ ಸಂಪುಟಕ್ಕೆ ರಾಜ್ಯದ ಸಾಹಿತ್ಯ ಅಕಾಡೆಮಿಯ ಬಹುಮಾನ ಬಂದಿದೆ. 'ಸಾಹಿತ್ಯ ಹಾಗೂ ಸಂಶೋಧನೆ'ಯೆಂಬುದಕ್ಕೆ ದೇವರಾಜ ಬಹದೂರ್ ನಿಧಿಯ ಪುರಸ್ಕಾರ ಸಿಕ್ಕಿದೆ], 'ಸಾಹಿತ್ಯ ಸಂಶೋಧನೆ'ಯೆಂಬುದು ಬೆಂಗಳೂರ 'ಮಯೂರ ಪ್ರಕಾಶನ'ದಲ್ಲಿ ಪ್ರಕಟಿತ; 'ಸಾಹಿತ್ಯದ ನೋಟಗಳು' ಎಂಬ ಸಂಕಲನ ಶಿವಮೊಗ್ಗದ 'ತಮಸೋಮಾ' ಪ್ರಕಟನಾಲಯದಲ್ಲಿ ಪ್ರಕಾಶಿತ. ಇನ್ನೂ ಕೆಲವು ಹಸ್ತಪ್ರತಿಗಳು, ಲೇಖನ ಸಂಕಲನಗಳು ಅಚ್ಚುಕೂಟಕ್ಕೆ ಸಾಗಲು ಸಿದ್ಧವಾಗಿವೆ.

ಮಂಗಳೂರ 'ಒಂದಾಣೆ ಮಾಲೆ'ಯಲ್ಲಿ (ಶ್ರೀ ಕುಡ್ಪಿ ವಾಸುದೇವ ಶೆಣೈಯವರ ಪ್ರಕಟನೆಯಲ್ಲಿ) ಹಲವು ಪುಸ್ತಿಕೆಗಳು ಇವರಿಂದ ಬೆಳಕು ಕಂಡಿವೆ. ಬೆಂಗಳೂರ ವಿಶ್ವವಿದ್ಯಾಲಯದ 'ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ'ಯಲ್ಲಿಯೂ ಇವರದೊಂದು ಲೇಖನವಿದೆ. ಸುರತ್ಕಲ್ಲ 'ಗೆಳೆಯರ ಬಳಗ'ದವರು ಈಗ 10 ವರ್ಷಗಳಲ್ಲಿ 'ಶ್ರೀ ರಾಘವೇಂದ್ರ ಪುಣ್ಯದಿನಾಚರಣೆ'ಯ ಸ್ಮರಣಾರ್ಥ ಹಂಚಿದ 'ಪದ್ಯಾವಲಿ ಪುಸ್ತಿಕೆಗಳು' ಇವರಿಂದಲೆ ಸಂಪಾದಿತಗಳು. 'ಯುಗಪುರುಷ (ಕಿನ್ನಿಗೋಳಿ)' ಪ್ರಕಟನಾಲಯದಲ್ಲಿ ಶ್ರೀ ಸುರತ್ಕಲ್ಲು ಸುಬ್ಬರಾಯರ 'ಸುಮಾಂಜಲಿ' ಇವರಿಂದಲೆ ಸಂಘಟಿತ!

"ಮುದ್ದಣ"ನ ಶ್ರೀ ರಾಮಾಶ್ವಮೇಧದ ಕನ್ನಡ ಅನುವಾದವು ಬೆಂಗಳೂರ 'ಪ್ರಭಾತ' ಸಾಪ್ತಾಹಿಕದಲ್ಲಿ ಅನುಕ್ರಮವಾಗಿ ಬಂದುದು—ಅನಿರೀಕ್ಷಿತವಾಗಿ ಅರೆವಾಸಿಗೆ ಏಕೆ ನಿಂತಿತೋ? ವಿಜಯನಗರದ ಕೃಷ್ಣದೇವರಾಯನ ಹಸುಳೆ ತೀರಿಕೊಂಡ ಕಾದಂಬರಿ

(ಶ್ರೀ ಕೊರಟಿ ಶ್ರೀನಿವಾಸಯ್ಯನವರ ಕೃತಿ) ಯನ್ನು ಆಧರಿಸಿ. ಮಂಗಳೂರ 'ರಾಷ್ಟ್ರಬಂಧು, ಸಾಪ್ತಾಹಿಕದಲ್ಲಿ 'ಆಶಾಬಂಧ'ವೆಂಬ ನಾಟಕ ಇವರಿಂದ ಪ್ರಕಟವಾಗಿದೆ, ಇವೆರಡೂ ಪುಸ್ತಕಾಕಾರವಾಗಿ ಏಕೆ ಪ್ರಕಟವಾಗಿಲ್ಲವೊ?

ಗೌರವ ಪ್ರಶಸ್ತಿಗಳು: ಶೃಂಗೇರಿಯ ಶಾರದಾಪೀಠಾಧಿರೂಢರಾದ ಶ್ರೀ ಅಭಿನವ ವಿದ್ಯಾತೀರ್ಥರು ಜರತಾರಿ ಪಟ್ಟೆಶಾಲು ನೀಡಿ ಆಚಾರ್ಯರನ್ನು ಹರಸಿದ್ದಾರೆ, ದ, ಕ. ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ (1971) 'ಸಂಶೋಧಕ'ನೆಂಬ ಪ್ರಶಸ್ತಿ ಇವರಿಗೆ ದೊರಕಿದೆ. 'ಪಂಡಿತರತ್ನಂ' ಎಂಬ ಬಿರುದು ಬೇರೆ ಇವರಿಗೆ ಲಭಿಸಿದೆ. ಹಲವಾರು ಹಿತೈಷಿಗಳು ಕುಳಾಯಿ, ಸುರತ್ಕಲ್ಲು, ಕಟೀಲು, ಬೇಲಾಡಿ, ಮುಂಬಯಿ, ಪಣಂಬೂರು ಗಳಲ್ಲಿ ಇವರಿಗೆ ಸನ್ಮಾನ ನೀಡಿದ್ದಾರೆ. ಸುರತ್ಕಲ್ಲಿನ 'ಜೇಸೀಸ್'. ಪಣಂಬೂರಿನ 'ರೋಟರಿ' ಸಂಸ್ಥೆಗಳೂ ಇವರನ್ನು ಗೌರವಿಸಿವೆ!

ಸಾಹಿತ್ಯ ಕ್ಷೇತ್ರದಷ್ಟೆ ಯಕ್ಷಗಾನ ಕೂಟ, ಭಜನೆ. ಭಾಷಣ ವಿಚಾರಗಳಲ್ಲಿ ಆಚಾರ್ಯರು ತನ್ನದೇ ಆದ ಧಾಟಿಯಲ್ಲಿ-ರೀತಿಯಲ್ಲಿ–ಮೆರೆದವರು. ಕೆಲವೊಮ್ಮೆ ತಾರಕ ಸ್ವರದಲ್ಲಿ ಶ್ರೋತೃಗಳನ್ನು ದಿಗಿಲುಗೊಳಿಸಿದರೆ. ಆದರೊಂದಿಗೆ ಮಧ್ಯಮ ರೀತಿಯಲ್ಲಿ ಮಾತಾಡಿ, ಹಾಡಿ ಆಕರ್ಷಿಸುವ ರೀತಿಯಿದೆ. ಕೆಲವರಿಗೆ ಕಟುನುಡಿಯವರೆಂದು ಇವರು ಕಂಡರೂ, "ಎಲ್ಲಾ ಕಾರ್ಯವಿಚಾರಗಳಲ್ಲಿ ತನ್ನತನದ ಅಭಿಮಾನವನ್ನು ಕಾಪಾಡುವುದೆ ತನ್ನ ಕರ್ತವ್ಯವೆಂದು" ಆಚಾರ್ಯರು ಹೇಳುತ್ತಾರೆ. ಮಿತ್ರರಲ್ಲಿ-ಸಹೃದಯರಲ್ಲಿ ಮಾತಾಡುವಾಗ ಇವರ ಅಭಿನಯವೂ, ಪದವಿನ್ಯಾಸವೂ ಅನ್ಯಾದೃಶ್ಯಗಳಾಗಿವೆ. ಸಾಹಿತ್ಯ ಸಂಶೋಧನೆಗಳ ಬಗೆಗೆ ಇವರ ಆಶೋತ್ತರಗಳು ಹತ್ತು–ಹಲವು.

ಶ್ರೀಯುತರ ಜೀವನದ ವಿವಿಧ ಘಟ್ಟಗಳನ್ನು ಗಮನಿಸಿದಾಗ. ತಿರುಪತಿ ಬೆಟ್ಟದ ಕಾಲುದಾರಿಯ ನಡೆಯ ಸವಿನೆನಪನ್ನು ತರುತ್ತವೆ. ಆ ಬೆಟ್ಟವನ್ನು ನಡೆದು ಮೇಲೇರು ವವರಿಗೆ ಮೊದಲ ಹಂತದ ದಾರಿ ಬಲು ದಣಿವಿನದು, ಶ್ರಮಪರಿಹಾರಕ್ಕಾಗಿ ದಾರಿಯಲ್ಲಿ ಎದ್ದು ನಿಂತ ಗಾಳಿಗೋಪುರವೇ ವಿಶ್ರಾಂತಿ ಧಾಮ! ಸುತ್ತಲಿನ ಹಸಿರು, ನೀಲ ವರ್ಣ ಮಾಲೆಯ ದೃಶ್ಯಾವಳಿ ಕಣ್ಮನಗಳಿಗೆ ಆಪ್ಯಾಯನ! ಅದು ಮುಂದಿನ ದಾರಿಯ ಸೌಲಭ್ಯದ ಮುನಸೂಚಿ! ಶ್ರೀ ವೆಂಕಟರಾಯಾಚಾರ್ಯರ ಇದು ವರೆಗಿನ ಜೀವನ ಆ ಗಾಳಿಗೋಪುರ ಕಾಣುವ ಮೊದಲ ಹಂತಕ್ಕೆ ಹೋಲಿಕೆಯದು. ಅವರ ಮುಂದಿನ ಜೀವನ–ಸಾಹಿತ್ಯರಂಗ ಗಳ ಸಾಗಾಟವು ದಿವ್ಯದರ್ಶನದ ಪೂರ್ಣ ಸಫಲತೆಯನ್ನು–ಶ್ರೇಯಸ್ಸನ್ನು ಪಡೆಯಲಿ! ಆತೆ. ಶ್ರೀಯುತರಲ್ಲಿ ಉತ್ಸಾಹ, ಹರ್ಷ, ಶಾಂತಿಗಳು ನೆಲೆಗೊಳ್ಳುವಂತೆ ಈ ಜಗದಧಿ ಪತಿಯು ಹರಸಲಿ! ಇದು ನಮ್ಮ ಹಾರೈಕೆ!

× × × ×

೧೦. ನಾನು ಮೆಚ್ಚಿದ ಶ್ರೀ ವೆಂಕಟರಾಯಾಚಾರ್ಯರು

— ಶ್ರೀ ಕಯ್ಯಾರ ಕಿಞ್ಞಣ್ಣ ರೈ, ಪೆರಡಾಲ.

ಸನ್ಮಿತ್ರರಾದ ವಿದ್ವಾನ್ ಶ್ರೀ ವೆಂಕಟರಾಯಾಚಾರ್ಯರಿಗೆ ಅರುವತ್ತು ವರ್ಷ ಆಯಿತು ಎಂಬುದು ಸಂತಸದ ಸುದ್ದಿ. ಹಿಂದೆ, ನಮ್ಮ ದೇಶದಲ್ಲಿ ಇಷ್ಟು ವರ್ಷ ಬದುಕುವುದೇ ದೊಡ್ಡ ಸಂಗತಿಯಾಗಿತ್ತು. ಆಧುನಿಕ ವೈದ್ಯ ವಿದ್ಯೆಯ ಆಳವಾದ ಸಂಶೋಧನೆಯ ಫಲವಾಗಿ ಮೃತ್ಯುವಿನೊಡನೆ ಮನುಷ್ಯ ನಡೆಸುವ ಹೋರಾಟದಲ್ಲಿ ಹೆಚ್ಚಿನ ಸಫಲತೆ ಪಡೆದಿದ್ದಾನೆ. ಹಾಗಾಗಿ ಹಿಂದಿನ ಕಾಲದಲ್ಲಿ ಷಷ್ಟ್ಯಬ್ದ ಸಮಾರಂಭಗಳು, ತತ್ಸಂಬಂಧವಾದ ಶಾಂತಿಕ್ರಿಯೆಗಳು ನಡೆಯುತ್ತಿದ್ದು ಅರುವತ್ತು ವರ್ಷಗಳಷ್ಟು ದೀರ್ಘ ಕಾಲ ಬದುಕಿದ ಬಗ್ಗೆ ಸಮಾಧಾನಪಟ್ಟುಕೊಳ್ಳುತ್ತಿದ್ದರು; ಮತ್ತು ಶತಾಯುಸ್ಸನ್ನು ಹಾರೈಸುತ್ತಿದ್ದರು; ಹರಸುತ್ತಿದ್ದರು, ಆದರೆ, ಇಂದು ಅಂದಿನ ಆ ವಾತಾವರಣ ಇಲ್ಲ; ಹೆಚ್ಚಿನವರು ಈ ಸೀಮೆಯನ್ನು ದಾಟಿ ಮುಂದೆ ಹೋಗುತ್ತಾರೆ; ಸುತ್ತಮುತ್ತಲಿನವರಿಗೆ ಗೋಚರ ಆಗದಂತೆಯೇ ಮುಂದುವರಿದು ಜೀವನ ಸಾಗಿಸುತ್ತಾರೆ,

ಇಂದು ಅರುವತ್ತಕ್ಕೆ ಮನುಷ್ಯನನ್ನು ಗುರುತಿಸುವುದು ಕೇವಲ ಆತನ ಆಯುಸ್ಸಿಗೆ ಆಗಿಯೇ ಅಲ್ಲ: ಆತನು ಅಷ್ಟು ವರ್ಷ ಜೀವಿಸಿ ನಡೆಸಿದ ನೆನಪಿಡತಕ್ಕ ಒಳ್ಳೆಯ ಕೆಲಸಗಳಿಗಾಗಿ; ಮುಂದೆಯೂ ಜೀವಿಸಿದಷ್ಟು ಕಾಲ ಅಂತಹ ಉತ್ತಮೋತ್ತಮ ಕಾರ್ಯಗಳನ್ನು ಇನ್ನಷ್ಟು ಉತ್ಸಾಹದಿಂದ ನಡೆಸುತ್ತಾ ಇರಲಿ; ಆದರಿಂದ ಜನತೆಗೆ, ಜಗತ್ತಿಗೆ ಪ್ರಯೋಜನ ಆಗಲಿ-ಎಂಬುದಕ್ಕಾಗಿ. ಸಭೆ ಸಮಾರಂಭಗಳನ್ನು ನೆರವೇರಿಸಿ, ಸಂಭಾವನ ಗ್ರಂಥಗಳನ್ನು ಪ್ರಕಟಿಸಿ. ನಿಧಿ ಸಮರ್ಪಿಸಿ–ಹೀಗೆ ಉಪಕೃತವಾದ ಜನತೆ ತನ್ನ ಕೃತಜ್ಞತೆಯನ್ನು ಸಲ್ಲಿಸುತ್ತದೆ; ಇದು ಇಂದಿನ ಕಾಲಕ್ಕೆ ಅತ್ಯಂತ ಯೋಗ್ಯವಾದ ಮನ್ನಣೆ ಮತ್ತು ಆಧುನಿಕತೆಗೆ ಒಪ್ಪುವ ಶಾಂತಿಕ್ರಿಯೆ. ಶ್ರೀ ವೆಂಕಟರಾಯಾಚಾರ್ಯರು ಅವರ ಅಭಿಮಾನಿಗಳಿಂದ ಇಂತಹ ಒಂದು ಮನ್ನಣೆ ಪಡೆಯುತ್ತಿದ್ದಾರೆಂದು ತಿಳಿದು, ಅಂತಹ ಸತ್ಕಾರ್ಯದಲ್ಲಿ ನನಗೂ ಅಳಿಲ ಸೇವೆ ಸಲ್ಲಿಸಲು ಆಸ್ಪದವಿತ್ತ ಬಗ್ಗೆ ನನಗೆ ನಿಜವಾಗಿಯೂ ಸಂತೋಷವಾಗಿದೆ.

ಶ್ರೀಮಾನ್ ಆಚಾರ್ಯರು ಸಂಸ್ಕೃತ, ಕನ್ನಡ, ಈ ಉಭಯ ಭಾಷಾಪರಿಣತರು; ಸಾಹಿತ್ಯಜ್ಞರು; ಸಂಶೋಧಕರು; ಗ್ರಂಥಪ್ರಕಾಶಕರು; ಅಧ್ಯಾಪಕರಾಗಿಯೂ ಸೇವೆ ಸಲ್ಲಿಸಿದವರು: ಅಖಿಲ ಕರ್ನಾಟಕ ವ್ಯಾಪ್ತಿಯ ಮಿತ್ರವರ್ಗವನ್ನು ತನ್ನ ಸರಳ ಸಜ್ಜನಿಕೆಯಿಂದ, ವಿದ್ವತ್ತಿನಿಂದ ಗಳಿಸಿಕೊಂಡವರು; ಅರುವತ್ತು ವರ್ಷ ಸಂದರೂ, ಇಂದಿಗೂ ಯುವಕ

ರನ್ನು ನಾಚಿಸುವ ಉತ್ಸಾಹದಿಂದ ನಿರಂತರ ಭಾಷಾ ಸೇವೆ ನೆರವೇರಿಸುತ್ತಿದ್ದಾರೆಂಬುದು ನಮಗೆಲ್ಲಾ ಅಭಿಮಾನವನ್ನು ಉಂಟುಮಾಡುತ್ತಿದೆ. ಇಷ್ಟೊಂದು ವಿಶಾಲವಾದ ಕ್ಷೇತ್ರದಲ್ಲಿ ನಿರಂತರ ಕಳೆದ ಮೂವತ್ತೇಳು ವರ್ಷಗಳಿಂದಲೂ ದುಡಿಯುತ್ತಾ ಬಂದ ಅವರ ಕಾರ್ಯಕಲಾಪಗಳನ್ನು ಹತ್ತಿರ ಹತ್ತಿರದಿಂದ ಬಲ್ಲವರೂ, ಅವರ ಎತ್ತರ ಎತ್ತರವನ್ನು ನೋಡಿದವರೂ ಅನೇಕರಿದ್ದಾರೆ, ಅವರ ಕುರಿತು ಪ್ರಕಟಗೊಳ್ಳುವ ಸಂಭಾವನ ಗ್ರಂಥ ಅದಕ್ಕೆ ತಕ್ಕುದಾದ ಸಾಕ್ಷ್ಯ ನೀಡಬಹುದೆಂದು ನಾನು ಭರವಸೆಪಡುತ್ತೇನೆ.

ಐತಿಹಾಸಿಕವಾಗಿ ತುಳುನಾಡೆಂದು ಪ್ರಸಿದ್ಧವಾದ ದಕ್ಷಿಣ ಕನ್ನಡದ ಈ ಭಾಗದಲ್ಲಿ ಇತಿಹಾಸ, ಕಾವ್ಯ, ಭಾಷಾ ಸಂಶೋಧನೆಯ ಕಾರ್ಯದಲ್ಲಿ ಹೆಸರು ಮಾಡಿದವರು ಹಲವರಿದ್ದಾರೆ; ಅವರಲ್ಲಿ ಎತ್ತಿ ಹೇಳಬಹುದಾದ ಹೆಸರುಗಳು–ಶ್ರೀಗಳಾದ ಗಣಪತಿ ರಾವ್ ಐಗಳ್, ಬಿ. ಎ. ಸಾಲೆತ್ತೂರ್, ಗೋವಿಂದ ಪೈ, ಶೀನಪ್ಪ ಹೆಗ್ಡೆ, ಮುಳಿಯ ಮೊದಲಾದ ಹಿರಿಯರು; ಅವರೆಲ್ಲ ಹಿಂದಿನವರು; ಇಂದಿಗೂ ಅಂತಹ ಕೆಲಸವನ್ನು ಶ್ರೀಗಳಾದ ಗುರುರಾಜ ಭಟ್ಟ, ಕೆ. ವಿ. ರಮೇಶ್, ಸೂರ್ಯನಾಥ ಕಾಮತ್, ವಸಂತ ಮಾಧವ, ಮುಕುಂದ ಪ್ರಭು, ವೆಂಕಟರಾಯಾಚಾರ್ಯ ಮೊದಲಾದವರು ಮುಂದುವರಿಸುತ್ತಿದ್ದಾರೆ; ಇವರಲ್ಲಿ ಶ್ರೀ ಗೋವಿಂದ ಪೈಗಳಂತೆ ಕವಿ-ಕಾವ್ಯ, ಭಾಷಾ ವಿಷಯಕವಾದ ಸಂಶೋಧನೆಯಲ್ಲಿಯೇ ತೊಡಗಿದವರಲ್ಲಿ ಅಗ್ರಗಣ್ಯರು ಶ್ರೀ ಆಚಾರ್ಯರು ಎನ್ನಬಹುದು.

ಸಂಶೋಧನವೆಂಬುದು ಸತ್ಯವನ್ನು, ಕೇವಲ ಸತ್ಯವನ್ನು, ಸಂಪೂರ್ಣ ಸತ್ಯವನ್ನು ಹುಡುಕುವಂತಹ ಒಂದು ಪ್ರಯತ್ನ; ಇಂತಹ ಪ್ರಯತ್ನದಲ್ಲಿ ಬರುವ ಅಡೆತಡೆಗಳು. ಟೀಕಾ ಟೂಕೆಗಳು, ವಾದ ಪ್ರತಿವಾದಗಳು, ನೈಷ್ಠುರ್ಯ ಕಾಠಿಣ್ಯಗಳು ಬಹಳ; ಇಷ್ಟಿದ್ದರೂ ಸತ್ಯ ಸಂಶೋಧಕನು ಪರಾಙ್ಮುಖನಾಗಲಾರ; ಹಾಗಾಗಿ ಅಂತಹ ಎದೆಗಾರಿಕೆ ಇದ್ದವರೇ ಈ ದಾರಿ ತುಳಿಯುತ್ತಾರೆ. ಶ್ರೀಮಾನ್ ವೆಂಕಟರಾಯಾಚಾರ್ಯರು ಇಂತಹ ಎಷ್ಟೋ ವಿಕ್ರಮಗಳನ್ನು ಸಾಧಿಸಿದವರು; ಸಾಧಿಸಿ ಯಶಸ್ವಿಯಾದವರು.

'ಪ್ರತಿವಾದಿ ಭಯಂಕರ'ರಿದ್ದರೂ ಶ್ರೀಮಾನ್ ಆಚಾರ್ಯರು ಮೃದು ಹೃದಯರು; ಮಿತ್ರರ ಬಗ್ಗೆ, ಸಾಹಿತ್ಯಜ್ಞರ ಬಗ್ಗೆ ಅತ್ಯಂತ ಆತ್ಮೀಯತೆಯನ್ನು ಸದಾ ಇಟ್ಟುಕೊಂಡವರು; ಅವರ ಹತ್ತಿರ ಹೋದಷ್ಟು ಸ್ನೇಹದ ಮಾರ್ಗವನ್ನು ನಾನು ಧಾರಾಳ ಅನುಭವಿಸಿದ್ದೇನೆ. ಅವರ ಬಿಚ್ಚುಮಾತು, ಮೇಲ್ನೋಟಕ್ಕೆ ಕೆಲವೊಮ್ಮೆ ಚುಚ್ಚುಮಾತಾಗಿ ಕಂಡರೂ ಅದರಲ್ಲಿ ನಂಜಿನ ಲೇಪ ಇಲ್ಲವೇ ಇಲ್ಲ, ಅಲ್ಲಿ ಕಾಣುವುದು ಎಳೆ ಹಸುಳೆಯ ಹೃದಯ ಕೋಮಲತೆಯನ್ನು. ಬಾಳಿನುದ್ದಕ್ಕೂ ಶ್ರೀಮಾನ್ ಆಚಾರ್ಯರು ಪರರಿಂದ ಅನೇಕ ಕಷ್ಟ ಕಾರ್ಪಣ್ಯಗಳನ್ನು ಅನುಭವಿಸಿದರೆಂದು ಕೇಳಿದ್ದೇನೆ; ಆದರೂ ಈ ಮಾರ್ದವ, ಈ ಕೋಮಲತೆ, ಈ ಸ್ನೇಹಪರತೆ, ಇಂತಹ ಸರಳ ಸಜ್ಜನಿಕೆಯ ಸ್ವಭಾವವನ್ನು ತನ್ನಲ್ಲಿ ಕಾಪಾಡಿಕೊಂಡು ಬಂದುದು ಅವರ ಸಂಸ್ಕೃತಿಯ ಪ್ರತೀಕವಾಗಿದೆ.

ಪಂಡಿತರು, ಸಾಹಿತಜ್ಞರು ಎನಿಸಿಕೊಂಡವರು. ತಮಗೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಇಲ್ಲವಾದರೆ, ಇತರ ಪಂಡಿತ ಸಾಹಿತ್ಯಜ್ಞರು ಬರುವ ಸಭೆಗಳಲ್ಲಿ ಭಾಗವಹಿಸುವುದು ಸಾಮಾನ್ಯತಃ ಅಪೂರ್ವ. ಆದರೆ ಶ್ರೀ ಆಚಾರ್ಯರು ಇದಕ್ಕೊಂದು ಅಪವಾದ, ಮಂಗಳೂರಿನ ಪರಿಸರದಲ್ಲಿ ಯಾವುದೇ ಸಾಹಿತ್ಯಿಕ ಸಭೆಯಿರಲಿ, ಅಲ್ಲಿ ಇವರು ಸದಾ ಹಾಜರಿ. ಅದರಿಂದ. ಕೆಲವೊಮ್ಮೆ ವೈಯಕ್ತಿಕವಾಗಿ, ಅವರ ಸಮಯ ನಷ್ಟವೇ, ಪ್ರಯೋಜನವಾದರೂ ಏನು? ಇತರರನ್ನು ಗೌರವಿಸುವ ಒಂದು ಸತ್‌ಸಂಪ್ರದಾಯವನ್ನು ನಾನು ಅವರಲ್ಲಿ ಆ ಮೂಲಕವೂ ಕಂಡಿದ್ದೇನೆ: ಅಂತಹ ಉತ್ತಮಿಕೆಯ ಗುಣಗಳಿಗಾಗಿ ಅವರಲ್ಲಿ ಅಭಿಮಾನ ಗೌರವಪಟ್ಟಿದ್ದೇನೆ.

ಶ್ರೀಮಾನ್ ಆಚಾರ್ಯರು ತಮ್ಮದೇ ರೀತಿಯಲ್ಲಿ ಗ್ರಂಥ ಸಂಪಾದನೆ, ಗ್ರಂಥ ಪ್ರಕಟನೆಯ ಕಾರ್ಯವನ್ನೂ ನಿರಂತರ ಮಾಡುತ್ತಾ ಬಂದಿದ್ದಾರೆ. ಕತೆ, ಕಾದಂಬರಿಗಳ ಸಂಪಾದನೆ. ಪ್ರಕಟನೆ ಲಾಭದಾಯಕವಾಗಬಹುದಾದರೂ. ಇವರ ಹಾದಿ ಕೇವಲ ಮುಳ್ಳಿನ ಹಾದಿ; ಹಳೆಯ ಕನ್ನಡದ ಗ್ರಂಥಗಳನ್ನು, ತಾಳೆ ಗರಿಗಳಲ್ಲಿಯೇ ಉಳಿದಿದ್ದವುಗಳನ್ನು ಪ್ರಕಟಿಸಿ ಅವರ ಪ್ರಯೋಜನ ಒದಗಿಸಬೇಕೆಂಬ ಹಂಬಲ–ಹಠ ಅವರದು. ಅದಕ್ಕಾಗಿ ಎಷ್ಟೊಂದು ಕೈಸುಟ್ಟುಕೊಂಡರೋ ನಾವು ಅರ್ಥಮಾಡಿಕೊಳ್ಳಬಹುದು. ಆದರೂ ಇಂತಹ ಸಾಹಸದ ಕಾರ್ಯ ಮಾಡುತ್ತಾ ಬಂದಿದ್ದಾರೆ. ಆದಕ್ಕಾಗಿ ಅವರನ್ನು ಮೆಚ್ಚುತ್ತೇವೆ,

ಶ್ರೀಮಾನ್ ವೆಂಕಟರಾಯಾಚಾರ್ಯರು ನೂರುಕಾಲ ಇಂತು ಸಾಹಿತ್ಯವ್ಯವಸಾಯ, ಸಂಶೋಧನಕಾರ್ಯ ಮುಂದುವರಿಸಿ ನಡೆಸುತ್ತಾ ಇರಬೇಕು; ಇದಕ್ಕೆ ಈ ಸಂಭಾವನ ಗ್ರಂಥ ಸಮರ್ಪಣೆ ಪ್ರೋತ್ಸಾಹಕವಾಗಲಿ; ಕಳೆದ ಮೂವತ್ತೇಳು ವರ್ಷಗಳಿಂದ ಶ್ರೀಯುತರು ಮಾಡುತ್ತಾ ಬಂದ ಸತ್ಕಾರ್ಯ ಇನ್ನು ಮುಂದೆಯೂ ಅವ್ಯಾಹತವಾಗಿ ಅವರಿಂದ ಮುನ್ನಡೆಸಿಕೊಂಡು ಹೋಗುವಂತೆ ಆಗಲು ಏನೆಲ್ಲಾ ಆಗಬೇಕೋ ಅದನ್ನು ಸಮಾಜ ಹಾಗೂ ಸರಕಾರ ಗುರುತಿಸಿ ಒದಗಿಸಿಕೊಡುವುದು ಕರ್ತವ್ಯವಾಗಿದೆ.

× × ×

೧೧. ನಾನು ಕಂಡ ವೆಂಕಟರಾಯಾಚಾರ್ಯರು

—ಶ್ರೀ ಯು. ಎ. ಮಂಜುನಾಥ ಐತಾಳ, ಶಿವಮೊಗ್ಗ

ಪ್ರಥಮ ಪರಿಚಯ: 1970 ನೆ ಇಸವಿಯ ಮಧ್ಯಭಾಗ. ಬಾಳದಲ್ಲಿ – ಮಂಗಳೂರು ಜಿಲ್ಲೆಯ ಸುರತ್ಕಲ್ಲ ಕೇಂದ್ರದ ಒಂದು ಸಣ್ಣ ಹಳ್ಳಿಯಲ್ಲಿ ನನ್ನ ಮಾವ ನಾರಾಯಣ ರಾಯರು, ಅವರ ಮನೆಯಲ್ಲಿ ನಾವು ಕೈಗೊಂಡ ಸತ್ಯನಾರಾಯಣ ಪೂಜೆ (48 ಪೂಜೆ ಮಾಡಿಸಿ ಕೊನೆಯ ಪೂಜೆ ಸ್ವಲ್ಪ ವಿಶೇಷ ಪೂಜೆ). ಈ ಸತ್ಯನಾರಾಯಣ ಪೂಜೆಯ ಕಥೆಯ ಅರ್ಥ ಹೇಳಲು ಅವರ ಸ್ನೇಹಿತರಾದ ವೆಂಕಟರಾಯ ಆಚಾರ್ಯರಿಗೆ ಆಮಂತ್ರಣ. ಸರಿ. ಪೂಜೆಯ ಎಲ್ಲಾ ಕಾರ್ಯಕ್ರಮ ಮುಗಿಯಿತು. ಅರ್ಥ ಹೇಳಲು ಶ್ರೀ ಆಚಾರ್ಯರು ಸುರುಮಾಡಿದರು, ಇವರ ವಿದ್ವತ್ತು, ಇವರು ಅರ್ಥ ಹೇಳುವ ರೀತಿ ಕೇಳಿದೆ, ನೋಡಿದೆ. ಇವರ ಪಾಂಡಿತ್ಯಕ್ಕೆ ನಾನು ಮುಗ್ಧನಾದೆ. ಅಲ್ಲಿ ಇರುವ ಓರ್ವ ಮಹನೀಯರಲ್ಲಿ 'ಇವರು ಯಾರು' ಎಂತ ಕೇಳಿದೆ. ಆ ಮಹನೀಯರು 'ಇವರು ಸ್ವಲ್ಪ ಹಾಗೆ, ಅಂದ್ರೆ ಒಂದು ತರಾ ಹುಚ್ಚು' ಅಂದರು, ನಾನು ಆ ದೊಡ್ಡ ಮನುಷ್ಯರ ಜ್ಞಾನದ ಬಗ್ಗೆ ಜುಗುಪ್ಸೆಗೊಂಡೆ, ಆಗಿನಿಂದ ನನ್ನ–ವೆಂಕಟರಾಯಾಚಾರ್ಯರ ಸಾಹಿತ್ಯ ಸಂಬಂಧ ಗಾಢವಾಗಿ ಬಳೆಯಿತು.

ಶ್ರೀ ಆಚಾರ್ಯರವರ ಸಂಭಾವನ ಗ್ರಂಥಕ್ಕೆ ಒಂದು ಲೇಖನ ಬರೆಯಲು ಶ್ರೀ ಆಚಾರ್ಯರು ಹೇಳಿದಾಗ, ನಾನು ಸ್ವಲ್ಪ ಸಮಯ ಯೋಚಿಸಬೇಕಾಗಿ ಬಂತು. ಕಾರಣ ಏನೂ ಇಲ್ಲ, ಗಡಿಬಿಡಿಯಾಗಬೇಡಿ. 1945 ರಲ್ಲಿ 4ನೆ ಕ್ಲಾಸ್ ಫೇಲ್ ಆದ ನಾನು, ಯಾವದೇ ಈಗಿನ ಡಿಗ್ರಿ ಪಡೆಯದ ನಾನು, ಸಾಮಾನ್ಯ ವ್ಯಕ್ತಿ, ಸರಸ್ವತೀ ಭಂಡಾರವೇ ಬಾಯಲ್ಲಿರುವ ಈ ಕಲಿಯುಗದ ಶುಕಮುನಿಯ ಬಗ್ಗೆ ಬರೆಯುವುದು ಹಾಸ್ಯಾಸ್ಪದವಲ್ಲವೇ? ಆದರೂ ನಾ ಕಂಡಂತೆ ಬರೆಯುತ್ತಾ ಇದ್ದೇನೆ. ಡಿಗ್ರಿ ಪಡೆದವರು, ಶ್ರೇಷ್ಠ ಸ್ಥಾನದಲ್ಲಿ ರಾರಾಜಿಸುವವರು, 'ದಕ್ಷಿಣ ಕನ್ನಡ ಜಿಲ್ಲೆಯ ಸುಪುತ್ರರು' ಅಂತ ಹೆಸರು ಪಡೆದ ಓರ್ವ ಮಹನೀಯರು, ಒಂದು ಸಾರಿ ಚುನಾವಣಾ ಭಾಷಣದಲ್ಲಿ, 'ಕಡಲ ತೀರದ ಭಾರ್ಗವ' ಯೆಂತ ಹೆಸರು ಪಡೆವ–ಕವಿಪುಂಗವರಾದ–ಶ್ರೀ ಶಿವರಾಮ ಕಾರಂತರಿಗೆ 'ಹುಚ್ಚು ಹಿಡಿದಿದೆ' ಯೆಂದಿದ್ದರು. ಆದು ನೆನಪಿಗೆ ಬಂದು, ನಾನು, ಇಂಥವರೇ ಹೀಗೆ ಹೇಳಿರುವಾಗ, ಕವಿಗಳಿಗೆ ಕರ್ನಾಟಕದಲ್ಲಿ, ಆದರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಂತಹ ಬೃಹದ್ ವ್ಯಕ್ತಿ ಹೇಳಿರುವಾಗ ಏನೆನ್ನಬೇಕು? ನಾನೇನೂ ಅಂತಹವನಲ್ಲ. ಸದ್ ಭಾವನೆ ಬಂದು ಬರೆಯಲು ಧೈರ್ಯ ಮಾಡಿದೆ. (ಹೌದು, ಕವಿಗಳಿಗೆಲ್ಲಾ ಒಂದು ತರಾ ಹುಚ್ಚು, ಸುಳ್ಳಲ್ಲ).

ತೆರೆದ ಹೃದಯ: ಕವಿಗಳನ್ನು ಕಂಡ ಪ್ರತಿಯೊಬ್ಬರೂ ಹೇಳುವ ಮಾತು ಅಂದರೆ. ಒಳಗಣ್ಣಿನಲ್ಲಿ ನೋಡಬೇಕು. ಚುನಾವಣೆಯ ಕಣ್ಣಲ್ಲಲ್ಲ. ಅಂತೆ, ವೆಂಕಟರಾಯಾಚಾರ್ಯರ ಹೃದಯ ತೆರೆದಿದೆ–ಯಾರಿಗೆ–ಅದೂ ಹೌದು–ಜ್ಞಾನಿಗಳಿಗೆ, ಆ ದಾಹ ಇರುವವರಿಗೆ; ಮೂಢರಿಗಲ್ಲ! ಮೂಢರು ಕವಿಗಳನ್ನು ಕಾಣಲಾರರು!

ಕೂಲಂಕಷವಾಗಿ ತರ್ಕಿಸುವ ಬಗೆ: ಯಾವದೇ ಇರಲಿ, ಆದರ ಹಿಂದೆ ಮುಂದೆ, ಮಾಥ್ಯ ವಿವರಣೆ ಬೇಕು: ಬರೀ ಸುದ್ದಿ, ಆದರೆ ಸಾಲದು; 'ಆದರ ಒಳ ಅರ್ಥ ಏನು' ಎಂದು ಪರಿಶೀಲಿಸಬೇಕು. ಇದು ಕವಿಗಳಲ್ಲಿ ಅಡಗಿರುವ ಒಂದು ವಿಶೇಷ ವಿಚಾರಧಾರೆ! ಅವರನ್ನು ನಾವು ಹೆಚ್ಚಾಗಿ ಸಂಪರ್ಕಿಸಿದಾಗ ಅದು ತಿಳಿಯುತ್ತೆ. ಹಣ, ಶ್ರಮ, ಸಾಹಸ. ಮಲ್ಲರಲ್ಲೂ ಇರಬಹುದು, ಆದರೆ ವಿಚಾರ ವಿಮರ್ಶೆ ಆದರಲ್ಲಿ ಪಳಗಿದವರಲ್ಲಿ ಸಂಶೋಧಕರಲ್ಲಿ ಹುಡುಕಬೇಕು ಅದನ್ನು 60ರ ಹರೆಯದ ವೆಂಕಟರಾಯಾಚಾರ್ಯರಲ್ಲಿ ನಾವು ನೋಡಬಹುದು. ಈ ಹರೆಯ ಅನ್ನುವುದು ಒಂದು ಶಬ್ದ ವಯಸ್ಸಿಗಲ್ಲ, ಬುದ್ಧಿಗೆ ಕೊಡುವ ಮಹತ್ವ. ಅವರಲ್ಲಿ ಇರುವ ಸಾಹಿತ್ಯಕ್ಕೆ ಹರೆಯ, ಮುಪ್ಪು ಇಲ್ಲ, ಚಿರ ಯೌವನವೇ ಸಾಹಿತ್ಯ, 'ರವಿ ಕಾಣದುದನ್ನು ಕವಿ ಕಂಡ'. ಆಗ ರವಿಗಿಂತ ಕವಿಯೇ ಮೇಲಾದ. ಅಲ್ಲವೇ? ಅದಕ್ಕೆ ಶ್ರೀ ಆಚಾರ್ಯರು ಅರ್ಹರು ಅಂತ ನನ್ನ ಭಾವನೆ!

ಆಡಿದುದನ್ನು ದೃಢೀಕರಿಸಿ ತನ್ನತನವನ್ನು ತೋರಿಸುವ ವಿಚಾರ: ಶ್ರೀ ಆಚಾರ್ಯರಲ್ಲಿದೆ. ಪ್ರತಿಯೊಬ್ಬ ಕವಿಗೂ ಸ್ವತಂತ್ರಬೇಕು, ಲೇಖನಿ ಸ್ವತಂತ್ರ ಕಳಕೊಂಡರೆ ಅದು ಲೇಖನಿಯಲ್ಲ! ಆ ಕವಿ ಕವಿಯಲ್ಲ! (ಮರ್ಯಾದೆಯಿಲ್ಲದ ಮಾತು ಹೊಗೆಯ ಮಾತು–ಅಂದಂತೆ). ಆದುದರಿಂದ ಕವಿ ಸ್ವತಂತ್ರನಾಗಿರಬೇಕು. ಅವನಿಗೆ ಯಾವ ಒತ್ತಡವೂ, ನಿರ್ಬಂಧವೂ ಇರಬಾರದು. ಯಾವದೇ ವಿಚಾರವಿರಲಿ, ಅದನ್ನು ವಿವರಿಸುವಲ್ಲಿ, ಸಮಾಧಾನವಾದ ಉತ್ತರ ಸಿಗಬೇಕಾದರೆ ನೀವು ಇವರಲ್ಲೆ ಕೇಳಬೇಕು. ವಿಷಯವನ್ನು ಸಮರ್ಥಿಸುವ. ತರ್ಕಬದ್ಧವಾದ ಉತ್ತರ ಕೊಡುವ ಜಾಣ್ಮೆಯನ್ನು ಶ್ರೀ ಆಚಾರ್ಯರಲ್ಲಿ ನಾವು ಕಾಣಬಹುದು.

ವಿಶೇಷ ಗುಣಗಳು ಆಚಾರ್ಯರಲ್ಲಿವೆ. ನಿಸ್ವಾರ್ಥ ಗುಣ, ಛಲ, ಮತ್ತು ತನ್ನ ಜ್ಞಾನವನ್ನು ಇತರರಿಗೆ ಹಂಚುವ ಶ್ರೇಷ್ಠತೆ ತುಂಬಿ ತುಳುಕುತ್ತವೆ. ಇದನ್ನು ಎಲ್ಲಾ ಸಾಧಾರಣ ಕವಿಗಳಲ್ಲಿ ನಾವು ಕಾಣಲಾರೆವು, ನಾಲ್ಕು ಕವನ, ಎರಡು ಲೇಖನ, ಒಂದೆರಡು ಭಾಷಣ ಆದ ಮೇಲೆ; 2 ಕಡೆ ಹಾರ ಬಿದ್ದ ಕೂಡಲೆ ಕೆಲವು ಮಹಾಮಹಾ ಕವಿಪುಂಗವರು ಅಟ್ಟಕ್ಕೆ ಏರುತ್ತಾರೆ. ಸಾಧಾರಣ ಮನುಷ್ಯರು ಇವರ ಹತ್ತಿರ ಮಾತಾಡುವಂತೆಯೂ ಇಲ್ಲ. 'ತಾನೇ ಕುಮಾರವ್ಯಾಸನ ಅಪರಾವತಾರ' ಅಂದುಕೊಳ್ಳುತ್ತಾರೆ. ಸರಸ್ವತೀ ಜ್ಞಾನಭಂಡಾರ ಎಷ್ಟು ವಿಶಾಲ? ಅದನ್ನು ಬರಿದು ಮಾಡಲು ನಮಗೆ ಸಾಧ್ಯವಿಲ್ಲ ಅಂತ ತಿಳಿಯುವ ಸಾತ್ವಿಕ ಗುಣವಿಲ್ಲ (ಇವರು ತಾಮಸರು), ಇನ್ನೊಂದು ವರ್ಗವಿದೆ, ಇವರು ಹಣವಂತರ ಬಾಲಬಡಿಕರು; ಎಲ್ಲೆ ಹಣವಂತರಿರಲಿ, ಅಲ್ಲಿ ಮಾತ್ರ ಇವರಿಗೆ ಕಣ್ಣು ಕಾಣುತ್ತೆ. ಗುಣವನ್ನು ಇವರು ಲೆಕ್ಕಿಸುವುದಿಲ್ಲ, ಆದರೆ ಇವರು ಕಮ್ಮಿಯಲ್ಲ. ನೂರಾರು ಕತೆ,

ಕಾದಂಬರಿ ಬರೆದಿರುತ್ತಾರೆ. ಆದರೆ ಇವರ ಈ ಕೆಟ್ಟ ಗುಣದಿಂದ ಇವರಿಗೆ ನೆಮ್ಮದಿ ಇರುವುದಿಲ್ಲ. ಜೀವನದಲ್ಲಿ ಇಂಥ ಕವಿಗಳಿಗೆ ಸುಖವಿಲ್ಲ. ನಿರಾಶೆಯಿಂದಲೇ ನಿರ್ಗಮನ (ಇದು ರಾಜಸಗುಣವಾಗಿದೆ).

ಆದರೆ, ಶ್ರೀ ವೆಂಕಟರಾಯಾಚಾರ್ಯರು ಇದಕ್ಕೆಲ್ಲಾ ಹೊರತಾಗಿದ್ದಾರೆ. ಇವರಲ್ಲಿ ಹಣ, ಆಡಂಬರ, ಲೋಭ, ಮತ್ಸರ ಹತ್ತಿರ ಸುಳಿಯದು. ಖಂಡಿತವಾಗಿ ತನಗೆ ಸರಿಕಂಡು ಬಾರದಿದ್ದಲ್ಲಿ, ಆ ವ್ಯಕ್ತಿ ಎಂಥವನೇ ಆಗಿರಲಿ. 'ಛೋ-ಮಗನೇ!' ಅಂದುಬಿಡುತ್ತಾರೆ. ಇಂತಹ ಯೋಗ್ಯ ಕವಿಗಳನ್ನು-ವಿಮರ್ಶಕರನ್ನು-ಸಂಶೋಧಕರನ್ನು ನಮ್ಮ ಕನ್ನಡ ಜನತೆ ಗುರುತಿಸುವಲ್ಲಿ ವಿಳಂಬ ಮಾಡಿದೆ. ಆದರೂ, 60 ಸಂವತ್ಸರದನಂತರ ಇವರನ್ನು ಗೌರವಿಸುವ ಈ ಒಂದು ಶ್ರೇಷ್ಠವಾದ ಕೆಲಸವನ್ನು ಮಾಡುತ್ತಿದ್ದಾರೆ. ಇದಕ್ಕೆ ನನ್ನ ಅತ್ಯಂತ ಕೃತಜ್ಞತೆಗಳು. ಮುಂದೆ ಆಚಾರ್ಯರನ್ನು ನಮ್ಮ ಕರ್ನಾಟಕ ಸರ್ಕಾರ ಗುರುತಿಸಿ ಅವರಂತಹರಿಗೆ ಯೋಗ್ಯ ಪುರಸ್ಕಾರ ಕೊಡುವಂತಾಗಬೇಕು-ಅನ್ನುವುದು ನನ್ನ ಬಯಕೆ. ಹಿಂದೆ ಕವಿಗಳಿಗೆ ರಾಜರ ಆಶ್ರಯವಿತ್ತು. ಈಗ ಪ್ರಜಾರಾಜ್ಯ. ಪ್ರಜೆಗಳೇ ರಾಜರು. ಆದುದರಿಂದ ಚುನಾಯಿತರಾದ ನಮ್ಮ ಪ್ರತಿನಿಧಿಗಳು ಆದಷ್ಟು ಹೆಚ್ಚು ಮಟ್ಟಿಗೆ ಸಾಹಿತಿಗಳು, ಜ್ಞಾನಿಗಳು, ಕಲಾವಿದರು, ಇತ್ಯಾದಿ ಪರಿಣತರಿಗೆ ಯಾವುದೇ ಭೇದಭಾವ ತೋರಿಸದೆ ಸಹಕಾರವಿತ್ತು, ಅವರ ಬಾಳದೀವಿಗೆ ಬೆಳಗುವಂತೆ ಮಾಡಲಿ!

ಶ್ರೀ ಆಚಾರ್ಯರ ಬಗ್ಗೆ ಎಷ್ಟು ಬರೆದರೂ ಇದ್ದೇ. ಆದರೆ, ಈಗ ನನಗೆ ತೋಚಿದ್ದು ಬರೆದಿರುವೆ. ಇದನ್ನು ವಾಚಕ ಮಹಾಶಯರು ಬೇಸರವಿಲ್ಲದೆ ಸ್ವಾಗತಿಸುತ್ತಾರೆಂದು ನನ್ನ ಭಾವನೆ, ಆದರೆ ಇದು ಭ್ರಷ್ಟಾಚಾರಿಗಳಿಗೆ ಹಿಡಿಸಲಿಕ್ಕಿಲ್ಲ, ಅವರು ನನಗೆ ಬೈದಾರು. ಬೈದರೂ ಅಡ್ಡಿಯಿಲ್ಲ. ನನ್ನ ಕರ್ತವ್ಯವನ್ನು ನಾನು ಮಾಡಿದ ಸಮಾಧಾನ ನನಗಿದೆ.

ಶ್ರೀ ಆಚಾರ್ಯರಿಗೆ ನೂರು ವರ್ಷ ಆಯುಸ್ಸನ್ನು ಆ ಪರಮಾತ್ಮ ನೀಡಲಿ. ಕನ್ನಡ ಕುಲಕೋಟಿಗಳು ಇವರಿಂದ ಇನ್ನೂ ಹೆಚ್ಚು ಪ್ರಯೋಜನ ಪಡೆಯಲಿ!

ಜೈ ಕನ್ನಡ ಭುವನೇಶ್ವರಿ!

X X X X X X X X

೧೨. ಆಚಾರ್ಯರ ವ್ಯಕ್ತಿತ್ವ

— ಶ್ರೀ ಯು. ರಾಜಾರಾಮ ಮಲ್ಯ, ಮಂಗಳೂರು.

ವಿದ್ವಾನ್, ಕೆ. ವೆಂಕಟರಾಯಾಚಾರ್ಯರ ಮತ್ತು ನನ್ನ ಸ್ನೇಹ ಹಲವು ವರ್ಷಗಳಿಂದ ಬೆಳೆದು ಬಂದದ್ದು. ಅವರ ಅನೇಕ ಬರೆಹಗಳನ್ನು–ಒಂದಾಣೆ ಮಾಲೆ, ಯುಗಪುರುಷ, ಉದಯವಾಣಿ, ನವಭಾರತ, ವಿಜಯ ಸಾಹಿತ್ಯಮಾಲೆ, ಇತ್ಯಾದಿ ಅನೇಕ ಕಡೆಗಳಲ್ಲಿ ಓದಿದ್ದೆ. ಆದರೆ ಅವರನ್ನು ಸಮೀಪದಿಂದ ನೋಡಿದ್ದು ಸುಮಾರು 15 ವರ್ಷಗಳ ಹಿಂದೆ. ಆಗ ಒಂದು ಸಮಾರಂಭದಲ್ಲಿ ಅವರ ಭಾಷಣ ಕೇಳಿದ್ದೆ. ನಿರ್ದಾಕ್ಷಿಣ್ಯವಾಗಿ, ಕಂಡದ್ದನ್ನು ಕಂಡಹಾಗೆ, ನಿರ್ಭಯವಾಗಿ, ಬರಿಬಾಯಲ್ಲಿ ಮಾತ್ರವಲ್ಲ, ಸಾಭಿನಯವಾಗಿ–ಅವರು ಮಾತಾಡಿದುದನ್ನು ನೋಡಿದೆ. "ಈ ಜನ ಎಲ್ಲರಂತಲ್ಲ, ಸ್ವಲ್ಪ ಬೇರೆ. ಯಾವುದೇ ವಿಷಯವನ್ನು ತತ್‌ಕ್ಷಣ ಸ್ವೀಕರಿಸದೆ, ವಿವಿಧ ದೃಷ್ಟಿಕೋನಗಳಿಂದ ವಿವೇಚಿಸಿ, ಬೇಕಿದ್ದರೆ ವಿವಾದವನ್ನೂ ಎಬ್ಬಿಸಿ, ಸ್ವಂತ ಅಭಿಪ್ರಾಯ ಕೈಕೊಳ್ಳುವ ಜನ ಇದು" ಎಂದು ಆಗಲೆ ನಾನು ಅಭಿಪ್ರಾಯ ಪಟ್ಟಿದ್ದೆ,

ಬರಬರುತ್ತಾ ಈ ಅಭಿಪ್ರಾಯ ದೃಢವಾಗಿ ಬೇರೂರಿತು. ಅದೊಂದು ಸದ್ಗುಣವೋ; ಅಲ್ಲವೋ; ಅಂತೂ ಅದನ್ನು ಮೆಚ್ಚಬೇಕು.

30 ವರ್ಷಗಳಿಗೂ ಹೆಚ್ಚಿನ ಕಾಲ, ಹಳ್ಳಿಯ ಶಾಲೆಯಲ್ಲಿ ಉಪಾಧ್ಯಾಯರಾಗಿದ್ದ ಶ್ರೀ ಆಚಾರ್ಯರು ತಮ್ಮ ಜೀವನದುದ್ದಕ್ಕೂ ಹಲವು ಲೇಖನಗಳನ್ನು, ಪುಸ್ತಕಗಳನ್ನು ಉಪನ್ಯಾಸಗಳನ್ನು ನಿರ್ಮಿಸಿದ್ದಾರೆ. ಸುಮಾರು 500 ಕ್ಕೂ ಮಿಕ್ಕಿ ಅವರ ಕೃತಿಗಳು (ಲೇಖನಗಳು) ಇದ್ದಾವೆಂದು ತಿಳಿದುಬಂದಿದೆ.

ಸಂಶೋಧನಾರಂಗವು ಶ್ರೀ ಗೋವಿಂದ ಪೈ, ಡಾ. ಪಿ. ಗುರುರಾಜ ಭಟ್ಟರ ನಿರ್ಯಾಣದ ಬಳಿಕ ಈ ಜಿಲ್ಲೆಯಲ್ಲಿ ಕ್ಷೀಣಿಸುವ ಭಯವಿದೆ. ಡಾ, ಶಿವರಾಮ ಕಾರಂತರು ಸಂಶೋಧನೆಯಲ್ಲಿ ಶ್ರಮಿಸಿದ್ದಾರೆ. ಸ್ವಲ್ಪಮಟ್ಟಿಗೆ ಶ್ರೀ ಆಚಾರ್ಯರೂ ಸಂಶೋಧನೆಯಲ್ಲಿ ತಮ್ಮ ವಿಶಿಷ್ಟ ದೃಷ್ಟಿಕೋನವನ್ನು ತೊಡಗಿಸಿದ್ದಾರೆಂದು ನನ್ನ ಅಭಿಪ್ರಾಯ! ಸಾಹಿತ್ಯ, ಚರಿತ್ರೆ, ಕವಿಚರಿತ್ರೆ, ಮುಂತಾದ ಕ್ಷೇತ್ರಗಳಲ್ಲಿ ಬೆಳಕುಗಾಣದ ವಿಷಯಗಳ ಮೇಲೆ ಪ್ರಕಾಶ ಚೆಲ್ಲಿದ್ದಾರೆ.

ನನ್ನ ಬಗ್ಗೆ ವೈಯುಕ್ತಿಕವಾಗಿ ಶ್ರೀ ಆಚಾರ್ಯರಿಗೆ ಒಳ್ಳೆಯ ಪ್ರೀತಿ, ಆದರಗಳಿವೆ. ಅನೇಕ ಸಂದರ್ಭಗಳಲ್ಲಿ ನನ್ನ ಭಾಷಣಗಳನ್ನು ಅವರು ಸಭೆಯ ಮುಂದಿನ ಸಾಲುಗಳಲ್ಲಿ ಕುಳಿತು, ಅರೆ ಕಣ್ಣುಮುಚ್ಚಿ ತಲೆ ಅಲ್ಲಾಡಿಸಿ ಕೇಳುತ್ತಿದ್ದರು. ಮಾತ್ರವಲ್ಲ, ಎಲ್ಲಿಯಾದರೂ

ಸಣ್ಣ-ಪುಟ್ಟ ತಪ್ಪುಗಳಾದರೆ ಕೂಡಾ, ಫಕ್ಕನೆ ಕಣ್ಣುಬಿಟ್ಟು, ತಲೆಕೊಡಹಿ, ಮೈದೆಗೆದು ನನ್ನನ್ನು ದಿಟ್ಟಿಸಿದ್ದೂ ಉಂಟು. ಆ ಮೇಲೆ, ತಪ್ಪದೆ ಒಂದು ಪತ್ರದಲ್ಲಿ, ನನ್ನ ಭಾಷಣದ ಗುಣಗಳನ್ನು ತೋರಿಸಿ; ಆ ಮೇಲೆ, ಇಂಥ ಕಡೆಯಲ್ಲಿ ವ್ಯಾಕರಣ ದೋಷ, ಅಥವಾ ವೈಚಾರಿಕ ಲೋಪಗಳಿವೆ; ಅದನ್ನು ಸರಿಪಡಿಸಿಕೊಳ್ಳಿರೆಂದು ಬರೆದ ಆಚಾರ್ಯರು, ಒಂದು ದೃಷ್ಟಿಯಿಂದ ನನಗೂ ಆಚಾರ್ಯರೇ ಎನ್ನಬಹುದು!

ಇಂಥ ಒಂದು ಒಳ್ಳೆಯ ಸಾಹಿತ್ಯಾಭಿಮಾನಿ. ಸಾಹಿತಿ, ವಿಮರ್ಶಕ, ಸಂಶೋಧಕ, ಉಪಾಧ್ಯಾಯರನ್ನು ಮದ್ರಾಸ್ ಸರ್ಕಾರ, ಮೈಸೂರು ಸರ್ಕಾರ, ಸಾಹಿತ್ಯ ಅಕಾಡೆಮಿ, ಶ್ರೀ ಶೃಂಗೇರಿ ಪೀಠ, ಮೊದಲಾದ ಉನ್ನತ ಸ್ಥಾನಗಳು ಸಂಭಾವನೆ, ಗೌರವ ಪ್ರಶಸ್ತಿಗಳನ್ನು ಕೊಟ್ಟು ಗೌರವಿಸಿದ್ದು, ಅವರ ಕೃತಿಯನ್ನೂ ಅವರ ಪ್ರತಿಭೆಯನ್ನೂ ನಾಡು ಗುರುತಿಸಿದೆ ಎಂಬುದರ ಕುರುಹು.

ಎಲ್ಲಕ್ಕೂ ಮೇಲಾಗಿ ಮನದಲ್ಲಿದ್ದಂತೆ ನುಡಿವ, ನುಡಿದಂತೆ ನಡೆವ ಹಾಗೂ ಬರೆವ ನನ್ನ ಹಿರಿಯ ಸ್ನೇಹಿತರಾದ ಶ್ರೀ ಆಚಾರ್ಯರ ಬಗ್ಗೆ ಸಂಭಾವನಾ ಗ್ರಂಥವೊಂದು ಪ್ರಕಟವಾಗುವುದು ಸ್ತುತ್ಯವೂ, ಪ್ರಸ್ತುತವೂ ಆಗಿದೆ. ಈಗಲೆ ಅವರಿಗೆ 60 ವಯಸ್ಸು ತುಂಬಿದೆಯಂತೆ! ಆದರೆ, ಅವರನ್ನು ಕಂಡರೆ, ಅವರ ವಯಸ್ಸು ಕಾಣುವುದಿಲ್ಲ, ಕಳೆದ 15 ವರ್ಷಗಳಿಂದಲೂ–ನನಗೆ ತಿಳಿದಂತೆ-ಇದ್ದ ಹಾಗೆಯೇ ಇದ್ದಾರೆ! ಶ್ರೀ ಪರಮಾತ್ಮನು ಅವರಿಗೆ ದೀರ್ಘವಾದ ಆಯುಸ್ಸು, ನೆಮ್ಮದಿ, ಆರೋಗ್ಯ, ಸಮೃದ್ಧಿ. ಸಂತಸಗಳನ್ನು ನೀಡಿ, ಇನ್ನೂ ಉತ್ತಮ ಕೃತಿಗಳು ಅವರ ಲೇಖನಿಯಿಂದ ಹೊರಬೀಳಲೆಂದು ಮನಃಪೂರ್ವಕವಾಗಿ ಬಯಸುತ್ತೇನೆ.

XXXXXXXX

೧೩. ಸಾರ್ಥಕವಾದ ಅರುವತ್ತು

—ಶ್ರೀ ಬನ್ನಂಜೆ ಗೋವಿಂದಾಚಾರ್ಯ, ಮಣಿಪಾಲ,

ಕಲಿತವರೆಲ್ಲ ತಿಳಿದವರಲ್ಲ.
ತಿಳಿದವರೆಲ್ಲ ಕಲಿತವರೇ ಅಲ್ಲ.
ತುಂಬ ಕಲಿಯದೆ ಹೆಚ್ಚು ತಿಳಿದವರುಂಟು.
ಏನೂ ತಿಳಿಯದೆ ಹೆಚ್ಚು ಕಲಿತವರೂ ಉಂಟು.

ಎರಡನೆಯ ವರ್ಗದವರು ಬಹಳ ಮಂದಿ ಸಿಗುತ್ತಾರೆ. ಏಕೆಂದರೆ ಅವರಿಗೆ ಹೊರಗೆ ಜನರ ಮುಂದೆ ತೋರಿಸಿ ತಿರುಗಾಡಲು ಸರ್ಟಿಫಿಕೇಟುಗಳಿರುತ್ತವೆ, ಒಳಗೆ ಏನೂ ಇರದಿದ್ದರೂ ಕೂಡ. ಮೊದಲನೆಯ ವರ್ಗದವರು ಬಹಳ ಕಮ್ಮಿ ಮಂದಿಯಿರುತ್ತಾರೆ. ಒಳಗೆ ತುಂಬಿದ್ದರೂ ಹೊರಗೆ ಖಾಲಿಯಾದವರು, ವೆಂಕಟರಾಯಾಚಾರ್ಯರು ಇಂಥ ಸ್ವಲ್ಪ ಸಂಖ್ಯಾಕರಲ್ಲಿ ಸೇರಿದವರು. ಅವರಿಗೆ ಬಹುಮತ ಇಲ್ಲ. ಆದರೆ 'ಬಹುಮತಿ' ಇದೆ. ಬಹುಮಾನ ಸಲ್ಲಿಸುವ ವ್ಯಾವಹಾರಿಕರ ಸಂಖ್ಯೆ ಕಮ್ಮಿಯಿರಬಹುದು, ಆದರೆ ಅಭಿಮಾನಕ್ಕೆ ಕಮ್ಮಿಯಿಲ್ಲ.

ಹುಟ್ಟಿದ ಬಹಳ ಮಂದಿ 60 ನೆಯ ಮಜಲನ್ನು ಮುಟ್ಟುತ್ತಾರೆ–ದಾಟುತ್ತಾರೆ. ಆದರೆ ಅದು ಜನರ ಗಮನಕ್ಕೆಯೆ ಬರುವುದಿಲ್ಲ. ಅರುವತ್ತು ಆಗುವುದೇ ಒಂದು ಸಾಧನೆ ಅಲ್ಲ. ಬಹಳಷ್ಟು ಸಾಧನೆ ಮಾಡಿದ ಒಂದು ಜೀವಕ್ಕೆ ಅರುವತ್ತು ತುಂಬಿದಾಗ ಆ ಅರುವತ್ತಕ್ಕೆ ಒಂದು ಬೆಲೆ ಬರುತ್ತದೆ. ಈ ಕಾರಣದಿಂದಲೆ ವೆಂಕಟರಾಯಾಚಾರ್ಯರಿಗೆ ಅರುವತ್ತು ಆದಾಗ, ಅವರ ಪರಿಚಯ ಉಳ್ಳವರಿಗೆ ಇದೊಂದು ಮಹತ್ತ್ವದ ಘಟನೆ ಆಯಿತು. ಇತಿಹಾಸದ ಪುಟಗಳಲ್ಲಿ ತನ್ನನ್ನು ಹುದುಗಿಸಿ ವರ್ತಮಾನ ನಿರಪೇಕ್ಷರಾಗಿ ಬದುಕಿದ ಅವರ ಅರುವತ್ತು ವರ್ಷಗಳ ಬದುಕಿನ ಇತಿಹಾಸವನ್ನು ಅವರ ಗೆಳೆಯರು ನೆನಪಿಸಿಕೊಳ್ಳ ತೊಡಗಿದರು. ನೆನಪಿಸುತ್ತಾ ನೆನಪಿಸುತ್ತಾ ಮೂಗಿಗೆ ಬೆರಳೇರಿಸಿಕೊಳ್ಳ ತೊಡಗಿದರು.

ಹೆಚ್ಚು ಅನುಕೂಲತೆಗಳಿಲ್ಲದ ಒಂದು ಹಳ್ಳಿಯಲ್ಲಿ ಬೆಳೆದ ಈ ಜೀವ ಇಷ್ಟು ಕಡತಗಳನ್ನು, ಇಷ್ಟು ತಾಡವಾಲೆಗಳನ್ನು ಹೇಗೆ ತಿರುವಿಹಾಕಿತು? ಯಾವಯಾವುದೋ ಘಟನೆಗಳ ಸತ್ಯಾಸತ್ಯತೆಯ ಬಗೆಗೆ, ಕಾಲ–ದೇಶಗಳ ನಿಖರತೆಯ ಬಗೆಗೆ ಹೇಗೆ ತಾರ್ಕಿಕವಾದ ಪ್ರಬಂಧಗಳನ್ನು ಮಂಡಿಸಿತು? ಇದು ಆಚಾರ್ಯರನ್ನು ಓದಿ ಬಲ್ಲ ಹಲವರಿಗೆ ಪ್ರಶ್ನೆಯಾಗಿಯೆ

ಉಳಿಯಿತು. ಇದಕ್ಕೆ ಉತ್ತರವಾಗಿ ನಿಲ್ಲಬಲ್ಲ ಆಳವಾದ ಮನನ. ಚಿಂತನ-ಮಂಥನ ಆಚಾರ್ಯರ ಜೀವನದುದ್ದಕ್ಕೂ ನಡೆದಿದೆ ಎಂದೆ ಅವರಿಗೆ ಅರುವತ್ತು ತುಂಬಿದಾಗ ಅದಕ್ಕೊಂದು ಅರ್ಥ ಬಂತು. ಸಾರ್ಥಕವಾದ ಅರುವತ್ತು ಮಿತ್ರರಲ್ಲಿ ಅಭಿಮಾನ ತುಂಬಿಸಿತು.

ಆಚಾರ್ಯರ ಜೀವನದಲ್ಲಿ ಇನ್ನೂ ಇಂಥ ಸಾರ್ಥಕವಾದ ದಶಕಗಳು ಹಲವು ಬರಲಿ; ಅವರಿಂದ ನಾಡಿಗೆ, ಸಾಹಿತ್ಯಕ್ಕೆ ಇನ್ನಷ್ಟು ಸೇವೆ ಸಲ್ಲಲಿ ಎಂದು ಈ ಸಂದರ್ಭದಲ್ಲಿ ನಾನು ಹಾರಯಿಸುತ್ತೇನೆ.

x x x x x x

೧೪. ಶ್ರೀ ಸುರತ್ಕಲ್ಲು ವೆಂಕಟರಾಯಾಚಾರ್ಯರು

— ಶ್ರೀ ಕೆ. ಎಸ್. ಪದ್ಮನಾಭಾಚಾರ್ಯ, ಐಕಳ,

ನಾನು ಕಂಡು ತಿಳಿದಂತೆ, ಶ್ರೀ ಸುರತ್ಕಲ್ಲು ವೆಂಕಟರಾಯಾಚಾರ್ಯರು ತಮ್ಮ ವಿದ್ವದ್ಗುಣದಿಂದ ಮೈಗೂಡಿ ಬಂದಿರುವ ಒಂದು ವಿಶೇಷ ವ್ಯಕ್ತಿ. ಅವರು ಕನ್ನಡ ಪಂಡಿತರಾಗಿ ಪ್ರಸಿದ್ಧರಾಗಿದ್ದರೂ, ಗಂಗಾಸಾಗರ ಸಂಗಮದಂತೆ ಸಂಸ್ಕೃತ ಪಾಂಡಿತ್ಯವನ್ನು ಜತೆಗೂಡಿಸಿಕೊಂಡು ಪ್ರಖ್ಯಾತರಾದವರು. ಅವರನ್ನು ಮೊದಲ ಬಾರಿ ಭೇಟಿಯಾದಾಗ ಅವರು ತನ್ನ ಸಂಸ್ಕೃತ ಪಾಂಡಿತ್ಯದಿಂದ ಆ ಹಿಂದೆಯೇ ತಾನು ಗಳಿಸಿಕೊಂಡಿರುವ ಅವರ ವಿಶೇಷ ತರಹದ ಪ್ರಬಂಧದ ಉತ್ತಮ ಪ್ರಶಸ್ತಿಗಳನ್ನು ಕಂಡು ಅರಿತು ಅಚ್ಚರಿಗೊಂಡೆ, ಅದರಿಂದಲೇ ಅವರ ಆ ಕನ್ನಡ ಸಾಹಿತ್ಯದ ಸಾಮರ್ಥ್ಯವು ಪರಿಷ್ಕಾರಗೊಂಡಿರುವುದು ಸಹಜವೇ ಆಗಿದೆ ಎಂದೂ ತಿಳಿದುಕೊಂಡೆ, ಅಂದರೆ, ಈ ಹಿಂದಿನಿಂದಲೂ ಪರಂಪರಾಗತವಾಗಿಯೇ ಬಹುಮಂದಿ ಭಾಷಾ ವಿದ್ವಾಂಸರು ತಾವು ಈ ಉಭಯ ಭಾಷೆಗಳಲ್ಲಿಯೂ ಪ್ರೌಢಿಮೆ ತಳೆದು ಬಂದ ಹಿರಿಮೆ ಈ ದ. ಕ. ಜಿಲ್ಲೆಗೆ ಇದೆ ಎಂಬುದನ್ನು ಸ್ಮರಿಸಿಕೊಂಡೆ. ಈ ಮೊದಲು ಸಂಸ್ಕೃತ ಕಲಿತು ಪ್ರಸಿದ್ಧರಾದವರಲ್ಲಾ ಮತ್ತೆ ಕನ್ನಡದ ವಿದ್ವತ್ತೆಯನ್ನು, ಪಡೆದೇ ಇಲ್ಲಿಯ ಶಾಲೆಗಳ ಪಂಡಿತರೆನಿಸಿಕೊಂಡಿದ್ದಾರೆ.

ಅವರೇ ಹೇಳಿಕೊಳ್ಳುತ್ತಿದ್ದಂತೆ ಶಾಲೆಯಲ್ಲಿ ಸಣ್ಣ ಅಧ್ಯಾಪಕರಂತೆಯೇ ತೋರಿಸಿಕೊಂಡು, ಶಾಲೆಯ ಹೊರಗೆ ದೊಡ್ಡ ಪಂಡಿತರಂತೆ ಹೆಸರಾಂತವರಾಗಿದ್ದರು. ಇದೇ ಅವರ ಜೀವನದಲ್ಲಿ ವಿಶೇಷವಾದ ವಿಷಯವೊಂದು. ಇದೀಗ ಶಾಲೆಯಿಂದ ನಿವೃತ್ತರಾಗಿದ್ದರೂ ಕೂಡಾ, ಅವರ ಜೀವನದಲ್ಲಿ ಆ ಪಂಡಿತತನದ ವಿಧವಿಧದ ಸಾಹಿತ್ಯಕ ಸಾಧನೆಯ ಸಾಧಕ ಗುಣದಿಂದ, ಶೋಧನಾತ್ಮಕ ಗುಣದಿಂದ ಮೆರೆದಿರುವ ಅವರ ಚರಿತ್ರೆ ದೊಡ್ಡದಾಗಿದೆ.

ಒಮ್ಮೆ ಉಡುಪಿಯಲ್ಲಿ ಕನಕದಾಸರ 4 ನೆ ಶತಮಾನೋತ್ಸವದ ಕಾಲದ ಸಭೆಯಲ್ಲಿ 'ಕನಕನ ಭಕ್ತಿಗೆ ಒಲಿವ ಕೃಷ್ಣ ತಿರುಗಿ ನಿಂತಿರುತ್ತಾನೆ' ಎಂಬುದು 'ಜನರು ಆ ಕಾಲದಲ್ಲಿ ಕಟ್ಟಿದ ಕತೆಯೇ ಹೊರತು, ಅದು ಸತ್ಯವಲ್ಲ. ಆ ಶ್ರೀಕೃಷ್ಣನ ಪ್ರತಿಷ್ಠೆಯೇ ಹಾಗೆ ಪಶ್ಚಿಮಾಭಿಮುಖಿಯಾಗಿಯೆ ಸಾಗಿತ್ತು' ಎಂಬ ವಾದವನ್ನು ಪ್ರಮುಖರೊಬ್ಬರು ಮಂಡಿಸಿ ಪ್ರಸಿದ್ಧಪಡಿಸಿದಾಗ; ಎಲ್ಲರೂ 'ಹಾಗಾದರಾಗಲಿ' ಎಂದು ಒಪ್ಪಿ ಸುಮ್ಮನಿದ್ದಾಗ; ಆ ವಿಷಯದ ಮೇಲೆ ಕೆದಳಿದವರು ಒಬ್ಬರೇ, ಇದೇ ಶ್ರೀ ವೆಂಕಟರಾಯಾಚಾರ್ಯರು. ಅದನ್ನು ವಿರೋಧಿಸಿ, 'ಕನಕನ ಭಕ್ತಿಗೆ ಒಲಿದು ಕೃಷ್ಣ ತಿರುಗಿ ನಿಂತುದು ಐತಿಹಾಸಿಕ ಸತ್ಯವಾಗಿ ಸಾಗಿ ಬಂದ ಮೇಲೆ. ಅದನ್ನು ಈಗ 'ಅಲ್ಲ, ಸುಳ್ಳು' ಎನ್ನುವುದು ಸರಿಯಲ್ಲ; ಹಾಗೆ ಇತಿಹಾಸಕ್ಕೆ,

ಇತಿಹಾಸಕಾರರಿಗೆ ಅವಮಾನ ಮಾಡತಕ್ಕಂತಹದು ಏಷ್ಟಕ್ಕೂ ಸಲ್ಲ; ಅದಕ್ಕೆ ಇರುವ ಅನೇಕ ಐತಿಹಾಸಿಕ ಪುರಾವೆಗಳನ್ನು ಸಂಗ್ರಹಿಸಿಕೊಂಡು, 'ಇಂತಹ ದಾಖಲೆಗಳನ್ನು ಅಲ್ಲಗಳೆಯಲು ಸಾಧ್ಯವಿಲ್ಲ'ವೆಂಬ ತನ್ನ ಮಾತನ್ನು ಅದಕ್ಕೆ ಪ್ರತಿಯಾಗಿ ಮಂಡಿಸಿದರು. ಇದಕ್ಕೆ ಪತ್ರಿಕೆಗಳಲ್ಲಿ, ಸಭೆಗಳಲ್ಲಿ, ವೈಯಕ್ತಿಕವಾಗಿ ಕೂಡಾ ಭಾರೀ ಪ್ರಸಾರಕೊಟ್ಟು, ಈ ತನ್ನ ಪ್ರತಿವಾದವನ್ನು ಬಹಳವಾಗಿ ಮೆರೆಸಿ, ಆ ವಾದವನ್ನು ಮೆರೆಯಲು ಅವಕಾಶ ಕೊಡದೆ, ಅದನ್ನು ಮೆರೆಸಿದ ಮಹಾಹಟವಾದಿ, ಇದೇ ಶ್ರೀ ವೆಂಕಟರಾಯಾಚಾರ್ಯರು ಎಂಬುದನ್ನು ನಾವೆಲ್ಲರೂ ಬಲ್ಲೆವು.

ಮತ್ತೊಮ್ಮೆ, 'ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಸಿದ್ಧ ಅರ್ಥಕೋಶದಲ್ಲಿ ಪ್ರಕಟಿತವಾದ ಕೆಲವು ಶಬ್ದಗಳ ಅರ್ಥ ವಿಚಾರಗಳು ಸರಿಯಿಲ್ಲ, ಸತ್ಯವಲ್ಲ' ಎಂದು ಅದನ್ನು ಸಕಾರಣ ತಿಳುಹಿಸಿ, ಅದನ್ನು ಪ್ರಸಾರ ಮಾಡಿದ್ದು ಸಾಹಿತ್ಯ ಶೂರರಲ್ಲಿ ಒಬ್ಬರೇ ಆದ ಇದೇ ಶ್ರೀ ವೆಂಕಟರಾಯಾಚಾರ್ಯರೆಂಬುದನ್ನು ಅಂದು ಬಲ್ಲವರೆಲ್ಲರೂ ಬಲ್ಲರು.

ಅವರ ಚರಿತ್ರೆಯಲ್ಲಿ ಇಂತಹ ಹತ್ತಾರು ಸತ್ಯನಿಷ್ಠುರತೆಯನ್ನು ನಿರಂತರ ಸಾಧಿಸಿಕೊಂಡು, ಅದರಲ್ಲಿ ಗೆದ್ದುಕೊಂಡು, ಜನಪ್ರಿಯರಾಗಿಯೇ ಬಾಳಿದ ವಿಷಯಗಳು ಪ್ರಸಿದ್ಧವಾಗಿಯೇ ಇವೆ. ಈ ಕ್ರಮದಲ್ಲಿ ತನ್ನ ವಿದ್ವತ್ತನ್ನು ವಿಜಯಗೊಳಿಸಿ, ತನ್ನ ಸಾಹಿತ್ಯ ಯಾತ್ರೆಯನ್ನು ಸುಖಮಯವಾಗಿ ಮುಂದುವರಿಸಿಕೊಂಡು ಬಂದ ನಮ್ಮ ಗೆಳೆಯರಾದ ಶ್ರೀ ವೆಂಕಟರಾಯಾಚಾರ್ಯರು ಬಹು ಧನ್ಯರು, ಬಹು ಅಭಿನಂದನೀಯರು!

ಅವರ ಬಾಳು ಇನ್ನೂ ಹಸನಾಗಿ ಯಶೋಭರಿತವಾಗಿ ಸಾಗಲಿ ಎಂದು ಹಾರೈಸಿ ಭಗವಂತನನ್ನು ಪ್ರಾರ್ಥಿಸುತ್ತಿದ್ದೇನೆ. [ಅವರ ನಿಜಸಂಸಾರದ ವಿರಸವೇ ಈ ಸಾಹಿತ್ಯ ಸಂಸಾರದಲ್ಲಿ ಅವರನ್ನು ಸರಸಗೊಳಿಸಿ, ಅಭಿವೃದ್ಧಿಗೊಳಿಸಿ ಸಾಗಿಸಿಕೊಂಡು, ಈ ಸಮಾಜ ಪ್ರಯೋಜನಕಾರಿಯನ್ನಾಗಿ ಅವರನ್ನು ಮಾಡಿತೋ ಏನೋ! ಅದೇನೇ ಇರಲಿ! ಈಗ ಸಾಹಿತ್ಯಪರ ಸ್ನೇಹದಿಂದ ಬೆಳಗಿ, 60 ನ್ನು ದಾಟುತ್ತಾರೆ. ಅವರ ವಿಮರ್ಶನ ಶಕ್ತಿ-ಸಂಶೋಧನ ಶಕ್ತಿಗಳು ಜನೋಪಕಾರಿಯಾಗುವಂತೆ, ಅವರಿಗೆ ನಾವು ಸನ್ಮಾನಿಸುವುದು ವಿಹಿತವಾಗಿದೆ!]

X X X X X X X X

೧೫. ತುಂಬಿದ ಕೊಡ

—ಪ್ರಾ. ವೆಂಕಟೇಶ ಹುಣಸೀಕಟ್ಟೆ, ಹೊನ್ನಾವರ.

'ತುಂಬಿದ ಕೊಡ ತುಳುಕಲಾರದು' ಎಂಬುದು ಲೋಕರೂಢಿ. ಹೃದಯ ವೈಶಾಲ್ಯ, ಸಂಪೂರ್ಣ ಜ್ಞಾನಾರ್ಜನೆ, ಪಾಂಡಿತ್ಯವುಳ್ಳ ವ್ಯಕ್ತಿಗಳ ಪರಿಚಯ ನಮಗಾದಾಗ ಮಾತು ಮರುಕಳಿಸದಿರಲಾರದು. ಶ್ರೀ ವೆಂಕಟರಾಯಾಚಾರ್ಯರನ್ನು ಪ್ರಪ್ರಥಮವಾಗಿ (1973 ರಲ್ಲಿ) ಕಂಡಾಗ ನನಗಾದ ಅನುಭವ ಇದು.

ನನ್ನ ಕಥಾಸಂಕಲನ 'ಜೀವನ ತರಂಗ'ದ ಬಿಡುಗಡೆಯ ಸಮಾರಂಭದಲ್ಲಿ ಮೊದಲ ಭೇಟಿಗೆ, ಯಾರು ಈ ಮುದುಕರು? ಎಂಬ ಪ್ರಶ್ನೆ ತಲೆಯಲ್ಲಿ ಮೂಡಿ, ಕಣ್ಣು ಮಿಳುಕಿಸದೆ ಅವರನ್ನೇ ನೋಡುತ್ತ ಕುಳಿತಿರುವಾಗ ಶ್ರೀ ಕೆ. ಅ. ಉಡುಪ (ಯುಗಪುರುಷದ ಸಂಪಾದಕರು) ಪರಸ್ಪರ ಪರಿಚಯ ಮಾಡಿಕೊಟ್ಟಾಗ, ಮೊದಲಿಗೆ ನನ್ನ ಕೈಗಳು ತಾವೇ ಒಂದಾಗಿ ನಮಸ್ಕರಿಸಿದವು. ಅವರ ವ್ಯಕ್ತಿತ್ವ ಅಂಥಾದ್ದು. ಆಚಾರ್ಯರು ತಮ್ಮ ಅಮೃತ ಹಸ್ತದಿಂದ ನನ್ನ ಕಥಾ ಸಂಕಲನವನ್ನು ಬಿಡುಗಡೆಗೊಳಿಸಲು ಬಂದಿದ್ದರು.

ಈ ಮೊದಲು ಅವರ ಬಗೆ ಕೇಳಿದ್ದೆ, ಓದಿದ್ದೆ, ಆದರೆ ಪ್ರತ್ಯಕ್ಷ ನೋಡುವ ಸುಸಂದರ್ಭ ಬಂದೊದಗಿದ್ದು ಆಗ, ಅವರ ಸರಳವಾದ ಅರ್ಥಪುಷ್ಟಿಯುಳ್ಳ ಮಾತು ಕೇಳಿ ಮುಂದೆ ಮಾತಾಡುವ ಧೈರ್ಯ ಬರಲಿಲ್ಲ. ಅಂಥವರೊಬ್ಬರಿಂದ ನನ್ನ ಕೃತಿ ಬಿಡುಗಡೆಯಾಗುತ್ತಿರುವದು ಸುಯೋಗವೆಂದು ಮನದಲ್ಲೆ ಹಿಗ್ಗಿದೆ. ಅವರು ಸೂಕ್ಷ್ಮವಾಗಿ ವಿಮರ್ಶಿಸುತ್ತಾ ಕತೆಯೊಂದರ ಬಗೆಯನ್ನು ಸೂಚಿಸಿದರು. ನಡೆ, ನುಡಿಗಳ ವಿದ್ವತ್ತಿನಿಂದ 'ಆಚಾರ್ಯ' ಎಂಬ ತಮ್ಮ ಹೆಸರನ್ನು ಸಾರ್ಥಕಪಡಿಸಿಕೊಂಡಿರುವ ಶ್ರೀಯುತರ ವಿಮರ್ಶೆ–ಸಂಶೋಧನೆಗಳ ಆಸಕ್ತಿ ಮೆಚ್ಚಿಕೊಳ್ಳುವಂಥಾದ್ದು.

ಕಿನ್ನಿಗೋಳಿಯಿಂದ ಮೂಲ್ಕಿ ವರೆಗೆ ಸಹಪ್ರಯಾಣಿಕರಾದ ಆಚಾರ್ಯರ ವ್ಯಕ್ತಿತ್ವವನ್ನು, ಪಾಂಡಿತ್ಯವನ್ನು ಮೆಲುಕುಹಾಕುತ್ತಾ ಊರು ಸೇರಿದೆ. ಆ ಸುಸಂದರ್ಭದ ನೆನಹು ನನ್ನ ಮನಸ್ಸಿನಂಗಳದಿಂದ ಎಂದೂ ಮರೆಯಾಗುವಂಥದಲ್ಲ. ಅವರು ಮಾತಾಡುವುದು ಕಡಿಮೆ, ಮಾಡಿದ್ದು ತುಂಬ; ಕನ್ನಡಿಗರಿಗೆ ನೀಡಿದ್ದು ಹೆಚ್ಚು, ನಮ್ಮಿಂದ ಪಡೆದದ್ದು ಬಹುಶಃ ಬಲುಕಡಿಮೆಯಿರಬಹುದು.

ಅರುವತ್ತು ವರ್ಷ ಹೆಜ್ಜೆಯಿಡುತ್ತಾ ಬಂದ ಆಚಾರ್ಯರು ವಿಮರ್ಶೆಯ. ಸಂಶೋಧನೆಯ ಹೆಗ್ಗುರುತುಗಳನ್ನು ಮೂಡಿಸುತ್ತಾ ಬಂದಿದ್ದಾರೆ. ಕನ್ನಡದ ಹಿರಿಮೆ–ಗರಿಮೆಗಾಗಿ ದುಡಿದಿದ್ದಾರೆ. ನಮಗೆ ಕನ್ನಡದಲ್ಲಿ ಆಸಕ್ತಿ ಬೆಳೆಯಲು ಮಾರ್ಗದರ್ಶಕರಾಗಿದ್ದಾರೆ, ಇನ್ನೂ ಅವರಿಗೆ ಹೆಚ್ಚು ಶ್ರಮಿಸುವ ಶಕ್ತಿ ಬರುವಂತೆ ಕಟೀಲು ಶ್ರೀ ದುರ್ಗಾಪರಮೇಶ್ವರಿಯಲ್ಲಿ ನನ್ನದೊಂದು ಪ್ರಾರ್ಥನೆ; ಕನ್ನಡಿಗರೆಲ್ಲರ ಹರಕೆ!

XXXXXXXX

೧೬. ಆಪ್ತ ಮಿತ್ರ

— ಶ್ರೀ ಟಿ. ಚಂದ್ರರಾಜ ಸೆಟ್ಟಿ, ಸಿದ್ಧಕಟ್ಟೆ.

ನನ್ನ ಅತ್ಯಂತ ಆಪ್ತರ ಸಾಲಿನಲ್ಲಿರುವ ವೆಂಕಟರಾಯಾಚಾರ್ಯರನ್ನು ನಾನೊಮ್ಮೆ ಮೊದಲಿಗೆ ಕಂಡೆನು, ಅವರ ಮಾತು ಒರಟಾಗಿ ಕಂಡರೂ, ಆ ಮಾತುಗಳು ನೇರಾಗಿ ಹೃದಯಕ್ಕೆ ಮುಟ್ಟುವಂಥವು, ಹೃದಯದಲ್ಲಿ ಕತ್ತರಿಯನ್ನಿಟ್ಟುಕೊಂಡು, ಬಾಯಲ್ಲಿ ಮಾತ್ರ ಉಪಚಾರಕ್ಕಾಗಿ ಆಡುವ ಮಾತುಗಳಲ್ಲ, ಅವರು ಬೆಳೆದ ಪರಿಸರ ಅವರನ್ನು ಸತ್ಯಸಂಧ-ಛಲವಾದಿಯಾಗಿ ಬೆಳೆಸಿದೆ. ಬಾಲ್ಯದಲ್ಲಿ ತಾಯಿಯ ಅಗಲಿಕೆ, ವಿದ್ಯಾಭ್ಯಾಸದ ಅಪೂರ್ಣತೆ ಒದಗಿದ್ದರೂ, ಹಿರಿಯ ಗೆಳೆಯರ ತುಸ ಆಸರೆಯಲ್ಲಿ ಸ್ವಪರಿಶ್ರಮದಿಂದಲೆ ಅಧ್ಯಾಪಕರಾದರು; ಅಂತೆ, ಸಾಹಿತ್ಯ ವಿಮರ್ಶೆಗೆ ತೊಡಗಿದ್ದರೂ, ಸಂಶೋಧನೆಯೆ ಅವರ ಮೆಚ್ಚಿನ ವಿಷಯ, ಇಂತು ಅವರ ಹೆಸರು ಸಾಹಿತ್ಯ ಕ್ಷೇತ್ರಕ್ಕಿಂತಲೂ ಸಂಶೋಧನ ರಂಗದಲ್ಲಿ ಹೆಚ್ಚಾಗಿ ಕೇಳಿಬರುತ್ತದೆ.

ಸ್ವಾಭಿಮಾನಕ್ಕೆ ಧಕ್ಕೆಯಾಗದೆ, ದುರಭಿಮಾನವನ್ನು ದೂರವಿಟ್ಟು, ಇದ್ದುದನ್ನು ಇದ್ದಂತೆ ಹೃದಯಕ್ಕೆ ನಾಟುವಂತೆ ಮಾತುಗಳನ್ನಾಡುವ ವೆಂಕಟರಾಯಾಚಾರ್ಯರು ನನ್ನ ದೃಷ್ಟಿಯಲ್ಲಿ ‘ಸಹೃದಯ’ರೆನ್ನಿಸಿದ್ದಾರೆ.

ಪುಣೆಯ ಭಂಡಾರ್ಕರ್ ಸಂಶೋಧನ ಸಂಸ್ಥೆಯ ಡಾ, ಪಿ. ಕೆ. ಗೋಡೆಯವರಿಗೂ ಇವರಿಗೂ ತುಂಬ ವಿಶ್ವಾಸವುಂಟಾಗಿತ್ತು, ಇವರ ಜಿಜ್ಞಾಸೆಗಳಿಗೆ ಉತ್ತರದ ಸಹಕಾರ, ತನ್ನ ಹಲವು ಲೇಖಗಳ ಮೇಲಚ್ಚುಗಳನ್ನು ಅವರು ನೀಡಿದ್ದಾರೆ, ಡಾ. ಪಿ. ಕೆ. ಗೋಡೆಯವರ ಸಂಭಾವನ ಗ್ರಥದಲ್ಲಿ, ಡಿಲ್ಲಿಯ ಡಾ. ರಘುವೀರರ ‘ಶ್ರದ್ಧಾಂಜಲಿ’ಯಲ್ಲಿ ಆಚಾರ್ಯರು ಬರೆದ ಸಂಸ್ಕೃತ ಲೇಖನಗಳಿವೆ, ದ, ಕ. ಜಿಲ್ಲೆಯ-ಕರ್ನಾಟಕದ – ಪ್ರಾತಿನಿಧಿಕವೆಂಬಂತೆ ಆ ಲೇಖನಗಳಿಂದ ನನಗೆ ತುಂಬ ಹಿಗ್ಗು. ಸಾವಿರಾರು ಮಂದಿ ತರುಣ ಲೇಖಕ ಮಿತ್ರರಲ್ಲಿ ಕೆಲವರಾದರೂ ಇವರಂತೆ, ವಿಶಾಲ ಕ್ಷೇತ್ರಗಳಲ್ಲಿ ಪ್ರಸಿದ್ಧಿ ಪಡೆವಂತಾಗಲಿ!

× × × ×

೧೭. ಶ್ರೀ ಕೆ. ವಿ. ಆಚಾರ್ಯರು

—ಶ್ರೀ ಮೋಹನದಾಸ, ಸುರತ್ಕಲ್ಲು.

ಶ್ರೀ ಕೆ. ವೆಂಕಟರಾಯಾಚಾರ್ಯರು ನಾವೆಲ್ಲ ಕಂಡಂತೆ – ತಿಳಿದಂತೆ–'ಏಕಾಂಗವೀರ'ರಾಗಿ ಕನ್ನಡ ಸಾಹಿತ್ಯ ವಿಮರ್ಶೆ–ಸಂಶೋಧನೆಗಳ ಆಳವಾದ ಅಭ್ಯಾಸದಲ್ಲಿ ಸಾರ್ವಭೌಮತ್ವ ಪಡೆದವರಲ್ಲಿ ಒಬ್ಬರು. ಆವೊಂದು ಸಾಹಿತ್ಯ ವಿಚಾರವನ್ನು ಚುರುಕಾಗಿ ನೆರವೇರಿಸುವರಲ್ಲದೆ, ವಿಲಂಬತನವೂ ಪರಪ್ರತ್ಯಯವೂ ಇವರ ರಕ್ತಕಣದಲ್ಲಿ ಸೇರಿಲ್ಲ. 18 ವರ್ಷದ ಹಿಂದೆ ತಲೆಯೆತ್ತಿದ ಇವರ ಮುಂದಾಳ್ತನದ 'ವಿಜಯ ಸಾಹಿತ್ಯ ಮಾಲೆ' ಇದಕ್ಕೆ ಸಾಕ್ಷಿ. "ನಾವೆಲ್ಲರೂ ಇಂತಹ ಸಾಹಿತ್ಯ ಪ್ರಕಟನೆಗೆ ಯೋಚಿಸುತ್ತಲೇ ಕುಳಿತೆವು, ಆಚಾರ್ಯರು ತನ್ನದೊಂದು ಪ್ರಕಟನಾಲಯ ಪ್ರಾರಂಭಿಸಿ, ಹತ್ತಾರು ವರ್ಷಗಳೇ ಸಂದವು" ಎಂದು ಶ್ರೀ ಬಿ. ಪಿ. ಸೋಮಯಾಜಿ ಉದ್ಗಾರವಾಡಿದ್ದರಂತೆ. ತನಗೊಂದು ಪ್ರಾಚೀನ ಕೃತಿ ಸಿಕ್ಕಿ ಉತ್ತಮವಿದ್ದು ಅಚ್ಚಾಗಿಲ್ಲದರೆ, ಅದರ ಶುದ್ಧ ಪ್ರತಿ ತಯಾರಿಸುವುದು, ಅದಕ್ಕೆ ಹಲವಾರು ಹಸ್ತಪ್ರತಿ ತಲಾಸು ಮಾಡುವುದು, ಅದರ ಪರಿಚಯ ಲೇಖನಗಳನ್ನು ಪ್ರಕಟಿಸುವುದು, ಮುದ್ರಣಕ್ಕೆ ಹಲವರ ನೆರವು ಪಡೆಯುವುದು, ಹೀಗೆ ಅನೂಚಾನ ಕಾರ್ಯ ಸಾಗಿಸಿ, ಒಂದೆರಡು (ನಾಲ್ಕಾರು) ವರ್ಷಕ್ಕೊಮ್ಮೆ ಅದನ್ನು ಮುದ್ರಿಸುವುದು ಆಚಾರ್ಯರ ಜಾಯಮಾನ. ಇದರಿಂದಾಗಿ, ಇವರಿಗೆ ಕೆಲವು ವಿದ್ವಾಂಸರಲ್ಲಿ ವಿವಾದವೇಳುತ್ತದೆ; ಕೆಲವೊಮ್ಮೆ ಮುದ್ರಣ ಭಾರದಿಂದ ಕೈಸುಡುತ್ತದೆ. ಆ ಪರಿಸ್ಥಿತಿಯಲ್ಲೂ ಸುರತ್ಕಲ್ಲಿನ–'ವಿಜಯ ಸಾಹಿತ್ಯ ಮಾಲೆ'ಯ ಹೆಸರು ಕನ್ನಡದ–ಭಾರತದ–ಭೂಪಟದಲ್ಲಿ ಸಾಹಿತ್ಯಕವಾಗಿ ಚಿರಕಾಲ ಉಳಿಯುವಂತೆ ಶ್ರಮಿಸಿದವರಲ್ಲಿ ಆಚಾರ್ಯರೊಬ್ಬರು.

ಆಚಾರ್ಯರು 'ಸವ್ಯಸಾಚಿ'ಯಾಗಿದ್ದಾರೆ. ಸಾಹಿತ್ಯ ಕೃತಿಗಳ ವಿಮರ್ಶೆಯು ಅವರಿಗೆ ಒಗ್ಗುತ್ತದೆ. ಹಲವಾರು ವಿದ್ವಾಂಸರ ಲೇಖಗಳ ಪುನಃ ಸಂಶೋಧನೆಗೆ ಅವರಲ್ಲಿ ಬಲು ಹಿಗ್ಗು. ಈ ಉಭಯ ವಿಧಗಳಲ್ಲೂ ತಮ್ಮ ವೈಚಾರಿಕ ರೀತಿಯ ವಿಲಕ್ಷಣ ಶೈಲಿಯನ್ನು ಸಾಧಿಸಿದ್ದಾರೆ; ಕೀರ್ತಿಯನ್ನು ಗಳಿಸಿದ್ದಾರೆ.

ಶ್ರೀಯುತರು ತೀವ್ರ ಹಟವಾದಿ; ಎಂದೂ ನೈಜವನ್ನು ಮೀರದೆ, ಸಂಪ್ರದಾಯ ಪದ್ಧತಿಗಳನ್ನು ಕಾಪಾಡುವ ಚಾಣಾಕ್ಷ ಲೇಖಕರು: ಅಶೋಕನ ಶಾಸನದಲ್ಲಿ 'ಸತಿಯ ಪುತ್ರ'ವೆಂದರೆ, ವ್ಯಾಸಭಾರತದಲ್ಲಿ 'ಸತಿಯಾಃ', 'ಸತೀನರಾಃ' ಎಂಬಂತೆ, ಸತೀ ಪ್ರಧಾನವಾದ ಕೌಟುಂಬಿಕ ಪದ್ಧತಿಯೆಂದೂ, ಅದು ತೌಳವರ ಹೆಸರೆಂದೂ ಪ್ರಥಮತಃ ಆಚಾರ್ಯರು ಬರೆದರು. (ಈ ಬಗೆಗೆ ಇತರ ವಿದ್ವಾಂಸರು ಹೇಳಿದ್ದು ಹೇಗೆ, ಏಕೆ ಸರಿಯಲ್ಲೆಂದು ವಿವರಿಸಿದರು) 'ಸಾಹಿತ್ಯದ ಹಿನ್ನೆಲೆ'ಯಲ್ಲಿ ಈ ಲೇಖವಿದೆ.

ವಿಶಾಖದತ್ತನ 'ಮುದ್ರಾರಾಕ್ಷಸ' ನಾಟಕದಲ್ಲಿ 'ವೃಷಲ'ವೆಂಬುದು ಗ್ರೀಕ್ 'ಬರ್ಸಿಲಿಯೊಸ್' ಶಬ್ದದ ಸಂಸ್ಕೃತ ರೂಪವೆಂದು (ಮಹಾ ರಾಜನೆಂಬ ಅರ್ಥವೆಂದು) ಐವರು ವಿದ್ವಾಂಸರು ಬರೆದಿದ್ದರು, (ಶ್ರೀ ಗೋವಿಂದ ಪೈ; ಡಾ. ಎಚ್. ಸೇಥ್, ಶ್ರೀ ಕುಂಞನ್‌ರಾಜು, ಶ್ರೀ ಸುಶೀಲ ಕೆ. ಬೋಸ್, ಶ್ರೀ ಅಮಲಾನಂದ ಘೋಷರ ಲೇಖನ). ಆ ಶಬ್ದ ಋಗ್ವೇದ, ಕೌಟಿಲ್ಯನ ಅರ್ಥಶಾಸ್ತ್ರ, ವ್ಯಾಸಭಾರತ, ಮನುಸ್ಮೃತಿ, ಇತ್ಯಾದಿ ಭಾರತೀಯ ಗ್ರಂಥಗಳಲ್ಲಿದೆ; ಧರ್ಮಭ್ರಷ್ಟ, ಇತ್ಯಾದಿ ಅರ್ಥವೆಂದು (ಆ ನಾಟಕ ದಲ್ಲೂ ಇದೇ ಅರ್ಥವೆಂದು) ಆಚಾರ್ಯರು ಬರೆದರು (ಸಾಹಿತ್ಯ ಹಾಗೂ ಸಂಶೋಧನೆ, 'ಉಪಾಯನ'ಗಳಲ್ಲಿ ಈ ಲೇಖನವಿದೆ).

ಲಕ್ಷ್ಮೀಶನ ಜೈಮಿನಿ ಭಾರತದ ಶ್ರೀರಾಮಾಶ್ವಮೇಧ ಕಥೆಯನ್ನು ಜೈಮಿನಿಯ ಮೂಲಕೃತಿಯೊಂದಿಗೆ ಹೋಲಿಸಿ ಆಚಾರ್ಯರು ಬರೆದಿದ್ದರು (ಸಾಹಿತ್ಯ–ಸಂಶೋಧನೆ). ಈ ಲೇಖವನ್ನು ಕುರಿತು ಬಿಚ್ಚು ಮನಸ್ಸಿಂದ ವಿಮರ್ಶಿಸಿದ ಶ್ರೀ ಬನ್ನಂಜೆ ಗೋವಿಂದಾ ಚಾರ್ಯರು 'ಇಂತಹ ಲೇಖನ ಇದು ವರೆಗೆ ಬಂದಿಲ್ಲ'ವೆಂದರಂತೆ!

'ಲಕ್ಷ್ಮೀಶನ ಒಂದು ಪದ್ಯ (2 ವಿಚಾರಗಳು) ಎಂಬಲ್ಲಿ, (ಸುಧನ್ವ–ಪ್ರಭಾವತಿ ಯರ ಸಂವಾದದಲ್ಲಿ), ಸಂದರ್ಭೋಚಿತವಾಗಿ ಹೇಗೆ ವಿಂಗಡಿಸುವುದೊಳಿತೆಂದು ಮೂಲದ ಆಧಾರದಿಂದ ಆಚಾರ್ಯರು ವಿವರಿಸಿದರು. 'ಏಕಾದಶೀ ವ್ರತಮುಲಂಘ್ಯ ಶ್ರಾದ್ಧ' ವೆರಡನ್ನೂ ಒಂದೇ ದಿನವಾಚರಿಸುವ (ಕೋಟ ಹಾಗೂ ಹವ್ಯಕರ) ಕ್ರಮವು ಇಲ್ಲಿ ಉಕ್ತವೆಂದೂ ಸಾರಿದ್ದಾರೆ (ಸಾಹಿತ್ಯದ ನೋಟಗಳು ನೋಡಿ), ಈ ವರೆಗೆ ಆಚಾರ್ಯರ ಲೇಖನಗಳ ನಾಲ್ಕು ಸಂಕಲನಗಳು ಪ್ರಕಟವಾಗಿವೆ. (ಇನ್ನೂ ಹಲವಾರು ಸಂಕಲನ ಗಳಾಗುವಷ್ಟು ಉಳಿದಿವೆ)

o o o o o o

ಆಚಾರ್ಯರು ಸ್ವಾಭಿಮಾನಿ, ತಮ್ಮೆದುರಿನಲ್ಲಿ ಏನಾದರೂ ಕೊರತೆ ಎನಿಸಿದರೆ, ಕೆಣಕಿದ ಫಣಿರಾಜನಂತೆ ಕಿಡಿಕಿಡಿಯಾಗುತ್ತಾರೆ. ಉದಾ: ಮಂಗಳೂರಿನ ಶ್ರೀ ರಾಜ್ಯಲಕ್ಷ್ಮಿ ದೇವಾಲಯದಲ್ಲಿ ಮಾನವಮಿಗೆ ಭಜನೆಯಿತ್ತು. ನಾವಿಬ್ಬರು ಹೋಗಿದ್ದೆವು, ಆಚಾರ್ಯರು ಪದ್ಯ ಹೇಳಬೇಕೆಂದು ಅವರು ಹೇಳಿದರು. ಆದರೆ, ಆಚಾರ್ಯರೆಂದ ಪದ್ಯವನ್ನು ಅವರು ಅನುಸರಿಸಿ ಹೇಳಲಾಗಲಿಲ್ಲ, ಆಚಾರ್ಯರೇ – ಒಬ್ಬರೇ – ನಾಲ್ಕಾರು ಪದ್ಯಗಳನ್ನು ಅನೂ ಚಾನವಾಗಿ ಹಾಡಿದರು. ರಾಗಗಳ ಆಲಾಪದಲ್ಲಿ ತಾರಕದಿಂದ ಮಂದ್ರಕ್ಕೆ, ಮಂದ್ರದಿಂದ ತಾರಕಕ್ಕೆ ಸಾಗುವ ವೈಖರಿಗೆ ಅವರೆಲ್ಲರೂ ಮೈಮರೆತರು. ಪಕ್ಕವಾದ್ಯದವರು ಅಲ್ಲಿಯವರು ಇದಕ್ಕೆ ತಕ್ಕ ನುಡಿಸಿದ್ದು ರಂಜಕವಾಗಿತ್ತು!

ಯಕ್ಷಗಾನ ಕೂಟದ ಅರ್ಥಗಾರಿಕೆಯಲ್ಲಿ ಆಚಾರ್ಯರು ಬಿಗುವುಳ್ಳವರು, ಇದಿರಾಳಿ ಔಚಿತ್ಯವನ್ನು ಮೀರಿದರೆ, ತಕ್ಕಂತೆ ತಿದ್ದುವರು. ಕೆಲವೆಡೆ ಅಸಂಗತವಾದರೆ, ಇದಿರಾಳಿಯ

ಬಗೆತವನ್ನು ತಾನೇ ಚಿತ್ರಿಸಿ ಮುನ್ನಡೆಸುವರು, ಆಗ ಪೌರಾಣಿಕ ವಿಚಾರಗಳ ಮಥನದಿಂದ ಸಭಾಸದರಿಗೊಂದು ಸರಸ ಸನ್ನಿವೇಶ ಒದಗುತ್ತದೆ, ಆಗಾಗ ಬಯಲಾಟದಲ್ಲಿ, ನಾಟಕದಲ್ಲಿ ಆಚಾರ್ಯರು ಚಿಕ್ಕಪುಟ್ಟ ತರದ ವೇಷಗಳನ್ನೂ ನಿರ್ವಹಿಸಿದ್ದು, ರಸಿಕರಿಗೆ ಆಪ್ಯಾಯನವಾಗಿದೆ. ಧಾರ್ಮಿಕ ಭಾಷಣಗಳಲ್ಲಿ ಜಟಿಲ ಪ್ರಶ್ನೆಗಳಿಗೆ ಸಾಧಾರವಾದ ವಿಶ್ಲೇಷಣೆಯಿತ್ತು ವಿವರಿಸಿ ಸಹೃದಯರಿಗೆ ಆನಂದವಾಗುವಂತೆಳಸಿದ್ದಾರೆ. ಹಲವೆಡೆ ಆಚಾರ್ಯರಿಗೆ ಸನ್ಮಾನ ಪತ್ರಗಳು, ಪ್ರಶಸ್ತಿಗಳು, ಗೌರವಗಳು ಲಭಿಸಿವೆ, 60ರ ಹರೆಯದ ಆಚಾರ್ಯರನ್ನು ಇದೀಗ ಗೌರವಿಸುವುದು ಉಭಯ ಭೂಷಣ. ಮಹಾಜನರೂ ಸರಕಾರವೂ ಆಚಾರ್ಯರಿಗೆ ಯಥಾಯೋಗ್ಯವಾದ ಪುರಸ್ಕಾರವನ್ನು ನೀಡುವಂತಾಗಲಿ! ಜಯ ಭುವನೇಶ್ವರಿ!

Z X X X X X X

೧೮. ವಿಲಕ್ಷಣ ವ್ಯಕ್ತಿ

—ಶ್ರೀ ಬಾಲಕೃಷ್ಣ ಕತ್ತಲೆಸಾರ್, ಬಜಪೆ.

ಅದೊಮ್ಮೆ ಅನಿರೀಕ್ಷಿತವಾಗಿ ಸುರತ್ಕಲ್ಲಿನಲ್ಲಿ ಮಾನ್ಯ ವೆಂಕಟರಾಯಾಚಾರ್ಯರ ಭೇಟಿಯಾಯಿತು. ಯಥಾರ್ಥವಾಗಿ ನಾವು ಗುರು ಶಿಷ್ಯರಲ್ಲದಿದ್ದರೂ, ನಮ್ಮೊಳಗೆ ಅಂತಹ ಒಂದು ಭಾವನೆ ಇತ್ತೆಂಬುದು ನಿಸ್ಸಂದೇಹ. ಕ್ಷೇಮ ಸಮಾಚಾರವಾದ ಬಳಿಕ. 'ತಮ್ಮ ಅಭಿನಂದನ ಸಮಿತಿಯ ಕಾರ್ಯಕಲಾಪಗಳು ಎಲ್ಲಿಯ ವರೆಗೆ ಮುಂದುವರಿದುವು?" ಎಂದು ಆಸಕ್ತಿಯಿಂದ ಪ್ರಶ್ನಿಸಿದೆ. ನಾನು ಪ್ರಶ್ನಿಸಿದುದೇ ತಡ, ಜೋಗದ ಜಲಪಾತದಂತೆ ಅಬ್ಬರದ ಮಾತಿನ ಭೋರ್ಗರೆತ; ಕೆಂಡದ ಮಂಡಲವಾದ ಕಣ್ಣುಗಳು; ಸಿಟ್ಟಿನಿಂದ ಬಿಸಿಯಾದ ನಿಟ್ಟುಸಿರು; ತಡೆಯಲಾರದ ಭಾವನೆಯ ತಾಕಲಾಟ ಇವುಗಳಿಂದ ಯಾರಿಗೋ (?) ಆಚಾರ್ಯರ ಬೈಗಳ ಸುರಿಮಳೆಯಾಯಿತು. ನಾನು ಅವಾಕ್ಕಾಗಿ ಸುತ್ತಲೂ ಕಣ್ಣಾಡಿಸಿದೆ. ಯಾರಾದರೂ ನೋಡಿದರೆ ಏನೆಂದು ತಿಳಿದುಕೊಂಡಾರು? ಜನರೆಲ್ಲರೂ ಸಂಚರಿಸುವ ಬೀದಿಯ ಬದಿಯಲ್ಲಿ ನಮ್ಮ ಸಂಭಾಷಣೆ. ಮನಸ್ಸಿಗೆ ತುಸು ಮುಜಗರವಾದರೂ, ಆಚಾರ್ಯರ ವ್ಯಕ್ತಿತ್ವವನ್ನು ಚೆನ್ನಾಗಿ ಅರ್ಥಮಾಡಿಕೊಂಡ ನಾನು–ಈ ಅವಧೂತರ ಅವಾಂತರದ ಹಿಂದೆ ಒಂದು ಬಲವಾದ ವೇದನೆಯ ರಹಸ್ಯವಿರಲೇಬೇಕೆಂದು ಮನಗಂಡೆ. ಆಗ ಅವರ ಬಾಯಿಂದ ಉದುರುತ್ತಿದ್ದ ಆಣಿಮುತ್ತುಗಳನ್ನು ನಾನು ಒಂದೊಂದಾಗಿ ಪೋಣಿಸಲು ಪ್ರಯತ್ನ ನಡೆಸಿದಾಗ ಅವರ ವೇದನೆಗೆ ಒಂದು ಸ್ಪಷ್ಟರೂಪ ಬಂದಂತಾಯಿತು.

ಅವರ ಅಭಿನಂದನ ಗ್ರಂಥದಲ್ಲಿ ಉತ್ತಮ ಲೇಖನಗಳನ್ನು ಪ್ರಕಟಿಸಲು ಆದಾಗ ಹಲವೆಡೆ ವ್ಯವಹರಿಸಲಾಗಿತ್ತು; ಈ ಮೊದಲು ಹಲವೆಡೆ ಇಂತಹ ಗ್ರಂಥಗಳಿಗೆ ಲೇಖನ ಕಳುಹಿ ಅಭ್ಯಾಸವಿಲ್ಲದುದರಿಂದಲೋ ಏನೋ. ತೀರಾ ಮಕ್ಕಳ ಹಾಗೆ ಒಬ್ಬಿಬ್ಬರು ಗೆಳೆಯರು ಆಚಾರ್ಯರ ಪರಿಚಯ ಬರೆದು ಕಳುಹಿದ್ದರಂತೆ. ಮತ್ತೊಬ್ಬರು ಪ್ರಸಿದ್ಧ ಲೇಖಕರು ಲೇಖನ ಕಳುಹಿದ್ದರೆ, ಅಲ್ಲಿ ಬಹುಶಃ ಸ್ವಜಾತೀಯರ–ಸ್ವಸಮಾನಸ್ಕಂಧರ–ಉಲ್ಲೇಖನಗಳಿದ್ದುವಂತೆ. ಪ್ರಾಚ್ಯವಿದ್ಯಾಪರಿಣತರ ಹೆಸರುಗಳು ಮಾತ್ರವಿರುವ. ಸ್ವಾರ್ಥಪರವಾದ, ಸಂಕುಚಿತ ದೃಷ್ಟಿಗೆ ಮಹತ್ವ ಕೊಡುವ ಆ ಲೇಖಕರಿಗೆ ಆ ಲೇಖನದ ಬಗೆಗೆ ಇತರರಿಂದ ಶಿಫಾರಸು ಬಂದಿದೆಯೆಂದೂ ನನಗೆ ತಿಳಿಸಿ, ಆಚಾರ್ಯರೂ ನಕ್ಕರು. ನಾನೂ ಗೊಳ್ಳೆಂದು ನಕ್ಕೆನು!

'ಸಾಹಿತ್ಯ' 'ಸಂಸ್ಕೃತಿ'ಗಳೆಂಬ ಪದಗಳನ್ನು ಬಳಸಿ ಆಳವಾದ ಅಭ್ಯಾಸವಿಲ್ಲದೆ ಒಬ್ಬೊಬ್ಬರು ಲೇಖನಗಳನ್ನು ಕಳುಹಿದ್ದರಂತೆ, ಭಟ್ಟಯಿಳಿಸಿದರೆ, ಆ ಲೇಖಗಳು ಅರೆ ವಾಸಿಗೆ ಬರುವಂತಿದ್ದುವಂತೆ! ಈ ತರದ ಕಟು-ಸತ್ಯವಿಚಾರ ಹೇಳುವಾಗ ಆಚಾರ್ಯರು ಒಳ್ಳೆಯ ಭಾಷೆಯಲ್ಲಿ ಬೈಗಳ ಸರಮಾಲೆಯನ್ನೆ ಹೆಣೆದರೆ ಆಶ್ಚರ್ಯವೇನು? (ಈ ಬಗೆಯನ್ನು ಪತ್ರದಲ್ಲಿ ಬರೆವಂತಿಲ್ಲ!) "ಲೇಖಕರಿಂದ ಲೇಖನಗಳನ್ನು ತರಿಸಿಕೊಳ್ಳುವುದೇನೂ ದೊಡ್ಡದಲ್ಲ. ಅವುಗಳ ಪ್ರಕಟನೆಯ ಮೊದಲಿಗೆ ಅರಿಸಿಕೊಳ್ಳುವುದೆ ದೊಡ್ಡದು" ಎಂದರು. ಆಚಾರ್ಯರು.

ವಿಲಕ್ಷಣ ವ್ಯಕ್ತಿತ್ವದ ಈ ಹಿರಿಯ ವಿದ್ವಾಂಸರ (ಆಚಾರ್ಯರ) ಹೃದಯದ-ಬುದ್ಧಿಯ-ಔನ್ನತ್ಯಕ್ಕೆ ಇದೊಂದು ನಿದರ್ಶನ! ಇದಕ್ಕೆ ಆಚಾರ್ಯರನ್ನು ನಾನು ಮನಃಪೂರ್ವಕ ಶಿರಬಾಗಿ ನಮಸ್ಕರಿಸುವೆನು!

X X X X X X

೧೯. ಸಾಹಿತ್ಯಾರಾಧಕರು

—ಶ್ರೀ ಮೋಹನದಾಸ ಜಿ. ಕಿಣಿ, ಕಾಪು.

ಖ್ಯಾತ ಸಂಶೋಧಕರಾಗಿ, ಸಾಹಿತಿಯಾಗಿ ಕನ್ನಡ ಸಾಹಿತ್ಯ ರಂಗದಲ್ಲಿ ಕಳೆದ ಮೂವತ್ತಾರು ವರ್ಷಗಳಿಂದ ಶ್ರೀ ವಿದ್ವಾನ್ ಕೆ. ವೆಂಕಟರಾಯಾಚಾರ್ಯರು ಗೈದ ಕೃಷಿ ಬೃಹದ್ಗಾತ್ರದ್ದು; ಇಂತಹ ಹಿರಿಯ ಬುದ್ಧಿಜೀವಿ, ಸಂಶೋಧಕ, ಸಾಹಿತಿಯನ್ನು ಕನ್ನಡ ಸಾರಸ್ವತ ಪ್ರಪಂಚಕ್ಕೆ ಪರಿಚಯಿಸುವುದರಲ್ಲಿ ನಮ್ಮೆಲ್ಲರ ಅಭಿಮಾನ ಹಿಗ್ಗಿಲಾಗಿದೆ.

ಉಡುಪಿಯ ಸೋದೆ ಮಠದ ಬಗೆಗೆ ಊರವರ ಕಾಣಿಕೆಗಳನ್ನು ಶೇಖರಿಸುವಲ್ಲಿ ನಿಯುಕ್ತವಾದ 'ಕಾವಿನ ಕಲ್ಲು ಮಠ'ದ ಪರಂಪರೆಯವರಿವರು. ಮನೆತನದ ಕೊಡುಗೆಯಾದ ಹಿರಿಯರಂತೆ ವಿಪುಲ ವಿದ್ವತ್ತು ಹಾಗೂ ಪುಸ್ತಕ ಭಂಡಾರ ಇವರಲ್ಲಿದೆ. ಶ್ರೀ ಲಕ್ಷ್ಮೀ ನಾರಾಯಣಾಚಾರ್ಯ ಮತ್ತು ಸೌ. ಭಾಗೀರಥಿಯಮ್ಮನವರ ಏಕಮಾತ್ರ ಸುಪುತ್ರರಿವರು. (12-4-19). ನೆರೆಯ ಚಿತ್ರಾಪುರ ಮಠದ ವೃಂದಾವನಸ್ಥ ಶ್ರೀ ವಿದ್ಯಾಪೂರ್ಣ ತೀರ್ಥರಲ್ಲಿ ಇವರಿಗೆ ಸಂಸ್ಕೃತ ಪಾಠವಾಗಿತ್ತು. ಹಿರಿಯರ ಪರಂಪರೆ, ಗುರುಗಳ ಆಶೀರ್ವಾದ. ಪೂರ್ವಾರ್ಜಿತ ಪುಣ್ಯ, ಸ್ವಪರಿಶ್ರಮಗಳಿಂದ ಕನ್ನಡ-ಸಂಸ್ಕೃತಗಳಲ್ಲಿ ವಿಶೇಷ ಪಾಂಡಿತ್ಯವನ್ನು ಗಳಿಸಿದವರಿವರು.

ಸಾಹಿತ್ಯ ವಿಮರ್ಶನ ಮತ್ತು ಸಂಶೋಧನ, ಈಯೆರಡು ಕ್ಷೇತ್ರಗಳಲ್ಲಿ ದುಡಿಯುವವರಿಗೆ ಇವರ 'ಸಾಹಿತ್ಯದ ಹಿನ್ನೆಲೆ', 'ಸಾಹಿತ್ಯ ಹಾಗೂ ಸಂಶೋಧನೆ'ಗಳು ಅತ್ಯುಪಯುಕ್ತಗಳೆನಿಸಿವೆ. (ಇತ್ತೀಚಿನ 'ಸಾಹಿತ್ಯ-ಸಂಶೋಧನೆ', 'ಸಾಹಿತ್ಯದ ನೋಟಗಳು' ಇಲ್ಲಿ ಉದಾಹರಣೀಯಗಳು),

ಉತ್ತರ ರಾಮ ಕಥೆ, ಆದಿತ್ಯ ಪುರಾಣ, ಶುಕಸಪ್ತತಿಗಳನ್ನೂ ಇವರು ಪ್ರಕಟಿಸಿದ್ದಾರೆ. ಹಲವಾರು ವಿದ್ವಾಂಸರು ಇವರ ಲೇಖನ-ಗ್ರಂಥಗಳನ್ನು ಮೆಚ್ಚಿ ಕೊಂಡಾಡಿದ್ದಾರೆ.

ಕನ್ನಡದ ಕುರಿತು ಇವರ ದೃಷ್ಟಿಕೋನ ಉದಾತ್ತವಾಗಿದೆ: "ಸಾಹಿತ್ಯ ಎಲ್ಲ ಕಾಲದ ಎಲ್ಲ ಜನರ ಹಿತಾಸಕ್ತಿಯನ್ನು ವಹಿಸುವಂತಿರಬೇಕು. ಸಾಹಿತ್ಯ ದೇಹಕ್ಕೆ ವಿಮರ್ಶನ-ಸಂಶೋಧನಗಳು ಕೈಗಳೆರಡಿದ್ದಂತೆ. ಕೇವಲ ಕಲ್ಪನೆಗಳಿಗಿಂತ ಆಧಾರಿತ ವಿಚಾರಗಳನ್ನು ಜನರಿಗೆ ಒದಗಿಸುವ ಸಾಹಿತಿಯೆ ಚಿರಸ್ಥಾಯಿಯಾಗಿ ನಿಲ್ಲಬಲ್ಲ; ಸಾಹಿತ್ಯ ಕ್ಷೇತ್ರದಲ್ಲಿ ಸಾಮಾಜಿಕ ಹಿತಾಭಿವ್ಯಂಜಕತೆಯಿತ್ತು; ಸಾಹಿತಿಗೆ ಸಾಮಾಜಿಕ ಗೌರವವೂ ಇತ್ತು. ಈಗ

ವೈಯಕ್ತಿಕ ಸ್ವಾರ್ಥ ಸಾಧನೆಗೆ, ಗುಂಪುಗಾರಿಕೆಗೆ ಸಾಹಿತ್ಯ ಬಳಸಲಾಗುತ್ತಿದೆ. ಇದರಿಂದ ತಾತ್ಕಾಲಿಕ ಸುಖದ ಹೊರತು ಬೇರೆ ಫಲವಿಲ್ಲ. ಸಾಹಿತಿ ಜನತೆಯ ಅಂಧಕಾರವನ್ನು ನೀಗಿ, ಸುಜ್ಞಾನ ಜ್ಯೋತಿಯನ್ನು ಬೆಳದಿಸುವಲ್ಲಿ ಎಲ್ಲರಿಗೂ–ಮುಖ್ಯವಾಗಿ ರಾಜಕಾರಣಿಗೆ–ಆದರ್ಶನಿರಬೇಕು".

‘ಸಾಹಿತ್ಯಾರಾಧಕ’ರಲ್ಲಿ ಒಬ್ಬರಾದ ಶ್ರೀ ಆಚಾರ್ಯರ ಮಹತ್ವದ ಸಾಧನೆಯ ವ್ಯಾಪ್ತಿ, ತತ್ತ್ವಲಗಳು ಅನಂತಗಳಾಗಲಿ!

× × × ×

೨೦. ಪ್ರತ್ಯಕ್ಷದರ್ಶನ

— ಶ್ರೀ ಶಿವಶಂಕರ, ಮದ್ರಾಸ್.

ಶ್ರೀ ವೆಂಕಟರಾಯಾಚಾರ್ಯರು ಖ್ಯಾತ ಸಂಶೋಧಕರು, 'ಎಂಟೆದೆ'ಯ ಲೇಖಕರು. ಇವರನ್ನು ಕಾಣುವರೆ ಓರ್ವ ಪಾಮರ ಸಂಧಿಸುವುದೆಂತು? ಆದರೂ ಧೈರ್ಯದಿಂದ ಪತ್ರ ಬರೆದೆ. ಮರು ಟಪ್ಪಾಲಿಗೆ ಒಪ್ಪಿಗೆಯ ಅವರ ಪತ್ರ ಬಂತು. ಹಾಗೆಂದು, ಇವರು ತಂದಿರುವ ಸುರತ್ಕಲ್ಲಿನ ವಿದ್ಯಾದಾಯಿನೀ ಶಾಲೆಯ ವಠಾರಕ್ಕೆ ನೇರ ಹೋದೆನು. ಪ್ರಥಮ ಭೇಟಿಯಲ್ಲಿ ಆತ್ಮೀಯನಂತೆ ಇವರ ಆತಿಥ್ಯ, ಆದರೋಕ್ತಿಗಳನ್ನು ಕಂಡು ಅವಾಕ್ಕಾದೆನು. ಇವರ ಗ್ರಂಥ ಭಾಂಡಾರ, ವಿದ್ವಾಂಸರಲ್ಲಿ ಪತ್ರವ್ಯವಹಾರಗಳನ್ನು ಕಂಡಾಗ, ದೈವಬಲ ದಿಂದಲೂ ತನ್ನ ಪರಿಶ್ರಮದಿಂದಲೂ ಇವರು ಯಶೋದುಂದುಭಿಯನ್ನು ಮೊಳಗಿಸಿ ದ್ದಾರೆಂಬಲ್ಲಿ ಸ್ವಯಂ ಪ್ರತ್ಯಕ್ಷದರ್ಶಿಯಾದಾಗ ನನಗೇನೂ ಅನುಮಾನವಿಲ್ಲ!

"ಯಾಕಪ್ಪಾ ಇವರಿಗೆ ಇಂತಹ ಚಟುವಟಿಕೆಗಳು? ನಾಟಕ, ಕತೆ, ಕಾದಂಬರಿ, ಕವಿತೆ ಬರೆಯುತ್ತಿದ್ದರೆ ಹೆಚ್ಚು ಹಣ ಗಳಿಸಬಹುದಿತ್ತು" ಎಂದೂ ಅನ್ನಿಸುವುದು. ಇವರಿಗೆ ಹಣದಾಸೆ ಇಲ್ಲ; ಉತ್ತಮ ಲೇಖನದಲ್ಲಿ ಆಸಕ್ತಿ. ಅವರೊಮ್ಮೆ 'ವಿಕ್ರಮ' ದಸರಾಂಕಕ್ಕೆ ಬರೆದುದರಲ್ಲಿದೆ: "ನಾಗರಿಕನಾದರೂ ಗುಣವಂತನಲ್ಲವಾದರೇನು ಪ್ರಯೋಜನವಿದೆ? ಗುಣವೇ ಪೂಜಾಸ್ಥಾನವು-ಗುಣಸಂವರ್ಧನೆಗೆ ಓದಿನ ನೆರವು ಬೇಕು. ಒಳ್ಳೆಯ ಸಂಸರ್ಗ ಕೂಡ ಬೇಕು. ಸಂಸರ್ಗದ ಗುಣದೋಷಗಳು ಓದಿನಿಂದ ವಿಮರ್ಶಿಸಲಾಗುತ್ತಿವೆ. ಓದಿಗೆ ಬೇಕಾದ ಕೃತಿಗಳಲ್ಲಿ ಸಾಮಾಜಿಕ ರೀತಿನೀತಿಗಳ ಆದರ್ಶ ರೂಪ ವಿವರಣವು ಅದೆಷ್ಟು ಹೆಚ್ಚಾಗಿರುವುದೋ, ಅಷ್ಟರ ಮಟ್ಟಿಗೆ ಅವು ಜನಪ್ರಿಯವಾಗುತ್ತವೆ". ಈ ಮೇಲಿನ ಮಾತಿಗೆ ಉದಾಹರಣವಾಗಿ ಅಲ್ಲಿ ವಿವರಿಸಿದ್ದರು: "ಸಂಸ್ಕೃತ ಸಾಹಿತ್ಯ ಪ್ರಪಂಚದಲ್ಲಿ ಮಹಾಕವಿ ಕಾಲಿದಾಸನ ಕಾವ್ಯ-ನಾಟಕಗಳು ಅತ್ಯುನ್ನತ ಮಟ್ಟದಲ್ಲಿವೆ; ಜನಪ್ರಿಯ ವಾಗಿವೆ." (ಕಾಲಿದಾಸನ ಕೃತಿಗಳಲ್ಲಿ ರಸನಿಮಿಷಗಳು-ಎಂಬ ಲೇಖ), ಈ ತರದ ಉದ್ದೇಶ ಸಾಧನೆ ಇತರರಿಗೆ ಹಿಡಿಸದಿದ್ದರೆ, ಅದಕ್ಕಾಗಿ ತನ್ನ ದಾರಿಯನ್ನು ಇವರು ಬದಲಾಯಿಸಿ ಕೊಳ್ಳುವವರಲ್ಲ; ಬದಲಾಯಿಸಿದ್ದೂ ಇಲ್ಲ. ಹಣ ಸಂಪಾದವೆ ಇರಬಹುದು, ಇಲ್ಲದಿರ ಬಹುದು; ಅದು ಬಹಳ ಕಾಲ ಉಳಿಯುವಂಥದ್ದಲ್ಲ. ತಮ್ಮ ಕೃತಿಗಳು ಸಾಮಾಜಿಕರಿಗೆ ಮೆಚ್ಚುಗೆಯಾದರೆ, ತಮ್ಮ ಕೀರ್ತಿ ಪತಾಕೆಯನ್ನು ಸದಾ ಕಾಪಾಡುತ್ತವೆಯೆಂಬುದೇ ಇವರ ಆಶಯ.

ಚಾರಿತ್ರಿಕ ವಿಚಾರಗಳನ್ನು ಬರೆಯುವಾಗ ಸತ್ಯಕ್ಕೆ-ಮನಸ್ಸಾಕ್ಷಿಗೆ ಇವರೆರಡೆಣಿಸಿ ದವರಲ್ಲ, ಆದರಿಂದಾಗಿ ಕೆಲವರ ಕೋಪಕ್ಕೆ ಇವರು ತುತ್ತಾಗಿದ್ದಾರೆ. ದೂರದ

ಅಜಂತಾ, ಹಂಪೆಗಳ ವರ್ಣನೆಯಲ್ಲಿ ಇತರರು ಮೈಮರೆತಿರುವಾಗ, ಇವರು ತಮ್ಮ ಕಾಲು ಬುಡದ–ಸಮೀಪದ–ವಿಶೇಷ ವಿಚಾರಗಳನ್ನು ಕುರಿತು ಲೇಖನಕ್ಕಿಳಿಸುತ್ತಿದ್ದಾರೆ. ‘ಮೂಡ ಬಿದಿರೆಯ ಅರಮನೆಯ ಪತ್ರ’ವೆಂದು ಲೇಖನದ ಶೀರ್ಷಿಕೆ (ಉಡುಪಿಯ ನವಯುಗದ ವಿಶೇಷಾಂಕ), ಅದರಲ್ಲಿ ತುಳುನಾಡಿನ ಜನತೆಯ ಹಲವಾರು ವಿಷಯಗಳನ್ನು ವಿವರಿಸಿದ್ದಾರೆ. (ಮಂಗಳೂರ ‘ಕಲಾದರ್ಶನ’ದ 1978ರ ಸಪ್ಟಂಬರ ಸಂಚಿಕೆಯಲ್ಲಿ ಅದರೊಂದು ಭಾಗವಿದೆ)

‘ನಮ್ಮ ಜಿಲ್ಲೆಯ ಉದ್ಯಮ’ವೆಂಬ ಲೇಖದಲ್ಲಿ ತಮ್ಮ ಮನದ ಆಳಲನ್ನು ತೋಡಿದ್ದಾರೆ: “ಇಲ್ಲಿ ಆವೆಡೆಯಲ್ಲೂ ಭೂಖನನವಾಗಿಲ್ಲ. ಪ್ರಾಚೀನ ರಾಜಮನೆತನಗಳು ಆಳಿದ ಎಡೆಗಳು ಹಲವಿವೆ. ಬಾರಕೂರು, ಉದ್ಯಾವರ, ಕಾಸರಗೋಡು ಇತ್ಯಾದಿ ಸ್ಥಳಗಳಲ್ಲಿ ಒಂದೆರಡೆಡೆಯಾದರೂ ಆ ಇಲಾಖೆಯ ಕೆಲಸ ಸಾಗಿದ್ದರೆ, ಇಲ್ಲಿಯ ಸಾಂಸ್ಕೃತಿಕ ದಂತೆ ಜೀವನದ ಬಗೆಗೂ ಹಲವಾರು ಸಂಗತಿಗಳು ತಿಳಿಯಲಡ್ಡಿಯಿಲ್ಲ”. ಈ ಲೇಖದಲ್ಲಿ ತುಳುನಾಡು ಶತಶತಮಾನಗಳ ಹಿಂದಿನಿಂದಲೂ ಕೃಷಿ, ವಾಣಿಜ್ಯ, ಶಿಲ್ಪಕಲೆ ಮುಂತಾದ ವಿಷಯಗಳಿಗೆ ಅಗ್ರಸ್ಥಾನವಿತ್ತೆಂದು ಇವರು ಸ್ಪಷ್ಟಿಸಿದ್ದಾರೆ.

ಶ್ರೀ ಆಚಾರ್ಯರು ಶುಕ ಸಪ್ತತಿ ಮುಂತಾದ ಕಾವ್ಯಗಳನ್ನು ಪ್ರಕಟಿಸಿದ್ದಾರೆ. ‘ಹಿತ್ತಲಗಿಡ ಮದ್ದಲ್ಲ’ ವೆಂಬಂತೆ, ಇವರನ್ನು ನಾವು ಸರಿಯಾಗಿ ಕಾಣುತ್ತಿಲ್ಲ. ಈ 60ನೆ ಹರೆಯದಲ್ಲಿ ಇವರಿಗೆ ಸನ್ಮಾನ–ಗ್ರಂಥ ಸಮರ್ಪಣೆಗಳಿಂದ ನಮಗೊಂದು ಆನಂದ! ಅದರಿಂದ ಇವರಿಗೂ ಆನಂದ! ಸಾಹಿತ್ಯಾಭಿಮಾನಿಗೂ ಆನಂದ!

X X X X X X X X

೨೧. ಅಂಗಿತೊಟ್ಟ ಋಷಿ

—ಶ್ರೀ ಎ. ಸದಾನಂದ ಹೆಬ್ಬಾರ, ಐರೋಡಿ,

ಅಂಗಿ ತೊಟ್ಟ ಋಷಿಯಂತಿದ್ದ ವ್ಯಕ್ತಿಯೊಬ್ಬರು ಅದೊಮ್ಮೆ ಸಭಾಭವನವನ್ನು ನಿಶ್ಶಂಕೆಯಿಂದ ಪ್ರವೇಶಿಸಿದರು. ಹಿಂದೆ ಮುಂದೆ ನೋಡದೆ ಸಿಕ್ಕಿದ ಆಸನದಲ್ಲಿ ಮಂಡಿಸಿದರು. ಇವರಾರೆಂದು ಪ್ರಶ್ನಿಸುವ ಬದಲು, ಅನೇಕ ಪುಸ್ತಕ-ಪತ್ರಿಕೆಗಳಲ್ಲಿ ಕಂಡ ಇವರ ಭಾವಚಿತ್ರದ ನೆನಪಿಂದಾಗಿ, ಇವರೇ ಸುರತ್ಕಲ್ ವೆಂಕಟರಾಯಾಚಾರ್ಯರೆಂದು ಗಟ್ಟಿಯಾಗಿ ಮನವರಿಕೆ ಬರುತ್ತದೆ.

ಸಭೆಯಲ್ಲಿ ಚರ್ಚೆಗೆ ತೊಡಗಿದ ವಿಷಯಗಳಲ್ಲಿ ತನಗೆ ಆಸಕ್ತಿಯಿಲ್ಲಾದರೆ ತನಗರಿವಿಲ್ಲಾದರೆ ಸುಮ್ಮನೆ ಅತ್ತಿತ್ತ ನೋಡುವ ಸ್ವಭಾವದ ಆಚಾರ್ಯರು, ಸಂಶೋಧನೆಗೆ-ಭಾಷಾ ವಿಜ್ಞಾನಕ್ಕೆ ಹೋದಿದ ಸಂಗತಿಯಾದರೆ ಚುರುಕಾಗುತ್ತಾರೆ; ಮೌನಚಾಗುತ್ತಾರೆ; ನಿರ್ದಿಷ್ಟ-ನಿರ್ದುಷ್ಟ 'ರೆಫರೆನ್ಸ್'ಗಳ ಸರಮಾಲೆಯನ್ನು ಎಸೆಯುತ್ತಾರೆ; ದಂಗುಬಡಿಸುತ್ತಾರೆ.

ಅಧ್ಯಯನ-ಅಧ್ಯಾಪನಗಳು ಜೊತೆಯಾಗಿ ಸಾಗಬೇಕೆಂಬುದಕ್ಕೆ ಆಚಾರ್ಯರೇ ಸಾಕ್ಷಾತ್ ನಿದರ್ಶನ, ನನ್ನ ಭಾವ ಶ್ರೀ ಯು. ನಾ. ಉಡುಪರ ಪುಸ್ತಕಗಳ ವ್ಯವಹಾರದಲ್ಲಿ, ಉಡುಪಿಯ ಭಾರತೀಯ ಅಧ್ಯಯನ ಸಂಸ್ಥೆಯ ವಿಚಾರದಲ್ಲಿ ಆಚಾರ್ಯರೊಂದಿಗೆ ಒಂದಾಗುವ ಭಾಗ್ಯ ಸಿಕ್ಕಿದ ನನಗೆ, ಈ ಅಂಗಿ ತೊಟ್ಟ ಋಷಿಯಂತಹ–ಜ್ಞಾನದ ಕಡಲಿನಾಳಕ್ಕೆ ಇಳಿದು ಮೇಲೆ ಬರಬಲ್ಲ–ಮರಿ ಮಂಜೇಶ್ವರರಂತಹರು ಇನ್ನೂ ಇರುವುದರಿಂದಾಗಿ ಕಾಲಗರ್ಭದ ಕತ್ತಲಲ್ಲಿ ಕರಗಿ ಹೋಗಬಹುದಾದ ಹಲವು ಹೊತ್ತಗೆ–ಬರಹಗಳು ಹೆಚ್ಚಿನ ಬೆಳಕು ಕಾಣುತ್ತವೆಯೆಂಬ ಭರವಸೆ.

XXXXXXXX

೨೨. ಚಿಕ್ಕ ಪರಿಚಯ

—ಶ್ರೀಮತಿ ಪ್ರೇಮಾ ಭಟ್, ಬೆಂಗಳೂರು.

ನೋಡಲು ಸಾಮಾನ್ಯರೆನಿಸುವ ತೆಳ್ಳನೆಯ ಶರೀರದ ವ್ಯಕ್ತಿ ಶ್ರೀ ವೆಂಕಟರಾಯಾಚಾರ್ಯರು, ಅವರ ಲೇಖನ ಆಗಾಗ 'ಯುಗಪುರುಷ' ಮೊದಲಾದ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದುದನ್ನು ನೋಡುತ್ತಿದ್ದೆ. ಕನ್ನಡ ಭಾಷಾ ಸಾಹಿತ್ಯದಲ್ಲಿ ಪ್ರಭುತ್ವವನ್ನು ಸಂಪಾದಿಸಿರುವ ಶ್ರೀ ಆಚಾರ್ಯರು ಆರೇಳು ವರ್ಷಗಳ ಕೆಳಗೆ ನಮ್ಮಲ್ಲಿಗೆ ಬಂದಾಗ, ಅವರಲ್ಲಿ ನಾನು ಕಂಡ ವಿಶಿಷ್ಟ ಗುಣ ತೀರಾ ಸರಳತನ. ಅವರ ಮೆಲುದನಿ, ಆ ದನಿಯಲ್ಲಿದ್ದ ತುಂಬು ಗಾಂಭೀರ್ಯ, ವಿಚಾರವಂತಿಕೆ, ಸಾಮಾನ್ಯತೆಯಲ್ಲಿ ನಾನು ಗುರುತಿಸಿದ್ದು ಅಸಾಮಾನ್ಯತೆಯನ್ನು.

ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿಯಲ್ಲಿ ಹುಟ್ಟಿ ಬೆಳೆದ ಇವರು ರಚಿಸಿದ್ದು ಶುದ್ಧ ಸಾಹಿತ್ಯವನ್ನು. ತಾವು ರಚಿಸಿದ ಬರೆಹಗಳಿಗೆ ಪಾಂಡಿತ್ಯದ ಪೋಷಾಕನ್ನು ತೊಡಿಸಿ, ಅದರ ಬಿಗುವನ್ನು ದೊಗಲೆಯಾದಿಸದೆ ಉದ್ದೀಪನಗೊಳಿಸಿ, ಕನ್ನಡ ಸಾಹಿತ್ಯಸರಸ್ವತಿಯ ಶ್ರೀಮಂತಿಕೆಯನ್ನು ಹೆಚ್ಚಿಸಿದ ಶ್ರೇಯಸ್ಸು ಅವರದು. ಶ್ರೀ ಆಚಾರ್ಯರು ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ದುಡಿದಿದ್ದಾರೆ. ಇಷ್ಟಾದರೂ, ಶ್ರೀಯುತರು ನಿಗರ್ವಿಗಳು.

ಶ್ರೀ ಆಚಾರ್ಯರಲ್ಲಿ ನಾವು ಕಾಣುವುದು ಸೃಜನಾತ್ಮಕವಾದ ಕೃತಿಯನ್ನು, ಅವರು ಮಾಡಿರುವ ಉತ್ತಮ ಕೆಲಸವೆಂದರೆ, ಪ್ರಾಚೀನ ಸಾಹಿತ್ಯವನ್ನು ತಾಳೆಗರಿಯಿಂದ ಪ್ರತಿತೆಗೆದು ಪ್ರಕಟಿಸಿರುವುದು. ವಿದ್ವಾಂಸರನೇಕರಿಂದ ಹೊಗಳಿಸಿಕೊಂಡ ಸಾಹಿತ್ಯದ ಹಿನ್ನೆಲೆ ಇತ್ಯಾದಿ ನಾಲ್ಕು ಸಂಕಲನಗಳು ಸಾಹಿತ್ಯಕ್ಕೆ ಶ್ರೀ ಆಚಾರ್ಯರ ಕೊಡುಗೆಗಳು. ಅವರ ಬರೆಹದಲ್ಲಿ ನಾವು ಬಹು ಮುಖ್ಯವಾಗಿ ಗಮನಿಸತಕ್ಕ ಅಂಶವೆಂದರೆ, ಸಾಮಾನ್ಯರಿಗೆ ಎಟುಕದ ಕೆಲವು ಬೌದ್ಧಿಕ ಸಿದ್ಧಾಂತಗಳ ಇಣುಕು ನೋಟವನ್ನು; ಭಾಷೆಯ ಬಿಗುವಿನಲ್ಲಿ ಚಿಮ್ಮುವ ಶುದ್ಧ ವೈಚಾರಿಕ ಸಂವೇದನೆಯನ್ನು; ಬರೆಹದ ಆಳವನ್ನು.

ಸಾಮಾಜಿಕರು ಶ್ರೀಯುತರ ಪ್ರತಿಭೆಯನ್ನು ಗುರುತಿಸಿ, ಆಗಾಗ ಗೌರವಿಸುತ್ತ ಬಂದಿದ್ದಾರೆ. ಶೃಂಗೇರಿಯ ಗುರುಗಳಿಂದಲೂ ಅವರು ಸನ್ಮಾನಿತರಾದರು. 60ರ ಅಂಚಿನಲ್ಲಿರುವ ಅವರಿಂದ ಕನ್ನಡ ಜನತೆಗೆ ಇನ್ನಷ್ಟು–ಮತ್ತಷ್ಟು ಉತ್ತಮ ಲೇಖನಗಳು ಹೊರಬರಲಿ ಎಂದು ಹಾರೈಸೋಣ.

× × ×

೨೩. ಗೆಳೆಯರ ಹರಟೆ

—ಶ್ರೀ 'ನವಗಿರಿನಂದ', ಮದ್ರಾಸ್.

"ಇದೇನಯ್ಯಾ, ನವಗಿರಿನಂದರೇ! ನಾನು ಅರುವತ್ತನೆಯ ವರ್ಷ ದಾಟುವ ಸಂಸ್ಮರಣದಲ್ಲಿ ನಿಮ್ಮನ್ನು ಸಂಧಿಸಿ 'ನಮಸ್ಕಾರ' ಅಂದರೆ, ನೀವೂ 'ನಮಸ್ಕಾರಾ'ಂತ ಇಷ್ಟುದ್ದ ಹೇಳಿ ಹೊರಟೇ ಬಿಟ್ರಲ್ಲಾ? ಅಪರೂಪದ ಸಂದರ್ಶನದಲ್ಲಿ ಏನಾದರೂ ವಿಶೇಷ ಮಾತುಕತೆ ಆಡಲೇಬೇಕಲ್ಲವೇ? ಹೆಚ್ಚು ಕಡಿಮೆ ನೀವೂ ನನ್ನ ಪ್ರಾಯದವರೇ, ನನ್ನ ಸರಿಸಮಾನರೇ, ನೀವೂ ಬೀಡಿ ಬೆರಳಿನವರು, ನನಗೂ ಒಂದು ಕೊಡಿರಲ್ಲಾ" ಎಂದು ನನ್ನ ಕೈ ಹಿಡಿದರು, ವೆಂಕಟರಾಯಾಚಾರ್ಯರು. ಅವರ ಜಿಬ್ಬದ ಬೆನ್ನಿಗೊಂದು ಆನಂದದಿಂದ ತಟ್ಟಿ, ಬೀಡಿಗೊಟ್ಟು, ನಾನು ಒಂದು ಹಚ್ಚಿಕೊಂಡು ಹೇಳಿದೆ: "ಈ ದುರಭ್ಯಾಸ ನಿಮಗೂ ಇದೆಯೋ?"

"ಇನ್ನೊಬ್ಬರಿಗೆ ಹೇಳಲಿಕ್ಕೆ ಇದು ದುರಭ್ಯಾಸ, ನಾವೇ ಮಾಡಿದರೆ ಸದಭ್ಯಾಸ ಅಲ್ಲವೇನು?" ಎಂದು ಹೊಗೆ ಬಿಡುತ್ತಾ ನಕ್ಕರು, ವೆಂಕಟರಾಯಾಚಾರ್ಯರು. "ಹೌದು, ಹೌದು, ಬೀಡಿ, ಸಿಗರೇಟ್, ನಸ್ಯ, ಇತ್ಯಾದಿ ಹೊಗೆಸೊಪ್ಪಿನ ಬಗೆಬಗೆಯ ಅವತರಣಿಕೆಗಳು ಮನುಷ್ಯರಿಗೆ ಅಂಟಿಕೊಂಡು ದುರಭ್ಯಾಸಗಳೆಂದು ಹೇಳಿಸಿಕೊಳ್ಳುವ ಹಾಗೆ, ಕತೆ ಬರೆಯುವುದು, ಹರಟೆ ಹೊಡೆಯುವುದು, ಚಿತ್ರ ಗೀಚುವುದು, ಹಾಡುವುದು ಮೊದಲಾದ ಹೊಲ್ಲದ ಅಭ್ಯಾಸಗಳು ಅಂಟಿಕೊಳ್ಳುತ್ತವೆ, ಧೂಮ್ರಪಾನವು ತಾತ್ಕಾಲಿಕ ಉತ್ಸಾಹವನ್ನು ನೀಡುವ ಹಾಗೆ ಕತೆ ಮೊದಲಾದುವನ್ನು ಬರೆಯುವಾಗಲೂ ಉತ್ಸಾಹವೇಳುತ್ತದೆ, ಈ ಅಭ್ಯಾಸ ಹತ್ತಿಕೊಂಡ ನಮ್ಮ ನಿಮ್ಮಂಥವರು ಏನಾದರೂ ಗೀಚಿಕೊಂಡೇ ಇರುತ್ತಾರೆ. ಬೀಡಿ ಮೊದಲಾದವುಗಳ ಚಟಕ್ಕೂ ಇದಕ್ಕೂ ಏನು ವ್ಯತ್ಯಾಸವಿದೆ? ಇದು ಕೂಡಾ ಒಂದು ದುರಭ್ಯಾಸ, ದುಶ್ಚಟ ಎಂದೇಕೆ ಹೇಳಬಾರದು?" ಎಂದು ಅವರು ಮಾತು ಮುಂದುವರಿಯಿತು.

o o o o o o

ಗೆಳೆಯರಲ್ಲಿ ಹರಟೆಗೆ ಇದೇ ತಕ್ಕ ಕಾಲವೆಂದು ನಾನು ಹೇಳತೊಡಗಿದೆ: "ನೀವು ಹೇಳಿದಿರಲ್ಲಾ, ನಾನೂ ನೀವೂ ಸರಿಸಮಾನರೆಂದು. ಬೀಡಿ ಸೇದುವುದರಲ್ಲಿ, ಕಾಗದವನ್ನು ಪೆನ್ನಿನ ಮೊನೆಯಿಂದ ಕಪ್ಪು ಮಾಡುವುದರಲ್ಲಿ, ವಯಸ್ಸಿನಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಸರಿಸಮಾನರಾದರೂ, ಮನಸ್ಸು ಮಾತ್ರ ಬೇರೆ ಬೇರೆ. ನಾನು ಕಲ್ಪನಾ ಸಾಮ್ರಾಜ್ಯದಲ್ಲಿ, ಸುಳ್ಳಿನ ಸುಳಿಯಲ್ಲಿ ವಿಹರಿಸಿಕೊಂಡಿರುವವನು. ಸುಳ್ಳಿನಲ್ಲಿ ಮೂರು ಬಗೆಯುಂಟು. ಸಾಹಿತಿಯಾಗಿ ಕತೆ ಕಾದಂಬರಿ ರಚಿಸುವ ನನ್ನದು ಉತ್ತಮವಾದ ಸುಳ್ಳೆಂದು ಹೆಮ್ಮೆ

ಪಟ್ಟುಕೊಳ್ಳಬಹುದು. ಆದರೆ, ನೀವು ಹಾಗೆ ಅಲ್ಲ. ಸತ್ಯ ಸಂಶೋಧಕರು. ನನ್ನಂಥವರು ಸಾವಿರಾರು ಮಂದಿ ಇದ್ದಾರೆ, ನಿಮ್ಮಂಥವರು ತೀರಾ ಅಪೂರ್ವ. ಒಂದು ಬಗೆಯಲ್ಲಿ ನೀವೂ ನಾನೂ ಒಂದೇ ರೀತಿಯವರು. ನೋಡಿ, ನಮ್ಮ ನಿಮ್ಮ ವೇಷ ಭೂಷಣಗಳನ್ನು, ಈಗಿನ ನವನಾಗರಿಕತೆಯವರು ನಮ್ಮನ್ನು ಹಳೆಯಗೂಡ್ಡುಗಳು ಅಂದುಕೊಳ್ಳುವರು, ಬಾಯಿಬಿಟ್ಟು ಹೇಳಲಾರರು, ಸ್ವಲ್ಪ ಗೌರವ ಬುದ್ಧಿಯೂ ಇದೆ. ಎಲ್ಲೆಡೆ ಸ್ವಾತಂತ್ರ್ಯವಿದೆ ತಾನೆ?

ಈಗ ಎಲ್ಲರಿಗೂ ಏನು ಮಾಡಲಿಕ್ಕೂ, ಬರೆಯಲಿಕ್ಕೂ, ಮಾತಾಡಲಿಕ್ಕೂ ಪರಿಪೂರ್ಣ ಸ್ವಾತಂತ್ರ್ಯವುಂಟೆಂದು ಘಂಟಾಘೋಷವಾಗಿ ಹೇಳಲ್ಪಡುತ್ತಿದೆ. ಆದರಿಂದಾಗಿ, ಎಂಥೆಂಥದನ್ನೊ ಬರೆದು, ಎಂಥೆಂಥದನ್ನೊ ನೋಡಿ, ಎಂಥೆಂಥ ಘಟನೆಗಳೂ ನಡೆಯುತೊಡಗಿವೆ, ಹೆಣ್ಣು ಗಂಡುಗಳ ಸಂಬಂಧದಲ್ಲಿ ಏನೇನೋ ದಾರುಣಗಳುಂಟಾಗುತ್ತಿವೆ. ಮನುಷ್ಯ ಏರ್ಪಡಿಸಿಕೊಂಡ–ಕಾನೂನು ಬದ್ಧವಾಗಿ ಮಾಡಿಕೊಂಡ-ಪರಿಮಿತಿಗಳನ್ನು ಮೀರಿ ಹೆಚ್ಚಿನ ಸ್ವಾತಂತ್ರ್ಯ ತೋರಿಸಿದರೆ, ಬೀದಿಯಲ್ಲಿ ಸ್ವತಂತ್ರವಾಗಿ ನಡೆದರೆ ಏನಾದೀತು? ಸಂಪೂರ್ಣ ಸ್ವತಂತ್ರನಾದ ಮನುಷ್ಯ ಮೃಗವೆನಿಸಿಯಾನು, ಅಥವಾ ಹುಚ್ಚನೆನಿಸಿಯಾನು.

ಪ್ರಸ್ತುತ ಭಾರತೀಯರ ಆಂತರಿಕ ಬಾಹ್ಯ ಸಂಸ್ಕೃತಿಯಲ್ಲಿ ವಿಚಿತ್ರ ವ್ಯತ್ಯಾಸ ವಾಗಿರುವುದು. ನಿಜವಾದ ಭಾರತೀಯ ಸಂಸ್ಕೃತಿಯನ್ನು ಚರಿತ್ರೆಗಳಲ್ಲಿ, ಹಳೆಯ ಶಿಲ್ಪಗಳಲ್ಲಿ ಕಾಣುತ್ತ ಸಂತೋಷಪಡುತ್ತೇವೆ. ಪರದೇಶಗಳ ಸಂಸ್ಕೃತಿ ನಮ್ಮಲ್ಲಿ ಆಮದಾಗುವ ಹಾಗೆ ನಮ್ಮ ಸಂಸ್ಕೃತಿ ಪರದೇಶಕ್ಕೆ ಹೋಗುತ್ತದೊ ಇಲ್ಲವೋ? ಈ ಬಗೆಯ ವಿವಾದಕ್ಕೆ–ವಿಚಾರಕ್ಕೆ ನನಗಿಂತ ಹೆಚ್ಚು ನೀವೇ ತಕ್ಕವರು."

o o o o o o

ಇಷ್ಟೆಲ್ಲಾ ಹೇಳಿದಾಗ, "ನೀವು ಈ ಬಗ್ಗೆ ಮಾಡಿದ ಸಂಶೋಧನೆಯೇನಾದರೂ ಇದೆಯೋ?" ಎಂದರು, ವೆಂಕಟರಾಯಾಚಾರ್ಯರು, "ಸಂಶೋಧನೆಯಲ್ಲಿ ನಾನು ನಿಮಗೆ ಸರಿಸಮನಲ್ಲವೆಂದು ಹೇಳಿದೆನಾದರೂ, 'ನಿಮ್ಮ ಹಾಗೆ ನಾನು ಏಕಾಗಬಾರದು?' ಎಂಬ ಹಟ ಒಂದೆರಡು ಬಾರಿ ನನಗೂ ಬಂದದ್ದು ನಿಜ! ನೀವು 'ಗೆ-ಕುರಿತು' ಲೇಖನ ಬರೆದಿರಲ್ಲಾ, ಹಾಗೆ ನಾನೂ 'ದೆ–ದಿ', 'ಕನಸು-ನೆನಸು', 'ಗೂ–ಗೊ' ಕುರಿತು ಬರೆದದ್ದುಂಟು" ಎಂದ ನನ್ನ ಮಾತು ಕೇಳಿ, ವೆಂಕಟರಾಯಾಚಾರ್ಯರು ಹೊಡೆದ ಜಗನ್ನಾಥ ಗಂಟೆಯಂತೆ ನಗುತ್ತಾ, 'ಏನದು, ನೀವು ಬರೆವದ್ದು?' ಎಂದರು!

'ದೆ–ದಿ'ಗಳ ವಿಚಾರ: 'ನೀನು ಮಾಡಿದಿ', 'ನಾನು ಮಾಡಿದೆ' ಎಂಬ ಪ್ರಯೋಗದಲ್ಲಿ ನೀನು, ನಾನು ಎಂಬುದಕ್ಕೆ ಸರಿಯಾದ ಅರ್ಥಕೊಡುತ್ತೆ. ಇದಕ್ಕೆ ಬದಲಾಗಿ 'ನೀನು ಮಾಡಿದೆ', 'ನಾನು ಮಾಡಿದೆ' ಎಂಬ ಪ್ರಯೋಗವೂ ವಾಡಿಕೆಯಲ್ಲಿದೆ. 'ನೀನು ಮಾಡಿದೆ'

ಎಂಬಲ್ಲಿ 'ನೀನು' ಎಂಬ ಪದಕ್ಕೆ ಸರಿಯಾಗಿ ಅರ್ಥಮಾಡಿಕೊಳ್ಳಬೇಕಾಗುತ್ತದೆ. 'ನೀನು ಮಾಡಿದಿ' ಎಂದರೇನೇ ಅರ್ಥ ಸುಸ್ಪಷ್ಟವಾಗಿದೆ.

'ಕನಸು-ನೆನಸು' ಎಂಬ ಪ್ರಾಸಾಕ್ಷರಗಳುಳ್ಳ ಒಂದು ಸಮಸ್ತ ಶಬ್ದ, 'ಅವರ ಕನಸು ಈಗ ನೆನಸಾಯಿತು' ಅಂದರೆ 'ಕನಸು ನಿಜವಾಯಿತು' ಎಂಬರ್ಥದಲ್ಲಿ ಹೇಳುವುದುಂಟು, 'ನೆನಸು' ಎಂಬುದು 'ನಿಜ' ಹೇಗಾಗುತ್ತದೆ? "ವಿದ್ಯಾರಣ್ಯರು ಕಂಡ ಕನಸು, ವಿಜಯನಗರ ಸಾಮ್ರಾಜ್ಯವಾಗಿ ನಿಜವೆನಿಸಿ, ಈಗ ಹಾಳುಹಂಪೆಯಾದುದನ್ನು ಗತವೈಭವವೆಂದು ನಾವು 'ನೆನಸು'ತ್ತೇವೆ" ಎನ್ನುವಾಗ ಏನರ್ಥ? 'ಕನಸು-ನೆನಸಾಯ್ತು' ಎಂಬ ವಾಡಿಕೆಯು ಮಾತು ಪ್ರಾಸಾಕ್ಷರಗಳ ಮೋಹದಲ್ಲಿ ಪ್ರಸಿದ್ಧವಾಯಿತೇ ಹೊರತು, ಅದರ ನಿಜವಾದ ಅರ್ಥ ಬೇರೆಯೇ! ಇದೇ ಪ್ರಾಸದ ಮೋಹ ತಮಿಳಿನಲ್ಲಿಯೂ ವಾಡಿಕೆಗೆ ಬಂದಿದೆ: 'ಕನವು ನಿನೈವಾನದು', ಆದರೆ ತೆಲುಗಿನಲ್ಲಿ ಹಾಗಿಲ್ಲ: 'ಕಲ ನಿಜಮಯಿಂದಿ' ಅನ್ನುವರೇ ಹೊರತು 'ಕಲತಲಪುಕುವಚ್ಚಿಂದಿ' ಅನ್ನುವುದಿಲ್ಲ, ತೆಲುಗಿನಲ್ಲಿ 'ತಲಪು' ಎಂದರೆ 'ನೆನಸು' ಎಂದಾಗುತ್ತದೆ, ಪ್ರಾಸದ ಮೋಹ ಅಲ್ಲಿಲ್ಲದ್ದರಿಂದ ಇದು ವಾಡಿಕೆಗೆ ಬರಲಿಲ್ಲ!

'ಗೂ-ಗೂ' ಅಂದರೇನು (ಅದು ತಪ್ಪೆಂದು ಕಾಣುತ್ತದೆ): 'ಲಲಿತೆಗೂ ವೆಂಕಟಾದ್ರಿಗೂ ಮದುವೆಯಾಯಿತು' ಎಂದು ಸಾಮಾನ್ಯವಾಗಿ ಹೇಳುತ್ತೇವೆ. ಇಲ್ಲಿ 'ಲಲಿತೆಗೆ ಯಾರೊಂದಿಗೆ ಮದುವೆಯಾಯಿತು?', 'ವೆಂಕಟಾದ್ರಿಗೆ ಯಾರೊಂದಿಗೆ ಮದುವೆಯಾಯಿತು?' ಎಂಬ ಸ್ಪಷ್ಟತೆ ಇಲ್ಲ! ಈ 'ಗೂ-ಗೂ'ಗಳಿಗಿಂತ 'ಒಂದಿಗೆ'ಯನ್ನು ಸೇರಿಸಿದರೆ, 'ಲಲಿತೆಗೆ ವೆಂಕಟಾದ್ರಿಯೊಂದಿಗೆ,' ಅಥವಾ 'ವೆಂಕಟಾದ್ರಿಗೆ ಲಲಿತೆಯೊಂದಿಗೆ' ಮದುವೆಯಾಯಿತು ಅಂದರೇನೇ ಸ್ಪಷ್ಟತೆಯಿದೆ!

X X X X X X X X

'ನೀವೂ ನನ್ನ ಸರಿಸಮಾನರು' ಅಂದದ್ದು ಸುಳ್ಳಲ್ಲ. ಸಾಕಷ್ಟು ಹೇಳಿದಿರಿ, 'ಹರಟೆಯಿಂದಾಗಿ ಬಹಳ ಸಂತೋಷವಾಗುತ್ತಿದೆ'ಯೆಂದರು, ವೆಂಕಟರಾಯಾಚಾರ್ಯರು!

'ಗೆಳೆಯರ ಹರಟೆ' ಎಲ್ಲರಿಗೆ ತಿಳಿಯಲಿ! ಎಲ್ಲರಿಗೆ ತಿಳುವಳಿಕೆಯುಂಟಾಗಲಿ ಎಂದು ನನ್ನಾಸೆ!

X X X X X X X X

೨೪. ಸನ್ಮಿತ್ರರು

—ಶ್ರೀ ಗಣೇಶನ್, ಸುರತ್ಕಲ್ಲು

ಇತ್ತೀಚಿನ 2–3 ವರ್ಷಗಳಲ್ಲಿ, ಹಲವಾರು ಸಂದರ್ಭಗಳಲ್ಲಿ ಶ್ರೀ ವೆಂಕಟರಾಯಾಚಾರ್ಯರನ್ನು ಕಂಡಿದ್ದೇನೆ; ಅವರಲ್ಲಿ ಸಂಪರ್ಕವಿರಿಸಿದ್ದೇನೆ, ಶಾಸ್ತ್ರೀಯ ವಿಚಾರಗಳ ಸುಸ್ಪಷ್ಟವಾದ ವಿವರಣವನ್ನು ಹೇಳುವಲ್ಲಿ ಅವರು ಎತ್ತಿದ ಕೈ! ಚಿತ್ರಾಪುರದ ಶ್ರೀ ದುರ್ಗಾಂಬಿಕೆಯ ಗುಡಿಯ ಪರಿಸರದಲ್ಲಿ, ಭಕ್ತಾಭಿವಹಾನಿಗಳು ಶ್ರೀ ಅಯ್ಯಪ್ಪನ ಗುಡಿಯನ್ನು ಕಟ್ಟಿಸಲು ಶ್ರೀ ಯು. ಯು. ಎನ್. ವಾರಿಯರ್ ಅವರ ನಿರ್ದೇಶನದಲ್ಲಿ ತೊಡಗಿದ್ದು; ಆದರಲ್ಲಿ ನಾನೂ ಸಹಭಾಗಿಯಾಗಿರುವ ಭಾಗ್ಯ ಒದಗಿತ್ತು. "ಆ ಹೊಸ ಗುಡಿ ಪಶ್ಚಿಮಾಭಿಮುಖವಾಗಿ ಇರುವುದು ಆ ಪರಿಸರಕ್ಕೆ ಸಾಧು"ವೆಂದು ಆಚಾರ್ಯರು ಸೂಚಿಸಿದ್ದು, ಅವರ ಘನ ವಿದ್ವತ್ತೆಯ ಸಾಕ್ಷಿ!

ಶ್ರೀ ಚಿತ್ರಾಪುರದ ಪ್ರಾಚೀನತೆ ಮತ್ತು ಅಲ್ಲಿ ಅಯ್ಯಪ್ಪನ ಗುಡಿಯಿರುವ ಸಾರ್ಥಕ್ಯವನ್ನು ಕುರಿತು ಅವರು ಕೆಲವು ಮಾತುಗಳಲ್ಲಿ ನಿರೂಪಿಸಿದ್ದು, ಅವರ ಚಾರಿತ್ರಿಕ–ಧಾರ್ಮಿಕ ಮನೋಧರ್ಮದ ಕುರುಹಾಗಿದೆ ಮತ್ತು ದೈವಿಕ ಭಕ್ತಿಯ ಹಿನ್ನೆಲೆಯಾಗಿದೆ!

ಆಸುಪಾಸಿನ ಹಲವಾರು ಸಂಘ–ಸಂಸ್ಥೆಗಳಲ್ಲಿ ಮತಭೇದವಿಲ್ಲದೆ ನಡೆವ ಭಜನೆ, ಭಾಷಣಾದಿ ಕಾರ್ಯಕ್ರಮಗಳಲ್ಲಿ ಶ್ರೀಯುತರು ವಯೋಭೇದವಿಲ್ಲದೆ ಮುತುವರ್ಜಿಯಿಂದ ಸೇರಿಕೊಂಡಿರುತ್ತಾರೆ. ಇತ್ತೀಚೆ ಪ್ರಕಟವಾದ ಆಚಾರ್ಯರ ಒಂದೆರಡು ಲೇಖನಗಳಲ್ಲಿ ಅವರು ವಿಚಾರಪೂರ್ಣವಾದ ಸಂಶೋಧನಾತ್ಮಕ ರೀತಿಯನ್ನು ಸಾಧಿಸಿದ್ದಾರೆ, 60 ರ ಹರೆಯದಲ್ಲೂ ಅವರ ಇಂತಹ ಪ್ರತಿಭೆ ಅಮೋಘವಾಗಿದೆ. ಈ ವಿದ್ವಾಂಸರ ಮಿತ್ರಲಾಭ ನನಗೆ ಆನಂದಾವಹವಾಗಿದೆ. ಈ ಮೇರೆಗೆ ಶ್ರೀ ಆಚಾರ್ಯರನ್ನು ಸನ್ಮಾನಿಸುವುದು ಶ್ಲಾಘ್ಯವಾಗಿದೆ.

ಶ್ರೀದೇವರು ಆಚಾರ್ಯರಿಗೆ 'ಅಷ್ಟ ಸೌಭಾಗ್ಯ'ಗಳನ್ನು ಕರುಣಿಸಲೆಂದು ಸನ್ಮಿತ್ರರೊಂದಿಗೆ ದೇವರನ್ನು ಪ್ರಾರ್ಥಿಸುತ್ತೇನೆ.

× × × ×

೨೫. ಆತ್ಮೀಯರು

—ಶ್ರೀ ಕೊ. ಅ. ಉಡುಪ, ಕಿನ್ನಿಗೋಳಿ

ಶ್ರೀ ಕೆ. ವೆಂಕಟರಾಯಾಚಾರ್ಯರು ಹಲವಾರು ವರ್ಷಗಳಿಂದ ಲೇಖನ-ಪ್ರಕಟನೆಗಳ ಮೂಲಕ ಕನ್ನಡ ನಾಡಿಗೆ ಸುಪರಿಚಿತರು. ಅವರ ಕೆಲವು ಲೇಖನಗಳು 'ಯುಗಪುರುಷ'ದಲ್ಲಿ ಪ್ರಕಟವಾಗಿವೆ. ಅವರು 'ಯುಗಪುರುಷ'ದ ಆತ್ಮೀಯರಲ್ಲೊಬ್ಬರಾಗಿ ಇದ್ದಾರೆ. ಅವರ ಕೆಲವು ವಿಶೇಷ ಲೇಖನಗಳನ್ನು ವಿದ್ವಾಂಸರು ಮೆಚ್ಚಿದ್ದಾರೆಂಬುದೇ ಇಲ್ಲಿ ಉಲ್ಲೇಖನೀಯ! ಕವಿ ರನ್ನನು, ಗದಾಯುದ್ಧವು 'ಧರ್ಮಯುದ್ಧ'ವೆಂದು ಸಾರಿದುದನ್ನು ಕುರಿತು ಶ್ರೀ ಆಚಾರ್ಯರು 'ಯುಗಪುರುಷ'ದಲ್ಲಿ ಪ್ರಕಟಿಸಿದ್ದರು. ಈ ಬಗೆಯನ್ನು ನನ್ನ ಅಣ್ಣಂದಿರಾದ ಶ್ರೀ ಶ್ರೀನಿವಾಸ ಉಡುಪರು-ಕಾರ್ಕಳದ ಕಾಲೇಜಿನಲ್ಲಿ-ತಮ್ಮ ವಿದ್ಯಾರ್ಥಿವೃಂದಕ್ಕೆ ಎತ್ತಿ ತೋರಿದ್ದರೆಂದು ಕೇಳಿದ್ದೇನೆ. 'ಕಪೋತವ್ಯಾಖ್ಯಾನ'ವೆಂಬ ಆಚಾರ್ಯರ ಲೇಖನವನ್ನು ಶ್ರೀ ಡಿ. ಎಲ್. ನರಸಿಂಹಾಚಾರ್ಯರು ಸಮ್ಮತಿಸಿದ್ದಾರೆಂದು ಅವರ ಪತ್ರ 'ಸಾಹಿತ್ಯದ ಹಿನ್ನೆಲೆ'ಯಲ್ಲಿದೆ. 'ಅಭಂಗ ವಿಠಲ'ನೆಂದರೇನು? ಎಂಬ ಆಚಾರ್ಯರ ಲೇಖನ–ಸಚಿತ್ರವಾಗಿದೆ, ಸಹೃದಯ ವಾಚಕರಿಗೆ ಆಪ್ಯಾಯಮಾನವಾಗಿದೆ. ಕನಕದಾಸರ ಭಕ್ತಿಗೆ ಸಲುವಾಗಿ ಉಡುಪಿಯ ಕೃಷ್ಣನ ವಿಗ್ರಹ ಪಶ್ಚಿಮಾಭಿಮುಖವಾಗಿ ಇರಿಸಿದೆಯೆಂದು ಆಚಾರ್ಯರು ಪ್ರತಿಪಾದಿಸಿದ್ದಾರೆ. (ಶ್ರೀ ಎಂ. ಮುಕುಂದ ಪ್ರಭುಗಳು ಈ ಬಗೆಯನ್ನು ಕುರಿತು ಬರೆದುದು ಈ ಗ್ರಂಥದಲ್ಲಿದೆ.) ಭ್ರಾಮರೀ ದೇವಿಯ ಬಗೆ ಕಟೀಲು, ಹಾಗೂ ಇತರತ್ರ ಪ್ರಚುರವಿದೆಯೆಂದು ಶಾಸನಗಳ ಸಹಕಾರದಿಂದ ಆಚಾರ್ಯರು ಬರೆದುದು ಶ್ಲಾಘ್ಯ!

ಇಂತಹ ಅನೇಕಾನೇಕ ಲೇಖನ ರಾಶಿಯನ್ನು ಬರೆದ ಈ ವಿದ್ವಾಂಸರನ್ನು ಕುರಿತು ಈ ನಾಲ್ಕು ಮಾತುಗಳನ್ನು ಬರೆಯಲು ನನಗೆ ಸಂತೋಷವೆನಿಸುತ್ತದೆ. ಆಚಾರ್ಯರ ಲೇಖನ ವ್ಯವಸಾಯ ಅವಿರತವಾಗಿ ನಡೆಯಲೆಂದು-ಶ್ರೀ ದೇವರಲ್ಲಿ ಬೇಡುತ್ತಾ—ಹಾರೈಸುತ್ತೇನೆ.

X X X X X X

೨೬. ಸಹಕಾರದ ಹಸ್ತ

—ಶ್ರೀ ಸೀತಾರಾಮ ಜಾಗಿರ್‌ದಾರ್, ಮೈಸೂರು

ಶಾಸನಗಳ ನಕಲುಗಳನ್ನು ತರಲು ಕೆ. ಆರ್. ನಗರ ತಾಲೂಕಿನ ಸಾಲಿಗ್ರಾಮಕ್ಕೆ ಹೋಗಿದ್ದೆ. ಅಲ್ಲಿನ ಅನೇಕ ಜೈನರ ಮನೆಗಳಲ್ಲಿ ಹಸ್ತಪ್ರತಿಗಳಿವೆ. ಕೆಲವರಂತು ಅವನ್ನು ತಟ್ಟಿನ (ಗೋಣಿ) ಚೀಲದಲ್ಲಿ ಹೇಗೆ ಬೇಕೋ ಹಾಗೆ ತುರುಕಿ, ಬಸದಿಯ ಸೋರುವ ಕೋಣೆಯೊಂದರಲ್ಲಿ ಇಟ್ಟಿದ್ದರು. ಕಷ್ಟಪಟ್ಟು ಅವುಗಳನ್ನು ಚೀಲದಿಂದ ಹೊರತೆಗೆದು ಸ್ನೇಹಿತರ ಸಹಾಯದಿಂದ ಒಮ್ಮೆ ನೋಡಿದೆ. ಕನ್ನಡ ಅಧ್ಯಯನ ಸಂಸ್ಥೆಗೆ ದಾನಮಾಡಿರೆಂದರೆ ಯಾರೂ ಜಿವ್ ಎನ್ನಲಿಲ್ಲ.

ಅಲ್ಲೆ ಇನ್ನೊಬ್ಬರ ಮನೆಯಲ್ಲಿ ಬಹಳ ಹಸ್ತಪ್ರತಿಗಳಿವೆಯೆಂದು ಸುಳಿವು ದೊರೆಯಿತು. ಆ ಮನೆಗೆ ಮನೆಯವರು ಹೇಳಿದ ಸಮಯಕ್ಕೆ ಮುಂಜಾನೆಯೆಂದರೆ ಮುಂಜಾನೆ, ಸಂಜೆಯೆಂದರೆ ಸಂಜೆ–ನಾಲ್ಕೈದು ದಿನ ಅಲೆದೆ, ಅಲೆದೆ, ಆದರೂ ಅವರು ಆ ಹಸ್ತಪ್ರತಿಗಳ ಮೇಲೆ ನನ್ನ ಕೈ ಆಡಲು ಅವಕಾಶ ಕಲ್ಪಿಸಿಕೊಡಲಿಲ್ಲ, ನನ್ನ ಹಾಗೂ ನನ್ನ ಸ್ನೇಹಿತರ ಪರದಾಟಕ್ಕೆ, ತಿಪ್ಪರ ಲಾಗಕ್ಕೆ ಕಿಂಚಿತ್ತೂ ಪ್ರತಿಫಲ ದೊರೆಯಲಿಲ್ಲ. ಇಂದಿಗೂ ಬೇವಿನ ಎಣ್ಣೆಯುಣ್ಣುತ್ತ ಪೆಟ್ಟಿಗೆಯಲ್ಲಿ ಬಿದ್ದಿವೆಯೆಂದು ವದಂತಿ. ಅವರ ಅಡಕೆ ತೋಟದ ಗುಂಡಿಗಳಲ್ಲಿ ಬಿದ್ದು ಗೊಬ್ಬರವಾಗದಿದ್ದರೆ ಸಾಕು; ಇಂದಿಲ್ಲ ನಾಳೆಯಾದರೂ ಯಾರಾದರೊಬ್ಬರಿಗೆ ಆ ಸರ್ಪಕಾವಲದ ಸಂಪತ್ತು ವಶವಾಗಬಹುದು.

೮–೧೦ ವರ್ಷಗಳ ಹಿಂದಿನ ಮಾತು. ಬೇಸಿಗೆಯಲ್ಲಿ ಊರಿಗೆ ಹೋದವನು ಹೈದರಾಬಾದಿಗೆ ಹಿಂದಿರುಗಿ ಹೊರಟಿದ್ದೆ. ಬಸ್ಸಿನಲ್ಲಿ ಕುಳಿತ ನಾನು ಆ ಮಾತು ಈ ಮಾತು ಆಡುತ್ತಾ ಕಲ್ಬುರ್ಗಿ ಜಿಲ್ಲೆಯ ಸಾಹಿತ್ಯದ ಬಗ್ಗೆ, ಅಲ್ಲಿನ ಪ್ರಾಚೀನ ಕವಿಗಳ ಬಗೆಗೆ ಪಕ್ಕದ ಮೈಸೂರು ಕಡೆಯವರೊಬ್ಬರೊಂದಿಗೆ ಮಾತನಾಡುತ್ತ, ದೇವಪುರದ ಕವಿ ಲಕ್ಷ್ಮೀಶನ ಬಗ್ಗೆ ಮಾತಿಗೆ ಆರಂಭಿಸಿದೆ. ದಾರಿಯಲ್ಲಿರುವ ದೇವಪುರವೇ ಆವನ ಊರು ಎಂದೆ. ಆಗ ಮೈಸೂರಿನ ಸ್ನೇಹಿತರು, "ಅವನು ಚಿಕ್ಕಮಗಳೂರು ಜಿಲ್ಲೆಯ ದೇವನೂರಿನವನು ಎನ್ನುತ್ತಾರಲ್ಲ" ಎಂದು ನನ್ನನ್ನು ತಿದ್ದಲು ಪ್ರಯತ್ನಪಟ್ಟರು. ಆಗ, ಕಲ್ಬುರ್ಗಿ ಜಿಲ್ಲೆಯ ದೇವಪುರದ ಬಳಿಯಲ್ಲೆ ಸುಮಾರು ೧೬ ಮೈಲುಗಳ ಅಂತರ (ಪಕ್ಷಿಪಥ)ದಲ್ಲಿ ಕೃಷ್ಣಾನದಿಯ ದಡದಲ್ಲಿರುವ ಛಾಯಾಭಗವತಿಯಲ್ಲಿನ ಪ್ರಸಿದ್ಧ ಛಾಯಾದೇವಿಯನ್ನು ಕವಿ "ಸನ್ನುತಚ್ಛಾಯೆ" ಎಂದು ಸ್ತುತಿಸಿದ್ದಾನೆ. (1) "ಅದು ಮೂಲ ಜೈಮಿನಿಭಾರತದಲ್ಲಿಲ್ಲ"ವೆಂದು ಆ ಪದ್ಯವನ್ನು ಉದ್ಧರಿಸಿದೆ:

ತಾಯೆ ಪಾರ್ವತಿ ಪರಮಕಲ್ಯಾಣಿ ಶಂಕರ
ಪ್ರೀಯೆ ಸರ್ವೇಶ್ವರಿ ಜಗನ್ಮಾತೆ ಸನ್ನುತ
ಚ್ಛಾಯೆ ಸಾವಿತ್ರಿಶಾರದೆ ಸಕಲ ಶಕ್ತಿರೂಪಿಣಿ ಕಾಳಿ ಕಾತ್ಯಾಯಿನಿ ॥
ಶ್ರೀಯೆ ವೈಷ್ಣವಿ ವರದೆ ಚಂಡಿ ಚಾಮುಂಡಿ ನಿರ
ಪಾಯೆ ನಿಗಮಾಗಮಾರ್ಚಿತೆ ಮಂತ್ರಮಯಿ ಮಹಾ
ಮಾಯೆ ರಕ್ಷಿಪುದೆಂದು ಕೈಮುಗಿದಂ ಚಂದ್ರಹಾಸಂ
ಬೇಡಿಕೊಳುತಿರ್ದನು ॥

(ಕ. ಜೈ. ಭಾ. ಸಂಧಿ ೩೧–ಪದ್ಯ ೭೨).

ಇದನ್ನು ಕೇಳಿದ ಕೂಡಲೆ ಮುಂದಿನ ಸೀಟಿನಲ್ಲಿ ಕುಳಿತಿದ್ದ ದೇವಪುರದ ಅಕ್ಕಸಾಲಿಗ ಮನೆಯ ವ್ಯಕ್ತಿಯೊರ್ವನು, "ನಮ್ಮ ಮನೆಯಲ್ಲಿ ಕ. ಜೈ. ಭಾರತದ ಹಸ್ತಪ್ರತಿಯೊಂದು ಐತಿ" ಎಂದನು. ನನಗೆ ಆ ಹಸ್ತಪ್ರತಿಯನ್ನು ಅಭ್ಯಾಸಕ್ಕೆ ಒಂದು ಸಲ ಕೊಟ್ಟರೆ, ಓದಿ ವಾಪಸ್ ಕೊಡುತ್ತೇನೆ ಎಂದೆ. ಒಪ್ಪಿಕೊಂಡ ವ್ಯಕ್ತಿ ಎಂಟು ದಿನದಲ್ಲಿ ಪುಸ್ತಕ ಕಳಿಸುತ್ತೇನೆ ಎಂದು ಸಾಗರಪುರದಲ್ಲಿ ನನ್ನ ಜೊತೆ ಚಹ ಕುಡಿದು ಹೋದ. ಪತ್ರ ಹಾಕಿದರೆ ಇಂದಿಗೂ ಉತ್ತರವಿಲ್ಲ. ಬಹಳ ದುಡ್ಡು ಕೇಳಿದನೆಂದು ತಿಳಿದುಬಂತು.

ಚಿಕ್ಕಮಗಳೂರು ಜಿಲ್ಲೆಯ ಕರ್ನಾಟಕ ಸಂಘದ ಅಧ್ಯಕ್ಷ ಭಾಷಣಕ್ಕೆ ಬಳಸಿಕೊಂಡ ಪ್ರತಿ ಎಲ್ಲಿದೆಯೆಂದು ಕೇಳಿದರೆ (ಪ್ರಜಾವಾಣಿ 10-7-77), ಪೂಜ್ಯ ಮಾಸ್ತಿಯವರು ಇಂದಿಗೂ ತಿಳಿಸುವ ಸಹಕಾರವನ್ನಿತ್ತಿಲ್ಲ.

ಆದರೆ ಅದೇ ಪತ್ರಿಕೆಗೆ ಓಗೊಟ್ಟು, ಯಾವ ಪ್ರತಿಫಲವಿಲ್ಲದೆಯೇ ತಮ್ಮಲ್ಲಿರುವ ಹಸ್ತಪ್ರತಿಯನ್ನು ರಂಗಂಪೇಟೆಯ ಕನ್ನಡ ಸಾಹಿತ್ಯ ಸಂಘಕ್ಕೆ ಕಳುಹಿಸಿ ಕೊಟ್ಟ ವೆಂಕಟರಾಯಾಚಾರ್ಯರ ಹಸ್ತ, ಸಹಕಾರದ ಹಸ್ತವಲ್ಲವೇ?

x x x x x x

(1) ಚಿಕ್ಕಮಗಳೂರು ಜಿಲ್ಲೆಯ ದೇವನೂರಿನ ಜನಕ್ಕಾಗಲೀ, ಸುತ್ತುಮುತ್ತಲಿನ ಪ್ರದೇಶದಲ್ಲಾಗಲೀ, 'ಛಾಯಾದೇವಿ' ಯಾರಿಗೂ ತಿಳಿಯದ–ಅಲ್ಲೆಲ್ಲೂ ಇರದ–ದೇವತೆ!

x x x x x x x x

೨೭. ಭಾಷಣದ ಮೋಜು

—ಶ್ರೀ 'ಸಹಚಾರಿ', ಮಂಗಳೂರು

ಒಮ್ಮೆ ಬೆಂಗಳೂರಿಗೆ ಹೋಗುವಾಗ, ತಿಪಟೂರಿನ ಬಸ್ ನಿಲ್ದಾಣದ ಇದಿರು ಹೋಟೆಲಿಗೆ ಹೊಕ್ಕೆವು. ಅಲ್ಲಿನ ಯಜಮಾನ ಶ್ರೀ ವೈ. ಸದಾನಂದ ರಾಯರು ಆಚಾರ್ಯರನ್ನು ಕಂಡು ಸತ್ಕರಿಸಿದರು. ಅಲ್ಲಿಯ ಕಲಾಶಾಲೆಯ ಅಧ್ಯಾಪಕರಿಗೆ 'ಇವರೊಬ್ಬ ಸಂಶೋಧಕರು' ಎಂದು ಪರಿಚಯಿಸಿದರು. 'ನೀವು ಹಿಂದೆ ಬರುವಾಗ ನಮ್ಮಲ್ಲಿ ಭಾಷಣಕ್ಕಾದಿ ಬನ್ನಿರಿ. ಪ್ರಿನ್ಸಿಪಾಲರ ಸಮ್ಮತಿ ಪಡೆವೆ'ನೆಂದು ಅಧ್ಯಾಪಕರು ಕರೆಕೊಟ್ಟರು. ಕ್ಲಪ್ತ ದಿನಕ್ಕೆ ಮರಳಿ ತಿಪಟೂರಿಗೆ ಬಂದೆವು, ಬೈಗಿನಲ್ಲಿ ಪ್ರಿನ್ಸಿಪಾಲರ ಕೊಟಡಿಗೈದಿದೆವು. ಅಲ್ಲಿದ್ದ ತಾಳಿಗರಿಯ ಪುಸ್ತಕಗಳನ್ನು ನೋಡಿದೆವು, 'ಬೇರೆ ಕೆಲಸವಿರುವುದರಿಂದ, ಸ್ವಲ್ಪ ಹೊತ್ತು ನಿಮ್ಮ ಭಾಷಣ ಕೇಳುವೆನು' ಎಂದರು, ಪ್ರಿನ್ಸಿಪಾಲರು.

ಆಚಾರ್ಯರು ಸ್ವಯಂ ಸಂಶೋಧಿಸಿದ ನಾಲ್ಕಾರು ವಿಚಾರಗಳ, ಪಂಪಭಾರತದ ಒಂದೆರಡು ಪದ್ಯಗಳ ಚರ್ಚೆಯನ್ನು ವಿದ್ಯಾರ್ಥಿಗಳಿಗೆ ಅವಿಸ್ಖಲಿತವಾಗಿ ಹೇಳಿದರು. ಪ್ರಿನ್ಸಿಪಾಲರು ಅವೆಲ್ಲವನ್ನು ಕೇಳಲು ಉತ್ಸುಕರಾಗಿ ಕೂತರು. ವಿದ್ಯಾರ್ಥಿಗಳ ಪ್ರಶ್ನೆಗೆ ತಕ್ಕ ಆಚಾರ್ಯರು ಉತ್ತರಿಸಿದರು, ಆಗಾಗ ತಾನು ಬರೆದ ಲೇಖನಗಳ ಸಾರವನ್ನು ಬಿತ್ತರಿಸಿದ ಧಾಟಿ ಬಲು ಮೋಜು! ಒಬ್ಬಿಬ್ಬರು ವಿದ್ಯಾರ್ಥಿಗಳು ನಮ್ಮೊಂದಿಗೆ ಬಂದು, ಹಲವಾರು ವಿಚಾರಗಳನ್ನು ಆಚಾರ್ಯರಿಂದಲೂ, ನನ್ನಿಂದಲೂ ತಿಳಿದರು, ಇದೊಂದು ಆನಂದದ–ಉಲ್ಲೇಖನೀಯ ಸಂಗತಿಯಾದಿದೆ !

× × × ×

೨೮. ಒಸಗೆ

—ಡಾ; ಕೆ; ಕೃಷ್ಣಮೂರ್ತಿ, ಧಾರವಾಡ

ಗುರುಮಹಿಮರ ಮಾಧ್ವಾರ್ಯರ
ಪರಿಶೀಲಿತ-ಕಾಲ-ದೇಶ-ವಿದ್ಯಾ-ವಿಭವರ್
ತರತರದಿಂ ವರ ಕವಿಗಳ
ಪರಿನಿಷ್ಠಿತ-ಕಾವ್ಯ-ಶಾಸ್ತ್ರ-ಶೋಧನ-ರಸಿಕರ್ ॥ ೧ ॥
ಕನ್ನಡ-ಸಕ್ಕದಮೆನ್ನದೆ
ಪನ್ನತಿಕೆಯ ಮೆರೆವ ಸೂಕ್ಷ್ಮ-ಲೇಖನ-ಚತುರರ್ ।
ಉನ್ನತ ಗುಣ-ಸಂಪನ್ನರ್
ಸನ್ನುತ-ಬಹು-ಲೇಖ-ಲಬ್ಧ-ಕೀರ್ತಿ-ವಿತಾನರ್ ॥ ೨ ॥
ಹಳೆಯೋಲೆಯ ಕೃತಿನಿಚಯವ
ನಿಳೆ ತಿಳಿಯಲ್ ಕಷ್ಟದಿಂದೆ ದೊರಕಿಸಿ ಬಳಿಕಂ !
ಕಳಕಳಿಯಿಂ ಮುದ್ರಿಸುತುಂ ।
ಬೆಳಕಂ ಬೀರಿರ್ಪ ಸಕಲ-ವಿದ್ಯಾ-ನಿಧಿಗಳ್ ॥ ೩ ॥
ಇದು ಷಟ್ಪದಿಯಿದು ಚೌಪದಿ
ಯಿದು ಕಂದಂ ಯಕ್ಷಗಾನಮಿಂತಿದು ಬಗೆಯಲ್
ಇದು ನಲ್ವಾಡಿದು ಸರಸಂ
ಪದಮಿಂತಿದು ಸೊಬಗನಾಂತುದೆನ್ನುತಲನಿಶಂ ॥ ೪ ॥
ಅವಿರತ-ಕಾಯ-ಕ್ಲೇಶದೆ
ಸುವಿಹಿತ-ಕೃತಿರತ್ನ-ನೂತ್ನ-ಸಂಪಾದಕರಾ
ಭುವಿಯೊಳ್ ವಿದ್ವಜ್ಜನರೊಳ್
ನವನವಮೆನೆ ಬೆಳ್ಜಸಕ್ಕೆ ಬೆರಲೆತ್ತಿದರಾ ॥ ೫ ॥
ವೆಂಕಟರಾಯಾಚಾರ್ಯ ಪ
ದಾಂಕಿತರಾ ಷಷ್ಟಿಪೂರ್ತಿಯುತ್ಸವ ಪದದೊಳ್ ।
ಸಂಕಟಹರಣಂ ಶ್ರೀಶಂ
ತಾಂ ಕರುಣಿಪನಕ್ಕೆ ಸೊಗಮನವಿರತ ಕಾಲಂ ॥ ೬ ॥
ಸೂರತ್ಕಲ್ ಕಡಲಂಚಿನ
ಸಾರಸ್ವತ-ಸಾರ-ಧೀರ-ಸರ್ವಸ್ವನೆನಲ್
ಪೇರೊಸಗೆಯನೀ ಬಗೆಯಿಂ
ದೋರಂತಿರೆ ಕೃಷ್ಣಮೂರ್ತಿ ಬಗೆಯುತ್ತಿರ್ಪಂ ॥ ೭ ॥

X X X X X X X X

೨೯. ಕೆ. ವೆಂಕಟರಾಯರಾಚಾರ್ಯರಿಗೆ

—ಡಾ. ಶಾ. ಶಿ. ಮರುಳಯ್ಯ, ಚನ್ನಪಟ್ಟಣ

ಕೆಟ್ಟ ಸಕ್ಯೂಟರಿಗೊಬ್ಬ ಡಾಕ್ಟರೇ ಬೇಕಿತ್ತು;
ಪುಟ್ಟ ಭಾಂಗಡೆವಾಲ, ತೂತು ಮುಚ್ಚುವ ಸಾಬಿ,
ಸೊಟ್ಟ ತಗಡಿನ ಟ್ರಂಕು ರಿಪೇರಿಯಾ ಜುಜುಬಿ
ಜನವು ಬೇಕಿರಲಿಲ್ಲ; ವೈದ್ಯನನೆ ಬೇಡಿತ್ತು !

ಕ್ಲಚ್‌ವೈರು, ಸ್ವಿಚ್‌ಗೇರು, ಪ್ಲಗ್ಗನೂ ಹೊರತೆಗೆದು
ಪೆಟ್ರೋಲು ಪ್ಯಾಸೇಜ ತುತಲ್ತೂರಿಯೂದಿ,
ಊದಊದಿ ಚಕ್ರಕ್ಕೆ ಗಾಳಿಯನು ದೂಡಿ.
ದೂಡುವಾ ಧೀರನನು ಹುಡುಕಿ ಬೇಸತ್ತೆನಂದು !

ನೀನು ಸಿಕ್ಕಿದೆ ನನಗೆ ಕೆಂಪು ತೋಟದ ಮುಂದೆ !
ಹಸಿದ ಹೊಟ್ಟೆಗೆ ರೊಟ್ಟಿ ಬಿಸಿಹಿಟ್ಟು ಸಿಕ್ಕಂಥ
ಅನುಭವವು ನನಗಾಯ್ತು, ಮಾಯವಾಯಿತು ಪಂಥ !
ಕಂನುಡಿಯು ಕನ್ನಡಿಗೆ ನೀನು ಹೊನ್ನುಡೆಯಾದೆ !

ಸಹಜ ಸಂಶೋಧನೆಯ ಅಧ್ವರ್ಯು ಆಚಾರ್ಯ,
ಮೊಳಗಲೆಂದಿಗು ನಿನ್ನ ಕೀರ್ತಿಯಾರ್ತಿಯ ತೂರ್ಯ!

Z X X X X X X

೩೦. ಅಭಿನಂದನಮ್

—ಶ್ರೀ ಟಿ. ಕೇಶವ ಭಟ್ಟ, ಬೆಂಗಳೂರು

ಕಂದ ॥ ಶ್ರೀ ವಾಗ್ದೇವಿಯುರೊಲವಂ ।
ಶ್ರೀ ವಿದ್ಯಾಶಕ್ತಿಯಿಾ 'ಪ್ರದೀಪಿಕೆ' ಸತ್ಸಂ ।
ಭಾವನೆಯು ಕೃತಿಯೊಡರ್ಚುಗೆ
ಪಾವನಮಕ್ಕುಮು ಬರ್ದುಂಕು ಮತಿಯಿಂ ಕೃತಿಯಿಂ ॥ ೧

ಮ. ಸ್ರ ॥ ಸ್ಫುಟವಾಣೀ ಕಂಧರರ್, ವಾಙ್ಮಯರತ ಜನ ಸಂದೋಹ
ಬಾಂಧವ್ಯ ಶೀಲೋ
ತ್ಕಟರುದ್ಯದ್ಬೋಧ ಸಂವರ್ಧಿತಮತಿ ನಿಜ ಶಿಷ್ಯೇಂದು
ಸೂರ್ಯರ್ ಜಸಕ್ಕೆ
ಕ್ಕಟಿಗರ್, ನಿಚ್ಚಂ ವಿಚಾರಾಚರಣ ಸಹಿತರಾಗಿರ್ದು ಬಾಗಿರ್ದ ಶ್ರೀ ವೇಂ
ಕಟರಾಯಾಚಾರ್ಯರಾಚಾರ್ಯತೆ ವಿಜಯಿಕೆ ಸಾಹಿತ್ಯ ಸಂಸ್ಕೃತ್ಯದಿಂದಂ ॥ ೨

ಮ. ವಿ ॥ ವರ ಕರ್ಣಾಟಕ ಸಂಸ್ಕೃತೋಭಯ ವಿಧ ಪ್ರೋಜ್ಜ್ವಲ್ಯ ಭಾಷಾಪ್ರವೇ ।
ಕರೆ, ಸಾಹಿತ್ಯನಿಮಗ್ನ ಲೇಖನದೊಳಂ ಸಂಶೋಧ ಸಂಪಾದನೋ !
ತ್ಕರ ಕಾರ್ಯಂಗಳೊಳಂ, ವಿಮರ್ಶನದೊಳಂ, ಸಂಭಾವಿತರ್ ಮೆಚ್ಚುವಂ ।
ತಿರೆ ನಿಮ್ಮಂತೆಯುದಾರವಂ ಪ್ರಕಟಿಸಲ್ ಕೈಯಿಕ್ಕಿದರ್ ಮಿಕ್ಕಿದರ್ ॥ ೩

ಮನುಜಂಗಾವುದು ವಶ್ಯಮನ್ನವಸನಾಹಾರಂಗಳೇ? ಶ್ರೀಯೆ? ಸ-।
ಜ್ಜನರ್ಗಿಂತೆಲ್ಲವುವಾನುಷಂಗಿಕಮೆ, ಧರ್ಮಂ ತಾನುಪಾದೇಯುಮೆಂ ।
ದೆನೆ, ಸಾಹಿತ್ಯಮೆ ಧರ್ಮದರ್ಶಿ, ನಿಜದಿಂದಕ್ಕುಂ ದಲಾ ಕ್ಷೇತ್ರವೆಂ ॥
ದನಘಂ ಪುಣ್ಯದಮಂದುಕೊಂಡ ನಿಮಗಕ್ಕಿಷ್ಟಾರ್ಥ ಸಂಪಾದನಂ ॥ ೪

ಕಂದ ॥ ಸಂಕಟ ಕಂಟಕ ಪರಿಹರ ।
ವೇಂಕಟಪತಿ, ಅತಿಕೃಪಾಶ್ರಯು, ಶ್ರೀಯುಂ, ಶ್ರೀ ।
ವೇಂಕಟರಾಯಾಚಾರ್ಯ- ।
ರ್ಗಂ ಕುಡು ನುಡಿದುಡಿಮೆನಡೆಗೆ ಶತ ವತ್ಸರಮಂ ॥ ೫

X X X X X X X X

ಸಾಹಿತ್ಯ ಹಾಗೂ ಸಂಶೋಧನೆ—ಗ್ರಂಥದ ಶೀರ್ಷಿಕೆ ಸೂಚಿಸುವಂತೆ ಸಾಹಿತ್ಯ, ಸಂಸ್ಕೃತಿ ಮತ್ತು ಸಂಶೋಧನೆಯ ವಿಷಯವಾದ ಶ್ರೇಷ್ಠ ಲೇಖನಗಳ ಸಂಕಲನವಾದ ಈ ಕಿರುಹೊತ್ತಗೆ ಕನ್ನಡ ಸಾಹಿತ್ಯ ಭಂಡಾರಕ್ಕೆ ಸೇರುವ ಅಗ್ಗಳಿಕೆಯ ವಸ್ತು.

—ವರದದೇಶಿಕಾಚಾರ್ಯ; ಕನ್ನಡ ಪ್ರಭ 4–8–69

x x x x x

ಸಾಹಿತ್ಯ-ಸಂಶೋಧನೆ - ಇದರಲ್ಲಿ ವಸ್ತುವೈವಿಧ್ಯವಿದೆ, ಭಾಷಾ ವೈವಿಷ್ಟ್ಯ ವಿದೆ, ಬುದ್ಧಿಗೆ ಆಹಾರವಿದೆ.

– ತೆಕ್ಕುಂಜ ಗೋಪಾಲಕೃಷ್ಣ ಭಟ್ಟ, ಮಂಗಳೂರು.

x x x x x


ಸಾಹಿತ್ಯದ ನೋಟಗಳು – ಸರಸ್ವತೀ ಪುತ್ರ ಶ್ರೀ ಕೆ. ವೆಂಕಟರಾಯಾಚಾರ್ಯರ ಸತ್ವಪೂರ್ಣ 'ಸಾಹಿತ್ಯದ ನೋಟ'ವನ್ನು ಕನ್ನಡ ಕುಲಕೋಟಿ ಆದರದಿಂದ ಬರಮಾಡಿಕೊಳ್ಳುತ್ತದೆಂದು ನಮಗೆ ನಂಬಿಕೆ ಇದೆ,

—ಯು. ವಿ, ಯಂ. ಐತಾಳ, ಶಿವಮೊಗ್ಗ.

x x x x x

ಕೀರ್ತನಾಮೃತ – ಹರಿದಾಸ ಪರಂಪರೆಯ ಶ್ರೀ ಗುರು ಸದಾನಂದರು ಬರೆದ ೨೪ ಭಜನೆ ಹಾಡುಗಳ ಸಂಗ್ರಹ ತಾಳಬದ್ಧವಾಗಿ ಹಾಡಲು, ಸಾಂದರ್ಭಿಕವಾಗಿ ಹೇಳಲು ಚೆನ್ನಾಗಿದೆ,

—ರಸಿಕ ಪುತ್ತಿಗೆ, ವಿಕ್ರಮ: 24-8-79



ವಿದ್ವಾನ್ ಕೆ. ವೆಂಕಟರಾಯಾಚಾರ್ಯ, ಸುರತ್ಕಲ್

ಶ್ರೀಯುತರು ಸುಮಾರು 36 ವರ್ಷಗಳಿಗೂ ಮಿಕ್ಕಿ ಕನ್ನಡದ ವಿವಿಧ ಪತ್ರಿಕೆ-ಗ್ರಂಥಗಳಲ್ಲಿ, ಸಾಹಿತ್ಯಕ ವಿಮರ್ಶನ - ಸಂಶೋಧನ ರೂಪ ಲೇಖನಗಳನ್ನು ಪ್ರಕಟಿಸಿದ್ದಾರೆ. ತಾಳೆಗರಿಯಲ್ಲಿದ್ದ ಕನ್ನಡದ ಉತ್ತರ ರಾಮ ಕಥೆ, ಆದಿತ್ಯ ಪುರಾಣ, ಶುಕಸಪ್ತತಿ ಕಾವ್ಯಗಳನ್ನು ಹಲವರ ನೆರವಿಂದ ಮುದ್ರಿಸಿ, ಕನ್ನಡ ಸಾಹಿತ್ಯ ರಸಿಕರಿಗೆ ಉಪಕಾರ ಮಾಡಿದ್ದಾರೆ. ಸುರತ್ಕಲ್ಲಿನ 'ವಿಜಯ ಸಾಹಿತ್ಯ ಮಾಲೆ'ಯಲ್ಲಿ ಹಲವು ಚಿಕ್ಕ ಪುಸ್ತಕಗಳನ್ನು ಪ್ರಕಾಶಗೊಳಿಸಿದ್ದಾರೆ. ಸುಮಾರು 5 ನೂರಕ್ಕೂ ಮಿಕ್ಕಿದ ಇವರ ಲೇಖಗಳು ವಾಚಕರಿಗೆ ಚಿರಪರಿಚಿತಗಳಾದಿವೆ. ಸಾಹಿತ್ಯದ ಹಿನ್ನೆಲೆ, ಸಾಹಿತ್ಯ ಹಾಗೂ ಸಂಶೋಧನೆ, ಸಾಹಿತ್ಯ-ಸಂಶೋಧನೆ, ಸಾಹಿತ್ಯದ ನೋಟಗಳು, ಎಂಬ ಶ್ರೀಯುತರ 4 ಸಂಕಲನಗಳು ಕನ್ನಡಿಗರ ಆದರಕ್ಕೆ ಪಾತ್ರಗಳಾಗಿವೆ.

ಮುದ್ರಕರು; ಶ್ರೀ ಗಣೇಶ್ ಪ್ರಿಂಟರ್ಸ್, ಮಂಗಳೂರು-575 003.